
ಕರ್ನಾಟಕ ವಿದ್ಯಾ ವೈಭವ



ಅಭಿನಂದನಾ ಗ್ರಂಥ



ಕರ್ನಾಟಕ ವಿದ್ಯಾ ವೈಭವ

ಶ್ರೀಮಾನ್ ಜಿ. ಬಿ. ಶಂಕರರಾಯರು

(ಕರ್ನಾಟಕ ರಾಜ್ಯದ ಮಾಜಿ ವಿದ್ಯಾ ಮಂತ್ರಿಗಳು)

ಸಂಭಾವನಾ ಗ್ರಂಥ

ಸಂಪಾದಕರು :

ಆದ್ಯ ರಾಮಾಚಾರ್ಯ

ಪ್ರಕಾಶಕರು :

ವರದರಾಜ ಪ್ರಕಾಶನ

ರಂಗರಾವ್ ರೋಡ್, ಶಂಕರಪುರಂ, ಬೆಂಗಳೂರು-೪

KARNATAKA VIDYA VIBHAVA

In Kannada in honour of

G. B. SHANKAR RAO

(Ex-Education Minister of Karnataka State)

Editor ;

ADYA RAMACHAR

Published by :

VARADARAJA PRAKASHANA

B/12. Shankara Park, Bangalore-4

First Adition—1984

Copies—1000

Pages—380+20+8=408

Price—60

Printed at :

Brindavan Printers & Publishers (Pvt.) Ltd.

Lalbagh Fort Road, Bangalore-560 004

ಪ್ರಥಮ ಮುದ್ರಣ

1000 ಪ್ರತಿಗಳು

ಹಕ್ಕುಗಳು ಪ್ರಕಾಶಕರವು

ಬೆಲೆ ಅರವತ್ತು ರೂಪಾಯಿ

ಸಂಪಾದಕರ ಮಾತು

ಜ್ಞಾನದಿಂದಲಿ ಇಹವು ಜ್ಞಾನದಿಂದಲಿ ಪರವು
ಜ್ಞಾನವಿಲಿದಿರೆ ಸಕಲವೂ ತನಗಿದ್ದು
ಹಾನಿ ಕಾಣಯ್ಯ ಸರ್ವಜ್ಞ ॥

ತ್ರಿಕಾಲ ಜ್ಞಾನಿಯಾಗಿ, ಸಾಹಿತ್ಯ ಚಿಂತಾಮಣಿಯಾಗಿ ಜನಸಾಮಾನ್ಯರ ತನುಮನಗಳನ್ನು ಗೆದ್ದುಕೊಂಡು ರಸಋುಷಿಯ ಮಟ್ಟಕ್ಕೇರಿದ ಸರ್ವಜ್ಞಕವಿಯ ಹೆಸರಿನಲ್ಲಿ, ರಾಜ್ಯಸರ್ಕಾರವು ಆ ಮಹಾನುಭಾವನು ಜನ್ಮಿಸಿದ ನೆಲವನ್ನಾರಿಸಿಕೊಂಡು, ಆ ಸ್ಥಳದಲ್ಲಿಯೇ ಗ್ರಾಮಾಂತರ ವಿದ್ಯಾವಿಕಾಸವನ್ನು ಕುರಿತು ಶಿಕ್ಷಣ ಸಂಸ್ಥೆಯೊಂದನ್ನು ರೂಪಗೊಳಿಸಲು ಯೋಜನೆಯೊಂದನ್ನು ಸಿದ್ಧಪಡಿಸುತ್ತಲಿದೆ; ಎಂಬ ಪತ್ರಿಕಾವರದಿಯನ್ನೋದಿದಾಗ ನನ್ನ ಮನಸ್ಸು ಲೋಕ ಪೂಜ್ಯನಾದ ಆ ಕವಿಯ ಜನ್ಮಸ್ಥಳವನ್ನು ನೋಡಿ ಪುನೀತನಾಗಬೇಕೆಂಬ ಹಂಬಲವನ್ನು ತಾಳಿತು. ಒಂದು ದಿನ ಈ ವಿಚಾರವನ್ನು ಕುರಿತು ಅಂದು ರಾಜ್ಯದ ಶಿಕ್ಷಣ ಸಚೀವರಾಗಿದ್ದ ಶ್ರೀಮಾನ್ ಜಿ. ಬಿ. ಶಂಕರರಾಯರಲ್ಲಿ ನನ್ನ ಈ ವಿಚಾರವನ್ನು ತೋಡಿಕೊಂಡೆ, ಮುಂದೆ ಆದೆಷ್ಟೋ ದಿನಗಳಾದ ಮೇಲೆ ಇದ್ದಕ್ಕಿದ್ದಂತೆ ಅವರ ಆಪ್ತ ಕಾರ್ಯದರ್ಶಿಗಳಿಂದ ಕರೆ ಬಂದಿತು. ಅವಸರದಿಂದ ಹೋಗಿ ರಾಯರನ್ನು ಕಂಡಾಗ ಅವರು ತಕ್ಷಣವೇ ತಮ್ಮೊಂದಿಗೆ ಪ್ರಯಾಣಕ್ಕೆ ಸಿದ್ಧರಾಗುವಂತೆ ಅಪ್ಪಣೆ ಕೊಡಿಸಿದರು.

ಶ್ರೀಮಾನ್ ಜಿ. ಬಿ. ಶಂಕರರಾಯರು ಸರ್ವಜ್ಞ ಕವಿಯು ಹುಟ್ಟಿದ ತಾಲ್ಲೂಕಿನಲ್ಲಿಯೇ ಜನ್ಮವೆತ್ತಿ ಆ ಸ್ಥಳದಿಂದಲೇ ಅನೇಕಸಲ ವಿಧಾನಸಭೆಗೆ ಚುನಾಯಿತರಾಗಿ ಸಚಿವರಾಗಿ, ಈಗ ಶಿಕ್ಷಣ ಇಲಾಖೆಯ ಮಂತ್ರಿಗಳಾಗಿದ್ದರು. ಈ ಪ್ರವಾಸ ಕಾಲದಲ್ಲಿ ಯಾವ ಸ್ಥಳದಲ್ಲಿ ಹತ್ತಾರು ಗುಡಿಸಲುಗಳಿವೆಯೋ ಅಂಥ ಸ್ಥಳಗಳಲ್ಲೆಲ್ಲಾ ಅವರು ಪ್ರಾಥಮಿಕ ಶಾಲೆಯ ಕಟ್ಟಡಗಳ ಪ್ರಾರಂಭೋತ್ಸವವನ್ನು ನಡೆಸಿದರು. ಹೀಗಾಗಿ ತಾಲ್ಲೂಕಿನ ಬಹುಭಾಗವನ್ನು ಸುತ್ತಿಕೊಂಡು ಬಂದುದರಿಂದ ಅಲ್ಲಿಯ ಪ್ರತಿಯೊಂದು ಹಳ್ಳಿಗಳ ಪರಿಚಯು ನನಗಾಗುವಂತಾಯಿತು.

ಸರ್ವಜ್ಞ ಕವಿಯು ಜನ್ಮಿಸಿದನೆಂದು ಹೇಳುವ ಸ್ಥಳವನ್ನು ನೋಡಿದಾಗ ನನ್ನ ಮನಸ್ಸು ಒಂದು ಕಾಲದಲ್ಲಿ ಆ ಕವಿಯು ತಾನು ಬದುಕಿ ಜನರನ್ನು ಬದುಕಿಸಲು ಪ್ರಯತ್ನಿಸಿದ ಆತನ ನಾನಾ ವಿಧದ ಪ್ರಯೋಗಗಳನ್ನು ಕುರಿತು ಚಿಂತಿಸಲಾರಂಭಿಸಿತು.

ಅವಧೂತಶಿಖಾಮಣಿಯಂತೆ ಬಾಳಿದ ಆ ಮಹಾನುಭಾವನು ತನ್ನ ಮುಂದಿನ ಸಂತಾನ ರಿಗಾಗಿ ರಚಿಸಿಟ್ಟುಹೋದ ಸಾಹಿತ್ಯವನ್ನು ಕುರಿತು ಬಹು ಹೊತ್ತಿನವರೆಗೆ ನಾನು ಅಂತರ್ಮುಖಿಯಾಗಿ ಆತನ ತತ್ವಗಳನ್ನು ಕುರಿತು ಚಿಂತಿಸತೊಡಗಿದೆ. ಮಲೆನಾಡಿನ ಸೆರಗಿನಂತಿರುವ ಹಿರೇಕೆರೂರ್, ಮಾಸೂರ್, ಮೊದಲಾದ ಭಾಗಗಳಲ್ಲಿ ಹರಿಯುವ ಕಿರಿತೊರೆಗಳು, ಹಸಿರಿನ ಹಂದರದಂತೆ ಕಾಣುವ ಬೆಟ್ಟಗಳು, ಅಲ್ಲಿಯ ನಿಸರ್ಗಸೌಂದರ್ಯ ಇವುಗಳೇ ಆ ಕವಿಗೆ ಸ್ಫೂರ್ತಿಯನ್ನಿತ್ತಿರಬಹುದೇ? ಎಂದೆನಿಸತೊಡಗಿತು, ಕಾಲಪ್ರವಾಹ ರೂಪದಲ್ಲಿ ಹರಿದು ಬರುತ್ತಿರುವ ಆ ತೊರೆಗಳಿಗೆಲ್ಲಾ ಅಲ್ಲಲ್ಲಿ ಬಂಧನಗಳನ್ನು ಹಾಕಿ ಇಂದಿನ ರೈತರು ಸಮೃದ್ಧವಾಗಿ ಬೆಳೆ ತೆಗೆಯುತ್ತಿರುವುದನ್ನು ಕಂಡು ಸಸ್ಯಶ್ಯಾಮಲೆ ಯಾಗಿ ನಿಂತ ಆ ನಿಸರ್ಗವು ನನ್ನನ್ನು ಮೋಹಪರವಶನನ್ನಾಗಿ ಮಾಡಿತು.

ದಿನವೆಲ್ಲ ಸುತ್ತಾಡಿ ದೇಹವು ಆಯಾಸಗೊಂಡಿದ್ದರೂ ಸಹ ಮನಸ್ಸು ಮಾತ್ರ ಸರ್ವಜ್ಞನ ವಚನಗಳನ್ನೇ ಕುರಿತು ಮೆಲುಕು ಹಾಕುತ್ತಲ್ಲಿತ್ತು. ಏಕಾಂತದಲ್ಲಿ ಕುಳಿತು ಕೊಂಡಿದ್ದ ನನ್ನನ್ನು ಹುಡುಕಿಕೊಂಡು ಶಂಕರರಾಯರ ಕೆಲವು ಸ್ನೇಹಿತರು ಬಂದುದನ್ನು ಕಂಡಾಗ ಅಚ್ಚರಿಯೆನಿಸಿತು, ಯಾಕೆಂದರೆ ಅವರೆಲ್ಲರೂ ನನಗಿಂತ ತುಂಬಾ ಹಿರಿಯರಾದವರು, ಅಲ್ಲದೇ ನನ್ನಲ್ಲಿ ಯಾವುದೇ ತರಹದ ಅಧಿಕಾರವಾಗಲೀ ಅಥವಾ ಅವರ ಬೇಕು ಬೇಡ ಇವುಗಳನ್ನು ಕುರಿತು ಆಲೋಚಿಸಿ ಪರಿಹಾರವನ್ನು ಒದಗಿಸುವ ಅವಕಾಶವಾಗಲಿ ನನ್ನದಾಗಿರಲಿಲ್ಲ. ಹೀಗಿದ್ದರೂ ಸಹ ಭೇಟಿಯಾಗಲು ಬಂದ ಆ ಹಿರಿಯ ರನ್ನು ಆದರದಿಂದ ಬರಮಾಡಿಕೊಂಡು ಉಭಯ ಕುಶಲೋಪರಿಯನ್ನಾರಂಭಿಸಿದೆ. ಅಲ್ಲಿಯ ನಿಸರ್ಗವು ನನ್ನ ಮನಸ್ಸಿನ ಮೇಲೆ ಎಂಥ ಪರಿಣಾಮವನ್ನುಂಟು ಮಾಡಿದೆ ಎಂಬುದನ್ನು ಅವರಲ್ಲಿ ತೋಡಿಕೊಂಡೆ.

ಸ್ವಲ್ಪ ಹೊತ್ತಿನ ನಂತರ ಆ ಹಿರಿಯರಲ್ಲೊಬ್ಬರು "ಆಚಾರ್ಯರೇ ತಮ್ಮಲ್ಲಿ ನಮ್ಮದೊಂದು ಪ್ರಾರ್ಥನೆಯಿದೆ, ದಯವಿಟ್ಟು ತಾವು ಅದನ್ನು ನಡೆಸಿಕೊಡುವಿರೆಂದು ನಂಬಿದ್ದೇವೆ" ಎಂದು ನುಡಿದರು.

"ಕ್ಷಮಿಸಿರಿ. ನಾನು ಮಂತ್ರಿಗಳೊಂದಿಗೆ ಬಂದಿದ್ದೇನೆ, ನಿಜ, ಆದರೆ ಅವರಲ್ಲಿ ಯಾವುದೇ ತರಹದ ಅಪೇಕ್ಷೆಯನ್ನು ಮಂಡಿಸಲು ನಾನು ಸಿದ್ಧನಿಲ್ಲ. ಸ್ಪಷ್ಟ ವಾದ ನನ್ನ ಈ ಮಾತಿನಿಂದ ತಾವು ಬೇಸರಪಟ್ಟುಕೊಳ್ಳಬಹುದು."

"ಇಲ್ಲ ಇಲ್ಲ, ತಾವು ನಮ್ಮನ್ನು ತಪ್ಪಾಗಿ ಭಾವಿಸಿದ್ದೀರಿ, ನಿಮ್ಮಿಂದ ಹೇಳಿಸಿ ಕೊಂಡು ರಾಯರಿಂದ ನಮ್ಮ ಕೆಲಸವನ್ನು ಮಾಡಿಸಿಕೊಳ್ಳಲು ನಾವು ಬಂದವರಲ್ಲ".

"ಹಾಗಾದರೆ?"

"ನಮ್ಮ ಶಂಕರರಾಯರು ನಮ್ಮ ತಾಲ್ಲೂಕಿನಲ್ಲಿಯೇ ಹುಟ್ಟಿ ಬೆಳೆದವರು. ಪರಸ್ಪರ ಸುಖ ದುಃಖದಲ್ಲಿ ಭಾಗಿಗಳಾಗಿ ಬೆಳೆದ ನಾವು ಅವರ ದೀರ್ಘ ಕಾಲದ ಸೇವೆಯನ್ನು ಸ್ಮರಿಸಿಕೊಂಡು ಅವರ ಬಾಳಿಗೆ ಸಾರ್ಥಕವಾಗುವ ರೀತಿಯಲ್ಲಿ ಅಭಿನಂದನಾ ಗ್ರಂಥವೊಂದನ್ನು ಹೊರತರಬೇಕೆಂದು ಆಲೋಚಿಸುತ್ತಿದ್ದೇವೆ. ಆ ವಿಷಯವನ್ನೇ ತಮ್ಮಲ್ಲಿ ಮಾತನಾಡಬೇಕೆಂದು ಬಂದಿದ್ದೇವೆ"

"ಹಾಗಾದರೆ ಮೊದಲೇ ಈ ವಿಷಯವನ್ನೇಕೆ ಹೇಳಲಿಲ್ಲ? ಇರಲಿ ತಮ್ಮ ವಿಚಾರವಂತೂ ತುಂಬಾ ಯೋಗ್ಯವಾದುದು, ನನ್ನಿಂದೇನಾಗಬೇಕೋ ಹೇಳಿರಿ ನಾನು ಮಾಡಲು ಸಿದ್ಧನಿದ್ದೇನೆ"

" ಈ ಗ್ರಂಥದ ಜವಾಬ್ದಾರಿಯನ್ನು ತಾವೇ ನಿರ್ವಹಿಸಬೇಕು ಎಂದು ನಮ್ಮ ಅಪೇಕ್ಷೆಯಿದೆ"

ಆ ಹಿರಿಯರು ನುಡಿದ ಮಾತುಗಳನ್ನು ಕೇಳಿದಾಗ ನನಗೆ ಏನು ಹೇಳಬೇಕೋ ತಿಳಿಯದಂತಾಯಿತು. ಒಂದು ರೀತಿಯಲ್ಲಿ ಶ್ರೀಮಾನ್ ಶಂಕರರಾಯರು ತಮ್ಮ ತಾಲ್ಲೂಕಿನ ಜನರೊಂದಿಗೆ ಇಟ್ಟುಕೊಂಡು ಬಂದ ಹಿತಸಂಬಂಧವನ್ನು ಕುರಿತು ಹೆಚ್ಚು ಸಮಾಧಾನವೆನಿಸಿದರೂ ಸಹ ಇದ್ದಕ್ಕಿದ್ದಂತೆ ಇಂಥ ಬಹುದೊಡ್ಡ ಜವಾಬ್ದಾರಿಯನ್ನು ಒಪ್ಪಿಕೊಳ್ಳಲು ಮನಸ್ಸು ಹಿಂಜರಿಯಲಾರಂಭಿಸಿತು, "ನಮ್ಮ ರಾಯರು" ಎಂದು ಹೇಳದೇ ಯಾರೂ ಮಾತನಾಡುತ್ತಿರಲಿಲ್ಲ. ಸಾರ್ವಜನಿಕ ಕ್ಷೇತ್ರದಲ್ಲಿ ಶಂಕರರಾಯರು ಪಡೆದುಕೊಂಡು ಬಂದ ಸ್ಥಾನಮಾನವನ್ನು ಕುರಿತು ಹೆಮ್ಮೆ ಎನಿಸತೊಡಗಿತು. ನಾನು ಸುಮ್ಮನೆ ಕುಳಿತುದನ್ನು ಕಂಡ ಆ ಹಿರಿಯರು ಒಬ್ಬರಾದ ಮೇಲೊಬ್ಬರಂತೆ ಈ ಅಭಿನಂದನಾ ಗ್ರಂಥವನ್ನು ಕುರಿತು ಆಗ್ರಹ ಮಾಡತೊಡಗಿದರು. ಅವರ ಮನವನ್ನು ನೋಯಿಸದೇ "ಆಗಲಿ ನನಗೆ ಸ್ವಲ್ಪ ಕಾಲಾವಕಾಶವನ್ನು ಕೊಡಿರಿ, ವಿಚಾರ ಮಾಡಿ ತಮಗೆ ತಿಳಿಸುತ್ತೇನೆ" ಎಂದು ಹೇಳಿ ಅವರೆಲ್ಲರನ್ನು ಕಳುಹಿಸಿಕೊಟ್ಟೆ.

ಹಿರೇಕೆರೂರಿನ ಪ್ರವಾಸವನ್ನು ಮುಗಿಸಿಕೊಂಡು ಬಂದು ಸುಮಾರು ಇಪ್ಪತ್ತು ದಿನಗಳಾಗಿದ್ದವು, ಆಗ ಒಂದು ದಿನ ಇದ್ದಕ್ಕಿದ್ದಂತೆ ಆ ಹಿರಿಯರೆಲ್ಲಾ ಬೆಂಗಳೂರಿನವರೆಗೆ ಬಂದು ನನ್ನನ್ನು ಭೇಟಿಯಾದರು. ಆಗ್ರಹಪೂರಿತವಾದ ಅವರ ಪ್ರಾರ್ಥನೆಗೆ ನಾನು ಮಣಿಯಲೇ ಬೇಕಾಯಿತು, ಗ್ರಂಥ ಪ್ರಕಟಣೆಯ ವಿಷಯವನ್ನು ಕುರಿತು ಒಂದೆರಡು ದಿನಗಳ ಕಾಲ ದೀರ್ಘವಾದ ಚರ್ಚೆಯನ್ನೂ ನಡೆಸಿದೆ. ಅಲ್ಪಾವಧಿಯಲ್ಲಿಯೇ ನಾನು ಆ ಕೆಲಸವನ್ನು ಕೈಗೆತ್ತಿಕೊಂಡೆ. ನಾಡಿನ ಪ್ರತಿಭಾವಂತರಾದ ಶಿಕ್ಷಣ ತಜ್ಞರಿಗೂ, ಸಾಹಿತಿಗಳಿಗೂ, ಸಮಾಜ ಸೇವಕರಿಗೂ ಜಿ. ಬಿ. ಶಂಕರರಾಯರನ್ನು ಕುರಿತು ಹೊರತರಲಿರುವ ಅಭಿನಂದನಾ ಗ್ರಂಥಕ್ಕೆ ಲೇಖನವನ್ನು ಕಳುಹಿಸಿಕೊಡುವಂತೆ

ಪ್ರಾರ್ಥನಾ ಪತ್ರಗಳನ್ನು ಬರೆಯಲಾರಂಭಿಸಿದೆ. ದಿನಗಳೆದಂತೆಲ್ಲಾ ಲೇಖನಗಳು ಬರಲಾರಂಭಿಸಿದವು. ಆ ಲೇಖನಗಳ ಪರಿಶೀಲನೆಯ ಕಾರ್ಯವು ಪ್ರಾರಂಭವಾದಾಗ ನಮ್ಮ ರಾಜ್ಯದಲ್ಲಿ ಚುನಾವಣೆಯ ಕಾರ್ಯವು ನಡೆದುಹೋಯಿತು.

ಈ ಬದಲಾವಣೆಯಿಂದಾಗಿ ನಾನು ಪ್ರಾರಂಭಿಸಿದ ಅಥವಾ ನನಗೊಪ್ಪಿಸಲ್ಪಟ್ಟ ಕಾರ್ಯವು ನಿಂತು ಹೋಯಿತೆಂದು ನಾನು ಭಾವಿಸಿಕೊಂಡಿದ್ದೆ. ಆದರೆ ಶಂಕರರಾಯರ ಅಭಿಮಾನಿ ವರ್ಗದವರು ಮಾತ್ರ ತಾವು ಹಿಡಿದ ಕೆಲಸವನ್ನು ಅರ್ಧಕ್ಕೆ ನಿಲ್ಲಿಸದೇ ಹೇಗಾದರೂ ಮಾಡಿ ಅದನ್ನು ಪೂರ್ತಿಗೊಳಿಸುವಂತೆ ದುಂಬಾಲು ಬಿದ್ದರು. ಅವರ ಪ್ರೋತ್ಸಾಹದ ಮಾತುಗಳಿಂದಾಗಿ ಪುನಃ ಈ ಕಾರ್ಯವು ಪ್ರಾರಂಭಿಸಲ್ಪಟ್ಟಿತು. ಇಂದು ಈ ಗ್ರಂಥವು ಮುದ್ರಣಗೊಂಡು ಹೊರಬರುತ್ತಿರುವಾಗ ನಾನು ಆ ಎಲ್ಲ ಹಿರಿಯರ ಅಭಿಮಾನವನ್ನು ಮುಕ್ತಕಂಠದಿಂದ ಹೊಗಳಬೇಕೆಂದೆನಿಸುತ್ತದೆ.

ಶ್ರೀಮಾನ್ ಶಂಕರರಾಯರಿಗೆ ಅರ್ಪಿಸುತ್ತಿರುವ ಈ ಅಭಿನಂದನಾ ಗ್ರಂಥಕ್ಕಾಗಿ ಅನೇಕ ವಿದ್ವಾಂಸರು, ಉಪಕುಲಪತಿಗಳು, ಸಾಹಿತಿಗಳು, ಪೂಜ್ಯರು, ಪೀಠಾಧಿಪತಿಗಳು ಇವರೇ ಮೊದಲಾದವರು ಅಮೌಲ್ಯವಾದ ಲೇಖನವನ್ನು ಕಳುಹಿಸಿ ಈ ಕಾರ್ಯದಲ್ಲಿ ಸಹಕರಿಸಿದ್ದಾರೆ. ಆ ಎಲ್ಲ ಹಿರಿಯರಿಗೂ ನಾನು ಅತ್ಯಂತ ಕೃತಜ್ಞತೆಯಿಂದ ವಂದಿಸುತ್ತೇನೆ,

ವಿಜಾಪುರದಲ್ಲಿರುವ ಶೈನಿಕ ಶಾಲೆಯ ವಿಶೇಷಾಧಿಕಾರಿಗಳು ಈ ಗ್ರಂಥಕ್ಕೆ ಉಪಯುಕ್ತವೆನಿಸಬಹುದಾದ ಭಾವಚಿತ್ರವನ್ನೊದಗಿಸಿ ಸಹಕರಿಸಿದ್ದಾರೆ. ಕಲಾವಿದರಾದ ಪ.ಸ. ಕುಮಾರ್ ಇವರು ಮುಖಚಿತ್ರವನ್ನು ಬರೆದುಕೊಟ್ಟು ಉಪಕರಿಸಿದ್ದಾರೆ. ಅಲ್ಲದೆ ರಾಜಧಾನಿಯಲ್ಲಿರುವ ಬೃಂದಾವನ್ ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್ ಈ ಮುದ್ರಣಾಲಯದ ಮ್ಯಾನೇಜಿಂಗ್ ಡೈರೆಕ್ಟರ್‌ರಾದ ಶ್ರೀಮಾನ್ ಎಂ.ಹೆಚ್. ಕೌಜಲಗಿಯವರು ಈ ಗ್ರಂಥವನ್ನು ಅಂದವಾಗಿ ಮುದ್ರಿಸಿಕೊಟ್ಟಿದ್ದಾರೆ, ಈ ಎಲ್ಲ ಮಹನೀಯರಿಗೂ ನಾನು ನನ್ನ ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇನೆ.

ಆದ್ಯ ರಾಮಾಚಾರ್ಯ
ಸಂಪಾದಕರು
ಕರ್ನಾಟಕ ವಿದ್ಯಾ ವೈಭವ

ಒ ಳ ಪಿ ಡಿ

ಮುನ್ನುಡಿ

ಶ್ರೀಮಾನ್ ಜಿ. ಬಿ. ಶಂಕರರಾಯರ ಜೀವನ ಸಾಧನೆಗಳು ಯಾವ ರೀತಿಯಿಂದ ನೋಡಿದರೂ ಒಂದು ಪವಾಡವೆ. ಧೈರ್ಯ, ಸಾಹಸ, ಅದಮ್ಯ ಉತ್ಸಾಹ, ಆತ್ಮ ಪ್ರತ್ಯಯ ಛಲ ಎಲ್ಲವುಗಳ ಸಾಕಾರಮೂರ್ತಿ. ಮೂರ್ತಿ ಚಿಕ್ಕದಾದರೂ ಸಾಧನೆ ದೊಡ್ಡದು. ಸದಾ ಚಟುವಟಿಕೆ ಮತ್ತು ಚುರುಕು. ಕುಳ್ಳರಿಗೆ ಕಾಲಿನಲ್ಲಿಯೂ ಬುದ್ಧಿ ಎಂಬ ಗಾದೆಯುಂಟು. ಹೆಸರಿಗೆ ಇವರು ಗುಬ್ಬಿ ಶಂಕರ ರಾಯರಾದರೂ ಹೋರಾಟದಲ್ಲಿ ಹೆಬ್ಬುಲಿ. ಶಂಕರರಾಯರು ನಿಜವಾಗಿ ಬುದ್ಧಿವಂತರು ಜಾಣರು. ಇವರು ಹುಟ್ಟಿದಂದಿನಿಂದಲೇ ಪ್ರತಿಕೂಲ ಪರಿಸ್ಥಿತಿಗೆ ವಿರುದ್ಧವಾಗಿ ಹೆಜ್ಜೆ ಹೆಜ್ಜೆಗೂ ಎದುರಾಗಿ ಹೋರಾಡಬೇಕಾಯಿತು. ಇವರು ಹುಟ್ಟಿದುದು ಧಾರವಾಡದ ಜಿಲ್ಲೆಯ ಒಂದು ಸಣ್ಣ ಹಳ್ಳಿಯಲ್ಲಿ. ವ್ಯವಸಾಯಗಾರರ ಕುಟುಂಬದಲ್ಲಿ. ಆಗ ಆ ಊರಿನಲ್ಲಿ ಕನ್ನಡ ಶಾಲೆ ಸಹ ಇರಲಿಲ್ಲ. ತಕ್ಕಮಟ್ಟಿನ ಅಕ್ಷರಜ್ಞಾನವಿಲ್ಲದ ಕೂಲಿಮಠದ ಉಪಾಧ್ಯಾಯರಲ್ಲಿ ಇವರಿಗೆ ಅಕ್ಷರಾಭ್ಯಾಸ. ತಂದೆ ಹಳ್ಳಿಯ ರಾಜಕೀಯ, ಶ್ಯಾನಭೋಗಿತನದ ಹಕ್ಕು ಕುಟುಂಬ ವಾಜ್ಯ ಇವುಗಳಲ್ಲಿ ತೊಡಗಿದ್ದವರು. ಮಗ ಹಳ್ಳಿಯ ವ್ಯವಹಾರ ನಡೆಸುವಷ್ಟು ವಿದ್ಯೆ ಕಲಿತರೆ ಸಾಕು ಎಂಬುದು ಅವರ ಉದ್ದೇಶವಿತ್ತು. ಕೂಲಿಮಠದ ಉಪಾಧ್ಯಾಯರು ಪಾಠ ಏನು ಹೇಳುತ್ತಿದ್ದರೋ ಬಿಡುತ್ತಿದ್ದರೋ ಅವರಿಗೇ ಗೊತ್ತು ಆದರೆ ಹುಡುಗರನ್ನು ಮಾತ್ರ ಚೆನ್ನಾಗಿ ಹೊಡೆಯುತ್ತಿದ್ದರು. ಕೂಲಿಮಠದ ಉಪಾಧ್ಯಾಯರು ಸ್ವಲ್ಪಕಾಲ ಪಾಠ ಹೇಳುವುದರೊಳಗೆ ಅವರ ಸರಕೆಲ್ಲ ಮುಗಿಯಿತು. ಶಂಕರರಾಯರು ಒಂಬು ಮೈಲಿದೂರದ ಬೇರೊಂದು ಪ್ರಾಥಮಿಕ ಶಾಲೆಗೆ ಹೋಗಿ ಸೇರಿದರು, ದಾರಿಯಲ್ಲಿ ಕುಮುದ್ವತಿ ನದಿಯನ್ನು ಅವರು ನಿತ್ಯ ದಾಟಬೇಕಾಗಿತ್ತು. ಧಾರವಾಡದ ಜಿಲ್ಲೆಯಲ್ಲಿ ಸಾಧರಣವಾಗಿಯೇ ಮಳೆ ಹೆಚ್ಚು. ಒಂದು ಸಲ ಶಂಕರ ರಾಯರು ನದಿಯನ್ನು ದಾಟುತ್ತಿರುವಾಗ ತೇಲಿ ಹೋದರು. ಆಗ ಕಂಡವರು ಯಾರೋ ಇವರನ್ನು ರಕ್ಷಿಸಿದರು. ಇರುವುದಕ್ಕೆ ಮನೆ ಹೊಟ್ಟೆಗೆ ಅನ್ನ ಪುಸ್ತಕಗಳು ಯಾವುವೂ ಇಲ್ಲದೆಯೇ ಶಂಕರರಾಯರು ಮುಲ್ಕಿ ಪರೀಕ್ಷೆಯಲ್ಲಿ ತೇರ್ಗಡೆಯಾದರು. ತಮಗಿಂತ ಜಾತಿಯಲ್ಲಿ ಸ್ವಲ್ಪ ಕಡಿಮೆ-ಆದರೆ ದಯೆ ಔದಾರ್ಯದಲ್ಲಿ ಮೇಲು ಆಗಿದ್ದರು ಎಂದು ಪರಿಗಣಿತರಾಗಿದ್ದ ಒಬ್ಬ ಗೃಹಸ್ತರು ಇವರಿಗಾಗಿಯೇ ಒಂದು ಕೊಠಡಿ ಮಾಡಿ ಕೊಟ್ಟು ನಿತ್ಯ ಇವರ ಓದಿಗಾಗಿ ಸೀಮೆಯಣ್ಣೆ ಲಾಂದ್ರವನ್ನು ಹಚ್ಚಿಕೊಡುತ್ತಿದ್ದರು. ಬಾಗಿಲನ್ನು ಮುಂದಕ್ಕೆ ಮುಚ್ಚಿ ಇವರಿಗೆ ಬಿಸಿ ಅನ್ನ ಸಾರನ್ನು ಬಡಿಸುತ್ತಿದ್ದರು.

ಇವರು ಛಳಿಯಲ್ಲಿ ನಡುಗುತ್ತ ಮಲಗಿದ್ದರೆ ಕಂಬಳಿ ಹೊದಿಸುತ್ತಿದ್ದರು. ಆರುದಿನಕ್ಕೆ ಮಾತ್ರ ವಾರದ ಊಟ ಸಿಕ್ಕಿತ್ತು. ಒಂದು ದಿನ ಉಪವಾಸ. ಅನೇಕದಿನ ಒಂದೇ ಹೊತ್ತು ಊಟ. ಹೀಗೆ ಕಳೆಯಿತು ಶಂಕರರಾಯರ ಬಾಲ್ಯವಿದ್ಯಾಭ್ಯಾಸ. ಶಾಲೆಯ ಶುಲ್ಕ ಕಟ್ಟಲು ಸಾಧ್ಯವಿಲ್ಲದೆ ಶಂಕರರಾಯರು ಶಾಲೆಯ ಹುಡುಗರಿಗೆ ಕುಡಿಯಲು ನೀರುತಂದು ಕೊಡುವ ಕಾರ್ಯವನ್ನು ವಹಿಸಿಕೊಂಡು ಆದರಿಂದ ಶುಲ್ಕವನ್ನು ಕಟ್ಟು ತ್ತಿದ್ದರು. ಶಂಕರರಾಯರು ಇಂಗ್ಲೀಷು ಗಣಿತಗಳನ್ನು ಸ್ವಂತವ್ಯಾಸಂಗದಿಂದಲೇ ಅಭಿವೃದ್ಧಿ ಪಡಿಸಿಕೊಂಡು ಶಾಲೆಗೆ ಮೊದಲಿಗರಾಗಿ ಮೆಟ್ರಿಕ್‌ನಲ್ಲಿ ತೇರ್ಗಡೆಯಾದರು, ಇಂಥ ಕೆಚ್ಚಿನ ಹುಡುಗ ಮುಂದೆ ಜೀವಿತದ ಸಾಧನೆಗಳಲ್ಲಿ ಉತ್ತಮ ಶಿಖರವೇರಿದುದು ಅಚ್ಚರಿಯೇನಲ್ಲ.

ಶಂಕರರಾಯರು ಮೆಟ್ರಿಕ್‌ನಲ್ಲಿ ಮೊದಲತರಗತಿಯಲ್ಲಿ ತೇರ್ಗಡೆಯಾದರೂ, ಕಾಲೇಜನ್ನು ಸೇರಲು ಆರ್ಥಿಕ ಸೌಕರ್ಯವಿಲ್ಲದುದರಿಂದ ಸಾಧ್ಯವಾಗಲಿಲ್ಲ. ಹುಟ್ಟು ದಾರಿದ್ರ್ಯದಲ್ಲಿ ಬೆಳೆದ ಅವರಿಗೆ ವಿದ್ಯೆಯೊಂದೇ ಕಲ್ಪವೃಕ್ಷವಾಗಿ ತೋರಿತು. ಹಣದ ಅಭಾವದಿಂದ ಅವರು ಒಂದು ವರುಷ ಕಾಲೇಜನ್ನೇ ಸೇರಲಿಲ್ಲ. ಅವರು ಸಂತೋಷ ದಿಂದಲೇ ಸಂಸ್ಕೃತಕಾವ್ಯಗಳು, ನಾಟಕಗಳು, ರಾಮಾಯಣ, ಮಹಾಭಾರತಗಳ ಭಾಗ ಗಳನ್ನು ಬಾಯಿಪಾಠ ಮಾಡಿದರು. ಆಗ ಜರ್ಮನಿಯಲ್ಲಿ ಹಿಟ್ಲರನ ಪ್ರತಾಪ ಪರಾಕ್ರಮ ದೇಶಪ್ರೇಮ ಜಗತ್ ಪ್ರಸಿದ್ಧವಾಗಿದ್ದವು. ಶಂಕರರಾಯರಿಗೆ ಜರ್ಮನ್ ಭಾಷೆಯಲ್ಲಿ ಪ್ರೀತಿಯುಂಟಾಗಿ ಆ ಭಾಷೆಯನ್ನು ಕಲಿತರು. ಸ್ವಂತ ವ್ಯಾಸಂಗದಿಂದಲೇ ಇಂಗ್ಲೀಷಿ ನಲ್ಲಿ ಅಸಾಧಾರಣವಾದ ಪಾಂಡಿತ್ಯವನ್ನು ಸಂಪಾದಿಸಿದರು. ಖಾಸಗಿಯಾಗಿ ವಿದ್ಯಾರ್ಥಿ ಗಳಿಗೆ ಇಂಗ್ಲೀಷು ಕನ್ನಡ ಗಣಿತ ಪಾಠಹೇಳಿ ಕಾಲೇಜು ಸೇರಲು ಬೇಕಾದ ಪ್ರವೇಶ ಧನದಲ್ಲಿ ಅರ್ಧವನ್ನು ಕೂಡಿಸಿಕೊಂಡರು. ಉಳಿದ ಅರ್ಧವನ್ನು ಇವರ ಬುದ್ಧಿಕೌಶಲ್ಯ ವನ್ನೂ, ವಿದ್ಯಾದಾಹವನ್ನೂ ಮೆಚ್ಚಿದ ಹಿತೈಷಿಗಳೊಬ್ಬರು ಕೊಟ್ಟರು. ಕನ್ನಡದಲ್ಲಿ ಹೆಚ್ಚು ಪ್ರಾವೀಣ್ಯವನ್ನು ಪಡೆಯಬೇಕೆಂದು ಶಂಕರರಾಯರು ಬಿ.ಎ, ಆನರ್ಸ್‌ಗೆ ಸೇರಿ ದರು. ಕಾನೂನು ಪರೀಕ್ಷೆಯನ್ನೂ ಮಾಡಿ ಎಂ.ಎ. ಎಲ್‌ಎಲ್‌ಬಿ. ಆದರು. ಅವರು ಕಾನೂನು ಪದವೀಧರರಾದುದೇ ಅವರ ಭವಿಷ್ಯವನ್ನು ನಿರ್ಧರಿಸಿದಂತೆ ಕಾಣುತ್ತದೆ. ಈ ಮೊದಲು ಅವರು ತಮಗೆ ದೊರಕ್ಕಿದ್ದ ಕೇಂದ್ರ ಸರ್ಕಾರದ ಒಂದು ದೊಡ್ಡ ಹುದ್ದೆಯಲ್ಲಿ ಕೆಲವು ಕಾಲ ಕೆಲಸಮಾಡಿ ರಾಜಿನಾಮೆ ಕೊಟ್ಟಿದ್ದರು. ಕಾನೂನು ಪದವಿ ಧರರಾದ ಕೂಡಲೇ ಅವರು ವಕೀಲರಾದರು.

ಶಂಕರರಾಯರಿಗೆ ವಕೀಲಿ, ಸಂಪಾದನೆ ಯಾಗಿರಲಿಲ್ಲ. ಅವರು ಇನ್ನೂ ಸಂಸಾರವನ್ನು ಕಟ್ಟಿಕೊಳ್ಳದ ಗುಂಡುಗೋವಿಯಾಗಿದ್ದರು, ತಾಲ್ಲೂಕಿನಲ್ಲಿ ಕಷ್ಟದಲ್ಲಿರು ವವರಿಗೆಲ್ಲ ಅವರು ಉಚಿತವಾಗಿಯೇ ಸಹಾಯಮಾಡುತ್ತಿದ್ದರು. ಯಾವ ಊರಿ

ಗಾದರೂ ಬಸ್ಸಿನಲ್ಲಿ ಕುಳಿತುಕೊಂಡು ಹೊರಟೇ ಹೋಗುತ್ತಿದ್ದರು. ಸಮಸ್ಯೆಗಳನ್ನೆಲ್ಲ ತಾವೇ ಹುಡುಕಿ ಹುಡುಕಿ ಸರ್ಕಾರಕ್ಕೆ ಕೊಂಡೊಯ್ದು ಪರಿಹಾರ ಮಾಡಿಸುತ್ತಿದ್ದರು. ಚುನಾಯಿತ ಸದಸ್ಯರಿಗಿಂತ ಹೆಚ್ಚಾಗಿ ಇವರೆ ಜನರ ಪ್ರತಿನಿಧಿಗಳಾದರು. ಚುನಾವಣೆಗಳು ನಡೆಯುವುದಕ್ಕೆ ಎಷ್ಟೋ ಕಾಲದ ಮುಂಚೆಯೇ ಜನ ಇವರನ್ನೇ ಪ್ರತಿನಿಧಿಯನ್ನಾಗಿ ಆರಿಸುವುದೆಂದು ನಿರ್ಣಯಿಸಿಕೊಂಡಿದ್ದರು. ಜನ ಇವರನ್ನು ಮೆಚ್ಚಿಕೊಂಡಂತೆ ಇವರೂ ಜನರನ್ನು ಮೆಚ್ಚಿ ಕಟ್ಟಿಕೊಂಡರು. ೧೯೫೭ರಲ್ಲಿ ಇವರು ವಿಧಾನಸಭೆಯ ಸದಸ್ಯರಾಗಿ ಆಯ್ಕೆಯಾದರು. ಆಗ ನಾನೂ ಅವರ ಜೊತೆ, ವಿಧಾನಮಂಡಲದಲ್ಲಿ ಸದಸ್ಯನಾಗಿದ್ದೆ. ತಮ್ಮ ಕ್ಷೇತ್ರದ ಜನತೆಯ ಸಮಸ್ಯೆಗಳನ್ನೂ, ಕಷ್ಟಗಳನ್ನೂ ಎತ್ತಿ ತೋರಿಸಿ ಅವುಗಳಿಗೆ ಪರಿಹಾರವನ್ನು ಪಡೆಯುವುದರಲ್ಲಿ ಶಂಕರರಾಯರು ಸದಾ ಜಯಶೀಲರಾಗುತ್ತಿದ್ದರು. ಅವರ ಶಾಂತ ಸ್ವಭಾವ, ವಿಷಯ ಪ್ರತಿಪಾದನಾಕ್ರಮ, ತೀಕ್ಷ್ಣ ಬುದ್ಧಿ, ಕ್ಷೇತ್ರದ ಮೇಲೆ ಮತ್ತು ಅಲ್ಲಿಯ ಮತದಾರರ ಮೇಲೆ ಅವರ ಪ್ರೀತಿ, ಅವರ ಸೇವೆ ಇವುಗಳಲ್ಲಿ ಶಂಕರರಾಯರು ಅಗ್ರಗಣ್ಯರಾಗಿದ್ದರು. ಚುನಾಯಿತರಾದಮೇಲೆ ತಮ್ಮ ಕ್ಷೇತ್ರಕ್ಕೆ ಮುಂದಲ ಚುನಾವಣೆವರೆಗೆ ತಲೆಯನ್ನೇ ಹಾಕದ ಸದಸ್ಯರು ನಮ್ಮಲ್ಲಿ ಬೇಕಾದಷ್ಟು ಮಂದಿ ಇದ್ದಾರೆ. ಶಂಕರರಾಯರು ಇದಕ್ಕೆ ತೀರಾ ವಿರುದ್ಧವಾಗಿದ್ದರು. ಧಾರವಾಡದ ಕಡೆ "ರಾಯ" ಎಂಬುದು ಪ್ರೀತಿಯ ಸಲಿಗೆಯ ಹೆಸರು. "ಬರ್ರಿ ರಾಯರೇ, ಕುಂದಿರಿ ರಾಯರೇ ಹೀಗೆ. ಶಂಕರರಾಯರು ತಮ್ಮ ಕ್ಷೇತ್ರದವರಿಗೆ ಪ್ರೀಯರಾದುದರಿಂದ ರಾಯ ಎಂಬ ಹೆಸರೇ ಅವರಿಗೆ ಖಾಯಂ ಆಗಿದೆ. ಶಂಕರರಾಯರಿಗೆ ದೊರಕಿದ್ದ ಮತಗಳ ಸಂಖ್ಯೆ ಅವರ ವಿದ್ಯಾಅರ್ಹತೆ ಸೌಜನ್ಯ-ಶೀಲತೆ ಮೊದಲಾದವುಗಳಿಂದ ಅವರು ಮಂತ್ರಿಗಳಾಗುವ ರೆಂದು ಜನ ನಿರೀಕ್ಷಿಸುತ್ತಿದ್ದರು. ಆದರೆ ರಾಜಕೀಯ ಕುಟಿಲತಂತ್ರವಷ್ಟೆ. ಶಂಕರ ರಾಯರು ಪಾರ್ಲಿಮೆಂಟರಿ ಕಾರ್ಯದರ್ಶಿಗಳಾಗಿ ತೃಪ್ತರಾಗಬೇಕಾಯಿತು, ಆದರೆ ಅವರು ಆ ಕಾರ್ಯವನ್ನು ತುಂಬ ಸಮರ್ಥವಾಗಿ ನಿರ್ವಹಿಸಿ, ಅನೇಕ ಹಳೆಯ ಕಡತಗಳನ್ನೆಲ್ಲಾ ಒಂದು ವ್ಯವಸ್ಥಿತಕ್ರಮಕ್ಕೆ ತಂದು ತಾವೇ ಎಲ್ಲವನ್ನೂ ಓದಿ ಚುರುಕು ಗೊಳಿಸಿದರು. ಮುಂದಲ ಚುನಾವಣೆಯಲ್ಲಿ ಶಂಕರರಾಯರು ಗೆದ್ದು ವಿದ್ಯಾಮಂತ್ರಿಗಳಾದರು. ಗುಡಿಸಲಿನಲ್ಲಿ ಹುಟ್ಟಿದವರು ಅರಮನೆಯ ಒಡೆಯರಾದರು. ಯಾವ ಹುದ್ದೆಯೂ ದೊರೆಯದುದಕ್ಕೆ ಶಂಕರರಾಯರು ರಾಜಕಾರಣಕ್ಕೆ ಇಳಿಯಲಿಲ್ಲ. ಅಮೇರಿಕಕ್ಕೆ ಹೋಗಿ ಲಕ್ಷ ಲಕ್ಷ ಸಂಪಾದಿಸುವ ಅವಕಾಶವನ್ನು ಬಿಟ್ಟು ಜನಸೇವೆಗಾಗಿ ಇಲ್ಲಿ ನಿಂತರು.

ಶಂಕರರಾಯರು ಯಾವಾಗಲೂ ಜನಸೇವಾ ತತ್ಪರರು. ಅವರು ತಾವೇ ಹುಡುಕಿಕೊಂಡು ಹೋಗಿ ತಾಲ್ಲೂಕಿನ ಅಭಿವೃದ್ಧಿ ಕಾರ್ಯಗಳನ್ನೆಲ್ಲಾ ಮಾಡಿಸಿದ್ದಾರೆ. ಅವರು ಮಂತ್ರಿಗಳಾಗಿದ್ದ ಕಾಲ ಸ್ವಲ್ಪವೇ ಆದರೂ ಅವರು ತಾಲ್ಲೂಕಿನ ಹಳ್ಳಿ ಹಳ್ಳಿಗೂ ತಿರುಗಿ ಜನತೆಯ ಅಗತ್ಯಗಳನ್ನು ಪೂರೈಸಿದ್ದಾರೆ. ಅವರು ತಾವೇ ಹಳ್ಳಿ

ಯಿಂದ ಬಂದವರಾದುದರಿಂದ, ಹಳ್ಳಿಗರ ಮತ್ತು ಹಿಂದುಳಿದವರ ಏಳಿಗೆಯನ್ನೇ ಮುಖ್ಯ ಹೊಣೆಗಾರಿಕೆಯಾಗಿ ಕೈಗೆತ್ತಿಕೊಂಡರು. ಅವರಿಗೆ ತಮ್ಮ ಕ್ಷೇತ್ರದ ಮತದಾರ ರೆಲ್ಲರ ಪರಿಚಯವೂ ಇದೆ. ಅವರೆಲ್ಲರ ಆವಶ್ಯಕತೆಗಳ ಅರಿವೂ ಇದೆ. ಅವರು ತಮ್ಮ ಕ್ಷೇತ್ರದ ಮೂಲೆ ಮೂಲೆಗಳನ್ನು ಅನೇಕ ಸಲ ಸುತ್ತಾಡಿದ್ದಾರೆ. ಸಮಾಜದಲ್ಲಿ ಹಿಂದುಳಿದವರ ಮತ್ತು ಕೆಳವರ್ಗದವರ ಏಳಿಗೆಗಾಗಿ ವಿಶೇಷವಾಗಿ ದುಡಿದಿದ್ದಾರೆ. ಗ್ರಾಮಗಳಿಗೆಲ್ಲ ರಸ್ತೆಗಳು ಔಷಧಶಾಲೆಗಳು, ಪಾಲಿಟೆಕ್‌ನಿಕ್ ಜೂನಿಯರ್ ಕಾಲೇಜು ಪದವಿ ಕಾಲೇಜು, ನೀರಾವರಿ ಕಾರ್ಯಗಳು ವೈದ್ಯಶಾಲೆಗಳು-ದನಗಳಿಗೆ ಜನಗಳಿಗೆ-ಎಲ್ಲ ವನ್ನೂ ಖುದ್ದಾಗಿ ನಿಂತು ಮಾಡಿಸಿದ್ದಾರೆ. ಮುಂದೆ ಬರುವ ಶಾಸಕರು, ಕೆಲಸಗಳನ್ನು ಹುಡುಕಿಕೊಂಡು ಹೋಗಬೇಕು. ಅಷ್ಟು ಸಮರ್ಪಕವಾಗಿ ಜನರ ಆವಶ್ಯಕತೆಯನ್ನು ಪೂರೈಸಿದ್ದಾರೆ. ಶಂಕರರಾಯರದು ನಿಜವಾಗಿಯೂ ಸಾಹಸದ ಕಥೆ. ಹೋರಾಟದ ಕಥೆ, ಅವರು ಪ್ರತಿಯೊಂದು ಹೆಜ್ಜೆಯಲ್ಲಿಯೂ ಬಡತನ, ಊಹನಾತೀತವಾದ ಕಷ್ಟ ಗಳನ್ನು ಎದುರಿಸಿ ಮೇಲೆ ಏರಿದ್ದಾರೆ, ಅವರ ಧೀರಬಾಳು ನಮ್ಮ ಯುವಕರಿಗೆ ಆದರ್ಶವಾಗುತ್ತದೆ. ಅವರಿಗೆ ವಿದ್ಯಾ ಖಾತೆಯು ದೊರಕಿದುದರಲ್ಲಿ ಒಂದು ಔಚಿತ್ಯವೂ ಇದೆ. ಅವರ ಇಷ್ಟಪ್ರಾಪ್ತಿಯೂ ಸರಿಯಾದವರಿಗೆ ಸರಿಯಾದ ಖಾತೆಯೂ ದೊರಕಿ ದಂತಾಯಿತು. ನಮ್ಮ ದೇಶದಲ್ಲಿ ಶಿಕ್ಷಣ, ಶಿಕ್ಷಣಯೋಜನೆಗಳು ಪದೇ ಪದೇ ಬದಲಾ ವಣೆಗಳು, ಇಂಗ್ಲೆಂಡ್ ಅಮೇರಿಕದ ಅನುಕರಣೆ, ಅತಿಯಾದ ಪುಸ್ತಕದ ಅವಲಂಬನೆ, ಶಿಕ್ಷಕರ ಅಶಿಸ್ತು ಇವೆಲ್ಲ ವಿದ್ಯಾ ಇಲಾಖೆಯನ್ನು, ಹಾವು ಚೇಳು, ಗೂಬೆಹದ್ದು ಪೊಟರೆ ಗಳ ಅಳತೆಗೆಟ್ಟು ಬೆಳೆದ ಅಸಂಖ್ಯಾತ ಕೊಂಬೆಗಳ ಗೊಂಡಾರಣ್ಯದ ಹಳೆಯ ವಟ ವೃಕ್ಷ ವನ್ನಾಗಿ ಮಾಡಿದೆ. ಈ ಕಾಡಿನಲ್ಲಿ ಪ್ರವೇಶಿಸಬೇಕಾದರೆ ಯಾರಾದರೂ ಎದೆ ಮುಟ್ಟಿ ನೋಡಿಕೊಳ್ಳಬೇಕು. ಶಂಕರರಾಯರು ತಾವೇ ತಮ್ಮ ಶಿಕ್ಷಣಕ್ಕೆ ಅಷ್ಟೊಂದು ಕಷ್ಟ ಕಾರ್ಪಣ್ಯಗಳನ್ನು ಪಟ್ಟುದರಿಂದಲೋ ಏನೋ, ಅನಾಥವಾದ ಶಿಕ್ಷಣ ಇಲಾಖೆಯನ್ನು ವಹಿಸಿಕೊಂಡರು. ಅವರು ಆ ಖಾತೆಯನ್ನು ಹೊಂದಿದ್ದುದು ಸ್ವಲ್ಪವೇ ಕಾಲ ವಾದರೂ ಅಷ್ಟರಲ್ಲಿಯೇ ಅನೇಕ ಒಳ್ಳೆಯ ಕೆಲಸಗಳನ್ನು ಮಾಡಿದರು. ಸಾರ್ವಜನಿಕ ಜೀವನದಲ್ಲಿ ಯಾವರೀತಿಯಾದ ಅಪವಾದಕ್ಕೂ ಸಿಕ್ಕದೆ ಪ್ರಾಮಾಣಿಕರಾಗಿ ಕೆಲಸ ಮಾಡಿದರೆಂಬ ಪ್ರಶಸ್ತಿ ಅವರಿಗೆ ಎಲ್ಲರಿಂದಲೂ ದೊರಕಿದೆ.

ಶಂಕರರಾಯರು ಒಳ್ಳೆ ಸುಸಂಸ್ಕೃತ ವ್ಯಕ್ತಿ. ಜೀವನ ನಡೆ ನುಡಿ ಉಡಿಗೆ ಎಲ್ಲದ ರಲ್ಲಿಯೂ ಗಾಂಭೀರ್ಯವುಳ್ಳವರು. ವಿದ್ಯಾಮಂತ್ರಿಯಾಗಿ ಸುತ್ತ ನಾಲ್ಕು ಕಡೆ ಗಳಿಂದಲೂ ಪ್ರವೇಶ. ತಾಂತ್ರಿಕ ಶಿಕ್ಷಣ ಹೊಸ ಕಾಲೇಜುಗಳು ಹಿಂದುಳಿದವರ ಶಿಕ್ಷಣ ಶಾಲೆಗಳು-ಅವರ ಕಛೇರಿಯಲ್ಲಿ ಯಾವಾಗಲೂ ಸಂತೆಯಲ್ಲಿ ತುಂಬಿರುತ್ತಿದ್ದಂತೆ ಜನ ತುಂಬಿರುತ್ತಿದ್ದರು. ಸತತ ಒತ್ತಡವಿದ್ದರೂ ಅವರು ಸಮತೂಕವನ್ನು ಕಳೆದುಕೊಳ್ಳದೆ ಅಂತಶ್ಶಕ್ತಿಯಿಂದ ಎಲ್ಲವನ್ನೂ ಶಾಂತವಾಗಿ ನಿಭಾಯಿಸಿದರು. ಅವರು ದೈಹಿಕವಾಗಿ

ಅಂತಹ ಬಲಿಷ್ಠ ಆಳು ಅಲ್ಲ. ಆದರೆ ಅವರು ದೇಹದಿಂದ ಮಾಡುವುದಕ್ಕಿಂತ ಹೆಚ್ಚು ಕಾರ್ಯವನ್ನು ಅದಮ್ಯ ಉತ್ಸಾಹ ಶಕ್ತಿಯಿಂದ ನಿರ್ವಹಿಸುತ್ತಿದ್ದರು.

ಶಂಕರರಾಯರಲ್ಲಿ ಅಭಿಮಾನವನ್ನೂ ಪ್ರೇಮವನ್ನೂ ಇಟ್ಟಿರುವ ಅವರ ಗೆಳೆಯರೂ ಹಿತೈಷಿಗಳೂ ಅವರಿಗೆ ಈ ಗ್ರಂಥವನ್ನು ಅರ್ಪಿಸಿ ತುಂಬ ಉಚಿತವಾದ ಮತ್ತು ಉಪಯುಕ್ತವಾದ ಕಾರ್ಯವನ್ನು ಮಾಡಿದ್ದಾರೆ. ಯೋಗ್ಯರನ್ನು ಸಂಭಾವಿಸುವುದು ಗುಣಗ್ರಾಹಿಗಳಾಗಿರುವುದು, ಉಪಕಾರವನ್ನು ಸ್ಮರಿಸುವುದು, ಸುಸಂಸ್ಕೃತರ ಲಕ್ಷಣ. ಶಂಕರರಾಯರು ಬರಿಯ ಅಧಿಕಾರಸ್ಥರಾಗಿ, ರಾಜಕಾರಣಿಯಾಗಿ ಮಾತ್ರವೇ ಕೆಲಸಮಾಡಿಲ್ಲ. ಅವರು ಜನರ ಕಷ್ಟಸುಖಗಳನ್ನು ಅರಿತು ಮಾನವೀಯತೆಯನ್ನು ಮುಂದು ಮಾಡಿ ಜನಸೇವೆ ಮಾಡಿದ್ದಾರೆ. ಆದ್ಯ ರಾಮಚಾರ್ಯರು ಸಂಪಾದಿಸಿರುವ ಈ ಗ್ರಂಥ ಅನೇಕ ದೃಷ್ಟಿಗಳಿಂದ ವಿಶಿಷ್ಟವಾಗಿದೆ. ಈ ಗ್ರಂಥಕ್ಕೆ ಅವರು "ಕರ್ನಾಟಕ ವಿದ್ಯಾವೈಭವ" ಎಂದು ಹೆಸರಿಟ್ಟಿರುವುದನ್ನು ನಾನು ಮೆಚ್ಚುತ್ತೇನೆ. ಯಾಕೆಂದರ ಇದು ನಮ್ಮ ಜನತೆಯ ವಿದ್ಯಾಭ್ಯಾಸ ಶಿಕ್ಷಣ ಮತ್ತು ಜ್ಞಾನದ ಮಟ್ಟವನ್ನು ಹೆಚ್ಚಿಸಲು ಶ್ರದ್ಧೆಯಿಂದ ದುಡಿದ ವಿದ್ಯಾಭಿಮಾನಿ ವಿದ್ಯಾವೈಭವ ಶಂಕರರಾಯರಿಗೆ ಅಂಕಿತವಾಗಿರುವ ಗ್ರಂಥ. ಶಂಕರರಾಯರ ಗುಣವೇ ವಿದ್ಯಾವೈಭವ. ಇದೊಂದು ಮಾಮೂಲಿ ಸನ್ಮಾನ ಗ್ರಂಥವಲ್ಲ. ಕನ್ನಡನಾಡಿನಲ್ಲಿ ಸನ್ಮಾನಗ್ರಂಥಗಳ ಒಂದು ಸಂಪ್ರದಾಯವೇ ಬೆಳೆದು ಅನೇಕ ಗ್ರಂಥಗಳು ರಚನೆಯಾಗಿವೆ. ಸನ್ಮಾನ ಗ್ರಂಥಗಳ ವೈವಿಧ್ಯ, ಅವುಗಳಲ್ಲಿ ಅಡಕವಾಗಿರುವ ವಿಷಯುಗಳು-ವಿವಿಧ ಗ್ರಂಥಗಳ ವಿಮರ್ಶೆ ಅಥವ ಒಂದು ವಿಶಿಷ್ಟಗ್ರಂಥ ಅಥವ ವಿಷಯಕ್ಕೆ ಸಂಬಂಧಿಸಿದ ಲೇಖನಗಳು-ಹೀಗೆ ಸಂಭಾವನಾಗ್ರಂಥಗಳು ಪ್ರಾರಂಭದಲ್ಲಿ ಒಬ್ಬ ಗೌರವಾನ್ವಿತವ್ಯಕ್ತಿಗೆ ತಮ್ಮ ಕಾಣಿಕೆಯನ್ನು ಅರ್ಪಿಸಲು ಹೊರಟುವಾದರೂ ಕ್ರಮೇಣ ಅವು ಒಂದು ಬಗೆಯ ನಿಷ್ಕೃಷ್ಟ ಆಧಾರಗ್ರಂಥಗಳೂ ಆಗಿವೆ. ಈ ಉಪಯುಕ್ತ ಬದಲಾವಣೆಗೆ ಅನೇಕ ಸಂಪಾದಕರು ಕಾರಣರಾಗಿದ್ದಾರೆ. ನಾಲ್ಕಾರು ಸಂಭಾವನಾ ಗ್ರಂಥಗಳ ಹೊಣೆಯನ್ನು ಹೊತ್ತು ನಿರ್ವಹಿಸಿದ ಡಾ|| ಹಾ. ಮಾ. ನಾಯಕರು ಬಹುಮಟ್ಟಿಗೆ ಕಾರಣರಾಗಿದ್ದಾರೆ. ಶಂಕರ ರಾಯರನ್ನು ಕುರಿತ ಈ ಗ್ರಂಥವೂ ಸಹ, ವಿದ್ಯಾಪ್ರೇಮಿಗಳು, ಶಿಕ್ಷಣ ತಜ್ಞರು ಸಾಹಿತಿಗಳು ಕವಿಗಳು ಇವರ ನಲವತ್ತೈದಕ್ಕಿಂತ ಹೆಚ್ಚು ಲೇಖನಗಳನ್ನು ಒಳಗೊಂಡಿದೆ. ಗ್ರಂಥದ ಪ್ರಾರಂಭವೇ ಶ್ರೀಮಾನ್ ಗೋಕಾಕರ ಲೇಖನದಿಂದ ಮೊದಲಾಗುತ್ತದೆ. ವಿಷಯುಗಳ ಬಾಹುಳ್ಯ ಮತ್ತು ವೈವಿಧ್ಯತೆ ಅಪಾರವಾಗಿದೆ. ಇದು ಇಟ್ಟುಕೊಂಡು ವ್ಯಾಸಂಗಮಾಡಲು ಪದೆ ಪದೆ ಓದಲು ಅರ್ಹವಾದ ಗ್ರಂಥವೆಂದು ನಾನು ಅಭಿಪ್ರಾಯ ಪಡುತ್ತೇನೆ. ಈ ಗ್ರಂಥಧಲ್ಲಿ ಇಂಗ್ಲೀಷ್ ಭಾಷೆಯಲ್ಲಿಯೂ ಮೂರು ಲೇಖನಗಳಿವೆ.

ಈ ಗ್ರಂಥದಲ್ಲಿ ಶಂಕರರಾಯರ ಮಾಡಿದ ಶಿಕ್ಷಣ ವಿಷಯಕ್ಕೆ ಸಂಬಂಧಪಟ್ಟ

ಕೆಲವು ಭಾಷಣಗಳೂ ಸೇರ್ಪಡೆಯಾಗಿವೆ. ಸಾಮಾನ್ಯವಾಗಿ ಮಂತ್ರಿಗಳು ಓದುವ ಭಾಷಣಗಳು, ಬೇರೆಯವರು ಬರೆದು ಕೊಟ್ಟವುಗಳು. ಆದರೆ ಸ್ವಂತ ಇಚ್ಛೆಯಿಂದಲೇ ಬಹು ವಿಷಯಗಳನ್ನು ಅಧ್ಯಯನ ಮಾಡಿದ ಶಂಕರರಾಯ, ದೀರ್ಘವಾದ ಯೋಜನೆ ಮಾಡಿ, ವಿಷಯಗಳನ್ನು ನಿರೂಪಿಸುತ್ತಾರೆ. ರಾಷ್ಟ್ರೀಯ ದೃಷ್ಟಿಕೋನದಿಂದಲೇ ಎಲ್ಲವನ್ನೂ ವಿಚಾರ ಮಾಡುತ್ತಾರೆ. ಇದನ್ನು ಹೇಳುತ್ತಿರುವವರು ಒಬ್ಬ ಕನ್ನಡ ಮಂತ್ರಿಯಾದರೂ, ಈ ಮಾತುಗಳು ಅಖಿಲ ಭಾರತಕ್ಕೆ ಅನ್ವಯಿಸುತ್ತವೆ. ಭಾವೈಕ್ಯತೆಯನ್ನು ಕುರಿತು ಶಂಕರರಾಯರು ಹೀಗೆ ಹೇಳುತ್ತಾರೆ. "ರಾಷ್ಟ್ರೀಯ ಸ್ವಾತಂತ್ರ್ಯ, ನಮ್ಮ ದೇಶಕ್ಕೆ ಗಣನೀಯವಾದ ಬದಲಾವಣೆಗಳನ್ನು ತಂದು ಕೊಟ್ಟಿದ್ದರೂ, ಭಾವನಾತ್ಮಕ ಸಮಗ್ರತೆಯನ್ನು ನಾವು ಇನ್ನೂ ಸಾಧಿಸಬೇಕಾಗಿದೆ. ಈ ರೀತಿಯ ಸಮಗ್ರತೆಯನ್ನು ನಾವು ಸಾಧಿಸಬೇಕಾದರೆ ಅನಕ್ಷರಸ್ಥರನ್ನು ಅಕ್ಷರಸ್ಥರನ್ನಾಗಿ ಮಾಡಬೇಕು. ಈಗಿರುವ ಸಾಮಾಜಿಕ ಮತ್ತು ರಾಷ್ಟ್ರೀಯ ಸ್ವರೂಪದ ಅನಂತ ಜ್ವಲಂತ ಸಮಸ್ಯೆಗಳನ್ನು ಪರಿಹರಿಸಲು ಸಹಾಯಕವಾಗುವಂಥ ರಾಷ್ಟ್ರೀಯ ಜಾಗೃತಿಯನ್ನು ಅನಕ್ಷರಸ್ಥರ ಮುಗ್ಧ ಹೃದಯದಲ್ಲಿ ಮೂಡಿಸಬೇಕು. ಪ್ರಾದೇಶಿಕ ಅಂತರವನ್ನು ಮತ್ತು ಸಾಮಾಜಿಕ ವಿಲಕ್ಷಣವನ್ನು ವಯಸ್ಕ ಶಿಕ್ಷಣ, ಪರಿಹರಿಸುವಂತಾಗಬೇಕು. ವಯಸ್ಕ ಶಿಕ್ಷಣ, ಜಾತಿ ಮತ್ತು ಮತದ ವ್ಯತ್ಯಾಸಗಳು ಮತ್ತು ಪ್ರಾದೇಶಿಕ ಮತ್ತು ಸಾಂಸ್ಕೃತಿಕ ಭಿನ್ನಾಭಿಪ್ರಾಯಗಳನ್ನು ತೊಲಗಿಸಿ ನಮ್ಮ ದೇಶದ ಜನತೆಯಲ್ಲಿ ಏಕತಾಭಾವನೆಯನ್ನು ಮೂಡಿಸಬೇಕು. ಮತ್ತು ಇತರರ ಜೀವನದೃಷ್ಟಿ ನಂಬಿಕೆ ಮತ್ತು ಜೀವನ ನೀತಿಯ ಬಗ್ಗೆ, ಗೌರವ ಮೂಡಿಸುವಂತಿರಬೇಕು, ಸಮಗ್ರತೆಯ ಭಾವನೆಗೆ ವಿರುದ್ಧವಾದ ಎಲ್ಲ ಪ್ರತಿಕೂಲ ವಿಷಯಗಳನ್ನೂ ಶಿಕ್ಷಣದಿಂದ ತೆಗೆದು ಹಾಕಬೇಕು....ನಮ್ಮ ಎಲ್ಲ ಎಂಜನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳಲ್ಲಿರುವ ನಿಪುಣ ಹಾಗು ತಜ್ಞ ಜನಶಕ್ತಿಯನ್ನು ನಮ್ಮ ಯೋಜನೆ ಮತ್ತು ಅಭಿವೃದ್ಧಿ ಕಾರ್ಯಗಳಿಗೆ ಸೂಕ್ತವಾಗಿ ಬಳಸಿಕೊಂಡರೆ ಆರ್ಥಿಕ ಸ್ವಾವಲಂಬನೆ ಸಾಧ್ಯ. ಸ್ಥಳೀಯ ಸಮಸ್ಯೆಗಳಿಗೆ ಪರಿಹಾರ ಸಾಧ್ಯ. ರಾಜ್ಯದ ಎಲ್ಲ ಪ್ರದೇಶಗಳಲ್ಲಿಯೂ ಸಮಾನವಾದ ಮತ್ತು ನಿಷ್ಪಕ್ಷವಾದ ಅಭಿವೃದ್ಧಿ ಸಾಧ್ಯ. ಕರ್ನಾಟಕದ ಗತಕಾಲ ಭವ್ಯವಾದುದು, ಅದರ ವರ್ತಮಾನ ಚೈತನ್ಯಪೂರ್ಣವಾದುದು. ಹಾಗೆಯೇ ನಿಶ್ಚಿತವಾದ ಉಜ್ವಲ ಭವಿಷ್ಯ ಅದಕ್ಕಿದೆ. ಇದು ಮೊದಲಿನಿಂದಲೂ ಪ್ರಭಾವಶಾಲಿಯಾದ ಸಂಸ್ಕೃತಿಯ ನೆಲೆಯಾಗಿದೆಯಷ್ಟೇ ಅಲ್ಲ. ಅನೇಕ ಧಾರ್ಮಿಕ ಆಂದೋಲನಗಳಿಗೆ, ನೃತ್ಯನಾಟಕ ಪ್ರಕಾರಗಳಿಗೆ, ಶಿಲ್ಪ ಮತ್ತಿತರ ಲಲಿತಕಲಾ ಶೈಲಿಗಳಿಗೆ ಉಗಮ ಸ್ಥಾನವಾಗಿದೆ. ಎಲ್ಲ ಸಂಸ್ಕೃತಿಗಳಲ್ಲೂ ಇರುವ ಸತ್ವಪೂರ್ಣ ಅಂಶಗಳನ್ನು ತಮ್ಮದಾಗಿ ಮಾಡಿಕೊಳ್ಳುವುದರಲ್ಲಿ, ಕನ್ನಡ ಜನತೆ ಸದಾ ಮುಂದು....ಬಹು ಭಾಷಾ ಸಾಮರ್ಥ್ಯ ಮೊದಲಿನಿಂದಲೂ ನಮ್ಮ ಶಕ್ತಿಯಾಗಿದೆ. ಅನಾದಿ ಕಾಲದಿಂದಲೂ ನಮ್ಮ

ಪೂರ್ವಿಕರು, ಒಬ್ಬರು ಮತ್ತೊಬ್ಬರ ಭಾಷೆಯನ್ನು ಕಲಿತು ಕೊಳ್ಳುತ್ತಿದ್ದುದಲ್ಲದೆ' ಅವರ ಯಾವುದೇ ವೃತ್ತಿಗೂ ಭಾಷೆ ಅಡ್ಡಗೋಡೆಯಾಗಿರಲಿಲ್ಲ. ಪರಸ್ಪರ ಸಹಿಷ್ಣುತೆ ಮತ್ತು ಪರಸ್ಪರ ಗೌರವ ಮೊದಲಿನಿಂದಲೂ ನಮ್ಮ ಸಂಸ್ಕೃತಿಯ ಮುಖ್ಯ ತಿರುಳು.

ಶಂಕರರಾಯರ ಶೈಲಿ ಆಗಾಗ ಕಾವ್ಯಮಟ್ಟಕ್ಕೆ ಏರುತ್ತದೆ, ಶ್ರವಣಬೆಳಗೊಳದ ಗೊಮ್ಮಟವನ್ನು ಕುರಿತು ಅವರ ವರ್ಣನೆ ಹೀಗಿದೆ "ಪ್ರಪಂಚದ ಭೂಪಟದಲ್ಲಿ ಕರ್ನಾಟಕಕ್ಕೆ ಒಂದು ಸ್ಥಾನವನ್ನು ದೊರಕಿಸಿಕೊಟ್ಟ ಬಾಹುಬಲಿ ಅಥವಾ ಗೊಮ್ಮಟ ಸ್ವಾಮಿ ನಿಂತಿರುವುದು ಈ ದೊಡ್ಡ ಬೆಟ್ಟದಲ್ಲಿ. ಗಂಗರ ವಂಶದ ದೊರೆಗಳಿಗೆ ಸೇನಾ ಪತಿಯಾಗಿ ಮಹಾಮಂತ್ರಿಯಾಗಿ ರಾಜಕೀಯ ಮುತ್ಸದ್ದಿಯಾಗಿ-ಸೇವೆ ಸಲ್ಲಿಸಿದ ವೀರ ಮಾರ್ತಾಂಡ ಚಾವುಂಡರಾಯನು ಇಂದಿಗೆ ಸರಿಯಾಗಿ ಒಂದು ಸಾವಿರ ವರುಷಗಳ ಹಿಂದೆ ಅಂದರೆ 981ರಲ್ಲಿ ಅಖಂಡ ಶಿಲೆಯಲ್ಲಿ ಮಾಡಿಸಿದ 57 ಅಡಿ ಎತ್ತರದ ಬೃಹತ್ ವಿಗ್ರಹ ಈ ಗೊಮ್ಮಟಸ್ವಾಮಿ. ಈ ಗೊಮ್ಮಟದೇವರ ಚೆಲುವನ್ನು ಏನೆಂದು ವರ್ಣಿಸಲಿ ! ತಲೆತುಂಬ ಗುಂಗುರು ಗುಂಗುರಾಗಿ ಸುರಳಿ ಸುತ್ತಿಕೊಂಡಿರುವ ಕೂದಲು ಹರವಾದ ಹಣೆ, ಕಾಮನಬಿಲ್ಲಿನಂತೆ ಬಾಗಿರುವ ಹುಬ್ಬು, ಸದಾ ಆತ್ಮತೃಪ್ತಿಯನ್ನು ಚಿಮ್ಮಿಸುವ ಕಣ್ಣುಗಳು, ತಿದ್ದಿಮಾಡಿದಂತೆ ಇರುವ ಮೂಗು, ಎಳೆಯ ಮಗುವಿನ ಅಥವಾ ಭಗವಂತನ ಮುಖದಲ್ಲಿ ಮಾತ್ರ ಕಾಣಬಹುದಾದ ನಿರ್ಮಲವಾದ ನಗೆಯನ್ನು ತುಳುಕಿಸುವ ತುಟಿಗಳು. ದೀರ್ಘವಾದ ಕಿವಿಗಳು, ಮುದ್ದಾದಗಲ್ಲ, ವಿಶಾಲವಾದ ಎದೆ, ನೀಳವಾದ ಕೈಗಳು, ಶಕ್ತಿಯುತವಾದ ತೊಡೆಗಳು, ಬಲಶಾಲಿಯಾದ ಪಾದಗಳು-ಇವೆಲ್ಲ ಜಗತ್ತಿನಲ್ಲೇ ಈ ಬಾಹುಬಲಿ ಸ್ವಾಮಿಯಲ್ಲಿ ಮಾತ್ರ ಸಿಗುವ ಮತ್ತು ಇನ್ನೆಲ್ಲೂ ಸಿಗದಿರುವ ಅಪೂರ್ವವಾದ ದೈವಿಕವಾದ ದೃಶ್ಯ. ತನ್ನ ಪಾಲಿಗೆ ಬಂದ ತಾನು ಗೆದ್ದು ಪಡೆದ ಸಾಮ್ರಾಜ್ಯವನ್ನು ಹುಲ್ಲು ಕಡ್ಡಿಯಂತೆ ತ್ಯಜಿಸಿ ತನ್ನ ಅಣ್ಣನಿಗೆ ಅಷ್ಟನ್ನೂ ಬಿಟ್ಟು ಕೊಟ್ಟು ತಪಸ್ಸಿಗೆ ನಿಂತ ಈ ಮೂರ್ತಿಯ ಸಂದೇಶ ಇಂದಿನ ಜಗತ್ತಿಗೆ ತುಂಬಾ ಅಗತ್ಯವಾದ ಸಂದೇಶವಾಗಿದೆ. ಅಂತರಮುಖಿಯಾಗಿ ಬಾಹ್ಯ ಜಗತ್ತನ್ನು ಸಂಪೂರ್ಣವಾಗಿ ಮರೆತು ತಪ್ಪಸ್ಸಿಗೆ ತೊಡಗಿದ ಈ ಮೂರ್ತಿಯ ಬಳ್ಳಿ ಬೆಳೆಯಿತು. ಹುತ್ತ ಹಬ್ಬಿತು, ಹಾವುಗಳು ಸುತ್ತಿಕೊಂಡವು ಇಷ್ಟೆಲ್ಲಾ ಆದರೂ ಆತನಿಗೆ ಯಾವು ದರ ಪರಿವೆಯೂ ಇಲ್ಲದೆ ತನ್ನ ಆತ್ಮವನ್ನು ಕುರಿತು ತಾನು ಚಿಂತಿಸುತ್ತಾನಿಂತಿದ್ದಾನೆ. ಇದಲ್ಲವೇ ಧ್ಯಾನ ! ಇದಲ್ಲವೇ ಯೋಗಮುದ್ರೆ ! ಇದಲ್ಲವೇ ತಪಸ್ಸು !"

ಶಂಕರರಾಯರ ಶೈಲಿ, ತುಂಬ ಆಕರ್ಷಣೀಯವಾಗಿದೆ. ಇನ್ನೂ ಇನ್ನೂ ಓದೋಣ ಎನಿಸುತ್ತದೆ. ಅವರ ಭಾಷಣದಲ್ಲಿಯೂ ಉತ್ಸಾಹ. ನಿರರ್ಗಳವಾದ ಸಂಸ್ಕೃತಶ್ಲೋಕಗಳು, ಕನ್ನಡ ಪದ್ಯಗಳು ಆಕರ್ಷಣೀಯ ಆತ್ಮಕಥೆಯ ತುಣಕುಗಳು ವಿನೋದ ಪ್ರಸಂಗಗಳು ತುಂಬಿರುತ್ತವೆ. ಅವರು ಸರಳವಾಗಿ ನಿರಾಯಾಸವಾಗಿ ಗಂಟೆ ಗಟ್ಲೆ ಮಾತಾಡಬಲ್ಲರು.

ಶಂಕರರಾಯರ ರಾಜಕೀಯ ಜೀವನದಲ್ಲಿ ಅರ್ಹತೆಗೆ ಶಕ್ತಿಗೆ ತಕ್ಕಷ್ಟು ಪೂರ್ಣಾವಕಾಶವೂ ದೀರ್ಘಾವಕಾಶವೂ ಸಿಕ್ಕಲಿಲ್ಲ. ಅವರ ಮುಂದೆ ಇನ್ನೂ ಅರ್ಧ ಆಯಸ್ಸೆ ಇದೆ. ದೇಹದಾರ್ಢ್ಯ ಬುದ್ಧಿಚುರುಕು ಉತ್ಸಾಹ ಕಾರ್ಯತತ್ಪರತೆ ಇವು ಚೆನ್ನಾಗಿವೆ. ಅವರಿಂದ ನಮ್ಮ ದೇಶಕ್ಕೂ ಜನ ಜೀವನಕ್ಕೂ ನಾವು ಇನ್ನೂ ಹೆಚ್ಚು ಸಾರ್ಥಕವೂ ಉಪಯುಕ್ತವೂ ಆದ ಕಾರ್ಯಗಳನ್ನು ನಿರೀಕ್ಷಿಸಬಹುದು.

ಶ್ರೀಮಾನ್ ಶಂಕರರಾಯರು, ಇಂಗ್ಲೀಷಿನಲ್ಲಿಯೂ ಒಳ್ಳೆಯ ಭಾಷಣಕಾರರು. ಅವರನ್ನು ಗೌರವಿಸುವ ಈ ಕೃತಿಯಲ್ಲಿ ಸಹ ವಿದ್ವತ್‌ಪೂರ್ಣ ಲೇಖನಗಳಿವೆ. ಡಾ॥ ಗೋಕಾಕರ "ಹರಿಃ ಓಂ" ಶ್ರೀ ಗಣೇಶದಿಂದ ಪ್ರಾರಂಭವಾಗಿ ಡಾ॥ ವಿ.ಕೆ.ಆರ್ ವಿ. ರಾವ್ ಲೇಖನಕ್ಕೆ ಮುಕ್ತಾಯಗೊಳ್ಳುವ ಈ ಪ್ರಶಸ್ತಿ ಗ್ರಂಥದ ಎಲ್ಲ ಲೇಖನಗಳ ಮೂಲಕ ಹಾಯ್ದುಹೋಗುವ ನಮ್ಮ ಕಣ್ಣು ಮನಸ್ಸಿಗೆ ತೃಪ್ತಿ ದೊರೆಯುತ್ತದೆ, ಇದೊಂದು "ರೆಫರೆನ್ಸ್" ಪುಸ್ತಕವೂ ಆಗಬಹುದು.

ಗೊರೂರು ರಾಮಸ್ವಾಮಿ ಅಯ್ಯಂಗಾರ್
ಬೆಂಗಳೂರು-೧೦



1981ರಲ್ಲಿ ಅಖಿಲ ಭಾರತ ಶಿಕ್ಷಣ ಸಚಿವರ ಸಮ್ಮೇಲನವು ದಿಲ್ಲಿಯಲ್ಲಿ ಕೂಡಿದಾಗ ಕರ್ನಾಟಕ ರಾಜ್ಯದ ಶಿಕ್ಷಣ ಸಚಿವರಾಗಿದ್ದ
ಜಿ. ಬಿ. ಶಂಕರರಾಯರು ಪ್ರಧಾನಿ ಇಂದಿರಾ ಗಾಂಧಿಯವರನ್ನು ಭೇಟಿಮಾಡಿದ್ದು.



ಕರ್ನಾಟಕ ರಾಜ್ಯದಲ್ಲಿ ಧಾರವಾಡ ಗ್ರಾಮಾಂತರ ವಿಧಾನಸಭಾ ಮಧ್ಯಂತರ ಚುನಾವಣೆಯಲ್ಲಿ ವಿಜೇತರಾದ ಶ್ರೀಮಾನ್ ಪುದಕಲಕಟ್ಟಿಯವರೊಂದಿಗೆ ರಾಜ್ಯದ ಶಿಕ್ಷಣ ಸಚಿವರಾಗಿದ್ದ ಶ್ರೀಮಾನ್ ಜಿ. ಬಿ. ಶಂಕರರಾಯರು ಪ್ರಧಾನಿ ಇಂದಿರಾ ಗಾಂಧಿಯವರನ್ನು ದಿಲ್ಲಿಯಲ್ಲಿ ಭೇಟಿಯಾಗಿದ್ದರು.



ಶ್ರೀ ವಿ. ಕೆ. ಗೋಕಾಕರು ತಮ್ಮ ಆಯೋಗದ ವರದಿಯನ್ನು ಶಿಕ್ಷಣ ಸಚಿವರಾಗಿದ್ದ ಜಿ. ಬಿ. ಶಂಕರರಾಯರಿಗೆ ಸಮರ್ಪಿಸುತ್ತಿದ್ದಾರೆ. ಆಯೋಗದ ಸದಸ್ಯರಾದ ಜಿ. ನಾರಾಯಣ ಹಾಗೂ ತ. ಸು. ಶ್ಯಾಮರಾಯರು ಉಪಸ್ಥಿತರಿರುವರು.



ಸರ್ವಜ್ಞನ ಸ್ಥಳವಾದ ಮಾಸೂರಿನಲ್ಲಿ ರಾಜ್ಯದ ಶಿಕ್ಷಣ ಸಚಿವರಾಗಿದ್ದ ಜಿ. ಬಿ. ಶಂಕರರಾಯರಿಗೆ ಸನ್ಮಾನ ಮಾಡುತ್ತಿರುವುದು.
ಡಾ. ಬಿ. ಎನ್. ದತ್ತೋಜಿರಾವ್ ಹಾಗೂ ಆದ್ಯ ರಾಮಾಚಾರ್ಯರು ಉಪಸ್ಥಿತರಿದ್ದಾರೆ.

ಪುರುಷೋತ್ತಮನ ಕಲ್ಪನೆ

ಡಾ. ವಿ. ಕೃ. ಗೋಕಾಕ್
ಕುಲಪತಿ
ಶ್ರೀ ಸತ್ಯಸಾಯಿ ಇನ್‌ಸ್ಟಿಟ್ಯೂಟ್

ವಿಶ್ವಾತ್ಮನನ್ನು ಭಗವದ್ಗೀತೆಯಲ್ಲಿ 'ಕ್ಷರ ಪುರುಷ' ಎಂದು ಕರೆದಿರುವುದುಂಟು. ಅಲ್ಲಿ ಇರ್ವರು ಪುರುಷರ ಉಲ್ಲೇಖ ಬರುತ್ತದೆ: "ದ್ವಾವಿಮೌ ಪುರುಷೌ ಲೋಕೆ". 'ಕ್ಷರ ಪುರುಷ' ಹಾಗೂ 'ಅಕ್ಷರ ಪುರುಷ' ಎಂದು ಅವರನ್ನು ಕರೆದಿರುವುದುಂಟು. ಸರ್ವ ಭೂತಗಳ ಆತ್ಮನೇ ಕ್ಷರ ಪುರುಷ. ಅವನ ಅಸ್ತಿತ್ವದಲ್ಲಿ ಈ ಪ್ರಪಂಚವೆಲ್ಲ ಅಡಗಿರುತ್ತದೆ. ಶ್ರೀ ಅರವಿಂದರು ಅವನನ್ನು ಹೀಗೆ ಬಣ್ಣಿಸಿದ್ದಾರೆ.

"The silent soul of all the world was there: A being lived, a presence and a power, A single person who was himself and all".

o o o

It led things evil to their secret good, It turned racked falsehood into happy truth, Its power was to reveal divinity..... A formless spirit become the soul of form.

(ಪ್ರಪಂಚದ ಆತ್ಮಮೌನವೆತ್ತಿಹುದಲ್ಲಿ–
ಒಂದು ಸನ್ನಿಧಿ, ಒಂದು ಚೇತನ, ಮಹಾಶಕ್ತಿ,
ತಾನು ತಾನಾಗಿ ತಾನೆಲ್ಲವಾಗಿಹ ಸತ್‌ತು.

o o o

ಕೆಡಕುಗಳನೊಯ್ದಿತ್ತದುವೆ ಗುಪ್ತ ಕಲ್ಯಾಣದೆಡೆ,
ಅನೃತವೆಲ್ಲವನು ಸೂನೃತವಾಗಿ ಮಾರ್ಪಡಿಸಿತ್ತು.
ದಿವ್ಯತೆ ಸಾಕ್ಷಾತ್ಕರಿಸುವಂತೆ ಗೆಯ್ದಿತು ಶಕ್ತಿ.

o o o

ರೂಪಣದಾತ್ಮವಾಗಿತ್ತು ರೂಹಿರದ ಚೈತನ್ಯ.)

ಅಕ್ಷರ ಪುರುಷನು ಕೂಟಸ್ಥ ಪುರುಷ, ಪ್ರಪಂಚದ ಹಿಂದೆ ಅಚಲವಾಗಿರುವ, ಪರಿವರ್ತನೆಯೇ ಇಲ್ಲದ ಅಬಾಧಿತ, ಶಾಶ್ವತ, ಸನಾತನ ಶಕ್ತಿಯಾಗಿದ್ದಾನೆ. ಪ್ರಕೃತಿಯನ್ನು ತುಂಬಿದ ಮಾಯೆಯನ್ನು ಮೀರಿ, ಸ್ವಯಂಭೂತತ್ವವಿತ್ತ ಸ್ವಾತಂತ್ರ್ಯದ ವಿಲಾಸದಲ್ಲಿಯೇ ಮಗ್ನನಾಗಿ ಸ್ವಂತದ 'ಭವನ' ಇಲ್ಲವೆ ಆಗುಹೋಗಿನ ಕ್ರಿಯೆಯಿಂದ ದೂರಾಗಿ ಅಕ್ಷರ ಪುರುಷನಿರುತ್ತಾನೆ :

"An enormous self of mind which held all life in a corner of its vasts. Omnipotent, immobile and aloof in the world which sprang from it, it took no part.

It gave no heed to the poems of victory. It was indifferent to its own defeats".

ಎಂದು ಶ್ರೀ ಅರವಿಂದರು ಅವನನ್ನು ಬಣ್ಣಿಸಿದ್ದಾರೆ.

(ಅಗಾಧ, ಮೌನಮಯ ಪುರುಷನಿವ, ಅವನ ಪೌರುಷದೊಂದು ಮೂಲೆಯೊಳ ಜಗವಿತ್ತು. ಸರ್ವಶಕ್ತ, ನಿಶ್ಚಲ, ಅಲಿಪ್ತವಿದೂರ, ತನ್ನಿಂದ ಒಗೆತಂದ ಜಗದೊ ತನ್ನಂಗವಿರಲಿಲ್ಲ. ಇಲ್ಲ, ಲಕ್ಷಿಸಲಿಲ್ಲ ತನ್ನ ಜಯಗೀತೆಗಳ, ಸುಮ್ಮನಿದ್ದನು ನೋಡಿ ಕೇಳುವ ತನ್ನ ಸೋಲುಗಳ).

ಕ್ಷರ-ಅಕ್ಷರ ಪುರುಪುರೀರ್ವರೂ ಅನ್ಯ ತೃತೀಯ ಪುರುಷನ-ಪುರುಷೋತ್ತಮನ ಆವಿರ್ಭಾವಗಳಾಗಿದ್ದಾರೆ. ಪೂರ್ಣ ಪ್ರಜ್ಞೆಯ ಒಂದೊಂದು ಪರಿ ಮಾತ್ರ ಇವರೀರ್ವ ರಲ್ಲಿಯೂ ಗೋಚರವಾಗುತ್ತದೆ. ಅಕ್ಷರ ಪುರುಷನಂತೆ ಪುರುಷೋತ್ತಮನು ಬರಿ ಪ ಅವ್ಯಕ್ತ ಹಾಗೂ 'ನೇತಿ' 'ನೇತಿ' ಕೇವಲನಲ್ಲ ಕ್ಷರ ಪುರುಷನಂತೆ ಆತ ಬರಿ ವಿಶ್ವಾತ ಹಾಗೂ ಸರ್ವ ತಂತ್ರನಲ್ಲ. ಇವರಿಬ್ಬರನ್ನು ಒಳಗೊಂಡಿದ್ದರೂ ಪುರುಷೋತ್ತಮನ ತಾನೇ ತಾನಾಗಿರುತ್ತಾನೆ. ಅಲ್ಲದೆ ಸೃಷ್ಟಿಯನ್ನೆಲ್ಲ ತುಂಬಿದ ಮೇಲೂ ಪರಾತ್ ಪ ಪಾಗಿ ಉಳಿದ ಕಾಲಾತೀತ, ಅವ್ಯಕ್ತ ಚೈತನ್ಯವನ್ನು ಪುರುಷೋತ್ತಮನು ಒಳಗೊಂಡಿ ತ್ತಾನೆ. ಅತ್ಯತಿಷ್ಠತ್ ದಶಾಂಗುಲಮ್ ಎಂಬ ಪರಾತ್ ಪರಮಾ (transcen dental) ಅವನ ಭಾಗವಾಗಿದೆ. ಪರಮ ವ್ಯೋಮದ ಕ್ಷೀರ ಸಾಗರದಲ್ಲಿ ಪರಮಾ ನಾಗಿ ಯೋಗ ನಿದ್ರೆಯಲ್ಲಿದ್ದರೂ ಪುರುಷೋತ್ತಮನು ಅವತಾರವಾಗಿ ಭೂಮಿಗಿಳಿಯ ತ್ತಾನೆ. ಸತ್ ಇಲ್ಲವೆ ಇರುವಿಕೆಯ ಶಾಂತಿ, ಜ್ಯೋತಿ (ಜ್ಞಾನ)ಯಿಂದ ಬರುವ ಪ ತ್ವದ ಅನುಭವ, ದುಃಖಿ ಮಾನವರನ್ನು ತಾಯಿಯಂತೆ ಸಂತೈಸಲು ಬೇಕಾಗುವ ಶ (ಚೈತನ್ಯ) ಹಾಗೂ ಅವರನ್ನೆಲ್ಲ ಸುಖದಲ್ಲಿ ತೇಲಿಸುವ ಆನಂದ; ಇವು ಪುರುಷೋ ಮನ ಲಕ್ಷಣಗಳಾಗಿವೆ.

"ಯೋಮಾ ಮೇವಮಸಮ್ಮೂಢೋ ಜಾನಾತಿ ಪುರುಷೋತ್ತಮಂ|
ಸ ಸರ್ವವಿದ್ ಭಜತಿ ಮಾಮ್ ಸರ್ವ ಭಾವೇನ ಭಾರತ॥

ಎಂದು ಶ್ರೀ ಕೃಷ್ಣನು ಗೀತೆಯಲ್ಲಿ ಹೇಳುತ್ತಾನೆ. ಈ ಪುರುಷೋತ್ತಮನ ಉಪಾಸನೆಯು ಪೂರ್ಣ ಪ್ರಜ್ಞೆಯ ಅನುಭವವಾಗಿದೆ.

ಸಚ್ಚಿದಾನಂದಮಯ ಪುರುಷೋತ್ತಮನ ಲೋಕವನ್ನು ಶ್ರೀ ಅರವಿಂದರ ಮಹಾಕಾವ್ಯದಲ್ಲಿ ಸಾವಿತ್ರಿಯು ಪ್ರವೇಶಿಸುತ್ತಾಳೆ. ಆ ಸನ್ನಿವೇಶದ ವರ್ಣನೆಯಲ್ಲಿ ನಮಗೆ ಪುರುಷೋತ್ತಮನ ವರ್ಣನೆಯೂ ದೊರೆಯುತ್ತದೆ.

"A power went forth that shook the founded spheres and loosed the stakes that hold the tents of form. Absolved from vision's grip and the folds of thought, Rapt from her sense like disappearing scenes. In the stupendous theatre of space. The heaven-worlds vanished in spiritual light.

o o o

In an ineffab e world she lived fulfilled, An energy of the triune Infinite, In a measureless Reality she dwelt... Around her some tremendous spirit lived, Mysterious flame around a melting pearl, And in the phantom of abolished space, There was a voice unheard by ears..."

(ನಕ್ಷತ್ರ–ಗ್ರಹಮಂಡಲಗಳು ಗಡಗಡ ನಡುಗಿ ಉಡುಗುವಂತೊಂದು ಚೈತನ್ಯ ಹೊರವಂದಿತ್ತು, ರೂಹಿನ ಡೇರೆಗಳ ಗೂಟಗಳ ನಡುಗಿಸುತ ಕಿತ್ತು. ದೃಷ್ಟಿವಲಯದ ಹಿಡಿತದಿಂದ, ಆಲೋಚನೆಯ ಬಣ್ಣಬಣ್ಣಗಳ ತೆರೆಮರೆಯಿಂದ ಮುಕ್ತವಿದೋ! ಆಲಯದ ಭವ್ಯವಿಹ ರಂಗಮಂಟಪದಲ್ಲಿ ಅದೃಶ್ಯವಿಹ ದೃಶ್ಯಮಾಲೆ ಜಾರುವ ತೆರದಿ ಕಳೆದವು ಸ್ವರ್ ಲೋಕಗಳು ಚೇತನಮಯ ಪ್ರಭೆಯಲ್ಲಿ.

o o o

ಕೃತಕೃತ್ಯಗಳು ಬಾಳಿದಳಾಕೆ, ಅನಿರ್ವಚನೀಯವಿರೆ ಬಾಳಿ ಬದುಕಿದ ಜಗವು. ತ್ರಿಧಾತುವಿನ ಅನಂತಮಯ ತಿದ್ದುತ ಜನ್ಯವಿತ್ತಿರುವ ಚೈತನ್ಯ, ಸಾವಿತ್ರಿ, ಅಪ್ರಮೇಯ ಋುತದಾಶ್ರಯದಲ್ಲಿ ಹೂಡಿದಳು ತನ್ನ ನುನೆ......ಬಳಸಿತ್ತವಳ ಆತ್ಯಂತಿಕ, ಅದ್ಭುತವಿರುವ ಚೇತನವೊಂದು ಉಂಗುರುಂಗುರವಾಗಿ, ಕರಗುತಿಹ ಮೌಕ್ತಿಕವ ಗಾಢ, ಗೂಢ ಜ್ವಾಲೆ ಸುತ್ತುವೊಲು. ಶ್ರುತಿಗತಿ ಅಗಮ್ಯವಿಹ ಧ್ವನಿಯೊಂದು ನಿನದಿಸಿತು ಅಸತ್ ಎಂದು ನೌರಿರುವ ಆಲಯ ಪ್ರೇತ ವನದಲ್ಲಿ.)

ಶಿಕ್ಷಣ ಹಾಗೂ ಅಭಿವೃದ್ಧಿಗಳ ನಡುವಿನ ಸುವರ್ಣಸೇತುವೆ

ಡಾ. ಡಿ. ಎಂ. ನಂಜುಂಡಪ್ಪ
ಕುಲಪತಿಗಳು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಚಲಿತ ಶಿಕ್ಷಣ ಕ್ರಮವನ್ನು ಯೋಜನೆಗಳ ಘೋಷಿತ ಉದ್ದೇಶಗಳಾದ ಬಡತನ ನಿರ್ಮೂಲನೆ ಹಾಗೂ ನಿರುದ್ಯೋಗ ಸಮಸ್ಯೆಗಳ ನಿವಾರಣೆಯ ಸಂದರ್ಭದಲ್ಲಿ ವಿಶೇಷವಾಗಿ ಪರೀಕ್ಷೆಗೊಳಪಡಿಸಿ ಅದು ಸಮಾಜ ಹಾಗೂ ಅದರ ಅವಶ್ಯಕತೆಗಳಿಗೆ ಅಸಂಗತವೆಂದು ಟೀಕಿಸಲಾಗುತ್ತಿದೆ. ವಿಶ್ವವಿದ್ಯಾಲಯಗಳು ಹಾಗೂ ಸರಕಾರದ ಅಭಿವೃದ್ಧಿ ಇಲಾಖೆಗಳೆರಡೂ ಈ ಅಪವಾದಕ್ಕೆ ಗುರಿಯಾಗಬೇಕಾಗುವವು. ವಿಶ್ವವಿದ್ಯಾಲಯಗಳಿರುವವರು ಸಮಾಜ ಎದುರಿಸುತ್ತಿರುವ ಸಮಸ್ಯೆಗಳಿಗೆ ಸಂಬಂಧಿಸಿದ ಸಂಶೋಧನಾ ಅಧ್ಯಯನವನ್ನು ವಿರಳವಾಗಿ ಅಥವಾ ಸಾಂದರ್ಭಿಕವಾಗಿ ಪ್ರತ್ಯೇಕವಾಗಿ ಕೈಕೊಳ್ಳುವರು. ಅಭಿವೃದ್ಧಿ ಸಮಸ್ಯೆಗಳ, ಅದರಲ್ಲೂ ವಿಶೇಷವಾಗಿ ಕ್ಷೇತ್ರ ಸಮಸ್ಯೆಗಳ, ಸಾಧಕ-ಭಾದಕಗಳ ಅರಿವು ಕೇವಲ ಕಾರ್ಯಕ್ರಮಗಳ ನಿರ್ವಾಹಕರಿಗಷ್ಟೇ ಇರುವುದೇ ವಿನಃ, ಪಂಡಿತರಿಗೆ ಹಾಗೂ ಸಂಶೋಧಕರಿಗೆ ಇರುವುದಿಲ್ಲವೆಂಬ ಅಭಿಪ್ರಾಯ ಸಮ್ಮೋಹಿನಿಯ ಪ್ರಭಾವದಲ್ಲಿಯೇ ಉಚ್ಚಮಟ್ಟದಲ್ಲಿ ನೀತಿ ನಿರೂಪಿಸುವ ಅಥವಾ ವಿವಿಧ ಅಭಿವೃದ್ಧಿ ವಿಭಾಗಗಳಲ್ಲಿರುವ ಸರಕಾರಿ ಅಧಿಕಾರಿಗಳು ದೀರ್ಘಕಾಲದಿಂದಲೂ ಸಿಲುಕಿರುವರು. ಇದರ ಪರಿಣಾಮವಾಗಿಯೇ ಸಂಶೋಧಕರು ಅಥವಾ ಪಂಡಿತರು ತಮ್ಮದೇ ಆದ ದಂತ ಗೋಪುರಗಳಲ್ಲಿ ಕುಳಿತೇ ಧೋರಣಾ ನಿರೂಪಕರ ಹಾಗೂ ಕಾರ್ಯ ನಿರ್ವಾಹಕರ ಮನಗಳನ್ನು ಆಳುವುದನ್ನು ಮುಂದುವರಿಸುವರೆಂಬ ಗಾದೆ ಮಾತು ರೂಢಿಯಲ್ಲಿ ಬಂದಿರುವುದು. ದಾರಿದ್ರ್ಯ ಹಾಗೂ ನಿರುದ್ಯೋಗ ನಿರ್ಮೂಲನೆಗಳ ಉದ್ದೇಶಗಳನ್ನು ಸಾಧಿಸಲು ಸರಕಾರವು ಅನುಷ್ಠಾನಗೊಳಿಸುತ್ತಿರುವ ವಿವಿಧ ಕಾರ್ಯಕ್ರಮಗಳ ಮಧ್ಯದಲ್ಲಿರುವ ಪರಸ್ಪರ ಸಂಬಂಧ ಮತ್ತು ಪ್ರತಿಕ್ರಿಯೆಗಳನ್ನು ಗ್ರಹಿಸುವ ಅಗತ್ಯವನ್ನು ಅಧಿಕಾರಿಗಳು ಸುಲಭವಾಗಿ ಅರ್ಥೈಸಿಕೊಂಡಿಲ್ಲ. ನೀತಿ ನಿರೂಪಿಸುವಲ್ಲಿ, ಕಾರ್ಯಕ್ರಮಗಳನ್ನು ಜಾರಿಗೊಳಿಸುವಲ್ಲಿ ಹಾಗೂ ತಾಂತ್ರಿಕ ಸೂತ್ರಗಳಿಂದ ಬಗೆಹರಿಸಲ್ಪಡುವ ಸಮಸ್ಯೆಗಳು ಮುಂತಾದ ಕ್ಷೇತ್ರಗಳಲ್ಲಿ ಸಂಶೋಧನೆಯ ಅವಶ್ಯಕತೆಗಳನ್ನು ಅರಿತುಕೊಳ್ಳುವ ಪ್ರಜ್ಞೆ ಕೇವಲ ಅತ್ಯಲ್ಪ ಸಂಖ್ಯೆಯ ಅಧಿಕಾರಿಗಳಿಗೆ

ಇರುವುದು ತೀರಾ ವಿಷಾದನೀಯ. ಒಟ್ಟಿನಲ್ಲಿ, ಸಂಶೋಧಕರು ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರು ಮತ್ತು ಸರಕಾರದಲ್ಲಿರುವ ಆಡಳಿತಾಧಿಕಾರಿಗಳೆಲ್ಲರೂ ವೈಜ್ಞಾನಿಕವಾಗಿ ಕಾರ್ಯಕ್ರಮಗಳನ್ನು ರೂಪಿಸುವ, ಮತ್ತು ಜಾರಿಗೊಳಿಸುವ ಮೌಲ್ಯಮಾಪನ ಮಾಡುವ ಸಾಮಾನ್ಯ ಅಭಿವೃದ್ಧಿ ಕಾರ್ಯಗಳತ್ತ ಆಸಕ್ತಿವಹಿಸುವುದು ಅತ್ಯವಶ್ಯಕವಿದೆ.

ಇದೀಗ, ಅಭಿವೃದ್ಧಿಯ ಗುರಿಯನ್ನು ಪರಿಪೂರ್ಣಗೊಳಿಸುವ ಸಾಮಾನ್ಯ ಪ್ರಯತ್ನಗಳ ವಿಷಯದಲ್ಲಿ ಅಭಿವೃದ್ಧಿ ಇಲಾಖೆ ಮತ್ತು ವಿಶ್ವವಿದ್ಯಾಲಯಗಳ ಪರಸ್ಪರ ಪಾತ್ರಗಳನ್ನು ಮೆಚ್ಚಿಕೊಳ್ಳುವ ಮನೋಭಾವದ ಕೊರತೆಯಿಂದಾಗಿಯೇ ಅವೆರಡರ ಮಧ್ಯೆ ಬಿರುಕು ಉಂಟಾಗಿದೆ.

ಅಭಿವೃದ್ಧಿ ಇಲಾಖೆಗಳನ್ನು ಸಂಶೋಧಕರಿಂದ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರಿಂದ ಸದ್ಯ ಬೇರ್ಪಡಿಸುತ್ತಿರುವ ತೊಡಕು (ಅಡ್ಡಿ ಆತಂಕ) ಗಳನ್ನು ನಿವಾರಿಸಲು ಕೆಲವು ಸಾಧ್ಯತೆಗಳನ್ನು ಯೋಚಿಸಬಹುದಾಗಿದೆ. ಅವುಗಳಲ್ಲಿ ಮಹತ್ವದ ಕೆಲವನ್ನು ಇಲ್ಲಿ ಪಟ್ಟಿ ಮಾಡಲಾಗಿದೆ.

1. ವಿಶ್ವವಿದ್ಯಾನಿಲಯಗಳಲ್ಲಿಯ ಸಂಶೋಧನಾ ವಿಷಯದ ಆಯ್ಕೆ.
2. ವಿಶ್ವವಿದ್ಯಾನಿಲಯ ಹಾಗೂ ಸರಕಾರಿ ಅಧಿಕಾರಿಗಳ ವಿನಿಮಯ.
3. ಯೋಜನೆ ಮತ್ತು ಅಭಿವೃದ್ಧಿಯ ಅಗತ್ಯಗಳನ್ನು ಸ್ಪಷ್ಟೀಕರಿಸುವುದು.
4. ಅಭಿವೃಧಿಯ ಸಮಸ್ಯೆಗಳು ಮತ್ತು ಅವುಗಳ ಅಗತ್ಯಗಳನ್ನು ಗಮನದಲ್ಲಿರಿಸಿಕೊಂಡು ಪಠ್ಯ ಕ್ರಮವನ್ನು ನವೀಕರಣಗೊಳಿಸುವದು :
5. ವಿಶ್ವವಿದ್ಯಾಲಯಗಳಲ್ಲಿ ಆಯ್ಕೆ ಮಾಡಿದ ಪಠ್ಯಕ್ರಮಗಳ ಮೂಲಕ ಸ್ವಂತ –ವೃತ್ತಿಗೆ ಅವಕಾಶವಿಯುವುದನ್ನು ಪ್ರೋತ್ಸಾಹಿಸುವುದು :
6. ವಿಶ್ವವಿದ್ಯಾಲಯಗಳಲ್ಲಿ ಮಾನವ ಶಕ್ತಿ ಯೋಜನೆಯ ಮಾರ್ಗದರ್ಶನವನ್ನು ಅಭಿವೃದ್ಧಿಗೊಳಿಸುವುದು :
7. ಶಿಕ್ಷಣ ಮತ್ತು ತರಬೇತಿಗಳಿಗೆ ಸಂಬಂಧಪಟ್ಟಂತೆ ಸೇವೆಯ ಒಂದು ಒಟ್ಟಾರೆ ಅನುಕೂಲಗಳನ್ನು ಕೊಡ ಮಾಡುವದು.
8. ವಿಶ್ವವಿದ್ಯಾಲಯ ಹಾಗೂ ಕೈಗಾರಿಕೆಗಳ ಮಧ್ಯೆ ಸಂಬಂಧ :
9. ವಿಶ್ವವಿದ್ಯಾಲಯಗಳು ಹಾಗೂ ಸರಕಾರದ ಅಭಿವೃದ್ಧಿ ಇಲಾಖೆಗಳ ಮಧ್ಯೆ ಒಳ್ಳೆಯ ಸಂಬಂಧವೇರ್ಪಡುವಂತೆ ಸಂಘಟನಾತ್ಮಕ ವ್ಯವಸ್ಥೆಯನ್ನು ಸ್ಥಾಪಿಸುವುದು.

೧. ಸಂಶೋಧನಾ ವಿಷಯದ ಆಯ್ಕೆ :

ಸಾಮಾನ್ಯವಾಗಿ, ಸಾಮಾಜಿಕ-ವಿಜ್ಞಾನ ಅಥವಾ ಪ್ರಾಕೃತಿಕ ವಿಜ್ಞಾನ ಅಥವಾ ತಾಂತ್ರಿಕ ಕ್ಷೇತ್ರಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ಆ ವಿಷಯ ಕುರಿತು ಲಭ್ಯವಿರುವ ಜ್ಞಾನಕ್ಕೆ ತನ್ನ ನಿರ್ಣಯಗಳಿಂದ ಮಹತ್ವದ ಕಾಣಿಕೆಯನ್ನು ಸಲ್ಲಿಸುವ ಸಾಧ್ಯತೆಯಿರುವಂತಹ ವಿಷಯವನ್ನು ವಿಶ್ವವಿದ್ಯಾಲಯದ ಸಂಶೋಧಕನು ಆಯ್ದುಕೊಳ್ಳುವನು. ಅವನ ಕೊಡುಗೆ ಅಮೂರ್ತವಾದಷ್ಟು (abstract) ಅದಕ್ಕೆ ವಿದ್ವತ್ ಪ್ರಪಂಚದಲ್ಲಿ ಹೆಚ್ಚಿನ ಪ್ರಸಿದ್ಧಿ ಲಭಿಸುವ ಸಾಧ್ಯತೆಯನ್ನು ಅವನು ನಿರೀಕ್ಷಿಸುವನು. ಸಂಶೋಧನಾ ವಿಷಯಗಳ ಪರವಾಗಿರುವ ಆಯ್ಕೆ ಮಾಡುವಾಗ ಒಲವಿಲ್ಲದಿರುವುದು ಇದಕ್ಕೆ ಕಾರಣ. ಇದು ಅಂಶತಃ ಧೋರಣೆಗಳ ಅಜ್ಞಾನದ ಕಾರಣದಿಂದಾಗಿದ್ದರೆ, ಅಂಶತಃ ಬಡತನದ ರೇಖೆಯ ಕೆಳಗಿರುವ ಜನತೆಯನ್ನು ಮೇಲೆತ್ತುವ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸಿದ ಅಭಿವೃದ್ಧಿ ಇಲಾಖೆಗಳ ವಿಶ್ವಾಸದ ಸಂಬಂಧಗಳ ಕಾರಣದಿಂದಾಗಿ. ತಾತ್ವಿಕ ಸಂಶೋಧನೆಯನ್ನು (theoritical research) ಮತ್ತು ಧೋರಣೆ ರೂಪಿಸುವಲ್ಲಿನ ವ್ಯವಸ್ಥಿತ ತಾತ್ವಿಕ ದೃಷ್ಟಿಕೋನದ ಪಾತ್ರವನ್ನು ಯಾರೂ ನಿರಾಕರಿಸದಿದ್ದರೂ, ಇಂಥ ದೃಷ್ಟಿಕೋನವು ಅಭಿವೃದ್ಧಿಯ ಸಮಸ್ಯೆಗಳನ್ನು ಬಿಡಿಸುವ ಆಸಕ್ತಿಯಿಂದ ಹದ (ಪಕ್ವ) ಗೊಂಡಿರಬೇಕು. ಇದು ನೆರವೇರುವುದು ಸಾಧ್ಯವಾದರೆ, ಸಂಶೋಧನೆಯು ಸಮಾಜಕ್ಕೆ ಪ್ರಸ್ತುತವಾಗುತ್ತದೆ ಹಾಗೂ ಆ ಸಂಶೋಧನೆಯ ಪರಿಣಾಮಗಳನ್ನೂ ಬಳಸಬಹುದಾಗಿದೆ. ವಿವಿಧ ವಿಶ್ವವಿದ್ಯಾಲಯಗಳಲ್ಲಿ ಮತ್ತು ಸಂಸ್ಥೆಗಳಲ್ಲಿ ಸಂಶೋಧನೆಗಾಗಿ ಹಲವಾರು ಕೋಟಿ ರೂಪಾಯಿಗಳನ್ನು ವ್ಯಯಿಸಲಾಗುತ್ತಿದೆ. ಇದರಿಂದ ಹೊರಬರುವ ಸಂಶೋಧನೆಯ ಪರಿಣಾಮಗಳನ್ನು ಅಭಿವೃದ್ಧಿಯ ಉಚಿತ ಧೋರಣೆಗಳಲ್ಲಿ ಅಥವಾ ಕಾರ್ಯಕ್ರಮಗಳಲ್ಲಿ ಸೇರ್ಪಡಿಸಬೇಕಾದ ಧೋರಣಾ ನಿರೂಪಣೆ ವಲಯಗಳಲ್ಲಿ ಇವುಗಳ ಬಗ್ಗೆ ಕ್ವಚಿತ್ತಾಗಿ ಸಮಾಧಾನಕರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದನ್ನು ನಾವು ಕಾಣುತ್ತಿರುವುದು ಒಂದು ದೃಷ್ಟಿಯಿಂದ ದುರ್ದೈವದ ಸಂಗತಿಯಾಗಿದೆ. ಸಂಶೋಧಕರ ಹಾಗೂ ಅಧಿಕಾರಶಾಹಿವರ್ಗಗಳ ದೃಷ್ಟಿಯ ಗಡಸು (rigid) ನೀತಿಯಿಂದಾಗಿ ಉಂಟಾದ ಈ ಪರಿಸ್ಥಿತಿಗಾಗಿ ಅವರೀರ್ವರನ್ನೂ ದೂಷಿಸಬೇಕಾಗಿದೆ. "ಅಧಿಕಾರಿಶಾಹಿ ಸಂಸ್ಕೃತಿ" ಹಾಗೂ "ವಿಶ್ವವಿದ್ಯಾಲಯ ಸಂಸ್ಕೃತಿ" ಮಧ್ಯೆ ಒಂದು ಪ್ರಕಾರದ ಹೋರಾಟವಿದ್ದಂತೆ ತೋರುತ್ತದೆ. ಈ ಎರಡೂ ಸಂಸ್ಕೃತಿಗಳ ಮಧ್ಯೆ ಮಧುರ ಬಾಂಧವ್ಯವನ್ನುಂಟು ಮಾಡಿ, ಸಂಶೋಧಕ ಹಾಗೂ ಆಡಳಿತಧಿಕಾರಿಗಳ ಗುಣಗಳ ಅನಿವಾರ್ಯ ಅಂಶವಾದ "ಅಭಿವೃದ್ಧಿ ಸಂಸ್ಕೃತಿ"ಯನ್ನು ಅರಳಿಸುವದು ಅತಿ ಮಹತ್ವದ. ತೀವ್ರ ಆಗಬೇಕಾಗ ಕಾರ್ಯವೆಂದು ಒತ್ತಿ ಹೇಳುವ ಅಗತ್ಯವಿದೆ.

ಶಿಕ್ಷಣ ಮತ್ತು ಅಭಿವೃದ್ಧಿಗಳ ಮಧ್ಯೆ (ಸಮನ್ವಯ) ಜೋಡನೆಯನ್ನು

ಸಾಧಿಸಲು ಸಂಶೋಧಕರು ಯಾವ ಪ್ರಕಾರದ ಸಂಶೋಧನಾ ಸಮಸ್ಯೆಗಳನ್ನು ಕೈಗೆತ್ತಿ ಕೊಳ್ಳಬೇಕೆಂಬುದನ್ನು ತಿಳಿದುಕೊಳ್ಳುವ ಅಗತ್ಯತೆ ಇದೆ. ಈ ವಿಷಯವು ಅಭಿವೃದ್ಧಿ ಇಲಾಖೆಗಳು ಮತ್ತು ವಿಶ್ವವಿದ್ಯಾಲಯಗಳ ಇಲಾಖೆಗಳ ನಡುವಿನ ವಿಶ್ವಾಸದ ಸಂಬಂಧ ವನ್ನು ಬಹಳಷ್ಟು ಅವಲಂಬಿಸಿದೆ. ಅಲ್ಲೊಂದು ಇಲ್ಲೊಂದು ಏಕಾಕಿ ಉದಾಹರಣೆ ಗಳನ್ನು ಉಲ್ಲೇಖಿಸುವದರ ಬದಲು ಪ್ರಕಟವಾದ ಒಳ್ಳೆಯ ಪರಿಣಾಮಗಳ ವಿಶ್ವಾಸದ ಸಂಬಂಧವನ್ನು ಸಂಸ್ಥೀಕರಣಗೊಳಿಸುವುದರತ್ತ ನಾವು ಗುರಿಯನ್ನಿರಿಸಿಕೊಳ್ಳಬೇಕಾ ಗುವದು. ವಿಶ್ವವಿದ್ಯಾಲಯಗಳಲ್ಲಿ, ಸಂಶೋಧನಾ ಸಂಸ್ಥೆಗಳಲ್ಲಿ ಸಂಶೋಧನೆ ಕೈಕೊಳ್ಳುವುದಕ್ಕಾಗಿ ಸಂಗ್ರಹಿಸಬೇಕಾದ ಸಮಸ್ಯಾ ಕ್ಷೇತ್ರಗಳನ್ನು (ವಿಷಯ) ಅಭಿವೃದ್ಧಿ ಇಲಾಖೆಗಳು ಪಟ್ಟಿ ಮಾಡಬೇಕಾಗುವುದು. ಆದರಂತೆ ಸಂಶೋಧನೆಯ ಪರಿಣಾಮ ಗಳೂ ಬೇಗ ಲಭ್ಯವಾಗುವಂತಿರಬೇಕು. ಡಾಕ್ಟರೇಟ್ ಪ್ರಬಂಧದ ವಿಷಯದಲ್ಲಿ ಮಾತ್ರ ಪರಿಣಾಮವು 2-3 ವರ್ಷಗಳ ಕಾಲಾವಧಿಯ ತರುವಾಯ ಲಭ್ಯವಾಗುವದು ಸಹಜವಾಗಿದೆ. ಸಮಾಜದ ಸಮಸ್ಯೆಗಳ ನಿವಾರಣೆಗಾಗಿ ಉಪಯೋಗಿಸಬಹುದಾದ ದೀರ್ಘ ಕಾಲಾವಧಿಯ ಪರಿಣಾಮಗಳ ಕ್ಷೇತ್ರ ಇವಾಗಿವೆ. ಇನ್ನೂ ಕೆಲವು ಕ್ಷೇತ್ರಗಳಲ್ಲಿ ತ್ವರಿತ (ತಕ್ಷಣ) ಸರಿಪಡಿಸುವಿಕೆಯನ್ನು ಅನ್ವಯಿಸಬೇಕಾಗುವದು. ಈ ಕ್ಷೇತ್ರಗಳ ಅಧ್ಯಯನಗಳಿಗೆ ದೀರ್ಘಕಾಲಾವಧಿಯ ಅಗತ್ಯವಿರಲಾರದು. ಅವುಗಳನ್ನು 6 ರಿಂದ 12 ತಿಂಗಳು ಅಥವಾ ಅದಕ್ಕೂ ಕಡಿಮೆ ಅವಧಿಯಲ್ಲಿ ಪೂರ್ಣಗೊಳಿಸಬಹುದು. ವಿಶ್ವವಿದ್ಯಾಲಯಗಳಲ್ಲಿ ಅನುಸಂಧಾನ (ಶೋಧನೆ) ಕೈಕೊಳ್ಳಬೇಕಾದ ಸಮಸ್ಯೆಯ ಆಯ್ಕೆಯ ಬಗೆಗೆ ಸಂಶೋಧಕರಲ್ಲಿ ಸರ್ವಸಾಧಾರಣ (ಸಾಮಾನ್ಯ) ತಿಳುವಳಿಕೆಯಿರು ವದು ಅಗತ್ಯವಾಗಿದೆ. ಶುದ್ಧ ತಾತ್ವಿಕ ವಸ್ತು ಹಾಗೂ ವಿಶಾಲವಾದ ಸಾಮಾನ್ಯೀಕರಣ ಮತ್ತು ಸಮಸ್ಯೆಗಳನ್ನು ತ್ವರಿತ ನಿವಾರಿಸಬಹುದಾದ ಸಾಧ್ಯತೆಯ ಕ್ಷೇತ್ರಗಳ ಮಧ್ಯೆ ಸಮತೋಲನವನ್ನು ಕಾಯ್ದುಕೊಳ್ಳಬೇಕಾಗುವದು. ಈ ರೀತಿಯ ಸಮತೋಲನ ವನ್ನು ಕಾಯ್ದುಕೊಳ್ಳುವದು ಕಷ್ಟಕರವಾಗಲಾರದು. ಈ ಗುರಿಯನ್ನು ಸಾಧಿಸುವು ದಕ್ಕಾಗಿ ವಿಶ್ವವಿದ್ಯಾಲಯಗಳ ಸಂಶೋಧಕರಿಗೆ ಸಾಧ್ಯವಾಗುವಂತೆ ಅಭಿವೃದ್ಧಿ ಇಲಾಖೆ ಗಳು ಸಮಸ್ಯಾಕ್ಷೇತ್ರಗಳನ್ನು ಕಾಲಕಾಲಕ್ಕೆ ಅವರಿಗೆ ಸೂಚಿಸಬೇಕಾಗುವದು. ಅಭಿವೃದ್ಧಿಯ ಸಮಸ್ಯೆಗಳನ್ನು ಮತ್ತು ಸಂಶೋಧನೆಯ ಕ್ಷೇತ್ರಗಳನ್ನು ಕುರಿತು ನಿಯತ ಕಾಲದಲ್ಲಿ ವಿಚಾರ ಸಂಕಿರಣಗಳನ್ನು ಸರಕಾರದ ಪರವಾಗಿ ಏರ್ಪಡಿಸಿ, ವಿಶ್ವವಿದ್ಯಾಲಯದ ಸಂಶೋಧಕರು ಹಾಗೂ ಸರಕಾರದ ಆಡಳಿತಾಧಿಕಾರಿಗಳು ಅವುಗಳಲ್ಲಿ ಭಾಗವಹಿಸು ವಂತೆ ಮಾಡಬೇಕಾದುದು ಬಹುಶಃ ಈ ಗುರಿಯನ್ನು ಸಾಧಿಸಬಹುದಾದ ಒಂದು ಮಾರ್ಗವಾಗಿದೆ. ಖಾಸಗಿ ವಲಯದಲ್ಲಿಯ ಹಾಗೂ ವಿಶೇಷ ತಿಳುವಳಿಕೆಯುಳ್ಳ ಜನರನ್ನೂ ಇಂಥ ವಿಚಾರ ಸಂಕಿರಣಗಳಲ್ಲಿ ಭಾಗವಹಿಸುವಂತೆ ಆಮಂತ್ರಿಸುವದ ರಿಂದಲೂ ನಾವು ಪ್ರಯೋಜನ ಪಡೆಯಬಹುದಾಗಿದೆ. ಸಂಶೋಧನೆಗೆ ಎತ್ತಿಕೊಳ್ಳ

ಬೇಕಾದ ಸಮಸ್ಯೆಗಳನ್ನು ವಿಚಾರ ಸಂಕಿರಣಗಳಲ್ಲಿ ಗುರುತಿಸಬಹುದಾಗಿದೆ. ಹಾಗೂ ಇಂಥ ಸಮಸ್ಯೆಗಳನ್ನೊಳಗೊಳ್ಳುವ ಅಧ್ಯಯನಗಳಿಗೆ ಸರಕಾರ ಅಥವಾ ವಿಶ್ವವಿದ್ಯಾಲಯಗಳು ಹಣ ಒದಗಿಸಬಹುದಾಗಿದೆ.

೨. ಅಧಿಕಾರಿಗಳ ವಿನಿಮಯ :

ಶೈಕ್ಷಣಿಕ ಸಂಸ್ಥೆಗಳು ಹಾಗೂ ಸರಕಾರದ ಅಭಿವೃದ್ಧಿ ಇಲಾಖೆಗಳ ಮಧ್ಯೆ ಪರಿಣಾಮಕಾರಿ ಸಂಬಂಧವನ್ನು ಪ್ರಸ್ಥಾಪಿಸುವ ಒಂದು ಮಾರ್ಗವೆಂದರೆ ಆವೆರಡರಲ್ಲಿಯ ಅಧಿಕಾರಿಗಳ ವಿನಿಮಯಕ್ಕೆ ಅವಕಾಶ ಕಲ್ಪಿಸುವುದಾಗಿದೆ. ವಿಶ್ವವಿದ್ಯಾಲಯಗಳಲ್ಲಿ ಕಾರ್ಯ ಮಾಡುತ್ತಿರುವವರನ್ನು ಎರವಲು (Deputation) ಅಥವಾ ಕರಾರು (Contract) ಆಧಾರದ ಮೇಲೆ ಪಡೆಯುವದರ ಮೂಲಕ ಅಗತ್ಯವಾದ ಪ್ರಾವಿಣ್ಯತೆಯನ್ನು ಪಡೆಯುವದು ಸರಕಾರಕ್ಕೆ ಸಾಧ್ಯವಾಗಬಹುದಾಗಿದೆ. ಅದರಂತೆ ಹಿರಿಯ ಆಡಳಿತಾಧಿಕಾರಿಗಳ ಮನವನ್ನು ತಲ್ಲಣಗೊಳಿಸುತ್ತಿರುವ ಸಮಸ್ಯೆಗಳನ್ನು ಕೂಲಂಕುಷವಾಗಿ ಅಭ್ಯಸಿಸಲು ಅವರನ್ನು ಒಂದು ವರ್ಷ ಅಥವಾ ಅದಕ್ಕಿಂತ ಹೆಚ್ಚಿನ ಕಾಲಾವಧಿಗಾಗಿ ವಿಶ್ವವಿದ್ಯಾಲಯಗಳಿಗೆ ಕಳಿಸಬಹುದಾಗಿದೆ. ಇಂಥ ವಿನಿಮಯಗಳಿಂದ ಹಲವಾರು ಪ್ರಯೋಜನಗಳುಂಟು. ಇದರಿಂದ ಅಭಿವೃದ್ಧಿ ಕಾರ್ಯಕ್ರಮಗಳು ಹೇಗೆ ಜಾರಿಗೊಳಿಸಲ್ಪಡುತ್ತವೆ ಮತ್ತು ಸರಕಾರದಲ್ಲಿ ಹೇಗೆ ಧೋರಣೆಗಳನ್ನು ರೂಪಿಸಲಾಗುತ್ತದೆ ಎಂಬುದರ ಪರಿಜ್ಞಾನ ವಿಶ್ವವಿದ್ಯಾಲಯಗಳಲ್ಲಿದ್ದವರಿಗೆ ಆಗುವದು. ಇಲ್ಲದೆ ಹೋದರೆ ಅವರಿಗೆ ಅದನ್ನು ತಿಳಿಯಲು ಅವಕಾಶವೇ ದೊರೆಯುವುದಿಲ್ಲ. ವಿಶ್ವವಿದ್ಯಾಲಯಗಳಿಗೆ ಅವರು ಹಿಂದಿರುಗಿದಾಗ ತಮ್ಮ ಅಭ್ಯಾಸ ಕ್ರಮಗಳನ್ನು ರೂಪಿಸುವ ಹಾಗೂ ಸಂಶೋಧನಾ ಕ್ಷೇತ್ರಗಳ ಆಯ್ಕೆಯ ವಿಷಯಗಳಿಗೆ ವಾಸ್ತವ ಸ್ಪರ್ಶವನ್ನು ನೀಡುವಲ್ಲಿ ಅವರು ಅಧಿಕ ಸಮರ್ಥರಾಗುವರು. ಅದರಂತೆ ವಿಶೇಷವಾಗಿ ಹೆಚ್ಚಿನ ಪ್ರಾವೀಣ್ಯತೆ ಅಗತ್ಯವುಳ್ಳ ಸರಕಾರದಲ್ಲಿದ್ದವರು ತಜ್ಞರ ಸಲಹೆ ಪಡೆಯುತ್ತ ವಿಶ್ವವಿದ್ಯಾಲಯಗಳಲ್ಲಿ ಕೆಲವೊಂದು ಸಮಯ ಕಳೆಯುವುದರಿಂದ ಸಹ ತಮ್ಮ ಪ್ರಾವಿಣ್ಯತೆಯನ್ನು ಹಾಗೂ ಸಾಮರ್ಥ್ಯವನ್ನು ಸುಧಾರಿಸಿಕೊಳ್ಳಬಹುದಾಗಿದೆ, ಇಂಥ ವಿನಿಮಯ ಕಾರ್ಯಕ್ರಮವನ್ನು ಆಯ್ದುಕೊಳ್ಳುವವರಿಗೆ ಕೆಲವೊಂದು ಸೌಲಭ್ಯಗಳನ್ನು ಒದಗಿಸಿದಾಗ ಮಾತ್ರ ಈ ರೀತಿಯ ಅಧಿಕಾರಿಗಳ ವಿನಿಮಯ ಕಾರ್ಯಕ್ರಮವು ಸಾಧ್ಯವಾಗುವಂತೆ ತೋರುತ್ತದೆ. ಅವು ಅಧಿಕ ಖರ್ಚಿನ ತೊಡಕನ್ನುಂಟು ಮಾಡುವುದಿಲ್ಲ. ಅವು ಬಯಸುವ ಏನೆಲ್ಲ ಸೌಕರ್ಯಗಳೆಂದರೆ ಉಚಿತ ವಸತಿ ಸೌಕರ್ಯ ಮತ್ತು ಸಾಗಾಣಿಕೆಯ ಸೌಲಭ್ಯವನ್ನು ಮಾತ್ರ. ಇದು ಯಾವ ಸಂದರ್ಭದಲ್ಲಿಯೂ ವಿಶ್ವವಿದ್ಯಾಲಯ ಅಥವಾ ಸರಕಾರದ ಹಣಕಾಸಿನ ಮೇರೆಯನ್ನು ಮೀರುವಂಥದಾಗಿರುವುದಿಲ್ಲ. ಈ ವಿನಿಯಮಗಳ ಪರಿಣಾಮಗಳನ್ನು

ಖರ್ಚಿಗೆ ಒಳಗಾದ ಹಣದೊಂದಿಗೆ ಹೋಲಿಸಿದಲ್ಲಿ, ಆಕರಗಳ ಪೇಜಿನ ಪ್ರತಿಕಾರಕ್ಕಿಂತಲೂ ಅದು ಪ್ರಯೋಜನಕಾರಿಯೆನ್ನಬೇಕು.

ಇದರಲ್ಲಿ ಇನ್ನೂ ಒಂದು ಸಾಧ್ಯತೆಯುಂಟು. ಜಿಲ್ಲಾ ಯೋಜನೆ ಅಥವಾ ಕ್ಷೇತ್ರ ಯೋಜನೆಗಳನ್ನು ಸಿದ್ಧಪಡಿಸುವಾಗ ಸಂಶೋಧಕರನ್ನು (ವಿಶ್ವವಿದ್ಯಾಲಯ, ಕಾಲೇಜು ಅಧ್ಯಾಪಕರುಗಳನ್ನು ಈ ಯೋಜನೆಗಳ ಸಿದ್ಧಪಡಿಸುವಿಕೆಯಲ್ಲಿ ಸಮಾವೇಶಗೊಳಿಸುವದು ಸರಕಾರಕ್ಕೆ ಸಾಧ್ಯವಾಗಬೇಕು. ಕೆಲವೊಂದು ಹೊಸ ಪದ್ಧತಿಗಳನ್ನು ಆಚರಣೆಗೆ ತರುವುದಾಗಬೇಕು. ಕರ್ನಾಟಕದಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕ ರೀಡರುಗಳನ್ನು ಅಭಿವೃದ್ಧಿ ಇಲಾಖೆಗೆ ಪೂರ್ಣ ಒಂದು ವರ್ಷಾವಧಿಗೆ ಎರವಲು ಪಡೆದುದಾಗಿದೆ. ಅವರಿಗೆ ಸುಮಾರು ಮೂರು ತಿಂಗಳ ತರಬೇತಿಯನ್ನು ನೀಡಿದ ಮೇಲೆ ಅವರು ಸಿದ್ಧಪಡಿಸಿದ ದೂರದೃಷ್ಟಿಯ ಯೋಜನೆ (Perspective Plan) ಸಿದ್ಧಪಡಿಸಿದ್ದು, ಅವು ರಾಜ್ಯದ ವಿವಿಧ ಸ್ತರಗಳ ಯೋಜನೆಗಳನ್ನು ರೂಪಿಸುವಲ್ಲಿ ತುಂಬ ಉಪಯುಕ್ತವೆಂದು ಕಂಡುಬಂದಿದೆ. ಹೀಗೆ ಆಯ್ಕೆಯಾದ ರೀಡರ್ ಪ್ರಾಧ್ಯಾಪಕರುಗಳು ತರಬೇತಿಯ ಅಲ್ಪಾವಧಿಯನ್ನು ಹೊರತುಪಡಿಸಿ ತಮ್ಮ ವಾಸಸ್ಥಳದಿಂದ ಚಲಿಸಲು ಅವಶ್ಯಕವಾಗದಂತೆಯೂ ಪ್ರಯತ್ನಿಸಲಾಗಿದೆ. ಜಿಲ್ಲಾಕೇಂದ್ರ ಸ್ಥಳಗಳಲ್ಲಿ ಕೆಲಸ ಮಾಡುತ್ತಿರುವವರನ್ನು ಜಿಲ್ಲಾ ಆಡಳಿತ ಹಾಗೂ ಜಿಲ್ಲಾ ಯೋಜನೆಗಳೊಂದಿಗೆ ಸಂಯೋಜಿಸಿಕೊಳ್ಳಲಾಗಿದೆ. ವಿಶ್ವವಿದ್ಯಾಲಯ ಸಂಸ್ಥೆಗಳಲ್ಲಿ ಅವರು ಪಡೆಯುತ್ತಿದ್ದುದಕ್ಕಿಂತಲೂ ಹೆಚ್ಚಿನ ವಿಶೇಷ ಭತ್ತೆಯನ್ನು ಅವರಿಗೆ ಕೊಡಲಾಗುವದು. ಸರಕಾರದ ಅಗತ್ಯತೆಗಳು ಎಷ್ಟರ ಮಟ್ಟಿಗೆ ಸಮರ್ಪಕವಾಗಿ ಹಾಗೂ ಸಮಂಜಸವಾಗಿ ವಿಶ್ವವಿದ್ಯಾಲಯದ ಅಧಿಕಾರಿಗಳ ಮುಂದೆ ಮಂಡಿಸಲ್ಪಡುವವು ಹಾಗೂ ಅಪೇಕ್ಷಿತ ಹೊಂದಾಣಿಕೆ ಮತ್ತು ತಾಂತ್ರಿಕ ಜ್ಞಾನಗಳ ಪ್ರದರ್ಶನದ ಬಗೆಗೆ ಇವರು ತೋರುವ ಪ್ರತಿಕ್ರಿಯೆಯ ಮೇಲೆ ಇಂಥ ಹೊಸ ಪ್ರಯೋಗದ ಯಶಸ್ಸು ಅವಲಂಬಿಸಿದೆ.

೩. ಯೋಜನೆ ಮತ್ತು ಅಭಿವದ್ಧಿಗಳ ಅಗತ್ಯತೆಗಳನ್ನು ಆಕರ್ಷಕಗೊಳಿಸುವದು :

ಯೋಜನಾ ಇಲಾಖೆಗಳು ಯೋಜನೆ ಮತ್ತು ಅಭಿವೃದ್ಧಿಗಳ ಅಗತ್ಯಗಳನ್ನು ವಿವರವಾಗಿ ತಿಳಿಸುವುದರ ಅಗತ್ಯವಿದೆ. ಉದಾಹರಣೆಗಾಗಿ ಸಮಗ್ರ ಗ್ರಾಮೀಣ ಅಭಿವೃದ್ಧಿ ಮತ್ತು ಸಂಪೂರ್ಣ ಉದ್ಯೋಗಾವಕಾಶವನ್ನು ಒದಗಿಸುವ ಕ್ಷೇತ್ರ ಯೋಜನೆಯ ಕುರಿತು ಇದೀಗ ನಾವು ಮಾತನಾಡುತ್ತಿದ್ದೇವೆ. ಸಮಗ್ರ ಗ್ರಾಮೀಣ ಅಭಿವೃದ್ಧಿಯ ಕ್ಷೇತ್ರ ಯೋಜನೆ (Block Plan) ಸಿದ್ಧಪಡಿಸುವಾಗ ವಾಸ್ತವವಾಗಿ ಏನನ್ನು ಮಾಡಬೇಕೆಂಬುದನ್ನು ಸ್ಪಷ್ಟವಾಗಿ ಸೂಚಿಸಬೇಕಾಗುತ್ತದೆ ದುರ್ದೈವದಿಂದ,

ವಿಶ್ವವಿದ್ಯಾಲಯಗಳ ಸಂಶೋಧಕರು, ಪಂಡಿತರು ಕ್ಷೇತ್ರಸಮಸ್ಯೆಗಳನ್ನು ಹಾಗು ಕಾರ್ಯಕ್ರಮ ರೂಪಿಸುವ ಅಥವಾ ಅದನ್ನು ಜಾರಿಗೊಳಿಸುವ ವಿಭಾಗಾಂತರ್ಗ ಪರಸ್ಪರ ಸಂಬಂಧಗಳನ್ನು ಪೂರ್ಣ ತಿಳಿದವರಾಗಿರುವುದಿಲ್ಲ. ಈ ಸಮಸ್ಯೆಯು ಕೇವ ಮೂಲಭೂತ ಅಂಕಿ ಅಂಶಗಳನ್ನು ಸಂಗ್ರಹಿಸುವ ಪರಿವೀಕ್ಷಣೆಯನ್ನು ಕೈಕೊಳ್ಳು ದನ್ನಷ್ಟೇ ಒಳಗೊಂಡಿರುವದಿಲ್ಲ. ಅದು ಜನಸಂಖ್ಯೆಯ ಜೀವನಾಧಾರದ ಉತ್ಪಾದಕ ಯನ್ನು ಹೆಚ್ಚಿಸುವ ರೀತಿಯನ್ನೂ ಸುತ್ತುವರಿಯುತ್ತದೆ. ಹಾಗೂ ಸಾಮಾಜಿ ನ್ಯಾಯದೊಂದಿಗೆ ಅಭಿವೃದ್ಧಿಯ ಧೋರಣೆಯನ್ನು ವಿಕಸಿತಗೊಳಿಸುವುದಾಗಿರುತ್ತದೆ.

ಅಭಿವೃದ್ಧಿ ಇಲಾಖೆಗಳಿಂದ ಧನಸಹಾಯವನ್ನೂ ನೀಡಲಾಗುತ್ತಿದೆ. ಕ್ಷೇತ್ರ ಯೋಜನೆಗಳನ್ನು ಸಿದ್ಧಪಡಿಸುವಾಗ ಮತ್ತು ಸಾಂಸ್ಥಿಕ ಹಣಕಾಸನ್ನು ಹೊರತೆಗೆಯು ವಲ್ಲಿ ಈ ಧನಸಹಾಯವನ್ನು ಹೇಗೆ ಸಾರ್ಥಕವಾಗಿ ಬಳಸಿಕೊಳ್ಳಬಹುದೆಂಬುದನ್ ಅವರಿಗೆ ವಿವರಿಸುವದು ಅಗತ್ಯ. ವೈಜ್ಞಾನಿಕ ಮತ್ತು ತಾಂತ್ರಿಕ ಪರಿಹಾರಗ ಅವಶ್ಯಕತೆಯಿರುವ ವಿಶಿಷ್ಟ ಸಮಸ್ಯೆಗಳನ್ನು ಪಟ್ಟಿ ಮಾಡತಕ್ಕದ್ದು. ಅವು ಕೃಷಿ ಅಥವ ಪಶು ಸಂಗೋಪನೆ ಅಥವಾ ಚಿಕ್ಕ ಕೈಗಾರಿಕೆಗಳಿಗೆ ಸಂಬಂಧಿಸಿದವುಗಳಾಗಿರಬಹುದು.

ಪುನಃ ಯೋಜನೆಯನ್ನು ಜಾರಿಗೊಳಿಸುವಾಗ ಇತ್ತೀಚಿನ ತಂತ್ರ ಕೌಶಲ್ಯವನ್ನೂ ಬಳಸಬಹುದಾಗಿದೆ. ಉದಾಹರಣೆಗಾಗಿ, ಯೋಜನೆಯನ್ನು ಜಾರಿಗೊಳಿಸುವ ಹಾಗೂ ಅದರ ಪ್ರಗತಿಯನ್ನು ಪರಿಶೀಲಿಸುವ ಎರಡೂ ಸಂದರ್ಭಗಳಲ್ಲಿ PERT (Programme Education Review Technique) ವನ್ನು ಬಳಸ ಬಹುದಾಗಿದೆ. PERT ವನ್ನು ಬಳಸಬಹುದೆಂದು ಗ್ರಹಿಸಿದ ವಿಶಿಷ್ಟ ಯೋಜನ ಗಳು ಅವರಿಗೆ ಅರ್ಥವಾಗುವಂತೆ ನೋಡಿಕೊಳ್ಳಬೇಕು. PERT ವನ್ನು ಸಿದ್ಧಪಡಿ ಸಿದವರೂ ಸಹ ಕಾರ್ಯಪದ್ಧತಿಯನ್ನು ಜಾರಿಗೊಳಿಸುವುದರಲ್ಲಿ ಸಹಭಾಗಿಯಾಗುವಂತೆ ಮಾಡಬೇಕು.

ಯೋಜನೆಗೆ ಅಗತ್ಯವಾದ ಕೆಲವೊಂದು ವಿವರವಾದ ತಾಂತ್ರಿಕ ಅಭ್ಯಾಸವನ್ನು ಲಾಭದಾಯಕವಾಗುವಂತೆ ವಿಶ್ವವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆಗಳಿಗೆ ವಹಿಸಿಕೊಡಬಹುದಾಗಿದೆ. ಯಾವ ಕ್ಷೇತ್ರದಲ್ಲಿ ಇಂಥ ಅಧ್ಯಯನವನ್ನು ಕೈಕೊಳ್ಳು ವುದು ಸಾಧ್ಯವೋ ಅವನ್ನು ಸರಕಾರದ ಇಲಾಖೆಗಳು ಗುರುತಿಸಬೇಕಾಗುತ್ತದೆ. ಬಹುಶಃ ಈ ಮುಂಚೆ ಸೂಚಿಸಿದ ವಿಚಾರ ಸಂಕಿರಣಗಳು, ಈ ಹೆಚ್ಚಿನ ಅಗತ್ಯತೆಗಳನ್ನು ತಿಳಿದುಕೊಳ್ಳುವ ಅವಕಾಶವನ್ನು ಒದಗಿಸಿಕೊಡಬಹುದಾಗಿದೆ.

೪. ಪಠ್ಯಕ್ರಮ :

ಅಭಿವೃದ್ಧಿ ಪ್ರಯತ್ನಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವಿಧ ಪದವಿ ಮಟ್ಟದ ಪಠ್ಯಕ್ರಮದಲ್ಲಿ ಅಳವಡಿಸುವದು ಸಾಧ್ಯವಾಗಬೇಕು. ವಿಜ್ಞಾನ ಮತ್ತು

ತಾಂತ್ರಿಕ ಜ್ಞಾನಗಳ ನೆರವಿನ ಅಗತ್ಯವುಳ್ಳ, ತಾವು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ದೃಷ್ಟಿಕೋನವು ಉಪಯುಕ್ತವಾಗಬಹುದು. ಸದ್ಯದ ಮೂಲಭೂತವಾದ ಘಟಕಗಳೊಂದಿಗೆ ಅವೂ ಸಹ ಪಠ್ಯಕ್ರಮದ ಭಾಗವಾಗಬೇಕು. ಸಾಮಾಜಿಕ-ಆರ್ಥಿಕಾಭಿವೃದ್ಧಿಯ ಕಾರ್ಯಕ್ರಮದಿಂದಾಗಿ ಬಹುಶಃ ಸಾಮಾಜಿಕ ವಿಜ್ಞಾನಗಳ ವಿಭಾಗಗಳಲ್ಲಿ ಸಾಕಷ್ಟು ಅವಕಾಶವುಂಟು. ಗುರಿ ತಲುಪಬೇಕಾದ ಉದ್ದೇಶಿತ ಗುಂಪುಗಳ ಸಮಸ್ಯೆಗಳನ್ನು ಬಿಡಿಸಲು ಸಮಾವೇಶಗೊಳಿಸಬೇಕಾದ ಮಾದರಿಗಳನ್ನು ಹಾಗೂ ಈ ಧೋರಣೆಗಳು ಅನೇಕ ಕವಲಾಗುವುದನ್ನು ವಿವಿಧ ಅಧ್ಯಯನದ ಶಿಸ್ತುಗಳಿಗೆ ಒಳಪಡಿಸಬಹುದು. ಬಡತನದ ಮೂಲಭೂತ ಸಮಸ್ಯೆಗಳನ್ನು ಹಾಗೂ ಅಭಿವೃದ್ಧಿ ಯೋಜನೆ ಎದುರಿಸಬೇಕಾದ ಆಹ್ವಾನಗಳನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳಲು ಸಾಧ್ಯವಾಗಬೇಕು. ವರ್ತಮಾನದಲ್ಲಿ, ಸಮಾಜದಲ್ಲಿ ಏನು ಜರುಗುತ್ತಿದೆ ಎಂಬುದರ ಗಾಢವಾದ ಅಜ್ಞಾನ ಮತ್ತು ಉಪೇಕ್ಷೆ (ತಾತ್ಸಾರ) ಇದೆ ಎಂದು ಹೇಳುವದು ಅತಿಶಯೋಕ್ತಿಯು ಮಾತಲ್ಲ. ವಿದ್ಯಾರ್ಥಿ ಸಮುದಾಯ ಮತ್ತು ವಿದ್ಯಾವ್ಯಾಸಂಗ ಶಾಖೆಯನ್ನು ಜೀವಂತ ಸಮಸ್ಯೆಗಳತ್ತ ಚುರುಕುಗೊಳಿಸುವ ಒಂದು ಮಾರ್ಗವೆಂದರೆ ಎಲ್ಲ ವಿಷಯುಗಳನ್ನು ಅಭ್ಯಾಸಕ್ರಮದಲ್ಲಿ ಅಭಿವೃದ್ಧಿ ವಿಷಯುವನ್ನು ಸೇರಿಸುವುದಾಗಿದೆ. ಇಲ್ಲಿ ಮತ್ತೆ, ಈ ಮುಂಚೆ ಸೂಚಿಸಿದಂತೆ, ಆಗಾಗ ವಿಶ್ವವಿದ್ಯಾಲಯುಗಳ ಪ್ರಾಧ್ಯಾಪಕರನ್ನು ಮತ್ತು ಆಡಳಿತಾಧಿಕಾರಿಗಳನ್ನು ಸೇರಿಸಿ ವಿಚಾರ ಸಂಕಿರಣಗಳನ್ನು ಏರ್ಪಡಿಸಬೇಕು. ಆಗ ಅಭಿವೃದ್ಧಿಯನ್ನು ದೃಷ್ಟಿಯಲ್ಲಿರಿಸಿಕೊಂಡು ಪಠ್ಯಕ್ರಮದಲ್ಲಿ ಯಾವ ಮಾರ್ಪಾಡುಗಳನ್ನು ಮಾಡುವುದು ಉಚಿತವಾದೀತೆಂಬುದು ತಿಳಿಯುವದು.

ಕಾರ್ಯಕ್ರಮ ರೂಪಿಸಲು ಮತ್ತು ಜಾರಿಗೊಳಿಸಲು ಅಗತ್ಯವಾದ ಕೌಶಲ್ಯವನ್ನು ಒದಗಿಸಲು ಪಠ್ಯಕ್ರಮವು ಮಾರ್ಪಾಡಾಗಬೇಕಾಗುವದು. ಉದಾ: ಹಳ್ಳಿಗಳ ಸಮೂಹವನ್ನು ದೃಷ್ಟಿಯಲ್ಲಿರಿಸಿಕೊಂಡು ಕ್ಷೇತ್ರಯೋಜನೆಯನ್ನು ಸಿದ್ಧಪಡಿಸುವುದಾದರೆ, ಅರ್ಥಶಾಸ್ತ್ರ, ಸಮಾಜಶಾಸ್ತ್ರ ಹಾಗೂ ವಿಜ್ಞಾನ ವಿಷಯಗಳ ಅಧ್ಯಯನ ಕೈಕೊಂಡವರೂ ಸಹ ಆ ಕ್ಷೇತ್ರಯೋಜನೆಯ ತಾಂತ್ರಿಕಜ್ಞಾನ ಹಾಗೂ ಕ್ಷೇತ್ರ ದೃಷ್ಟಿಯೊಂದಿಗೆ ಪರಿಚಿತರಾಗಿರಬೇಕು. ಸಾಂಸ್ಥಿಕ ವ್ಯವಸ್ಥೆ (ರಚನೆ) ಹಾಗೂ ಹಣ ಒದಗಿಸುವ ಪದ್ಧತಿಗಳೂ ಅವರಿಗೆ ತಿಳಿಯುವಂತೆ ಮಾಡಬೇಕು. ವಿಜ್ಞಾನ ಮತ್ತು ತಾಂತ್ರಿಕಜ್ಞಾನವು ಬಡಜನರ ಸಮಸ್ಯೆಗಳನ್ನು ಪರಿಹರಿಸಲು ಎಷ್ಟರಮಟ್ಟಿಗೆ ಕಾಣಿಕೆ ಸಲ್ಲಿಸುವವೆಂಬುದು ವಿಶೇಷವಾಗಿ ಕಾರ್ಯಕ್ರಮಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಯೋಜನೆಯನ್ನು ರೂಪಿಸುವಲ್ಲಿ ಅವರು ಸಲ್ಲಿಸಬಹುದಾದ ಕಾಣಿಕೆಯು ಅವಕಾಶವನ್ನು ಅವಲಂಬಿಸಿದೆ. ದೇಶದಲ್ಲಿ ಅಭಿವೃದ್ಧಿಯ ಮುಂದುವರಿಕೆ ಹೇಗೆ, ಎತ್ತಸಾಗಿದೆ ಮತ್ತು ಯೋಜನೆಯ ಗುರಿಗಳನ್ನು ತಲುಪುವಲ್ಲಿ ಎದುರಾಗುತ್ತಿರುವ ಸಮಸ್ಯೆಗಳೇನು ಎಂಬುದನ್ನು ವಿಶ್ವವಿದ್ಯಾಲಯದ ವಿದ್ಯಾವ್ಯಾಸಂಗ ಶಾಖೆಯ ಪ್ರಾಧ್ಯಾಪಕರು ಹಾಗೂ ವಿಶೇಷ

ಪ್ರಾವೀಣ್ಯತೆಯ ಕ್ಷೇತ್ರ ಯಾವದೇ ಆಗಿದ್ದ ವಿದ್ಯಾರ್ಥಿಗಳು, ಎಲ್ಲರೂ ತಿಳಿದಿರಬೇಕು. ಯೋಜನೆಯ ಗುರಿಸಾಧನೆಯಲ್ಲಿ ತೊಡಗಿದ ಗುಂಪು ಅಥವಾ ಕೈಗಾರಿಕೆಗಳು ಎದುರಿಸುತ್ತಿರುವ ತಾಂತ್ರಿಕ ಸಮಸ್ಯೆ ಅಥವಾ ಒಕ್ಕಲಿಗರು, ಅಥವಾ ಸರಕುಸಾಗಾಣಿಕೆದಾರರು ಮೊದಲಾದವರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಿಡಿಸುವಲ್ಲಿ, ವಿಶ್ವವಿದ್ಯಾಲಯಗಳಲ್ಲಿ ಮತ್ತು ಸಂಶೋಧನ ಸಂಸ್ಥೆಗಳಲ್ಲಿ ಕೈಕೊಂಡ ಸಂಶೋಧನೆಗಳನ್ನು ಎಷ್ಟರ ಮಟ್ಟಿಗೆ ಲಾಭದಾಯಕವಾಗಿ ಬಳಸಬಹುದೆಂಬುದನ್ನು ತಿಳಿದುಕೊಳ್ಳಲು ಸರಕಾರದಲ್ಲಿದವರಿಗೂ ಅವಕಾಶಗಳಿರಬೇಕು.

೫. ಉಚಿತ ಅಭ್ಯಾಸಕ್ರಮದ (ಕೋರ್ಸ್) ಮೂಲಕ ಸ್ವಂತವೃತ್ತಿಗೆ (Self-employment) ಪ್ರೋತ್ಸಾಹ ನೀಡುವದು :

ಸ್ವಂತ-ವೃತ್ತಿಯನ್ನು ಕೈಗೊಳ್ಳುವ ಆತ್ಮವಿಶ್ವಾಸವಿಲ್ಲದ ವಿವಿಧ ವಿಷಯಗಳ ಪದವೀಧರರನ್ನು ವಿಶ್ವವಿದ್ಯಾಲಯಗಳು ಉತ್ಪಾದಿಸುತ್ತಿರುವುದನ್ನು ಕಾಣುತ್ತೇವೆ. ವೈದ್ಯರು, ಇಂಜಿನೀಯರುಗಳಂತಹ ವೃತ್ತಿಪರ ಪದವಿಗಳಲ್ಲಿಯೂ ಹಾಗೆಯೇ ಆಗಿರುವದು ತುಂಬ ಆಶ್ಚರ್ಯಕರವಾಗಿದೆ. ಇಂಜನೀಯರಿಂಗ ಪದವೀಧರರು ಆ ವಿಷಯದ ಕೌಶಲ್ಯವನ್ನು ತಿಳಿದಿದ್ದರೂ, ಸ್ವಂತವೃತ್ತಿಯನ್ನು ಕೈಕೊಳ್ಳಲು ಬೇಕಾದ ಉತ್ಸಾಹ ಮೂಲ ವಿವೇಕವನ್ನು ಗ್ರಹಿಸುವಲ್ಲಿ ಅಸಮರ್ಥರಾಗಿದ್ದಾರೆ. ಅಗತ್ಯವಾದ ನೆರವು ಪಡೆಯಲು ಸಂಧಿಸಬೇಕಾದ ವಿವಿಧ ಏಜೆನ್ಸಿಗಳ ಬಗ್ಗೆ ಅವರಿಗೆ ಅಂಶತಃವಾದರೂ ಅರಿವು ಇರಬೇಕು. ಭಾಗಶಃ ಯೋಜನೆಯ ಜೀವನ ಸಾಮರ್ಥ್ಯದ ಮೌಲ್ಯಮಾಪನವನ್ನು ಹೇಗೆ ಮಾಡಬೇಕೆಂಬುದನ್ನು ಅವರು ತಿಳಿದಿರಲೇಬೇಕು. ಇದು, ಒಂದು ರೀತಿಯ ತರಬೇತಿಯಿಂದ ಬರಲು ಸಾಧ್ಯತೆಯಿದೆ. ವೈದ್ಯರ ವಿಷಯದಲ್ಲಿ, ಖಾಸಗಿ ಸೇವೆಗೆ ಲಾಭಕರವಾದ ಕ್ಷೇತ್ರಗಳನ್ನು ತಿಳಿಯುವಂತೆ ಮಾಡಬೇಕು. ಆದರೂ, ಅವರಿಗೆ ಅಗತ್ಯವಾದ ವಸತಿ ಮತ್ತು ವೃತ್ತಿಯನ್ನು ಆರಂಭಿಸಲು ಬೇಕಾದ ಮೂಲಹಣ ಮೊದಲಾದ ಸೌಕರ್ಯಗಳನ್ನು ನೀಡುವ ಮೂಲಕ ಅವರು ಸ್ವಂತವೃತ್ತಿಯನ್ನು ಆಯ್ದುಕೊಳ್ಳಲು ಪ್ರೋತ್ಸಾಹಿಸಬಹುದು.

ಅಧಿಕ ಸಂಖ್ಯೆಯಲ್ಲಿರುವ ಸಾಮಾನ್ಯ ಪದವೀಧರರ ವಿಷಯದಲ್ಲಿ, ಅವರು ಸ್ವಂತ ವೃತ್ತಿಯನ್ನು ಸ್ವೀಕರಿಸಬೇಕಾದರೆ, ಅವರಿಗೆ 3 ರಿಂದ 6 ತಿಂಗಳ ತರಬೇತಿ ಕಾರ್ಯಕ್ರಮ ಅಗತ್ಯವೆಂದು ಕಂಡು ಬಂದಿದೆ.

ಈ ಪದವೀಧರರು ಸ್ವಂತ ವೃತ್ತಿಯನ್ನು ಸ್ವೀಕರಿಸಲು ಸಮರ್ಥರಾಗುವಂತೆ ಮಾಡಲು ಪ್ರಯತ್ನ ಪೂರ್ವಕ ನೀಡುವ ತರಬೇತಿಯ ಹೊರತು ನಿರುದ್ಯೋಗ ಸಮಸ್ಯೆಯನ್ನು ಬಿಡಿಸುವದು ಅಸಾಧ್ಯವಾಗುತ್ತದೆ. ಬಡ್ಡಿ ಹಣದಲ್ಲಿ ಧನಸಹಾಯ (Subsidy), ಅಥವಾ ಮಾರಾಟಕರದಲ್ಲಿ ರಿಯಾಯಿತಿ ಅಥವಾ ಸೀಮಿತ ಹಣ

(margin money) ಮುಂತಾದವದರಿಂದ ಸಾಕಷ್ಟು ಪ್ರಯೋಜನವಾಗುವುದಿಲ್ಲ. ಉಚಿತ ಪ್ರಮಾಣದ ನಿಗದಿತ ಉತ್ಪನ್ನವನ್ನು ತಂದು ಕೊಡಬಹುದಾದ ಚೈತನ್ಯಶೀಲ ಯೋಜನೆಯನ್ನು ಕಾರ್ಯರೂಪಕ್ಕೆ ತರುವ ಆತ್ಮವಿಶ್ವಾಸವನ್ನು ಬೆಳಸಿಕೊಳ್ಳಲು ಪದವೀಧರರು ಸಮರ್ಥರಾಗಬೇಕು. ಸ್ವಂತವೃತ್ತಿಯನ್ನು ಆಯ್ದುಕೊಳ್ಳಲು ಬೇಕಾಗುವ ಅಗತ್ಯವಾದ ಮೂಲಭೂತ ಘಟಕಗಳನ್ನು ವಿದ್ಯಾಭ್ಯಾಸದ ವ್ಯವಸ್ಥೆಯಲ್ಲಿ ಸೇರಿಸಲು ಸರಕಾರ ಹಾಗೂ ವಿಶ್ವವಿದ್ಯಾಲಯಗಳೆರಡೂ ವಿಶೇಷ ಪ್ರಯತ್ನಗಳನ್ನು ಮಾಡುವುದಗತ್ಯ. ಅನೇಕ ಹೊಸ ಆಕರ್ಷಕ ಕ್ಷೇತ್ರಗಳೂ ಇದೀಗ ಮುಂದೆ ಬಂದಿವೆ. ಅವುಗಳಲ್ಲಿ ರೇಷ್ಮೆ ವ್ಯವಸಾಯ, ಹೈನುಗಾರಿಕೆ, ಆಹಾರ ಪದಾರ್ಥ ಸಿದ್ಧಪಡಿಸುವ ಉದ್ದಿಮೆ ಕೃಷಿ ಸೇವಾ ಕೆಂದ್ರಗಳು, ಗ್ರಾಮೀಣ ಪ್ರದೇಶದ ಚಿಕ್ಕ ಕೈಗಾರಿಕೆಗಳು ಮತ್ತು ವಿತರಣ ವ್ಯವಸ್ಥೆಗಳು ಸೇರ್ಪಡೆಯಾಗುತ್ತವೆ. ಸಾರ್ವಜನಿಕ ಕಾಮಗಿರಿಯ ಕಾರ್ಯ ನಿರ್ವಹಣೆಯನ್ನು ಗುತ್ತಿಗೆ ಹಿಡಿಯುವ ಅಥವಾ ಅವಶ್ಯಕ ವಸ್ತುಗಳನ್ನೊಳಗೊಂಡ ಸಿದ್ಧ ವಸ್ತುಗಳ ವಿತರಣೆಯಂಥ ಸ್ವಂತ ವೃತ್ತಿಯನ್ನು ಸ್ವೀಕರಿಸಲು ಸಿದ್ಧವಾಗಲು ಅವಕಾಶಗಳುಂಟು.

೬. ಮಾನವಶಕ್ತಿ ಯೋಜನೆಯ ಅಭಿವೃದ್ಧಿಗೆ ಮಾರ್ಗದರ್ಶಕ ಸೂತ್ರಗಳು :

ದೇಶದಲ್ಲಿ ಬೆಳೆಯುತ್ತಿರುವ ನಿರುದ್ಯೋಗದ ಬಗ್ಗೆ ಸಾಕಷ್ಟು ಮಾತನಾಡುತ್ತಿರವಾಗಲೂ, ಮಾನವಶಕ್ತಿಯ ಯೋಜನೆಯ ಬಗ್ಗೆ ಯಾವುದೇ ಸಂಶೋಧನ ಸಂಸ್ಥೆ ಅಥವಾ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಿಗೆ ಆ ಕುರಿತು ತರಬೇತಿ ನೀಡುವ ಗಂಭೀರವಾದ ಪ್ರಯತ್ನವನ್ನು ಕೈಗೊಳ್ಳದಿರುವುದು ಕಂಡುಬರುತ್ತದೆ. ಈ ಕೊರತೆಯನ್ನು ತುಂಬಲು ಸರಕಾರವು ಈ ಪೂರ್ವದಲ್ಲಿಯೇ ಗೃಹ-ಸಚಿವಾಲಯದ ಆಶ್ರಯದಲ್ಲಿ ಮಾನವಶಕ್ತಿಯ ಸಂಶೋಧನೆಯ ಅನ್ವಯಿಕ ಸಂಸ್ಥೆಯನ್ನು ಸ್ಥಾಪಿಸಬೇಕಾಯಿತು ಇಂಥ ಸಂಸ್ಥೆಯನ್ನು ಸ್ಥಾಪಿಸುವುದರ ಅರ್ಹತೆ ಏನೇ ಆಗಿದ್ದರೂ, ನಮ್ಮ ದೇಶದ ಶಿಕ್ಷಣ ವ್ಯವಸ್ಥೆಯ ಲೋಪವಾದ ಭಾಗವನ್ನು ಅದು ನಿರ್ದೇಶಿಸುತ್ತದೆ. ಉದ್ಯೋಗಾವಕಾಶಗಳ ಕ್ಷೇತ್ರದಲ್ಲಿ ಸಂಶೋಧನೆ ಕೈಕೊಳ್ಳಬಹುದಾದ ಅರ್ಥಶಾಸ್ತ್ರ. ಅರ್ಥಮಾಪನಶಾಸ್ತ್ರ (Eccnometries) ಗಣಿತಶಾಸ್ತ್ರ, ಸಂಖ್ಯಾಶಾಸ್ತ್ರದಂತಹ ವಿಭಾಗಗಳುಳ್ಳ 120ಕ್ಕಿಂತ ಹೆಚ್ಚು ವಿಶ್ವವಿದ್ಯಾಲಯಗಳಿದ್ದರೂ, ಯಾವುದೇ ವಿಶ್ವವಿದ್ಯಾಲಯದ ವಿಭಾಗವು ಮಾನವಶಕ್ತಿಯ ಅಂದಾಜು ಕುರಿತು ಮಾರ್ಗದರ್ಶನ ನೀಯಲು ಮುಂದೆ ಬಂದಂತಿಲ್ಲ. ಬಹುಶಃ ಇದಕ್ಕೆ ಅಂತರ-ವಿಭಾಗೀಯ ಆಸಕ್ತಿಯ ದೃಷ್ಟಿಕೋನದ ಅಗತ್ಯವಿದೆ, ಹಾಗೂ ಇಂಥ ಮಾನವಶಕ್ತಿ ಯೋಜನೆಯ ಕ್ಷೇತ್ರದಲ್ಲಿ ವಿಶ್ವವಿದ್ಯಾಲಯಗಳಲ್ಲಿ ಅಂತರವಿಭಾಗಿಯ ಆಸಕ್ತಿಯ ಕಾರ್ಯವನ್ನು ಸಂಘಟನೆಗೊಳಿಸಲು ವಿಶ್ವವಿದ್ಯಾಲಯಗಳಿಗೆ ಆಡಳಿತಾಧಿಕಾರಕ್ಕೆ ಸಾಧ್ಯವಾಗಬಹುದು.

ಈ ಪ್ರಶ್ನೆ ವಿವಿಧ ಅಭಿವೃದ್ಧಿ ಯೋಜನೆಗಳಲ್ಲಿ ಉದ್ಯೋಗಾವಕಾಶದ ಪ್ರಮಾಣವನ್ನು ಕೇವಲ ಅಂದಾಜು (ಲೆಕ್ಕಾಚಾರ) ಮಾಡುವುದಷ್ಟೇ ಆಗಿರುವದಿಲ್ಲ. ಪ್ರತಿಯೊಂದು ಕ್ಷೇತ್ರ ಅಥವಾ ಹಳ್ಳಿಗಳ ಸಮೂಹಗಳಿಗಾಗಿ ಮಾನವಶಕ್ತಿಯ ಲೆಕ್ಕ ಮಾಡುವದನ್ನು ಅವರು ಎತ್ತಿಕೊಳ್ಳಬಹುದು. ಅವುಗಳ ಕೊಡುಗೆ ತಾಂತ್ರಿಕ ಮತ್ತು ಆರ್ಥಿಕ ದೃಷ್ಟಿಯನ್ನೊಳಗೊಂಡ ಪೂರ್ಣಪ್ರಮಾಣದ ಕಾರ್ಯಕ್ರಮಗಳ ಅಭಿವೃದ್ಧಿಗೆ ತಡೆಯನ್ನುಂಟುಮಾಡಬಾರದು. ಮೂವತ್ತು ವರ್ಷಗಳ ಯೋಜನೆಯ ತರುವಾಯವೂ ರಾಷ್ಟ್ರೀಯ ಯೋಜನೆಯ ವರದಿಗಳಲ್ಲಿ ಉದ್ಯೋಗಾವಕಾಶಕ್ಕೆ ಪ್ರಾಶಸ್ತ್ಯ ದೊರೆಯುವುದಿಲ್ಲವೆಂದು ಹೇಳುವುದು ಅತಿಶಯೋಕ್ತಿಯ ಮಾತಲ್ಲ. ಉದ್ಯೋಗದ ವಿವರವಾದ ಪೃಥಕ್ಕರಣೆಯ ಪರಿಣಾಮಗಳನ್ನು ಅಥವಾ ಆ ಯೋಜನೆಗಳಿಗೆ ಉದ್ಯೋಗಾವಕಾಶ ಮೂಲವಾದ ದೃಷ್ಟಿಕೋನವನ್ನು ನೀಡುವುದನ್ನು ನಾವು ರಾಜ್ಯದ ಯೋಜನೆಗಳಲ್ಲಿ ಅಪರೂಪವಾಗಿ ಕಾಣುತ್ತೇವೆ. ಇದಕ್ಕೆ ಅಪವಾದಗಳೇನಾದರೂ ಇದ್ದರೆ, ಅವುಗಳನ್ನು ಬೆರಳೆಣಿಕೆಯ ಮೇಲೆ ಎಣಿಸಬಹುದು. ಅವು ಇನ್ನೂ ಪ್ರಾಥಮಿಕ ಹಂತದಲ್ಲಿರಬಹುದು.

೭. ಶಿಕ್ಷಣಕ್ಕೆ ಸಂಬಂಧಿಸಿದಂತೆ ಒಟ್ಟಾರೆ ಸೇವೆಯನ್ನು ಕೊಡಮಾಡುವುದು :

ಪ್ರಾವಿಣ್ಯತೆಯನ್ನು ಮತ್ತು ಅರ್ಹತೆಯನ್ನು ಸುಧಾರಿಸುವುದು ವಿಶ್ವವಿದ್ಯಾಲಯಗಳ ಕಾರ್ಯವಾಗಿದೆ. ಈ ಮುಂಚೆ ಉಲ್ಲೇಖಿಸಿದಂತೆ, ಈ ಪ್ರಾವಿಣ್ಯತೆಯು ಸಮಾಜದ ಅಗತ್ಯತೆಗೆ ಸಂಬಂಧಿಸಿದುದಾಗಿರಬೇಕು. ಇಂಥ ಪ್ರಾವಿಣ್ಯತೆಯನ್ನು ಒಮ್ಮೆ ಹಂಚಿ ಕೊಟ್ಟ ಮೇಲೆ, ಈ ರೀತಿ ಜ್ಞಾನ ಪಡೆದವರು (ತಮ್ಮಷ್ಟಕ್ಕೇ ತಾವೇ) ಯಾಂತ್ರಿಕವಾಗಿ ಸ್ವಂತ ಉದ್ಯೋಗವನ್ನು ಸ್ವೀಕರಿಸುವರೆಂದು ಅಪೇಕ್ಷಿಸುವದು, ನಿರುದ್ಯೋಗ ಸಮಸ್ಯೆಯನ್ನು ತೀರ ಸುಲಭೀಕರಿಸಿದಂತಾಗುವದು. ಪ್ರಾವಿಣ್ಯತೆಯನ್ನು ಪಡೆದವರಿಗೆ ಉತ್ಪಾದನೆಗಳಿಗೆ ಅಗತ್ಯವಾದ ಮೂಲ ವಸ್ತುಗಳನ್ನು ಪಡೆಯಲು ಸುಲಭ ಪ್ರವೇಶ ದೊರೆಯುವದಿಲ್ಲ. ಹಣ ಒದಗಿಸುವ ಸಂಸ್ಥೆಗಳನ್ನು ಸಂಪರ್ಕಿಸಲು ಅವರಿಗೆ ತುಂಬ ಕಷ್ಟವಾಗುತ್ತದೆ. ಕೆಲವೊಂದು ಆರ್ಥಿಕ ಲಾಭದಾಯಕ ಚಟುವಟಿಕೆಯನ್ನು ಕೈಕೊಳ್ಳುವಲ್ಲಿಯೂ ಸಹ, ಭೂಮಿ ಮತ್ತು ಇತರ ಉತ್ಪಾದನೆಯ ಮೂಲ ವಸ್ತುವನ್ನು ಪೂರೈಸುವ ಹೊಣೆಗಾರಿಕೆಯುಳ್ಳ ಸರಕಾರದ ವಿಭಾಗಗಳು ಸಾಮಾನ್ಯವಾಗಿ ಅವರಲ್ಲಿ ಸಹಾಯಕ್ಕಾಗಿ ಹೋದ ನಿರುದ್ಯೋಗಿಗಳ ಬಗ್ಗೆ ಉದಾಸೀನತೆಯನ್ನು ಪ್ರದರ್ಶಿಸುವದನ್ನು ಕಾಣುತ್ತೇವೆ. ಸಂಬಂಧಿತ ಸರಕಾರಿ ಇಲಾಖೆಗಳಿಂದ ಅಥವಾ ಹಣಕಾಸು ನೀಡುವ ಸಂಸ್ಥೆಗಳಿಂದ ಅಗತ್ಯವಾದ ಸಹಾಯವನ್ನು ಪಡೆಯುವಲ್ಲಿ ವಿಫಲರಾಗಿ ನಿರಾಶೆ ಹೊಂದಿದ ನಿರುದ್ಯೋಗಿಗಳು ಹಿಂಸಾತ್ಮಕ ಮಾರ್ಗವನ್ನವಲಂಬಿಸಿನವರಾಗಲಿ ಅಥವಾ ಸದ್ಯದ ಸಾಮಾಜಿಕ ರಚನೆ ಮತ್ತು ನಿರುದ್ಯೋಗಿಗಳ ಬಗ್ಗೆ ಅದು ತೋರಬೇಕಾದ

ನೈತಿಕ ಜವಾಬುದಾರಿ ಬಗ್ಗೆ ಅವಿಶ್ವಾಸವುಳ್ಳವರಾಗಿ ಪರಿವರ್ತಿತರಾಗಿದ್ದಾರೆ. ವಿಶಿಷ್ಟವಾದ ಪ್ರಾವಿಣ್ಯವನ್ನು ಪಡೆದವರಿಗೆ ಕೈಗಾರಿಕೆಯುನ್ನು ಆರಂಭಿಸಲು ಭೂಮಿ, ಧನ ಸಹಾಯ ಮತ್ತು ಸಂಬಂಧಪಟ್ಟ ಮೂಲಸಾಮುಗ್ರಿ ಮೊದಲಾದವುಗಳನ್ನು ಕೊಡುವ ಸೇವೆಯು ಮೂಲಕ ಶಿಕ್ಷಣ, ಉದ್ಯೋಗ ಮತ್ತು ಅಭಿವೃದ್ಧಿಗಳ ಮಧ್ಯೆ ಸಂಬಂಧವನ್ನೇರ್ಪಡಿಸುವದು ಒಂದು ಮಾರ್ಗವಾಗಿದೆ. ಸ್ವಂತ ಉದ್ಯೋಗವನ್ನು ಕೈಕೊಳ್ಳಲು ಪದವೀಧರರು ಸಮರ್ಥರಾಗುವಂತೆ ಮಾಡುವಲ್ಲಿ ಸಂಬಂಧಪಟ್ಟ ಇಲಾಖೆಗಳ ಹಾಗೂ ವಿಶ್ವವಿದ್ಯಾಲಯುಗಳ ಮಧ್ಯೆ ಯೋಗ್ಯವಾದ ಅನ್ಯೋನ್ಯ ಸಂಬಂಧವಿರಬೇಕು.

ದೃಷ್ಟಾಂತಕ್ಕಾಗಿ ಇಂಜನೀಯರಂಗದಲ್ಲಿ ಅಧಿಕ ಸಂಖ್ಯೆಯು ಇಂಜನೀಯರರು ಮತ್ತು ಡಿಪ್ಲೋಮಾಧಾರಕರು ಇರುವರೆಂಬುದನ್ನು, ವಿವರಣೆಗಾಗಿ ಉಲ್ಲೇಖಿಸಬಹುದಾಗಿದೆ. ಆದರಲ್ಲಿ ಕೈಗಾರಿಕಾ ತರಬೇತಿಯು ಪ್ರಮಾಣಪತ್ರಧಾರಕರೂ ಇರುತ್ತಾರೆ. ಇಂಥ ನಿರುದ್ಯೋಗಿ ಜನರ ಸೈನ್ಯವು ದಿನದಿಂದ ದಿನಕ್ಕೆ ಬೆಳೆಯುತ್ತಲಿದೆ. ಅವರು ಪದವಿ ಅಥವಾ ತರಬೇತಿ ಪಡೆದ ಮೇಲೆ ಅವರಿಗೆ ಸೇವೆಯ ಅವಕಾಶವನ್ನು ಕೊಡದಿರುವುದೇ ಇದಕ್ಕೆ ಭಾಗಶಃ ಕಾರಣವಾಗಿದೆ. ಅವರ ತರಬೇತಿಯನ್ನು ಸುಧಾರಿಸುವದಕ್ಕೆ ಅವಕಾಶವಿದೆ. ಸ್ಥಿರವಾದ, ಪರಂಪರಾಗತ, ಹಾಗೂ ಪರಿವಾರದ ವಿಷಯುಗಳ ಬದಲು ಅಧಿಕ ಬೇಡಿಕೆಯುಳ್ಳ ಪ್ರಾವಿಣ್ಯತೆಯನ್ನು ಈ ಸಂಸ್ಥೆಗಳಲ್ಲಿ ಒದಗಿಸಬೇಕು. ಕೈಗಾರಿಕಾ ತರಬೇತಿ ಕೇಂದ್ರಗಳಲ್ಲಿ ಅಥವಾ ಇಂಜನೀಯರಿಂಗ ಕಾಲೇಜು ಅಥವಾ ವಿಶ್ವವಿದ್ಯಾಲಯುಗಳಲ್ಲಿ ತರಬೇತಿಯನ್ನು ಕೊಡುವ ಅಗತ್ಯವಿರುವ ಕೈಗಾರಿಗಗಳನ್ನು ಗುರುತಿಸಲು ನಿರಂತರ ಪ್ರಯತ್ನವನ್ನು ಮಾಡಬೇಕು. ಬಹುಶಃ ಕೈಗಾರಿಕಾ ತರಬೇತಿ ಕೇಂದ್ರ (ಆಯ್.ಟಿ.ಆಯ್.)ಗಳಲ್ಲಿ ಅಥವಾ ವಿಶ್ವವಿದ್ಯಾಲಯುಗಳಲ್ಲಿ ವಿಶೇಷ ಪ್ರಾವಿಣ್ಯತೆಗಳಲ್ಲಿ ತರಬೇತಿ ಪಡೆದವರಿಗೆ ಸೇವೆಯ ಅವಕಾಶವನ್ನು ಒದಗಿಸುವ ಭರವಸೆಯನ್ನೀಯಲು ಸರಕಾರದಲ್ಲಿ ಪ್ರತ್ಯೇಕ ಇಲಾಖೆಯು ಅಗತ್ಯವಿದೆ.

೮. ಕೈಗಾರಿಕೆ ಮತ್ತು ವಿಶ್ವವಿದ್ಯಾಲಯುಗಳ ಮಧ್ಯೆ ಸಂಬಂಧ :

ಕೈಗಾರಿಕೆಗಳು ಪ್ರಾವಿಣ್ಯ ಪಡೆದ ಮಾನವಶಕ್ತಿಯು ಬಗ್ಗೆ ತಮ್ಮ ಬೇಡಿಕೆಗಳನ್ನು ವಿಶ್ವವಿದ್ಯಾಲಯುಗಳಿಗಾಗಲಿ, ಸರಕಾರಕ್ಕಾಗಲಿ ತಿಳಿಸುವ ಕಾಳಜಿಯನ್ನೂ ವಹಿಸುವುದಿಲ್ಲ. ವಿಶ್ವವಿದ್ಯಾಲಯ ಅಥವಾ ಕೈಗಾರಿಕಾ ತರಬೇತಿ ಸಂಸ್ಥೆಗಳಿಂದ ಹೊರಬೀಳುತ್ತಿರುವವರನ್ನು ಖಾಸಗಿ ಅಥವಾ ಸಾರ್ವಜನಿಕ ರಂಗಗಳಲ್ಲಿ ಬಳಸಿಕೊಳ್ಳಲಾಗುತ್ತಿದ್ದು, ಅವರು ಹೆಚ್ಚಾಗಿ ಸರಕಾರದ ವೆಚ್ಚದಲ್ಲಿಯೇ ತರಬೇತಿಯನ್ನು ಪಡೆದವರಾಗಿರುತ್ತಾರೆಂಬುದನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳಲಾಗುತ್ತಿದೆ. ಶಿಕ್ಷಣ ಹಾಗೂ ಅಭಿವೃದ್ಧಿಗಳಲ್ಲಿ ಯೋಗ್ಯ ಸಂಬಂಧವನ್ನು ಸ್ಥಾಪಿಸುವದರಲ್ಲಿ ಕೈಗಾರಿಕೆಗಳು ಉಪಯುಕ್ತ ಹಾಗೂ ಮಹತ್ವಪೂರ್ಣ ಪಾತ್ರವನ್ನು ವಹಿಸುವದು ಸಾಧ್ಯವಾಗಬೇಕು. ಇದನ್ನು

ಅನೇಕ ರೀತಿಯಿಂದ ಮಾಡಬಹುದಾಗಿದೆ. ಬಹುಶಃ ಹೀಗೆ ಕಲ್ಪಿಸಿಕೊಳ್ಳಬಹುದು (ಅ) ಅಗತ್ಯವಾದ ಪ್ರಾವಿಣ್ಯತೆಗಳ ಪ್ರಕಾರಗಳನ್ನು ಸೂಚಿಸುವುದು ಮತ್ತು ಪ್ರತಿವರ್ಷ ಅಗತ್ಯವಾಗುವ ಅಂದಾಜು ಸಂಖ್ಯೆ. (ಆ) ತರಬೇತಿಯಿಲ್ಲದ (ಕಚ್ಚಾ) ಪದವೀಧರರಿಗೆ ಅಥವಾ ಪ್ರಮಾಣಪತ್ರಧಾರಕರಿಗೆ ಉಮೇದುವಾರಿಕೆಯ ಅವಕಾಶವನ್ನು ನೀಡುವದು. (ಇ) ತಮ್ಮ ಕಾರಖಾನೆಗಳಲ್ಲಿ ಸ್ವೀಕರಿಸಿದ ತರಬೇತಿ ಉಮೇದುವಾರರನ್ನು ಸೇವೆಗೆ ನಿಯಮಿಸಿಕೊಳ್ಳುವದು. (ಈ) ತರಬೇತಿ ಕೇಂದ್ರ ಅಥವಾ ವಿಶ್ವವಿದ್ಯಾಲಯಗಳ ಪ್ರತ್ಯಕ್ಷ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವದು; (ಉ) ವಿಶ್ವವಿದ್ಯಾಲಯದೆಳ ಡಿಪ್ಲೋಮಾಧಾರಕರ ಸಹಾಯಾರ್ಥ 'ನವಕರಿ ಭರವಸೆ ಇರುವ' ಕಾರ್ಯಕ್ರಮಗಳನ್ನು ಸಂಘಟಿಸುವ ಮೂಲಕ ವಿಶ್ವವಿದ್ಯಾಲಯಗಳ ಅಥವಾ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರಯತ್ನವನ್ನು ಬೆಂಬಲಿಸುವದು. ಕೈಗಾರಿಕೆ ಮತ್ತು ವಿಶ್ವವಿದ್ಯಾಲಯಗಳಲ್ಲಿ ನಿಕಟವಾದ ಪರಸ್ಪರ ಸಹವರ್ತನೆ ಇಲ್ಲದೆ ಹೋದರೆ, ಅತಿ ಅಗತ್ಯವಾದ ಸುಸಂಬಂಧದ ಮುಂದುವರಿಕೆ ಮಾಯವಾದಾಗ, ದೇಶ ಮತ್ತು ಶೈಕ್ಷಣಿಕ ವ್ಯವಸ್ಥೆಗೆ ತುಂಬ ಅಪಾಯವುಂಟಾಗುವ ಹೆದರಿಕೆಯುಂಟು. ಸಾರ್ವಜನಿಕ ವೆಚ್ಚದಿಂದ ಅಭಿವೃದ್ಧಿಗೊಳಿಸುವ ಪ್ರಾವಿಣ್ಯತೆಯ ಪ್ರಯೋಜನೆಯನ್ನು ಪಡೆಯುವ ಕೈಗಾರಿಕೆಗಳು, ವಿಶೇಷ ಪ್ರಾವಿಣ್ಯತೆ ಅಥವಾ ಅಗತ್ಯವಾದ ತರಬೇತಿ ಕಾರ್ಯಕ್ರಮಗಳನ್ನು ಒದಗಿಸಲು ಸಿದ್ಧವಿರುವ ವಿಶ್ವವಿದ್ಯಾಲಯಗಳ ಇಲಾಖೆಗಳಿಗೆ ನೇರವಾದ ವಂತಿಗೆಯನ್ನು ಕೊಡಲು ಸಮರ್ಥರಾಗದಿರುವದು ಯಾರೊಬ್ಬರ ಗ್ರಹಣಶಕ್ತಿಗೆ ನಿಲುಕದ ವಿಷಯವಾಗಿದೆ. ವಿಶ್ವವಿದ್ಯಾಲಯಗಳು ಸಹ ಕೈಗಾರಿಕೆಗೆ ಸಲಹಾ ಸೇವೆಯನ್ನು ಒದಗಿಸಬಹುದು. ಇದು ಉತ್ಪಾದನೆಯ ಕ್ಷೇತ್ರದಲ್ಲಿಯಂತೆಯೇ ಕಾರ್ಯನಿರ್ವಹಣೆಯ ಕ್ಷೇತ್ರದಲ್ಲಿಯೂ ಆಗಬಹುದು. ಆದುದರಿಂದ ಕೈಗಾರಿಕೆ ಮತ್ತು ವಿಶ್ವವಿದ್ಯಾಲಯಗಳಲ್ಲಿ ನಿಕಟ ಸಹ ಪ್ರಯತ್ನವನ್ನು ಉಂಟು ಮಾಡುವದಕ್ಕೆ ಸಾಕಷ್ಟು ಅವಕಾಶಗಳಿವೆ. ಪಶ್ಚಿಮದ ಅನೇಕ ದೇಶಗಳಲ್ಲಿ ಇಂಥ ಸಹ-ಪ್ರಯತ್ನ ಇದೆ. ಇಂಥ ಸಹ ಪ್ರಯತ್ನವನ್ನು ನಮ್ಮ ದೇಶದಲ್ಲಿ ಸ್ಥಾಪಿಸುವದರಲ್ಲಿ ಕಷ್ಟವೇನೂ ಇರಕೂಡದು.

೯. ಕೇಂದ್ರೀಯ ಇಲಾಖೆ :

ಶಿಕ್ಷಣ ಉದ್ಯೋಗಾವಕಾಶ ಮತ್ತು ಅಭಿವೃದ್ಧಿಗಳ ಮಧ್ಯೆ ಉಚಿತ ಹೊಂದಾಣಿಕೆಯನ್ನು ಪ್ರಸ್ಥಾಪಿಸುವುದಾದರೆ, ಸರಕಾರದ ಅಭಿವೃದ್ಧಿ ಇಲಾಖೆಗಳು ಮತ್ತು ವಿಶ್ವವಿದ್ಯಾಲಯಗಳ ಮಧ್ಯೆಯೂ ಸರಿಯಾದ ತಿಳುವಳಿಕೆಯ ಮಧುರವಾದ ಸಂಬಂಧವಿರಬೇಕಾಗುತ್ತದೆ. ಅಭಿವೃದ್ಧಿ ಇಲಾಖೆಗಳನ್ನು ಮತ್ತು ಸಂಶೋಧಕರನ್ನು ಅಥವಾ ವಿಶ್ವವಿದ್ಯಾಲಯಗಳ ಪಂಡಿತರನ್ನು ಒಂದೆಡೆ ಸೇರಿಸುವ ಬಲಿಷ್ಠವಾದ ಯೋಜನಾ ಇಲಾಖೆಯು ಕೇಂದ್ರೀಯ ಇಲಾಖೆಯಾಗಬಹುದೆಂದು ಕರ್ನಾಟಕದಲ್ಲಿಯ ಅನುಭವ

ದಿಂದ ತಿಳಿಯುತ್ತದೆ. ಕರ್ನಾಟಕದಲ್ಲಿರುವಂತೆ ವಿವಿಧ ಅಭಿವೃದ್ಧಿ ಇಲಾಖೆಗಳು ಯಾವ ಕ್ಷೇತ್ರಗಳಲ್ಲಿ ಸಂಶೋಧನೆಯು ಅಗತ್ಯವಿದೆಯೆಂಬುದನ್ನು ಯೋಜನಾ ಇಲಾಖೆಗೆ ಸೂಚಿಸಬೇಕು. ಯೋಜನಾ ಇಲಾಖೆಯು ವಿಶೇಷ ತಜ್ಞರು ಲಭ್ಯವಿರುವ ವಿಶ್ವವಿದ್ಯಾಲಯಗಳಲ್ಲಿ ಅಂಥ ಸಂಶೋಧನಾ ಅಧ್ಯಯನ ಕೈಕೊಳ್ಳುವ ಸಾಧ್ಯತೆಗಳನ್ನು ಪರಿಶೋಧಿಸಬಹುದು. ಅಲ್ಲದೆ ವಿಶ್ವವಿದ್ಯಾಲಯಗಳಲ್ಲಿ ಕೈಕೊಳ್ಳಲಾಗುವ ಸಂಶೋಧನೆಗಳ ಪರಿಣಾಮಗಳು ಯೋಜನಾ ಇಲಾಖೆಗೆ ನಿರಂತರವಾಗಿ ಲಭ್ಯವಾಗುತ್ತಿರಬೇಕು. ಯೋಜನಾ ಇಲಾಖೆಯು. ಸಂಬಂಧಪಟ್ಟ ಸಂಶೋಧಕರ ಹಾಗೂ ಅಭಿವೃದ್ಧಿ ಇಲಾಖೆಗಳ ಸಲಹೆಗಳ ಮೇರೆಗೆ ಆ ಸಂಶೋಧನೆಯ ಪರಿಣಾಮಗಳನ್ನು ಉಪಯೋಗಿಸಲು ಇರುವ ಅವಕಾಶಗಳನ್ನು ಪರೀಕ್ಷಿಸಬಹುದು.

ವಿಶ್ವವಿದ್ಯಾಲಯಗಳ ಮತ್ತು ಸಂಶೋಧನಾ ಸಂಸ್ಥೆಗಳ ಮೂಲಕ ಸಂಶೋಧನಾ ಅಧ್ಯಯನ ನಡೆಯಲು ಯೋಜನಾ ಇಲಾಖೆಯು (ಜವಾಬುದಾರಿಯನ್ನು ಹೊರಬೇಕು) ಪ್ರೋತ್ಸಾಹಿಸಬೇಕು. ಹಾಗೂ ಹಣವನ್ನೂ ನೀಡಬೇಕು. 'ಭಾರತೀಯ ಸಮಾಜ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ (Indian Council of Social Science Research) ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಸಂಸ್ಥೆ (Council of Scientific and Industrial Research) ಗಳಂಥ ಧನಸಹಾಯ ನೀಡುವ ಮೂಲಗಳು ಇವೆ. ನಿರ್ದಿಷ್ಟವಾದ ಸಂಶೋಧನಾ ಕಾರ್ಯಕ್ರಮವನ್ನು ಯಾವುದೇ ಮೂಲವು ಘೋಷಿಸುತ್ತಿದ್ದರೂ, ಆ ಸಂಶೋಧನೆಯ ಪರಿಣಾಮಗಳು ವಿವಿಧ ರಾಜ್ಯಗಳ ಅಭಿವೃದ್ಧಿ ಇಲಾಖೆಗಳಿಗೆ ಲಭ್ಯವಾಗುವವೆಂಬುದನ್ನು ಖಚಿತಪಡಿಸುವುದು ಸಾಧ್ಯವಾಗಬೇಕು. ರಾಜ್ಯದ ಯೋಜನಾ ಇಲಾಖೆಯಲ್ಲಿಯೂ ಈ ಎಲ್ಲ ಚಟುವಟಿಕೆಗಳನ್ನು ಸಮನ್ವಯಗೊಳಿಸುವ 'ಸಂಶೋಧನಾ ಮತ್ತು ತಾಂತ್ರಿಕ ವಿಭಾಗ (Research and Technical Cell) ವೊಂದು ಇರಬೇಕು.

ಅಭಿವೃದ್ಧಿ ಇಲಾಖೆಗಳ ಮತ್ತು ವಿಶ್ವವಿದ್ಯಾಲಯಗಳ ಸಂಶೋಧಕರ ಪ್ರತಿನಿಧಿಗಳನ್ನು ಒಂದೆಡೆ ಸೇರಿಸುವ ನಿಯತ ಕಾಲಿಕ ಸಭೆಗಳನ್ನು ಸಂಘಟಿಸಬಹುದು. ಹೀಗೆ ಮಾಡುವುದರಿಂದ, ಸಂಶೋಧನೆಯ ಕ್ಷೇತ್ರಗಳು, ಮತ್ತು ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವ. ಯಾವ ಕ್ಷೇತ್ರಗಳಲ್ಲಿ ವಿಶ್ವವಿದ್ಯಾಲಯಗಳು ಕಾಣಿಕೆ ಸಲ್ಲಿಸಬಹುದೆಂಬುದನ್ನು ಚರ್ಚಿಸಲು ಒಂದು ವೇದಿಕೆಯನ್ನು ಒದಗಿಸಿದಂತಾಗುತ್ತದೆ.

ಒಟ್ಟಿನಲ್ಲಿ ಸರಕಾರ ಮತ್ತು ವಿಶ್ವವಿದ್ಯಾಲಯಗಳಲ್ಲಿ ಸಾಮಾನ್ಯವಾಗಿ ಸಂಪರ್ಕದ ಮಹದಂತರವಿದ್ದು, ಅವೆರಡರ ಸಂಸ್ಕೃತಿಗಳ ತಿಕ್ಕಾಟವೇ ಈ ಲೋಪಕ್ಕೆ ಕಾರಣವೆಂಬ

ಅಭಿಪ್ರಾಯ ಉಂಟಾಗುವಂತಿದೆ. ಜ್ಞಾನ ಸಂಶೋಧನೆ ಮತ್ತು ಯೋಜನೆಗಳ ಪ್ರಯೋಜನಗಳು ಉದ್ದೇಶಿತ ವಲಯಗಳಿಗೂ ಮತ್ತು ವಿಶಾಲಾರ್ಥದಲ್ಲಿ ಸಮಾಜಕ್ಕೂ ಮುಟ್ಟುವುದಕ್ಕಾಗಿ ಈ ಅಂತರವನ್ನು ಹೋಗಲಾಡಿಸುವ ಸೇತುವೆಯನ್ನು ನಿರ್ಮಿಸುವ ಮಧುರವಾದ ಮತ್ತು ಪರಸ್ಪರ ಬೆಂಬಲಿಸುವ ಸಂಬಂಧವನ್ನು ಅವುಗಳಲ್ಲಿ ಪ್ರಸ್ಥಾಪಿಸುವ ಎಲ್ಲ ಪ್ರಯತ್ನಗಳನ್ನು ಮಾಡಬೇಕು.

ಶಿಕ್ಷಣದ ಹೆಗ್ಗುರಿ

ಪ್ರೊ. ತ. ಸು. ಶಾಮರಾಯರು, ಎಂ.ಎ.

ನಮಗೆಲ್ಲ ಮಕ್ಕಳಿದ್ದಾರೆ. ನಮ್ಮಲ್ಲಿ ಕೆಲವರಿಗೆ ಮಕ್ಕಳೇಕೆ, ಮೊಮ್ಮಕ್ಕಳೂ ಇದ್ದಾರೆ. ಅವರೆಲ್ಲರೂ ಶಾಲಾ-ಕಾಲೇಜುಗಳ ಬೇರೆ ಬೇರೆ ತರಗತಿಯಲ್ಲಿ ಓದುತ್ತಿದ್ದಾರೆ. ಅಹುದು. ಅವರೆಲ್ಲ ಅಲ್ಲಿಗೆ ಹೋಗಲೇಬೇಕು. ವಿದ್ಯಾವಂತರಾಗಬೇಕು' ಬುದ್ಧಿವಂತರಾಗಬೇಕು. ಆದರೆ ಅವರಿಗೆ ಈಗ ಸಿಕ್ಕುತ್ತಿರುವ ಶಿಕ್ಷಣದಿಂದ ಅವರು ನಿಜವಾಗಿಯೂ ವಿದ್ಯಾವಂತರಾಗಿ, ಬುದ್ಧಿವಂತರೆನಿಸಿಕೊಂಡು ಸುಖಿವಾಗಿರುತ್ತಾರೆಯೆ ?

ತಾಯಿ-ತಂದೆಯರೆನಿಸಿದ ನಮಗೆ ಹಲವು ಮುಖದ ಹಲವು ಸಮಸ್ಯೆಗಳು. ಅವು ಪ್ರಶ್ನಾರ್ಥಕ ಚಿಹ್ನೆಯ ರೂಪದಲ್ಲಿ ಏಕ್-ಟಾಟ್ಟಹಾಸ ಮಾಡುತ್ತಾ ನಮ್ಮ ಎದುರಿಗೆ ನಿಲ್ಲುತ್ತವೆ. ಅವುಗಳಲ್ಲಿ ಬಹುಮುಖ್ಯವಾದುವೆಂದರೆ—ನಮ್ಮ ಮಕ್ಕಳು ಏನನ್ನು ಕಲಿಯುತ್ತಾರೆ ? ಏಕೆ ಕಲಿಯುತ್ತಾರೆ? ಹೇಗೆ ಕಲಿಯುತ್ತಾರೆ? ಎಂಬುವು ಸರಳವಾದ ಶಿಕ್ಷಣ ತತ್ತ್ವವೊಂದಿದೆ. ಅದನ್ನು ನಾವು ಸದಾ ಜ್ಞಾಪಕದಲ್ಲಿಟ್ಟುಕೊಂಡಿರಬೇಕು. "ನಾವು ಏನನ್ನು ಆಚರಿಸುತ್ತೇವೆಯೋ ಅದನ್ನು ಕಲಿಯುತ್ತೇವೆ: ಯಾವುದನ್ನು ಅಭ್ಯಾಸ ಮಾಡುವುದಿಲ್ಲವೋ ಅದನ್ನು ಕಲಿಯಲಾರೆವು". ಆದ್ದರಿಂದ ನಮ್ಮ ಆದರ್ಶಗಳು ಏನಿವೆಯೋ ಅವನ್ನು ಶಿಕ್ಷಣ ಸಂಸ್ಥೆಗಳಲ್ಲಿ ಆಚರಣೆಗೆ ತರಬೇಕು.

ಇಂದು ನಮ್ಮ ಸಮಾಜ ಹೆಚ್ಚು ಹೆಚ್ಚು ಶಾಲೆಗಳು ಬೇಕೆಂದು ಕೇಳುತ್ತಿದೆ. ಶಿಕ್ಷಕರ ಸಂಖ್ಯೆ ಹೆಚ್ಚಬೇಕೆಂದು ಬಯಸುತ್ತಿರುವ ನಮ್ಮ ಪ್ರಜಾಸರ್ಕಾರ ಸಮಾಜದ ಆ ಅಪೇಕ್ಷೆಯನ್ನು ಸಲ್ಲಿಸುತ್ತಿದೆ. ಆದರೇನು ? ನಮ್ಮಲ್ಲಿ ಈಗಿರುವ ಪಠ್ಯಕ್ರಮ ಪಠ್ಯಪುಸ್ತಕಗಳು. ಪರೀಕ್ಷಾ ವಿಧಾನ ಇವುಗಳನ್ನು ಈಗಿರುವಂತೆಯೇ ಇಟ್ಟುಕೊಂಡು, ಶಾಲೆಗಳ ಮತ್ತು ಅದರೊಡನೆ ವಿದ್ಯಾರ್ಥಿಗಳ ಸಂಖ್ಯೆಯನ್ನು ಬೆಳೆಸಿದಷ್ಟೂ ಶಿಕ್ಷಣವು ಗುಣಮಟ್ಟದಲ್ಲಿ ಕೆಳಗಿಳಿಯುತ್ತದೆ. ಸಂಖ್ಯೆಯ ಏರಿಕೆಯಿಂದ ಗುಣಮಟ್ಟದ ಇಳಿಕೆಯೆಂದೇ ಅರ್ಥ. ಆದ್ದರಿಂದ ಗಾತ್ರದಿಂದಲೇ ಸಾರ್ಥಕತೆಯನ್ನು ಅಳೆಯಹೊರಡುವುದು ಅವಿವೇಕವೆನಿಸೀತು. ಈಗ ಬೇರೆ ಬೇರೆ ತರಗತಿಗಳಲ್ಲಿ ಮಕ್ಕಳಿಗೆ ಬೋಧಿಸುತ್ತಿರುವ ವಿಷಯಗಳೆಲ್ಲವೂ ಓಬಿರಾಯನ ಕಾಲದವು: ಬ್ರಿಟಿಷರ ನಿರ್ದೇಶನದಲ್ಲಿ ರೂಪುಗೊಂಡವು. ನಮಗೆ ಸ್ವಾತಂತ್ರ್ಯ ಬಂದು ಹತ್ತಿರ ಹತ್ತಿರ ಅರ್ಧ ಶತಮಾನವೇ ಕಳೆದು ಹೋಗಿದೆಯಾದರೂ ಪಾಶ್ಚಾತ್ಯರು ನಾಟಿ ಹೋದ ಶಿಕ್ಷಣ ವೃಕ್ಷಕ್ಕೆ ನಾವು ಪ್ರದಕ್ಷಿಣೆ ನಮಸ್ಕಾರವನ್ನು ಹಾಕುತ್ತಿದ್ದೇವೆ.

ಮಕ್ಕಳು ಬೇಕೆಂದರೆ ಅಶ್ವತ್ಥವೃಕ್ಷ, ಜ್ಞಾನ ಬೇಕೆಂದರೆ ಪಾಶ್ಚಾತ್ಯರ ಶಿಕ್ಷಣ ವೃಕ್ಷ, ನಾವು ಬೋಧಿಸುತ್ತಿರುವ ವಿಷಯಗಳೆಲ್ಲವೂ ಈ ತಲೆಮಾರಿನವರಿಗೆ ಬಹು ಮಟ್ಟಿಗೆ ನಿಷ್ಪ್ರಯೋಜಕವಾಗಿವೆ. ಅವು ನಮ್ಮ ಮಕ್ಕಳ ಬುದ್ಧಿಶಕ್ತಿಯನ್ನು ಹೀರಿ ಪಿಪ್ಪೆಮಾಡುತ್ತಿವೆ: ಅವರ ಮನಸ್ಸಿಗೆ ಹೋಗಲಾರದ ಹೊರೆಯಾಗಿದೆ. ಇದರ ಫಲವಾಗಿ ನಮ್ಮ ಮಕ್ಕಳ ದೈಹಿಕ. ಮಾನಸಿಕ. ನೈತಿಕ ಮತ್ತು ಆಧ್ಯಾತ್ಮಿಕವಾದ ಬೆಳವಣಿಗೆಯನ್ನು ಕುಂಠಿತಗೊಳಿಸುತ್ತಿದೆ. ಗ್ರಂಥಸ್ಥ ವಿಷಯಗಳನ್ನು ಉರುಹೊಡೆದು. ಪರೀಕ್ಷೆಯಲ್ಲಿ ನೆನಪಿನ ಬಲದಿಂದ ಅವುಗಳನ್ನು ಕಾಗದದ ಮೇಲೆ ಕಕ್ಕಿ. ಪ್ರಾಜ್ಞರೆಂದು ಹೆಸರುಗಳಿಸಲು ಶ್ರಮಿಸುತ್ತಾ ಇಹ-ಪರಗಳೆರಡರಿಂದಲೂ ದೂರಾಗುತ್ತಿದ್ದಾರೆ. ಪ್ರಪಂಚ ಜ್ಞಾನಶೂನ್ಯರಾಗಿ ಗೃಹಕೃತ್ಯದಲ್ಲಾಗಲೀ. ಸಾರ್ವಜನಿಕ ಜೀವನದಲ್ಲಾಗಲೀ ಇದಿರಾಗುವ ಸಮಸ್ಯೆಗಳನ್ನು ಇದಿರಿಸುವ ಶಕ್ತಿ ಇಲ್ಲದವರಾಗುತ್ತಾರೆ. ಈಗಿರುವಂತೆ ಶಿಕ್ಷಣದ ಹೆಗ್ಗುರಿ ಜ್ಞಾನಾರ್ಜನೆಯಲ್ಲ. ಸರಕಾರಿ ನೌಕರಿ ಬೇಟೆಯ ಅರ್ಹತೆಗಾಗಿ ಮಾತ್ರ. ಅದಿಲ್ಲದಾಗ ನಿರುದ್ಯೋಗಿಗಳ ಸಂಖ್ಯೆಯನ್ನು ಹೆಚ್ಚಿಸುವುದು.

ನಮಗೆ ಸ್ವಾತಂತ್ರ್ಯ ಬಂದ ಮೇಲೆ ಹಲವಾರು ಶಿಕ್ಷಣ ಮಂಡಲಿಗಳನ್ನು ನೇಮಿಸಿ ಅವುಗಳ ವರದಿಗಳನ್ನು ಹೊರ ತಂದಿದ್ದಾರೆ. ಅವೆಲ್ಲವೂ ಇಂದಿನ ಅಗತ್ಯಕ್ಕೆ ತಕ್ಕಂತೆ ಪಠ್ಯಗಳನ್ನು ಸಕ್ರಮವಾಗಿ ಬದಲಾಯಿಸಿ ಹೊಸ ರೂಪವನ್ನು ಕೊಡಬೇಕೆಂದು ಒತ್ತಿ ಒತ್ತಿ ಹೇಳುತ್ತವೆ. ೧೯೫೮ರಲ್ಲಿ ಗೌಹಾತಿಯಲ್ಲಿ ನಡೆದ ಕಾಂಗ್ರೆಸ್ ಸಮ್ಮೇಳನದ ಸಂದರ್ಭದಲ್ಲಿ ದಿವಂಗತ ಜವಹರಲಾಲ್ ನೆಹರೂರವರು ಈ ವಿಚಾರದಲ್ಲಿ ಹೇಳುತ್ತಾರೆ. "ಭಾರತದಲ್ಲಿರುವ ಅತ್ಯಂತ ಶ್ರೇಷ್ಠ ಶಿಕ್ಷಣ ತಜ್ಞರನ್ನು. ಅಗತ್ಯವಿದ್ದರೆ ಹೊರಗಿನವರನ್ನು ಕೂಡ ನೇಮಿಸಿಕೊಂಡು ಒಂದು ಸಮಿತಿಯನ್ನು ರಚಿಸಬೇಕು. ಅವರು ನಮ್ಮ ಶಾಲಾ ಕಾಲೇಜುಗಳಿಗೆ ಅಗತ್ಯವಾದ ಶಿಕ್ಷಣ ಸಾಧನಗಳನ್ನೂ ಪಠ್ಯಪುಸ್ತಕಗಳನ್ನೂ ರಚಿಸುವ ವಿಧಾನವನ್ನು ನಿರ್ಧರಿಸಬೇಕು". ೧೯೬೦ ನೇ ಮೇ ೧ ರಂದು ಮತ್ತೆ ಅವರು "ಶಿಕ್ಷಣಕ್ಕೆ ನಾನು ಎಷ್ಟು ಮಹತ್ವ ಕೊಡುತ್ತೇನೆಂದರೆ. ಮರಾ ಮತ್ತು ಶಾಖೆಯ ಕೆಲವು ಯೋಜನೆಗಳನ್ನಾದರೂ ಕಿತ್ತು ಹಾಕಿಯೇನು. ಶಿಕ್ಷಣವನ್ನು ಕೈಬಿಡಲಾರೆ, ಎಲ್ಲ ಪಳಿಗೆಗೂ ಅದು ತಳಹದಿ, ನಮಗೆ ತಲೆಕೆಟ್ಟು ಕೆಲಸ ಮಾಡಲಾಗದ ಹೊರತು ಮತ್ತಾವ ಕಾರಣದಿಂದಲೂ ಶಿಕ್ಷಣಕಾರ್ಯ ಹಿಂದಿಳಿಯುವುದಕ್ಕೆ ನಾವು ಅವಕಾಶ ಕೊಡಕೂಡದು". ಭಾರತದ ಕಣ್ಮಣಿಯಂತಿದ್ದ ಜವಹರರು ಶಿಕ್ಷಣ ವಿಚಾರದಲ್ಲಿ ಎಂತಹ ಕಾತುರವನ್ನು ವ್ಯಕ್ತಪಡಿಸಿದ್ದಾರೆ? ಅವರ ಮನಸ್ಸಿನ ಉದ್ವಿಗ್ನತೆ ಎಷ್ಟು ಹೃದಯ ಸ್ಪರ್ಶಿಯಾಗಿದೆ!

ನಾವು ಭಾರಿ ಭಾರಿ ಕೈಗಾರಿಕೆ, ನೀರಾವರಿ ಮತ್ತು ವೈಜ್ಞಾನಿಕ ಯೋಜನೆಗಳಿಗಾಗಿ ಕೋಟಿ ಕೋಟಿ ಹಣವನ್ನು ವೆಚ್ಚ ಮಾಡುತ್ತಿದ್ದೇವೆ: ಪ್ರಕೃತಿ ವಿಜ್ಞಾನ ಮತ್ತು ಜೀವ ವಿಜ್ಞಾನದಲ್ಲಿ ಆಳವಾದ ಸಂಶೋಧನೆಯನ್ನು ಮಾಡುವುದಕ್ಕಾಗಿ ರಾಷ್ಟ್ರೀಯ

ಸಂಶೋಧನಾಲಯಗಳನ್ನು ತೆರೆಯುತ್ತಿದ್ದೇವೆ. ಅದು ತಪ್ಪೆಂದೇ ನಮ್ಮ ಭಾವನೆಯಲ್ಲ. ಆದರೆ ಅದರಂತೆಯೇ ಶೈಕ್ಷಣಿಕ ಉಪಕರಣಗಳನ್ನು ಮತ್ತು ಪಠ್ಯಪುಸ್ತಕಗಳನ್ನು ರೂಪಿಸುವಂತಹ ರಾಷ್ಟ್ರೀಯ ಸಂಶೋಧನಾಲಯಗಳನ್ನು ತೆರೆಯಬೇಡವೇ? ಶಿಕ್ಷಣವೆಂಬುದು ಮಹೋನ್ನತ ವಿಜ್ಞಾನವಾಗಿರುವಂತೆ ಅತ್ಯುತ್ತಮ ಕಲೆಯೂ ಆಗಿದೆ. ಉತ್ತಮ ರೀತಿಯಲ್ಲಿ ಜೀವಿಸುವಂತೆ ನಿರ್ದೇಶನ ನೀಡಬಲ್ಲ ವಿಜ್ಞಾನ, ಜೀವಂತವಾದ ಕಲೆ ಶಿಕ್ಷಣ. ಇದರತ್ತ ಸಾಕಷ್ಟು ಗಮನ ನೀಡಿದಾಗ ಜಗತ್ತಿನಲ್ಲೆಲ್ಲಾ ಶಾಂತಿ ನೆಲೆನೀತು. ತುಷ್ಟಿಪುಷ್ಟಿಗಳು ದೊರೆತಾವು !

ನಿಜಜೀವನದ ವೈಜ್ಞಾನಿಕ ಮತ್ತು ಆಧ್ಯಾತ್ಮಿಕ ಭಾವನೆಗಳನ್ನು ಸಮನ್ವಯಗೊಳಿಸುವಂತಹ ಒಂದು ಶಿಕ್ಷಣ ನಮಗೀಗ ಬೇಕು. ನಮ್ಮ ಪ್ರಾಚೀನ ಋಷಿ-ಮುನಿಗಳು ಅಮೂಲ್ಯವಾದ ಆಧ್ಯಾತ್ಮಿಕ ಚಿಂತನೆಗಳ ದೊಡ್ಡ ಆಸ್ತಿಯನ್ನು ನಮಗೆ ಬಿಟ್ಟು ಹೋಗಿದ್ದಾರೆ. ನಾವು ಅದರ ಹಕ್ಕುದಾರರೆಂದು ಹೇಳಿಕೊಳ್ಳುತ್ತೇವೆ. ಜಗತ್ತು ಹಾಗೆಯೇ ಭಾವಿಸಿದೆ. ಆದ್ದರಿಂದ ನಾವು ಮೈ ಕೊಡವಿಕೊಂಡು ಬದ್ಧಕಂಕಣರಾಗಿ ಈ ಕಾರ್ಯರಂಗಕ್ಕೆ ಇಳಿಯಬೇಕಾಗಿದೆ. ಇದಕ್ಕಾಗಿ ನಾವು ಪಾಶ್ಚಾತ್ಯರ ವೈಜ್ಞಾನಿಕ ಮನೋಭಾವವನ್ನು ಮತ್ತು ಜ್ಞಾನವನ್ನು ಕಷ್ಟಪಟ್ಟು ಪಡೆಯಬೇಕು : ಅದನ್ನು ನಮ್ಮ ಆಧ್ಯಾತ್ಮಿಕ ಮನೋಭಾವ, ಜ್ಞಾನ ಮತ್ತು ಜಾಣ್ಮೆಗಳೊಡನೆ ಸಮನ್ವಯಗೊಳಿಸಬೇಕು. ನಮ್ಮಲ್ಲಿ ಅತ್ಯಂತ ಮೇಧಾವಿಗಳೆನಿಸಿಕೊಂಡ ಶಿಕ್ಷಣತಜ್ಞರಿದ್ದಾರೆ ; ಅವರೆಲ್ಲ ಒಟ್ಟಿಗೆ ಕಲೆತು, ಆಳವಾಗಿ ಆಲೋಚಿಸಿ ಪರಿಹಾರವನ್ನು ಕಂಡು ಹಿಡಿಯಬೇಕು.

"ಶಿಕ್ಷಣವೆಂದರೇನು ?" ನಾನು ಬಿ.ಟಿ. ತರಗತಿಗೆ ಹೋದ ಮೊದಲದಿನ ನನ್ನನ್ನು ಇದಿರಿಸಿದ ಪ್ರಶ್ನೆ ಇದು. ನನ್ನ ಉತ್ತರ "ಅದನ್ನು ತಿಳಿಯುವುದಕ್ಕಾಗಿಯೇ ನಾನಿಲ್ಲಿಗೆ ಬಂದಿದ್ದೇನೆ." ನನ್ನ ಉತ್ತರದಿಂದ ಅತೃಪ್ತರಾದ ಅಧ್ಯಾಪಕರು ನನಗೆ ಬೋಧಿಸಿದರು. "Education is adjustment to the environment" ಎಂದು. ಶಿಕ್ಷಣದಿಂದ ಮನುಷ್ಯ ನಾಗರೀಕನಾಗಬೇಕು, ನಾಗರೀಕನ ಮುಖ್ಯ ಲಕ್ಷಣವಾದ ಸೌಜನ್ಯವನ್ನು ಪಡೆಯಬೇಕು. ವಿದ್ಯಾದದಾತಿ ವಿನಯಂ ಅಂತಹ ವಿನಯಪರನಾದವನು ಸನ್ನಿವೇಶ ಸಂದರ್ಭಗಳಿಗೆ ತಕ್ಕಂತೆ ಹೊಂದಿಕೊಳ್ಳುವ ಯೋಗ್ಯತೆಯನ್ನು ಪಡೆದುಕೊಳ್ಳಬೇಕು. ಸಮಾಜದಲ್ಲಿ ಸವಿತ್ರನೆನಿಸಬೇಕಾದರೆ ವಿನಯ ಅತಿ ಮುಖ್ಯವೆಂಬುದನ್ನು ಅಗತ್ಯವಾಗಿಯೂ ಒಪ್ಪಿಕೊಳ್ಳಬೇಕಾದುದೇ. ಉತ್ತಮ ಸಮಾಜ ಜೀವಿಗೆ ಇದು ಅತ್ಯಗತ್ಯ. ಆದರೆ ಶಿಕ್ಷಣದ ಹೆಗ್ಗುರಿ ಇಷ್ಟಕ್ಕೆ ನಿಲ್ಲುತ್ತದೆಯೆ ? ಲೌಕಿಕ ಜೀವನಕ್ಕೆ ಅಪಾರವಾದ ಬೆಲೆಯನ್ನು ಆರೋಪಿಸುವ ಪಾಶ್ಚಾತ್ಯರಿಗೆ ಇದು ಸಾಕೆನಿಸೀತು. ಆದರೆ ಭಾರತೀಯರು ನಾಗರೀಕತೆಯ ಘಟಕ್ಕೆ ಶಿಕ್ಷಣವನ್ನು ಸೀಮಿತಗೊಳಿಸಿಕೊಳ್ಳುವುದಿಲ್ಲ. ಶಿಕ್ಷಣದಿಂದ ನಾಗರೀಕನಾಗುವುದಕ್ಕಿಂತಲೂ ಹೆಚ್ಚಾಗಿ

ಸುಸಂಸ್ಕೃತನಾಗಬೇಕು. ಹೊತ್ತು ಬಂದಂತೆ ಕೊಡೆ ಹಿಡಿಯಬೇಕಾದುದು ಲೌಕಿಕದ ಜಾಣತನ. ಆದರೆ ಶಿಕ್ಷಣದ ಹೆಗ್ಗುರಿ ಇಷ್ಟು ಮಾತ್ರವೇ ಅಲ್ಲ. ಸ್ವಾಮಿ ವಿವೇಕಾನಂದರು ಶಿಕ್ಷಣವನ್ನು ಹೀಗೆ ಸೂತ್ರೀಕರಿಸುತ್ತಾರೆ.

"Education is the manifestation of perfection (Divinity) already in man" ಪ್ರತಿಯೊಬ್ಬ ಮಾನವನಲ್ಲಿಯೂ ದೈವಾಂಶ ಇದೆ, ಸರ್ವಜ್ಞತ್ವವಿದೆ. ಆದರೆ ಮಾಯೆಯ ಮುಸುಕು ಅದನ್ನು ಮುಚ್ಚಿಹಾಕಿದೆ. ಹೃದಯಸ್ಥವಾಗಿರುವ ಸರ್ವಜ್ಞತ್ವವನ್ನು ಅಭಿವ್ಯಕ್ತಗೊಳಿಸುವುದೇ ಶಿಕ್ಷಣದ ಹೆಗ್ಗುರಿ. ಆದರೆ ಈ ಕಾರ್ಯ ಅತ್ಯಂತ ಕಷ್ಟಸಾಧ್ಯವಾದುದು. ಸ್ವಾಮಿ ವಿವೇಕಾನಂದರು ಒಂದು ದೃಷ್ಟಾಂತದ ಮೂಲಕ ಇದರ ಕ್ಲಿಷ್ಟತೆಯನ್ನು ಮನದಟ್ಟು ಮಾಡಿಕೊಂಡಿರುತ್ತಾರೆ. ಕಬ್ಬಿಣದ ಒಂದು ಪೆಟ್ಟಿಗೆ, ಅದಕ್ಕೆ ಬಾಗಿಲಿಲ್ಲ. ಅದರೊಳಗೆ ದೈದೀಪ್ಯಮಾನವಾದ ಒಂದು ರತ್ನವಿದೆ. ಅದರ ಕಾಂತಿ ಅಭಿವ್ಯಕ್ತವಾಗಬೇಕಾದರೆ ಪೆಟ್ಟಿಗೆಯನ್ನು ಉಜ್ಜಿ ಪಾರದರ್ಶಕವಾಗಿ ಮಾಡುವುದೆಂದರೆ ಎಷ್ಟು ಕಷ್ಟವೆಂಬುದು ಸ್ವಯಂವೇದ್ಯ. ಆದ್ದರಿಂದ ಶಿಕ್ಷಣದ ಹೆಗ್ಗುರಿಯಾದ ಸರ್ವಜ್ಞತ್ವವನ್ನು ಪಡೆಯುವುದು ಅಷ್ಟು ಸುಲಭವಾದ ಕಾರ್ಯವೇನೂ ಅಲ್ಲ. ಅದಕ್ಕಿರುವ ಒಂದೇ ಒಂದು ಉಪಾಯವೆಂದರೆ ಏಕಾಗ್ರತೆಯನ್ನು ಪರಿತಗೊಳಿಸುವುದು. ಎಷ್ಟೆಷ್ಟು ಏಕಾಗ್ರತೆ ಬೆಳೆಯುತ್ತದೆಯೋ ಅಷ್ಟಷ್ಟು ಸರ್ವಜ್ಞತ್ವ ಹತ್ತಿರವಾಗುತ್ತ ಹೋಗುವುದು.

ಮಾನವ ದೇಹದಲ್ಲಿರುವ ಆತ್ಮ ವಿಕಾಸಗೊಂಡು ವ್ಯಕ್ತಿಯ ಪರಿಪೂರ್ಣತೆ ಸಾಧಿತವಾದಾಗ ಆತ್ಮೋದ್ಧಾರದೊಡನೆ ಸುತ್ತುಮುತ್ತಿನ ಅಸಂಖ್ಯಾತ ಜನರ ಮೇಲ್ಮೆಯನ್ನು ಸಾಧಿಸುವುದು ಸಾಧ್ಯ. ಇದೇ ಸರ್ವಜನಾದರಣೀಯವಾದ ಜೀವನ ತತ್ವ. ಇದನ್ನು ಯಾರೂ ಯಾವಾಗಲೂ ಎಲ್ಲಿಯೂ ಅಲ್ಲವೆಂದು ಹೇಳುವಂತಿಲ್ಲ. ನರನಲ್ಲಿ ನಾರಾಯಣನನ್ನು ಆವಿರ್ಭವಿಸುವಂತೆ ಮಾಡುವುದು ಹೇಗೆ? ಸಮಾಜವೆಲ್ಲವೂ ಸುಖಮಯವಾಗಿರುವಂತೆ ಅದನ್ನು ಉತ್ತಮಪಡಿಸುವುದು ಹೇಗೆ? "ಆತ್ಮವನ್ನು ಕಳೆದುಕೊಂಡು ಇಡೀ ಬ್ರಹ್ಮಾಂಡವನ್ನು ಗೆದ್ದರೆ ಏನು ತಾನೆ ಪ್ರಯೋಜನ?" ಎಂದು ತತ್ವಶಾಸ್ತ್ರವೇತ್ತರಾದ ಡಾ॥ ರಾಧಾಕೃಷ್ಣನ್‌ರವರು ಪ್ರಶ್ನಿಸುತ್ತಾರೆ. ಜಾನ್ ಡ್ಯೂಯಿ ಎಂಬ ಶಿಕ್ಷಣ ತತ್ವಜ್ಞನಾದ ಆಂಗ್ಲೀಯನೊಬ್ಬನು ಹೀಗೆಯೇ ಹೇಳುತ್ತಾನೆ. "ನಿರ್ದಿಷ್ಟವಾದ ವೈಜ್ಞಾನಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಎದುರಿಸುವಾಗ ಮಾನವನಲ್ಲಿ ವಿಕಸನವಾಗಬೇಕಾದ ಶಕ್ತಿವಿಶೇಷಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಗುವಿನಲ್ಲಿ ಮನುಷ್ಯತ್ವವನ್ನು ಬೆಳೆಸಬೇಕು. ಆಸಕ್ತಿಯುಕ್ತವಾದ ಕುತೂಹಲ, ನಿಷ್ಪಕ್ಷವಾದ ಪ್ರತಿಕ್ರಿಯೆ, ತೆರೆದ ಮನಸ್ಸು-ಇವುಗಳ ವಿಚಾರದಲ್ಲಿ ಯುವಕನಾದವನು ತನ್ನಲ್ಲಿ ಚಾಲ್ಯವನ್ನು ಬೆಳೆಸಿಕೊಳ್ಳಬೇಕು". ಮೇಲಿನ ಶಿಕ್ಷಣ ತತ್ವಜ್ಞರ ಸೂಕ್ತಿಗಳೆರಡೂ ಒಂದು ಮತ್ತೊಂದರಷ್ಟೇ ಸತ್ಯ ಮಹಾತ್ಮಾಗಾಂಧೀಜಿ ನಮಗೆ ನೀಡಿರುವ ಮೂಲ ಶಿಕ್ಷಣದ ತಿರುಳೂ ಈ ಹೆಗ್ಗುರಿಯನ್ನೇ ಸೂಚಿಸುತ್ತದೆ.

ಮಹಾತ್ಮಾಗಾಂಧೀಜಿಯವರು ರಾಮರಾಜ್ಯವನ್ನು ಸ್ಥಾಪಿಸುವ ಕನಸು ಕಾಣು ತ್ತಿದ್ದರು. ರಾಮರಾಜ್ಯವನ್ನು ಸ್ಥಾಪಿಸುವುದರಲ್ಲಿ ನಮಗಿರುವ ಬಹುದೊಡ್ಡ ಕಷ್ಟ ವೆಂದರೆ ಜನ ಸಾಮಾನ್ಯರಲ್ಲಿ ಆತ್ಮ ಜಾಗೃತಿಗಳನ್ನು ಕೆರಳಿಸುವುದು. ಎಲ್ಲ ಕಾಲದ ಎಲ್ಲ ಸಂತರೂ ಮಾನವನ ನಡೆನುಡಿ ಚಿಂತನೆಗಳಲ್ಲಿ ತಾರ್ಕಣೆ ಇರಬೇಕೆಂದು ಹೇಳಿದ್ದಾರೆ. ಈಗಲೂ ಹೇಳುತ್ತಿದ್ದಾರೆ. ಇಂತಹ ಪ್ರಕರಣ ಶುದ್ಧಿಯನ್ನು ಸಾಧಿಸುವುದು ಎಷ್ಟು ಕಷ್ಟ ಸಾಧ್ಯವೆಂಬುದನ್ನು ಅರ್ಥ ಮಾಡಿಕೊಂಡೇ ಸುಪ್ರಸಿದ್ಧ ಪಾಶ್ಚಾತ್ಯ ನಾಟಕಕಾರ ನಾದ ಷೇಕ್ಸ್‌ಪಿಯರ್‌ನು "If to do were as easy as to know what were best to do, chaples would have been churches and poor man's cottages, palaces''. ಎಂದು ಹೇಳಿದ. ಯಾವುದು ಅತ್ಯುತ್ತಮವೆಂಬುದನ್ನು ತಿಳಿಯುವುದಷ್ಟೇ ಮಾಡುವುದು ಸುಲಭವಾಗಿದ್ದರೆ ಗೋರಿಗಳೆಲ್ಲ ಗುಡಿಯಾಗುತ್ತಿದ್ದವು. ಬಡವರ ಗುಡಿಸಲುಗಳೆಲ್ಲಾ ಅರಮನೆಗಳಾಗುತ್ತಿದ್ದವು-ಎನ್ನುತ್ತಾನೆ. ಆಧುನಿಕ ಯುಗದಲ್ಲಿ ಆಲೋಚನೆ ಎಂಬುದೇ ಒಂದು ಸಮಸ್ಯೆಯೆಂದು ಹೇಳುತ್ತಾರೆ. ಏನನ್ನು ಯೋಚಿಸಬೇಕು? ಹೇಗೆ ಯೋಚಿಸ ಬೇಕು? ಎಂಬುದೇ ಸಮಸ್ಯೆಗಳಾಗಿ ಕೂತಿವೆ. ಶ್ರೀ ಸಾಮಾನ್ಯನ ಸಾಮಾನ್ಯ ಕ್ಷೇಮವೇ ನಮ್ಮ ಚಿಂತನೆಯ ವಸ್ತುವಾಗಬೇಕು. ನಿತ್ಯ ಜೀವನದ ಸ್ಥಿತಿಗತಿಗಳು ಉತ್ತಮ ಗೊಳ್ಳುವಂತೆ ನಮ್ಮ ಕೈಲಾದಷ್ಟು ಪ್ರಯತ್ನಿಸಬೇಕು. "What is Controry to reason is also Controry to god'' ಯಾವುದು ಕಾರ್ಯಕಾರಣ ಸುಸಂಬದ್ಧವಲ್ಲವೋ ಅದು ದೈವಾನುಸಾರಿಯೂ ಅಲ್ಲ". ಎಂದು ಮಹಾಮೇಧಾವಿ ಯಾದ ಪಾಶ್ಚಾತ್ಯ ಧರ್ಮ ಗುರುವೊಬ್ಬನು ಹೇಳಿದ್ದಾನೆ. ಭಗವತ್ಪ್ರೇಮವೆಂದರೆ ನಮ್ಮ ನೆರೆಹೊರೆಯವರ ಮೇಲಿನ ಪ್ರೇಮ, ಈ ನಿತ್ಯಸತ್ಯವನ್ನು ಒಬ್ಬ ಗಣಿತಶಾಸ್ತ್ರಜ್ಞ ತನ್ನ ಶಾಸ್ತ್ರಜ್ಞಾನದ ಭಾಷೆಯಲ್ಲಿಯೇ ಅತ್ಯಂತ ಮನೋಹರವಾಗಿ ವಿವರಿಸುತ್ತಾನೆ. ಒಂದುಪರಿಧಿ, ಅದರ ಮಧ್ಯದಲ್ಲಿ ಒಂದು ಬಿಂದು ಇದೆಯೆಂದು ಇಟ್ಟುಕೊಳ್ಳೋಣ. ಮಧ್ಯ ಬಿಂದುವಿನಿಂದ ತ್ರಿಜ್ಯ ಅಥವಾ ನಾಭಿರೇಖೆಗಳೂ ಹೊರಟಿವೆ ಎಂದು ಇಟ್ಟು ಕೊಳ್ಳೋಣ. ಈ ನಾಭಿ ರೇಖೆಗಳು ಮಧ್ಯ ಬಿಂದುವಿನಿಂದ ದೂರವಾದಷ್ಟೂ ಪರ ಸ್ಪರ ಅಗಲಿ ದೂರದೂರವಾಗುತ್ತ ಹೋಗುತ್ತವೆ. ಇದನ್ನು ತಲೆ ಕೆಳಗೂ ಮಾಡಿ ಹೇಳುವುದಾದರೆ ರೇಖೆಗಳು ಬಿಂದುವಿಗೆ ಹತ್ತಿರವಾದಷ್ಟೂ ಅವು ಪರಸ್ಪರ ಸಮೀಪ ವಾಗುತ್ತವೆ. ಮಧ್ಯಬಿಂದುವನ್ನು ಪರಮೇಶ್ವರನೆಂದೂ ಪರಿಧಿಯನ್ನು ಒಂದು ಬ್ರಹ್ಮಾಂಡವೆಂದೂ, ಮಧ್ಯ ಬಿಂದುವಿನಿಂದ ಪರಿಧಿಯ ಕಡೆ ಅಥವಾ ಪರಿಧಿಯಿಂದ ಬಿಂದುವಿನ ಕಡೆ ಹೊರಡುವ ನಾಭಿರೇಖೆಗಳೇ ಮಾನವನ ಜೀವನ ಮಾರ್ಗವೆಂದು ಇಟ್ಟುಕೊಂಡರೆ ಹೇಗಾಗುತ್ತದೆ ನೋಡಿ? ಮಧ್ಯ ಬಿಂದುವನ್ನು ಅಥವಾ ಭಗವಂತನನ್ನು ಸೇರಬಯಸಿದರೆ ಅದರ ಸಮೀಪಕ್ಕೆ ಬರುತ್ತಾ ಬರುತ್ತಾ ಜಗತ್ತಿನ ಉಳಿದ ಜೀವರಾಶಿ ಗಳೊಡನೆಯೂ ಸಮೀಪಕ್ಕೆ ಬಂದಂತಾಗುತ್ತದೆ. ಹಾಗೆಯೇ ಆ ಬಿಂದು ರೂಪದ ದೇವ

ರಿಂದ ಹಿಂದೆ ಸರಿಯುತ್ತಾ ಹೋದಂತೆ ಜಗತ್ತಿನ ಜೀವರಾಶಿಯಿಂದಲೂ ದೂರವಾದು ತಾಗುತ್ತದೆ. ಹೀಗಿದೆ ಪ್ರೇಮ ಸ್ವರೂಪ. ನಾವು ದೇವರನ್ನು ಪ್ರೀತಿಸದೆ ದೂರವಾದಷ್ಟೂ ನಮ್ಮ ನೆರೆಹೊರೆಯವರಿಂದಲೂ ದೂರವಾಗುತ್ತೇವೆ. ನಾವು ದೇವರನ್ನು ಪ್ರೇಮಿಸುವುದಾದರೆ. ಆತನಿಗೆ ಹತ್ತಿರವಾದಷ್ಟೂ ನೆರೆಹೊರೆಯವರಿಗೂ ಹತ್ತಿರರಾಗುತ್ತೇವೆ. ಅವರೊಡನೆ ನಮ್ಮ ಸಂಪರ್ಕ ನಿಕಟವಾದಷ್ಟೂ ದೇವರಿಗೂ ನಿಕಟವರ್ತಿಗಳಾಗುತ್ತೇವೆ.

ನಮ್ಮ ಮನಃ ಪ್ರವೃತ್ತಿ ಎಂತಹದೆಂಬುದು ಇದರಿಂದ ಅರ್ಥವಾಗುತ್ತದೆ. ಶಿಕ್ಷಣದ ಉದ್ದಕ್ಕೂ ನಾವು ಆಧ್ಯಾತ್ಮಿಕ ಮತ್ತು ವೈಜ್ಞಾನಿಕ ರೀತಿಯ ಚಿಂತನೆಯನ್ನು ಬೆಳೆಸಬೇಕು. ಎರಡೂ ಸಮರಸವಾಗಿ ಬೆರೆತಾಗ ಇಹಪರಗಳೆರಡರ ಸಾಧನೆಯೂ ಸಾಧ್ಯವಾಗುತ್ತದೆ. ಈ ಹೆಗ್ಗುರಿಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ಡಾ॥ ರಾಧಾಕೃಷ್ಣನ್‌ರವರು ವಿಶ್ವವಿದ್ಯಾನಿಲಯದ ಸಮಿತಿಯಲ್ಲಿ ಅಧ್ಯಕ್ಷರಾಗಿ ಹೀಗೆ ಹೇಳುತ್ತಾರೆ. "The purpose of all education, it is admitted by thinkers of east and west, is to provide a coharant picture of universe and an integrated way of life, We must obtain, through it sense of perspective, a synoptic vision. A Samanvaya of the different items of knowledge. Man cannot live by a mass of disconnected information. He has a passion for an ordered intellectual vision of the connected things. So we must aim at a knowledge of life as a whole, ಪ್ರಾಚ್ಯ ಮತ್ತು ಪಾಶ್ಚಾತ್ಯ ವಿದ್ವಾಂಸರು ವಿಶ್ವದ ಸಮಗ್ರ ಚಿತ್ರಣವೇ ಶಿಕ್ಷಣದ ಹೆಗ್ಗುರಿ ಎಂದು ಹೇಳುತ್ತಾರೆ. ಸಹಬಾಳ್ವೆಯ ಜೀವನ ಮಾರ್ಗವನ್ನು ಒದಗಿಸಿದಾಗ ಮಾತ್ರ ಶಿಕ್ಷಣ ಸಾರ್ಥಕವಾದಂತಾಗುತ್ತದೆ. ಸುಸಂಬದ್ಧವಾದ ಜ್ಞಾನ, ಸಮಷ್ಟಿ ದೃಷ್ಟಿ, ಅರಿವಿನ ಸಮನ್ವಯ--ಇಂತಹ ಅಖಂಡ ಜೀವನದ ಪರಿಜ್ಞಾನವೇ ನಮ್ಮ ಶಿಕ್ಷಣದ ಗುರಿಯಾಗಬೇಕು.

ಪ್ರಾಚೀನ ಕಾಲದ ನಮ್ಮ ಗುರುಗಳು ಪಠ್ಯ ವಿಷಯಗಳೊಡನೆ ಪ್ರಜ್ಞೆಯನ್ನೂ ನೀಡುತ್ತಿದ್ದರು. ಉಪನಿಷತ್ತು ಹೇಳುವಂತೆ ಬರಿಯ ಪುಸ್ತಕ ಜ್ಞಾನ ಸಾಲದು, ಆತ್ಮಜ್ಞಾನವೂ ಬೇಕು. ಶಿಕ್ಷಣವೆಂಬುದು ಮನಸ್ಸನ್ನು ಮಾತ್ರವೇ ಅಲ್ಲದೆ ಆತ್ಮವನ್ನೂ ಸಂಸ್ಕರಿಸಬೇಕು. ಆದ್ದರಿಂದ ಪುಸ್ತಕ ವಿದ್ಯೆ, ಪ್ರಜ್ಞೆಗಳೆರಡನ್ನೂ ಶಿಕ್ಷಣದಿಂದ ಪಡೆಯಬೇಕು.

ಚೆನ್ನಾಗಿ ವಿವೇಚಿಸಿ ತಯಾರಿಸಿದ ಶಿಕ್ಷಣ ಕ್ರಮದಲ್ಲಿ ಎಲ್ಲ ಮಟ್ಟದ ಎಲ್ಲ ವಿದ್ಯಾರ್ಥಿಗಳಲ್ಲಿಯೂ ಅವರ ಚಿಂತನಾಶಕ್ತಿ, ಕಲಾಶಕ್ತಿ, ಉದ್ಯೋಗ ಶಕ್ತಿಗಳ ಕಾರ್ಯರೂಪಕ್ಕೆ ಅನುವಾಗುವಂತೆ ಏರ್ಪಾಟಾಗಬೇಕು. ಜಾಣನಾದ ಉಪಾಧ್ಯಾಯನು ತನ್ನ ಪ್ರತಿಯೊಬ್ಬ ವಿದ್ಯಾರ್ಥಿಯ ಬುದ್ಧಿಶಕ್ತಿಯನ್ನು ಅರಿಯಬಲ್ಲ ಸೂಕ್ಷ್ಮಬುದ್ಧಿಯುವನಾಗಬೇಕು. ಪ್ರತಿಯೊಬ್ಬ ವಿದ್ಯಾರ್ಥಿಯೂ ಚಿಂತನಶೀಲನಾಗ ಬೇಕು, ಕಲಾಭಿಮಾನಿಯಾಗಬೇಕು, ಶ್ರಮಜೀವಿಯಾಗಬೇಕು. ಚಿಂತನಾ ಜೀವಿಯಾದರೆ ತತ್ತ್ವಜ್ಞಾನ, ವಿಜ್ಞಾನ, ಗಣಿತಶಾಸ್ತ್ರ, ಭಾಷಾಶಾಸ್ತ್ರಗಳಲ್ಲಿ ತಜ್ಞನಾಗುತ್ತಾನೆ; ಕಲಾ ಜೀವಿಯಾದರೆ ಸಾಹಿತ್ಯ, ಸಂಗೀತ, ಚಿತ್ರ, ಶಿಲ್ಪ. ಇತ್ಯಾದಿ ಕುಶಲ ಕಲೆಗಳಲ್ಲಿ ತಜ್ಞ ನೆನಿಸುತ್ತಾನೆ.. ಕಾಯಕ ಪ್ರೇಮಿಯಾದರೆ ಯಂತ್ರ, ಕಾರ್ಖಾಗಾರ, ವಾಸ್ತು ಶಿಲ್ಪಾದಿ ಗಳಲ್ಲಿ ಪರಿಣಿತನೆನಿಸುತ್ತಾನೆ. ಮಕ್ಕಳ ಪ್ರತಿಭೆ, ಪಾಂಡಿತ್ಯ, ಶಕ್ತಿ ಸಾಮರ್ಥ್ಯಗಳಿಗೆ ತಕ್ಕಂತೆ ಜೀವನದಲ್ಲಿ ಪ್ರವೇಶಿಸಲು ಮುಕ್ತಾವಕಾಶವಿರಬೇಕು. ಕೇವಲ ನಾಗರೀಕತೆಯ ಗಾಣಕ್ಕೆ ಒದಗಿಸುವ ಸಾಮಗ್ರಿಯಾಗಲೀ, ರಾಜಕೀಯ, ಯಾಂತ್ರಿಕ ಜೀವನವಾಗಲೀ ನಮ್ಮ ಹೆಗ್ಗುರಿಯಲ್ಲ. ಶಿಕ್ಷಣದ ಪ್ರಮುಖ ಕಾರ್ಯವೆಂದರೆ, ವ್ಯಕ್ತಿಯ ನಡತೆಯನ್ನು ತಿದ್ದಿ ಉತ್ತಮಗೊಳಿಸಿ, ಆತನ ವ್ಯಕ್ತಿತ್ವ ಸಂಪೂರ್ಣವಾಗಿ ಅರಳುವಂತೆ ಮಾಡತಕ್ಕದು. ಶಾಲೆಯಲ್ಲಿ, ಹೊರಗಡೆಯಲ್ಲಿ, ಮನೆಯಲ್ಲಿ, ಗುಡಿ, ಮಸೀದಿ, ಚರ್ಚುಗಳಲ್ಲಿ ಅಥವಾ ಅಂಗಡಿ ಬೀದಿಯಲ್ಲಿ ನಮ್ಮ ಶಿಕ್ಷಣದ ಪ್ರಭಾವ ಮಗುವಿನಲ್ಲಿ ಅಭಿವ್ಯಕ್ತಗೊಳ್ಳುವಂತೆ ನಡತೆ, ನಡವಳಿಕೆಗಳು ರೂಪುಗೊಳ್ಳಬೇಕು. ತಂದೆಯಾಗಲೀ, ಉಪಾಧ್ಯಾಯನಾಗಲೀ, ಅಧಿಕಾರಿಯಾಗಲೀ ಸದಾ ಇದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. ಹೀಗಾದಾಗ ಮಾತ್ರ ಶಿಕ್ಷಣವು ಸಾರ್ಥಕವೆನಿಸುತ್ತದೆ.

ಶಿಕ್ಷಣಕ್ಕೆ ಪೌರಾಣಿಕವಾದ ಹಿನ್ನೆಲೆ

ವಿದ್ವಾನ್ ಕೆ. ವೆಂಕಟರಾಮಾಚಾರ್ಯ
ಸುರತ್ಕಲ್ಲು

ಭಾರತೀಯ ಗ್ರಂಥಗಳಲ್ಲಿ ಹಿರಿದಾದ ವೇದದ ಅಭ್ಯಾಸ 'ಶಿಕ್ಷಾ ವ್ಯಾಕರಣ ಛಂದಸ್ಸು ನಿರುಕ್ತ' ಇತ್ಯಾದಿ ಷಡಂಗಗಳಿಂದ ಕೂಡಿರುತ್ತದೆ. ಅದರಲ್ಲೂ 'ಶಿಕ್ಷಾ'ಧ್ಯಯನವೇ ಮೊದಲಿಗೆ ಹೇಳಿದೆ. ಅದರಮೊದಲ ಸಾಲು ಹೀಗಿದೆ.

'ಅಥ ಶಿಕ್ಷಾಂಪ್ರವಕ್ಷ್ಯಾಮಿ ಪಾಣಿನೀಯಂ ಮತಂಯಥಾ ।
ಶಾಸ್ತ್ರಾನುಪೂರ್ವಂ ತದ್ವಿದ್ಯಾತ್ ಯಥೋಕ್ತಂ ಲೋಕವೇದಯೋಃ ॥'

ಲೋಕದಲ್ಲಿ ಹಾಗೂ ವೇದದಲ್ಲಿ ಹೇಳಿದ ಅಕ್ಷರಗಳ ಉಚ್ಚಾರ ಕ್ರಮಗಳು ಇಲ್ಲಿ ಹೇಳಿವೆ. ಆವನೊಬ್ಬನು ತನ್ನ ಭಾವವನ್ನು ಬೇರೆಯವರಿಗೆ ನಿವೇದಿಸಲು ಅಕ್ಷರಗಳ ಮೂಲಕ ಪ್ರಯುಕ್ತಿಸುತ್ತಾನೆ. ಆಗ ಅಕ್ಷರಗಳ ಹುಟ್ಟು, ಬೆಳವಣಿಗೆಗಳ ಬಗೆಗಳು ಸರಿಯಾಗಿ ತಿಳಿದರೆ, ಭಾಷೆಯ ಸ್ಪಷ್ಟತೆಯಾಗುತ್ತದೆ. ಆ ಮೇರೆಗೆ, ಎಲ್ಲಕ್ಕೂ ಮೊದಲಾಗಿ ಶಿಕ್ಷಣದ ಕ್ರಮ ಹೇಳಿದೆ !

'ಶಿಕ್ಷ=ವಿದ್ಯೋಃ ಪಾದಾನ'ವೆಂಬ ಮೂಲಧಾತುವಿಂದ ಶಿಕ್ಷಾ, ಶಿಕ್ಷಣವೆಂಬ ನುಡಿಗಳೆರಡು ಉತ್ಪತ್ತಿಯಾದುವು ! 'ಶಿಕ್ಷಿತ'ನೆಂದರೆ 'ಪ್ರವೀಣ'ನೆಂದು ಅರ್ಥವಿದೆ. (ಅಮರ ಕೋಶ). ಇದಕ್ಕೆ 'ಶಿಕ್ಷಕ'ನೊಬ್ಬನ ಆವಶ್ಯಕತೆಯಿದೆಯೆಂದು ಬೇರೆ ಹೇಳಬೇಕಾಗಿಲ್ಲ!

'ಶಿಕ್ಷಣ'ವೆಂದರೆ 'ಕಲಿಕೆ'ಯೆಂದು ಕನ್ನಡದ ಅರ್ಥವಿದೆ. (ಶಿಕ್ಷೆಯೆಂದರೂ ಶಿಕ್ಷಣವೆಂದು ಇಲ್ಲಿ ಹೇಳಿದೆ. ಈ ಶಿಕ್ಷೆಯೆಂಬುದು ದಂಡವೆಂದರೆ ಅಪರಾಧಿಗೆ ವಿಧಿಸುವ ಚರ್ಯೆಯೆಂದೂ ಬೇರೆಯಿದೆ, ಅದು ಅಪ್ರಕೃತವೆಂದೇ ಗಮನಿಸಬೇಕು !)

ವಿದ್ಯಾರ್ಜನೆಯಲ್ಲಿ ಎರಡು ಬಗೆಯಿದೆ. ಇದ ಲೋಕದ ಜೀವಿಕೆಗೆ ಬೇಕಾದ ಕಸುಬು (ಕೆಲಸ)ಗಳ ವಿಧಾಯಕ ಕ್ರಮಗಳ ಅಭ್ಯಾಸಕ್ಕೆ 'ಪರಾವಿದ್ಯಾ' ಎಂದು ಹೆಸರಿದೆ. ಇದರಿಂದಾಗಿ, ಬಾಳಿನಲ್ಲಿ ಪ್ರೇಯಸ್ಸು (ಸುಖ) ಉಂಟಾಗುತ್ತದೆ. ಪ್ರತಿಯೊಬ್ಬನಿಗೂ

ಜೀವನದಲ್ಲಿ ಹಲವಾರು ಬಗೆಗಳ ವಸ್ತುಗಳ ಅವಶ್ಯಕತೆಯಿದೆ. ಆ ಅವಶ್ಯಕತೆಗಳು ಕೇವಲ ತನ್ನೊಬ್ಬನಿಂದಲೇ ಪೂರೈಸಲಾಗದು! ಆ ಬಗೆಗಳನ್ನು ಇತರರ ನೆರವಿನಿಂದ ಪಡೆಯಬೇಕು. ಸಮಾಜದಲ್ಲಿ ಹಲವಾರು ವೃತ್ತಿ (ಕಾಯಕ)ಗಳನ್ನು ಕೈಗೊಂಡವರು ಪರಸ್ಪರ ಸಮರಸದಿಂದ ವ್ಯವಹರಿಸಿದರೆ ಸಾಮಾಜಿಕ ಸುಖವಾಗಬಲ್ಲದು. ಬುದ್ಧಿ ಜೀವಿಯಾಗಿರುವ ಮಾನವನು ಕಾಲ ಕಾಲಕ್ಕೆ ತಕ್ಕಂತೆ ಹಲವಾರು ಉದ್ಯಮಗಳನ್ನು ಪ್ರವರ್ತಿಸುವುದುಂಟು: ಆಗಲೂ ಹಲವರ ಸಹಯೋಗವಿರಲೇಬೇಕು. ಸಮಾಜ ಪ್ರಿಯವಾದುದನ್ನು ಸಮಾಜದ ಪ್ರಗತಿಗೆ ಬೇಕಾದುದನ್ನು ಪ್ರತಿಯೊಬ್ಬನೂ ಕೈಗೊಳ್ಳು ವುದೇ ದೇಶದ ಮೇಲ್ಮೆಗೆ ಮೂಲವಾಗಿ ಇರುತ್ತದೆ. ಅಪೂಂದು ಕೆಲಸವೂ ಹುಟ್ಟಿ ನಿಂದಲೇ ನಮಗೆ ತಿಳಿದಿರುವುದಿಲ್ಲ ಅದನ್ನು ಕುರಿತು ಬಲ್ಲವರ ನೆರವು ಶಿಕ್ಷಣ ರೂಪದಲ್ಲಿ ಒದಗಬೇಕು. 'ಉದ್ಯಮೇನ ಹಿ ಸಿ ದ್ಯಂತಿ ಕಾರ್ಯಾಣಿ, ನ ಮನೋರಥೈ ; ಎಂಬಲ್ಲಿ, ತನ್ನ ಕಾರ್ಯದ (ಸಂಪತ್ತಿನ) ಆಸೆಯಿಂದಲೆ ಅದು ಸಿದ್ಧಿಯಾಗಲಾರದು. ಅದನ್ನು ನಿಯತವಾಗಿ ಸಾಧಿಸಿದರೆ, ಉದ್ಯಮಿಸಿದರೆ ಮಾತ್ರ ಸಫಲವಾಗುವುದೆಂದು ಆಂತರಿಕ ವಾಗಿ ಹೇಳಿದೆ !

ಇನ್ನು ಪರಲೋಕದಲ್ಲಿ (ತೀರಿದ ಮೇಲೆ) ಸುಖಪೊದಗಲು, ಪರಾತ್ಪರ ಶಕ್ತಿಯ ಹಾಗೂ ತನ್ನ (ಆತ್ಮದ) ಸಂಬಂಧವೇನು ಇತ್ಯಾದಿ ವಿಚಾರಗಳನ್ನು ತಿಳಿಸುವ ವಿಧಾನವು (ಜ್ಞಾನವು) 'ಅಪಾರ ವಿದ್ಯಾ' ಎನ್ನಲಾಗುತ್ತದೆ. ಆ ಸುಖ ಸಾಧನೆಗೆ 'ಶ್ರೇಯಸ್ಸು' ಎಂದು ಹೆಸರಿದೆ! ಇಹದಲ್ಲಿ ಸಮಾಜದವರೊಂದಿಗೆ ಬೆರೆತು. ಸಮಾಜದ ಹಾಗೂ ಆತ್ಯಂತಿಕ ವಾದ ನಿಚ್ಚಳ ಸುಖವನ್ನು ಸಾಧಿಸುವುದರಿಂದ, ಪರಲೋಕ ಸುಖಕ್ಕೂ ಮುಳುವಾಗು ತ್ತದೆ. 'ಇಹ-ಪರ'ಗಳೆರಡೂ ಸುಖ ಸಾಮ್ರಾಜ್ಯದ ಇಬ್ಬಗೆಗಳಾದ ನೆಲೆಗಳಾಗಿವೆ. ಒಂದು ಇನ್ನೊಂದರ ವಿರುದ್ಧವಾಗದು, ಇವುಗಳ ಸಮನ್ವಯ -ಸಮತೋಲನ-ನಮ್ಮಲ್ಲಿರುವುದ ರಿಂದಲೆ ನಾವು ಪೂರ್ಣ ಸಾರ್ಥಕ ಜೀವಿಗಳಾಗುತ್ತೇವೆ !

ಪ್ರಸ್ತುತ, ಈ ವಿದ್ಯಾರ್ಜನೆ (ಶಿಕ್ಷಣ) ಪುರಾಣಕಾಲದಲ್ಲಿ ಹೇಗಿತ್ತು ? ಅದು ಇಂದಿನ ವಿದ್ಯೆಗೆ ಹೇಗೆ ಹಿನ್ನೆಲೆಯಾಗಿದೆ? ಎಂಬೀ ವಿಚಾರ ತುಸು ವಿವರಿಸಬೇಕು !

ಗುರುಕುಲ :

ಶಿಕ್ಷಣಕ್ಕೊಬ್ಬ ಗುರುವೇ ಮೊದಲಿಗನು. ಕಲಿಕೆಗೆ ಕಲಿಯುವವನಿಗೆ-ಕಲಿಸುವ ವನು ಮೂಲವಾಗಿದ್ದಾನೆ. ಈ ಗುರು-ಆಚಾರ್ಯನು ವಿದ್ಯಾರ್ಥಿಗೆ ದೇವರೆ ಆಗಿದ್ದಾನೆ. "ಮಾತೃ ದೇವೋಭವ, ಪಿತೃ ದೇವೋಭವ" ಎಂಬ ಉಪನಿಷತ್ತಿನ ಮಾತಿನಲ್ಲಿ ಜೀವಿಯ ಜೀವಿತದಲ್ಲಿ ತಾಯಿ-ತಂದೆಯರಲ್ಲಿ ದೇವತ್ವವನ್ನು ಕಾಣಬೇಕೆಂದಿದೆ. ಜೀವಿಯು

ಹುಟ್ಟಿಗೆ ತಾಯಿ ತಂದೆಯರೇ ಕಾರಣರಾಗಿದ್ದಾರೆ. ಜೀವಿ ತನ್ನ ಪೂರ್ವಜನ್ಮದ ಕರ್ಮಫಲಾನುಸಾರವಾಗಿ ಆ ತಾಯಿ ತಂದೆಯರಲ್ಲಿ ಜನಿಸುವನು. ಅವರು ನಿಮಿತ್ತ ಕಾರಣರಾದರೂ, ಆ ಮಗುವಿನ ಜನನಕ್ಕೆ ಕರ್ತರೇ ಆಗುತ್ತಾರೆ. ಆ ಮಗುವೂ ಬಾಲ್ಯದಲ್ಲಿ ತಾಯಿ-ತಂದೆಯರಿಂದ (ಅಥವಾ ಬೇರೆ ಪೋಷಕರಿಂದ) ಬೆಳೆಯುತ್ತಾನೆ. ಬಾಲ್ಯದಲ್ಲಿ ಮನೆಯೇ ಮಕ್ಕಳ ವಿದ್ಯಾಮಂದಿರವಾಗಿದೆ. ಆ ಮಗುವು ಮನೆಯವರಂತೆ ಮಾತಾಡಲು, ವ್ಯವಹರಿಸಲು, ಆಡಲು ಕಲಿಯುತ್ತದೆ. ಆದರೆ, ಬಾಲ್ಯ ದಾಟಿದಾಗ, ಅಕ್ಷರಾಭ್ಯಾಸದಿಂದ (ಮಾತಿನ ವ್ಯವಹಾರದಿಂದ) ಹಲವಾರು ಕಾಯಕಗಳನ್ನು ಕಲಿಯಬೇಕು !

ಕೆಲವೆಡೆ ಮಕ್ಕಳಿಗೆ ತಕ್ಕ ವಿದ್ಯಾಭ್ಯಾಸಕ್ಕವಯಿಲ್ಲದೆ, ಹಿರಿಯರ ಮುದ್ದಿನಿಂದಾಗಿ ಕೇವಲ ಬೊಂಬೆಯ ಹಾಗೆ ಬೆಳೆಯುವುದುಂಟು. ವಯಸ್ಸು ತುಂಬಿದಾಗ. ತನ್ನ ಓರಗೆಯವರು ವಿದ್ಯಾರ್ಜನೆಯಿಂದ ಚುರುಕಾಗಿರುವುದನ್ನು, ಹಲವಾರು ಬಗೆಯ ಕಾಯಕಗಳಿಂದ ಸಂಪಾದಿಸುವುದನ್ನು ಕಂಡಾಗ, ಆ ಮಗುವು ಖಿನ್ನನಾಗುವನು. ಆಗ, ಆಮೇಲೂ, ಅದೃಷ್ಟವಶಾತ್. ಗಟ್ಟಿಗನಾಗಿರಬಹುದು! ಆದರೆ. ವಿದ್ಯಾರ್ಜನೆಯಿಲ್ಲದಿದ್ದರೆ ಆತನ ಜೀವಿಕೆಯೇ ನಿಷ್ಫಲವೆನ್ನಬೇಕು. 'ಶ್ರುತಿ-ಸ್ಮೃತಿಗಳೆರಡು ಕಣ್ಣುಗಳು: ಇದರಲ್ಲಿ ಒಂದನ್ನು ಕಲಿಯದವನು 'ಕಾಣ (ಒಕ್ಕಣ್ಣ)'ನೆಂದೂ, ಎರಡನ್ನೂ ಕಲಿಯದವನು 'ಅಂಧ (ಕುರುಡ)ನೆಂದೂ ಹೇಳಿದ ಪ್ರಾಚೀನ ವಾಕ್ಯ ಸ್ಮರಣೀಯವಾಗಿದೆ! ಅಂತೆಯೆ ವಿದ್ಯೆಯನ್ನು ಹೇಳುವ ಗುರುವು ಮಗುವಿಗೆ ಮೂರನೆಯ ದೇವರಾಗಿದ್ದಾನೆ. ಆದ ಕಾರಣ 'ಆಚಾರ್ಯ ದೇವೋಭವ' ಎಂದು ಆ ಉಪನಿಷತ್ತಿನಲ್ಲಿ ಹೇಳಲಾಗಿದೆ. ಗುರುಕುಲದಲ್ಲಿ ಮಗು ಸೇರಿ, ಅಲ್ಲಿಯವರೊಂದಿಗೆ ಗುರುವಿನ ದಿನಚರಿಯಲ್ಲಿ ಸಹಚರಿಯಾಗಿರಬೇಕು. ಆಗ, ಹಲವಾರು ನಡತೆಗಳ ತಿದ್ದುಪಾಡುಗಳು ಮಗುವಿಗೆ ದೊರೆಯುತ್ತವೆ! ಗುರುಕುಲದ ಬಗಗೆ ಕೆಲವು ವಿವರಣೆಗಳು ತಿಳಿಯಬೇಕು: "ಬಾಲ್ಯದಲ್ಲಿ ಸ್ಮರಣ ಶಕ್ತಿಯನ್ನು, ಅನಂತರ ವಿವೇಚನಾ ಶಕ್ತಿಯನ್ನು ದೃಢಪಡಿಸುವುದೇ ಪ್ರಾಚೀನ ವಿದ್ಯಾಭ್ಯಾಸ ಪದ್ಧತಿಯ ಧ್ಯೇಯವಾಗಿದ್ದಿತು. ಚೂಡಾಕರ್ಮವಾದ ನಂತರ ಅಕ್ಷರಾಭ್ಯಾಸವು ಆರಂಭವಾಗಿ **ಎಂಟು ವರ್ಷದೊಳಗೆ** ಓದು, ಬರಹ, ಸಾಮಾನ್ಯ ಗಣಿತ, ನಿಘಂಟು, ವ್ಯಾಕರಣ ಶಬ್ದಗಳೇ ಮುಂತಾದ **ಬಾಲ ಶಿಕ್ಷೆಯು ದೇಶಭಾಷೆಯ ಮೂಲಕ ನಡೆಯುತ್ತಿದ್ದಿತು**".

ಬಾಲ ಶಿಕ್ಷೆಯಿಂದರ ಸಾಮಾನ್ಯ ಜ್ಞಾನದ ಮೂಲ ಪಾಠಗಳಾಗಿರುವವು. ಅನಂತರ, ಆಯಾ ಜಾತ್ಯನುಸಾರವಾದ ಅಥವಾ ಅಭಿರುಚಿಗೆ ತಕ್ಕ ಘನವಿದ್ಯೆಗಳು ನಡೆಯಬೇಕು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರರಿಗೆ ಬೇರೆ ಬೇರೆ ತರಹದ ಪಾಠಗಳು ಸಲ್ಲುತ್ತವೆಯೆಂದು ತಿಳಿಯಬಹುದು! ಬ್ರಾಹ್ಮಣನಿಗೆ ವೈದಿಕ ವಿಚಾರದ ಬಲು ಹೆಚ್ಚಿರಬೇಕು, ಕ್ಷತ್ರಿಯನಿಗೆ ಶಸ್ತ್ರವಿದ್ಯೆಯೇ ಮೇಲಾದುದು. ವೈಶ್ಯರಿಗೆ ಕೃಷಿ ಗೋರಕ್ಷ ವಾಣಿಜ್ಯಗಳೇ ಮುಖ್ಯವಾದುವು. ಶೂದ್ರರಿಗೆ ಕೈ ದುಡಿತದ ಕೆಲಸಗಳ

ಪರಿಚಾರಿಕೆಯು ಬಗೆ ತಿಳಿಯಬೇಕು. ಆಯಾ ಮತೀಯ (ಜಾತಿಯ) ಸ್ತ್ರೀಯರೂ ಇವರೆಲ್ಲಾ ವಿದ್ಯಾಭ್ಯಾಸ ಪಡೆದಿರಬೇಕು. (ವಿವಾಹಕ್ಕಾಗಿ ಕನ್ಯೆಯನ್ನು ಪರೀಕ್ಷಿಸುವಲ್ಲಿ ವಿದ್ಯಾಭ್ಯಾಸವೂ ಪರಿಗಣನೀಯವಾಗಿತ್ತು !) ಕ್ಷತ್ರಿಯ ಕನ್ಯೆಯು ಶಸ್ತ್ರಾಭ್ಯಾಸಾದಿಗಳನ್ನು ಕಲಿಯುತ್ತಿದ್ದಳು. ಸಂದರ್ಭೋಚಿತವಾಗಿ ಯುದ್ಧಕ್ಕೂ ಸಿದ್ಧಳಾಗಿರಬೇಕೆಂದು ಪುರಾಣ ಕತೆಗಳಿಂದ ವಿದಿತವಿದೆ: ಪ್ರಮಿಳೆಯು ಅರ್ಜುನನಲ್ಲಿ ಹೋರಾಡಿದಳೆಂದು ಅಶ್ವಮೇಧ ಪರ್ವದಲ್ಲಿ ಹೇಳಿದೆ. ಗಯಾಶ್ರಾದ್ಧವನ್ನು ಮಾಡಿ ಪಿತೃಗಳನ್ನು ಉದ್ಧರಿಸಿದ ಶಬರಿಯೂ ಅಶ್ವಮೇಧಕ್ಕಾಗಿ ಸಂಚರಿಸಿ ಹೋರಾಡಿದಳೆಂದು 'ಶುಕಸಪ್ತತಿ' ಕತೆಯಲ್ಲಿದೆ ! ಪರಂತು, ಗಂಡುಮಕ್ಕಳು, ಹೆಣ್ಣುಮಕ್ಕಳೂ ಪ್ರತ್ಯೇಕವಾಗಿಯೆ ವಿದ್ಯಾಭ್ಯಾಸ ಪಡೆಯುತ್ತಿದ್ದರೆಂದು ಕಾಣಬಹುದು. ಹೆಣ್ಣು ಮಕ್ಕಳಿಗೆ ಲಲಿತಕಲೆಗಳು, ಪಾಕಶಾಸ್ತ್ರಗಳು ಅಗತ್ಯವೆಂದೂ ಇರುವುದು !

ಪ್ರಹ್ಲಾದನ ತಾಯಿಗೆ ನಾರದನು ಭಕ್ತಿವಿಚಾರ ತಿಳಿಯಹೇಳಿದನೆನ್ನುವಲ್ಲಿ, ಆಕೆ ಅದನ್ನು ತಿಳಿಯುವಷ್ಟು ಪ್ರೌಢೆ (ಪ್ರಬುದ್ಧೆ) ಯಾಗಿದ್ದಾಳೆಂದೇ ಅರ್ಥವಾಗುತ್ತದೆ ! ಜೈಮಿನಿ ಭಾರತ (ಸಂಸ್ಕೃತ)ದ ಕೊನೆಗೆ ಹಲವಾರು ತಿಂಡಿಗಳ ಹೆಸರಿಕೆಯಿರುವುದರಿಂದ, ಪಾಕಶಾಸ್ತ್ರವ ಬಲ್ಲವರು ತರತರದ ಸಿಹಿ, ಖಾರಗಳ ತಿಂಡಿಗಳನ್ನು ತಯಾರಿಸುವರೆಂದು ಹೇಳಲಡ್ಡಿಯಿಲ್ಲ. ಸೀತಾದೇವಿಯು ರಣರಂಗದಲ್ಲಿ ಹೋರಾಡಿ, ರಾಮನಿಂದಲೂ ಗೆಲ್ಲಲಾಗದ ಸಹಸ್ರಕಂಠ ರಾವಣನನ್ನು ಕೊಂದಳೆಂದು ಅದ್ಭುತ ರಾಮಾಯಣದಲ್ಲಿದೆ. ಪುರಾಣಕಾಲದ ಸ್ತ್ರೀಯರಿಗೆ ದೈವಭಕ್ತಿ, ಪಾಕಶಾಸ್ತ್ರ ವಿಧಾನ ಮತ್ತು ಅನೇಕ ಶಸ್ತ್ರಾಸ್ತ್ರಗಳ ಪರಿಜ್ಞಾನವಿತ್ತೆಂಬುದು ಇಲ್ಲಿ ವಿದಿತ !

ಸ್ತ್ರೀಯರೇ ದೈವಿಕ ಪೂಜೆಯನ್ನು ನಿರ್ವಹಿಸುವುದೂ ವ್ಯಾಸಭಾಗವತದಲ್ಲಿ ಹೇಳಿದೆ. ಹೋಮ, ಪೂಜಾದಿಗಳಲ್ಲಿ ವಿವಾಹಿತ ಸ್ತ್ರೀಯು ಪುರುಷನೊಂದಿಗೆ ಸಹಧರ್ಮಿಣಿಯಾಗಿರಬೇಕು, ಆಕೆ ಪುರುಷನಂತೆ ವ್ರತನಿಷ್ಠೆಯಲ್ಲಿರಬೇಕೆಂದು ಹೇಳಿದೆ. ಅಶ್ವಮೇಧಯಾಗ ಮಾಡುವವನು ಒಂದು ವರ್ಷದಲ್ಲಿ ಹೆಂಡತಿಯೂ ತಾನು ಒಂದೆಡೆ ನಿದ್ರಿಸಿದ್ದರೂ, ಇಂದ್ರಿಯನಿಗ್ರಹವಂತರಾಗಿರಬೇಕೆಂದು (ಅಸಿಧಾರಾವ್ರತ) ಮನನೀಯ ! ಆವ ಪತಿಯೂ, ಪತ್ನಿಯೂ ಧಾರ್ಮಿಕ ಪೂಜಾದಿ (ಹೋಮಾದಿ)ಗಳಲ್ಲಿ ಸಮಾನಾಚರಣರಾಗಿರಬೇಕೆಂದು ಅರ್ಥವಾಗುತ್ತದೆ.

ರಾಜದಂಪತಿಗಳು ಬಲುನಿಷ್ಠೆಯಿಂದ ಸದಾ ಕೂಡಿರಬೇಕು. ಗರ್ಭದಿಂದ ಮಗು ಭೂಮಿಗೆ ಜನಿಸಿದ ಮೇಲೆ ಗ್ರಹಕುಂಡಲಗಳನ್ನು ಬರೆಯಿಸಿ, ಮಗುವಿನ ಜೀವನದ ಫಲಾಫಲಗಳನ್ನು ತಿಳಿಯುವುದುಂಟು. ಅಂತೆ, ಗರ್ಭಧಾರಣೆಯ ಮುಹೂರ್ತದ ಫಲವೂ ಆ ದಂಪತಿಗಳಿಗೆ (ಮಗುವಿಗೆ) ಒದಗುತ್ತದೆಯೆಂದು ವಿಶೇಷತಃ ಹೇಳಿದೆ. ಶ್ರೀರಾಮನಿಂದ ಸೀತೆ ಗರ್ಭ ಧರಿಸಿದ ಮುಹೂರ್ತದಿಂದ ಆಕೆ ಅಂತಃಪುರ

ದಿಂದ ಹೊರಗೆ (ಬೇರೆಡೆ) ಪ್ರಸವಿಸುವಳೆಂಬ ಫಲಶ್ರುತಿ ಹೇಳಿದೆ. (ಲಕ್ಷ್ಮೀಶನ ಜೈ.ಭಾ ಕೃತಿಯ 'ಶ್ರೀರಾಮಾಶ್ವಮೇಧ' ನೋಡಿರಿ).

"ನಕ್ಷತ್ರೇ ವೈಷ್ಣವೇ ತುರ್ಯೇ ಪಾದೇತದ್ದೇವತಾಭಿಧೇ।
ಚರೇಲಗ್ನೇ ಪ್ರವೃತ್ತೇಃ ಮಾತುರ್ದೇಶಾಂತರ ಪ್ರದೇ॥"

ಈತರದ ಜ್ಯೋತಿಷ್ಯ ವಿಚಾರ ರಾಜನಿಗೂ, ರಾಜ ಪತ್ನಿಗೂ, ಅವರ ಪುರೋಹಿತ ನಿಗೂ ತಿಳಿದಿರಬೇಕು! ಇದು ಅವರು ವಿದ್ಯಾಭ್ಯಾಸದ ಅವಧಿಯಲ್ಲೇ ಕಲಿತಿರಬೇಕಾಗು ತ್ತದೆ.

ಹೋಮ ಮಾಡುವಾಗ ರಾಜ ದಂಪತಿಗಳು ಕ್ಲಪ್ತ ಕಾಲಕ್ಕೆ ಸನ್ನಿಹಿತರಾಗಿ ಬೇಕು. ಹಾಗಿಲ್ಲಾದರೆ. ಪತ್ನಿ ಆಗ ಬಲು ದೂರದಲ್ಲಿದ್ದರೆ. ಆಕೆಯ ಕೈಗೆ ನೀಡುವ ಹವಿಸ್ಸು ಆಕೆಗೆ ದೊರೆಯದೆ, ಅಗ್ನಿಯಲ್ಲಿರಿಸಲ್ಪಟ್ಟು, ಅಗ್ನಿಯಲ್ಲಿ ಪುತ್ರಸಂತತಿಯಾಗು ವುದು ಇದೆ: ದ್ರುಪದನ ಹೆಂಡತಿ ಹೋಮಶೇಷ (ಹವಿಸ್ಸು) ಪಡೆಯಲು ಸಕಾಲ ದಲ್ಲಿಲ್ಲದಾಗ, ಅದನ್ನು ಅಗ್ನಿಕುಂಡದಲ್ಲಿ ಹೋಮಿಸಿದ್ದು, ಅಲ್ಲಿಂದ ಧೃಷ್ಟದ್ಯುಮ್ನ ದ್ರೌಪದಿಯರು ಜನಿಸಿದರೆಂದು ವ್ಯಾಸಭಾರತದಲ್ಲಿದೆ!

ಬಾಲಕಿಯು ತನಗೆ ಅನುರೂಪನಾದ ವರನಿಗಾಗಿ ಕಠಿನ ತಪಸ್ಸು ಮಾಡಲೂ ಸಿದ್ಧಳೆಂದು ಗಿರಿಜಾ ವಿವಾಹದಿಂದ ವೇದ್ಯ! ಆಕೆಯಲ್ಲಿಗೆ ವಟುವೊಬ್ಬನು ಬಂದು ಹರನ ವಿಕೃತ ವೇಷಾದಿಗಳನ್ನು ಚಿತ್ರಿಸಿದರೂ, ಆಕೆ ನಿಶ್ಚಲಳಾಗಿ ಇದ್ದು ಹರನನ್ನೆ ಪತಿಯನ್ನಾಗಿ ಪಡೆದಳೆಂದಿದೆ! ವ್ರತ ನಿಷ್ಠೆಯಿಂದ ಮಾಡಬೇಕಲ್ಲದೆ, ನಿಶ್ಚಲತೆಯೂ ಇರಬೇಕು ಎಂದೂ ಇಲ್ಲಿ ಸ್ಪಷ್ಟವಾಗುತ್ತದೆ.

ಸೀತೆ ಪಕ್ಷಿಗಳ ಮಾತನ್ನು ಅರ್ಥವಿಸುತ್ತಿದ್ದಳೆಂದು ಹೇಳಿದೆ. ಆದೊಮ್ಮೆ ಎರಡು ಗಿಳಿಗಳು (ಗಂಡು ಹೆಣ್ಣುಗಳು) ಮಾತಾಡುವಾಗ, ಸೀತೆಯನ್ನು ರಾಮನು ಮದುವೆ ಯಾಗುವನೆಂಬುದನ್ನು ಆಕೆ ಕೇಳಿದಳು: ಆಕೆ ಆ ಹೆಣ್ಣುಗಿಳಿಯನ್ನು ಹಿಡಿದು. ತನ್ನ ಮದವೆಯಾಗುವತನಕ ಬಿಡೆನೆಂದು ಸಾಕಿದಳು (ಆದರೆ, ಗಂಡು ಗಿಳಿಯು ಆದಾಗಲೆ ಶಿರಿಕೊಂಡು, ಸೀತಾರಾಮರ ವಿಯೋಗಕ್ಕೆ ಕಾರಣನಾದ ಮಡಿವಾಳನಾಗಿ ಹುಟ್ಟಿತ್ತು! ಸೀತೆಯು ಬಹುಭಾಷಾಭಿಜ್ಞತೆಯಿಂದ ಒಮ್ಮೆ ಸಂತಸಗೊಂಡಳು. (ಮುಂದೆ ವಿರಹ ದುಃಖ ಪಡೆದಳು!).

ಶೂದ್ರರ್ಷಿತವನೆಂಬವನ ಕತೆ ಉಪನಿಷತ್ತಿನಲ್ಲಿದೆ (ಶ್ರೀ ಎಂ. ಗೋವಿಂದ ಪೈ ಯವರು ಈತನ ಬಗ್ಗೆ ಒಂದು ಕವಿತೆ ಬರೆದಿದ್ದಾರೆ). ಉಪನಿಷತ್ಕಾಲದಲ್ಲಿ ವ್ರತನಿಷ್ಠ

ನಾಗಿದ್ದರೆ, ಶೂದ್ರನೂ ಋಷಿಯಾಗಿ ಪ್ರಸಿದ್ಧಿ ಪಡೆಯುತ್ತಿದ್ದನೆಂಬುದು ಎಲ್ಲರಿಗೂ ತಿಳಿದಿದೆ.

ವಿಶ್ವಾಮಿತ್ರನು ಜನ್ಮತಃ ಕ್ಷತ್ರಿಯನು, ಆತ ವಸಿಷ್ಠನ ಧೇನುವಿಗಾಗಿ ಹೋರಾಡಿ ಸೋತನು : 'ಧಿಗ್ಬಲಂ ಕ್ಷತ್ರಿಯ ಬಲಂ, ಬ್ರಹ್ಮತೇಜೋ ಬಲಂ, ಬಲಂ' ಎಂದು ಉದ್ಗಾರವಾಡಿದನು ಅಂತೆ, ತಾನು ಹಲವು ಬಗೆಯ ಎಡರು ತೊಡರುಗಳನ್ನು ಅನುಭವಿಸಿದ್ದು ಕೊನೆಗೆ ಬ್ರಹ್ಮರ್ಷಿಯಾದನು. ಅವನೇ ವೇದದ ಗಾಯತ್ರೀ ಮಂತ್ರದ ಮೂಲಕ ಸಿದ್ಧಿಯನ್ನು ಪಡೆದನು.

ಬ್ರಾಹ್ಮಣನು (ಕ್ಷತ್ರಿಯ ಮೊದಲಾದ ಮೂವರೂ) ಇನ್ನಿತರ ಮೂರು ವರ್ಣದವರ ಹೆಣ್ಣನ್ನು ಮದುವೆಯಾಗಿ ಸಂತತಿಯಾದರೆ, ಆ ಸಂತತಿಗೆ ಬೇರೆ ಬೇರೆ ಹೆಸರಿದೆ. ಹಾಗೆಯೇ, ಬ್ರಾಹ್ಮಣ (ಹಾಗೂ ಕ್ಷತ್ರಿಯ ಮೊದಲಾದ ಮೂವರು) ಇತರ ಮೂರು ಮಂದಿಯು ಮದುವೆಯಾಗಿ ಸಂತತಿಯಾದರೆ, ಆ ಸಂತತಿಗೆ ಬೇರೆ ಬೇರೆ ಹೆಸರಿದೆ. (ಈ ಬಗೆ ಮನುಸ್ಮೃತಿಯಲ್ಲಿದೆ). ಅಂದರೆ, ಜಾತಿ-ವಿಜಾತಿಯರಲ್ಲಿ ವಿದ್ವೇಷವಾಗಲೀ, ಅಸಂಪರ್ಕವಾಗಲೀ (ಕಡ್ಡಾಯವಾಗಿ) ನಿಷೇಧವಾಗಿದ್ದಿಲ್ಲವೆಂದು ಇಲ್ಲಿ ಹೇಳಬಹುದು. ಇಂತಹ ಉಪಜಾತಿಗಳಿಗೆ ಆಗ ಬೇರೆ ಬೇರೆ ಕಸಬುಗಳು ವಿಧಿಸಲ್ಪಟ್ಟಿದೆ. ಉದಾ : 'ಸೂತ' ಜಾತಿಯವನು ತೇರಿನ ಸೂತನಾಗುವನು. ಇದು ಕಾಲಕ್ರಮೇಣ, ಆಯಾ ಜಾತಿಯುವಾದ ವಿದ್ಯೆ ಕಸಬುಗಳ ಅಭ್ಯಾಸಗಳು ಮರೆಯಾದವು : ಸಾಧ್ಯವಿದ್ದವರು (ಹಣದಿಂದಾಗಲೀ, ಇತರ ವಿಧದಿಂದಾಗಲೀ) ಬೇರೆಡೆ ಸಾಗಿ ಬೇರೆ ಬೇರೆಲ್ಲಾ ಕಸಬುಗಳನ್ನು ಕಲಿಯುಹತ್ತಿದ್ದರು. 'ಚಾತುರ್ವರ್ಣ್ಯಂ ಮಾಯಾ ಸೃಷ್ಟಂ ಗುಣ ಕರ್ಮ ವಿಭಾಗಶಃ' ಎಂಬ ರೀತಿ ಪುರಾಣ ಕಾಲದಲ್ಲಿದ್ದರೂ. ವಿಧಾನತ ಆ ಬಗೆ ಸಡಿಲಾಯಿತು ; ಯಾವ ಜಾತಿಯುವರಾದರೂ, ಎಲ್ಲಾ ಲೌಕಿಕ ವಿದ್ಯೆಗಳನ್ನು ಕಲಿಯಲು ಅವಕಾಶವಿತ್ತು !

ಧೃತರಾಷ್ಟ್ರನಿಂದ ದಾಸಿಯಲ್ಲಿ ಜನಿಸಿದ ಯುಯುತ್ಸು ಧನುರ್ಧಾರಿಯಾಗಿ ಹೋರಾಡಿದನು. ವೇದವ್ಯಾಸನಿಂದ ದಾಸಿಯುಲ್ಲಿ ಜನಿಸಿದ ವಿದುರನು ಧನುರ್ವಿದ್ಯಾಭ್ಯಾಸವನ್ನು ಪಡೆದಿದ್ದನು.

ಲೌಕಿಕ ವಿದ್ಯಾಭ್ಯಾಸದಿಂದ ಜೀವನದ ಪ್ರಗತಿಯಾಗುತ್ತದೆ. ತನ್ನ ಕುಟುಂಬದವರ ಹಾಗೂ ತನ್ನವರ ಸುಖಾಭಿವೃದ್ಧಿಯಾಗುತ್ತದೆ. ವಿದ್ಯಾ ದದಾತಿ ವಿನಯಂ, ವಿನಯಾದ್ಯಾತಿ ಪಾತ್ರತಾಂ, ಪಾತ್ರತ್ವಾತ್ ಧನಮಾಪ್ನೋತಿ, ಧನಾತ್ ಧರ್ಮಂ, ತತಃ ಸುಖಂ' ಎಂಬ ಸೂಕ್ತಿಯಲ್ಲಿ ವಿದ್ಯೆಯಿಂದಾಗಿ-ತನ್ಮೂಲಕ-ದೊರೆವ ಫಲಗಳು ಹೇಳಿವೆ,

ಪುರಾಣ ಕಾಲದ ಶಿಕ್ಷಣ ಪದ್ಧತಿಯ ಆಧಾರದಲ್ಲಿ ಹಾಗೂ ಇಂದಿನ ಜಾಗತಿಕ ವಿಚಾರದ ರೀತಿಯಲ್ಲಿ ಸರಿಹೊಂದಿ, ಪ್ರಚಲಿತ ವಿದ್ಯಾಭ್ಯಾಸ ನಡೆಯುವುದಾದರೆ, ಜನ ಜೀವನ ಸುಖಮಯವಾದೀತು !

ಅನುಬಂಧ :

ಪ್ರಾಚೀನ ಗುರುಕುಲದ ಆದರ್ಶದಲ್ಲಿ ಭಾರತ ದೇಶದಲ್ಲಿ - ಅಂತೆ ಕರ್ನಾಟಕ ರಾಜ್ಯದಲ್ಲಿ - ಹಲವು ಬಗೆಯ ವಿದ್ಯಾಮಂದಿರಗಳಿದ್ದುವೆಂದು ತಿಳಿಯುತ್ತದೆ :

ಕ್ರಿ.ಪೂ. ೩ನೆಯ ಶತಕದಲ್ಲಿದ್ದ ಅಶೋಕ ಮಹಾರಾಜನು ಎಲ್ಲೆಡೆ ಧರ್ಮ ಪ್ರಸಾರಕ್ಕಾಗಿ ಮಹಾಜನರನ್ನು ಕಳುಹಿದ್ದನು. ಹಾಗೆ, ಅಲ್ಲಲ್ಲಿ ಪಶುಗಳ ಚಿಕಿತ್ಸೆಗೆಡೆ ಮಾಡಿದ್ದನೆಂದು ಆತನ ಶಿಲಾಲೇಖಗಳಿಂದ ತಿಳಿದುಬರುತ್ತದೆ. ಅಗ್ನಿಪುರಾಣದಲ್ಲಿ ಹಲವಾರು ವಿದ್ಯಾವಿಚಾರಗಳು ಹೇಳಿವೆ. ಇತರ ಪುರಾಣಗಳಲ್ಲೂ ಕೆಲವು ಬಗೆಗಳು ತಿಳಿಯಬರುತ್ತವೆ.

ಇನ್ನು ಚಾರಿತ್ರಿಕವಾಗಿ ಹೆಸರುಗೊಂಡ ನಾಲಂದ, ತಕ್ಷಶಿಲಾ, ಐಹೊಳೆ. ಕೋಡಿಮಠ ಇತ್ಯಾದಿಗಳು ಉಲ್ಲೇಖಾರ್ಹಗಳಾಗಿವೆ, ಅಲ್ಲಲ್ಲಿಯ ಅಗ್ರಹಾರ, ಬ್ರಹ್ಮಪುರ, ಘಟಿಕಾಸ್ಥಾನ ಹಾಗೂ ದೇವಾಲಯ ಅಥವಾ ಮಠಗಳ ವಿದ್ಯಾಕೇಂದ್ರ ಗಳಾಗಿದ್ದುವು (ಡಾ. ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ) ಬೇರೆ ಬೇರೆ ರಾಜ್ಯದ - ದೇಶಗಳ ವಿದ್ಯಾರ್ಥಿಗಳೂ ಇಲ್ಲಿ ಕಲಿಯುಬರುತ್ತಿದ್ದರೆಂದರೆ, ಇವುಗಳ ಮೇಲ್ಮೆ ಅರಿವಾಗುತ್ತದೆ.

ಇಂತಹ ಮಹಾ ವಿದ್ಯಾಲಯಗಳಿಗೆ ಮಹಾಜನರೂ, ಮಹಾರಾಜ-ರಾಣಿಯರೂ ದತ್ತಿಗಳನ್ನು ಬಿಟ್ಟರು.

ಆದರೆ, ಇದೀಗಣ ನಿಯಮದಂತೆ, ಅಲ್ಲಲ್ಲಿ ವಿದ್ಯಾಭ್ಯಾಸಗಳು ನಡೆಯಲಾಗುತ್ತಿಲ್ಲ ವೆಂಬುದು ಬಲು ವಿಷಾದಕರವಾಗಿದೆ ! ತೆರಿಗೆಯ ರಿಯಾಯಿತಿ ವಗೈರೆ ಸವಲತ್ತುಗಳಿದ್ದ ಭೂಮಿಗಳು ಇಂದಿನ ದಿನ ನಿಯಮದಲ್ಲಿ ಹರಿಹಂಚಾಗಿವೆಯೆಂದರೆ, ವಿದ್ಯಾಭ್ಯಾಸಗಳಿ ಗೆಡೆ ಬೇರೆ ಎಲ್ಲಿದೆ ? ವಿದ್ಯಾಭ್ಯಾಸವು ಕೇವಲ ವೆಚ್ಚದಾಯಕವಾದ ಇಲಾಖೆಯ ಪಾಲಿಗೆ ಇರುವುದು ನಿಜವೇ ಆದರೆ, ದೇಶದ - ಜನತೆಯ ಅಭಿವೃದ್ಧಿಗೆ ವಿದ್ಯೆಯೇ ಮೂಲ ವಲ್ಲವೇ ?

'ವಿದ್ಯಾ ಧನಂ ಸರ್ವ ಧನ ಪ್ರಧಾನಂ' ಎಂದೂ,
'--ವಿದ್ಯಾ ರಾಜಸು ಪೂಜ್ಯತೇ ನಹಿ ಧನಂ, ವಿದ್ಯಾ ವಿಹೀನಃ ಪಶುಃ' ಎಂದೂ,
'ವಿದ್ಯಯಾಽ ಮೃತ ಮಶ್ನುತೇ' ಎಂದೂ

ಉಲ್ಲೇಖಿಸ-ಶ್ಲಾಘನೆಗಳು ಕೇವಲ ಗ್ರಂಥಸ್ಥವಾಗಬಾರದೆಂದು ; ಆ ಮೇರೆಗೆ ಪ್ರಾಚೀನ ಕಾಲದಂತೆ, ಆಧುನಿಕ ಕಾಲದಲ್ಲೂ ವಿದ್ಯಾಭಿರುಚಿ ಆರದಂತೆ ಹಾಗೂ ಅದರತ್ತ ಗೌರವ ವುಳಿಯುವಂತೆ ಮಹಾಜನರು (ಸರಕಾರವು ಕೂಡಾ) ತಕ್ಕ ನಿಗಾ ವಹಿಸುವುದೆ ಪಾರ ಮಾರ್ಥಿಕವಾದ ವಿಚಾರವೆಂದು ಬಲು ಕಳಕಳಿಯಿಂದ ಹೇಳಬೇಕಾಗಿದೆ !

'ಸೆಕ್ಯುಲರ್' (ಧನ್ಯಾತೀತ) ಗಣರಾಜ್ಯವನ್ನು ನಾವು ಈಗ ಪಡೆದಿರುತ್ತೇವೆ ! ನಮ್ಮೆಲ್ಲರ ಹಿತಸಾಧನೆಗೆ ನಾವೇ ಬಾಧ್ಯರೂ ಸ್ವತಂತ್ರರೂ ಆಗಿದ್ದೇವೆಯೆಂಬುದು ಆದ್ಯ ಗಮನೀಯ ! ವಿದ್ಯೆಯು ಬಾಹ್ಯ ಜೀವನದ ಸುಖಕ್ಕೆ ಧನದಾಯಕವಾಗಿದ್ದರೇನೇ ಸಾಲದು ; ಆತ್ಮಿಕವಾದ-ಧಾರ್ಮಿಕವಾದ-ವಿಚಾರಲಹರಿಯು ಪ್ರತಿಯೊಬ್ಬ ಪ್ರಜೆಗೂ ಕಡ್ಡಾಯವಾಗಿ ಸಿಗುವಂತೆ ನಿರೂಪಿಸಬೇಕು. ಸಾಲೆಯಲ್ಲಿ ಪ್ರಾಥಮಿಕ ದರ್ಜೆಯಿಂದ ತೊಡಗಿ ಮಹಾ ವಿದ್ಯಾಲಯದ ತನಕ (ಹಾಗೂ ವಿಶ್ವವಿದ್ಯಾಲಯದಲ್ಲೂ) ನೀತಿ ಬೋಧೆಯ ಪಾಠಗಳು ಸೇರಿರಬೇಕು !

ಪ್ರತಿಯೊಬ್ಬನೂ ಸ್ವರಾಜ್ಯದ ಹಾಗೂ ಸ್ವ-ದೇಶದ ಪ್ರಾಚೀನ ವಿದ್ಯಾ ವೈಭವ ವನ್ನು ಸಾಬೀತಾಗಿ ತಿಳಿಯಲು ಅವಕಾಶವಿರಬೇಕು ! ಚರಿತ್ರೆಯೆಂದರೆ ದೇಶದ ಯುದ್ಧ ಗಳ ಕತೆಯೊಂದೇ ಅಲ್ಲ ; ಪ್ರಾಚೀನರ ಸದ್‌ಗುಣಗಳ - ಸಚ್ಚರಿತ್ರೆಗಳ - ಅಧ್ಯಯನವೂ ಇರಬೇಕು. ಅದೇ ನಮ್ಮಲ್ಲಿ ಉತ್ತಮ ಸಂಸ್ಕಾರವನ್ನುಂಟುಮಾಡುತ್ತದೆ. ಆಗಲೇ ತಮಸೋ ಮಾ ಜ್ಯೋತಿರ್ಗಮಯ' ಇತ್ಯಾದಿಗಳ ಅನುಸಂಧಾನವಾಗಬಲ್ಲುದು ! 'ವಿದ್ಯಾ ಪರಾ ದೇವತಾ' ಎಂಬ ಮಾತು ಕೇವಲ ಉದ್ಗಾರವಾಗದಿರಲಿ ! ಜನತೆಯು ಇಹ-ಪರಗಳ ಉದ್ಧಾರಕ್ಕೆ-ಸುಖಕ್ಕೆ ವಿದ್ಯಾಭ್ಯಾಸವು ಅಡಿಗಲ್ಲಾಗಲಿ !

ಪುರಾಣ ಕಾಲದ ಹಾಗೂ ಚಾರಿತ್ರಿಕ ಯುಗದ ವಿದ್ಯಾಭ್ಯಾಸ ಕ್ರಮಗಳೇನೆಂದು ಕೂಲಂಕಷವಾಗಿ ನಾವು ತಿಳಿಯಬೇಕು, ಅವುಗಳ ಆಧಾರದಿಂದ, ಜಾಗತಿಕ ಜೀವನ ರಂಗದಲ್ಲಿ ನಾವು ಎಲ್ಲಾ ದೇಶಗಳಂತೆ ಮುನ್ನಡೆಯಲು ಸದವಕಾಶವೊದಗಲೆಂದು (ಅದಕ್ಕೆ ತಕ್ಕ ನಿಯಮಗಳು ಕೈಗೊಳ್ಳುವಂತೆ ಹಾರ್ದಿಕವಾಗಿ ಹಾರೈಸೋಣ ! ತಥಾಸ್ತು !

'ಕನ್ನಡಂ ಗೆಲ್ಗೆ ! ಕನ್ನಡಂ ಬಾಳ್ಗೆ !
ಕನ್ನಡಂ ಭಾರತದಿ ಮೇಲ್ಮೆವಡೆಗೆ !'

ಗಡಿ ಪ್ರದೇಶದ ಶಿಕ್ಷಣ ಸಮಸ್ಯೆಗಳು

ಕಯ್ಯಾರ ಕಿಞ್ಞಣ್ಣ ರೈ

ಬ್ರಿಟಿಷರು ನಮ್ಮನ್ನು ಆಳುತ್ತಿದ್ದಾಗ, ನಮ್ಮೊಳಗೆ ಐಕ್ಯ ನೆಲೆಗೊಳ್ಳ ಬಾರದೆಂಬ ದೃಷ್ಟಿಯಿಂದ, ಒಂದು ಭಾಷೆಯನ್ನಾಡುವ ಜನರನ್ನು ಪ್ರತ್ಯೇಕ ರಾಜ್ಯ ರಚಿಸಿ ಒಟ್ಟುಗೂಡಿಸದೆ, ಮನುಷ್ಯನ ಅಂಗಾಂಗಗಳನ್ನು ಛಿದ್ರವಿಚ್ಛಿದ್ರಗೊಳಿಸಿದಂತೆ ಬೇರ್ಪಡಿಸಿ ರಾಜ್ಯ ರಚಿಸಿ, ಅತಂತ್ರರಾಗಿಸಿ ಆಳಿದರೆಂದು ನಾವು ಆರೋಪಿಸಿದೆವು. ಹಾಗಾಗಿಯೇ ಭಾಷಾಮೂಲವಾದ ರಾಜ್ಯರಚನೆ ನಮ್ಮ ಸ್ವಾತಂತ್ರ್ಯದ ಬೇಡಿಕೆಯೊಂದಿಗೆ ಮಂಡಿತ ವಾಯಿತು. ಸ್ವಾತಂತ್ರ್ಯ ದೊರೆತ ಕೂಡಲೆ ಭಾಷೆಯ ತಳಹದಿಯಲ್ಲಿ ರಾಜ್ಯ ರಚನೆ ಮಾಡಲು ನಾವು ಬದ್ಧರಾದೆವು,

ಸ್ವಾತಂತ್ರ್ಯ ದೊರೆತು ವರ್ಷಗಳೇ ಸಂದರೂ, ನಮ್ಮ ಆ ಕೇಳಿಕೆ ಈಡೇರಲಿಲ್ಲ. ಪೊಟ್ಟಿ ಸೀತಾರಾಮುಲು ಮಾಡಿದ ಬಲಿದಾನದ ಫಲವಾಗಿ ಆಂಧ್ರ ರಾಜ್ಯ ರಚನೆ ಯಾಯಿತು. ಇತರ ಭಾಷಿಕರ ಬೇಡಿಕೆಗೂ ಅದರಿಂದ ಬಲಬಂತು: ಭಾಷಾರಾಜ್ಯ ಗಳ ರಚನೆಗಾಗಿ ಆಯೋಗವೊಂದು ಫಜ್ಲ್ ಅಲಿಯವರ ನೇತೃತ್ವದಲ್ಲಿ ರಚಿತವಾಗಿ, ಅವರು ಸಮಗ್ರ ಪರಿಶೀಲನ ನಡೆಸಿ ವರದಿಯೊಪ್ಪಿಸಿದಂತೆ ೧೯೫೬ರ ನವಂಬರ ೧ ರಂದು ಬೇರೆ ಬೇರೆ ಭಾಷಾ ರಾಜ್ಯಗಳು ರೂಪಿತ ತಾಳಿದವು,

ಅಧಿಕ ಸಂಖ್ಯೆಯ ಜನ ಮಾತನಾಡುವ ಒಂದು ಭಾಷೆಯೇ ಮೂಲಾಧಾರವಾಗಿ ಹೀಗೆ ಕೇರಳ: ತಮಿಳುನಾಡು, ಕರ್ನಾಟಕಾದಿ ರಾಜ್ಯಗಳ ಈ ಎಲ್ಲಾ ಭಾಷಾತಳಹದಿಯ ರಾಜ್ಯಗಳಲ್ಲೂ ಇತರ ಭಾಷೆಯನ್ನಾಡುವ ಜನರು ಮತ್ತೂ ಉಳಿದೇ ಉಳಿಯುತ್ತಾರೆ. ಗಡಿಭಾಗದಲ್ಲಂತೂ ಈ ಸಮಸ್ಯೆ ಮತ್ತಷ್ಟು ಜಟಿಲವಾಗಿರುತ್ತದೆ. ಕೆಲವೊಮ್ಮೆ ರಾಜ್ಯ ಭಾಷೆಗಿಂತಲೂ ಹೆಚ್ಚಿನಂಶ ಇತರ ಭಾಷೆಯನ್ನಾಡುವ ಜನರೇ ಗಡಿ ಭಾಗಗಳಲ್ಲಿ ಉಳಿ ದಿರುತ್ತಾರೆ. ಗಡಿ ವಿಂಗಡೆ ಸರಿಯಾಗಲಿಲ್ಲವೆಂಬುವವಾದವೂ ಇರುತ್ತದೆ. ಕೆಲವೆಡೆ ಆ ವಿವಾದ ಕಾಲ ಸರಿದಂತೆ ತಣ್ಣಗಾದರೂ, ಕಾಲು ಶತಮಾನ ದಾಟಿದರೂ, ಕಾಸರಗೋಡು ಬೆಳಗಾವಿ-ಇಂತಹ ಪ್ರದೇಶಗಳಲ್ಲಿ ಗಡಿಪ್ರಶ್ನೆ ಇನ್ನೂ ಜೀವಂತವಾಗಿ ಉಳಿದಿದೆ. ರಾಜ್ಯ ಭಾಷೆಯ ಹೊರತು ತಮ್ಮ ತಾಯ್ನುಡಿಯಲ್ಲಿ ವಿದ್ಯಾಭ್ಯಾಸ ಪಡೆಯುವ. ವ್ಯವಹರಿಸುವ ಹಕ್ಕು ತಮಗೆ ಬೇಕೆಂದು ಪ್ರಬಲ ಹೋರಾಟವನ್ನೇ ಅವರು ನಡೆಸುತ್ತಾರೆ. ಅಂತಹವ ರನ್ನು ಸಮಾಧಾನ ಪಡಿಸುವುದು ಆಯಾ ರಾಜ್ಯ ಸರಕಾರಗಳ ಕರ್ತವ್ಯ ಕೂಡ ಆಗಿದೆ,

ಇಂದಿನ ಈ ರಾಜ್ಯ ರಚನೆಗೆ ಆಧಾರ ಆ ರಾಜ್ಯದ ಹೆಚ್ಚಿನ ಜನತೆ ಆಡುವ ಅವರ ಮಾತೃಭಾಷೆ. ಕರ್ನಾಟಕ ರಾಜ್ಯ ಆದುದು ಹೆಚ್ಚಿನವರ ತಾಯ್ನುಡಿ ಕನ್ನಡವೆಂಬುದರಿಂದ: ತಮಿಳುನಾಡು ರೂಪಿತವಾದುದು ಅಲ್ಲಿನ ಹೆಚ್ಚಿನವರು ತಮಿಳು ಮಾತೃಭಾಷೆಯವರೆಂದು. ಹಾಗೆ ಇತರ ಎಲ್ಲಾ ಭಾಷಾ ರಾಜ್ಯಗಳ ವಿಚಾರವೂ ಆಗಿದೆ. ಇಲ್ಲಿ ಅಧಿಕ ಸಂಖ್ಯೆಯಿರಲಿ, ಕಡಿಮೆ ಸಂಖ್ಯೆಯಿರಲಿ, ಜನರ ಮಾತೃಭಾಷೆಗೆ ಹೆಚ್ಚಿನ ಒತ್ತು ಬೀಳುತ್ತದೆ. ಅವರವರ ತಾಯಿ, ಆಕೆ ಶ್ರೀಮಂತಳಿರಲಿ, ಬಡವರಿರಲಿ ಅವರವರಿಗೆ ದೊಡ್ಡವಳೇ: ಅಂತೆಯೇ ಅವರವರ ತಾಯ್ನುಡಿ ಅವರವರಿಗೆ ಹೆಚ್ಚು. ಅವರ ಆ ತಾಯ್ನುಡಿಯನ್ನು ಕಲಿಯುವ, ಅದರಲ್ಲಿ ವ್ಯವಹರಿಸುವ, ಹಕ್ಕನ್ನು ಉಳಿಸಿಕೊಳ್ಳಲು ಎಲ್ಲರೂ ಪ್ರಯತ್ನಿಸುವುದೂ ಸಹಜ. ಹಾಗಾಗಿಯೇ ನಮ್ಮ ರಾಷ್ಟ್ರದ ಘಟನೆ ರಾಜಕೀಯ, ಮತೀಯ, ಅಲ್ಪ ಸಂಖ್ಯಾತರಿಗೆ ರಕ್ಷಣೆ ಕೊಡುವಂತೆ ಭಾಷಾ ಅಲ್ಪ ಸಂಖ್ಯಾತರಿಗೂ ರಕ್ಷಣೆ ನೀಡುತ್ತದೆ.

ಘಟನೆ ಎಷ್ಟೊಂದು ರಕ್ಷಣೆ ನೀಡಿದರೂ. ಒಂದು ರಾಜ್ಯಕ್ಕೆ ಸೇರಿದ ಬೇರೆ ಭಾಷೆಯ ಅಲ್ಪ ಸಂಖ್ಯಾತರು ಸಾಕಷ್ಟು ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಶಾಸನ ಸಭೆಯಲ್ಲಿ, ಆಡಳಿತ ವ್ಯವಹಾರದಲ್ಲಿ, ಕೋರ್ಟು ಕಛೇರಿಗಳಲ್ಲಿ ಆಯಾ ರಾಜ್ಯದ ಭಾಷೆಗೆ ಸ್ಥಾನ ಹೊರತು ಅಲ್ಪ ಸಂಖ್ಯಾತರ ಭಾಷೆಗೆ ಅಲ್ಲ, ಆದ್ದರಿಂದ ಅನಿವಾರ್ಯವಾಗಿ ಅಲ್ಪ ಸಂಖ್ಯಾ ಭಾಷಿಕರು ರಾಜ್ಯ ಭಾಷೆ ಬೇರೆಯಾದರೂ ಅದನ್ನು ತಿಳಿದಿರಲೇಬೇಕು. ಸಹಜವಾಗಿ ತಿಳಿದುಕೊಳ್ಳುತ್ತಾರೆ. ಆದರೆ ಅಲ್ಲಿನ ಸರಕಾರ, ಅಲ್ಪ ಸಂಖ್ಯಾತರ ಭಾಷೆಯನ್ನು ಕಲಿಯಲು ಅವರಿಗೆ ಬೇಕಾದ ಎಲ್ಲಾ ಅನುಕೂಲತೆಗಳನ್ನು ಒದಗಿಸಿ ಕೊಡುವುದು ಕರ್ತವ್ಯವೇ ಆಗಿದೆ.

ಈ ಕರ್ತವ್ಯವನ್ನು ಆಯಾ ರಾಜ್ಯ ಸರಕಾರ ನೆರವೇರಿಸುತ್ತಿಲ್ಲ ಎಂಬ ದೂರು ಇಂದು ಬಹಳವಾಗಿ ಕೇಳಿಬರುತ್ತದೆ. ದಕ್ಷಿಣ ಸೊಲ್ಲಾಪುರ, ಜತ್, ಅಕ್ಕಲಕೋಟೆ ಈ ಪ್ರದೇಶಗಳು ಮಹಾಜನ ವರದಿಯಂತೆ ಕರ್ನಾಟಕ ರಾಜ್ಯಕ್ಕೆ ಸೇರಬೇಕಾದ ಭಾಗಗಳು. ಆದರೆ ಅಲ್ಲಿನ ಕನ್ನಡಿಗರಿಗೆ ಹೊಸ ಕನ್ನಡ ಶಾಲೆ ತೆರೆಯಲು ಅಲ್ಲಿಯ ಸರಕಾರ ಸಮ್ಮತಿ ಕೊಡುವುದಿಲ್ಲವೆಂಬ ದೂರು ಇದೆ. ಇದು ಕೇವಲ ಅನ್ಯಾಯ ; ಮಹಾಜನ ವರದಿಯನ್ನು ಪಾರ್ಲಿಮೆಂಟು ಅಂಗೀಕರಿಸಿದಲ್ಲಿ ಇಂದಲ್ಲ ನಾಳೆ ಆ ಭಾಗವು ಕರ್ನಾಟಕ ರಾಜ್ಯಕ್ಕೇ ಸೇರುತ್ತದೆ. ಹೀಗಿದ್ದರೂ ಅಲ್ಲಿನ ಕನ್ನಡದ ಮಕ್ಕಳು ತಮ್ಮ ತಾಯ್ನುಡಿಯಲ್ಲಿ ಶಿಕ್ಷಣ ಪಡೆಯಲು ಆಸ್ಪದವಿಲ್ಲದವರಾಗಿದ್ದಾರೆ ಎಂಬುದು ತುಂಬಾ ವಿಷಾದಕರ. ಕಾಸರಗೋಡು ಇನ್ನೊಂದು ಗಡಿಭಾಗ. ಇಲ್ಲಿನ ಸಂಗತಿ ಬೇರೊಂದು ತೆರ. ಕಾಸರಗೋಡು ವಿದ್ಯಾಭ್ಯಾಸ ಜಿಲ್ಲೆಯಲ್ಲಿ ಮಲೆಯಾಳಿಗಳು ಅಲ್ಪಸಂಖ್ಯಾಭಾಷೆಯವರೆಂದು ಪರಿಗಣಿಸಿ ಕೇರಳ ಸರಕಾರ ಅಲ್ಪ ಸಂಖ್ಯಾತರಿಗಿರುವ ಎಲ್ಲಾ ಸೌಕರ್ಯಗಳನ್ನೂ

ಕನ್ನಡಿಗರಿಂದ ಕಿತ್ತು ಮಲೆಯಾಳಿಗರಿಗೇ ನೀಡುತ್ತದೆ. ಒಂದು ಶಾಲೆಯಲ್ಲಿ ಹತ್ತು ಮಂದಿ ಮಲೆಯಾಳ ವಿದ್ಯಾರ್ಥಿಗಳಿದ್ದರೂ ಅವರಿಗೆ ಮಲೆಯಾಳ ತರಗತಿ ತೆರೆಯ ಬೇಕು : ಕನ್ನಡಿಗರು ಇಪ್ಪತ್ತು ಜನ ಇದ್ದರೂ ಆ ಸೌಕರ್ಯವಿಲ್ಲ. ಕನ್ನಡ ಪರೀಕ್ಷೆಯಲ್ಲಿ ಸರಕಾರೀ ಟೆಸ್ಟು ತೇರ್ಗಡೆಯಾದ ಮಲೆಯಾಳಿಗೆ ರೂ. ೨೫ ಸಂಬಳ ಅಧಿಕ : ಅದೇ ರೀತಿ ಮಲೆಯಾಳ ಟೆಸ್ಟ್ ತೇರ್ಗಡೆಯಾದ ಕನ್ನಡಿಗನಿಗಿಲ್ಲ. ಯಾವುದೇ ರೀತಿಯ ಕಾನೂನಾಗಲಿ, ಸೌಕರ್ಯವಾಗಲಿ, ಹಕ್ಕಾಗಲಿ ಅದೆಲ್ಲವೂ ಮಲೆಯಾಳಿಗಳಿಗೇ ಪ್ರಯೋಜನ ಆಗಬೇಕಲ್ಲದೆ ಕನ್ನಡಿಗರಿಗಿಲ್ಲ.

ಇಂದು ಪಠ್ಯಪುಸ್ತಕಗಳ ರಾಷ್ಟ್ರೀಕರಣ ಆಗಿದೆ. ಎಲ್ಲಾ ಪಠ್ಯಪುಸ್ತಕಗಳನ್ನೂ ಸರಕಾರವೇ ಸಿದ್ಧಪಡಿಸುತ್ತದೆ : ಲಕ್ಷ ಸಂಖ್ಯೆಯಲ್ಲಿ ಆಯಾ ರಾಜ್ಯಗಳ ಪ್ರಧಾನ ಭಾಷೆಯಲ್ಲಿ ಪಠ್ಯಪುಸ್ತಕಗಳು ತಯಾರಾಗುತ್ತವೆ : ಆದರೆ ಅಲ್ಲಿರುವ ಭಾಷಾ ಅಲ್ಪಸಂಖ್ಯಾತರಿಗೆ, ವಿವಾದಾಸ್ಪದವಾದ ಗಡಿಭಾಗದ ಜನರಿಗೆ ಸಕಾಲದಲ್ಲಿ ಪಠ್ಯಪುಸ್ತಕ ಒದಗುವಂತಿಲ್ಲ: ಒದಗಿದರೂ ಹಾಳು ಮುದ್ರಣ : ಮಕ್ಕಳ ಮನಸ್ಸಿಗೆ ಅಗೋಚರವಾಗುವ ರೀತಿ. ಕೆಲವೊಮ್ಮೆ ಆ ರಾಜ್ಯ ಸರಕಾರ ಪುಸ್ತಕ ತಯಾರಿಸದೆ, ಈ ಅಲ್ಪಸಂಖ್ಯಾತ ಭಾಷಿಕರು ಬಹುಸಂಖ್ಯಾತರಿರುವ ಭಾಷಾ ರಾಜ್ಯಗಳಿಂದ ಪಠ್ಯಪುಸ್ತಕ ತರಿಸಿಕೊಡುವ ವ್ಯವಸ್ಥೆ ಆಗುತ್ತದೆ. ಕೇರಳ ಸರ್ಕಾರದ ಪಾಠ ಪಟ್ಟಿ ಬೇರೆ : ಕರ್ನಾಟಕ ಸರ್ಕಾರದ ಪಾಠ ಪಟ್ಟಿ ಬೇರೆ : ಹಾಗಾದರೆ ಕರ್ನಾಟಕ ಸರ್ಕಾರ ರಚಿಸಿದ ಪಠ್ಯಪುಸ್ತಕ ಕೇರಳದ ವಿದ್ಯಾರ್ಥಿಗಳಿಗೆ ಹೇಗೆ ಹೊಂದಿಕೆಯಾಗಬೇಕು ? ತಂಗಿಗೆ ಹಾಕುವ ತಳಿ ತೆಂಗಿಗೆ ಖಂಡಿತ ಆಗಲಾರದು.

ಹೊರನಾಡು ಮತ್ತು ಗಡಿನಾಡು ಎಂಬೀ ಶಬ್ದಗಳಲ್ಲಿ ಸ್ಪಷ್ಟ ವ್ಯತ್ಯಾಸವಿದೆ. ಉದಾಹರಣೆಗೆ, ಬೊಂಬಾಯಿ, ಮದ್ರಾಸ, ಇತ್ಯಾದಿ ಕಡೆಗಳಲ್ಲಿ ನೆಲೆಸಿರುವ ಕನ್ನಡಿಗರು ಹೊರನಾಡವರು, ಕಾಸರಗೋಡು ದಕ್ಷಿಣ ಸೊಲ್ಲಾಪುರ, ಅಕ್ಕಲಕೋಟೆ ಇತ್ಯಾದಿ ಸ್ಥಳಗಳಲ್ಲಿರುವ ಕನ್ನಡಿಗರು ಗಡಿನಾಡವರು ಹೊರನಾಡವರು. ಆಯಾ ರಾಜ್ಯದ ಭಾಷೆಯನ್ನು ಕಲಿಯಲು ಬದ್ಧರಾಗಿರುವಂತೆ ಗಡಿನಾಡವರು ಅಲ್ಲ. ಅದರಲ್ಲೂ ವಿವಾದಾಸ್ಪದವಾದ ಗಡಿ ಪ್ರದೇಶದವರಿಗೆ, ಗಡಿ ವಿವಾದದ ಕೊನೆಯ ತೀರ್ಮಾನದವರೆಗೂ ಅವರವರ ಮಾತೃ ಭಾಷೆಯಲ್ಲಿಯೇ ಎಲ್ಲಾ ಶಿಕ್ಷಣ ಒದಗುವಂತೆ ಆಗಬೇಕಾದುದು ಅವಶ್ಯ.

ಯಾವನು ನಿಷ್ಕಲ್ಮಶವಾಗಿ ತನ್ನ ತಾಯಿಯನ್ನು ಪ್ರೀತಿಸುತ್ತಾನೋ, ಆತನು ಇತರರು ಅವರವರ ತಾಯಂದಿರನ್ನು ಪ್ರೀತಿಸುವುದನ್ನೂ ಮೆಚ್ಚುತ್ತಾನೆ ; ಬಹುಮಾನಿ

ಸುತ್ತಾನೆ. ಇತರರು ಅವರ ತಾಯಂದಿರನ್ನು ಪ್ರೀತಿಸುವುದನ್ನು ಮೆಚ್ಚದವನು, ತನ್ನ ತಾಯಿಯನ್ನಾದರೂ ಪ್ರೀತಿಸುವನೆಂಬುದನ್ನು ನಂಬಲು ಸಾಧ್ಯವಿಲ್ಲ.

ಗೌರವವುಳ್ಳ ವ್ಯಕ್ತಿ ಅನ್ಯರನ್ನೂ ಗೌರವಿಸುತ್ತಾನೆ. ಪ್ರೀತಿ ಪ್ರೀತಿಯನ್ನೇ ಹೆಚ್ಚಿಸುವಂತೆ, ದ್ವೇಷ ದ್ವೇಷವನ್ನೇ ಹೆಚ್ಚಿಸುತ್ತದೆ.

ಭಾಷೆ ಸಂಸ್ಕೃತಿಯ ಮೂಲ ; ಮಾತು ಬಲ್ಲವನಿಗೆ ಜಗಳವಿಲ್ಲ ಎಂಬ ಗಾದೆ ಅರ್ಥವತ್ತಾದುದು.

ಷಷ್ಟಿಪೂರ್ತಿ

ಜಯತೀರ್ಥ ರಾಜಪುರೋಹಿತ
ಗುಲಬುರ್ಗಾ ವಿಶ್ವವಿದ್ಯಾಲಯದ ರಜಿಷ್ಟ್ರಾರ್‌ರು

ಅರವತ್ತು ತುಂಬಿತ್ತು. ಏನು ಮಹಾ? 'ಶತಾಯು ಪುರುಷಃ' ಮನುಷ್ಯನಿಗೆ ನೂರು ವರ್ಷ ಆಯುಷ್ಯವೆಂದು ಸಾಮಾನ್ಯ ತಿಳುವಳಿಕೆಯಿದೆ. ಅಂತೆಯೇ ಹಿರಿಯರು ಕಿರಿಯರಿಗೆ 'ಶತಾಯುಷಿ'ಯಾಗು-ನೂರು ವರ್ಷ ಬಾಳು ಎಂದು ಆಶೀರ್ವದಿಸುತ್ತಾರೆ. ಹೀಗಿರುವಾಗ ನೂರರ ಅರ್ಧವೂ ಅಲ್ಲದ ಮುಕ್ಕಾಲೂ ಅಲ್ಲದ ಅರವತ್ತು ವರ್ಷಕ್ಕೆ ಅಷ್ಟೇಕೆ ಆದ್ಯತೆ? ಅರವತ್ತರ ಅಂಚಿನ ಈಚೆಗೋ ಆಚೆಗೋ ಇರುವವರು ಪ್ರೌಢ ಪ್ರಜ್ಞಾವಂತರಿರುವ ಕಾರಣ ನ್ಯಾಯಾಲಯ ಮತ್ತು ವಿಶ್ವವಿದ್ಯಾಲಯಗಳಂಥ ಸ್ಥಾನಗಳಿಗೆ ಅರ್ಹರಿರುತ್ತಾರೆಂದು ಸಂಜೋಣವೆ? ನಮ್ಮ ಜಾನಪದ ಅನುಭವದ "ಅರವತ್ತರ ಅರಿವು ಮರೆವು ಅಥವಾ ಅರವತ್ತರ ಅರಳು ಮರಳು" ಎಂಬ ನುಡಿ ಅಡ್ಡ ಬರುತ್ತದೆ. ಅರವತ್ತು ದಾಟಿದರೂ ಬುದ್ಧಿಯ ಪ್ರಖರತೆ. ಉತ್ತಮ ಜ್ಞಾಪಕ ಶಕ್ತಿ, ಪರಿಪಕ್ವ ಅನುಭವ, ಪ್ರತಿಭೆಗಳುಳ್ಳ ಗೌರವನೀಯ ವ್ಯಕ್ತಿಗಳು ಒಂದೆಡೆ ಕಂಡರೆ, ಅರವತ್ತು ದಾಟಿ ಹಣ್ಣಾಗಿದ್ದರೂ ಮೂರನೆ ನಾಲ್ಕನೆ ಹೆಂಡತಿಗಾಗಿ ತಡಕಾಡುವ ಮರುಳರು ನಿಶ್ಯಕ್ತಿಯ ದಾರಿ ಹಿಡಿದಿರುವ ಅಂಗಾಂಗಗಳು ಮುಪ್ಪು ಬರುವದನ್ನು ಸಾರಿ ಹೇಳಿದರೂ ಒಪ್ಪಲೊಲ್ಲದ ಮನಸ್ಸುಗಳು, ಅಥವಾ ಮೂಗಿನ ಮೇಲೆಯೇ ಇರುವ ಕನ್ನಡಕಕ್ಕಾಗಿ ಮನೆ ತುಂಬ ಹುಡುಕಾಡುವ ಮರಗಳಂತೆ ಕಂಡು ಬರುತ್ತಾರೆ. ಅದಕಾರಣ ಜಾನಪದದ ನುಡಿಯೂ ಸುಳ್ಳಲ್ಲ. ಇದು ಅರವತ್ತರ ಮಹಿಮೆಯ ಒಂದು ಮುಖ. ಆಯುರ್ಮಾನ ಸ್ವಲ್ಪ ಹೆಚ್ಚಾಗಿರುವ ದೇಶಗಳಲ್ಲಿ ಅರವತ್ತರ ಸ್ಥಿತಿ ಎಪ್ಪತ್ತಕ್ಕೇರಬಹುದು ಅಷ್ಟೆ.

ನಮ್ಮ ದೇಶದ ಆಶ್ರಮ ವ್ಯವಸ್ಥೆಯಲ್ಲಿ ಅರವತ್ತು ವರ್ಷವೆಂದರೆ "ವಾನಪ್ರಸ್ಥ" ಆಶ್ರಮದ ಭಾಗ. ಅಂದರೆ ಗೃಹಸ್ಥಾಶ್ರಮ ಮುಗಿಸಿ ಮಕ್ಕಳು, ಬಂಧು, ಬಾಂಧವರೊಂದಿಗೆ ಬೆಳೆಸಿಕೊಂಡಿದ್ದ ಹೊಣೆ, ಪ್ರೀತಿ, ವಿಶ್ವಾಸ, ಮೋಹ, ಆಸಕ್ತಿ, ವಿರಸಗಳ ಸುಳಿಯಲ್ಲಿ ಸಿಕ್ಕು, ಸುತ್ತಿ, ಸೋತು, ಮಾಗಿ ಅವುಗಳ ಸಂಬಂಧ ಪೂರ್ತಿಯಾಗಿಯೂ ಕಡಿದುಕೊಳ್ಳದೆ ವಿಶ್ರಾಂತಿ ಬಯಸಿ ಗೊಂದಲದಿಂದ ತುಸುದೂರ Far from mading crowd ಅಥವಾ ನೀರ ಮೇಲಿನ ತಾವರೆ ಎಲೆಯ ಹಾಗೆ ಇದ್ದರೂ ಇಲ್ಲದಂತೆ ಇರಬೇಗನ್ನುವ ಸ್ಥಿತಿಯೇ ವಾನಪ್ರಸ್ಥ. ಇದು ಸನ್ಯಾಸದ ಮುಂಚಿನ

ಸ್ಥಿತಿ. ಹಿಂದಿನ ಕಾಲದಲ್ಲಿ ರಾಜರು, ಶ್ರೀಮಂತರೂ, ತಪಸ್ವಿಗಳೂ, ವಿದ್ವಾಂಸರೂ ತಮ್ಮ ಬಂಧು ಬಾಂಧವರಿಂದ ಸಹಾಯ ಪಡೆಯುತ್ತಲೇ ಅವರಿಂದ ತುಸುದೂರ ಗುರುಕುಲಗಳಲ್ಲಿಯೋ, ಆಶ್ರಮಗಳಲ್ಲಿಯೋ ತಮ್ಮ ನೆಚ್ಚಿನ ಹವ್ಯಾಸಗಳಲ್ಲಿ ಕಾಲಕಳೆಯುತ್ತಿದ್ದರು. ತತ್ವಜ್ಞಾನವೋ, ಪರಮಾತ್ಮ ಚಿಂತನೆಯೋ, ಸಾಹಿತ್ಯಸೃಷ್ಟಿಯೋ ಸಂಗೀತ, ಶಿಲ್ಪ, ಚಿತ್ರ ಮುಂತಾದ ಕಲೋಪಾಸನೆಯೋ ಅಂಥ ನಿವೃತ್ತ ಬಾಳಿನವರ ಚಿಂತನೆಯ ವಿಷಯವಾಗಿರುತ್ತಿದ್ದವು. ಮುದುಕತನದ ಹೊಸ್ತಿಲಲ್ಲಿ ಇರುವವರಿಗೆ ವಿಶ್ರಾಂತಿ, ಯುವಕರಿಗೆ ಯಜಮಾನಿಕೆಯ ಸ್ವಾತಂತ್ರ್ಯ ನೀಡುವ ಸಮಯವಿದು.

ಆಗಿನದಾವರೇನು, ಈಗಿನದಾದರೇನು, ಅರವತ್ತು ಅರವತ್ತೇ ಸರ್ಕಾರಗಳು ಐವತ್ತೈದಕ್ಕೊ ಅರವತ್ತಕ್ಕೊ ನಮ್ಮನ್ನು ಮನೆಗೆ ಕಳಿಸಿದಾಗ ಅರಣ್ಯಕ್ಕೆ ಹೋಗದಿದ್ದರೂ ವಾನಪ್ರಸ್ಥದ ಅನುಭವ ತಾನಾಗೇ ಬರುತ್ತದೆ. ಮನೆಯ ಒಳಗೂ ಹೊರಗೂ ಜನ ಜಂಗುಳಿಯ ನಡುವೆಯೇ ಅರ್ಧ ಆಯುಷ್ಯ ಕಳೆದಿದ್ದರೂ ಅರವತ್ತರ ಸ್ಥಿತಿಯಲ್ಲಿ ಜನಸಂಪರ್ಕ ನಮಗೆ ಕ್ವಚಿತ್ತಾಗಿ ಬೇಕೆನಿಸಿದಾಗ ಮಾತ್ರ ಹಿತವೆನಿಸುತ್ತದೆ. ನೆರೆಯವರಿಗೆ ಕಿರುಕುಳ ಕೊಡುವಷ್ಟು ಮಕ್ಕಳನ್ನು ಹಡೆದ ಮಹಾತಾಯಿ ತಂದೆಯರಿಗೂ ಅರವತ್ತು ತುಂಬಿದಾಗ ತಮ್ಮ ಸಂತಾನದ ಗೊಂದಲವೇ ಬೇಸರ ತರಿಸುತ್ತದೆ. ಈ ದಿನಗಳಲ್ಲಿ ಅರಣ್ಯಕ್ಕೆ ಹೋಗುವ ಹಾಗಿಲ್ಲವಾದ ಕಾರಣ ಗುಡಿಗುಂಡಾರಗಳಿಗೊ, ಹರಿಕಥೆ, ಶಿವಕಥೆ, ಪ್ರವಚನ ಪುರಾಣ ಕೇಳುವುದಕ್ಕೊ ಅಂದರೆ ಮನೆಯ ಗೊಂದಲವನ್ನು ಮರೆಯಲಿಕ್ಕೆ ಹೋಗುತ್ತಾರೆ. ಇದೆಲ್ಲ ನಾನು ನಾರ್ಮಲ್ ಮನುಷ್ಯರ ವಿಚಾರ ಹೇಳುತ್ತಿದ್ದೇನೆ. ರಾಜಮರ್ಯಾದೆಯಲ್ಲಿಯೇ ಎಲ್ಲ ಮುಗಿಯಲೆಂದು ಗೊಂದಲದಲ್ಲಿಯೇ ತೇಕಾಡುವ ಮುಖಂಡ ಮುದುಕರಿಗೆ ಇದು ಅನ್ವಯಿಸುವದಿಲ್ಲ. ಅವರು ಅಸಾಧಾರಣ ಪ್ರಾಣಿಗಳು, ಅರವತ್ತರಗಡಿ ಯಜಮಾನಿಕೆಯನ್ನು ಕಿರಿಯರಿಗೆ ಒಪ್ಪಿಸುವ ಸಂಧಿಕಾಲವೆಂಬುದನ್ನು ಅನೇಕರು ತಿಳಿಯಲು ಸಿದ್ಧರಾಗುವದೇ ಇಲ್ಲ. ಮೊಗಲ ಮನೋವೃತ್ತಿ. ಬಲವಂತ ಪದಚ್ಯುತಿಗಾಗಿ ಕಾಯುತ್ತಾರೆ.

ಅದೇನೇ ಇದ್ದರೂ ಅರವತ್ತು ವರುಷವೆಂದರೆ ಕ್ರಿಯಾಶೀಲ ಚಟುವಟಿಕೆಯಿಂದ ವಿಶ್ರಾಂತಿ ಪಡೆದು ಪ್ರಶಾಂತ ಸ್ಥಿತಿಯಲ್ಲಿ ಅಂತರ್ಮುಖಿಯಾಗುವ ಕಾಲ. ಜೀವನದಲ್ಲಿ ಗೈದ ಸಾಧನೆಗಳನ್ನು ನೆನೆದು ಸುಖಿಸುವ ಕಾಲ. ತನ್ನ ಕರ್ತವ್ಯದಲ್ಲಿ ಮರೆವಿನಿಂದ ಕೊರತೆಯಾಗಿದ್ದರೆ ಅದನ್ನು ಪೂರೈಸಿ ಸಮಾಧಾನ ಹೊಂದುವ ಕಾಲ. ಅದಕ್ಕೆಂದೇ ಈ ಷಷ್ಟ್ಯಬ್ದಿ ಸಮಾರಂಭದ ಸುತ್ತ ಹಲವಾರು ಸಂಪ್ರದಾಯಗಳು ಬೆಳೆದುಕೊಂಡು ಬಂದಿವೆ. ಬಂಧು ಮಿತ್ರರ ಅಂತಃಕರಣದ ಕೊಡುಕೊಳ್ಳು ಏಕೆ ನಡೆಯುತ್ತದೆ. ಅರವತ್ತು ವಸಂತಗಳನ್ನು ದಾಟಿ ಬಂದ ಬದುಕಿನ ಸಾಧನೆ ಸಿದ್ಧಿಗಳನ್ನು ಕುರಿತು ಮೆಚ್ಚಿಗೆಯ ಮಾತುಗಳು ಕೇಳಬರುತ್ತವೆ. “ತುಲಾ ಪುರುಷದಾನ” ಅಂದರ ಆತನ

ತೂಕದಷ್ಟು - ಧನವನ್ನೋ ಕಾಳುಕಡಿಯನ್ನೋ ಇತರ ಬಗೆಯ ದಾನ ಧರ್ಮ, ಉಡುಗೊರೆಗಳನ್ನೋ ಮಾಡುವದಂತೂ ಅರವತ್ತರ ವೈಶಿಷ್ಟ್ಯವೇ ಆಗಿದೆಯೆಂದು ಹೇಳುವವರು ಈಗಲೂ ಇದ್ದಾರೆ. ಅದೊಂದು ಧರ್ಮ. ಅರವತ್ತು ತುಂಬಿದ ತಪ್ಪಿಗಾಗಿ ಮಾಡಬೇಕಾದ ಕರ್ಮ ಎನಿಸಲೂಬಹುದು-ಸಾಮರ್ಥ್ಯವಿಲ್ಲದವರಿಗೆ? ಹೀಗೆ ಮಾಡಲು ಇನ್ನೊಂದು ಕಾರಣವೂ ಇದೆ ಎನಿಸುತ್ತದೆ. ವಯಸ್ಸಿನ ಅರವತ್ತು ತಲುಪುವಾಗ ಸಂಸಾರದ ಬಿರ್ಜಿನ ಜವಾಬುದಾರಿಗಳೆಲ್ಲ ಸುಮಾರಾಗಿ ಮುಗಿದು ಕೆಲವರಿಗೆ ತಮ್ಮ ಸಾಮಾಜಿಕ ಹೊಣೆಯ ಬಗ್ಗೆ ಎಚ್ಚರಿಕೆ ಹುಟ್ಟಿರುತ್ತದೆ. ಅಂಥಹವರು ದೈಹಿಕ ವಾಗಿಯೂ ಆರ್ಥಿಕವಾಗಿಯೂ ಪರಾಧೀನರಾಗುವ ಮುಂಚೆ ವಿದ್ಯಾ ಸಂಸ್ಥೆಗಳಿಗೋ ದೇವಸ್ಥಾನ, ಧರ್ಮ ಶಾಲೆಗಳಿಗೋ ದಾನ ದತ್ತಿಗಳನ್ನು, ನೀಡಲು ಮನಸ್ಸು ಮಾಡಲೂ ಬಹುದು.

ಇಷ್ಟೆಲ್ಲ ಮೀಮಾಂಸೆ ಮಾಡಿದ ಮೇಲೆಯೂ ಒಂದು ಪ್ರಶ್ನೆ ಉಳಿದುಬಿಡುತ್ತದೆ. ಮಹಿಳೆಯರಿಗೇಕೆ ಷಷ್ಟಿಪೂರ್ತಿ ಸಮಾರಂಭ ಮಾಡುವುದಿಲ್ಲ ? ಸಾಮಾನ್ಯವಾಗಿ ನಮಗೆ ಬರುವ ಆಮಂತ್ರಣಗಳೆಲ್ಲ ಗಂಡಸರಿಗೆ ಅರುವತ್ತು ತುಂಬಿದಾಗಿನ ಸಮಾರಂಭದವೇ ಇರುತ್ತವೆ. ಇದೆಂಥ ನ್ಯಾಯ ? ಅದೂ ಈ ಇಂದಿರಾಯಣದಲ್ಲಿ ? ಅಥವಾ ಹೀಗೂ ಇರಬಹುದೇನೋ. ಸ್ತ್ರೀಯೆಂದರೆ ಪರಾಶಕ್ತಿ (ಬೇಕಾದರೆ ನಿಮ್ಮ ಅನುಭವವನ್ನು ನೆನೆದುಕೊಳ್ಳಿ) ಇಂಥ ಶಕ್ತಿಯೊಡನೆ ಸೆಣಸಾಡುತ್ತ ಅರವತ್ತು ವರ್ಷ ಕಳೆದನಲ್ಲ ? "Thank God" ಎಂಬುದಕ್ಕಾಗಿ ಷಷ್ಟ್ಯಬ್ದಿ ಸಮಾರಂಭ ಇದ್ದಿರಬೇಕಲ್ಲವೆ ?

ಅರವತ್ತರ ಅಂಗಳದಲ್ಲಿರುವ ನಮ್ಮ ಜನಪ್ರಿಯ ವಿದ್ಯಾ ಮಂತ್ರಿಗಳಾಗಿದ್ದ ಶ್ರೀ ಜಿ. ಬಿ. ಶಂಕರರಾಯರು ಸೌಮ್ಯ ಸ್ವಭಾವ, ಪರೋಪಕಾರಿ ಪ್ರವೃತ್ತಿಗೆ ಮಾದರಿ ಯಾಗಿದ್ದಾರೆ. ಹಲವು ವರ್ಷಗಳಿಂದ ಅವರನ್ನು ಸಮೀಪದಿಂದ ಬಲ್ಲ ನನಗೆ ಅವರನ್ನು ಕುರಿತು ಬರೆಯುವುದಕ್ಕೆ ಸಂಕೋಚವೆನಿಸುತ್ತದೆ. ಪ್ರಜಾತಂತ್ರದ ವ್ಯವಸ್ಥೆಯ ಎಲ್ಲ ಇತಿ ಮಿತಿಗಳಲ್ಲಿಯೂ ತಮಗೆ ಒಪ್ಪಿಸಿದ ವಿದ್ಯಾ ಇಲಾಖೆಯ ಅಭಿವೃದ್ಧಿಯಲ್ಲಿ ತಮ್ಮ ಹೆಸರು ನಾಲ್ಕು ಕಾಲ ನಿಲ್ಲುವಂತೆ ಕೆಲಸಮಾಡುತ್ತಿದ್ದಾರೆ. ಅವರಿಗೆ ಇಂತಹ ಅವಕಾಶ ಗಳು ಮತ್ತು ಅವನ್ನು ಸದುಪಯೋಗ ಪಡಿಸಿಕೊಳ್ಳುವ ಮನೋಬಲವು ಬೆಳೆಯಲೆಂದು ಈ ಸಂದರ್ಭದಲ್ಲಿ ಹಾರಯಿಸುತ್ತೇನೆ.

ಸಂಜಯ ನೊಂದೆ ನಾನು

ಸುರೇಂದ್ರ ದಾನಿ

ಕಮಲ ಮುಖಿ ಸುಲಿವಡೆದು ಲಕ್ಷ್ಮೀ ।
ರಮಣ ಲಕ್ಷ್ಮೀ ರಮಣ ಲಕ್ಷ್ಮೀ ।
ರಮಣ ಎಂದೊರಿಲಿಬೊಡೆ ಸಂಜಯ ನೊಂದೆ ನಾನೆಂದ ॥

ಕುಮಾರವ್ಯಾಸ ಭಾರತದ ಉದ್ಯೋಗ ಪರ್ವದ ಮೂರನೆ ಸಂಧಿಯಲ್ಲಿ ಬರುವ ಈ ಪದ್ಯದತ್ತ ಅನೇಕ ವಿಮರ್ಶಕರ ಗಮನವು ಹರಿದಂತಿಲ್ಲ. ಕೃಷ್ಣನ ಬಾಯಿಂದ ಈ ಮಾತನ್ನು ಹೇಳಿಸಿ ಕುಮಾರವ್ಯಾಸ ಮಹಾಭಾರತದ ಸಂದೇಶಕ್ಕೆ ಮತ್ತು ಶ್ರೀ ಕೃಷ್ಣನ ಚರಿತ್ರಕ್ಕೆ ಒಂದು ವಿಶೇಷ ಮೌಲ್ಯವನ್ನು ನೀಡಿದ್ದಾನೆ. "ತಿಳಿಯ ಹೇಳುವೆ ಕೃಷ್ಣ ಕಥೆಯನು" ಎಂದು ಕಾವ್ಯವನ್ನು ಪ್ರಾರಂಭಿಸಿದ ಗದುಗಿನ ನಾರಣಪ್ಪ ಅದನ್ನು ಅಡ ಗೂಲಜ್ಜಿಯ ಕಥೆಯನ್ನಾಗಿಸಿಲ್ಲ. ಕೃಷ್ಣನ ಭಕ್ತನಾದ ಅವನು ತನ್ನ ಆರಾಧ್ಯ ದೇವತೆಯ ಹೆಸರು, ಸಂದರ್ಭ ಬಂದಾಗಲೆಲ್ಲ ಭಕ್ತಿ ಪರವಶತೆಯಿಂದ ಮೈಮರೆತು ಹೊಗಳುತ್ತಾನೆ ಎಂದು ಬಹುಮಂದಿ ವಿಮರ್ಶಕರು ಹೇಳುತ್ತಾರೆ. ಇದಕ್ಕೆ ಅನೇಕ ಉದಾಹರಣೆಗಳು ಸಿಗುತ್ತವೆ. ಆದರೆ ಆತನು ಕೆಲ ಸಂದರ್ಭಗಳಲ್ಲಿ ಕೃಷ್ಣನ ಬಾಯಿಂದ ಹೊರಡಿಸಿದ ಮಾತುಗಳು ಮತ್ತು ಅವನಿಂದ ಮಾಡಿಸಿದ ಕೃತಿಗಳು ಕುಮಾರವ್ಯಾಸನ ಲೌಕಿಕ ದೃಷ್ಟಿಯನ್ನು ಎತ್ತಿ ತೋರಿಸುತ್ತವೆ. "ಅವನು ದೇವರು ಅತಿಮಾನುಷ ಶಕ್ತಿಯಿಂದ ಪೂರಿತನಾದವನು. ಆದ್ದರಿಂದ ಮಾನವ ಮಟ್ಟದಲ್ಲಿ ವ್ಯವಹರಿಸುವದೇ ಇಲ್ಲ" ಎಂಬ ತರ್ಕ ಕುಮಾರವ್ಯಾಸನಿಗೆ ಒಪ್ಪಿಗೆಯಿಲ್ಲ. ಆದ್ದರಿಂದ ಕೃಷ್ಣನಿಂದಲೇ "ನೀವೆಲ್ಲ ದೇವನೆಂದೇ ಬಗೆವಿರಿ. ದೇವತ್ವವೆಮಗಿಲ್ಲ" ಎಂದು ಹೇಳಿಸುತ್ತಾನೆ. ಕುಂತೀದೇವಿ ಧರ್ಮರಾಯ ಮೊದಲಾದವರಿಗೆ ಪಾದಮುಟ್ಟಿ ನಮಸ್ಕರಿಸಿ ಕೃಷ್ಣ "ಮಾನವನಿಗೆ ಮಾದರಿಯಾಗುವ" ತನ್ನ ಗುಣವನ್ನು ಮೆರೆದನೆಂದು ಹೇಳುತ್ತಾನೆ.

ಶ್ರೀ ಕೃಷ್ಣನು ದೇವರಲ್ಲ. ಅವನೊಬ್ಬ ಚಾರಿತ್ರಿಕ ವ್ಯಕ್ತಿ. ಆಗಿನ ಕಾಲದ ಒಬ್ಬ ನುರಿತ ರಾಜಕಾರಣಿ. ಮಹಾಜನ ನಾಯಕ ಎಂದು ಭಾವಿಸುವವರೂ ಇದ್ದಾರೆ. ಕುಮಾರವ್ಯಾಸ ಈ ದೃಷ್ಟಿಯನ್ನು ಮರೆತಿಲ್ಲ. ಅವನ ಈ ವ್ಯಕ್ತಿತ್ವದ ನಿರೂಪಣೆಯ

ಸಂದರ್ಭಗಳನ್ನು ಕವಿ ಹುಸಿ ಹೋಗಗೊಡುವದಿಲ್ಲ. ಅಂಥವರಲ್ಲಿ ಈ ಮೇಲೆ ಉಲ್ಲೇಖಿಸಿದ ಶ್ಲೋಕ ಶಿಖರ ಪ್ರಾಯವಾದುದೆಂದು ನನ್ನ ಅಭಿಪ್ರಾಯ.

ಇದರ ಕಥಾ ಸಂದರ್ಭ ಹೀಗೆ :-

ಹನ್ನೆರಡು ವರುಷ ವನವಾಸ ಮತ್ತು ಒಂದು ವರ್ಷ ಅಜ್ಞಾತವಾಸಗಳನ್ನು ಯಶಸ್ವಿಯಾಗಿ ಪೂರೈಸಿಕೊಂಡು ಪಾಂಡವರು ವಿರಾಟನಗರಿಯಲ್ಲಿ ಪ್ರಕಟವಾಗುತ್ತಾರೆ. ಉತ್ತರಾಭಿಮನ್ಯು ವಿವಾಹವೂ ಮುಗಿದಿದೆ. "ಮುಂದೇನು" ಎಂದು ಚರ್ಚೆ ನಡೆಯುತ್ತಿರುವಾಗಲೇ ಪಾಂಡವರು ತಮ್ಮ ಯುದ್ಧ ಸಿದ್ಧತೆಯನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ. ಸಂಧಾನದ ಪ್ರಯತ್ನಗಳನ್ನೂ ಮುಂದುವರೆಸುತ್ತಿದ್ದಾರೆ. ಇತ್ತ ದುರ್ಯೋಧನನು ಸುಮ್ಮನೆ ಕುಳಿತಿಲ್ಲ. ಪಾಂಡವರ ಮೇಲೆ ತನ್ನ ಕಣ್ಣು ಇಟ್ಟೇ ಇಟ್ಟಿದ್ದಾನೆ. ಅವರು ಯುದ್ಧಕ್ಕಿಳಿದರೆ ತನಗೆ ಹಾನಿ ಕಟ್ಟಿಟ್ಟದ್ದೆಂಬ ಅಳುಕು ಇದೆ. ಆದ್ದರಿಂದ ಅವರು ಯುದ್ಧದ ವಿಚಾರವನ್ನು ಮಾಡದೆ ವಾಸ್ತವಿಕ ಪರಿಸ್ಥಿತಿಯನ್ನು ಒಪ್ಪಿಕೊಂಡು ತನ್ನ ಅಧೀನರಾಗಿ ಇರುವಂತೆ ಮಾಡಬೇಕೆಂಬುದು ಅವನ ಪ್ರಯತ್ನ. ಈ ಯೋಜನೆಯ ಅಂಗವಾಗಿ ಅವನು ಸಂಜಯನನ್ನು ಕರೆದು ಪಾಂಡವರಲ್ಲಿಗೆ ದೌತ್ಯ ವಹಿಸಿ ಹೋಗಲು ಹೇಳುತ್ತಾನೆ. "ದುರ್ಯೋಧನ ದೊಡ್ಡ ಚಕ್ರವರ್ತಿ. ಅವನಲ್ಲಿ ದೊಡ್ಡ ಸೈನ್ಯವಿದೆ. ಅಪಾರ ಧನಸಂಪತ್ತಿದೆ. ಈಗ ಕಾಡಿನಿಂದ ಬಂದ ಪಾಂಡವರು ಅವನೊಡನೆ ಸೆಣಸುವದೆಂದರೇನು? ಇದು ಸಮ ಕುಸ್ತಿಯೆನಿಸದು. ಪಾಂಡವರು ಧೂಳೀಪಟ ಆಗಬಹುದು. ಆದ್ದರಿಂದ ಈ ಯುದ್ಧ, ಸಾಹಸಕ್ಕೆ ಇಳಿಯದಿರುವದೇ ಪಾಂಡವರಿಗೆ ಮೇಲು" ಎಂಬ ಉಪದೇಶವನ್ನು ತಿಳಿಹೇಳಿ ಅವರನ್ನು ಯುದ್ಧದಿಂದ ಪರಾಂಗ್ಮುಖವಾಗುವಂತೆ ಮಾಡಬೇಕೆಂಬುದು ಸಂಜಯನಿಗೆ ನೀಡಿದ ಆದೇಶ.

ಇದು ಅಧಿಕೃತವಾದ ಬಹಿರಂಗದ ಆದೇಶವಾದರೂ ಅವನಿಗೆ ಗುಟ್ಟಿನ ಆದೇಶ ಹೊಂದಿದೆ. ಪಾಂಡವರು ಯುದ್ಧವನ್ನೇ ಮಾಡುವರೆಂಬ ವಿಶ್ವಾಸ ದುರ್ಯೋಧನನಿಗಿದೆ. ಆದ್ದರಿಂದ ಅವರ ಸೈನ್ಯಬಲವೇನು ? ಧನಕನಕ ಸಂಗ್ರಹ ಎಷ್ಟಿದೆ ? ಮಿತ್ರ ಪರಿವಾರ ಯಾವುದು ಇವೇ ಮೊದಲಾದ ವಿವರಗಳನ್ನು ತಿಳಿದುಕೊಂಡು ಬರಬೇಕೆಂಬುದು ಸಂಜಯನಿಗೆ ನೀಡಲಾದ ಗುಟ್ಟಿನ ಆಜ್ಞೆ.

ಹಸ್ತಿನಾವತಿಯ ಚಕ್ರವರ್ತಿಯಿಂದ ಬಂದವನನ್ನು ಉಪಪ್ಲಾವ್ಯ ನಗರದಲ್ಲಿ ಧರ್ಮರಾಯನು ತುಂಬಿದ ಒಡ್ಡೋಲಗದಲ್ಲಿ ಉಚಿತವಾದ ಮರ್ಯಾದೆಯಿಂದ ಕಾಣಿಸಿಕೊಳ್ಳುತ್ತಾನೆ. ದುರ್ಯೋಧನ ಹೇಳಿ ಕಳಿಸಿದ ಮಾತುಗಳನ್ನು ಸಂಜಯ ಹೇಳುತ್ತಾನೆ. ಅವು ಭೀಮಾರ್ಜುನಾದಿಗಳಿಗೆ ಸರಿಬರುವುದಿಲ್ಲ. ಕೋಪಾಟೋಪಗಳನ್ನು ವ್ಯಕ್ತಪಡಿಸುತ್ತಾರೆ. ಧರ್ಮರಾಯ ಅವರನ್ನೆಲ್ಲ ಸಮಾಧಾನಗೊಳಿಸುತ್ತಾನೆ. ತಾನು ಹೇಳಬೇಕಾದ್ದನ್ನು ಹೇಳಿ ಸಭೆ ಮುಕ್ತಾಯಗೊಳಿಸುತ್ತಾನೆ.

ಅಂದು ರಾತ್ರಿ ಕೃಷ್ಣ ಸಂಜಯನನ್ನು ತನ್ನ ಮನೆಗೆ ಕರೆಸಿಕೊಳ್ಳುತ್ತಾನೆ. ಅಲ್ಲಿ ಸತ್ಯಭಾಮೆಯ ತೊಡೆಯ ಮೇಲೆ ತಲೆಯಿಟ್ಟು, ಅರ್ಜುನನಿಂದ ಪಾದಸೇವೆ ಗೊಳ್ಳುತ್ತಿರುವ ಭಂಗಿಯಲ್ಲಿ ಸಂಜಯನೊಡನೆ ಮಾತನಾಡುತ್ತಾನೆ. ಈ "ಫೈರ್-ಸೈಡ್" ಸಂಭಾಷಣೆ ಬಹಳ ಮಹತ್ವದ್ದು. ಇಲ್ಲಿ ಶ್ರೀ ಕೃಷ್ಣ ತನ್ನ ಸಮಗ್ರ ರಾಜ ಕಾರಣದ ತಿರುಳನ್ನೇ ಬಿಚ್ಚಿಡುತ್ತಾನೆ. ತನ್ನ ಜೀವನ ಧ್ಯೇಯವನ್ನು ನಿರೂಪಿಸು-ತ್ತಾನೆ. ಇಷ್ಟೊಂದು ಮನಬಿಚ್ಚಿ ಅವನು ಬೇರೆ ಎಲ್ಲಿಯೂ ಮಾತನಾಡಿದಂತಿಲ್ಲ. ಮೇಲೆ ಉಲ್ಲೇಖಿಸಿರುವ ಶ್ಲೋಕ ಇದೇ ಸಂದರ್ಭದ್ದು.

ಈ ಸಂದರ್ಭವನ್ನು ಒಳ್ಳೇ ನಾಟಕೀಯವಾಗಿ ನಿರೂಪಿಸಿದ್ದು ಕುಮಾರವ್ಯಾಸನ ಇನ್ನೊಂದು ವೈಶಿಷ್ಟ್ಯ. ಶ್ರೀಕೃಷ್ಣ-ಸಂಜಯರ ಸಂಭಾಷಣೆಯನ್ನು ಅವರು ನೇರವಾಗಿ ವರ್ಣಿಸುವದಿಲ್ಲ. ಸಂಜಯ ಹಸ್ತಿನಾಪುರಕ್ಕೆ ಹಿಂದಿರುಗಿದ ಮೇಲೆ ಅವನ ದೌತ್ಯದ ಫಲಿತಾಂಶವನ್ನು ತಿಳಿಯಲು ತೀರ ಕುತೂಹಲಿಯಾದ ವ್ಯಕ್ತಿಯೆಂದರೆ ಧೃತರಾಷ್ಟ್ರ. ಆತನೇ ಮೊದಲು ಸಂಜಯನನ್ನು ಕರೆಸಿಕೊಂಡು "ಧರ್ಮಜ ಏನೆಂದ? ಕೃಷ್ಣ ಏನೆಂದ?" ಎಂದು ಮುಂತಾಗಿ ಕೇಳುತ್ತಾನೆ. ಆಗ ಸಂಜಯ ನೀಡಿದ ವರದಿಯಲ್ಲಿ ಶ್ರೀಕೃಷ್ಣ-ಸಂಜಯ ಸಂಭಾಷಣೆ ನಿವೇದಿತವಾಗುತ್ತದೆ.

ಕುಮಾರವ್ಯಾಸ ಈ ತಂತ್ರವನ್ನು ಬಳಸಿದ್ದರಲ್ಲಿ ಒಂದು ವೈಶಿಷ್ಟ್ಯವಿದೆ. ಶ್ರೀಕೃಷ್ಣ ಏನು ಹೇಳಿದ ಎಂಬುದಕ್ಕಿಂತ ಅವನ ಆ ಮಾತುಗಳು ಸಂಜಯನ ಮೇಲೆ ಏನು ಪರಿಣಾಮ ಮಾಡಿದವು ಎಂಬುದು ಹೆಚ್ಚು ಮಹತ್ವದ್ದು. ಅದನ್ನು ಕವಿ ನೇರ ವಾಗಿ ಹೇಳದೆ ಅವನ ಬಾಯಿಂದಲೇ ಹೇಳಿಸುತ್ತಾನೆ. ಸಂಜಯ ವರದಿ ಒಪ್ಪಿಸುವಾಗ ಟೇಪ್‌ರೆಕಾರ್ಡರ್‌ನಂತೆ ಇದ್ದದ್ದನ್ನು ಇದ್ದಂತೆಯೇ ಹೇಳದೆ ಆ ಮಾತುಗಳಿಂದ ತನ್ನ ಮೇಲಾದ ಪರಿಣಾಮವನ್ನೂ ಅದರಲ್ಲಿ ಸೇರಿಸುವನೆಂಬುದು ಖಂಡಿತ. ಆ ಮಾತುಗಳೇ ಕೌರವರ ಮೇಲೆ ಪರಿಣಾಮ ಮಾಡಬಲ್ಲವೇ ಹೊರತು ಶ್ರೀಕೃಷ್ಣನ ಬಾಯಿಂದ ಬಂದ ಮಾತುಗಳಲ್ಲ. ಆದ್ದರಿಂದ ಸಂಜಯ ಆ ಮಾತುಗಳನ್ನು ಅಲ್ಲಿ ಹೋಗಿ ಹೇಗೆ ಹೇಳಿದ ಎಂಬುದು ಮಹತ್ವದ್ದು. ಈ ಸೂಕ್ಷ್ಮವನ್ನು ಅರಿತುಕೊಂಡು ಕವಿ ಸೂಕ್ತ ತಂತ್ರವನ್ನು ಬಳಸಿಕೊಂಡಿದ್ದಾನೆ.

ಶ್ರೀಕೃಷ್ಣ ತಾನು ಪಾಂಡವ ಪಕ್ಷಪಾತಿ ಏಕೆ ಎಂಬುದನ್ನು ಸಂಜಯನಿಗೆ ಬೇರೆ ಭಾಷೆ ಮತ್ತು ಶಬ್ದಗಳಲ್ಲಿ ವಿವರಿಸುತ್ತಾನೆ. ಪಾಂಡವರು ಸೋದರತ್ತೆಯ ಮಕ್ಕ ಳೆಂದಾಗಲಿ, ಅವರು ತನ್ನ ನಿಷ್ಠೆಯ ಭಕ್ತರೆಂದಾಗಲಿ "ಮಮ ಪ್ರಾಣಾಪಿ ಪಾಂಡವಾಃ" ಎಂದು ಹೇಳಲಿಲ್ಲ. ಕೌರವ-ಪಾಂಡವರು ಅಣ್ಣ ತಮ್ಮಂದಿರು ಅವರು ಜಗಳವಾಡುವದು ಲೋಕಕ್ಕೆ ಹೊಸದಲ್ಲ. ದ್ಯೂತ, ಮೋಸ, ಯುದ್ಧ ಇವು ಕ್ಷತ್ರಿಯ ಕುಲಕ್ಕೆ ಹೊರ ತಾದುದಲ್ಲ. ಎಲ್ಲರಂತೆ ಪಾಂಡವ ಕೌರವರೂ ಈ ವ್ಯಸನಗಳಿಗೆ ಬಲಿಯಾಗಿ ಅವರ

ಫಲಗಳನ್ನು ಭೋಗಿಸುತ್ತಿದ್ದಾರೆ. ಇಂದು ಬದ್ಧ ವೈರಿಗಳಂತೆ ಜಗಳವಾಡಿದ ಅಣ್ಣ ತಮ್ಮಂದಿರು ನಾಳೆ ಒಂದೇ ರಕ್ತಸಂಬಂಧಿಗಳಾಗಿ ಬಾಳಲೂಬಹುದು. ಇದರಲ್ಲಿ ಹೊರಗಿನವರು ಕೈಹಾಕಿದರೆ ಅವರೇ ಹುಚ್ಚರಾಗುತ್ತಾರೆ. ಇದು ಕೃಷ್ಣನಿಗೆ ತಿಳಿದಿಲ್ಲ ವೆಂದಲ್ಲ. ಆದರೆ ಅವನು ಕೌರವರನ್ನು ದ್ವೇಷಿಸುವದಕ್ಕೆ ಪಾಂಡವರನ್ನು ಎತ್ತಿ ಕಟ್ಟುವದಕ್ಕೆ ಇರುವ ಕಾರಣವೇ ಬೇರೆ.

ದುರ್ಯೋಧನನ ಅಹಂಕಾರ ಸೊಕ್ಕುಗಳೇನೇ ಇರಲಿ. ಅವನು 'ಅರಸು, ಆದ್ದರಿಂದ ಅವನು ಹೇಗೆ ರಾಜ್ಯಭಾರ ನಡೆಸುತ್ತಾನೆ ? ಅವನ ಕೈಯಲ್ಲಿ ರಾಜ್ಯ ಸುರಕ್ಷಿತವೆ ? ಪ್ರಜೆಗಳು ಕ್ಷೇಮವೆ ? ಅವರ ಧರ್ಮ ಸಂಸ್ಕೃತಿಗಳು ಭದ್ರವೆ ? ಈ ಪ್ರಶ್ನೆಗಳಿಗೆ ಕೃಷ್ಣ ಹೆಚ್ಚು ಮಹತ್ವ ಕೊಡುತ್ತಾನೆ. ದುರ್ಯೋಧನ ಬಲಿಷ್ಠನೇನೊ ಸರಿ, ಆದರೆ ಅವನು ತನ್ನ ಬಲವನ್ನು ಹೇಗೆ ಉಪಯೋಗಿಸಿಕೊಳ್ಳುತ್ತಿದ್ದಾನೆ ?

ತುಂಬಿದ ರಾಜಸಭೆಗೆ ಸೆರೆ ರಾಜ್ಯದ ಪಟ್ಟ ಮಹಿಷಿಯೊಬ್ಬಳನ್ನು ಸೆಳೆತಂದು ಅವಳನ್ನು ವಿವಸ್ತ್ರಳನ್ನಾಗಿ ಮಾಡಲೆತ್ನಿಸಿದ ದುರ್ಯೋಧನ. ಅವನ ಈ ಸಾಹಸವನ್ನು ಕಂಡು ಭಲೆ ಭಲೆ ಎಂದು ಬೆನ್ನು ಚಪ್ಪರಿಸಿ ಅದರ ಮೋಜನ್ನು ಆನಂದಿಸುವ "ಸುಸಂಸ್ಕೃತ"ರು ಅವನ ಸ್ನೇಹಿತರು. ರಾಜನೇ ಇಂಥ ಮಾದರಿ ಹಾಕಿಕೊಟ್ಟರೆ ಅವನ ಅಧಿಕಾರಿಗಳು, ಅನುಯಾಯಿಗಳು ಹೇಗೆ ನಡೆದುಕೊಂಡಾರು ? ದುರ್ಯೋಧನನ ರಾಜ್ಯದಲ್ಲಿ ಹೆಂಗಸರ ಮಾನವೆಂಬುದು ಕಾಸಿಗೆ ಹಂಚೇರಾಗಲಿಕ್ಕಿಲ್ಲವೆ ? ದ್ರೌಪದಿ ಸಾಮಾನ್ಯ ಬೀದಿಯ ವೇಶ್ಯೆಯಲ್ಲ, ಅನಾಥಳೂ ಅಲ್ಲ. ಅಂಥವಳಿಗೇ ಈ ಗತಿ ಆದರೆ ಇನ್ನುಳಿದ ಸಾಮಾನ್ಯ ಸ್ತ್ರೀಯರ ಗೌರವವೇನು ? ಮಹಿಳೆಯರ ಮಾನಕ್ಕೆ ಮೂರು ಕಾಸಿನ ಬೆಲೆಯೂ ಇಲ್ಲದ ಸಂಸ್ಕೃತಿ ಎಂಥ ಸಂಸ್ಕೃತಿ? ರಾಜನೇ ಸ್ವತಃ ಸಂಸ್ಕೃತಿಯ ಇಂಥ ಅಧಃಪತನಕ್ಕೆ ಕಾರಣನಾಗುತ್ತಿರುವದನ್ನು ಜನ ತೆಪ್ಪಗೆ ನೋಡುತ್ತ ಕುಳಿತಿರ ಬೇಕೆ? ಇದರ ವಿರುದ್ಧ ಬಂಡೇಳುವ ಪ್ರಜ್ಞೆ ಯಾರಲ್ಲೂ ಮೂಡಬಾರದೆ? ಪ್ರಜೆಗಳ ಸಂಸ್ಕೃತಿಯನ್ನು ರಕ್ಷಿಸದ, ನೈತಿಕ ಮೌಲ್ಯಗಳನ್ನು ಅಧೋಗತಿಗೆಳೆಯುವ ರಾಜ ರಾಜನೇ ಅಲ್ಲ. ಅವನು ಸಿಂಹಾಸನದ ಮೇಲೆ ಇರಲು ಯೋಗ್ಯನಲ್ಲ. ಆದ್ದರಿಂದ ದುರ್ಯೋಧನ ಪಟ್ಟದಿಂದ ಇಳಿಯಬೇಕು.

ಆಗಿನ ಸಮಕಾಲೀನ ಮೌಲ್ಯಗಳಿಗೆ ತಕ್ಕಂತೆ ಪಾಂಡವರು ಆ ಪಟ್ಟಕ್ಕೆ ಬರಲು ಅರ್ಹರು. ಯಾಕೆಂದರೆ ಅವರು ದುರ್ಯೋಧನನ ಬಂಧುಗಳೂ ಹೌದು. ಜನತೆಯ ಸಾಂಸ್ಕೃತಿಕ ಮತ್ತು ನೈತಿಕ ಮೌಲ್ಯಗಳ ರಕ್ಷಣೆಯ ಬೆಲೆಯನ್ನು ಅರಿತವರೂ ಹೌದು.

ಆದ್ದರಿಂದ ದುರ್ಯೋಧನನ ಯಾವ ಪಾಪಕ್ಕಿಂತ ದ್ರೌಪದೀ ವಸ್ತ್ರಾಪಹರಣದ ಪಾಪ ಅತ್ಯಂತ ಘೋರವಾದುದೆಂದು ಕೃಷ್ಣನ ತೀರ್ಮಾನ. ಅದಕ್ಕಾಗಿ ಅವನಿಗೆ ಶಿಕ್ಷೆ ಆಗಬೇಕು. ಅವನು ಭರತವರ್ಷದ ಚಕ್ರವರ್ತಿಯೆನಿಸಿಕೊಳ್ಳಲು ಅನರ್ಹ. ಆದ್ದರಿಂದ ಅವನು ಪದಚ್ಯುತನಾಗಬೇಕು. ದೇವತೆಗಳು, ಋಷಿಗಳು ಪ್ರಸ್ಥಾಪಿಸಿದ ಸಾಮಾಜಿಕ

ಮೌಲ್ಯಗಳು, ಧಾರ್ಮಿಕ ಭಾವನೆಗಳು ಮತ್ತು ನೈತಿಕ ಪರಂಪರೆಗಳು ಆಬಾಧಿತವಾಗಿ ಮುಂದುವರಿಯಬೇಕಾದರೆ ಇವುಗಳ ಬಗ್ಗೆ ಅಭಿಮಾನ ಮತ್ತು ಗೌರವ ಭಾವನೆ ಹೊಂದಿರುವವರು ಸಿಂಹಾಸನದ ಮೇಲಿರಬೇಕು.

ಇದೇ ಶ್ರೀಕೃಷ್ಣನ ಜೀವನದ ಧ್ಯೇಯ, ಅವತಾರ ಕಾರ್ಯ, ಸಾಧನೆಯೂ ಅದೇ. ಕುಮಾರವ್ಯಾಸ ಮೇಲಿನ ಅರ್ಧಶ್ಲೋಕದಲ್ಲಿ ಇಷ್ಟೆಲ್ಲ ತತ್ತ್ವವನ್ನು ಅಡಕ ಗೊಳಿಸಿದ್ದಾನೆ. ತನ್ನ ಮನಸ್ಸನ್ನು ನಿಜವಾಗಿ ನೋಯಿಸಿದ ಸಂಗತಿ ಯಾವುದು ಎಂಬುದನ್ನು ಹೇಳುವದರ ಮೂಲಕ ತನ್ನ ಸಮಗ್ರ ಜೀವನದ ಸಿದ್ಧಾಂತವನ್ನೇ ನಿರೂಪಿಸಿದ್ದಾನೆ.

ಶ್ರೀಕೃಷ್ಣ ಕೇವಲ ಸಮಾಜ ಸುಧಾರಕನಾಗಲೀ, ರಾಜಕೀಯ ಬಂಡಾಯಗಾರ ನಾಗಲೀ ಅಲ್ಲ. ಅವನು ಚತುರ ರಾಜಕಾರಣಿಯೂ ಹೌದು. ಆದ್ದರಿಂದಲೇ ಅವನು ಯಾವ ಮಾತುಗಳನ್ನು ಎಲ್ಲಿ ಯಾವಾಗ ಹೇಳಬೇಕಾಗಿದೆಂಬುದನ್ನು ಚೆನ್ನಾಗಿ ಬಲ್ಲ. ಮೇಲೆ ನಿರೂಪಿಸಿದ ತನ್ನ ಜೀವನದ ಅಥವಾ ಎತ್ತಿಕೊಂಡ ಮಹಾಕಾರ್ಯದ ಸಿದ್ಧಾಂತ ವನ್ನು ಅವನು ಪಾಂಡವರೆದುರು ಇಲ್ಲವೇ ತನ್ನ ಭಕ್ತರ ಸಮೂಹದಲ್ಲಿ ಅಥವಾ ಬೇರೆ ಯಾವುದೇ ವೇದಿಕೆಯಲ್ಲಿ ಹೇಳುವದಿಲ್ಲ. ಅದು ಯಾರನ್ನು ಉದ್ದೇಶಿಸಿದೆಯೋ ಅವರಿಗೇ ನೇರವಾಗಿ ಮುಟ್ಟುವಂತೆ ಹೇಳುತ್ತಾನೆ.

ಇದರಿಂದ ಕೃಷ್ಣ ಇನ್ನೊಂದು ಕಾರ್ಯವನ್ನು ಸಾಧಿಸಿಕೊಂಡಿದ್ದಾನೆ. ದುರ್ಯೋಧನನ ಶಿಬಿರದಲ್ಲಿ ಇದರಿಂದ ಗಲಿಬಿಲಿ ಉಂಟಾಗುತ್ತದೆ. ದುರ್ಯೋಧನನು ಮಾಡುತ್ತಿರುವದು ಸರಿಯೋ ತಪ್ಪೋ ಎಂಬ ಚರ್ಚೆ ಅವನ ಶಿಬಿರದಲ್ಲೇ ಪ್ರಾರಂಭ ವಾಗುತ್ತದೆ. ಶತ್ರು ಪಕ್ಷದಲ್ಲಿ ಭೇದವನ್ನು ನಿರ್ಮಿಸುವ ರೀತಿ ಇದು. ಇವರ ಮೂಲಕ ಶತ್ರು ಪಕ್ಷದ ನೈತಿಕ ನೆಲೆಗಳನ್ನು ಸೀಳುತ್ತಾನೆ. ಯುದ್ಧ ಘೋಷಣೆ ಆಗುವ ಮುನ್ನವೇ ಶತ್ರುವಿನ ಕೋಟೆಯಲ್ಲಿ ಬಿರುಕುಗಳನ್ನು ನಿರ್ಮಿಸುವದು ರಾಜಕೀಯ ಧೂರ್ತ ತನದಲ್ಲವೇ ? ಇಂಥ "ಲಾಬಿಯಿಂಗ್" ಕೃಷ್ಣ ಮಾಡುತ್ತಲೇ ಇರುತ್ತಾನೆ. ಪರಿಣಾಮವೆಂದರೆ ಎರಡೂ ಪಕ್ಷಗಳು ರಣರಂಗದಲ್ಲಿ ಬಂದು ನಿಲ್ಲುವ ಹೊತ್ತಿಗೆ ಪಾಂಡವರಿಗೆ ಜಯ ಕಟ್ಟಿಟ್ಟದ್ದೆಂಬ ಮಾತು ಜನಜನಿತವಾಗಿ ಹೋಗುತ್ತದೆ. ಈ ತಂತ್ರವನ್ನು ಶ್ರೀ ಕೃಷ್ಣನಷ್ಟು ಯಶಸ್ವಿಯಾಗಿ ಸಾಧಿಸಿದವರು ಬೇರಾರೂ ಇಲ್ಲ.

ಷಡಕ್ಷರದೇವನ ಕವಿಕರ್ಣರಸಾಯನ

ಪ್ರೊ. ಎ. ಎಲ್. ಹಿರೇಮಠ, ಎಮ್.ಎ., ಕಾವ್ಯತೀರ್ಥ'
ಹುಬ್ಬಳ್ಳಿ

ಪ್ರವಿಮಳ ರಾಜಶೇಖರ ವಿಳಾಸ ಮಹಾಕೃತಿಯುಂ, ವೃಷಾಧಿರಾ-
ಜವಿಜಯ ಸತ್ಪ್ರಬಂಧಮುಮಸೊಪ್ಪುವ ಕನ್ನಡದಿಂ ನಿಮಿರ್ಜಿದಂ ।
ಭವನವಿನುತ್ಯ ಮಾಗೆ ಕವಿಕರ್ಣ ರಸಾಯನವೆಂಬ ಕಬ್ಬಮುಂ
ಪ್ರವಿತತ ಸಂಸ್ಕೃತೋಕ್ತಿಯೊಳೊಡರ್ಚಿದನಲ್ತೆ 'ಷಡಕ್ಷರಾಹ್ವಯಂ ॥
(ಶಬರಶಂಕರ ವಿಳಾಸಂ. ಆಶ್ವಾಸ ೫ ಪದ್ಯ ೬೩)

ಕವಿ ಪರಿಚಯ

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಯಶೋಭಾಜನರಾದ ಕವಿಗಳ ಶ್ರೇಣಿಯಲ್ಲಿ ಮಹಾಕವಿ ಷಡಕ್ಷರದೇವನು ಗಣ್ಯ ಸ್ಥಾನವನ್ನು ಪಡೆದಿದ್ದಾನೆ. ಕನ್ನಡ ವಾಙ್ಮಯ ಚರಿತ್ರೆಯನ್ನು ಮತ್ತು ವಿಚಕ್ಷಣರ ವಿಮರ್ಶೆಯನ್ನು ನೋಡಿದರೆ ಒಂದೇ ಹೆಸರಿನ ಹಲವು ಕವಿಗಳು ಕಂಡು ಬರುತ್ತಿದ್ದು ಅವರ ಕಾಲ ಮತ್ತು ಕೃತಿಗಳ ಬಗ್ಗೆ ನಿಃಸಂದಿಗ್ಧವಾಗಿ ಹೇಳುವದು ಸ್ವಲ್ಪ ಕಷ್ಟ. ಹೀಗೆ ವಿಚಾರಿಸಿದಲ್ಲಿ ಕನ್ನಡ ಸಾಹಿತ್ಯದಲ್ಲಿ 'ಷಡಕ್ಷರ' ಎಂಬ ಹೆಸರಿನ ನಾಲ್ಕು ಜನ ಕವಿಗಳು ಇರುವದು ಕಂಡುಬರುವದು.

೧) ಮೈಸೂರು ಜಿಲ್ಲೆಯ ಎರಗುಂಬಳಿ ಮಠಾಧ್ಯಕ್ಷರಾದ ಮುಪ್ಪಿನ ಷಡಕ್ಷರಸ್ವಾಮಿ ಈತನ ಕಾಲ ೧೭ನೇ ಶತಮಾನ. ಈತನ ಕೃತಿ, 'ಸುಭೋಧಸಾರ'

೨) ಕೆಳದಿಯ ಅರಸು ಬೂದಿ ಬಸವಪ್ಪನಾಯಕನ ಆಸ್ಥಾನ ಸಚಿವ ಷಡಕ್ಷರ ಮಂತ್ರಿ. ಈತನ ಕಾಲ ಸುಮಾರು ಕ್ರಿ.ಶ. ೧೭೪೦ "ವೀರಶೈವ ಧರ್ಮ ಶಿರೋಮಣಿ" ಎಂಬ ಗ್ರಂಥವನ್ನು ಸಂಸ್ಕೃತದಲ್ಲಿ ರಚಿಸಿದ್ದಾನೆ.

೩) ವಿರಕ್ತ ಷಡಕ್ಷರಿ ಕ್ರಿ.ಶ. ೧೭೫೦ ಈತನ ಕಾಲ. ಶಿವಯೋಗಾಷ್ಟಕ ಶಿವಪೂಜಾಷ್ಟಕಗಳನ್ನು ಬರೆದಿರುವನು.

೪) ನಮ್ಮ ಈ ಲೇಖನಕ್ಕೆ ವಿಷಯವಾಗಿರುವ, ಮಹಾಕಾವ್ಯಗಳ ಕರ್ತೃವೆನಿಸಿ ಕನ್ನಡ ಸಾಹಿತ್ಯದಲ್ಲಿ ಪ್ರತಿಷ್ಠಾವಾಗಿರುವ ಎಳಂದೂರು ಷಡಕ್ಷರದೇವ. ಈತನ ಕಾಲ ಕ್ರಿ. ಶ. ೧೬೫೫.

ಈ ಷಡಕ್ಷರದೇವನು ತನ್ನ ಯಾವುದೇ ಗ್ರಂಥದಲ್ಲಿಯಾಗಲಿ ತನ್ನ ತಂದೆ ತಾಯಿಗಳ ಹೆಸರನ್ನು ತಿಳಿಸಿಲ್ಲ, ವೀರಶೈವ ಗುರು ವಿರಕ್ತ ಮಠಾಧಿಪತಿಗಳ ಪರಂಪರೆಯನ್ನು ಮಾತ್ರ ಹೇಳಿಕೊಂಡಿದ್ದಾನೆ. ಆ ಗುರುಪರಂಪರೆ ಹೀಗಿದೆ : ರೇವಣಸಿದ್ಧಪ್ರಭು· ರುದ್ರಮುನೀಶ್ವರ, ಉದ್ಯಾನಚರಪುಂಗವ, ಅನ್ನದಾನೀಶ, ರೇವಣಸಿದ್ಧದೇಶಿಕ ಚಿಕವೀರದೇಶಿಕ, ಈತನ ಶಿಷ್ಯನೇ ಷಡಕ್ಷರದೇವ.

ನೆರೆದೇಕಾದಶ ವರ್ಷದ
ಹರೆಯದೊಳಭವ ಪ್ರಸಾದ ಬಲದಿಂ ಕವಿತಾ ।
ತರುಣಿ ಷಡಕ್ಷರಿದೇವನ
ನೆರವಿಲ್ಲದೆ ವರಿಯಿಸಿರ್ದಳರಿದೆನೆ ವಿಬುಧರ್ ॥

(ಶಬರಶಂಕರ ವಿಳಾಸ ಆ. ೧೫)

ತನ್ನ ತೀರ ಎಳೆಪ್ರಾಯದ ೧೧ನೇ ವರ್ಷದಲ್ಲಿಯೇ ರಾಜಶೇಖರ ವಿಳಾಸವನ್ನು ರಚಿಸಿರಬಹುದೆಂಬ ಹೆಗ್ಗಳಿಕೆ ಇವನಿಗಿದೆ. ತನ್ನ ಗುರುವಾದ ಚಿಕವೀರದೇಶಿಕನ ತರುವಾಯ ದನುಗೂರು ಹಿರಿಯ ಮಠದ ಪಟ್ಟಾಧಿಕಾರಿಯಾಗಿದ್ದನು. ಆ ಮೇಲೆ ಹದಿನಾಡಿನ ದೊರೆಯಾದ ಮುದ್ದರಾಜನು (ಕ್ರಿ.ಶ. ೧೬೫೪) ತನ್ನ ಹೆಂಡತಿಯಾದ (ಅಮೃತಾಂಬೆಯ) ತವರ್ಮನೆಯ ಗುರುವಾಗಿದ್ದ ಷಡಕ್ಷರದೇವನನ್ನು ದನುಗೂರಿನಿಂದ ಕರೆಸಿಕೊಂಡು ಯಳಂದೂರ ಎಂಬ ತನ್ನ ರಾಜಧಾನಿಯಲ್ಲಿ ಮಠವನ್ನು ಕಟ್ಟಿಸಿಕೊಟ್ಟು ಅಲ್ಲಿಯೇ ನೆಲೆಸುವಂತೆ ಮಾಡಿದನೆಂಬ ಪ್ರತೀತಿಯೂ ಇದೆ. ಮೈಸೂರು ಜಿಲ್ಲೆಯ ಎಳಂದೂರಿನಲ್ಲಿ ಮಹಾಕವಿ ಷಡಕ್ಷರದೇವನ ಸಮಾಧಿಯೂ ಇದೆ.

ವೀರಶೈವ ಮಠದಲ್ಲಿ ಗುರುವಾಗತಕ್ಕವನು ಬ್ರಹ್ಮಚಾರಿಯೇ ಆಗಿರಬೇಕೆಂಬ ನಿಬಂಧನೆಯ ಮೇರೆಗೆ ವೀರಶೈವ ಮಠಾಧಿಪತಿಯಾದ ಷಡಕ್ಷರದೇವನು ನೈಷ್ಠಿಕ ಬ್ರಹ್ಮಚಾರಿಯೇ ಆಗಿದ್ದನು. ಈ ಕವಿಯು ಯಾವ ರಾಜರ ಆಸ್ಥಾನ ಕವಿಯಾಗಿದ್ದಿರಬಹುದು ಎಂದು ಸಾಕಷ್ಟು ಆಧಾರಗಳಿಲ್ಲ. ಆದರೂ ಸಹ ಈ ಮಹಾಕವಿಯು ಕೆಳದಿ, ಹದಿನಾಡು, ಮೈಸೂರು ರಾಜರುಗಳ ಗೌರವಕ್ಕೆ ಪಾತ್ರನಾಗಿದ್ದನು. ಈ ಕವಿಯ ಚಿಕ್ಕುಪಾಧ್ಯಾಯ. ಸಿಂಗರಾರ್ಯ, ತಿರುಮಲಾರ್ಯ, ಸಂಚಿಯ ಹೊನ್ನಮ್ಮ, ವಿರೂಪಾಕ್ಷ ಪಂಡಿತ, ಚಿಕ್ಕದೇವರಾಜ ಇವರ ಕಾಲದಲ್ಲಿ ಎಳಂದೂರಿನಲ್ಲಿದ್ದನು. ಈ ಕವಿ ಸರಾಸರಿ ೭೫ ವರ್ಷಗಳ ಪ್ರಭಾವಿ ಜೀವನವನ್ನು ಬಾಳಿರಬಹುದು.

ಉಭಯ ಕವಿತಾವಿಶಾರದ
ನಭವ ಗಣೇಂದ್ರ ಪ್ರಬಂಧಕರನಮಲಯಶೋ
ವಿಭವೈಕ ನಿಧಿ ಷಡಕ್ಷರ
ವಿಭು ಮಾಳ್ಕೆ ಗಭೀರ ವಾಗ್ವಿಭೂತಿಯನೆಮ್ಮೊಳ್ ॥

(ರೇಣುಕವಿಜಯಂ ಪದ್ಯ ೧೬)

ಕ್ರಿ.ಶ. ೧೯ನೆ ಶತಕದ 'ಅಭಿನವಕಾಳಿದಾಸ'ನೆಂದು ಪ್ರಖ್ಯಾತರಾಗಿದ್ದ ಬಸವಪ್ಪ ಶಾಸ್ತ್ರಿಗಳ ಈ ಮೇಲಿನ ಪದ್ಯದಿಂದ ಷಡಕ್ಷರ ಮಹಾಕವಿಯು ಸಂಸ್ಕೃತ ಮತ್ತು ಕನ್ನಡ ಭಾಷೆಗಳಲ್ಲಿ ಕಾವ್ಯ ಕೃತಿಗಳನ್ನು ರಚಿಸುವಲ್ಲಿ ಅಸಾಮಾನ್ಯ ಪಾಂಡಿತ್ಯವನ್ನು ಪಡೆದಿದ್ದನೆಂದು ವ್ಯಕ್ತವಾಗುವದು.

ಷಡಕ್ಷರದೇವನ ಕೃತಿಗಳು :

ಕನ್ನಡ :

೧) ರಾಜಶೇಖರ ವಿಳಾಸ,
೨) ವೃಷಭೇಂದ್ರ ವಿಜಯ,
೩) ಶಬರಶಂಕರ ವಿಳಾಸ.

ಸಂಸ್ಕೃತ :

೧) ಕವಿಕರ್ಣ ರಸಾಯನಮ್
(ಚೋಳ ಭೂಪಾಲೀಯಮ್)
೨) ಶಿವಾಧಿಕ್ಯ ರತ್ನಾವಲಿ
೩) ಭಕ್ತಾಧಿಕ್ಯ ರತ್ನಾವಲಿ
೪) ಶಿವಸ್ತವ ಮಂಜರೀ

ಸಂಸ್ಕೃತ ಲಘು ಕೃತಿಗಳು :

೧) ನಮಶ್ಶಿವಾಯಾಷ್ಟಕಂ
೨) ಶ್ರೀಮದನಾದಿ ಸಿದ್ಧಲಿಂಗಸ್ತವನಂ
೩) ವೀರಭದ್ರೋದಾಹರಣ ಗದ್ಯಂ
೪) ಶಿವಸ್ತೋತ್ರ ಮಂಜರೀ
೫) ಇಂದುಧರ ಸ್ತೋತ್ರಂ
೬) ಶಿವಮಾನಸ ಸ್ತೋತ್ರಂ
೭) ಇಷ್ಟಲಿಂಗಾಷ್ಟಕಂ
೮) ಬಸವಾಷ್ಟಕಂ
೯) ಇಷ್ಟಲಿಂಗಸ್ತವನಂ
೧೦) ನೀಲಾಂಬಿಕಾ ಸ್ತೋತ್ರಂ
೧೧) ತತ್ವತ್ರಯ ಸ್ತೋತ್ರಂ
೧೨) ಮಂಗಲಾಷ್ಟಕಂ
೧೩) ಷಡಕ್ಷರಮಂತ್ರ ಸ್ತೋತ್ರಂ
೧೪) ಬಸವೇಶ್ವರ ಸುಪ್ರಭಾತ ಸ್ತವನಂ

ಕವಿಕರ್ಣರಸಾಯನವು :

ಪ್ರಸ್ತುತ ಲೇಖನವನ್ನು ಮಹಾಕವಿ ಷಡಕ್ಷರದೇವನ 'ಕವಿಕರ್ಣರಸಾಯನ' ವನ್ನು ಕುರಿತು ಬರೆಯಬೇಕಾದುದರಿಂದ ಕವಿಯ ಇನ್ನುಳಿದ ಕೃತಿಗಳ ವಿಷಯ ವಿವೇಚನೆಯ ಗೊಡವಿಗೆ ಹೋಗದೆ ಪ್ರಾಸ್ತಾವಿಕ ವಿಷಯವನ್ನು ಗಮನಿಸ ಬೇಕಾಗಿದೆ.

ಕನ್ನಡ ವಾಗ್ದೇವಿಗೆ ತನ್ನ ಮೂರು ಮಹಾಕೃತಿಗಳನ್ನು ನೀಡಿ ಚಂಪೂಕಾವ್ಯದ ಕಮನೀಯತೆಯಿಂದ, ವೀರಶೈವ ಕವಿಗಳ ದಿವ್ಯ ದೃಷ್ಟಿಕೋನದಿಂದ, ಭವ್ಯವಾದ ಆದರ್ಶಗಳಿಂದ, ಮಹಾಕವಿಯೆಂಬ ಹೆಗ್ಗಳಿಕೆಯಿಂದ ಮೆರೆದ ವರಕವಿ ಷಡಕ್ಷರದೇವ ಕನ್ನಡ ವಾಙ್ಮಯ ವ್ಯೋಮದಲ್ಲಿ ಧ್ರುವತಾರೆಯಂತೆ ಇದ್ದಾನೆ. ಇಂಥ ಉದ್ದಾಮಕವಿ ಸಂಸ್ಕೃತ ಸಾಹಿತ್ಯಕ್ಕೆ ಕೃತಿರತ್ನವನ್ನು ನೀಡಿದ್ದಾನೆ. ಇದುವೇ 'ಕವಿಕರ್ಣರಸಾಯನ'. ಇದು ಷಡಕ್ಷರದೇವನ ಸಂಸ್ಕೃತ ಮಹಾಕಾವ್ಯ. "ಇತಿ ಸಕಲಭುವನೈಕವಲ್ಲಭ ನಿಖಿಲ ಲೋಕನಾಯಕ-ನಿಕಾಯ ಸಮರ್ಜಿತ ಪರಮ ಶಿವಲಿಂಗಪಾದಾರವಿಂದ ಷಟ್‌ಪದಾಯ ಮಾನ ಲಸದುಭಯ ಕವಿತಾವಿಶಾರದ ಶ್ರೀಷಡಕ್ಷರದೇವ ವಿರಚಿತೇ ಚೋಳಭೂಪಾಲಿಯೇ ಕವಿಕರ್ಣರಸಾಯನಾಖ್ಯೇ ಮಹಾಕಾವ್ಯೇ"..ಎಂಬುದಾಗಿ ಇದರ ಕೊನೆಯ ಗದ್ಯವಿದೆ. ಮತ್ತು ಕವಿಯು ಶಬರಶಂಕರವಿಳಾಸ ೫ನೇ ಆಶ್ವಾಸದಲ್ಲಿ- "..ಕವಿಕರ್ಣರಸಾಯನ ವೆಂಬ ಕಬ್ಬಮಂ ಸಂಸ್ಕೃತೋಕ್ತಿಯೊಳಡರ್ಚಿದನಲ್ತೆ ಷಡಕ್ಷರಾಪ್ಪಯಂ" ಎಂದಿರುವುದ ರಿಂದ ರಾಜಶೇಖರವಿಳಾಸ ಮತ್ತು ವೃಷಭೇಂದ್ರ ವಿಜಯವನ್ನು ರಚಿಸಿದ ಮೇಲೆ, 'ಶಬರಶಂಕರ ವಿಳಾಸ'ವನ್ನು ರಚಿಸುವ ಪೂರ್ವದಲ್ಲಿ ಈ ಕೃತಿಯನ್ನು ರಚಿಸಿರಬೇಕು, 'ರಾಜಶೇಖರ ವಿಳಾಸ' ಮತ್ತು ಕವಿಕರ್ಣರಸಾಯನ ಇವುಗಳಲ್ಲಿ ಕಥಾವಸ್ತು, ವರ್ಣನೆ ಮುಂತಾದವುಗಳಲ್ಲಿ ಪರಸ್ಪರ ಸಾಮ್ಯವಿದೆ,

ಈಗ ಉಪಲಬ್ಧವಿರುವ ಈ ಮಹಾಕಾವ್ಯವು ಕೇವಲ ೧೨ ಸರ್ಗಗಳಿಂದ ಕೂಡಿದೆ, ಕವಿಕರ್ಣರಸಾಯನದ ಮೊದಲೆರಡು ಸರ್ಗಗಳು ಕೈ। ಶ್ರೀ ಕಾಡದೇವರಮಠ ಎಂಬವ ರಿಂದ ಕ್ರಿ.ಶ. ೧೯೩೦ರಲ್ಲಿ ಅಚ್ಚಾಗಿವೆ. ೪ ಸರ್ಗಗಳ ಸಂಪಾದನಾ ಕಾರ್ಯವನ್ನು ಕೈ। ಡಾ। ನಂದೀಮಠರು ವಹಿಸಿಕೊಂಡಿದ್ದರು. ಈಗ ಸಿಕ್ಕಿರುವಷ್ಟು ಮೂಲ ಮತ್ತು ವ್ಯಾಖ್ಯಾನವನ್ನು ಶ್ರೀ। ಎಮ್. ಎಸ್. ಬಸವರಾಜಯ್ಯನವರು ಸಂಪಾದಿಸಿರುತ್ತಾರೆ ಎಂದು ತಿಳಿದುಬಂದಿದೆ. ವೆಂಗನಸುಧೀ ಎಂಬ ವೀರಶೈವ ಪಂಡಿತನು 'ಸುಧೋದಯಾ' ಎಂಬ ವ್ಯಾಖ್ಯಾನವನ್ನು ಈ ಮಹಾಕಾವ್ಯಕ್ಕೆ ಬರೆದಿರುವನು. ಈ ಗ್ರಂಥದ ಸರ್ಗ ಗಳೆಲ್ಲವೂ ದೊರೆತು ಈ ಕೃತಿಯು ಪ್ರಕಟನೆಯನ್ನು ಕಂಡರೆ ಸಂಸ್ಕೃತ ಸಾಹಿತ್ಯ ಚರಿತ್ರೆ ಯಲ್ಲಿ ಷಡಕ್ಷರದೇವನ ಸ್ಥಾನಮಾನ ಘನತೆ ಗೌರವಗಳಿಗೆ ಇನ್ನೂ ಹೆಚ್ಚಿನ ಪ್ರಾಶಸ್ತ್ಯ ದೊರೆಯಬಹುದು.

ಕಾವ್ಯ ವಿಷಯ :

ಶಿವನ-ಶಿವಭಕ್ತರ-ಶಿವಭಕ್ತಿಯ ಮಹತಿ ಇವುಗಳ ವರ್ಣನೆಯೇ ಈ ಕಾವ್ಯದ ವೈಶಿಷ್ಟ್ಯ. ಚೋಳದೇಶದ ಅಧಿಪತಿ ವಿಕ್ರಮಚೋಳ. ಸುಂದರಚೋಳ, ಮಾನಕಂಜರ, ಪಾಂಡ್ಯರಾಜರ ಕಥೆಯು ಸಂಕ್ಷಿಪ್ತವಾಗಿ ಈ ಕಾವ್ಯದಲ್ಲಿ ಬಂದಿದೆ.

ವಿಕ್ರಮ ಚೋಳನ ರಾಜಧಾನಿ ಕರಿಪುರ. ಅವನ ಸತಿ ಕಲಾವತಿ, ಮಂತ್ರಿ ಗಾಂಗೇಯ, ವಿಕ್ರಮ ಚೋಳನ ಮಗನೆ ಸೌಂದರ ಚೋಳ ಎಂಬ ನಾಲ್ಕು ವಿವರಣೆಗಳಲ್ಲಿ ಕಾವ್ಯದ ನಾಲ್ಕು ಸರ್ಗಗಳು ಮುಗಿದುಹೋಗುತ್ತವೆ. ಮುಂದೆ ಸೌಂದರ ಚೋಳನಿಗೆ ಕನ್ಯೆಯನ್ನು ಕೊಟ್ಟ ಮಾವ ದ್ರವಿಡದೇಶದ ಕುಸುಮಪುರದ ರಾಜನಾದ ಮಾನಕಂಜಾರ ತನ್ನ ಮಗಳಾದ ಸೋಮಪ್ರಭೆಯ ವಿವಾಹ ಸಮಯದಲ್ಲಿ ಮದುಮಗಳ ಕೇಶವನ್ನು ಬೇಡಲು ಬಂದ ಜಂಗಮರೂಪಿಯಾದ ಶಿವನಿಗೆ ಏನೊಂದು ಸಂಕೋಚ-ಸಂಶಯ ತಾಳದೆ ಕೂಡಲೇ ಕೇಶವನ್ನು ಕತ್ತರಿಸಿ ಸಮರ್ಪಿಸಿ ಶಿವಕಾರುಣ್ಯಕ್ಕೆ ಪಾತ್ರನಾದ ಮಹಾನುಭಾವ. ಸುಂದರ ಚೋಳನಿಗೆ ಕಪ್ಪ-ಕಾಣಿಕೆ ಕೊಡುವುದಿಲ್ಲವೆಂಬ ಕಾರಣ ದಿಂದ ಪಾಂಡ್ಯರಾಜನು ಅವನಿಗೆ ಶತ್ರುವಾದನು. ಶತ್ರುವಿನೊಡನೆ ಯುದ್ಧ ಇಷ್ಟು ವಿಷಯ ಮಾತ್ರ ಸದ್ಯಃ ದೊರೆತ ಕವಿಕರ್ಣರಸಾಯನದ ಹನ್ನೆರಡು ಸರ್ಗಗಳ ಕಥಾವಸ್ತು.

ಕಾವ್ಯದ ಸುಭಗತೆ ಮತ್ತು ಘನತೆ ;

ಈ ಕಥೆ ರಾಜಶೇಖರ ವಿಲಾಸದ ಪಗಲ್ಚೋಳನ ಕಥೆಯನ್ನೇ ಹೋಲುವದಾಗಿದೆ. ಈ ಕಾವ್ಯದಲ್ಲಿ ದೇವತಾಸ್ತುತಿ - ಪೂರ್ವ ಸೂರಿಗಳನ್ನು ಸ್ತುತಿಸುವುದು. ಕಾವ್ಯ ವಿಚಾರ, ಮೇರುಗಿರಿಯ ವರ್ಣನೆ, ಚೋಳ ದೇಶದ ವರ್ಣನೆ, ಭೂಪಾಲನ ವರ್ಣನೆ, ಕಲಾವತಿಯ ಪುತ್ರದೋಹದ, ಸೌಂದರ ಕುಮಾರನ ಜನನ ಇತ್ಯಾದಿ ವಿಷಯಗಳು ವರ್ಣಿಸಲ್ಪಟ್ಟಿವೆ. ಇದು ವರ್ಣಿತಕಾವ್ಯ. ವಾಸ್ತವಿಕ ಘಟನೆಗಳ ಕಲ್ಪನಾ ವಿಲಾಸ ದಿಂದ ವರ್ಣನಾಮಯವಾಗಿ ರಂಜಿಸುತ್ತಿದೆ. ಇಲ್ಲಿ ವಾಸ್ತವಿಕ ಘಟನೆಗಳು ಮುಖ್ಯ ವಲ್ಲ. ವರ್ಣನೆಯೇ ಮುಖ್ಯ. ಆದರೂ ಕಾವ್ಯವಸ್ತು, ಕಾವ್ಯೋದ್ದೇಶ, ಭಾಷಾಶೈಲಿ, ತತ್ತ್ವವಿಚಾರ ಪದ್ಯಗಳನ್ನು ಹೆಣೆದ ಛಂದಸ್ಸು, ರಂಜಿಸುವ ಅಲಂಕಾರಗಳು ಈ ಕಾವ್ಯ ದಲ್ಲಿ ಮನೋಜ್ಞವಾಗಿವೆ. ಈ ಕಾವ್ಯದಲ್ಲಿ ಪ್ರತಿಪದ್ಯವೂ ಅಲಂಕಾರಗಳಿಂದ ಭೂಷಿತ ವಾಗಿದೆ. ಮುಖ್ಯವಾಗಿ ಉಪಮೆ-ಉತ್ಪ್ರೇಕ್ಷೆ ಅರ್ಥಾಂತರ ನ್ಯಾಸ-ನಿದರ್ಶನ, ಕಾವ್ಯಲಿಂಗ ಅತಿಶಯೋಕ್ತಿ ದೃಷ್ಟಾಂತ - ಮೊದಲಾದ ಅಲಂಕಾರಗಳು ಹೇರಳವಾಗಿವೆ. ಉದಾಹರಣೆಗಾಗಿ ಹಲವು ಪದ್ಯಗಳನ್ನು ಉದಾಹರಿಸಬಹುದು.

ಸದಾಂಭಸ್ಥಾಯಿತ್ವಂ ಜನಿರಪಿಚ ಪಂಕೇ ಜಲರುಹಾಂ
ಪರಂ ರಾಜದ್ವೇಷಃ ಚಪಲಮಧುಪೈಸ್ಸಂಗತಿರಪಿ ।
ತಥಾಪಿ ಸ್ತೂಯಂತೇ ಸ್ಫುಟಮಿಹ ಮುಹುಸ್ತಾನಿ ಕವಿಭಿಃ
ಕ್ರಿಯಾಯುಕ್ತಃ ಸ್ತುತ್ಯೋ ಭವತಿ ಹಿ ಸದೋಷೋಽಪಿ ಜಗತಿ ॥

ಕೆಸರಿನಲ್ಲಿ ಜನಿಸಿ, ಯಾವಾಗಲೂ ನೀರಿನಲ್ಲಿರುವ, ಚಂದ್ರನೊಡನೆ ದ್ವೇಷವನ್ನೂ ಕಟ್ಟಿಕೊಂಡ ಚಂಚಲವಾದ ಭ್ರಮರಗಳ ಸಹವಾಸ ಮಾಡಿದ, ಕಮಲಗಳನ್ನು ಕವಿಗಳು ಅದೆಷ್ಟು ಬಗೆಯಾಗಿ ಸ್ತುತಿಸುವರಲ್ಲ! ಧನಿಕನು ದುಷ್ಟನಾದರೂ ಐಶ್ವರ್ಯದ ಬಲದಿಂದ ಸ್ತುತಿಗೆ ಪಾತ್ರನಾಗುವಂತೆ, ಕವಿಗಳೂ ಕಮಲಗಳ ಕಮನೀಯ ರೂಪಕ್ಕೆ ಮೆಚ್ಚಿ, ವರ್ಣಿಸುತ್ತಿರಬೇಕು ಎಂಬ ಸುಂದರ ಕಲ್ಪನೆಯನ್ನು ಶ್ಲೇಷ ಮತ್ತು ಅರ್ಥಾಂತರ ನ್ಯಾಸವೆಂಬ ಅಲಂಕಾರಗಳಿಂದ ಕವಿಯು ಚಮತ್ಕಾರ ರೀತಿಯಿಂದ ವರ್ಣಿಸಿದ್ದಾನೆ.

ಕಾಂತಾಕರಾಂಬುಜ ಸಮುದ್ಧೃತ ಕುಂಭವಾರಿ
ಪೀತಂಚ ಪಾಂಥವದನೇನ ತದಕ್ಷಿ ತಸ್ಯಾಃ ।
ವಕ್ಷೋಜ ಕುಂಭರುಚಿವಾರಿ ಪಪೌ ವಿತೃಷ್ಣಂ
ಪೂರ್ವಂ ಬಭೂವ ನಬಭೂವ ಪುನರ್ದ್ವಿತೀಯಮ್ ॥

"ಓರ್ವ ಸುಂದರಿ ಎರೆದ (ಹಣಿಸಿದ) ನೀರನ್ನು ಪಥಿಕನಬಾಯಿ ಕುಡಿಯಿತು. ಆದರೆ ಅವನ ಕಣ್ಣುಮಾತ್ರ ಅವಳ ತುಂಬಿದೆದೆಯ ಚಲುವಿನ ಜಲವನ್ನು ಕುಡಿಯಿತು. ಒಂದರ (ಬಾಯಿಯ) ನೀರಡಿಕೆ ಹಿಂಗಿತು, ಮತ್ತೊಂದರ (ಕಣ್ಣಿನ) ತೃಷೆ ಹಿಂಗಲಿಲ್ಲ. ಇಲ್ಲಿ ರಸಿಕ ಕವಿ ಷಡಕ್ಷರಿ ಪಥಿಕರಿಗೆ ನೀರೆರೆವ ನೀರೆಯರ ಒಂದು ಮೋಹಕ ಚಿತ್ರವನ್ನು ವಿಶೇಷೋಕ್ತಿ ಅಲಂಕಾರದಲ್ಲಿ ಚಿತ್ರಿಸಿದ್ದಾನೆ." ಇದೋ ಮತ್ತೊಂದು ಪದ್ಯವನ್ನು ನೋಡಿ.

ಅಭ್ರಂಕಷ ಕ್ರಮುಕಪುಷ್ಪ ಸುಗಂಧಿಸಾರ
ಮಾಘ್ರಾಯ ಖೇಚರವಧೂ ತತಿರೇತ್ಯ ತಸ್ಮಿನ್ !
ಮಂದಾರ ಸೌರಭಮಪಿ ಪ್ರಥ್ಯಮಾನುಭೂತಂ
ಮಂದೀ ಕರೋತಿ ನಿಜ ಕೇಶಭರೇ ಬಿಭರ್ತಿ ॥

"ಬಾನಿನೆತ್ತರಕ್ಕೆ ಬೆಳೆದ ಅಡಿಕೆಮರಗಳ ಕುಸುಮಗಳ ಸೌರಭವನ್ನು ಮೂಸಿನೋಡಿ, ಮೆಚ್ಚಿ ಗಗನಾಂಗಣದಲ್ಲಿ ವಿಹರಿಸುತ್ತಿದ್ದ ಸುರಸುಂದರಿಯರು ಗುಂಪುಗೂಡಿ ಅಲ್ಲಿಗೆ ಬಂದು, ಮೊದಲು ತಮ್ಮ ಮುಡಿಯಲ್ಲಿ ಮುಡಿದಿದ್ದ ಮಂದಾರ ಪುಷ್ಪದ ಸುಗಂಧ ವನ್ನು ತೆಗಳಿ ಅಡಿಕೆಯ ಹೂವುಗಳನ್ನೇ ತಮ್ಮ ಕೇಶರಾಶಿಯಲ್ಲಿ ಮುಡಿದುಕೊಳ್ಳು ತ್ತಾರೆ." ಎಂಬುದಾಗಿ ಅತಿಶಯೋಕ್ತಿ ಅಲಂಕಾರದಿಂದ ವರ್ಣಿಸಿದ್ದಾನೆ.

ಷಡಕ್ಷರದೇವನು ಈ ಕಾವ್ಯದಲ್ಲಿ ಪದ್ಯವನ್ನು ಹೆಣೆಯುವಲ್ಲಿ ವಿಶೇಷ ಕ್ಲಿಷ್ಟತೆಗೆ ಎಡೆಗೊಡದೆ ಸರಳವಾದ ಪದಗಳನ್ನು ಜೋಡಿಸಿದ್ದಾನೆ. ತನಗೆ ಮಕ್ಕಳಾಗಲಿಲ್ಲವೆಂದು ಖಿನ್ನ ಮನಸ್ಕಳಾದ ತನ್ನ ಧರ್ಮಪತ್ನಿ ಕಲಾವತಿಯನ್ನು ವಿಕ್ರಮ ಚೋಳನು ಸಮಾಧಾನಪಡಿಸುತ್ತಿರುವುದನ್ನು ನೋಡಬಹುದು.

ತ್ಯಜ ಶುಚಂ, ಭಜಶಂಭು ಪದಾಂಬುಜಂ
ಕುರು ವಿಧೀರಿತದಾನ ಮನೇಕಧಾ ।
ಅಚಿರಮಿಷ್ಟಮುಪೈಷ್ಯಸಿ ಚೇತಿ ತಾಂ
ವಿಶುಚಮಾಕುಚ ಮಾನಧನೋ ವ್ಯಧಾತ್ ॥

ಕವಿಯ ಗರಿಮೆ ಹಿರಿಮೆ

ಕವಿ ಷಡಕ್ಷರಿ ಮಹಾ ಪ್ರತಿಭಾ ಸಂಪನ್ನನು. ಕವಿ ಪ್ರತಿಭೆ ಪ್ರಕಾಶಿಸುವದು ರಸಿಕ ವಿದ್ವಾಂಸರಿಂದ. ಕವಿ ಪ್ರತಿಭೆ ಪ್ರಾಕ್ತನ ಜನ್ಮದ ಪುಣ್ಯದ ಫಲ. "ಸೋಹಂ ಪ್ರಸಾದಾತ್ ಪರಮೇಶ್ವರಸ್ಯ ಪ್ರಬಂಧ ಮೇಕಂ ರಚಯಾಮಿ ರಮ್ಯಾಮ್"। ಶಿವನ ಅನುಗ್ರಹದಿಂದ ಕಾವ್ಯವನ್ನು ರಚಿಸಿರುವೆನೆಂದು ಹೇಳಿರುವನು.

"ಷಡಕ್ಷರ ಕವಿ ಎಂತಹ ವರ್ಣನಾ ಕವಿಯಾದರೂ ಅವನ ದೃಷ್ಟಿ ದಿವ್ಯಾದೃಷ್ಟಿ. ವರ್ಣನೆ, ಅಲಂಕಾರ ಶೃಂಗಾರ ರಸಗಳಿಂದ ಕಾವ್ಯವನ್ನು ಬರಿಯ ಜನರಂಜನೆಯ ಸಾಧನವನ್ನಾಗಿ ಮಾಡುವಂತೆ ಮೇಲು ನೋಟಕ್ಕೆ ಕಂಡರೂ, ಅವರ ಮನೋಭಾವನೆ, ಐಹಿಕ ಸೌಂದರ್ಯದ ಮೇಲೆದ್ದು ಬಂದು ಪರಮ ತತ್ವದ ಚಲುವಿನತ್ತ ಚಲ್ಲುವರಿಯು ತ್ತಿದೆ. ಭಕ್ತಿಪೂರ್ಣಕಥೆಗಳನ್ನು ಅತ್ಯಂತ ರಮ್ಯವಾಗಿ ರಸಮಯವಾಗಿ ಮೊದಲು ಹೇಳಿ, ಜನಜೀವನದ ಚಿರಂತನ ಮೌಲ್ಯಗಳನ್ನು ಆಮೇಲೆ ತಿಳಿಸಿ ಜನಜೀವನದ ಮಟ್ಟವನ್ನು ಮೇಲೆತ್ತುವಲ್ಲಿ ಷಡಕ್ಷರ ಕವಿಯ ಕಾವ್ಯದೃಷ್ಟಿ ಸಾರ್ಥಕವಾಗುತ್ತದೆ." ಎಂಬ ವಿ. ಶಿವಾನಂದರ ವಿಚಾರ ಅರ್ಥಪೂರ್ಣವಾಗಿದೆ.

ಈ ಕಾವ್ಯವು ಸಂಸ್ಕೃತ ಸಾಹಿತ್ಯಕ್ಕೆ ಕನ್ನಡನಾಡಿನ ಮಹಾಕವಿಯೋರ್ವನು ನೀಡಿದ ಅಸಾಮಾನ್ಯ ಕೊಡುಗೆಯಾಗಿದೆ.

ಷಡಕ್ಷರದೇವನು ಬಹುಶ್ರುತನಾದ ಕವಿ. ಕನ್ನಡ ಸಂಸ್ಕೃತ ಭಾಷೆಗಳ ಮೇಲೆ ಅಪಾರ ಪ್ರಭುತ್ವವನ್ನು ಪಡೆದಿರುವನು. ವಿಪುಲವಾದ ಶಬ್ದ ಸಂಪತ್ತಿ ಇದೆ. ಕಾವ್ಯದ ಚಲುವನ್ನು ಮೆರೆಯುವ ಅಲಂಕಾರಗಳ ಆಂತರ್ಯವನ್ನು ಹದವರಿತು ಪ್ರಯೋಗಿಸಿದ್ದಾನೆ. ವಿವಿಧ ರಸಭಾವಗಳಿಗುಣವಾಗುವಂತೆ ತನ್ನ ಶೈಲಿಯಲ್ಲಿ ನಾವಿನ್ಯತೆಯನ್ನು ನಯವನ್ನು ತೀಡಿದ್ದಾನೆ. ಭಾಷೆಭಾವಗಳ ಹೊಂದಾಣಿಕೆ. ಛಂದೋ ವಿಲಾಸ, ಅಲಂಕಾರವೈವಿಧ್ಯ, ಪದಲಾಲಿತ್ಯ, ಶಬ್ದಗಳ ನಾದಮಾಧುರ್ಯ, ರುಚಿತಾರ್ಥ

ಪ್ರತಿಪಾದಕತ್ವ, ಮೊದಲಾದ ಕಾವ್ಯ ಗುಣಗಳಿಗೆ ಈ ಕವಿಯ ಶೈಲಿಯು ಆದರ್ಶಪ್ರಾಯವಾಗಿದೆ. "ಉಪಮಾ ಕಾಳಿದಾಸಸ್ಯ" ಎಂಬುದಾದರೆ "ಉತ್ಪ್ರೇಕ್ಷಾಯಾಂ ಷಡಕ್ಷರಃ" ಎಂದು ಹೇಳುವದು ಸಮಂಜಸವೇ ಆದೀತು. ಅಲಂಕಾರಗಳೇ ಅವನ ಶೈಲಿಯ ಹೆಗ್ಗುರುತು ಎಂದು ಹೇಳುತ್ತಾರೆ. ಕವಿಯ ಕಲ್ಪನೆಯ ವಿಲಾಸವನ್ನು ಬಹುದೂರ ವಿಜೃಂಭಿಸಿ ಸುಂದರವಾದ ಅಲಂಕಾರಗಳನ್ನು ಹೆಣೆದಿರುವನು. "ಒಳಗೆ ದರ್ಶನ ಸೌಂದರ್ಯ, ಹೊರಗೆ ಶೈಲಿಯ ಸೌಂದರ್ಯ" ಪರಸ್ಪರ ಪೋಷಕವಾಗಿರುವುದರಿಂದ ಕವಿಯ ಶ್ರೇಯಸ್ಸು ಇನ್ನೂ ಘನವಾಗಿದೆ ಎಂಬ ಮಾತು ಸತ್ಯ, ಅವನೋರ್ವವರಕವಿ, ಮಹಾಕವಿ, ಕವಿಕರ್ಣರಸಾಯನದ ಭಾಷೆ ಕವಿಯೇ ತಿಳಿಸಿದಂತೆ, ಪ್ರಸನ್ನವಾದ ಸಂಸ್ಕೃತ.

> "ಸುವರ್ಣಬದ್ಧಂ ಸ್ಫುರದರ್ಘರತ್ನಂ ಸುವೃತ್ತಮೌಜ್ವಲ್ಯ ಗುಣಪ್ರಯುಕ್ತಮ್ ।
> ಕೃತಂ ಸುಕಾವ್ಯಂ ಶ್ರವಣೋಚಿತಂ ತತ್‌ಬುಧೇಂದ್ರ ಕರ್ಣಾಭರಣಂ ನರೇಂಸ್ಯಾತ್
> (೧-೨೧)

ಕನ್ನಡ ಪ್ರಾಥಮಿಕ ಅಕ್ಷರಭ್ಯಾಸ

ಟಿ. ಕೇಶವ ಭಟ್ಟ

ಮನುಷ್ಯನ ಜೀವನ ವ್ಯವಹಾರಮಯ. ವ್ಯವಹಾರದಲ್ಲಿ ಪರಿಣತಿ ಪಡೆಯುವುದೇ ಮಾನವ ಜೀವನದ ಮಹತ್ಸಿದ್ಧಿ. ಮನುಷ್ಯನ ಯೋಗ್ಯತೆಯನ್ನಳೆಯುವುದು ಆತನ ವ್ಯವಹಾರ ಸ್ವರೂಪವನ್ನು ಪರೀಕ್ಷೆಗಿಟ್ಟು. ವ್ಯವಹಾರಕ್ಕೆ ಸಾಧನವಾದುದು ಭಾಷೆ. ಭಾಷೆ ಶಬ್ದಾತ್ಮಕ. ಶಬ್ದವೆಂಬುದು ಮಾನವನ ಅಜ್ಞಾನಾಂಧಕಾರವನ್ನು ನಾಶ ಪಡಿಸುವ ಬೆಳಕು ಎನ್ನಲಾಗಿದೆ. ಸಂಸ್ಕೃತದ ಲಾಕ್ಷಣಿಕರಲ್ಲಿ ಒಬ್ಬನಾದ ದಂಡಿಯ ಮಾತಿದು.

ಇದಮಂಧಂ ತಮಃ ಕೃತ್ಸ್ನಂ ಜಾಯೇತ ಭುವನ ತ್ರಯಂ
ಯದಿ ಶಬ್ದಾಹ್ವಯಂ ಜ್ಯೋತಿರಾಸಂಸಾರಾನ್ನಿತವರ್ತತೇ

ಅಂದರೆ, ಈ ಪ್ರಪಂಚದಲ್ಲಿ ಶಬ್ದವೆಂಬ (ಭಾಷೆಯೆಂಬ) ಬೆಳಕು ಇಲ್ಲದಿರುತ್ತಿದ್ದರೆ, ಈ ಮೂಲೋಕವೂ ಕಗ್ಗತ್ತಲೆಯಿಂದ ತುಂಬಿದಂತಿರುತ್ತಿತ್ತು. 'ಭಾಷ ಇತಿ ಭಾಷಾ' ಎಂಬ ವ್ಯುತ್ಪತ್ತಿಯಂತೆ 'ಭಾಷೆ' ಎಂಬ ಶಬ್ದವು ಪ್ರಕಾಶಿಸುವಂಥದು ಎಂಬ ಅರ್ಥವನ್ನೇ ಕೊಡುತ್ತಿದೆ. ಜ್ಞಾನದ ಬೆಳಕು ಭಾಷೆ.

ಭಾಷಾ ಜ್ಞಾನಕ್ಕೆ ಹಾಗೂ ಭಾಷಾಜ್ಞಾನದ ಅಭಿವೃದ್ಧಿಗೆ ವಚನ, ಪಠನ, ಲೇಖನ ಅಂದರೆ ಮಾತು, ಓದು, ಬರಹ - ಎಂಬೀ ಮೂರು ಸಾಧನಗಳಿವೆ. ಈ ಮೂರರಲ್ಲಿ ಎಷ್ಟೆಷ್ಟು ಪರಿಶ್ರಮವಿರುವುದೋ ಅಷ್ಟುಮಟ್ಟಿಗೆ ಭಾಷಾಜ್ಞಾನವಾಗುತ್ತದೆ. ಮಾತು ಲಿಖಿತವಾಗಿ ಚಾಕ್ಷುಷರೂಪ ತಾಳಿದಾಗ ಬರೆಹವೆನಿಸುತ್ತದೆ. ಆಗ ಅದು ಓದಲು ತಕ್ಕುದಾಗುತ್ತದೆ. ಅದೇ ಪುಸ್ತಕ ಅಥವಾ ಗ್ರಂಥರೂಪವಾಗುತ್ತದೆ. ಮನುಷ್ಯನ ಸಾಧನೆ ಮಾತಾಡುವುದರಲ್ಲಿ ನಿಲ್ಲುವುದಿಲ್ಲ. ಅದು ಓದು ಬರಹಗಳ ನೆಲೆಗೇರುತ್ತದೆ. ಈ ಸಾಧನೆ ಯಶಸ್ವಿಯಾಗಬೇಕಾದರೆ ಭಾಷೆಯನ್ನೊಂದು ಅಭ್ಯಾಸ ವಿಷಯವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಆದುದರಿಂದಲೇ ವಿದ್ಯಾಭ್ಯಾಸದಲ್ಲಿ ಭಾಷಾಭ್ಯಾಸವು ಒಂದು ಮುಖ್ಯವೂ ಮೌಲಿಕವೂ ಆದ ವಿಷಯ.

ಅಕ್ಷರಕ್ಕೆ ನಿರ್ದೇಶಪಡಿಸಲಾದ ಸಂಕೇತ ಅಥವಾ ಚಿಹ್ನೆ ಲಿಪಿಯೆನಿಸುತ್ತದೆ. ಇಂದು ಪ್ರಚಲಿತವಿರುವ ಭಾರತೀಯ ಭಾಷಾಲಿಪಿಗಳಿಗೆ ಅಶೋಕನ ಕಾಲದಲ್ಲಿದ್ದ

ಬ್ರಾಹ್ಮೀಲಿಪಿಯೇ ಮೂಲವೆಂದು ಹೇಳುತ್ತಾರೆ. ಆದರೆ ಆ ಕಾಲಕ್ಕೂ ಹಿಂದೆಯೇ ಬರವಣಿಗೆ ಇತ್ತೆಂಬುದಕ್ಕೆ ಆಧಾರಗಳಿವೆ. ವಿಶ್ವದಲ್ಲಿಯೇ ಅತಿ ಪ್ರಾಚೀನ ಸಾಹಿತ್ಯ ವಾಗಿರುವ ಋಗ್ವೇದದಲ್ಲಿ ಮಂತ್ರವನ್ನು ಓದುವ ವಿಚಾರ ಬರುತ್ತದೆ. ಓದಬೇಕಾದರೆ ಬರವಣಿಗೆ ಇರಬೇಕಾಗುತ್ತದೆ. ಅಥವಾ ವೇದದಲ್ಲಿ 'ಗ್ರಂಥ' ಎಂಬ ಶಬ್ದವೂ 'ಬರ' ಎಂಬ ಅರ್ಥದ 'ಲಿಖ್' ಧಾತು ಪ್ರಯೋಗವೂ ಇವೆ. ಭಂಡಾರಕಾರರೇ ನಿರ್ಣಯಿಸಿ ದಂತೆ ಕ್ರಿಸ್ತ ಪೂರ್ವ ೭೦೦ರಲ್ಲಿದ್ದ ಪಾಣಿನಿ 'ಲಿಪಿಕಾರ' ಶಬ್ದ ಪ್ರಯೋಗ ಮಾಡಿದ್ದಾನೆ. ಪಾಣಿನಿಗೆ ಲಿಪಿಯೇ ಗೊತ್ತಿಲ್ಲವೆಂದು ಹೇಳಿದ ಮ್ಯಾಕ್ಸ್‌ಮುಲ್ಲರನನ್ನು ಥಿಯೊಡರ್ ಗೋಲ್ಡ್‌ಸ್ಟ್ರಕ್ಕರ್ ಎಂಬ ವಿದ್ವಾಂಸನು "Panini: His place is Sanskrit Literature" ಎಂಬ ಗ್ರಂಥದಲ್ಲಿ ಪೂರ್ಣವಾಗಿ ಖಂಡಿಸಿದ್ದಾನೆ. ಆದರೆ ಬ್ರಾಹ್ಮೀಲಿಪಿ ಕಾಣಿಸುವ ಕಾಲಕ್ಕೂ ಹಿಂದೆ ವಿಷಯ ಸ್ವರೂಪ ಹೇಗಿತ್ತೆಂಬು ದನ್ನು ತಿಳಿಯಲು ಆಧಾರಗಳಿಲ್ಲ. ಲಿಪಿಯೂ ಬ್ರಹ್ಮನಿಂದಲೇ ಸೃಷ್ಟಿಯಾಯಿತು. ಎಂಬುದಾಗಿ ನಾರದ ಸ್ಮೃತಿಯಿಂದ ತಿಳಿದುಬರುತ್ತದೆ.

ನಾ ಕರಿಷ್ಯದ್ಯದಿ ಬ್ರಹ್ಮಾ ಲಿಖಿತಂ ಚಕ್ಷುರುತ್ತಮಂ
ತತ್ರೇಯಮಸ್ಯ ಲೋಕಸ್ಯ ನಾ ಭವಿಷ್ಯತ್ ಶುಭಾಗತಿಃ

ಅಂದರೆ, ಕಣ್ಣಿಗೆ ಚೆಲುವಾಗಿ ಕಾಣಿಸುವ ಬರೆಹವನ್ನು ಆ ಬ್ರಹ್ಮನು ನಿರ್ಮಿಸದೆ ಇರು ತ್ತಿದ್ದರೆ, ಈ ಲೋಕಕ್ಕೆ ಶುಭಗತಿಯೆ ಇಲ್ಲವಾಗುತ್ತಿತ್ತು.

ಸಂಸ್ಕೃತದಲ್ಲಿ ವಿದ್ಯಾವಂತನನ್ನು 'ಸಾಕ್ಷರಃ' (ಅಕ್ಷರ ಸಹಿತನಾದವನು, ಅಕ್ಷರ ವನ್ನರಿತವನು) ಎನ್ನುತ್ತಾರೆ. ಅ+ಕ್ಷರ ಎಂಬ ಶಬ್ದವು 'ನಾಶವಿಲ್ಲದುದು' ಎಂಬರ್ಥ ವನ್ನು ಕೊಡುವುದಾಗಿದ್ದು ಅದು ಜ್ಞಾನದ ಸಂಕೇತವೇ ಆಗಿದೆ. ಅದು ಪರಬ್ರಹ್ಮ ವಾಚಕವೂ ಹೌದು (ಅಕ್ಷರಂ ಬ್ರಹ್ಮ ಪರಮಂ-ಭಗವದ್ಗೀತೆ). ಕನ್ನಡದಲ್ಲಿ ವಿದ್ಯಾವಂತ ನನ್ನು 'ಅಕ್ಕರಿಗ' ಎಂದು ಕರೆಯಲಾಗಿದೆ. ಸರಿಯಾಗಿ ಅಕ್ಷರಾಭ್ಯಾಸವಾಗಿದ್ದರೆ, ಅಂತಹ ವ್ಯಕ್ತಿ ವಿದ್ಯಾವಂತನೆಂಬುದು ನಿಶ್ಚಯ. ಇಂದಿನ ವಿದ್ಯಾವಂತರನ್ನು ಈ ದೃಷ್ಟಿಯಿಂದ ಪರೀಕ್ಷೆಗೆ ಹಚ್ಚಬೇಕು. ಅಕ್ಷರಾಭ್ಯಾಸಕ್ಕೆ ನಮ್ಮ ಹಿರಿಯರು ಕೊಟ್ಟಿರುವ ಮಹತ್ವವನ್ನು ತಿಳಿಸುವ ಒಂದು ಸುಭಾಷಿತ ಹೀಗಿದೆ :

ಮಕ್ಕಳಿಗೆ ತಂದೆ ಬಾಲ್ಯದೊ
ಳಕ್ಕರ ವಿದ್ಯೆಗಳನರಿಪದಿರ್ದೊಡೆ ಕೊಂದಂ
ಲಕ್ಕ ಧನವಿರಲು ಕೆಡುಗುಂ
ಚಿಕ್ಕಂದಿನ ವಿದ್ಯೆ ಪೊರಗು ಚೂಡಾರತ್ನಾ (ಚೂಡಾರತ್ನ ಶತಕ)

ಅಕ್ಷರಾಭ್ಯಾಸವಾದರೆ ಸರಿ, ಮುಂದೆ ಆತನು ಈ ಅಕ್ಷರಜ್ಞಾನದಿಂದಲೆ ಎಲ್ಲವನ್ನು

ಕಲಿತುಕೊಳ್ಳುತ್ತಾನೆ - ಎಂಬ ಭಾವ ಮೇಲಿನ ಪದ್ಯದಲ್ಲಿದೆ. ಅಕ್ಷರಾಭ್ಯಾಸವು ಮನುಷ್ಯ ಜೀವಿಗೆ ಅನಿವಾರ್ಯ.

ಪ್ರಾಥಮಿಕ ವಿದ್ಯಾಭ್ಯಾಸವು ಪ್ರಾರಂಭವಾಗುವುದೇ ಅಕ್ಷರಾಭ್ಯಾಸದಿಂದ. ಮುಂದೆ ಹಲವಾರು ತರಗತಿಗಳನ್ನೇರಿ, ಭಾಷೆಯ ಶುದ್ಧಾಶುದ್ಧ ನಿರ್ಣಯಕ್ಕಾಗಿ ವ್ಯಾಕರಣವನ್ನು ವಿಶೇಷ ರೀತಿಯಲ್ಲಿ ಅಭ್ಯಾಸ ಮಾಡುವ ಪ್ರಸಂಗವಿರುತ್ತದೆ. ವೈಯಾಕರಣರು ಇಲ್ಲಿ ಕೂಡ ಅಕ್ಷರಾಭ್ಯಾಸದಿಂದಲೆ ವ್ಯಾಕರಣ ಪ್ರಾರಂಭಿಸತಕ್ಕದೆಂದು ಹೇಳಿದ್ದಾರೆ. ವೈಯಾಕರಣ ಕೇಶಿರಾಜನ ಹೇಳಿಕೆಯಿದು :

ಆರಯೆ ತಚ್ಛಾಸ್ತ್ರ ವ್ಯವ
ಹಾರ ಜ್ಞಾನಾರ್ಥಮಾಗಿ ಪೇಳಲ್ಪಡುಗುಂ
ಧೀರರಿನಕ್ಷರ ಸಂಜ್ಞಾ
ಕಾರಂ ವ್ಯಾಕರಣದಾದಿಯೊಳ್ ಪರಿಪಡಿಯಿಂ (ಶಬ್ದಮಣಿದರ್ಪಣ ಸೂತ್ರ ೧)

ವ್ಯಾಕರಣ ಶಾಸ್ತ್ರದಲ್ಲಿ ಕೂಡ ವ್ಯವಹಾರಜ್ಞಾನವಾಗುವುದು ಅಕ್ಷರಜ್ಞಾನದಿಂದ. ಆದುದರಿಂದ ಅಕ್ಷರಾಭ್ಯಾಸದ ಪುನರಾವರ್ತನೆ ಇಲ್ಲಿ ಆಗಬೇಕೆಂಬುದು ಅಭಿಪ್ರಾಯ. ಪ್ರಾಥಮಿಕದಿಂದ ತೊಡಗಿ ಸ್ನಾತಕೋತ್ತರದವರೆಗೆ ಪ್ರತಿಯೊಂದು ತರಗತಿಯಲ್ಲಿಯೂ ಭಾಷಾಬೋಧನೆಯಲ್ಲಿ ಹಾಗೂ ಭಾಷಾಧ್ಯಾಯನದಲ್ಲಿ ಅಕ್ಷರಜ್ಞಾನ ಪರೀಕ್ಷೆಯಿರಬೇಕು ಎಂಬುದು ಸ್ಪಷ್ಟ.

ಕರ್ನಾಟಕದಲ್ಲಿ ಪ್ರಾಚೀನ ವಿದ್ಯಾಭ್ಯಾಸ ಪದ್ಧತಿ ಹೇಗಿತ್ತು ಎಂಬುದನ್ನು ತಿಳಿಸುವ ಹಲವು ಶಾಸನಗಳು ದೊರಕುತ್ತವೆ. ಈ ನಾಡಿನಲ್ಲಿ ಹಿಂದೆ ಇದ್ದ ಘಟಿಕಾ ಸ್ಥಾನಗಳು - ಅಗ್ರಹಾರಗಳು, ಮಠಗಳು, ದೇವಸ್ಥಾನಗಳು ಇವೆಲ್ಲ ಪ್ರಾಥಮಿಕ ಶಿಕ್ಷಣದ ಕೇಂದ್ರಗಳಾಗಿದ್ದವು. ಪ್ರೌಢಶಿಕ್ಷಣ ಸಂಸ್ಕೃತದಲ್ಲಿ ಇರುತ್ತಿತ್ತು. ಆದರೆ ಪ್ರಾಥಮಿಕ ಶಿಕ್ಷಣವನ್ನು 'ಕರ್ಣಾಟಕ ಶಿಕ್ಷೆ', ಕರ್ನಾಟಕ ಬಾಲಶಿಕ್ಷೆ, -ಎಂಬ ಹೆಸರುಗಳಿಂದ ಕರೆಯುತ್ತಿದ್ದರು. 'ಅಕ್ಷರಾಭ್ಯಾಸ' ಎಂದೂ ಕರೆಯುವ ರೂಢಿಯಿತ್ತು. ಈ ಶಿಕ್ಷಣದಲ್ಲಿ ಕನ್ನಡದ ಅಕ್ಷರಗಳನ್ನು-ಕಾಗುಣಿತ ಗಳನ್ನು ಸರಿಯಾಗಿ ಕಲಿಸಿಕೊಡುತ್ತಿದ್ದರೆಂದು ತಿಳಿದುಬರುತ್ತದೆ. (ನೋಡಿ : ಕರ್ನಾಟಕದ ಪರಂಪರೆ, ಸಂಪುಟ ೧, ಪುಟ ೪೧೧, ೪೧೨) ಅಕ್ಷರಾಭ್ಯಾಸ ಮಾಡಿಸು ವುದಕ್ಕಾಗಿಯೇ ನಿಯುಕ್ತರಾದ ಬೋಧಕರು ಅಂದಿನ ವಿದ್ಯಾಲಯಗಳಲ್ಲಿ ಇರುತ್ತಿದ್ದರು ತಾಳಗುಂದದ ಪ್ರಣವೇಶ್ವರ ದೇವಾಲಯದ ಕ್ರಿ.ಶ. ೧೧೫೮ನೇ ವರ್ಷದ ಒಂದು ಶಾಸನದ ಪ್ರಕಾರ ಅಲ್ಲಿ ಕನ್ನಡದ ಅಕ್ಷರಗಳನ್ನು ಕಲಿಸುವ ಬೋಧಕರು ಇದ್ದರೆಂದೂ ಅವರಲ್ಲಿ ಒಬ್ಬೊಬ್ಬರಿಗೆ ಎಂಟೆಂಟು ಮಂದಿ ವಿದ್ಯಾರ್ಥಿಗಳೆಂದೂ ತಿಳಿದುಬರುತ್ತದೆ. (ನೋಡಿ : ಅದರಲ್ಲೇ ಪುಟ ೪೧೮)

ಇಂದಿನ ಕನ್ನಡದ ಲಿಪಿಗೆ ಕೆಲವು ಹಿರಿಮೆಯ ಅಂಶಗಳಿವೆ. ಇದರಿಂದ ಕನ್ನಡಿಗರು ಗೌರವಪಟ್ಟುಕೊಳ್ಳಬೇಕು. ಇದು ಪ್ರಪಂಚದಲ್ಲಿ ಪ್ರಚಲಿತವಿರುವ ಇತರ ಎಲ್ಲ ಅಕ್ಷರಮಾಲೆಗಿಂತ ಸುಂದರವಾದುದು, ಬೆಳೆದು ಪರಿಷ್ಕಾರದ ಶಿರಸ್ಸನ್ನೇರಿದುದು-ಹೀಗೆ ಲಿಪಿಶಾಸ್ತ್ರಜ್ಞರ ಅಭಿಪ್ರಾಯವಿದೆ. ಇತರ ಹಲವಾರು ಲಿಪಿಗಳಂತೆ ಕನ್ನಡದ ಲಿಪಿ ಬ್ರಾಹ್ಮಿಲಿಪಿಯಿಂದಲೇ ರೂಪಗೊಂಡಿದೆ. ಬ್ರಾಹ್ಮಿಲಿಪಿ ರೇಖಾತ್ಮಕ ; ಅದು ವಿಕಾಸಗೊಳ್ಳುತ್ತ ಚೌಕಾಕಾರ, ಕೋನಾಕಾರಗಳನ್ನು ದಾಟಿ ದುಂಡಗಿನ ರೂಪಕ್ಕೆ ಬಂದು ತಲಪಿದೆ. ಕಂಠಪತ್ರದ ಉಲುಹುಗಡದಂತೆ ಬರೆಯಲು, ಕಾಗದದಲ್ಲಿ ಮಸಿಲೇಖನಿಯಿಂದ ಬರೆಯಲು ಈ ಲಿಪಿ ತುಂಬ ಅನುಕೂಲಕರ. ಈ ಅಕ್ಷರಗಳಿಗೆ ನಿರ್ದಿಷ್ಟವಾಗಿ ಅನೇಕ ಅವಯವಗಳು ರೂಪ್ರುಪಡೆದಿವೆ. ಇದರಿಂದ ಇವು ಸರ್ವಾಂಗ ಪೂರ್ಣವಾಗಿ ಸುಂದರವಾಗಿವೆ. ಕನ್ನಡದ ಅಕ್ಷರಾವಯವಗಳ ನಿರೂಪಣೆ ಹೀಗಿದೆ.

ಇಳಿ ಗುಡಿಸು, ಕೊಂಬು, ವಟ್ರಸುಳಿ
ಯಳವಡ ಲೇ ತ್ಸೈಲತ್ವ ವೋತ್ಸ ವೌತ್ವಗಳೆಂಬೀ
ದಳಸರದಿಂ ಕಾಗುಣಿತದಿ
ತಿಳಿವಿಕೆಗೊಂದೆರಡು ಸೊನ್ನೆ ತೋರುವುದರೊಳ್
(ಶ್ರೀನಿವಾಸಯ್ಯ ಪದ್ಯ ಕಾವ್ಯ ವ್ಯಾಕರಣ, ೧೮೨೭)

ಅಕ್ಷರ ಶರೀರದಲ್ಲಿ ತಲೆಕಟ್ಟು, ಹೊಟ್ಟೆ, ಪೂಕ್ಕುಳ ಎಂಬವು ಅಲ್ಲದೆ ಇಳಿ, ಗುಡಿಸು (ಸುಳಿ), ಕೊಂಬು ವಟ್ರಸುಳಿ, ಎ ಏ ಐ, ಒ ಓ ಔ-ಎಂಬ ಕಾಗುಣಿತದ ರೂಪಗಳಿವೆ. ಹಲವು ಒತ್ತುಗಳೂ ಇವೆ. ಇವೆಲ್ಲವೂ ಅಕ್ಷರಾವಯವಗಳು. ಇವು ಇರುವುದರಿಂದಲೇ ಕನ್ನಡದ ಲಿಪಿ ಸುಂದರವೂ ಸರ್ವಾಂಗಪೂರ್ಣವೂ ಆಗಿದೆ. ತಲೆಕಟ್ಟಿಲ್ಲದ ಕೆಲವು ಅಕ್ಷರಗಳು ಇರುವುದು ಲಕ್ಷ್ಯಾರ್ಹ.

ಎರಡನೆಯ ಗುಣವರ್ಮನ (ಕ್ರಿ.ಶ. ೧೨೩೫) ಪುಷ್ಪದಂತ ಪುರಾಣವನ್ನು ಪ್ರತಿ ಬರೆದಿರುವ ಮಾದಿರಾಜನು (ಕ್ರಿ.ಶ, ೧೩೦೦) ಕನ್ನಡದ ಬರಹದ ಚಾಕ್ಷುಷ ಸೌಂದರ್ಯವನ್ನು ಹೀಗೆ ನಿರೂಪಿಸಿದ್ದಾನೆ.

ಬಿಂದುವಿನೊಂದು ಶೋಭೆ, ತಲೆಕಟ್ಟಿನ ಪ್ರೋರ್ಕುಳ ಚಿಲ್ವು, ಮಾತ್ರೆಯೊಳ್
ನಿಂದ ಬೆಡಂಗು, ಬಳ್ಳಿಯೊಳೊಡಂಬಿಡುತಿರ್ಪ ನಯಂ ವಿಸರ್ಗದೊ
ಳ್ಪೊಂದಿರಲಕ್ಕರಕ್ಕೆ ಬರೆವಂ ಚದುರರ್ ಪರಿಬರ್ಣಿಸಲ್ ನವಿ
ಲ್ಲಿಂದದ ಮಾದಿರಾಜ ವಿಬುಧಂ ವಿಬುಧೋದಿತ ನವ್ಯಕಾವ್ಯಮಂ
(ಕರ್ಣಾಟಕ ಕವಿಚರಿತೆ ಸಂ. ೧ ಪುಟ ೪೬೯)

ಕನ್ನಡದ ಬರವಣಿಗೆಯಲ್ಲಿ ಬರುವ ಬಿಂದು, ತಲೆಕಟ್ಟು, ಮಾತ್ರೆಯ ರೇಖೆ, ಕೊಂಬಿಳ್ಕೆ (ಅಥವಾ ಕಾಗುಣಿತ), ವಿಸರ್ಗ ಇವುಗಳಿಂದ ಬರಹ ಸುಂದರವಾಗಿದೆಯೆಂದು ಆತನ ಅಭಿಪ್ರಾಯ, ಇವುಗಳಿಂದ ತಾನು ಸೊಗಸಾಗಿ ಬರೆದಿದ್ದೇನೆ ಎಂದುಕೊಂಡಿದ್ದಾನೆ. ಕನ್ನಡದ ಲಿಪಿ ಸೌಂದರ್ಯವನ್ನು ಮೆಚ್ಚಿದ ಓರ್ವ ರಸಿಕ ಸಂಸ್ಕೃತ ಕವಿ ಆಲಂಕಾರಿಕವಾಗಿ ಹೀಗೆಂದಿದ್ದಾನೆ-

ಅಕ್ಷರಾಣಿ ಸಶೀರ್ಷಾಣಿ ವರ್ತುಲಾನಿ ಘನಾನಿ ಚ
ಪರಸ್ಪರ ವಿಲಗ್ನಾನಿ ತರುಣೀ ಕುಚಯುಗ್ಮವತ್।

ಅಂದರೆ, ಕನ್ನಡದ ಅಕ್ಷರಗಳು ಯುವತಿಯ ಸ್ತನಯುಗ್ಮದಂತೆ ಸಶೀರ್ಷ (ತಲೆಕಟ್ಟಿನಿಂದ, ತುದಿಯಿಂದ ಕೂಡಿವೆ). ವರ್ತುಲವಾಗಿವೆ (ದುಂಡಗಿವೆ). ಘನ (ಪೂರ್ಣವಾಗಿ ಬೆಳೆದುದು, ಗಟ್ಟಿ) ಆಗಿವೆ. ಒಂದಕ್ಕೊಂದು ಹತ್ತಿರ ಸೇರಿಕೊಂಡು ಬೇರೆ ಬೇರೆಯಾಗಿ ಕಾಣುವಂತೆ ಇವೆ. ಇದರಿಂದ ಕನ್ನಡ ಅಕ್ಷರಾಭ್ಯಾಸವು ಅಭಿಮಾನಕ್ಕೆ, ಪ್ರೀತಿಗೆ ಕರಕೌಶಲ ಪ್ರದರ್ಶನಕ್ಕೆ ಆಸ್ಪದವಾದುದೆಂಬುದು ವಿದಿತವಾಗುತ್ತದೆ.

ಹೀಗಿದ್ದರೂ ಕನ್ನಡದ ಲಿಪಿ ಸುಧಾರಣೆಯಾಗಬೇಕು-ಎನ್ನುವವರಿದ್ದಾರೆ. ಅಚ್ಚಿಗೆ ಹಾಗೂ ಬೆರಳಚ್ಚಿಗೆ ಈ ಸುಧಾರಣೆ ಅವಶ್ಯವೆಂದು ಅವರ ಹೇಳಿಕೆ. ಅದಕ್ಕಾಗಿ ಕಾಗುಣಿತಗಳನ್ನು ಕಡಮೆ ಮಾಡುವುದು, ಒತ್ತುಗಳನ್ನು ನಿವಾರಣೆ ಮಾಡುವುದು ಅಂಥವರ ಸೂಚನೆ. 'ಅಷ್ಟು ಹೊತ್ತಿಗೆ' ಎಂಬುದು ಆಗ 'ಅಷ್‌ಟು ಹೊತ್‌ತಿಗೆ' ಎಂದಾಗುತ್ತದೆ. ಇನ್ನೂ ಏನೇನೋ ಅಕ್ಷರಗಳು ಬಹು ರೂಪಗಳಾಗುತ್ತವೆ. ಈ ಬಗೆಯ ಸುಧಾರಣೆಯಿಂದ ಕನ್ನಡದ ಲಿಪಿ ರೂಪದ ಜಾಯಮಾನ ಕೆಡುತ್ತದೆ. ಗೊಂದಲಕ್ಕೀಡಾಗುತ್ತದೆ. ಇದುವರೆಗೆ ಮುದ್ರಿತವಾದ ಗ್ರಂಥಕೋಟಿಯದು ಹಾಗೂ ಕನ್ನಡವನ್ನು ಇದುವರೆಗೆ ಕಲಿತುಕೊಂಡು ಬಂದವರು ಬಳಸುವಂತಹದು ಒಂದು; ಸುಧಾರಿತ ? ಎಂದುಕೊಳ್ಳುವ ಲಿಪಿರೂಪ ಇನ್ನೊಂದು-ಹೀಗೆ ಲಿಪಿಯು ಬಳಕೆ ಎರಡಾಗಿ ತೊಡಕು ಹೆಚ್ಚಾಗುವುದು. ಇದರೆಡೆಯಲ್ಲಿ ಹೇಯೋಪಾದೇಯ ನಿರ್ಣಯ ಅಸಾಧ್ಯವಾಗುವುದು. ಮುದ್ರಣಕ್ಕಾಗಿ ಯಾವ ಬಗೆಯ ಪರಿವರ್ತನೆಯೂ ಬೇಕಾಗಿಲ್ಲವೆಂಬುದನ್ನು ಇದುವರೆಗಿನ ಮುದ್ರಣ ಕಲೆ ತೋರಿಸಿಕೊಟ್ಟಿದೆ. ಬೆರಳಚ್ಚಿಗಾಗಿ ಲಿಪಿ ಸುಧಾರಣೆ ಬೇಕಾಗಿಲ್ಲವೆಂಬುದನ್ನು ಕನ್ನಡ ಬೆರಳಚ್ಚಿನ ನಿರ್ಮಾಪಕ ಶ್ರೀ ಕೆ. ಅನಂತಸುಬ್ಬರಾಯರು ಉದಾಹರಣೆಯಿಂದ ವಿಶದಪಡಿಸಿದ್ದಾರೆ.

ಇದಲ್ಲದೆ, ಕನ್ನಡ ತೆಲುಗುಗಳಿಗೆ ಏಕಲಿಪಿ ಯೋಜನೆಯೂ ಕೆಲವಂದಿ ಸುಧಾರಕ ಮನಸ್ಕರ ಮನದಲ್ಲಿದೆ. ಇದು ಕೂಡ ವ್ಯಾವಹಾರ್ಯವಲ್ಲ. ಅಲ್ಲಿಂದಿಷ್ಟು ಇಲ್ಲಿಂದಿಷ್ಟು ಎಂಬಂತೆ ಅಕ್ಷರ ರೂಪಗಳನ್ನು ಸಂಯೋಜಿಸಿಕೊಂಡು ಮಾಡಿದ ಏಕಲಿಪಿ ರೂಪವು

ಸೌಂದರ್ಯಹೀನವಾದೀತು. ಯಾವುದಾದರು ಒಂದು ಭಾಷೆಯದನ್ನು ಮತ್ತೊಂದು ಭಾಷೆಗೆ ಲಿಪಿಯನ್ನಾಗಿ ಹೇರಲು ಸಾಧ್ಯವಾಗಲಾರದು. ಆದುದರಿಂದ ಕನ್ನಡದ ಲಿಪಿ ರೂಪ ಈಗಿರುವುದನ್ನೇ ಗ್ರಾಹ್ಯವೆಂದಿಟ್ಟುಕೊಂಡು, ಅದರ ರೂಪ ರಹಸ್ಯವನ್ನು ಸರಿಯಾಗಿ ತಿಳಿದು ಪ್ರಯೋಗಿಸುವ ಪ್ರಯತ್ನವೇ ಈಗ ಎಲ್ಲ ಕನ್ನಡಿಗರಿಗೂ ಬೇಕಾದುದು,

ಕನ್ನಡ ಅಕ್ಷರಾಭ್ಯಾಸಕ್ಕೆ ತೊಡಕು ಕಡಿಮೆ, ಸೌಕರ್ಯವೇ ಹೆಚ್ಚು. ಕನ್ನಡವು ಸಂಸ್ಕೃತದಂತೆ ಧ್ವನಿಯುಕ್ತ (Phonetic) ಭಾಷೆ, ಈ ಭಾಷೆಯ ಎಲ್ಲ ಉಚ್ಚಾರಣೆಗಳಿಗೂ ಬೇಕಾಗುವ ಲಿಪಿಗಳು ಕನ್ನಡದಲ್ಲಿವೆ. ಬರದಂತೆಯೇ ಓದಲು ಬರುತ್ತದೆ. ಶ, ಷ, ವಿಸರ್ಗ, ಹ ಕಾರ, ಮಹಾ ಪ್ರಾಣಗಳ ಉಚ್ಚಾರಣೆ ಕನ್ನಡದಲ್ಲಿದೆ. ಎಕಾರ ಒಕಾರಗಳೂ ಕನ್ನಡದಲ್ಲಿವೆ. ಸಂಸ್ಕೃತದಲ್ಲಿ ಅಂದರೆ ದೇವನಾಗರಿ ಲಿಪಿಯಲ್ಲಿ ಎಲೆ, ಒಲೆ, ಕೊಡೆ-ಎಂಬುದನ್ನು ವುಲೇ, ಓಲೇ, ಕೋಡೇ-ಎಂದು ಬರೆಯಬೇಕಾಗುತ್ತದೆ. ಕನ್ನಡದ ಸೋದರ ಭಾಷೆಯಾಗಿರುವ ತಮಿಳಿನಲ್ಲಿ ಅಕ್ಷರ ಸಂಖ್ಯೆ ಕಡಿಮೆ. ಆದುದರಿಂದ 'ಗಾಂಧಿ' ಎಂಬುದನ್ನು 'ಕಾಂತಿ' ಎಂದೂ 'ಶಬ್ದಮಣಿದರ್ಪಣ' ಎಂಬುದನ್ನು 'ಸಪ್ತಮಣಿತರ್ಪಣ' ಎಂದೂ ಬರೆದು ಓದಬೇಕಾಗುತ್ತದೆ. ಇಂಗ್ಲಿಷ್, ಹಿಂದಿ ಭಾಷೆಗಳೂ ಧ್ವನಿಯುಕ್ತಗಳಲ್ಲ. ಇಂಗ್ಲೀಷಿನಲ್ಲಿ ಒಂದೇ ಬಗೆಯ ಅಕ್ಷರಗಳಿಗೆ ಬೇರೆ ಬೇರೆ ಶಬ್ದಗಳಲ್ಲಿ ಉಚ್ಚಾರಣೆ ಬೇರ ಬೇರೆ. But ಎಂಬುದನ್ನು 'ಬಟ್' ಎನ್ನುವುದಾದರೆ 'put' ಎಂಬುದನ್ನು 'ಪಟ್' ಎನ್ನದೆ 'ಪುಟ್' ಎಂದುಚ್ಚರಿಸಬೇಕು. Church ಎಂಬಲ್ಲಿಯ 'Ch' ಚಕಾರದ ಉಚ್ಚಾರಣೆಯದು. ಆದರೆ, Character ಎಂಬಲ್ಲಿಯ 'Ch' ಕಕಾರೋಚ್ಚಾರಣೆಯದು. ಹಿಂದಿಯಲ್ಲಿ 'ಲಡಕಾ' ಎಂದು ಬರೆದು 'ಲಡ್ಕಾ' ಎಂದೂ 'ಕಿತಾಬ' ಎಂದು ಬರೆದರೆ, 'ಕಿತಾಬ್' ಎಂದೂ ಓದಬೇಕಾಗುತ್ತದೆ. ಇಂತಹ ಕೊರತೆ ಕನ್ನಡಕ್ಕೆ ಇಲ್ಲದುದೊಂದು ಹಿರಿಮೆಯೇ ಸರಿ. ಕನ್ನಡದಲ್ಲಿ ಅಕ್ಷರಗಳ ಮುದ್ರಿತ ರೂಪ, ಬೆರಳಚ್ಚಿನ ರೂಪ, ಕೈಬರಹದ ರೂಪ-ಈ ಮೂರೂ ತಾತ್ವಿಕವಾಗಿ ಒಂದೇ ತೆರನಾಗಿವೆ. ಈಗಿನ ಬೆರಳಚ್ಚಿನಲ್ಲಿ 'ಕೂ' ಎಂಬುದು 'ಕೂ' ಎಂಬ ರೂಪದಲ್ಲಿದೆ. ಹಾಗೆಯೇ 'ಭ' ಎಂಬುದು 'ಭ' ಎಂದು ಇರಬೇಕಾಗುತ್ತದೆ. ಶಕಟರೇಫ ರಳಗಳೂ ಅದರಲ್ಲಿಲ್ಲ. ಇವನ್ನು ಕೂಡ ಸರಿಯಾಗಿ ಒಳಗೊಳ್ಳುವ ಬೆರಳಚ್ಚಿನ ಯಂತ್ರವನ್ನು ಸಿದ್ಧಪಡಿಸಲು ಸಾಧ್ಯವಿದೆಯೆಂದು ಶ್ರೀ ಅನಂತಸುಬ್ಬರಾಯರು ಹೇಳಿದ್ದಾರೆ. ಅಂತಹದನ್ನು ಸಿದ್ಧಪಡಿಸಬೇಕಾದುದು ಅವಶ್ಯಕ.

ಸುಮಾರು ನಾಲ್ಕೈದು ದಶಕಗಳ ಹಿಂದೆ, ಕನ್ನಡದ ಅಕ್ಷರಾಭ್ಯಾಸವನ್ನು ಹೇಗೆ ಮಾಡಿಸುತ್ತಿದ್ದರೆಂಬ ನೆನಪುಳ್ಳ ಜನರು ಇಂದಿಗೂ ಇದ್ದಾರೆ. ಮಗುವನ್ನು ಶಾಲೆಗೆ ಸೇರಿಸುವ ಮೊದಲೇ ಮನೆಯಲ್ಲಿ ಅಕ್ಷರಾಭ್ಯಾಸ ಮಾಡಿಸುತ್ತಿದ್ದರು. ಅಂದರೆ

ಓದಲು, ಬರೆಯಲು ಕಲಿಸುತ್ತಿದ್ದರು. ಬಳಪದ ಹಲಗೆ, ಬಳಪ ಕಡ್ಡಿಗಳೂ ಬರೆಯುವ ಸಾಧನಗಳು. ಒಂದನೆ, ಎರಡನೆ ತರಗತಿ ದಾಟಿದ ಮೇಲೆ ಸೀಸದಕಡ್ಡಿ (ಪೆನ್ಸಿಲು) ಕಾಗದಗಳನ್ನು ಹಲಗೆ ಬಳಪದೊಂದಿಗೆ ಉಪಯೋಗಿಸುತ್ತಿದ್ದರು. ಮೂರನೆ ತರಗತಿಯಾದ ಮೇಲೆ ಮಸಿಲೇಖನಿಗಳನ್ನು ಹಿಡಿಸುತ್ತಿದ್ದರು. ಮಸಿಯೊಸರು ಲೇಖನಿಯನ್ನು (Fountain Pen) ಮಕ್ಕಳು ಉಪಯೋಗಿಸಬಾರದೆಂದೇ ಹೇಳುತ್ತಿದ್ದರು. ಅದರ ಉಪಯೋಗದಿಂದ ಅಕ್ಷರವು ಕೆಡುವುದೆನ್ನುತ್ತಿದ್ದರು. ಮೊದಮೊದಲು ಉಪಾಧ್ಯಾಯರು ಬರೆದ ದೊಡ್ಡ ಅಕ್ಷರಗಳ ಮೇಲೆ, ಬಳಪಕಡ್ಡಿಯಿಂದ ಅದೇ ಅಕ್ಷರಾಕೃತಿಯನ್ನು ಕ್ರಮಬದ್ಧವಾಗಿ ಮತ್ತೆ ಮತ್ತೆ ಬರೆದು, ಮಗು ಅಕ್ಷರ ಬರೆಯಲು ಕಲಿಯುತ್ತಿತ್ತು. ಅಕ್ಷರ ಸ್ವರೂಪ ಜ್ಞಾನವಾದ ಮೇಲೆ ಮೂರು ಗೆರೆಗಳಲ್ಲಿ ಬರೆದು ಅಭ್ಯಾಸ ಮಾಡಿ, ಆ ಮೇಲೆ ಮೇಲಿನ ತರಗತಿಗಳಿಗೆ ಬಂದಂತೆ ಎರಡು ಗೆರೆಗಳಲ್ಲಿ, ಅನಂತರ ಒಂದೇ ಗೆರೆಯಲ್ಲಿ. ಅದೂ ಸರಿಯಾಗಿ ಅಭ್ಯಾಸವಾದ ಮೇಲೆ ಗೆರೆಯಿಲ್ಲದೆ ಬರೆಯುವುದು ಅಭ್ಯಾಸಕ್ರಮವಾಗಿತ್ತು. ಶಾಲೆಗಳಲ್ಲಿ ಪ್ರತಿದಿನ ಐದು ಪಾಟಿ (ಸ್ಲೇಟು) ನೋಡಿ ಬರೆಯುವುದು (ಕಾಪಿ ಬರೆಯುವುದು) ಕಡ್ಡಾಯವಿರುತ್ತಿತ್ತು. ಹಾಗೆ ಬರೆದುದನ್ನು ಅಲ್ಲಲ್ಲೇ ತಿದ್ದಿ ಶೋಧಿಸುವ ಪರಿಪಾಠವೂ ಇತ್ತು. ಆಗಿನ ಕನ್ನಡ ಪಠ್ಯಪುಸ್ತಕಗಳು ಅಕ್ಷರಾಭ್ಯಾಸಕ್ಕೆ ಅನುಕ್ರಮವಾಗಿ ಸಹಾಯಕಗಳಾಗಿದ್ದವು. ಹೀಗೆ ಅಕ್ಷರಾಭ್ಯಾಸ ಮಾಡಿದ 'ಅಕ್ಕರಿಗರು' ಒಂದಡಿ, ಎರಡಡಿ ನೀಳವಾದ ಓಲೆಗರಿಯಲ್ಲಿ ಗ್ರಂಥಗಳನ್ನು ಪ್ರತಿಮಾಡಿದಾಗ ಆ ಸಾಲುಗಳು ಉರುಳುಗೋಲು (Rules) ಇಟ್ಟು ಗೆರೆಯೆಳೆದು ಬರೆದುದೋ ಎಂಬಷ್ಟು ನೇರವಾಗಿ ಇರುತ್ತಿದ್ದವು. ಅಕ್ಷರಾಕೃತಿಗಳು ಏಕರೂಪವಾಗಿ ಚಿತ್ತಾಕರ್ಷಕವಾಗುತ್ತಿದ್ದುವು ಅದರ ಇಂದಿನ ಬರವಣಿಗೆಯ ಪರಿಸ್ಥಿತಿಯೇನು ?

ಈ ಕಾಲದಲ್ಲಿ ತಪ್ಪಿಲ್ಲದೆ, ಸರ್ವಾಂಗ ಸುಂದರವಾಗಿ ಕನ್ನಡ ಬರವಣಿಗೆಯನ್ನು ಮಾಡುವ ಅಧ್ಯಾಪಕರೇ ವಿರಳ. ಕನ್ನಡ ಅಕ್ಷರಗಳ ಉಚ್ಚಾರಣೆಯೇ ಅಂತಹ ಹಲವರಿಗೆ ಬಾರದು. ಕಾರಣವೇನು ? ನಮ್ಮ ಶಾಲೆಗಳಲ್ಲಿ ಸುಂದರ ಶುದ್ಧ ಅಕ್ಷರಗಳ ಬರವಣಿಗೆಗೆ ಉತ್ತೇಜಕ್ಕೆ ಅಸ್ಪದವಿಲ್ಲ. ಭಾಷಾ ಸಾಹಿತ್ಯ ಪರೀಕ್ಷೆಗಳ ಪ್ರಶ್ನೆ ಪತ್ರದಲ್ಲಿ 'ಕಾಗುಣಿತ ತಪ್ಪಿದ್ದರೆ ಅಂಕಗಳನ್ನು ಕಳೆಯಲಾಗುವುದು' ಎಂಬ ಗಮನಿಕೆಯ ವಾಕ್ಯ ಇದ್ದುದುಂಟು, ಹಾಗಿದ್ದರೇನು ? ಕಳೆಯುವ ಅಂಕಗಳು ನೂರರಲ್ಲಿ ಐದು ಮಾತ್ರ. ಇದರಿಂದ ಭಾಷಾಶುದ್ಧಿ. ಅಕ್ಷರ ಶುದ್ಧಿಗಳ ಕಡೆಗೆ ಯಾರೂ ಲಕ್ಷ್ಯವಿಡುತ್ತಿದ್ದಿಲ್ಲ. ಉತ್ತರದಲ್ಲಿ ವಿಷಯವಿದೆಯೆಂದ ಮಾತ್ರದಿಂದಲೆ ಅಂಕಗಳನ್ನು ಕೊಡುತ್ತಿದ್ದುದರಿಂದ ಕಾಗುಣಿತ ತಪ್ಪಾಗಿ ಬರೆಯುತ್ತಿದ್ದ ವಿದ್ಯಾರ್ಥಿ ಭಾಷಾ ಸಾಹಿತ್ಯ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗುತ್ತಿದ್ದುದೂ ಉಂಟು. ಅಂಥವನೇ ಮುಂದೆ ಕನ್ನಡ ಅಧ್ಯಾಪಕನಾಗಿ ಇಲ್ಲವೆ ಲೇಖಕನಾಗಿ ಬಂದುದು, ಬರುತ್ತಿರುವುದು ಅಸಂಭವವೇನೂ ಅಲ್ಲ.

ಇಂದಿನ ಕಾಲೇಜು ವಿದ್ಯಾರ್ಥಿಗಳಲ್ಲಿ ಐಚ್ಛಿಕವಾಗಿ ಕನ್ನಡವನ್ನು ತೆಗೆದುಕೊಂಡು ವಿಶೇಷಾಧ್ಯಯನ ಮಾಡುವವರಿಗೆ ಕೂಡ ಸಾಮಾನ್ಯವಾಗಿ ಕನ್ನಡದ ಅಕ್ಷರ ಮಾಲಿಯನ್ನು ತಪ್ಪಿಲ್ಲದೆ ಹೇಳಲು, ಬರೆಯಲು ಬರುವುದಿಲ್ಲ-ಎಂದರೆ, ಆಶ್ಚರ್ಯವೂ ಹೌದು : ಆಶ್ಚರ್ಯವಲ್ಲದುದೂ ಹೌದು. ಅವರಿಂದ ಅಕ್ಷರಮಾಲೆಯನ್ನು ಹೇಳಿಸಿ ನೋಡಿ: ಪೂರ್ತಿಯಾಗಿ ಹೇಳಬಲ್ಲವರು ತೀರಾ ಕಡಿಮೆ ಹೇಳಲು ಬರುತ್ತದೆ ಎನ್ನುವವರ ಅಕ್ಷರೋಚ್ಚಾರಣೆ ಅಬದ್ಧ : ಅ, ಅ; ಇ, ಇ: ಉ, ಉ; - ಎಂದು ಸ್ವರಗಳನ್ನು ಉಚ್ಚಾರಣೆ ಮಾಡುತ್ತಾರೆ. ಆ ಉಚ್ಚಾರಣೆಯಲ್ಲಿ ಹ್ರಸ್ವ-ದೀರ್ಘಗಳ ತಾರತಮ್ಯ ವಿರುವುದಿಲ್ಲ. ವರ್ಗೀಯ ವ್ಯಂಜನಗಳನ್ನು ಕಾ ಕ ಗಾ ಗ ಙ, ಚಾ ಚ ಜಾ ಜ ಞ- ಇತ್ಯಾದಿಯಾಗಿ ಅಲ್ಪಪ್ರಾಣ ಮಹಾಪ್ರಾಣ ಭೇದವಿಲ್ಲದೆ ಉಚ್ಚರಿಸುತ್ತಾರೆ. ಙ, ಞ ಗಳ ಉಚ್ಚಾರಣೆ ತಿಳಿಯದು. ಜ್ಞಾನ, ಕೃತಜ್ಞ-ಎಂಬವನ್ನು ಗ್ನಾನ, ಕೃತಗ್ನ ಎನ್ನುತ್ತಾರೆ. ಕಿಞ್ಞಣ್ಣ-ಎಂಬ ಶಬ್ದವನ್ನು ಕಿಯ್ಯಣ್ಣ ಎಂದೇ ಉಚ್ಚಾರಣೆ ಮಾಡುವ ಕನ್ನಡ ಪ್ರಾಧ್ಯಾಪಕರಿದ್ದಾರೆ! ಅವರಿಗೇಕೆ ಸರಿಯಾದ ಉಚ್ಚಾರಣೆಬಾರದು ? ಎಂಬ ಪ್ರಶ್ನೆಗೆ ಸುಲಭವಾದ ಉತ್ತರವಿದೆ. ಅವರು ಕಾಲೇಜಿನಲ್ಲಿ ಸರಿಯಾದ ಉಚ್ಚಾರಣೆ ಯನ್ನು ಕಲಿತಿಲ್ಲ, ಹೈಸ್ಕೂಲು ವಿದ್ಯಾರ್ಥಿಗಳಿಗೆ ಏಕೆ ಅದು ಬಾರದು ? ಅವರು ಪ್ರಾಥಮಿಕ ಶಾಲೆಯಲ್ಲಿ ಅದನ್ನು ಕಲಿಯಲೇ ಇಲ್ಲ, 'ಕಲಿಯಲಿಲ್ಲ ಎಂಬುದರೊಂದಿಗೆ 'ಉಪಾಧ್ಯಾಯರು ಅವರಿಗೆ ಕಲಿಸಲಿಲ್ಲ' ಎಂಬ ಮಾತು ಸೇರಿಕೊಳ್ಳುತ್ತದೆ, ಪ್ರಾಥ ಮಿಕ ಶಾಲೆಯ ಅಧ್ಯಾಪಕರು ಮಕ್ಕಳಿಗೆ ಅಕ್ಷರೋಚ್ಚಾರಣೆ ಬಾರದ ಕೊರತೆಗೆ ಕಾರಣ ವನ್ನು ವಿದ್ಯಾರ್ಥಿಗಳ ತಂದೆತಾಯ್ಗಳ ಮೇಲೆ ಮತ್ತು ಅವರ ಮನೆಯ ಪರಿಸರದ ಮೇಲೆ ಹೊರಿಸಿ, ತಾವು ತಪ್ಪಿನಿಂದ ಜಾರಿಕೊಳ್ಳುತ್ತಾರೆ, ಒಟ್ಟಿನಲ್ಲಿ ನಮ್ಮ ಜನರು ಚಿಕ್ಕಂದಿನಲ್ಲಿ ಕಲಿಯದುದರಿಂದ ಆದ ತಪ್ಪು ವ್ಯಕ್ತಿ-ಸಮಾಜ ಜೀವನವನ್ನೆಲ್ಲ ವ್ಯಾಪಿಸಿ ಕೆಡಿಸುತ್ತಿರುವುದು ಎಲ್ಲೆಲ್ಲಿಯೂ ಕಂಡುಬರುತ್ತಿದೆ, ಇಂತಹ ಅಕ್ಷರಗಳ ಅಜ್ಞಾನ ವನ್ನು, ಉಚ್ಚಾರಣೆಯ ಮತ್ತು ಬರವಣಿಗೆಯ ದೋಷವನ್ನು ಯಾವ ತರಗತಿ ಯಲ್ಲಿಯೂ ತಿದ್ದಬಹುದು, ತಿದ್ದಬೇಕು, ಇದರ ಪ್ರಾರಂಭ ಪ್ರಾಥಮಿಕ ತರಗತಿ ಗಳಲ್ಲಿಯೇ ಆಗಬೇಕು, ಪ್ರಾಥಮಿಕ ತರಗತಿಗಳಲ್ಲಿ ಈ ತಿದ್ದುವಿಕೆ ಈಡೇರದಿರಲು ಈ ಕೆಲವು ಕಾರಣಗಳನ್ನು ಕೊಡುತ್ತಾರೆ.

೧, ಸರಿಯಾಗಿ ಅಕ್ಷರಮಾಲೆಯನ್ನು-ಕಾಗುಣಿತವನ್ನು ಅರಿತು ಉಚ್ಚಾರಿಸಲು ಬರೆಯಲು ಬಾರದ ಹಾಗೂ ಪ್ರಶಿಕ್ಷಿತರಲ್ಲದ ಅಧ್ಯಾಪಕರು ಹಾಗೂ ಅಧ್ಯಾಪಕಿಯರು ಮಕ್ಕಳಿಗೆ ಪಾಠ ಬೋಧನೆ ಮಾಡುತ್ತಿರುವುದು,

೨, ಪ್ರಾಥಮಿಕ ಶಾಲೆಯ ಮಕ್ಕಳಲ್ಲಿ ಕುಲಗತ, ಪರಿಸರಗತವಾಗಿ ಅಕ್ಷರೋ ಚ್ಚಾರಣ ದೋಷಗಳಿದ್ದು, ಅವರಿಗೆ ಉಪಾಧ್ಯಾಯರಿಂದ ದೊರಕುವ ಅಕ್ಷರ ಸಂಸ್ಕಾರ ಸಾಲದಿರುವುದು,

೩. ಇಂದಿನ ಪ್ರಾಥಮಿಕ ಶಿಕ್ಷಣ ಪದ್ಧತಿಯಲ್ಲಿ ಅಜ್ಞಾತವಾಗಿ ಸೇರಿಕೊಂಡ ಕೊರತೆ ಹಾಗೂ ಪಠ್ಯಪುಸ್ತಕದ ಅಸಮರ್ಪಕತೆ.

ಮೇಲೆ ಕಾಣಿಸಿದವುಗಳಲ್ಲಿ ಮೊದಲನೆಯ ದೋಷವನ್ನು ನಿವಾರಿಸಲೇಬೇಕು. ಬೋಧಕರು ಅಕ್ಷರ ಸಂಸ್ಕಾರದಲ್ಲಿ ವಿಶೇಷ ಪರಿಣತರೂ. ವಿಚಾರಶೀಲರೂ, ಧ್ಯೇಯ ನಿಷ್ಠರೂ ಸಮಾಜಹಿತವುಳ್ಳವರೂ ಸುಸಂಸ್ಕೃತರೂ ಆಗದಿದ್ದರೆ ವಿದ್ಯಾಭಿವೃದ್ಧಿ ಏನೂ ಆಗಲಾರದು, ಬೋಧಕರಿಗೆ ಮುಖ್ಯವಾಗಿ ಅಕ್ಷರ ಬೋಧನೆಗೆಂದೇ ವಿಚಾರಗೋಷ್ಠಿಗಳು. ಅಧ್ಯಯನವ್ಯವಸ್ಥೆಗಳು, ಪರಿಣತರಿಂದ ಮಾರ್ಗದರ್ಶನಗಳು ಆಗಾಗ ಆಗುತ್ತಿರಬೇಕು. ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ನಿಯುಕ್ತಿಗೊಂಡ ಅಧ್ಯಾಪಕರ ಸಂಖ್ಯೆಯೂ ಇರಬೇಕು. ಇದರಿಂದ, ಮೇಲೆ ಕಾಣಿಸಿದ ಎರಡು ದೋಷಗಳೂ ಪರಿಹಾರವಾದವು,

ಮೂರನೆಯ ದೋಷ ಹಾಗೂ ಅದರ ಪರಿಹಾರವನ್ನು ಕುರಿತು ಇಲ್ಲಿ ಸ್ವಲ್ಪ ವಿವರಣೆ ನೀಡಬೇಕಾಗುತ್ತದೆ,

ಶಿಕ್ಷಣವೇತ್ತರು ಹೇಳುವ ಪ್ರಕಾರ. ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಲೂ ಈ ಮೂರು ವಿಧಾನಗಳಿವೆ, ಅಕ್ಷರಮಾಲಾ ವಿಧಾನ, ಪದವಿಧಾನ, ಮತ್ತು ವಾಕ್ಯವಿಧಾನ. ಹಿಂದಿನ ಶಿಕ್ಷಣ ಪದ್ಧತಿಯ ಪ್ರಕಾರ, ಮಕ್ಕಳಿಗೆ ಮೊದಲು ಅಕ್ಷರಮಾಲೆಯನ್ನು ಕಲಿಸಿ ಅಥವಾ ಅಕ್ಷರಗಳ ಮೂಲಕ ಪದ ಪರಿಚಯ ಮಾಡಿ ಪದಗಳ ಮೂಲಕ ವಾಕ್ಯಪರಿಚಯ ಮಾಡಲಾಗುತ್ತಿತ್ತು. ಪದಗಳ ಮೂಲಕ ಅಕ್ಷರ ಪರಿಚಯ ಮಾಡುವ ಸುಧಾರಿತ ಕ್ರಮವೂ ಇತ್ತು. ಆದರೆ ನಮ್ಮ ಶಿಕ್ಷಣವೇತ್ತರು ಇನ್ನೂ ಮುಂದುವರಿದು ಅಕ್ಷರ ಬೋಧನೆಯಲ್ಲಿ ವಾಕ್ಯಪದ್ಧತಿಯನ್ನು ಕನ್ನಡಕ್ಕೂ ಬಳಸಿಕೊಂಡರು. ಇಂಗ್ಲೀಷಿಗೆ ಹೊಂದಾಣಿಕೆಯಾಗುವ ಈ ಪದ್ಧತಿ ಕನ್ನಡಕ್ಕೆ ಹೊಂದಿಕೆಯಾಗಿಲ್ಲ, ಕನ್ನಡದ ವಾಕ್ಯದಲ್ಲಿ ದೀರ್ಘ, ಬಿಂದು, ಕೊಂಬು, ಎತ್ವ, ಒತ್ವ, ಒತ್ತುಗಳು ವಾಕ್ಯದಲ್ಲಿ ಬರುವುದರಿಂದ, ಪ್ರಾರಂಭದಲ್ಲಿಯೇ ಮಗುವು ತೊಡಕನ್ನು ಎದುರಿಸಬೇಕಾಗುತ್ತದೆ. ಇಂಗ್ಲೀಷು ವರ್ಣಾತ್ಮಕ (ಏಕಧ್ವನಿಗಳಿಂದ ಕೂಡಿದ) ಭಾಷೆ. ಆದರೆ, ಕನ್ನಡ ಅಕ್ಷರಾತ್ಮಕವಾದ ಭಾಷೆ. ಇದರಲ್ಲಿ ವ್ಯಂಜನಕ್ಕೆ ಸ್ವರ ಸೇರಿ ಪೂರ್ಣಾಕ್ಷರವಾಗುತ್ತದೆ. ಉದಾ : 'ಕ' ಎಂಬಲ್ಲಿ ಕ್ ಮತ್ತು ಆ ಎಂಬೆರಡು ಸೇರಿವೆ : ಸೇರಿ ಒಂದೇ ಅಕ್ಷರರೂಪದಲ್ಲಿರುತ್ತದೆ, ಇಂಗ್ಲೀಷಿನಲ್ಲಿ k ಮತ್ತು a ಎಂಬೆರಡು ಬೇರೆ ಬೇರೆ ಇದ್ದುಕೊಂಡು, ಉಚ್ಚಾರಣೆಯಲ್ಲಿ ಒಂದಾಗುತ್ತವೆ. ಆದುದರಿಂದ ವಾಕ್ಯಪದ್ಧತಿ ಎಂಬುದು ಕನ್ನಡದಲ್ಲಿ ಭಾಷಾಭ್ಯಾಸಕ್ಕೆ (ಅಂದರೆ, ಮಾತು ಕಲಿತುಕೊಳ್ಳುವುದಕ್ಕೆ ಮಾತ್ರ) ಸಹಕಾರಿಯಾಗುವುದು : ಅಕ್ಷರಾಭ್ಯಾಸಕ್ಕೆ ಸಹಕಾರಿಯಲ್ಲ. ನಮ್ಮ ಕರ್ನಾಟಕದಲ್ಲಿ ವಾಕ್ಯಪದ್ಧತಿಯನ್ನು ಅಕ್ಷರಾಭ್ಯಾಸಕ್ಕೆ ಬಳಸಿದ ಚಿಕ್ಕ ಇತಿಹಾಸವೇ ಇದೆ.

ಕನ್ನಡದ ಅಕ್ಷರಮಾಲೆಯಲ್ಲಿ ಅ ಕಾರ (ಅ ಎಂಬ ಅಕ್ಷರ) ಮೊದಲನೆಯದಷ್ಟೆ ? ಯಾವ ಬೋಧನ ಪದ್ಧತಿಯನ್ನು ಕೈಗೊಂಡರೂ 'ಅ ಎಂಬುದು ಮೊದಲನೆಯ ಅಕ್ಷರ' ಎಂಬ ಪರಿಚಯವನ್ನು ಮಗುವಿಗೆ ಪ್ರಾರಂಭದಲ್ಲಿ ಮಾಡಿಕೊಡುವುದೇ ಸೂಕ್ತ. ಹೀಗಿದ್ದರೂ, ಭಾಷಾನುಗುಣ ಪ್ರಾಂತವಾದೊಡನೆ ಪ್ರಾಥಮಿಕ ಶಾಲೆಯ ಮಕ್ಕಳಿಗಾಗಿ ಸಿದ್ಧಪಡಿಸಿದ ಕನ್ನಡದ ವಚನಮಾಲೆಯನ್ನು ವಾಕ್ಯಪದ್ಧತಿಗೆ ಅನುಗುಣವಾಗಿ ರಚಿಸಿ, ದುದಲ್ಲದೆ, ಅದರಲ್ಲಿ 'ಇ' ಕಾರವೇ ಮೊದಲು ಬರುವಂತೆ ಪಾಠವನ್ನು ಯೋಜಿಸಲಾಗಿದ್ದಿತು. ಈ ಪುಸ್ತಕವನ್ನು ಸಿದ್ಧಪಡಿಸುವ ಸಂದರ್ಭದಲ್ಲಿ 'ಮೊದಲು ಅ ಕಾರವೇ ಬರಬೇಕು' ಎಂಬ ಉದ್ದೇಶದಿಂದ 'ಅವನು ಬಸವ' ಎಂಬ ವಾಕ್ಯವನ್ನು ಇಡಲಾಗಿತ್ತು. ಆ ಪುಸ್ತಕ ರಚನೆಯ ಸಮಿತಿ ಸದಸ್ಯರಲ್ಲಿ ನಾನು ಒಬ್ಬನಾಗಿದ್ದುದರಿಂದ ಇದು ನನಗೆ ಗೊತ್ತು. ಪುಸ್ತಕ ಮುದ್ರಣವಾಗಿ ಪ್ರಕಟವಾದಾಗ 'ಇವನು ಬಸವ' ಎಂಬುದೇ ಮೊದಲನೆಯ ವಾಕ್ಯವಾಗಿತ್ತು. ಇದರಿಂದ ಮೊದಲು 'ಇ' ಎಂಬುದನ್ನು ಮಕ್ಕಳಿಗೆ ಕಲಿಸುವಂತೆ ಆಗಿತ್ತು. ಇದು ಹೀಗೆ ಏಕೆ ಆಯಿತು? ಎಂದು ನಾನೇ ಪಠ್ಯಸಂಶೋಧನೆ ಇಲಾಖೆಗೆ ಬಂದು ಕೇಳಿದಾಗ ದೊರೆತ ಉತ್ತರ ಚೆನ್ನಾಗಿತ್ತು !

"ಪಠ್ಯ ಸಮಿತಿ 'ಅವನು ಬಸವ' ಎಂಬ ಪ್ರಯೋಗವನ್ನೆ ಮೊದಲ ವಾಕ್ಯವಾಗಿ ಬಳಸಿದ್ದುದು ನಿಜ. ಅದೇ ಅಮುದ್ರಿತ ಪ್ರತಿಯನ್ನು ಮತ್ತೊಂದು ವಿಶೇಷ ಪರಿಣತ ಸಮಿತಿ ಪರಿಶೀಲಿಸಿತು. ಮಕ್ಕಳ ಮನೋ ವಿಜ್ಞಾನವನ್ನು ಲಕ್ಷ್ಯದಲ್ಲಿಟ್ಟುಕೊಂಡ ಆ ಸಮಿತಿ, ಮಗುವಿಗೆ ಮೊತ್ತಮೊದಲು ಪರಿಚಯವಾಗುವುದು ಹತ್ತಿರವಿರುವವರನ್ನು, ಆಮೇಲೆ ಪರಿಚಯವಾಗುವುದು ದೂರಸ್ಥಿತರನ್ನು ಎಂಬೀ ಅಂಶವನ್ನು ಪರಿಭಾವಿಸಿ, 'ಇವನು' ಎಂಬುದನ್ನು ಮೊದಲಿಗೂ 'ಅವಳು' (ಅವಳು ಕಮಲ) ಎಂಬುದನ್ನು ತದನಂತರವೂ ಇರಬೇಕಾದುದೆಂದು ತೀರ್ಮಾನಿಸಿ ಹಾಗೆ ಮಾಡಿತು." ಈ ಮಾತನ್ನೆ ನಾವು ತಿರುಗಿಸಿಯೂ ಸಮರ್ಥಿಸಬಹುದಲ್ಲವೆ? ಮಗು ತನ್ನ ಸಮೀಪದ ಸಂಗತಿಯನ್ನು ಮೊದಲೇ ಪರಿಚಯ ಮಾಡಿರುತ್ತದೆ. ದೂರದ ವಸ್ತು-ವ್ಯಕ್ತಿ ಪರಿಚಯಕ್ಕಾಗಿ ಹಂಬಲಿಸುತ್ತ ಇರುತ್ತದೆ. ಆದುದರಿಂದ 'ಅವನು ಬಸವ' ಎಂಬ ವಾಕ್ಯವನ್ನೆ ಇಟ್ಟುಕೊಳ್ಳಬಹುದಿತ್ತು. ಇದರಿಂದ ವರ್ಣಮಾಲೆಯಲ್ಲಿ ಮೊದಲ ಅಕ್ಷರವನ್ನೆ ಮಗುವಿಗೆ ಮೊದಲ ಪರಿಚಯಾಕ್ಷರವನ್ನಾಗಿ ಪ್ರಯೋಗಿಸಿಕೊಳ್ಳಬಹುದಿತ್ತು. ಇಷ್ಟೇ ಅಲ್ಲದೆ, ಮುಂದೆಯೂ ಈ ಪುಸ್ತಕದಲ್ಲಿ ಅಕ್ಷರಮಾಲೆಯ ಅನುಕ್ರಮ ಬಂದಿಲ್ಲ ; ಎಲ್ಲ ಅಕ್ಷರಗಳ ಉಲ್ಲೇಖನವೂ ಇಲ್ಲ.

೧೯೭೭ ರಿಂದ ಈಚೆ ಪ್ರಚಲಿತವಾದ ಕನ್ನಡ ಭಾರತಿ-೧ ಎಂಬುದು ಪ್ರಾಥಮಿಕ ಶಾಲೆಯ ಒಂದನೆಯ ತರಗತಿಯ ಕನ್ನಡ ಪಠ್ಯವಾಗಿದೆ. ಇದು ಅಕ್ಷರಾಭ್ಯಾಸದಲ್ಲಿ ಪದಪದ್ಧತಿಯನ್ನು ಅನುಸರಿಸಿದೆ. ಅಗಸ, ಆಟ, ಈಶ, ಉದಯ, ಊಟ, ಏತ, ಓಟ, ಓಲಗ, ಔಷಧ - ಈ ಶಬ್ದಗಳ ಮೂಲಕ ಅನುಕ್ರಮವಾಗಿ ಅ, ಆ, ಈ, ಉ,

ಊ, ಏ, ಓ, ಔ - ಎಂಬ ಎಂಟು ಸ್ವರಾಕ್ಷರಗಳ ಪರಿಚಯಕ್ಕೆ ಇದರ ಪ್ರಾರಂಭದಲ್ಲಿ ಅಸ್ಪದವಿದೆ. ಆದರೆ, ಇ, ಋ, ೠ, ಎ, ಒ - ಎಂಬ ಐದು ಸ್ವರಾಕ್ಷರಗಳನ್ನು ಕೈಬಿಡಲಾಗಿದೆ. ಏಳನೆಯ ಪಾಠಕ್ಕೆ ಬಂದಾಗ 'ಇತರರ' ಎಂಬ ಪದದ ಮೂಲಕ 'ಇ' ಕಾರವನ್ನು ಪರಿಚಯ ಮಾಡಿಕೊಡುವಂತಿದೆ. ಅಂತೂ ಅಕ್ಷರಮಾಲೆಯನ್ನು ಈ ಪುಸ್ತಕದಲ್ಲಿ ಅನುಸರಿಸಲಾಗಿಲ್ಲ.

ಇಂದು ಸಾಮಾನ್ಯವಾಗಿ ಕೈಬರವಣಿಗೆಯಲ್ಲಿ, ಬೆರಳಚ್ಚಿನಲ್ಲಿ, ಮುದ್ರಣದಲ್ಲಿ ಕಂಡುಬರುವ ದೋಷಗಳು ಅನೇಕ ಇವೆ. ಅವುಗಳಲ್ಲಿ ಕೆಲವು ದೋಷಗಳೇ ಆಗಿದ್ದರೂ ಜನರಿಗೆ ದೋಷಗಳೆನಿಸದಷ್ಟು ಒಗ್ಗಿಹೋಗಿದೆ. ತಪ್ಪಾವುದು ಸರಿಯಾವುದು ಎಂಬ ನಿರ್ಣಯಕ್ಕಾಗಿ ಕನ್ನಡ ನಿಘಂಟುಗಳನ್ನು ತೆರೆದು ನೋಡಿದರೆ, ಕನ್ನಡದ ಯಾವ ಶಬ್ದಕೋಶದಿಂದಲೂ ಶುದ್ಧಾಶುದ್ಧ ನಿರ್ಣಯವಾಗುವುದಿಲ್ಲ. ಅಂಥವುಗಳಲ್ಲಿ ಕೆಲವು ಇವು - ಸೂರ್ಯೋದಯ, ಸೂಯ೯ೋದಯ, ಸೂಯೋ೯ದಯ - ಈ ಮೂರು ರೀತಿಗಳಲ್ಲಿ ಬರೆಯುತ್ತಾರೆ. ಯಾವುದು ಸರಿ? ಏಕೆ? ಮಾತು, ಮೂತು - ಈ ಎರಡರಲ್ಲಿ ಯಾವುದು ಸರಿ? ಮಿಾಸು, ಮಿೂಸು, ಮೀಸು - ಈ ಮೂರರಲ್ಲಿ ಸರಿ ಯಾವುದು? ಅಕ್ಷರಾಭ್ಯಾಸವಾದವರಿಗೆ ಗೊತ್ತಿರಬೇಡವೆ?

'ಸೂರ್ಯೋದಯ' ಎಂದು ಕನ್ನಡದಲ್ಲಿ ಬರೆಯುವುದು ಸರಿ - ಅದು ಸಂಸ್ಕೃತ ಶಬ್ದವಾಗಿದ್ದು 'ರೋ' ಎಂದು ಬರೆದು, ಅದಕ್ಕೆ 'ಯ' ಒತ್ತನ್ನು ಕೊಡುವುದಾಗಲೀ, 'ರ್' ಎಂಬ ಅರ್ಧಾಕ್ಷರವನ್ನು ಬರೆದು, ಅದಕ್ಕೆ ತಗುಲಿಸಿದಂತೆ 'ಯೋ' ಎಂಬುದನ್ನು ಬರೆಯುವುದಾಗಲೀ ದೇವನಾಗರಿಯಲ್ಲಿ ಅಸಾಧ್ಯ. ಆದುದರಿಂದಲೇ ಆ ಲಿಪಿಯಲ್ಲಿ ಅರ್ಕಾರದ ಒತ್ತಿದೆ. ಅದು ಕನ್ನಡದಲ್ಲಿಯೂ ಬಳಕೆಯಲ್ಲಿದೆ. ಕನ್ನಡದಲ್ಲಿ ಇದನ್ನು ಪರಂಪರಾಗತವಾಗಿ 'ಅರ್ಕಾವೊತ್ತು' ಎನ್ನುತ್ತಾರೆ. ಈ ಉಚ್ಚಾರಣೆ ಸರಿಯಲ್ಲ. 'ಅರ್ಕಾರೊತ್ತು' ಎನ್ನುವುದೇ ಸರಿ. ಈ ತಿದ್ದುಪಡಿಯನ್ನು ಪ್ರಾಥಮಿಕ ತರಗತಿಯಿಂದಲೇ ಮಾಡಬೇಕಾದುದು ಅವಶ್ಯ. ಈ ಒತ್ತನ್ನು ಎಲ್ಲಿ ಕೊಡಬೇಕು? ಇದನ್ನು ಬೇರೊಂದು ಅಕ್ಷರದ ಸಂದಿನಲ್ಲಿ ಸೇರಿಸುವುದು ತಪ್ಪು. 'ಸೂಯ೯ೋದಯ' ಎಂದು ಬರೆದರೆ, 'ಯೋ' ಎಂಬ ಪೂರ್ಣಾಕ್ಷರದ ಸಂದಿನಲ್ಲಿ ಅರ್ ಒತ್ತನ್ನು ಸೇರಿಸಿದಂತಾಗುತ್ತದೆ. ಆದುದರಿಂದ ತಪ್ಪು. 'ಸೂಯೋ೯ದಯ' ಎಂಬ ರೂಪವೇ ಸಾಧು. ನಿವ೯ೈರ, ನಿವೈ೯ರ - ಎಂಬೆರಡರಲ್ಲಿ, ನಿದ೯ೇಶಕ, ನಿದೇ೯ಶಕ - ಎಂಬೆರಡರಲ್ಲಿ ಎರಡನೆಯ ರೂಪವೇ ಸರಿಯಾದುದು. ಆದರೆ ಇದನ್ನು ಇಂದು ವಿವೇಚಿಸುವವರೆಷ್ಟು ಮಂದಿ?

ಮಾತು, ಮೂತು - ಎಂಬೆರಡರಲ್ಲಿ ಮೊದಲನೆಯದು ಅಕಾರದ ದೀರ್ಘಚಿಹ್ನೆಯುಳ್ಳದ್ದಾದುದರಿಂದ ಸರಿಯಾದುದು. ಎರಡನೆಯದರಲ್ಲಿ ಅಕಾರದ ಗುಣಿತಾಕ್ಷರಕ್ಕೆ 'ಊ' ಕಾರದ ದೀರ್ಘಚಿಹ್ನೆ ಕೊಟ್ಟಂತಾಗಿದೆ - ಆದುದರಿಂದ ಅಸಾಧು. ಹಾಗೆಯೇ

‘ಮಿಾನು’ ಎಂಬಲ್ಲಿ ಇಕಾರದ ಗುಣಿತಾಕ್ಷರದ ದೀರ್ಘಕ್ಕೆ ‘ಆ’ ಕಾರದ ದೀರ್ಘಚಿಹ್ನೆಯನ್ನು ಬಳಸಲಾಗಿದೆ. ಆದುದರಿಂದ ತಪ್ಪು. ‘ಮಿೂನು’ ಎಂಬಲ್ಲಿ ‘ಊಕಾರದ ದೀರ್ಘ’ ಚಿಹ್ನೆಯಿದೆ. ಆದುದರಿಂದ ತಪ್ಪು. ಆದರೆ ‘ಮೀನು’ ಎಂದು ಬರೆಯುವಾಗ ‘ಈ’ ಕಾರದ ದೀರ್ಘಚಿಹ್ನೆಯಿರುವುದರಿಂದ ಇದು ಶುದ್ಧವಾದ ರೂಪ. ನೀರು, ಧೀರ, ಕೀಲು ಎಂಬಲ್ಲೆಲ್ಲ ಇಕಾರಕ್ಕೆ ಅದೇ ದೀರ್ಘಚಿಹ್ನೆಯನ್ನೇ ಕೊಡಲಾಗಿದೆಯಲ್ಲವೆ? ಕಿಾಲು ಅಥವಾ ಕಿೂಲು ಎಂದು ಬರೆಯಬಾರದಲ್ಲವೆ?

ಕನ್ನಡದಲ್ಲಿ ‘ನ್’ ಎಂಬ ಅರ್ಧಾಕ್ಷರವನ್ನು ೝ ಎಂದು ಬರೆಯುವುದು, ಮುದ್ರಿಸುವುದು ಉಂಟು. ಉದಾ : ಶ್ರೀಮಾೝ, ವಿದ್ವಾೝ ಎಂಬಂತೆ. ೝ ಇದು ರೂಪಗಿಟ್ಟ ನಕಾರ ವ್ಯಂಜನ : ಪಾರ್ಶ್ವವಾಯು ಬಡಿದು ಪಾತವಾದ ‘ನ್’. ಈ ‘ೝ’ ಎಂಬುದನ್ನು ಪ್ರಯೋಗಿಸುವುದೆಂದರೆ ಅಕ್ಷರ ಸರಸ್ವತಿಯನ್ನು ಕೊಂದುದಕ್ಕೆ ಸಮಾನವಲ್ಲದೆ ಮತ್ತೇನು?

ಇಂತಹ ಹಲವು ಹತ್ತು ಅಕ್ಷಮ್ಯ ದೋಷರೂಪಗಳನ್ನು ವಿವೇಕಿಗಳು ತಿದ್ದಿಕೊಳ್ಳಲೇಬೇಕು. ಈ ತಿದ್ದುಪಡಿ ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ಪ್ರಾರಂಭವಾಗುವ ಅಕ್ಷರಾಭ್ಯಾಸದಿಂದಲೇ ಮೊದಲಾಗಬೇಕು - ಎಂಬುದಕ್ಕೆ ನಿದರ್ಶವಾಗಿದೆ ಈ ಪುಟ್ಟ ವೈಚಾರಿಕ ಲೇಖನ.

ಹೈದರಾಬಾದು ಕರ್ನಾಟಕದ ಪ್ರಾಚೀನ ಗುರುಕುಲಗಳು

ಪ್ರೊ. ವಸಂತ ಕುಷ್ಟಗಿ
ಉಪಕುಲಸಚಿವ
ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರ್ಗಿ

ಮನುಷ್ಯನು ಬೆಳೆದಿದ್ದಾನೆಂಬುದನ್ನು ಅವನ ಎತ್ತರ ಮತ್ತು ಗಾತ್ರದ ಮೇಲೆ ಗುರುತಿಸುವುದಿಲ್ಲ. ಅದನ್ನು ಅವನ ಹೃದಯವಂತಿಕೆ ಮತ್ತು ಬುದ್ಧಿವಂತಿಕೆಗಳ ಬೆಳವಣಿಗೆಯ ಮೇಲೆ ಗುರುತಿಸಬೇಕಾದುದು ಸಂಸ್ಕೃತಿಯ ಲಕ್ಷಣ. ಇದನ್ನು ಕರ್ನಾಟಕ ಜನತೆ ಬಹು ಪ್ರಾಚೀನ ಕಾಲದಿಂದಲೂ ಅರಿತು ಹೆಜ್ಜೆಯನ್ನಿಟ್ಟಿದೆ, ಅಂತೆಯೇ ಪ್ರಾಚೀನ ಕಾಲದಿಂದಲೇ ವಿದ್ಯೆಗೆ ಮಹತ್ವವನ್ನು ಕೊಟ್ಟು ಶಿಕ್ಷಣ ಕೇಂದ್ರಗಳನ್ನು ನಿರ್ಮಿಸಿಕೊಂಡು ಪಾಂಡಿತ್ಯವನ್ನು ಈ ಜನತೆ ಸಂಪಾದನೆ ಮಾಡಿತು. ಇಲ್ಲಿ ಪಾಂಡಿತ್ಯವೆಂದರೆ ಕೇವಲ ಪುಸ್ತಕ-ಜ್ಞಾನವೆಂದು ಅರ್ಥ ಮಾಡಕೂಡದು. ಜ್ಞಾನಸಂಗ್ರಹದ ಜೊತೆಗೆ ಲೌಕಿಕ ವ್ಯವಹಾರ ಚಾತುರ್ಯವೂ ಅದರಲ್ಲಿ ಸೇರಿರಬೇಕಾದುದು ಅಗತ್ಯವೆಂದು ಭಾವಿಸಬೇಕಾಗುತ್ತದೆ. ಕೆಲವು ಸಲ ಅಕ್ಷರ ಜ್ಞಾನವಿಲ್ಲದಿದ್ದರೂ ನಡೆಯುತ್ತದೆ. ಆದರೆ ಲೌಕಿಕ ಜ್ಞಾನವು ಅತ್ಯವಶ್ಯಬೇಕಾಗುತ್ತದೆ. ಇಂತಹ ಲೌಕಿಕ ಜ್ಞಾನದಲ್ಲಿ ಹೃದಯವಿಕಾಸ ಮತ್ತು ಮನಸ್ಸಿನ ಪಕ್ವತೆಗಳು ಮಹತ್ವದ ಪಾತ್ರವನ್ನು ವಹಿಸಿರುತ್ತವೆ. ಬಹುಶಃ ಇದನ್ನು ಕನ್ನಡಿಗರಲ್ಲಿ ಗುರುತಿಸಿ ನೃಪತುಂಗನ ಕಾಲದ ಕವಿರಾಜ ಮಾರ್ಗದಲ್ಲಿ,

> " ಪದನಱಿದು ನುಡಿಯಲುಂ ನುಡಿ
> ದುದನಱಿ ದಾರಾಯಲು ಮಾರ್ಪರಾ ನಾಡವರ್ಗಳ್
> ಚದುರರ್ ನಿಜದಿಂ ಕುಱಿತೋ
> ದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳ್
> ಕುಱಿತವರಲ್ಲದೆ ಮತ್ತಂ
> ಪೆಱರುಂ ತಂತಮ್ಮ ನುಡಿಯೊಳೆಲ್ಲರ್ ಜಾಣರ್
> ಕಿಱು ಮಕ್ಕಳು ಮಾ ಮೂಗರು
> ಮಱಿ-ಪಲ್ಕಱ್ ಪರ್ ವಿವೇಕಮುಂ ಮಾತುಗಳಂ "

ಎಂಬಂತಹ ಪ್ರಶಸ್ತಿಯ ಮಾತುಗಳು ಕನ್ನಡಿಗರ ಬಗೆಗೆ ಉಕ್ತವಾಗಿರುವುದನ್ನು ಗಮನಿಸಬಹುದಾಗಿದೆ.

ಇತಿಹಾಸವನ್ನು ತೆರೆದು ನೋಡಿದಾಗ ಕರ್ನಾಟಕದಲ್ಲಿಯೂ ದೇವಾಲಯ, ಮಠ, ಬ್ರಹ್ಮಪುರಿ, ಅಗ್ರಹಾರ ಇವುಗಳು ಪ್ರೌಢಶಿಕ್ಷಣದ ಕೇಂದ್ರಗಳಾಗಿದ್ದುವು ಎಂಬುದು ತಿಳಿದು ಬರುತ್ತದೆ. ಈ ಕೇಂದ್ರಗಳಲ್ಲಿ ಆಧ್ಯಾತ್ಮಿಕ ಶಿಕ್ಷಣದ ಜೊತೆಗೆ ಲೌಕಿಕ ಶಿಕ್ಷಣ ಪ್ರಧಾನವು ನೆರವೇರುತ್ತಿತ್ತೆಂಬುದನ್ನು ಕಾಣಬಹುದಾಗಿದೆ. ದೇವಾಲಯಗಳಲ್ಲಿ ಪಂಡಿತರೂ, ಮಠಗಳಲ್ಲಿ ಮಠಾಧಿಪತಿಗಳೂ ತಮ್ಮ ತಮ್ಮ ಶಿಷ್ಯ ಪರಂಪರೆಯ ಮನೆತನಗಳ ಮಕ್ಕಳಿಗೆ ಪಾಠ ಪ್ರವಚನಗಳನ್ನು ಮಾಡಿಸುತ್ತಿದ್ದರು. ಆದರೆ ಬ್ರಹ್ಮಪುರಿಗಳು ನಗರಗಳಲ್ಲಿ ವಿದ್ಯಾದಾನ ಮಾಡುವ ಕೇಂದ್ರಗಳಾಗಿರುತ್ತಿದ್ದವು. ಇವುಗಳನ್ನು ಅನೇಕ ಕಡೆ ರಾಜರುಗಳು ಇನ್ನೂ ಕೆಲವುಕಡೆ ಉಳ್ಳವರು ಸ್ಥಾಪಿಸಿ ನಡೆಸಿಕೊಂಡು ಬರುವ ರೂಢಿಯಿದ್ದಿತು. ಇವು ನಗರಗಳಲ್ಲಿಯೇ ಇರುತ್ತಿದ್ದುದರಿಂದ ಅಲ್ಲಿಯ ಉಪಾಧ್ಯಾಯರು ಮಹಾವಿದ್ವಾಂಸರು, ದಿಗ್ದಂತಿಗಳೇ ಆಗಿರುತ್ತಿದ್ದರು. ಇಂತಹ ಒಂದು ಬ್ರಹ್ಮಪುರಿಯು ಕಲಬುರಗಿಯಲ್ಲಿಯೂ, ಇದ್ದಿತು. ಅಂತೆಯೇ ಈಗಲೂ ಕಲಬುರಗಿಯಲ್ಲಿ ಒಂದು ಓಣಿಯ ಹೆಸರು 'ಬ್ರಹ್ಮಪುರ' ಎಂದು ಇದೆ. ಈಗಲೂ ಅದು ವಿದ್ಯಾಕೇಂದ್ರವಾಗಿಯೇ ಮೆರೆಯುತ್ತಿದೆ. ಅಲ್ಲದೆ ಹೈದರಾಬಾದು ಕರ್ನಾಟಕದಲ್ಲಿಯೇ ಆ ನೆಲ ವಿದ್ಯಾಸ್ಫೂರ್ತಿಯನ್ನು ನೀಡುವ ಪವಿತ್ರ ತಾಣವಾಗಿದೆ.

ಅಗ್ರಹಾರವೆಂದರೆ ವಿದ್ಯಾಭಿವೃದ್ಧಿಗಾಗಿ ನಿರ್ಮಿಸಿದ ಪ್ರತ್ಯೇಕ ಸ್ಥಳ. ಇಂತಹ ಸ್ಥಳಗಳು ಸ್ವತಂತ್ರವಾದ ಸ್ಥಳಗಳೇ ಆಗಿರುತ್ತಿದ್ದುವು. ಅಲ್ಲಿ ವಿದ್ಯಾಸಂಪನ್ನರಾದ ಬ್ರಾಹ್ಮಣರು ಅಧ್ಯಯನ ಅಧ್ಯಾಪನಗಳನ್ನು ಮಾಡುತ್ತ ಆ ಪ್ರದೇಶದ ಒಡೆತನವನ್ನು ತಮ್ಮ ಅಂಕಿತದಲ್ಲಿಯೇ ಇಟ್ಟುಕೊಂಡಿರುತ್ತಿದ್ದರು. ವಿದ್ಯಾಭಿಮಾನಿಗಳಾದ ಅರಸರು ಇಂತಹ ಸ್ಥಳಗಳನ್ನು ದತ್ತಿಯಾಗಿ ಪಂಡಿತರಿಗೆ ಕೊಡುತ್ತಿದ್ದ ನಿದರ್ಶನಗಳಿವೆ. ಹೀಗೆ ಅಗ್ರಹಾರಗಳನ್ನು ದತ್ತಿಪಡೆದ ಬ್ರಾಹ್ಮಣರಿಗೆ ಮಹಾಜನರೆಂದು ಕರೆಯುತ್ತಿದ್ದರು. ಅವರು, "ವೇದ, ವೇದಾಂಗ, ಉಪಾಂಗ, ಶಾಸ್ತ್ರ, ಅಷ್ಟಾದಶ ಪುರಾಣ, ಸ್ಮೃತಿ" ಗಳನ್ನು ಅರಿತಿದ್ದು ವಾಗ್ಭೂಷಣರೂ ಷಟ್ಕರ್ಮನಿರತರೂ ಆಗಿರಬೇಕಾಗುತ್ತಿತ್ತು. ಅಲ್ಲಿ ಅವರ ಜೊತೆಯಲ್ಲಿ ಇತರ ಜಾತಿ ಮತ ಸಂಪ್ರದಾಯದವರೂ ಇರಬಹುದಾಗಿತ್ತು. ಇಂಥಲ್ಲಿ ಸಂಸ್ಕಾರಪೂರ್ಣ ಸುಸಂಸ್ಕೃತ ವಿದ್ಯೆಯನ್ನು ಪ್ರದಾನ ಮಾಡಲಾಗುತ್ತಿತ್ತು. ಇಂತಹ ಅಗ್ರಹಾರಗಳು ಈಗ ಹಾಳಾದ ಹಳ್ಳಿಗಳಾಗಿ ಗತವೈಭವವನ್ನು ಹೇಳುತ್ತ ನಿಂತಿವೆ.

ಈ ದೇವಾಲಯ, ಮಠ, ಬ್ರಹ್ಮಪುರಿ, ಅಗ್ರಹಾರಗಳು, ಗುರುಕುಲ ಪದ್ಧತಿಯು ನಮ್ಮಲ್ಲಿ ಬಹು ಪ್ರಾಚೀನ ಕಾಲದಿಂದಲೂ ತನ್ನ ಆದರ್ಶಗಳನ್ನು ಮೆರೆದು ನಿಂತಿದೆ. ಹಿಂದೆ ಆತ್ಮೋನ್ನತಿಗಾಗಿ, ಆತ್ಮ ಸಾಕ್ಷಾತ್ಕಾರಕ್ಕಾಗಿ ಅರಣ್ಯಗಳಲ್ಲಿ ಋಷಿಗಳು ಮುನಿಗಳು ಸಹಸ್ರಕ್ಕೂ ಹೆಚ್ಚಾಗಿ ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ವಿದ್ಯಾಪ್ರದಾನ ಮಾಡುತ್ತಿದ್ದ ದಾಖಲೆಗಳಿವೆ. ಅಲ್ಲಿ ವಿದ್ಯಾರ್ಥಿಗಳು ಅನ್ನಬಟ್ಟೆಗಳಿಗಾಗಿ ತಮ್ಮ ತಂದೆತಾಯಿಗಳ

ಕಡೆಗೆ ಮನೆಯ ಕಡೆಗೆ ಚಿತ್ತವನ್ನು ಹರಿಸಬೇಕಾಗಿರಲಿಲ್ಲ. ಆಗ ಗುರುಗಳೇ ಆ ಭಾರವನ್ನೆಲ್ಲ ಹೊರುತ್ತಿದ್ದರು. ಹೀಗಾಗಿ ವಿದ್ಯಾರ್ಥಿಗಳ ಕೆಲಸವು ವಿದ್ಯಾಭ್ಯಾಸಂಗವಷ್ಟೇ ಆಗಿರುತ್ತಿತ್ತು. ಹತ್ತು ಸಾವಿರ ವಿದ್ಯಾರ್ಥಿಗಳಿಗೆ ಅನ್ನಬಟ್ಟೆಗಳನ್ನು ಒದಗಿಸಿ ಶಿಕ್ಷಣ ನೀಡುತ್ತಿದ್ದ ಗುರುಗಳಿಗೆ ಕುಲಪತಿಗಳೆಂದು ಕರೆಯಲಾಗುತ್ತಿತ್ತು. ಪುರಾಣಗಳಲ್ಲಿ ಬರುವ ವಾಲ್ಮೀಕಿ, ಕಣ್ವ, ಶೌನಕ, ಸಾಂದೀಪನಿ ಮೊದಲಾದವರು ಅಂತಹ ಕುಲಪತಿಗಳು. ಅವರ ಹತ್ತಿರವಿರುವ ವಿದ್ಯಾರ್ಥಿಗಳು ಗುರುಕಟಾಕ್ಷಕ್ಕಾಗಿ ಕಾದು ನಿಂತವರಾಗಿರುತ್ತಿದ್ದರು. ಅವರು ಗುರುಗಳ ಅನುಗ್ರಹದಿಂದ ವಿದ್ಯಾಸಂಪನ್ನರಾಗಿ ಇಂದಿಗೂ ಆದರ್ಶವಾಗಿ ನಿಂತಿರುವ ಸತ್ಯಕಾಮ, ಆರುಣಿ, ಉದಂಕರನ್ನು ನೆನೆದುಕೊಳ್ಳಬಹುದು.

ಗುರುಕುಲ ಪದ್ಧತಿಯಲ್ಲಿಯ ಈ ವಿವೇಚನೆಯಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯ ಭಾರವೊಂದಲ್ಲದೆ ಮತ್ತಾವ ಭಾರ, ಚಿಂತೆಗಳೂ ಅವರಿಗೆ ಇರುತ್ತಿರಲಿಲ್ಲವೆಂದು ತಿಳಿದು ಬಂದಿತು. ಇಂತಹ ಗುರುಕುಲಗಳ ಸಮನಾದ ವಿದ್ಯಾಕೇಂದ್ರಗಳೆಂದರೆ ಬಳ್ಳಾರಿ ಬಳಿಯ ಕಾರ್ತಿಕೇಯ ತಪೋವನ, ಸೊಗಲದ ಸುವರ್ಣಾಕ್ಷಿ ತಪೋವನಗಳನ್ನು ನೆನೆಯಬಹುದು. ಅದೇ ರೀತಿ ಹೈದರಾಬಾದು ಕರ್ನಾಟಕದ ಕಲಬುರಗಿ, ರಾಯಚೂರು, ಬೀದರ ಜಿಲ್ಲೆಗಳ ಭಾಗಗಳಲ್ಲಿ ಇಂತಹ ವಿದ್ಯಾಕೇಂದ್ರಗಳನ್ನು ಕಾಣಬಹುದಾಗಿದೆ. ಏಕೆಂದರೆ ಈ ಭಾಗದಲ್ಲಿ ಚಾಲುಕ್ಯರು, ರಾಷ್ಟ್ರಕೂಟರು ಮೊದಲಾದ ಅರಸೊತ್ತಿಗೆಗಳು ಸಮೃದ್ಧಿಯನ್ನುಂಟುಮಾಡಿ ಪ್ರಜೆಗಳ ಪ್ರೀತಿ ವಿಶ್ವಾಸಗಳನ್ನು ಗಳಿಸಿಕೊಂಡು ಕಲೆ ಸಾಹಿತ್ಯಗಳನ್ನು ಪೋಷಿಸಿ ಗುರುಕುಲ ಮಾದರಿಯ ಅನೇಕ ವಿದ್ಯಾಕೇಂದ್ರಗಳನ್ನು ಸ್ಥಾಪಿಸಿದ್ದವು, ಬೆಳೆಸಿದ್ದವು. ಅವುಗಳಲ್ಲಿ ಪ್ರಾಚೀನವೂ ಅತ್ಯಂತ ಮಹತ್ವದವೂ ಆದ ನಾಗಾಯಿ, ಕುಕನೂರು, ಅಗ್ರಹಾರಗಳನ್ನು ಇಲ್ಲಿ ಉಲ್ಲೇಖಿಸಬಹುದು.

ನಾಗಾಯಿ ಎಂಬುದು ಈಗ ಕಲಬುರಗಿ ಜಿಲ್ಲೆಯ ಚಿತ್ತಾಪುರ ತಾಲೂಕಿಗೆ ಸೇರಿದ ಪ್ರದೇಶ. ಇದು ಚಿತ್ತಾಪುರದಿಂದ ಎರಡು ಮೈಲು ಅಂತರದಲ್ಲಿರುವ ಪ್ರಾಚೀನತೆಯನ್ನು ಕಂಡುಹಿಡಿಯಲು ಅವಶೇಷಗಳು ಆಹ್ವಾನವನ್ನು ನೀಡಿ ನಿಂತಿರುವ ಇತಿಹಾಸ ಪ್ರಸಿದ್ಧಿಯನ್ನು ಪಡೆದ ಪ್ರದೇಶ. ಇದನ್ನು ನಾಗವಾಪಿ, ನಾಗಾವಿ, ನಾಗಾಯಿ ಎಂಬ ಹೆಸರುಗಳಿಂದ ಗುರುತಿಸಬಹುದು. ಶಾಸನಗಳಂತೂ ನಾಗಾಯಿಯನ್ನು ಹೊಗಳಿದ್ದೇ ಹೊಗಳಿದ್ದು. "ಚತುರ್ವೇದ ಪಾರಾವಾರ ಪಾರಗರಪ್ಪ ನಾಲ್ಕುನೂರ್ ವಿಪ್ರೋತ್ತಮರಿಂದ ಅಭಿನವ ಬ್ರಹ್ಮಲೋಕವೆಂಬಂತೆ ಮಹಾ ಅಗ್ರಹಾರ ನಾಗಾವಿ" ಎಂದು ಒಂದು ಶಾಸನವು ಮೆಚ್ಚಿ ನುಡಿದಿರುವುದನ್ನು ಗಮನಿಸಬಹುದು. ಇಲ್ಲಿ ಶಿಲಾಹಾರ, ಶಾತವಾಹನ, ಶಾಕ್ತರು, ಹೈಹಯರು, ರಾಷ್ಟ್ರಕೂಟ, ಚಾಲುಕ್ಯರ ಕಾಲದಿಂದಲೂ ವಿದ್ಯಾಪ್ರದಾನ ನಡೆದಿದೆಯೆಂಬುದಕ್ಕೆ ಸಾಕ್ಷಿಗಳಿವೆ. ಈ ಎಲ್ಲ ಮನೆತನಗಳ ಅರಸರು ನಾಗಾಯಿಯನ್ನು ಬಹಳ ಪ್ರೀತಿಗೌರವಗಳಿಂದ ಬೆಳೆಸಿದರು. ರಾಷ್ಟ್ರಕೂಟರ

ಸು ಮನೆತನದ ನಾಲ್ಕನೆಯ ಗೋವಿಂದ, ಒಂದನೆಯ ಕೃಷ್ಣ, ಕ್ರಿ.ಶ. ೯೩೩ ರಲ್ಲಿಯ

ಹೈಹಯವಂಶದ ಶಿರಸ ಕಲ್ಯಾಣ ಚಾಲುಕ್ಯರ ಸೋಮೇಶ್ವರ ಮೊದಲಾದವರು ಭೂಮಿ ಸೀಮಿ ದತ್ತಿಗಳನ್ನು ನೀಡಿದರೆಂಬುದಕ್ಕೆ ಇತಿಹಾಸವು ತನ್ನ ಪುಟಗಳನ್ನು ತೆರೆದಿಟ್ಟಿದೆ.

ಕಲ್ಯಾಣ ಚಾಲುಕ್ಯರ ವಿಕ್ರಮಾದಿತ್ಯನ ಆಸ್ಥಾನದ ಕಾಲಿದಾಸನೆಂಬ ಮಂತ್ರಿಯು (ಕ್ರಿ.ಶ. ೧೦೮೫) ನಾಗಾಯಿಯ ಘನತೆಗೆ ಪಾತ್ರರಾದವರಲ್ಲಿ ಅಗ್ರಗಣ್ಯನಂತೆ. ಆತನು ಅಲ್ಲಿ ಷಟ್‌ಶಾಸ್ತ್ರಗಳನ್ನು ಅಭ್ಯಾಸ ಮಾಡಲು ಅವಕಾಶ ಮಾಡಿಕೊಟ್ಟಿದ್ದನಂತೆ. ಆದಕ್ಕಾಗಿ ಬೇರೆ ಬೇರೆ ದೇಶಗಳಿಂದ ವಿದ್ಯಾರ್ಥಿಗಳು ಆಕರ್ಷಿತರಾಗಿ ಅಲ್ಲಿಗೆ ವ್ಯಾಸಂಗಕ್ಕಾಗಿ ಬರುತ್ತಿದ್ದರಂತೆ. ಅವರಿಗೆಲ್ಲ ಅಲ್ಲಿ ಯೋಗ್ಯವಾದ ವಸತಿ ಸೌಕರ್ಯ, ಊಟ ಉಡುಗೆಯ ಸೌಕರ್ಯಗಳನ್ನು ಒದಗಿಸಿ ಕೊಟ್ಟುದಲ್ಲದೆ ಪುಸ್ತಕ ಭಂಡಾರವಿರುವ ಜ್ಞಾನಪೀಠವನ್ನು ನಿರ್ಮಿಸಿದವರಲ್ಲಿ ಸಧ್ಯದವುಟ್ಟಿಗೆ ಕಾಳಿದಾಸನೇ ಮೊದಲಿಗನೆಂದು ಹೇಳಬೇಕಾಗ ಬಹುದು. ಈ ಮಾತಿಗೆ ಅಲ್ಲಿಯ ಒಂದು ಶಾಸನವು ಪ್ರಮಾಣವನ್ನು ನುಡಿಯುತ್ತಿದೆ. ಆದರಲ್ಲಿ ಕಾಳೀದಾಸನ ವ್ಯಕ್ತಿತ್ತ್ವವೆ ಒಡಮೂಡಿದಂತಿದೆ. ಅವನು "ಸಾಹಿತ್ಯದಲ್ಲಿ ಅಭಿರುಚಿಯುಳ್ಳವನು, ಸೈನ್ಯ ನಡೆಸುವುದರಲ್ಲಿ ನಿಷ್ಣಾತನು, ರಾಜಕಾರಣದಲ್ಲಿ ಬೃಹಸ್ಪತಿಯೂ ಧೈರ್ಯದಲ್ಲಿ ಗರುಡನೂ ಆಗಿದ್ದು ಅಗ್ರಹಾರವನ್ನು" ಸ್ಥಾಪಿಸಿದ ನೆಂದೂ ಎರಡನೆಯ ಜಯಸಿಂಹನಿಂದ ಈ ಅಗ್ರಹಾರದ ಶಾಸನವನ್ನು ಮಾಡಿಸಿದನೆಂದೂ ತಿಳಿದುಬರುತ್ತದೆ. ಅಲ್ಲದೆ ಇದು ಹಿಂದೆ ಕುಂತಳ ದೇಶದ ಪ್ರಾದೇಶಿಕ ರಾಜಧಾನಿ ಯಾಗಿತ್ತೆಂದೂ ಹೇಳುತ್ತಾರೆ. ಇಷ್ಟೇ ಅಲ್ಲ ಇಲ್ಲಿ ನಾಗಾಯಿಯ ಎಲ್ಲಮ್ಮ ಅರ್ಥಾತ್ ನಾಗಲಾಂಬಿಕೆಯೆಂಬ ದೇವಿಯು ಇರುವ ಶಕ್ತಿಪೀಠವೂ ಇದೆ. ಅದಕ್ಕಾಗಿ ಅನೇಕ ಜನ ಭಕ್ತರು ದರ್ಶನಕ್ಕಾಗಿ ಬರುತ್ತಿರುತ್ತಾರೆ. ಆ ದೇವಾಲಯದ ಸುತ್ತುಮುತ್ತು ನೀರಿನ ಚಿಲುಮೆಗಳಿದ್ದು ನಿಸರ್ಗದ ಹಸಿರು ಕಣ್ಣಿಗೆ ಹಬ್ಬವನ್ನುಂಟುಮಾಡುತ್ತದೆ. ಅಲ್ಲಿ ಮುಕ್ಕಾಗಿ ಬಿದ್ದಿರುವ ದೇವಾಲಯದ ಕಟ್ಟಡದ ಕಲ್ಲುಗಳು, ನಂದಿಯ ವಿಗ್ರಹಗಳು, ಜಿನ ಮೂರ್ತಿಗಳು, ಶಿಲಾಶಾಸನಗಳು ಗತವೈಭವವನ್ನು ನೆನಪಿಸಿ ಕಣ್ಣುಗಳನ್ನು ತಂಪು ಗೊಳಿಸುತ್ತವೆ. ಎಲ್ಲಮ್ಮನ ಮಂದಿರದ ಹತ್ತಿರವಿರುವ ನಂದಿಭಾವಿ ಮತ್ತು ಸಿಡಿಲು ಭಾವಿಗಳಲ್ಲಿ ಸದಾಕಾಲದಲ್ಲಿ ಒಂದೇ ಪಾತಳಿಯಲ್ಲಿದ್ದು ಕುಡಿಯಲು ಬಹು ಸಿಹಿ ಮತ್ತು ತಂಪು, ಈ ಪ್ರದೇಶದಲ್ಲಿಯೇ ಮತ್ತೊಂದು ಮಹತ್ತ್ವದ ಸ್ಥಳ ೬೧ ಕಂಬಗಳ ದೇವಾಲಯ ಮತ್ತು ಅದರ ಆವಾರದಲ್ಲಿರುವ ಏಳು ಅಡಿ ಎತ್ತರದ ಶಿಲಾಶಾಸನ. ಈ ಹಿನ್ನೆಲೆಯನ್ನೆಲ್ಲ ಪರಿಶೀಲಿಸಿದರೆ ನಾಗಾಯಿ ಪ್ರಾಚೀನ ಕಾಲದಿಂದಲೂ ಶ್ರೇಷ್ಠ ಗುರುಕುಲವಾಗಿ ಘಟಿಕಾಸ್ಥಾನವಾಗಿ ಬೆಳೆದು ಬಂದಿದೆಯೆಂದು ಒಪ್ಪಬಹುದು.

ಇಂತಹ ಪರಂಪರೆಯಿರುವ ನಾಗಾಯಿಯಲ್ಲಿ ಭಾರತೀಯ ತತ್ತ್ವಜ್ಞಾನದ ವಿವಿಧ ಶಾಖೆಗಳ ಅಧ್ಯಯನ-ಅಧ್ಯಾಪನಗಳು ನಡೆಯುತ್ತಿದ್ದುವು ಎಂಬುದನ್ನು, ಶಾಸನದಲ್ಲಿ ಹೇಳಿರುವ ಕೆಳಗೆ ನಿರೂಪಿಸಿದ ಅಂಕಿ ಸಂಖ್ಯೆಗಳಿಂದ ಮನಗಾಣಬಹುದು.

ಉಪಾಧ್ಯಾಯರು ಕಲಿಸುತ್ತಿದ್ದ ವಿಷಯಗಳು	ಉಪಾಧ್ಯಾಯರ ಸಂಖ್ಯೆ
೧. ಭಟ್ಟದರ್ಶನ ನ್ಯಾಸ ಪ್ರಭಾಕರ ವ್ಯಾಖ್ಯಾನ	೩
೨. ವೇದವನ್ನು ಕಲಿಸುವವರು	೩
೩. ಗ್ರಂಥ ಭಂಡಾರಿಗಳು	೧
ವಿದ್ಯಾರ್ಥಿಗಳು	
೧. ವೇದಾಧ್ಯಾಯಿಗಳು	೨೦೦
೨. ಶಾಸ್ತ್ರಾಧ್ಯಾಯಿಗಳು	೫೦
೩. ಇತರರು	೭

ಈ ವಿದ್ಯಾಕ್ಷೇತ್ರಕ್ಕೆ ನೀಡಿದ ೧೦೦೦ ಮತ್ತರ ಭೂಮಿಯ ಹಂಚಿಕೆಯು ಕೆಳಗಿನಂತೆ ಇತ್ತು :

೩೫ ಮತ್ತರು ಭಟ್ಟದರ್ಶನ ವ್ಯಾಖ್ಯಾತೃವಿಗೆ
೩೦ ಮತ್ತರು ನ್ಯಾಸವ್ಯಾಖ್ಯಾತೃವಿಗೆ
೪೫ ಮತ್ತರು ಪ್ರಭಾಕರ ವ್ಯಾಖ್ಯಾತೃವಿಗೆ
೩೦ ಮತ್ತರು ಗ್ರಂಥ ಭಂಡಾರಿಗೆ
೩೦ ಮತ್ತರು ಘಟಿಕಾ ಪ್ರಹಾರಿಗೆ
ಉಳಿದ ಮತ್ತರು ದೇವಸ್ಥಾನದ ಜೀರ್ಣೋದ್ಧಾರ ಮತ್ತು ಇತರ ಸೇವಿಕಾ ವೃತ್ತಿಗಳಿಗಾಗಿ.

ಇಂದಿಗೂ ಮೇಲಿನಂತೆ ಇತಿಹಾಸದ ಲೆಕ್ಕ ಪತ್ರವನ್ನು ಹೊತ್ತು ನಿಂತಿರುವ ೬೧ ಕಂಬಗಳ ಮಧುಸೂದನ ದೇವಾಲಯವು ನಮ್ಮನ್ನು ಪ್ರಾಚೀನಕಾಲದ ನಾಗರಿಕರನ್ನಾಗಿ ಮಾಡುತ್ತದೆ.

ಕುಕುನೂರು ರಾಯಚೂರು ಜಿಲ್ಲೆಯ ಯಲಬುರಗಿ ತಾಲೂಕಿಗೆ ಸೇರಿದ ಪ್ರದೇಶ. ಅಲ್ಲಿಯೂ ಕೂಡ ನಾವು ಪ್ರಾಚೀನ ಕಾಲದ ಗುರುಕುಲದ ನೆಲೆಬೆಲೆಗಳನ್ನು ಗುರುತಿಸಬಹುದು. ಇದಕ್ಕೆ ಆಧಾರ ಶಾಸನಗಳು, ಐತಿಹ್ಯಗಳು. ಈ ಕುಕನೂರು ಪುರಾಣಗಳ ಕಾಲದಿಂದಲೂ ಖ್ಯಾತವೆತ್ತ ಊರು. ಏಕೆಂದರೆ ಇದೇ ಹಿಂದೆ ಕುಂತಳನಗರವಾಗಿದ್ದು ಚಂದ್ರಹಾಸನ ಸುಂದರವಾದ ವ್ಯಕ್ತಿತ್ವವು ಮೂಡಿ ಬರುವುದಕ್ಕೆ ಕಾರಣೀಭೂತವಾದ ಹೆಗ್ಗಳಿಕೆಯ ಸ್ಥಳ. ಇದರ ಸಮೀಪದಲ್ಲಿರುವ ಶೃಂಗೇರ ತೋಟದಲ್ಲಿಯೇ ದುಷ್ಟಬುದ್ಧಿಯ ಮಗಳಾದ ವಿಷಯೆಯನ್ನು ಚಂದ್ರಹಾಸನು ಮೊತ್ತ ಮೊದಲು ಸಂಧಿಸಿದ್ದು. ಕಲಬುರಗಿ ಜಿಲ್ಲೆಯ ಸುರಪುರದ ಬಳಿಯಿರುವ ದೇವಪುರದ

ಲಕ್ಷ್ಮೀಶಕವಿಯು ಇದನ್ನೇ ತನ್ನ ಜೈಮಿನಿ ಭಾರತದಲ್ಲಿ ಕುಂತಲಪುರವೆಂದು ಕರೆದು ಚಂದ್ರಹಾಸನ ಕತೆಯನ್ನು ಸೊಗಸಾಗಿ ಚಿತ್ರಿಸಿದ್ದಾನೆ. ಇದು ಪುರಾಣ ವೈಭವವನ್ನು ಚಿತ್ರಿಸಿದರೆ ಅಲ್ಲಿ ಇತಿಹಾಸ ಕಾಲದ ವೈಭವಕ್ಕೂ ಚ್ಯುತಿಯಿಲ್ಲದ ಗುರುತುಗಳಿವೆ. ಏಕೆಂದರೆ ಈಗ ಅಲ್ಲಿ ಚಾಲುಕ್ಯ ಶಿಲ್ಪ ಮಾದರಿಯ ೭ನೆಯ ಶತಮಾನದಿಂದ ೧೩ನೆಯ ಶತಮಾನದವರೆಗಿನ ಬೆಳವಣಿಗೆಯ ಶಿಲ್ಪಕಲೆಯ ಅವಶೇಷಗಳನ್ನು ಚಿತ್ರಿಸುವ ದೇಗುಲಗಳನ್ನು ಕಾಣಬಹುದು. ಇವುಗಳಲ್ಲದೆ ಇನ್ನೂ ಚೆನ್ನಾಗಿ ಹಳೆಯ ಸೊಗಸನ್ನು ಎತ್ತಿ ಹಿಡಿದು ಸುಂದರವಾಗಿ ನಿಂತಿರುವ ಕಲ್ಲೇಶ್ವರ ಮತ್ತು ಮಲ್ಲಿಕಾರ್ಜುನ ದೇವಾಲಯಗಳನ್ನು ನೋಡಬಹುದು. ಅದರಂತೆ ಮಹಾಮಾಯಿಯ ಮಂದಿರವೂ ಕೂಡ ಇಲ್ಲಿ ಶಿಲ್ಪಕಲೆಗೆ ಮಾದರಿಯಾಗಿ ಅಚ್ಚಳಿಯದೇ ತನ್ನ ಆರಾಧಕರನ್ನು ಬರಮಾಡಿಕೊಳ್ಳುತ್ತಿದೆ. ಇಂತಹ ಪರಂಪರೆಯಿರುವ ಈ ಊರಿನಲ್ಲಿ ಹಿಂದೆ ಗುರುಕುಲವಿದ್ದು ವಿದ್ಯಾದಾನವನ್ನು ಮಾಡಿದ ಸಂಗತಿಗೆ ಭಿನ್ನಾಭಿಪ್ರಾಯವೇ ಇಲ್ಲ. ಏಕೆಂದರೆ ಅಲ್ಲಿ ಇಂದಿನ ರೀತಿಯಲ್ಲಿ ಶಿಕ್ಷಣ ಪ್ರದಾನ ಮಾಡುತ್ತಿರುವ ವಿದ್ಯಾನಂದ ಗುರುಕುಲವೆಂಬ ಶಿಕ್ಷಣ ಸಂಸ್ಥೆಯು ಹಿಂದಿನ ಪರಂಪರೆಯ ನೆನಪನ್ನು ತಂದುಕೊಡುವಲ್ಲಿ ಸಾರ್ಥಕವಾದ ಹೆಸರನ್ನು ಪಡೆದಿದೆ.

ಬಹಳ ಹಿಂದೆ ಈಗಿನ ಕುಕನೂರನ್ನು, ಕುಕನೂರು-೩೦ ಎಂದು ಕರೆಯುತ್ತಿದ್ದರು. ಅದು ಆಗ ಬೆಳವಲ ಪ್ರದೇಶದ ಮುಖ್ಯ ಪಟ್ಟಣಗಳಲ್ಲೊಂದಾಗಿತ್ತು. ಆ ಸಮಯಕ್ಕಾಗಲೇ ಅಲ್ಲಿ ಪ್ರಮುಖವಾದ ಅಗ್ರಹಾರವೊಂದು ಸ್ಥಾಪನೆಯಾಗಿ ಸುತ್ತಲಿನ ಪ್ರದೇಶಕ್ಕೆ ಜ್ಞಾನಪ್ರದಾನ ಮಾಡುತ್ತಿತ್ತು. ಕ್ರಿ. ಶ. ೧೧೮೩ರ ತಾಮ್ರ ಶಾಸನದ ಪ್ರಕಾರ ಅಲ್ಲಿ ಒಂದು ಸಾವಿರ ಮಹಾಜನರು ಆಶ್ರಯವನ್ನು ಪಡೆದಿದ್ದಾರೆಂದೂ ಅವರಲ್ಲ ಸುಶೀಲರು, ಸುಜ್ಞಾನಿಗಳು, ಕರ್ತವ್ಯನಿಷ್ಠರೂ ಆಗಿದ್ದರೆಂದು ತಿಳಿದುಬರುತ್ತದೆ. ಆದರೆ ಮುಂದೆ ಕ್ರಿ. ಶ. ೧೨೪೩ರ ತಾಮ್ರ ಶಾಸನವು ಅಲ್ಲಿ ೧೦೦೨ ಮಹಾಜನರು ಆಶ್ರಯ ಪಡೆದಿದ್ದಾರೆಂದೂ ಸ್ಪಷ್ಟ ಪಡಿಸುತ್ತದೆ. ಅಲ್ಲದೆ ಕಳಚೂರ್ಯರ ಸಂಕಮದೇವ, ಬಿಜ್ಜಳ, ಕಲ್ಯಾಣ ಚಾಲುಕ್ಯರ ಭೂಲೋಕ ಮಲ್ಲ ಮೊದಲಾದವರ ಕಾಲದ ಶಾಸನಗಳು ಕುಕನೂರು ಅರ್ಥಪೂರ್ಣವಾಗಿಯೂ ಜಾಗೃತವಾದ ಗುರುಕುಲ, ವಿದ್ಯಾಕೇಂದ್ರ ಅಗ್ರಹಾರವಾಗಿತ್ತೆಂದು ಮುಚ್ಚಿಕೊಂಡು ಬರಹದ ಮೂಲಕ ಸಾರುತ್ತ ಅಚ್ಚಳಿಯದೆ ನಿಂತಿವೆ.

ಸಂಕಮದೇವನ ಕಾಲದ ಶಾಸನವು, “.....ಕುಕನೂರು ಬ್ರಹ್ಮಲೋಕಕ್ಕೆ ಸಮಾನವಾಯಿತು” ಎಂದು ವರ್ಣಿಸಿದರೆ ಭೂಲೋಕ ಮಲ್ಲನ ಶಾಸನವು,

“ಚತುರಾಂಬೋಧಿಪರೀತ ಧಾತ್ರಿಭೂಕಳುಂಬಂ ಬೆಳ್ವಲಂ ನೋಡೆಪರ್ವಾಡ
ಪ್ರತಿಮಂ ತಾತನೆ' ಚೆಲ್ವಸಾವಿಶಯದೊಳ್ಸಂ ವೇಷ್ಟಿತಾರಾಮ ವಾ

ಪಿತಟಾಕಂ ಬಹುದೇವತಾ ಭವನದಿಂ ವೇದಾಢ್ಯರಿಂ ಯಜ್ಞದೀ
ಕ್ಷಿತರಿಂ ಶಾಸ್ತ್ರ-ಪುರಾಣ ತರ್ಕವಿದರಿಂ ಶ್ರೀ ಕುಕ್ಕನೂರೊಪ್ಪುಗುಂ"

ಎಂದು ಪ್ರಸ್ತುತ ಪಡಿಸುತ್ತದೆ. ಬಿಜ್ಜಳನ ಕಾಲದ ಶಾಸನವು, "...ಕುಕನೂರಿನಲ್ಲಿ ಶ್ರೇಷ್ಠ ಅಗ್ರಹಾರವಿದ್ದು ಸಜ್ಜನತೆಯಿಂದ ಕೃತಯುಗವನ್ನು ನೆಲೆಗೊಳಿಸಿದಂತಿದೆ" ಎಂದು ಮೆಚ್ಚುಗೆಯನ್ನು ವ್ಯಕ್ತಮಾಡಿದರೆ ಜಗದೇಕ ಮಲ್ಲನ ಶಾಸನವು, ಕುಕನೂರಿನ ಅಗ್ರಹಾರದಲ್ಲಿ.

"...ಉದಗ್ರಣಿಗಳು ಸಮವಾಪ್ತಶಾಸ್ತ್ರಸ
ಜ್ಜನರಸದ್ವರರ್ಥಿಜನಕಲ್ಪ ಕುಜರ್ಕವಿತಾಮಹಾರ್ಣವ
ರ್ಮನುಚರಿತರ್ಸಮಸ್ತ ಬುಧಸಂಸ್ತುತರೆಂದು ಮಹಾಜನಂಗಳಂ
ಜನವನಿತುಂ ಸಕೌತುಕದೆ ಸಂಸ್ತುತಿಗೆಯ್ವುದದೇನ ವರ್ಣಿಶಂ.

ಗರ್ವೋನ್ನತೇತರ್ ವಿದಿತ ಚ
ತುರ್ವೇದರ್ಸಕಳ ಶಬ್ದ ವಿದ್ಯಾನಿಪುಣ
ನಿರ್ವಾರ್ಣಾಧಿತ ತರ್ಕ್ಕಸಾರ್ಣ
ನಿರ್ವರ್ಸನೆಲೆ ಕುಕ್ಕನೂರೊಳಸದಳದೆಸೆದರು.

ಸಕಳಕಳಾಪಸ್ಮೃತಿವಿದ
ರಕಳಂಕೋದಾತ್ತ ಚಿತ್ತರಗ್ನಿಷ್ಟೋಮಾ
ದಿಕ ನಿಖಿಳಯಾಗ ಸಂಪಾ
ದಕರೆನಿಪರು ಕುಕ್ಕನೂರ ವಿಬುಧ ಜನಂಗಳು."

ಎಂದು ಇಷ್ಟೆಲ್ಲ ಜ್ಞಾನಸಂಪತ್ತಿನ ವೈಭವವು ಇದ್ದಿತೆಂದು ಮನತುಂಬಿ ಕಣ್ಣಿಗೆ ಕಟ್ಟು ವಂತೆ ವಿವರಗಳನ್ನು ನೀಡುತ್ತದೆ. ಪ್ರಾಚೀನ ಕಾಲದಿಂದಲೇ ವೃದ್ಧಿ ಹೊಂದುತ್ತ ಬಂದಿದ್ದ ಕುಕನೂರು ೧೨ನೆಯ ಶತಮಾನದಲ್ಲಿ ವಿದ್ಯೆಗೆ ಆಗರವಾಗಿ ಶ್ರೇಷ್ಠ ಅಗ್ರಹಾರ ವಾಗಿ ಬೆಳೆದು ಬಂದಿತೆಂಬುದನ್ನು ಕನ್ನಡಿಗರು ಮರೆಯುವಂತಿಲ್ಲ.

ಇದೇ ಸಂದರ್ಭದಲ್ಲಿ 'ಅಗ್ರಹಾರ' ಎಂಬ ಹಳ್ಳಿಯನ್ನು ಕುರಿತು ಒಂದೆರಡು ಮಾತುಗಳನ್ನು ಹೇಳಬೇಕು. ಇದು ಬೀದರ ನಗರಕ್ಕೆ ಅತಿ ಸಮೀಪದಲ್ಲಿರುವ ಹಳ್ಳಿ. ಇಲ್ಲಿ ಅನಂತಶಯನ ಮಂದಿರವಿದ್ದು ಅಗ್ರಹಾರಕ್ಕೆ ಅನುಕೂಲವಾದ ಸ್ಥಳವಾಗಿದೆ. ಅಲ್ಲಿ ರಾಷ್ಟ್ರಕೂಟರ ಮತ್ತು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಸುಂದರವಾದ ಅಗ್ರಹಾರವು ರೂಪುಗೊಂಡಿತ್ತೆಂದು ಊಹಿಸಲು ಸಾಕಷ್ಟು ಆಧಾರಗಳಿವೆ. ಇದೂ ಅಲ್ಲದೆ ಕರ್ನಾಟಕದ ಅರಸೊತ್ತಿಗೆಗಳು ಎಲ್ಲೆಲ್ಲಿ ಪ್ರಭಾವಿತವಾಗಿ ರಾಜ್ಯಭಾರ ಮಾಡಿದವೋ ಆಯಾ ಕಾಲ ಗಳಲ್ಲಿ ಆಯಾ ಭಾಗಗಳಲ್ಲಿ ವಿದ್ಯಾವೈಭವವನ್ನು ಬೆಳೆಸುವಲ್ಲಿ ಅವರು ಎಲ್ಲಿಯೂ ಹಿಂದೆ

ಬೀಳಲಿಲ್ಲ. ಹಾಗೆ ವಿಚಾರ ಮಾಡಿದರೆ ಈ ಭಾಗದಲ್ಲಿ ಮಾನ್ಯಖೇಟ, ಕಲಬುರಗಿ ಬಳಿಯಲ್ಲಿಯ ರಾಮತೀರ್ಥ, ಕಲ್ಯಾಣ, ಕಾಳಗಿ, ಭಾಲ್ಕಿ, ಕುರಡಿ, ಆನೆಗುಂದಿ, ಲಿಂಗಸೂಗೂರಿನ ಬಳಿ ಕರಡಕಲ್ ಮೊದಲಾದ ಕಡೆಗಳಲ್ಲಿ ಯಶಸ್ವಿಯಾದ ಗುರುಕುಲ ಗಳು ಅಗ್ರಹಾರಗಳು ಬೆಳೆದು ಬಂದಿದ್ದವೆಂದು ಬಲವಾಗಿ ಊಹಿಸಬಹುದಾಗಿದೆ. ಹೀಗೆ ಹೈದರಬಾದ ಕರ್ನಾಟಕವು ವಿದ್ಯಾ ವೈಭವದ ಪರಂಪರೆಯನ್ನು ಪ್ರಾಚೀನ ಕಾಲ ದಿಂದಲೂ ಕಾಯ್ದುಕೊಂಡು ಬಂದಿದೆ.

ಇತ್ತೀಚೆಗೆ ೧೦-೯-೧೯೮೦ ರಂದು ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಆರ್. ಗುಂಡೂರಾಯರ ಮುಂದಾಳುತನದಲ್ಲಿ, ಈ ವಿಭಾಗದ ಮಂತ್ರಿಗಳ ಬೆಂಬಲದೊಂದಿಗೆ, ಕರ್ನಾಟಕ ರಾಜ್ಯದ ವಿದ್ಯಾ ಮಂತ್ರಿಗಳಾದ ಶ್ರೀ ಜಿ. ಬಿ. ಶಂಕರ ರಾವ್ ಅವರು ನಡೆದು ಬಂದ ಈ ಭಾಗದ ವಿದ್ಯಾ ವೈಭವಕ್ಕೆ ಕಲಬುರಗಿಯಲ್ಲಿ ವಿಶ್ವ ವಿದ್ಯಾಲಯವನ್ನು ಆರಂಭಿಸಿ ಶ್ರೀಗಂಧದ ಸುಗಂಧವನ್ನು ತುಂಬಿದ್ದಾರೆ. ಈ "ವಿದ್ಯಾ ವೈಭವ"ದ ಘಮಕ್ಷಮವು ಕಾವೇರಿಯಿಂದ ಮಾ ಗೋದಾವರಿಗಷ್ಟೇ ಅಲ್ಲ, ಆಸೇತು ಹಿಮಾಚಲವಷ್ಟೇ ಅಲ್ಲ ಇಡೀ ಪ್ರಪಂಚದ ತುಂಬೆಲ್ಲ ಘಮಕ್ಷಮಿಸಲೆಂದು ವಿದ್ಯಾಪಕ್ಷ ಪಾತಿಗಳೆಲ್ಲ ತುಂಬು ಹೃದಯದಿಂದ ಹಾರಯಿಸಿದ್ದಾರೆ. ಈ ಹಾರಯಿಕೆ ಗುರುಕುಲ. ಪದ್ಧತಿಯು ಹೊಸತಾನವಿತಾನಗಳನ್ನು ಹೊಂದಿ, ನವ ನಾಗರಿಕತೆಯನ್ನೂ, ಹೊಸ ಹೊಸ ಸಂಶೋಧನೆಗಳನ್ನು ಮೈಗೂಡಿಸಿಕೊಂಡು ಚೇತೋಹಾರಿಯಾಗಿರುವುದರ ಸಂಕೇತ. ಸಂಸ್ಕೃತಿಯು ಶ್ರೀಮಂತವಾಗುತ್ತಿರುವುದರ ಪ್ರತೀಕ.

ಆಚಾರ್ಯ, ಗುರು, ಮತ್ತು ಶಿಕ್ಷಕ

ವಿದ್ವಾನ್ ಜಿ. ಜೆ. ಮಂಗಲಗಿ
M.A., B.O.L., M.Ed.

ಮಾನವ ಜೀವನದಲ್ಲಿ ವಿದ್ಯಾಭ್ಯಾಸವು ಒಂದು ಅವಶ್ಯಕ ಅಂಗವಾಗಿದೆ. ಎಂಬ ವಿಚಾರವು ಎಲ್ಲ ದೇಶಗಳಲ್ಲಿ ಎಲ್ಲ ಕಾಲದಲ್ಲಿ ಸರ್ವಸಮ್ಮತವಾದ ವಿಷಯವು. ವಿದ್ಯೆಯು ಪರಾ ವಿದ್ಯೆಯೆಂದೂ ಅಪರಾ ವಿದ್ಯೆಯೆಂದೂ ನಮ್ಮ ನಾಡಿನಲ್ಲಿ ಪರಿಗಣಿಸಲ್ಪಡುತ್ತಿತ್ತು. ಜೀವನೋಪಾಯಕ್ಕಾಗಿ ಕೃಷಿ, ವಾಣಿಜ್ಯ ಮತ್ತು ಚಿತ್ರ, ಶಿಲ್ಪ ಸಂಗೀತಾದಿ ಕಲೆಗಳು ವಂಶ ಪಾರಂಪರ್ಯವಾಗಿ ಕಲಿಸಲ್ಪಡುತ್ತಿದ್ದವು. ತೀರ ಪ್ರಾಚೀನ ಕಾಲದಿಂದಲೂ ಋಷಿಗಳ ಆಶ್ರಮಗಳಲ್ಲಿದ್ದು ಅವರ ಸೇವೆ ಮಾಡಿಕೊಂಡು ಷಟ್‌ಶಾಸ್ತ್ರಗಳ ಅಧ್ಯಯನ ಮಾಡುವ ಸಂಪ್ರದಾಯವೂ ಇತ್ತು. ಕಾಲಾನುಕ್ರಮದಲ್ಲಿ ವಿದ್ಯಾಭ್ಯಾಸದ ಕೇಂದ್ರಗಳೂ ಸ್ಥಾಪಿತವಾಗುತ್ತ ಗುರುಕುಲಗಳ ಕಲ್ಪನೆ ಬೆಳೆದು ಬಂದು 'ಕುಲಪತಿ'ಗಳು ಶಿಷ್ಯರನ್ನು ಇಟ್ಟುಕೊಂಡು ವಿದ್ಯಾಭ್ಯಾಸ ಮಾಡಿಸುವ ಕ್ರಮವೂ ರೂಢವಾಯಿತು. ಇಂದಿಗೂ ಅಂತಹ ವಿದ್ಯಾಪೀಠಗಳು ನಾಡಿನಲ್ಲಿ ಅಲ್ಲಲ್ಲಿ ಕಂಡುಬರುತ್ತಿವೆ. ಸಂಸ್ಕೃತವೇ ಪ್ರಧಾನ ಭಾಷೆಯಾಗಿಯೂ ಬೋಧನ ಭಾಷೆಯಾಗಿಯೂ ಕಲಿಸಲ್ಪಡುತ್ತಿತ್ತು. ಪ್ರಾಕೃತ ಭಾಷೆಗಳು ರೂಪುಗೊಂಡು ಇಂದಿನ ಪ್ರಚಲಿತ ಭಾಷೆಗಳು ಬೆಳೆಯುತ್ತ ಬಂದಂತೆ ಅವು ಬೋಧಭಾಷೆಗಳಾಗಿಯೂ ಬೆಳೆಯುತ್ತ ಬಂದವು. ಕಾವ್ಯ, ನಾಟಕ, ಇತಿಹಾಸ, ಧರ್ಮಶಾಸ್ತ್ರ ಮೊದಲಾದುವು ಪ್ರಾದೇಶಿಕ ಭಾಷೆಗಳಲ್ಲಿಯೂ ರಚನೆಯಾಗತೊಡಗಿದವು. ನಮ್ಮ ಭಾರತದೇಶವು ವಿದೇಶಿಯರ ಆಳಿಕೆಗೆ ಒಳಪಡುತ್ತ ಬಂದಂತೆ ಆಯಾಕಾಲದ ರಾಜರ ಭಾಷೆಗಳು ಅಭ್ಯಾಸ ವಿಷಯಗಳಾದುದಲ್ಲದೆ ಆಡಳಿತ ಭಾಷೆಗಳೂ ಆಗಿ ವಿದ್ಯಾಭ್ಯಾಸದಲ್ಲಿ ಸ್ಥಾನಪಡೆಯುತ್ತ ಬಂದವು. ಆಂಗ್ಲರು ಈ ದೇಶದಲ್ಲಿ ರಾಜಾರಾಮಮನೋಹರರಾಯ ಮೊದಲಾದ ಪ್ರಗತಿಪರ ವಿಚಾರವಾದಿಗಳ ಬೇಡಿಕೆಯಂತೆಯೂ ಮೆಕಾಲೆ ಮೊದಲಾದ ಆಂಗ್ಲ ವಿದ್ಯಾಭ್ಯಾಸದ ಪ್ರವರ್ತಕರ ಸಲಹೆಯಂತೆಯೂ ಇಂಗ್ಲೀಷ ಭಾಷೆಯನ್ನು ಆಡಳಿತಭಾಷೆಯನ್ನಾಗಿ ಮಾಡಿದುದಲ್ಲದೆ ಮಾಧ್ಯಮಿಕ ಶಿಕ್ಷಣದಿಂದ ಮೇಲಿನ ಎಲ್ಲ ಶಿಕ್ಷಣ ಕ್ರಮದಲ್ಲಿ ಇಂಗ್ಲೀಷ ಭಾಷೆಯನ್ನು ಶಿಕ್ಷಣಮಾಧ್ಯಮವಾಗಿ ಮಾಡಿದರು. ಭಾರತಕ್ಕೆ ಸ್ವಾತಂತ್ರ್ಯ ದೊರೆತು ಭಾಷಾವಾರ ಪ್ರಾಂತಗಳಾದ ಮೇಲೆ ಆಯಾ ಪ್ರಾಂತಗಳಲ್ಲಿ ಪ್ರಾಮುಖ್ಯವಾದ ಭಾಷೆಯೆ ಆಡಳಿತ ಭಾಷೆಯಾಗಬೇಕೆಂದೂ ಶಿಕ್ಷಣ ಮಾಧ್ಯಮವಾಗಬೇಕೆಂಬುದು

ಪ್ರತಿಪಾದಿಸುವುದು ಅವಶ್ಯವಾಯಿತು. ಇತ್ತೀಚೆಗೆ ಆ ಬಗ್ಗೆ ಅನೇಕ ಪ್ರಾಂತಗಳಲ್ಲಿ ಚಳುವಳಿಗಳೂ ನಡೆದವು. ನಮ್ಮ ನಾಡಿನಲ್ಲಿಯೂ ಕನ್ನಡದ ಬಗ್ಗೆ ಇನ್ನೂ ಚಳುವಳಿಯು ನಡೆಯುತ್ತಲೆ ಇದೆ. ಸಂಸ್ಕೃತದ ಸ್ಥಾನವನ್ನು ನಿರ್ಣಯಿಸಲು ಹೊರಟ ಸಮಿತಿಯು ಕನ್ನಡಸ್ಥಾನವನ್ನು ನಿರ್ವಿವಾದವಾಗಿ ಮಂಡಿಸಿರುವುದು ಒಂದು ವಿಶೇಷ, ಉಚ್ಚ ಶಿಕ್ಷಣದ ಭಾಗಗಳೆನಿಸಿರುವ ಇಂಜನಿಯರಿಂಗ್, ಮೆಡಿಕಲ್ ಮೊದಲಾದ ವಿದ್ಯಾಭ್ಯಾಸಕ್ರಮದಲ್ಲಿ ಇಂಗ್ಲಿಷನ್ನು ಬಿಡುವ ಸ್ಥಿತಿಯು ಇನ್ನೂ ಬಂದಿಲ್ಲವೆನ್ನಬಹುದಾಗಿದೆ. ಶಿಕ್ಷಣದಲ್ಲಿಯ ಭಾಷಾ ಸಮಸ್ಯೆ, ಆಡಳಿತ ಸಮಸ್ಯೆ, ಸರಕಾರಿ ಮತ್ತು ಖಾಸಗಿ ವಿದ್ಯಾ ಸಂಸ್ಥೆಗಳು ಅವುಗಳಲ್ಲಿಯ ಶಿಕ್ಷಕರ ಸ್ಥಿತಿಗತಿಗಳು, ವಿಶ್ವವಿದ್ಯಾಲಯಗಳಲ್ಲಿಯ ಶಿಕ್ಷಣದ ಏರ್ಪಾಡು ಮೊದಲಾದ ಅನೇಕ ವಿಷಯಗಳನ್ನು ವಿಚಾರಿಸಿ ಇಂದು ಸರ್ವಸಮ್ಮತ ಏರ್ಪಾಡು ಮಾಡುವುದು ಅವಶ್ಯವಾಗಿದೆ. ಈ ಎಲ್ಲ ಹಿನ್ನೆಲೆಯಲ್ಲಿ 'ಶಿಕ್ಷಕ'ನ ಆದರ್ಶವೇನು, ಎನ್ನುವುದನ್ನು ಸ್ಥೂಲವಾಗಿ ವಿಚಾರಿಸುವುದು ಈ ಲೇಖನದ ಉದ್ದೇಶವಾಗಿದೆ. 'ಶಿಕ್ಷಕ' ಶಬ್ದವು ಸಾಮಾನ್ಯ ಪದವಾದರೂ 'ಆಚಾರ್ಯ' 'ಗುರು' 'ಅಧ್ಯಾಪಕ' 'ಪ್ರಾಧ್ಯಾಪಕ' 'ಪ್ರಾಂಶುಪಾಲ' ಮೊದಲಾದ ಶಬ್ದಗಳನ್ನು ಪರ್ಯಾಯವಾಗಿ ವಿವಿಧ ವಿದ್ಯಾಹಂತಗಳಲ್ಲಿ ಬಳಸುವದನ್ನು ಕಾಣುತ್ತೇವೆ. ಆದ್ದರಿಂದ ಇವುಗಳಲ್ಲಿ ಮುಖ್ಯವಾಗಿ 'ಆಚಾರ್ಯ' 'ಗುರು' 'ಶಿಕ್ಷಕ' ಪದಗಳನೆತ್ತಿಕೊಂಡು 'ಆದರ್ಶ ಶಿಕ್ಷಕ'ನ ಗುಣವಿಶೇಷಗಳೇನು? ಎಂಬುದನ್ನು ಪ್ರಾರಂಭದ ವಿಚಾರಗಳ ಹಿನ್ನೆಲೆಯಲ್ಲಿ ಇದೀಗ ಹೇಳಬಹುದಾಗಿದೆ.

ಆಚಾರ್ಯ ;

ಹಿಂದಿನವರು 'ಆಚಾರ್ಯ' ಪದಕ್ಕೆ ಬಹಳ ಮಹತ್ವವನ್ನು ಕೊಟ್ಟಿದ್ದರೆನ್ನುವುದು ಕೆಳಗಿನ ಕೆಲವು 'ಉಕ್ತಿ'ಗಳಿಂದ ವಿಶದವಾಗುತ್ತದೆ.

ಉಪನೀಯತು ಯಃ ಶಿಷ್ಯಂ ವೇದಂ ಅಧ್ಯಾಪಯೇತ್ ದ್ವಿಜಃ ।
ಸಕಲ್ಪಂ ಸರಹಸ್ಯಂ ಚ ತಮಾಚಾರ್ಯಂ ಪ್ರಚಕ್ಷತೆ ॥
ಆಚಿನೋತಿ ಶಾಸ್ತ್ರಾಣಿ ಆಚಾರಾನ್ ಗ್ರಾಪಯತ್ಯತ ।
ಸ್ವಯ ಮಾಚರತೇ ಯಸ್ತು ತಮಾಚಾರ್ಯಂ ಪ್ರಚಕ್ಷತೇ ॥

ಮೊದಲಿನ ಶ್ಲೋಕದಲ್ಲಿ ಆಚಾರ್ಯನ ಮುಖ್ಯ ಕರ್ತವ್ಯವನ್ನು ಹೇಳಿದರೆ ಎರಡನೆಯದರಲ್ಲಿ ಅದರೊಡನೆ 'ಆಚಾರ್ಯ' ನೆನಿಸಬೇಕಾದರೆ ಶಾಸ್ತ್ರಗಳಲ್ಲಿ ಹೇಳಿದ ಆಚರಣೆಗಳನ್ನು ತಾನು ಆಚರಿಸುವದೂ ಮುಖ್ಯವೆಂದು ಹೇಳಲಾಗಿದೆ. ಇಂದು ಪ್ರಾಚಾರ್ಯನೆಂದು ಕರೆದುಕೊಳ್ಳುವವರು ಎರಡನೆಯದರಲ್ಲಿ ಹೇಳಿದ ಮಾತನ್ನು ಅನುಲಕ್ಷಿಸುವುದು ಮುಖ್ಯವಾಗಿದೆ.

ಗುರು :

ಗುರು ಎಂಬ ಪದವು ಸಾಮಾನ್ಯವಾಗಿ ಬಳಕೆಯಲ್ಲಿದೆ. ಇದನ್ನು ಹಿಂದಿನವರು ಯಾವ ದೃಷ್ಟಿಯಲ್ಲಿ ನೋಡಿದ್ದರೆಂಬುದನ್ನು ತಿಳಿಸುವುದಕ್ಕಾಗಿ ಎರಡು ಶ್ಲೋಕಗಳನ್ನು ಉದಾಹರಿಸಲಾಗಿದೆ.

ಗು ರಿತ್ಯಜ್ಞಾನ ಮುದ್ದಿಷ್ಟಂ ರುಕಾರಸ್ತನ್ನಿವಾರಕಃ ।
ತಸ್ಮಾತ್ ಅಜ್ಞಾನನಾಶಾಯ ಗುರುಂ ವೃಶರಣಂ ವ್ರಜೇಃ ॥
ಗುರವೋ ಬಹವಃ ಸಂತಿ ಶಿಷ್ಯವಿತ್ತಾಪಹಾರಕಾಃ ।
ಗುರವೋ ವಿರಲಾ ಲೋಕೇ ಶಿಷ್ಯಚಿತ್ತಾಪಹಾರಕಾಃ ॥

ಮೊದಲನೆಯುದರಲ್ಲಿ ಅಜ್ಞಾನ ನಾಶ ಮಾಡುವವನೇ ಗುರುವೆಂದು ಹೇಳಿದರೆ ಎರಡನೆಯುದರಲ್ಲಿ ಶಿಷ್ಯನ ದುಡ್ಡನ್ನು ಸೆಳೆದುಕೊಳ್ಳುವ ಗುರುಗಳು ಬಹಳವೆಂದೂ ಆದರೆ ಶಿಷ್ಯನ ಚಿತ್ತವನ್ನು ಆಕರ್ಷಿಸುವ ಗುರುಗಳು ವಿರಲವೆಂದೂ ಹೇಳಲಾಗಿದೆ. ಇಂದು ಖಾಸಗಿ ಕಲಿಸುವಿಕೆ (Private tution)ಯ ಕಡೆಗೇ ಬಹಳ ಲಕ್ಷ್ಯ ಮತ್ತು ಶ್ರಮವಹಿಸುತ್ತಿರುವವರು ನಿಜವಾದ 'ಗುರು'ಗಳಾಗಬೇಕಾದರೆ ಯಾವ ಮಾತು ಮುಖ್ಯವೆಂಬುದನ್ನು ತಿಳಿಯಬೇಕು.

ಶಿಕ್ಷಕ :

ಶಿಕ್ಷಕ ಶಬ್ದವು ಇತ್ತೀಚೆಗೆ ಹೆಚ್ಚು ಬಳಕೆಯಲ್ಲಿದ್ದರೂ ಕಾಲಿದಾಸನ ಕಾಲದಲ್ಲಿಯೂ ಅದು ರೂಢಿಯಲ್ಲಿತ್ತೆಂಬುದನ್ನು 'ಮಾಲವಿಕಾಗ್ನಿಮಿತ್ರ'ದಲ್ಲಿಯ ಕೆಳಗಿನ ಶ್ಲೋಕದಿಂದ ತಿಳಿಯಬಹುದು.

ಶ್ಲಿಷ್ಟಾ ಕ್ರಿಯಾ ಕಸ್ಯಚಿದಾತ್ಮ ಸಂಸ್ಥಾ ।
ಸಂಕ್ರಾಂತಿರನ್ಯಸ್ಯ ವಿಶೇಷಯುಕ್ತಾ ॥
ಯಸ್ಯೋಭಯಂ ಸಾಧು ಸ ಶಿಕ್ಷಕಾಣಾಂ
ಧುರಿ ಪ್ರತಿಷ್ಠಾಪಯಿತವ್ಯ ಏವ ॥

ಇದು ನೃತ್ಯಕಲೆಯನ್ನು ಕುರಿತ ಸಂದರ್ಭದಲ್ಲಿ ಹೇಳಿದ್ದಾಗಿದ್ದರೂ ಇದರ ಅರ್ಥವನ್ನು ವ್ಯಾಪಕವಾಗಿ ತಿಳಿದುಕೊಳ್ಳಬೇಕು. ಒಬ್ಬನಲ್ಲಿ ವಿದ್ಯೆ ಬಹಳವಾಗಿರುತ್ತದೆ. ಇನ್ನೊಬ್ಬನಲ್ಲಿ ಅದನ್ನು ಇತರರಿಗೆ (ಶಿಷ್ಯರಿಗೆ) ಕೊಡುವ ಕಲೆಯು ವಿಶೇಷವಾಗಿರುತ್ತದೆ ಆದರೆ ಇವೆರಡೂ ಯಾರಲ್ಲಿ ವಿಶೇಷವಾಗಿ ಕೂಡಿರುವವೋ ಅವನೇ ಶಿಕ್ಷಕರಲ್ಲಿ ಶ್ರೇಷ್ಠ ಸ್ಥಾನವನ್ನು ಪಡೆಯಬೇಕು ಎಂಬುದು ಕಾಲಿದಾಸನ ಅಭಿಪ್ರಾಯವಾಗಿದೆ. ಇದು ಇಂದಿನ 'ಶಿಕ್ಷಕ' ವೃತ್ತಿಯನ್ನು ಕೈಕೊಳ್ಳುವವರಿಗೆ ಪೂರ್ಣವಾಗಿ ಅನ್ವಯಿಸಬೇಕಾಗಿದೆ. ಶಿಕ್ಷಕನ ಆಯ್ಕೆ ಮಾಡುವಾಗ ಈ ಮಾತನ್ನು ಲಕ್ಷ್ಯದಲ್ಲಿಡುವುದು ಅವಶ್ಯವಾಗಿದೆ.

'ಶಿಕ್ಷಕ' ಶಬ್ದಕ್ಕೆ ಇಂಗ್ಲೀಷದಲ್ಲಿ ಸಾಮಾನ್ಯವಾಗಿ Teacher ಎಂದು ಹೇಳುವುದುಂಟು. 'Teacher' ಪದದ ಬಗ್ಗೆ ಅನೇಕ ಆಂಗ್ಲ ವಿದ್ವಾಂಸರ ಅಭಿಪ್ರಾಯಗಳನ್ನು ಇಲ್ಲಿ ನೋಡಬಹುದು.

1) I am indebted to my father for living but to my teacher for living well. —Alexander Mecedon

ನನ್ನ ಜನ್ಮಕ್ಕಾಗಿ ನಾನು ನನ್ನ ತಂದೆಗೆ ಋಣಿಯಾಗಿದ್ದೇನೆ. ಆದರೆ ಒಳ್ಳೆಯ ಜೀವನಕ್ಕಾಗಿ ನನ್ನ ಶಿಕ್ಷಕನಿಗೆ ಋಣಿಯಾಗಿದ್ದಾನೆ.

2) The highest function of the tcacher consists not so much in imparting knowledge as an stimulating the pupil in its love and pursuit. —Amiel.

ಶಿಕ್ಷಕನ ಉದಾತ್ತಕಾರ್ಯವು ವಿದ್ಯಾದಾನಕ್ಕಿಂತ ವಿದ್ಯೆಯ ಮೇಲೆ ಪ್ರೀತಿ ಹಾಗೂ ಕಲಿಯುವ ಹವ್ಯಾಸವನ್ನು ಶಿಷ್ಯನಲ್ಲಿ ಉಂಟು ಮಾಡುವುದರಲ್ಲಿ ಅಡಗಿದೆ.

3) The teacher who as attempting to teach without inspiring the pupil with desire to learn is hammering on cold iron. --H. Mann.

ಕಲಿಯುವ ಉತ್ಸುಕತೆಯನ್ನು ಶಿಷ್ಯನಲ್ಲಿ ಚಿಗುರಿಸದೆ ಕಲಿಸಲು ಪ್ರಯತ್ನಿಸುವ ಶಿಕ್ಷನ ಯತ್ನವು ತಣ್ಣನೆಯ ಕಬ್ಬಿಣವನ್ನು ಬಡಿದಂತೆ (ನಿರರ್ಥಕ)

4) If ever I am a teacher, it will be to learn more then to teach. --Mad Deluz.

ಒಂದು ವೇಳೆ ನಾನು ಎಂದಾದರೂ ಶಿಕಕ್ಷನಾದರೆ ಕಲಿಸುವುದಕ್ಕಿಂತ ನಾನು ಹೆಚ್ಚಾಗಿ ಕಲಿಯಬೇಕಾಗುತ್ತದೆ.

5) Instruction in things moral is most necessary to the making of the highest type of citizen ship. --Theodore Rousevelt.

ಮೇಲಿನ ನಾಲ್ಕು ಅವತರಣಿಕೆಗಳು ಕಲಿಸುವುದರ ಬಗ್ಗೆ ಶಿಕ್ಷಕನ ದೃಷ್ಟಿ ಏನು ಇರಬೇಕೆಂಬುದನ್ನು ಹೇಳಿದರೆ ಕೊನೆಯದು ಕಲಿಸುವದರ, ಶಿಕ್ಷಣದ ಬಹುಮುಖ್ಯವಾದ ಪರಿಣಾಮವೇನು ಎಂಬುದನ್ನು ವಿವರಿಸುತ್ತದೆ. ಉತ್ತಮ ನಾಗರಿಕತೆಯನ್ನು ಉಂಟು ಮಾಡುವುದೇ ಶಿಕ್ಷಣದ ಗುರಿಯಾಗಿರಬೇಕೆಂದು ಅಮೇರಿಕೆಯ ಅಧ್ಯಕ್ಷ ರೂಜವೆಲ್ಟರು

ಹೇಳಿದ್ದಾರೆ. ಇದರಿಂದ ಶಿಕ್ಷಕನು ಮೊದಲು ತಾನು ಉತ್ತಮ ನಾಗರಿಕನಾಗಬೇಕೆಂದು ಹೇಳಿದಂತಾಗುತ್ತದೆ. ಉತ್ತಮ ನಾಗರಿಕತೆಯೆಂದರೆ ಉದಾತ್ತ ಗುಣಗಳನ್ನು ರೂಪಿಸುವುದೆಂದು ಹೇಳಬಹುದು. 'ಯಥಾ ರಾಜಾ ತಥಾ ಪ್ರಜಾಃ' ಎನ್ನುವಂತೆ 'ಯಥಾ ಗುರುಃ ತಥಾ ಶಿಷ್ಯಃ' ಎಂದು ಹೇಳುವುದೂ ಉಂಟು. ಈ ದೃಷ್ಟಿಯಿಂದ ವಿಚಾರ ಮಾಡಿದರೆ ಇಂದು ಶಿಕ್ಷಕನ ಸ್ಥಾನವು ಎಷ್ಟು ಮಹತ್ವದ್ದಾಗಿದೆಯೆಂಬುದರ ಅರಿವಾಗದಿರದು. ಶಿಕ್ಷಕನು ತನ್ನ ಪ್ರಾಪಂಚಿಕ ಸುಖಕ್ಕಾಗಿ ಹಣದಾಸೆಗೆ ಒಳಗಾದರೂ ಅದನ್ನೇ ಮುಖ್ಯ ಮಾಡಿಕೊಂಡು ಶಿಕ್ಷಣದಲ್ಲಿ ಇಂದು ಎದ್ದು ಕಾಣುತ್ತಿರುವ ಅವ್ಯವಹಾರಗಳಿಗೆ ಆಸ್ಪದ ಕೊಡಬಾರದೆಂಬುದು ಸ್ಪಷ್ಟವಾಗದಿರದು. ಅವುಗಳನ್ನೆಲ್ಲ ಇಲ್ಲಿ ಬಿಚ್ಚಿ ಹೇಳುವ ಅವಶ್ಯಕತೆಯಿಲ್ಲ. ಚಾರಿತ್ರ್ಯದ ದೃಷ್ಟಿಯಿಂದಲೂ ವಿದ್ಯಾರ್ಥಿಗಳು ವಿಶೇಷವಾಗಿ ಅಪ್ರೌಢ ವಿದ್ಯಾರ್ಥಿಗಳು ಶಿಕ್ಷಕರ ಅನುಕರಣೆ ಮಾಡುವ ಸಂಭವವಿರುವದರಿಂದ ಕಾಯ್ದೆಯ ಬಂಧನವಿರದಿದ್ದರೂ ಕುಡಿತವೇ ಮೊದಲಾದ ದುರ್ವ್ಯಸನಗಳಿಂದ ಶಿಕ್ಷಕರು ದೂರವಾಗಿದ್ದಷ್ಟೂ ಅವರು ವಿದ್ಯಾರ್ಥಿಗಳ ಮೇಲೆ ಪ್ರಭಾವ ಬೀರಬಲ್ಲರು. ಇಂದು ವಿದ್ಯಾರ್ಥಿಗಳಲ್ಲಿ ವಿಶೇಷವಾಗಿ ಪ್ರೌಢ ವಿದ್ಯಾರ್ಥಿಗಳಲ್ಲಿ ಬೆಳೆಯುತ್ತಿರುವ ಸ್ವೇಚ್ಛಾಚಾರಗಳಿಗೆ ಹಲವು ಹೊರಗಿನ ಕಾರಣಗಳಿದ್ದರೂ ಶಿಕ್ಷಕರೂ ತಮ್ಮ ಹೊಣೆಯಿಂದ ತಪ್ಪಿಸಿಕೊಳ್ಳಲಾರರು. ವಿಷಯಗಳ ಜ್ಞಾನ ಮಾಡಿಕೊಡುವುದಷ್ಟೇ ಶಿಕ್ಷಕರ ಕರ್ತವ್ಯವಾಗಿದೆ. ವಿದ್ಯಾರ್ಥಿಯ ವ್ಯಕ್ತಿತ್ವವನ್ನು ರೂಪಿಸುವದರಲ್ಲಿಯೂ ಶಿಕ್ಷಕನು ಮಹತ್ವದ ಪಾತ್ರವನ್ನು ವಹಿಸಬೇಕಾಗಿದೆ. ಇಂದು ಪ್ರಾಥಮಿಕ ಶಿಕ್ಷಣದಿಂದಾರಂಭಿಸಿ ವಿಶ್ವವಿದ್ಯಾಲಯದವರೆಗೂ ಈ ಮಾತು ಮುಖ್ಯವಾಗಿದೆ. ಸಮಾಜದಲ್ಲಿ, ಸರಕಾರದಲ್ಲಿ, ಜೀವನದ ಎಲ್ಲ ವಿಭಾಗಗಳಲ್ಲಿ ಬೆಳೆಯುತ್ತಿರುವ ಭ್ರಷ್ಟಾಚಾರದ ಪ್ರಭಾವವು ಶಿಕ್ಷಣದ ಕ್ಷೇತ್ರವನ್ನು ಬಿಟ್ಟಿಲ್ಲವೆಂದು ಹೇಳಬೇಕಾಗಿದೆ. ಈ ಪರಿಸ್ಥಿತಿಯನ್ನು ಸರಿಪಡಿಸಲು ವಹಿಸಬೇಕಾದ ಅನೇಕ ಕ್ರಮಗಳಲ್ಲಿ ಶಿಕ್ಷಕನ ಪಾತ್ರವನ್ನು ಕುರಿತು ವಿಚಾರಿಸಬೇಕಾದ ಕಾಲವೂ ಈಗ ಸನ್ನಿಹಿತವಾಗಿದೆ. ಈ ದೃಷ್ಟಿಯಿಂದ ಶಿಕ್ಷಣ ಕ್ಷೇತ್ರದಲ್ಲಿ ಕಾರ್ಯ ಮಾಡುವವರೆಲ್ಲ ಶಿಕ್ಷಣರಂಗವನ್ನು ಪರಿಶುದ್ಧಗೊಳಿಸಬೇಕಾಗಿದೆ. ಪ್ರತಿಭೆಗೆ ಮನ್ನಣೆಯನ್ನು, ಗುಣಕ್ಕೆ ಗೌರವವನ್ನೂ ಚಾರಿತ್ರ್ಯಕ್ಕೆ ಪ್ರಾಮುಖ್ಯವನ್ನೂ ಕೊಟ್ಟು ಶಿಕ್ಷಣವನ್ನು ರೂಪಿಸಿದರೆ ಆದರ್ಶ ಶಿಕ್ಷಕನು ಆಚಾರ್ಯನೆನಿಸುವನು. ನಿಜವಾದ 'ಗುರು'ವೆನಿಸುವನೆಂದು ಹೇಳದಿರೆನು.

ಕೊನೆಯದಾಗಿ ಹಿಂದಿನ ಗುರುಕುಲ ಕಾಲದಲ್ಲಿ ಆಚಾರ್ಯನು ವಿದ್ಯಾಭ್ಯಾಸ ಮುಗಿಸಿ ಜೀವನರಂಗದಲ್ಲಿ ಪ್ರವೇಶಿಸಲಿದ್ದ ಶಿಷ್ಯನಿಗೆ- ಅಂತೇವಾಸಿಗೆ ಯಾವ ಉಪದೇಶವನ್ನು ಕೊಟ್ಟು ಕಳುಹಿಸುತ್ತಿದ್ದನೆಂಬುದನ್ನು ತೈತ್ತರೀಯ ಉಪನಿಷತ್ತಿನಿಂದ ಉದಾಹರಿಸಿ ಅಂತಹ ಆದರ್ಶವನ್ನು ಇಂದಿನ, ಮುಂದಿನ ಗುರುಗಳು ಆಚರಣೆಯಲ್ಲಿ ತರುವ ಕಾಲವು ಬರಲೆಂದು ಆಶಿಸಿ ಈ ಚಿಕ್ಕ ಲೇಖನವನ್ನು ಮುಗಿಸುತ್ತೇನೆ.

ವೇದಮನೂಚ್ಯ ಆಚಾರ್ಯೋಽ ಅಂತೇವಾಸಿನಂ ಅನುಶಾಸ್ತಿ। ಸತ್ಯಂವದ। ಧರ್ಮಂಚರ। ಸ್ವಾಧ್ಯಾಯಾನ್ಮಾಪ್ರಮದಃ। ಆಚಾರ್ಯಾಯ ಪ್ರಿಯಂಧನಂ ಆಹೃತ್ಯ ಪ್ರಜಾತಂತು. ಮಾವ್ಯವಚ್ಛೇತ್ಸೀಃ। ಸತ್ಯಾನ್ನಪ್ರಮದಿತವ್ಯಂ। ಧರ್ಮಾನ್ನಪ್ರಮದಿತವ್ಯಂ। ಕುಶಲಾನ್ನಪ್ರಮದಿತವ್ಯಂ। ಭೂತ್ಯೈನ ಪ್ರಮದಿತವ್ಯಂ। ಸ್ವಾಧ್ಯಾಯ ಪ್ರವಚನಾಭ್ಯಾಂ ನಪ್ರಮದಿತವ್ಯಂ। ದೇವ ಪಿತೃ ಕಾರ್ಯಾಭ್ಯಾಂ ನಪ್ರಮದಿತವ್ಯಂ। ಮಾತೃದೇವೋಭವ! ಪಿತೃ ದೇವೋಭವ। ಆಚಾರ್ಯ ದೇವೋಭವ। ಅತಿಥಿದೇವೋಭವ। ಯಾನ್ಯನವದ್ಯಾನಿ ಕರ್ಮಾಣಿ ತಾನಿಸೇವಿತಾವ್ಯನಿ ನೋಽಇತರಾಣಿ। ಇತ್ಯಾದಿ.

ಈ ಉಪನಿಷದ್ಭಾಗದಲ್ಲಿ ಅಡಕವಾದ ವಿಚಾರಗಳನ್ನು ಇಂದಿನ ಸಮಾಜ ಮತ್ತು ಪರಿಸ್ಥಿತಿಗಳನ್ನು ಅರ್ಥಮಾಡಿ ಅನ್ವಯಿಸಿಕೊಂಡು ಕಾರ್ಯಮಾಡುವ ಶಿಕ್ಷಕರು ಶಿಕ್ಷಣ ಕ್ಷೇತ್ರದಲ್ಲಿ ಬರುವಂತಾದರೆ ನಾಡಿನ ಭವಿತವ್ಯವು ಉಜ್ವಲವಾದೀತೆಂದು ಆಶಿಸಬಹುದೆ।

" ಅಲ್ಲಮನ ವಚನ ಶೈಲಿ " - ತಾತ್ತ್ವಿಕ ಚಿಂತನೆ

ಶ್ರೀ ರೇಣುಕದೇವರು
ಶಿವಯೋಗ ಮಂದಿರ

ಬಸವಾದಿ ಪ್ರಮಥರಲ್ಲಿ ಅಲ್ಲಮಪ್ರಭುದೇವರೂ ಒಬ್ಬ ಪ್ರಥಮ ಪ್ರಮಥರೆನಿಸಿದ್ದರು. ಅಂದಿನ ಕಲ್ಯಾಣದಲ್ಲಿ ಅಲ್ಲಮನಿಗೆ ವಿಶಿಷ್ಟವಾದ ಸ್ಥಾನವು ಮೀಸಲಾಗಿತ್ತು. ಅಲ್ಲಮನು ಕರಣಗಳ ಕಾಟವನ್ನು ಸವೆಸಿದ್ದನು. ಜ್ಞಾನಸ್ಥಲದ ಅಧಿಕಾರಿಯಾಗಿದ್ದನು. ಐಕ್ಯಸ್ಥಲದ ಆರೂಢಿಯಾಗಿದ್ದನು. ಅನುಭವದ ಮೂಸೆಯಲ್ಲಿ ವಚನಗಳ ರಚನೆಗೈದ ಅನುಭಾವಿ ಕವಿಯಾಗಿದ್ದನು, ವೈರಾಗ್ಯಭಾವವು ಅಲ್ಲಮನ ರೋಮರೋಮಗಳಲ್ಲಿ ವಿಸ್ಫುರಣವಾಗುತ್ತಿತ್ತು- ವೈರಾಗ್ಯಕ್ಕೆ ಮತ್ತೊಂದು ಹೆಸರು ಅಲ್ಲಮನೆಂದೇ ಹೇಳಬಹುದು. ಅನುಭಾವಿ ಮುಕ್ತಾಯಿಯ ದುಮ್ಮಾನವನ್ನು ದೂರಾಗಿಸಿದ ಲೋಕಹಿತಚಿಂತಕನಿವನು. ಕೇವಲ ಕರ್ಮಭೂಮಿಯೇ ಚರಮ ಸೀಮೆಯೆಂದು ತಿಳಿದಿದ್ದ ಸಿದ್ಧರಾಮನಿಗೆ ಶಿವಯೋಗ ಮಾರ್ಗವನ್ನರುಹಿದ ಶಿವಯೋಗಸಿದ್ಧನೀತ. ಹಠಯೋಗಿಗಳ ಅಹಂಕಾರದ ಹುಂಕಾರ ಧ್ವನಿಯನ್ನು ಧೂತ್ಕಾರಗೈದ ಯೋಗಾರೂಢ! ಬಸವನ ಭಕ್ತಿಯನ್ನು ಒರೆಗೆ ಹಚ್ಚಲು ಆಗಮಿಸಿದ ಅಧ್ಯಾತ್ಮ ಪರೀಕ್ಷಕ. ಶೂನ್ಯಸ್ಥಲದ ನಿರ್ವಚನವನ್ನು ಅರ್ಥವತ್ತಾಗಿ ಪ್ರತಿಪಾದಿಸಿದ ಶೂನ್ಯಸ್ಥಲಜ್ಞ. ಐಹಿಕ ಉಪಾಧಿಗಳನ್ನು ಕಡೆಗಣ್ಣಿನಿಂದಲೂ ನಿಟ್ಟಿಸದ ಅಪ್ಪಟ ನಿರಂಜನಮೂರ್ತಿ. ಈತನ ಅನುಭಾವಪೂರ್ಣ ವಚನಗಳಲ್ಲಿ ತಾತ್ತ್ವಿಕ ಸಿದ್ಧಾಂತವು, ನೈತಿಕ ಸಿರಿಯು ಮಡುಗಟ್ಟಿ ನಿಂತಿದೆ. ಅಲ್ಲಮನ ಕೆಲವು ವಚನಗಳಿಂದ ಆತನ ಜ್ಞಾನತೇಜವನ್ನು, ವೈಚಾರಿಕ ರೀತಿಯನ್ನು ಕಂಡುಕೊಳ್ಳಬಹುದು,

ಕಸ್ತುರಿಯ ಮೃಗ ಬಂದು ಸುಳಿಯುತ್ತಲ್ಲಾ ! ಸಕಲ ವಿಸ್ತಾರದ ರೂಹು
ನಿಂದಿತ್ತಲ್ಲಯ್ಯ.
ಆಗ್ರಹ ಬಂದು ಸೋಂಕಿತ್ತೆಂದರಿಯೆನಯ್ಯ.
ಅವಗ್ರಹ ಬಂದು ಹಿಡಿಯಿತ್ತೆಂದರಿಯೆನಯ್ಯ.
ಹೃದಯ ಕಮಲ ಮಧ್ಯದಲ್ಲಿ ಗುರುವನರಿದು, ಪೂಜಿಸಿ, ಗುರುವಿದ್ಯಾತನೆಂಬುದ
ನಾನರಿದೆನಯ್ಯ.
ಗುಹೇಶ್ವರನಲ್ಲಿ ಹಿಂದಣ ಮುಟ್ಟರತು ಹೋದುದ ಕಂಡೆನಯ್ಯ.

ಆಧ್ಯಾತ್ಮ ಜೀವನದಲ್ಲಿ ಜನನ-ಮರಣಗಳನ್ನು ಜಯಿಸುವುದೇ ಶ್ರೇಷ್ಠ ಸಾಧನೆ; ಮುಖ್ಯ ಗುರಿ. ಈ ಮಾತು ಸರ್ವಧರ್ಮಗಳ ಕಕ್ಷೆಯಲ್ಲೂ ಬರುತ್ತದೆ. ಅಂತೆಯೇ ಅಲ್ಲಮನ ವಿಚಾರವೂ ಇದಕ್ಕೆ ಹೊರತಾಗಿಲ್ಲ. ಆದರೆ ಅಲ್ಲಮನ ವಿವರಣೆಯು ಮಾತ್ರ ಸತ್ವಪೂರ್ಣವಾಗಿದೆ. ಬಳಸುವ ಭಾಷೆ ಬಂಧುರವಾಗಿದೆ. ವಿವರಿಸುವ ಶೈಲಿ ಮನೋಹರವಾಗಿದೆ.

ಕಸ್ತೂರಿಯು ಮೃಗ ಪಾರವಿಲ್ಲದ ಸೌಗಂಧಕ್ಕೆ ಹೆಸರಾದಂತಿದೆ. ಕೃತ್ರಿಮ ಸುಗಂಧಕ್ಕೆ ಇಲ್ಲಿ ಲವಲೇಶವೂ ಸ್ಥಾನವಿಲ್ಲ. ಕಸ್ತೂರಿ ಮೃಗದ ಸುವಾಸನೆಯು ಪ್ರಾಕೃತಿಕ ಜನ್ಯ. ಇಲ್ಲಿಯೇ ಇದರ ವಿಶೇಷತೆಯಿರುವುದು. ಸುಗಂಧ ಯಾರಿಗೆ ಬೇಡ? ಎಲ್ಲರಿಗೂ ಒಂದಲ್ಲ ಒಂದು ಸುಗಂಧವು ಬೇಕೇ ಬೇಕು. ವೈರಾಗಿಯು ವಿರತನಾದರೂ ಧೂಪದ ಸುಗಂಧದಿಂದ ದೂರಿರಲಾರ. ಸುಗಂಧವು ಆಹ್ಲಾದವರ್ಧಕ: ಉಲ್ಲಾಸವರ್ಧಕ! ಅಂತೆಯೇ ಇದು ಎಲ್ಲರಿಗೂ ಆಕರ್ಷಕ! ಬಹಿರಂಗದ ಸುವಾಸನೆಯೇ ಇಷ್ಟು ಪ್ರಭಾವಿತ ವಿರುವಾಗ ಅಂತರಂಗದ ಸುಗಂಧವು ಎಷ್ಟು ಎತ್ತರದ್ದಿರಬಾರದು? ಬಹಿರಂಗಕ್ಕಿಂತಲೂ ಅಂತರಂಗದ ಶ್ರೇಷ್ಠತೆಯು ಸಾವಿರಪಾಲು ಮಿಗಿಲೆಂಬುದು ಸಾರ್ವತ್ರಿಕ ಸತ್ಯವಾಗಿದೆ. ಕಾರಣ, ಅಲ್ಲಮನು ಹೇಳುವುದು ಅಂತರಂಗದ ಸುಗಂಧ: ಅಲ್ಲದೆ ಸಹಸ್ರಪಾಲು ಆನಂದ! ಇದುವೇ 'ಜ್ಞಾನ'ವೆಂಬ ಕಸ್ತೂರಿ. ಇಲ್ಲಿಯೂ ಸಹಜಜನ್ಯ ಜ್ಞಾನಕ್ಕೆ ಅದ್ಯತೆಯಿದೆ, ಅದೂ ಆಧ್ಯಾತ್ಮ ಜ್ಞಾನ. ಅಂತರಂಗದ ಅನ್ವೇಷಣಾ ಪಿಪಾಸುಗಳಿಗೆ ಸಹಜ ಜ್ಞಾನವು ಬೇಕು. ಪಿಂಡಾಂಡ ಪ್ರಜ್ಞಾ ಪ್ರಿಯರಿಗೆ ಜ್ಞಾನ ಸೌಗಂಧವೆಂಬ ಶ್ರೀಯು ಬೇಕು. ಇದೇ ಜ್ಞಾನವು ಸಿದ್ಧನನ್ನಾಗಿ, ಮುಕ್ತನನ್ನಾಗಿ, ನಿಜವಿರಕ್ತನನ್ನಾಗಿ ಮಾಡುವುದು. ನಿರ್ಮಲ ಹೃದಯವನ್ನು ನೀಡುವುದು. ಇದೇ ಜ್ಞಾನವು ಬ್ರಹ್ಮಾಂಡಗತ ಸರ್ವವನ್ನೂ ಅರಿಯುವಂತೆ ಮಾಡುವುದು. ದುಃಖ-ದುಮ್ಮಾನಗಳಿಂದ ವಿಹ್ವಲ ಗೊಳ್ಳದಂತೆ ಮಾಡುವುದು. ನೈಜತೆಯ ನಿಲುವನ್ನು ನಿರುಕಿಸುವಂತೆ ಮಾಡುವುದು.

ಸಕಲ ವಿಸ್ತಾರದ ರೂಹು ಅದುವೇ ಇಷ್ಟಲಿಂಗ. ಇದು ಬಹಿರಂಗನಿಷ್ಠ: ಆದರೂ ಆಂತರಿಕ ಸಂಕೇತ; ಸರ್ವಶಕ್ತನ ರೂಹು: ಕುರುಹು! ಇಡೀ ಬ್ರಹ್ಮಾಂಡ ವನ್ನೇ ಒಳಗೊಂಡು ಪಿಂಡಾಂಡದಲ್ಲಿ ಅಡಗಿದೆ. ಲಿಂಗವನ್ನು ಧರಿಸಿದವರೆಲ್ಲರೂ ವೀರಶೈವರೇ. ಅಂದರೆ, ಲಿಂಗವನ್ನು ಧರಿಸುವುದು ಜಾತಿವಾಚಕವನ್ನು ಮೀರಿ ದಂತಲ್ಲವೇ? ಜ್ಞಾನದ ಪ್ರತೀಕವೇ ಇಷ್ಟಲಿಂಗದ ಪ್ರಾಪ್ತಿ: ಇಲ್ಲಿಯೇ ಜೀವನದ ನಿರುಪಮ ಸಂತೃಪ್ತಿ; ಆತ್ಮಿಕ ದೀಪ್ತಿ!

ಜಗತ್ತಿನಲ್ಲಿ ಯಾವುದೊಂದು ವಸ್ತುವಿನ ಮೇಲಿನ ಪ್ರೇಮವು ಪ್ರಯೋಜನದ ದ್ಯೋತಕವಾಗಿದೆ. ಅಂತೆಯೋ ಇಷ್ಟಲಿಂಗೋಪಾಸನೆಯೂ ಇದಕ್ಕೆ ಹೊರತಾಗಿಲ್ಲ. ಇಷ್ಟಲಿಂಗಕ್ಕೂ-ಆತ್ಮಕ್ಕೂ ಅಭಿನ್ನ ಸಂಬಂಧವಾಗಿದೆ. ಲಿಂಗಾನುಸಂಧಾನದ

ಪ್ರಯೋಜನವು ಆತ್ಮಶಕ್ತಿಯ ಸಂವೃದ್ಧಿಯಾಗಿದೆ. ಮನದ ಪರಿದಾಟವನ್ನು ನಿಲ್ಲಿಸುವ ಕಡಿವಾಣವಾಗಿದೆ. ಪಂಚಭೂತಗಳ ಶಕ್ತಿಯು ಹಸ್ತಗತವಾಗುತ್ತದೆ. ಪ್ರಾಪಂಚಿಕ ವಿಷಯಗಳಲ್ಲಿ ಜಿಹಾಸೆ ಪಡಿಮೂಡುತ್ತದೆ. ಸರ್ವರನ್ನು ನಮ್ಮಂತೆಯೂ, ಸರ್ವವಸ್ತುಗಳಲ್ಲಿಯೂ ಶಿವಭಾವವನ್ನೂ ದರ್ಶಿಸುವ ವಿಶಾಲ ಹೃದಯವಂತಿಕೆ ಎದ್ದು ಕಾಣುತ್ತದೆ. ಯಾರ ಹೃದಯವು ದೈವಭಕ್ತಿಯಲ್ಲಿ ಲೀನವೋ, ಅವರಲ್ಲಿ ವಿಶೇಷ ಅನುಭಾವದ ಸಂಚಯವಿರುತ್ತದೆ. ಅವಗ್ರಹದ ಗ್ರಹಣವಿರುವುದಿಲ್ಲ: ಅವಗ್ರಹದ ಸೋಂಕೂ ಇರುವುದಿಲ್ಲ. ಮುಂದಿನ ಅವಸ್ಥೆಯೇ ತಾನೇ ಗುರುವಾಗುವುದು: ತಾನೇ ದೇವನಾಗುವುದು. ಹೃದಯ ಮಧ್ಯಸ್ಥ ಗುರುವೇ ಆ ಪರಶಿವ ಆತನನ್ನು ಅರಿದು ಆತನಂತಾಗುವುದೇ ಗುರು ವಿಖ್ಯಾತನಾಗುವುದು. ಕೊನೆಗೆ ಮುಟ್ಟುರತು ಅಂದರೆ ಭವಬಂಧನವನ್ನು ಭೇದಿಸಿ ಸ್ವಸ್ವರೂಪದಲ್ಲಿ ಲೀಲಾಜಾಲವಾಗಿ ವಿಹರಿಸುವುದು. ಇದುವೆ ಮಾನವ ಜನ್ಮದ ಅಂತಿಮ ಸಾಫಲ್ಯವೆಂದು ಗೂಢವಾದ ಶೈಲಿಯಲ್ಲಿ ಪ್ರಭುವು ವಿವರಿಸಿದ್ದಾರೆ.

> ಕರೆಯದೆ ಬಂದುದ, ಹೇಳದೆ ಹೋದುದನಾರೂ ಅರಿಯರಲ್ಲಾ.
> ಅಂದಂದಿಗೆ ಬಂದ ಪ್ರಾಣಿಗಳನಾರೂ ಅರಿಯರಲ್ಲಾ. ಗುಹೇಶ್ವರನೆಂಬ
> ಲಿಂಗ ಉಣ್ಣದೆ ಹೋದುದನಾರೂ ಅರಿಯರಲ್ಲಾ.

ಜನನ ಮತ್ತು ಮರಣಗಳು ಅರಿಯಲಾರದ ಒಗಟುಗಳು. ಹುಟ್ಟುತ್ತಾರೆಂದರೆ ಹುಟ್ಟುತ್ತಾರೆ. ಸಾಯುತ್ತಾರೆಂದರೆ ಸಾಯುತ್ತಾರೆ. ಏಕೆ ಹುಟ್ಟು? ಏಕೆ ಮೃತ್ಯು? ಎಂಬ ಪ್ರಶ್ನೆಯು ಸಮಸ್ಯೆಯಾಗಿಯೇ ಉಳಿದಿದೆ. ಜನನ ಹಾಗೂ ಮರಣ ಪ್ರಕೃತಿಯ ಸಹಜ ಕ್ರಿಯೆ'ಯೆಂದು ಸಮಾಧಾನವನ್ನು ಹೇಳಿದರೂ ಅದು ಸಮಾಧಾನವಷ್ಟೇ! ಹೀಗೇನಾದರೂ ತಿಳಿದಿದ್ದ ಮಾತ್ರಕ್ಕೆ, ಜನನ ಕ್ರಿಯೆಯು ಸಂತೋಷದ ಪರವಾಗಿಯೂ ಮರಣಕ್ರಿಯೆಯು ದುಃಖದ ಪರವಾಗಿಯೂ ಭಾಗವಹಿಸುವುದು ದೃಶ್ಯ ಜಗತ್ತಿನಲ್ಲಿ ಕಾಣುತ್ತಲೇ ಇರಲಿಲ್ಲ. ತಿಳಿದಿದ್ದೇನೆಂಬ ಜ್ಞಾನಿಯೂ, ತಿಳಿಯದಿರುವೆನೆಂಬ ಅಜ್ಞಾನಿಯೂ ಹುಟ್ಟಿನಲ್ಲಿ ಹರ್ಷಿಸುತ್ತಾನೆ, ಸಾವಿನಲ್ಲಿ ದುಃಖಿಸುತ್ತಾನೆ. ಜನನ-ಮರಣ ಸೃಷ್ಟಿಯ ನಿಯಮವೆಂದು ತಿಳಿಯಲು ಅಸಮರ್ಥನಾದ ಅಜ್ಞಾನಿಯು ಜನನದಲ್ಲಿ ತೋಷಿಸಲಿ, ಮರಣದಲ್ಲಿ ದುಃಖಿಸಲಿ. ಆದರೆ, ನೈಜ ನಿಯಮವನ್ನು ತಿಳಿದ ಜ್ಞಾನಿ-ವಿಜ್ಞಾನಿಯೂ ದುಃಖಿಸಬೇಕೇ? ಅಂದಾಗ, ನಾವು ಹೇಳುವ ನಿಯಮವು ಯಾವ ಜ್ಞಾನಿಗೂ ಪೂರ್ಣ ಸಂತೃಪ್ತಿಯನ್ನು ತಂದುಕೊಡದ, ಜೀವಂತವಿದ್ದಾಗ: ಶಕ್ತಿವಂತರಿದ್ದಾಗ ಸಮಾಧಾನ ಹೇಳಿ ತಾತ್ಕಾಲಿಕ ಭೋಗಕ್ಕೆ ಮನಸ್ಸು ಮಾಡಿಸುವ ಸಾಧನವೆಂದು ಹೇಳಬೇಕಷ್ಟೆ!

ಯಾರು ಜನಿಸುವಾಗಲೂ ಮೊದಲೇ ಆಮಂತ್ರಣ ಪತ್ರಿಕೆಯನ್ನು ಪ್ರಕಟಿಸುವುದಿಲ್ಲ. ಹುಟ್ಟಿದ ನಂತರವೇ ಪ್ರಕಟಿಸುತ್ತಾರೆ. ಇದರಂತೆ, ಯಾರು ಮೃತ್ಯುವನ್ನಪ್ಪ

ಬೇಕಾದರೂ ಮೃತ್ಯುವಿನ ಆಮಂತ್ರಣ ಪತ್ರಿಕೆಯನ್ನು ಪ್ರಕಟಿಸುವುದಿಲ್ಲ. ಮೃತ್ಯುವಿನ ನಂತರವೇ ಪ್ರಕಟಿಸುತ್ತಾರೆ. ಹೀಗಿದ್ದರೂ, ಜನನ-ಮರಣಗಳು ಸ್ವಹಸ್ತಗತಗಳೆಂಬಂತೆ ವರ್ತಿಸುತ್ತದೆ ಜನಜಂಗುಳಿ ! ಮದೋನ್ಮತ್ತರಂತೆ ಮಾತನಾಡುತ್ತಾರೆ. ಅನ್ಯಾಯ ಅಪಚಾರಗಳನ್ನೆಸಗುತ್ತಾರೆ. ಅಪಭ್ರಂಶವನ್ನು ಆಡುತ್ತಾರೆ. ನೆರೆಹೊರೆಯಲ್ಲಿ ಲಕ್ಷಲಕ್ಷ ಜಂತುಗಳು ಕ್ಷಣದಲ್ಲಿ ಜನಿಸಿ ಮತ್ತೊಂದು ಕ್ಷಣದಲ್ಲಿ ಮೃತ್ಯುದೇವಿಯ ದವಡೆಯಲ್ಲಿ ನುಚ್ಚುನೂರಾಗುತ್ತಲಿವೆ, ಈ ಭೀಕರ ಪರಿಸರವನ್ನಾದರೂ ಕಂಡು ಭವಭಂಧನದಲ್ಲಿ ತಿರ್‍ರನೆ ತಿರುಗಲು ಹೇಸಬಾರದೇ ಈ ಜನತೆ ! ಪರಿಸರದಿಂದಲೂ ಪರಿಶುದ್ಧರಾಗದ ಜನತೆಯ ಜೀವನ್ಮೃತಿಯನ್ನು ಕಂಡ ದೇವನು, ಪ್ರಕೃತಿಯ ವಿಕೃತ ರೂಪದಿಂದಲೇ ಕೋಪಾಗ್ನಿಯನ್ನು ತೋರಿಸಿ ಕಷ್ಟಪರಂಪರೆಯಲ್ಲಿ ನೂಕುತ್ತಲಿದ್ದಾನೆ. ಇಷ್ಟಾದರೂ ಸಂಪ್ರದಾಯ ಬಳುವಳಿಯನ್ನೇ ತಮ್ಮ ಉದ್ಯೋಗವೆಂದು ನಂಬಿದ ಜಾಗತಿಕ ಜನತೆಯನ್ನು ಕಂಡು ಅಲ್ಲಮನು ಮರುಗಿ ಪೋಲಿಸ ತಾತ್ತ್ವಿಕ ವಚನವನ್ನು ಹಾಡಿದ್ದಾನೆ. ಜನತೆಯ ಕಲ್ಯಾಣಕ್ಕಾಗಿ ಹರಸಿದ್ದಾನೆ.

ಘನಕ್ಕೆ ಘನವಾದುದಾವುದೆಂಬುದಕ್ಕೆ ವಿವರಣೆಯನ್ನು ನೀಡುತ್ತಾ :

ಬ್ರಹ್ಮಘನವೆಂಬೆನೆ ? ಬ್ರಹ್ಮನ ನುಂಗಿತ್ತು ಮಾಯೆ, ವಿಷ್ಣು ಘನವೆಂಬೆನೆ ?
ವಿಷ್ಣುವ ನುಂಗಿತು ಮಾಯೆ. ರುದ್ರ ಘನವೆಂಬೆನೆ ರುದ್ರನ ನುಂಗಿತ್ತು ಮಾಯೆ,
ತಾ ಘನವೆಂಬೆನೆ? ತನ್ನ ನುಂಗಿತು ಮಾಯೆ. ಇಂತು ಸರ್ವವೂ ನಿನ್ನ ಮಾಯೆ.
ಒಬ್ಬರನೊಬ್ಬರನೊಳಕೊಂಡಿತ್ತೆ ಹೇಳಾ ಗುಹೇಶ್ವರಾ ?

ಮಾಯವಾದವು ವೇದಾಂತ ಗ್ರಂಥಗಳಲ್ಲಿ ಬಹುಮುಖವಾಗಿ ಹರಡಿಕೊಂಡಿದೆ. ಪ್ರಕೃತಿ ಜಡವಾಗಿದೆ. ಹೊನ್ನು-ಹೆಣ್ಣು ಮತ್ತು ಮಣ್ಣುಗಳು ಮಾಯಾ ರೂಪಗಳಾಗಿವೆಯೆಂದು ವೇದಾಂತಿಗಳು ಅಭಿಪ್ರಾಯ ಪಡುತ್ತಾರೆ. ಆದರೆ ಶಿವಾದ್ವೈತ ಸಿದ್ಧಾಂತವು ಈ ವಾದವನ್ನು ಒಪ್ಪುವುದಿಲ್ಲ. ಶಿವನಿಂದಾದ ಜಗವೂ ಶಿವಸ್ವರೂಪವೆಂದೇ ಶಿವಾದ್ವೈತಿಗಳು ಹೇಳುತ್ತಾರೆ. ಹೊನ್ನು, ಹೆಣ್ಣು ಮತ್ತು ಮಣ್ಣುಗಳೂ ಮಂಗಲರೂಪಗಳೇ, ಆದರೆ ಅವುಗಳನ್ನು ಕಾಣುವ ನಮ್ಮ ದೃಷ್ಟಿ ಮಾಯೆಯಿಂದ ಕೂಡಿದ್ದರೆ ಇದು ಯಾರ ತಪ್ಪು? ಸಹಜವಾಗಿಯೇ ಇರುವ ಆ ವಸ್ತುಗಳ ತಪ್ಪಲ್ಲ ; ಅದು ನಮ್ಮ ವಿವೇಚನೆಯ ತಪ್ಪು. ಅಲ್ಲಮಪ್ರಭು- "ಮನದ ಮುಂದಣ ಆಶೆಯೇ ಮಾಯೆ ಕಾಣಾ ಗುಹೇಶ್ವರಾ" ಎಂದು ಮತ್ತೊಂಡೆಡೆ ಹೇಳಿದ್ದಾರೆ. ಅಂತೂ ಮಾಯೆಯು ವಸ್ತುನಿಷ್ಠವಲ್ಲ ; ಅದು ಪ್ರತಿಯೊಬ್ಬನೂ ಕಾಣುವ ಮನೋನಿಷ್ಠವೆಂದು ಹೇಳಿದಂತಾಯಿತು.

ಬ್ರಹ್ಮ-ವಿಷ್ಣು-ರುದ್ರ-ಸದಾಶಿವ ಎಲ್ಲರಲ್ಲಿಯೂ ಮಾಯೆಯಿರುವುದನ್ನು ಕಂಡಿದ್ದಾನೆ ಅಲ್ಲಮ ಪ್ರಭುದೇವನು ಮತದ ಪಕ್ಷವನ್ನು ಹಿಡಿದು ನಿರ್ಣಯಕೊಡುವ

ಪಕ್ಷಪಾತಿಯಲ್ಲವೆಂಬುದೂ ಇಲ್ಲಿ ನಮಗೆ ತಿಳಿಯದೇ ಇರದು. ಹಾಗೇನಾದರೂ ಆಗಿದ್ದರೆ ಬ್ರಹ್ಮ-ವಿಷ್ಣುಗಳನ್ನಷ್ಟೇ ಮಾಯೆಯ ಕಟ್ಟಿನಲ್ಲಿ ಸಿಲುಕಿಸಿ, ರುದ್ರ-ಸದಾಶಿವರನ್ನು ಆ ಬಂಧನದಿಂದ ಪಾರು ಮಾಡಿಬಿಡುತ್ತಿದ್ದ. ಮರುಳಿಲ್ಲದಿದ್ದರೂ ಸ್ವಮತದ ಮೇಲ್ಮೆಯನ್ನು ಪೊಗಳಿಕೊಳ್ಳುವ ಒಣ ಪ್ರತಿಷ್ಠೆ ಹಾಗೂ ದುರ್ಬಲತೆಗೆ ಸಿಲುಕಿಕೊಳ್ಳುವವನಲ್ಲ ಅಲ್ಲಮ. ಅಲ್ಲಮನು ಸ್ವ-ಪರ ಯಾವುದಿದ್ದರೂ ಸರಿಯೇ ವಿಚಾರದ ಒರೆಗಲ್ಲಿಗೆ ತಿಕ್ಕಿ ನೋಡುವ, ನ್ಯಾಯವನ್ನೇ ನಿರ್ಣಯ ಕೊಡುವ ನ್ಯಾಯವಾದಿಯೇ ತ!

ಬ್ರಹ್ಮನಿಗೆ ನಾನು ಸೃಷ್ಟಿಕರ್ತನೆಂಬ ಅಹಮಿಕೆಯಿದೆ. ವಿಷ್ಣುವಿಗೆ ನಾನು ಸಂರಕ್ಷಣಾಧೀಶನೆಂಬ ಬಿಮ್ಮದೆ. ರುದ್ರನಿಗೆ ನಾನು ಸಂಹಾರಕರ್ತನೆಂಬ ಹಮ್ಮಿದೆ. ಅಧಿಕಾರಾರೂಢರಾದ ದೇವಾನುದೇವತೆಗಳಿಗೇ ಅಹಮಿಕೆ ಬಿಡಲಿಲ್ಲ. ಈ ಅಹಮಿಕೆಯೇ ಮಾಯೆಯೆನ್ನುತ್ತಾನೆ ಪ್ರಭುದೇವ. ತನಗೂ ಮಾಯೆಯ ಛಾಯೆ ಆಚ್ಛಾದಿಸದೆ ಬಿಡಲಿಲ್ಲವೆಂಬುದನ್ನು ಒಪ್ಪಿಕೊಳ್ಳುತ್ತಾನೆ. ಆದರೂ, ಬ್ರಹ್ಮಾದಿ ದೇವತೆಗಳಿಗಿಂತಲೂ ಪ್ರಭುವಿನ ಸ್ಥಾನ ಎತ್ತರದೆಂದು ಹೇಳಬೇಕಾಗಿದೆ. ಏಕೆಂದರೆ, ಅಧಿಕಾರದ ಲಾಲಸೆಯು ಪ್ರೇಯೋಭಿವೃದ್ಧಿಯ ಹಾಗು ಉಪಜೀವನದ ಮಾರ್ಗವಷ್ಟೆ. ಇದಕ್ಕಾಗಿ ಪ್ರಭು ಕಾದು ಕುಳಿತವನಲ್ಲ. ಬ್ರಹ್ಮ-ವಿಷ್ಣು-ರುದ್ರರಿಗೆ ತಮ್ಮ ಅಧಿಕಾರದಲ್ಲಿ ಲೋಭವಿದೆ. ಆಶೆಯೆಂಬ ಮಾಯೆಯ ಬಲೆಯಲ್ಲಿ ಸಿಕ್ಕಿದ್ದಾರೆಂದೇ ಭವಬಂಧನಕ್ಕೂ ಗುರಿಯಾದರು. ಅಂತೆಯೇ ನಿರ್ಭೀತ ಅಲ್ಲಮನು ದೇವತೆಗಳಲ್ಲೂ ಮಾಯಾ ಬಂಧನವನ್ನೂ ಕಂಡು ಹಿಡಿದನು. ನಿರ್ಭಿಡೆಯಿಂದ ವೈಚಾರಿಕತೆಯನ್ನು ಚಿತ್ರಿಸಿದನು. ಬ್ರಹ್ಮನ ಸೃಷ್ಟಿಗಿಂತಲೂ, ವಿಷ್ಣುವಿನ ರಕ್ಷಣೆಗಿಂತಲೂ, ರುದ್ರನ ಧ್ವಂಸಕ್ಕಿಂತಲೂ, ಸದಾಶಿವನ ದಾಕ್ಷಿಣ್ಯಕ್ಕಿಂತಲೂ ಅಲ್ಲಮನ ವಿಚಾರಧಾರೆ ಉತ್ಕೃಷ್ಟವಾದುದು. ಇಷ್ಟೇ ಅಲ್ಲ, ಸ್ವರ್ಗಲೋಕದ ದೇವತೆಗಳು ನಮಗಿಂತ ಶ್ರೇಷ್ಠರೂ ಅಲ್ಲ: ಕರ್ಮಭೂಮಿಗಿಂತಲೂ ಸ್ವರ್ಗಲೋಕ ಉತ್ಕೃಷ್ಟವೂ ಅಲ್ಲ ! ಎಂಬ ಕರ್ಮಭೂಮಿಯ ನೈಜ ಪ್ರತಿಷ್ಠೆಯ ಧ್ವನಿಯೂ ಆಗದೇ ಇರದು ಅಲ್ಲಮನ ವಾಣಿಯಲ್ಲಿ !

ಏನಾದರೂ ಆಗಬೇಕು, ಸ್ವಾರ್ಥವನ್ನು ಬದಿಗಿರಿಸಿ ಆಗಬೇಕು. ಏನಾದರೂ ಆಡಬೇಕು ಸ್ವಾರ್ಥವನ್ನು ಬದಿಗಿರಿಸಿ ಆಡಬೇಕು. ಏನಾದರೂ ಕಾಣಬೇಕು. ಸ್ವಾರ್ಥವನ್ನು ಆಚೆಗಿರಿಸಿ ಕಾಣಬೇಕು. ಯಾರಿಗಾದರೂ ಸಹಕರಿಸಬೇಕು, ಪ್ರತ್ಯುಪಕಾರದ ಲೋಭವನ್ನು ಮೂಲೆಗೊತ್ತಿ ಸಹಕರಿಸಬೇಕು. ಇದುವೇ ಮಾಯೆಯನ್ನು ಜಯಿಸುವ ರಹಸ್ಯ. ಇದುವೇ ಮಾಯೆಯನ್ನು ಸಮಾಧೀನವನ್ನಾಗಿಸಿಕೊಳ್ಳುವ ಗುಟ್ಟು. ಇದುವೇ ಸರ್ವಸ್ವತಂತ್ರತೆಯಿಂದ ವಿಹರಿಸಲಿರುವ ಏಕೈಕ ಮಾರ್ಗ. ಇಲ್ಲಿಯೇ ಪರಮಾನಂದವೆಂಬ ಸುಧಾಪಾನ ಲಭ್ಯ! ಇದಕ್ಕಿಂತಲೂ ಮತ್ತಾವುದಿದೆ ನಿರ್ಮಾಯೆ! ಇಂದ್ರ-ಚಂದ್ರ ಪದವಿಗಳೆಲ್ಲಾ ಬಿರುಗಾಳಿಯಲ್ಲಿ ಹಾರಿ ತಿರ್ರನೆ ತಿರುಗಿ ಗಿರಕಿ ಹೊಡೆಯುವ ತರಗೆಲೆಯಂತೆ ! ಈ ಪದವಿಗಳು ಬೇಡವೆನ್ನುವುದೇ ಅಲ್ಲಮನ ಅಭಿಮತ !

ಜೀವ ತಪ್ಪಿಸಿ ಜೀವಿಸಬಾರದಾರಿಗೆಯೂ, 'ಅಹಿಂಸಾ ಪರಮೋ ಧರ್ಮಃ'
ಎಂಬ ಶ್ರಾವಕರ ನಾನಾರಸೂ ಕಾಣೆ. ಪೃಥ್ವೀ ಬೀಜಂ ತಥಾಮಾಂಸಂ ಅಪ್
ದ್ರವ್ಯಂ ಸುರಾಮಯಂ ಅತ್ಮಜೀವಸಮಾಯುಕ್ತಂ ಜೀವಂ ಜೀವೇನ ಭಕ್ಷಯೇತ್!
ಇಂತೆಂದುದಾಗಿ, ಲಿಂಗಾರ್ಪಿತ ಶುದ್ಧ: ಮಿಕ್ಕುದು ಜೀವಮಯ ಗುಹೇಶ್ವರಾ.

ಒಂದು ಜೀವಿಯು ಬದುಕಬೇಕಾದರೆ ಮತ್ತೊಂದು ಜೀವಿಯನ್ನು ಕೊಲ್ಲಲೇ ಬೇಕು. ಕೊಲ್ಲುವಿಕೆಯು ನಿಂತರೆ ಬದುಕುವಿಕೆಯೂ ನಿಂತಂತೆ! ಇದರಲ್ಲಿ ತಿಲಮಾತ್ರವೂ ಸಂಶಯವಿಲ್ಲ. ಕೆಲವು ಸಜಾತೀಯ ಪ್ರಾಣಿಗಳನ್ನು ತಿಂದು ಬದುಕಿದರೆ ಮತ್ತೆ ಕೆಲವು ವಿಜಾತೀಯ ಪ್ರಾಣಿಗಳನ್ನು ತಿಂದು ಬದುಕುತ್ತವೆ. ಅಂತೂ ಬದುಕುವಿಕೆಯು ಕೊಲ್ಲುವಿಕೆಯನ್ನು ಅವಲಂಬಿಸಿದೆ. ಮಾಂಸಾಹಾರಿಗಳಂತೂ ಕೊಲ್ಲುವಿಕೆಯು ತಪ್ಪಿದರೆ ತಮ್ಮ ಕರ್ತವ್ಯಕ್ಕೆ ಚ್ಯುತಿ ಬಂದಂತೆಂದು ತಿಳಿಯುತ್ತಾರೆ. ಹಿಂಸೆ-ಅಹಿಂಸೆಗಳ ವಿಚಾರ ಅವರಿಗೆ ಹಿಡಿಸದು. ಅವರ ವಿಷಯವಾಗಿ ಚರ್ಚಿಸುವುದು ಬೇಡ. ನಮ್ಮ ಮುಂದೆ ಇರುವುದು ಸಸ್ಯಾಹಾರಿಗಳ ಸಮಸ್ಯೆ.

ಸಸ್ಯಾಹಾರಿಗಳಿಗೆ ಮಾಂಸಭಕ್ಷಣ ಒಂದು ಪಾಪದ ಕೆಲಸ! ಏಕೆಂದರೆ, ಪ್ರಾಣಿಗಳನ್ನು ಹಿಂಸಿಸುವುದು ಪಾಪ ಕರ್ಮ. ಮಾಂಸವನ್ನು ಬಾಯಾಡಿಸುವುದು ರಕ್ಕಸರ ಅಭಿರುಚಿ. ಜ್ಞಾನವಿದ್ದ ಮಾನವರು ಪ್ರಾಣಿವಧೆಗೈವುದು ಸಲ್ಲದ ಕಾರ್ಯ. ನೋವು-ನಲಿವುಗಳನ್ನು ತನ್ನಂತೆ ಪರರಲ್ಲಿ ಕಾಣುವ ಸಂವೇದನಾ ಜೀವಿಯಾಗಿದ್ದಾನೆ ಮಾನವ. ಸಂವೇದನೆಯಿಲ್ಲದೆ ನರ ವಾನರ! ಜಿಜ್ಞಾಸುಗಳು ಹೀಗೆ ಕೇಳಬಹುದು: ಪ್ರಾಣಿವಧೆಯಷ್ಟೇ ಹಿಂಸೆಯೇ ಸ್ವಾಮಿ? ಸಸ್ಯಗಳಲ್ಲೂ ಜೀವವಿದೆ; ಅವುಗಳನ್ನು ಕೊಯ್ದು ತಿಂದರೆ ಹಿಂಸೆಯಾಗುವುದಿಲ್ಲವೇ ಸ್ವಾಮಿ? ಎಂದು ಪ್ರಶ್ನಿಸಬಹುದು. ನಿಮ್ಮ ಪ್ರಶ್ನೆಗೆ ನಮ್ಮ ಉತ್ತರವಿದು: "ಒಂದು ಜೀವಿಯು ಮತ್ತೊಂದು ಜೀವಿಯನ್ನು ಕೊಂದು ಬದುಕಲೇಬೇಕು", ಎಂಬ ನಿಯಮವು ಮೊದಲೇ ಹೇಳಲ್ಪಟ್ಟಿದೆ. ಈ ನಿಯಮವು ಸಸ್ಯಾಹಾರಕ್ಕೂ ಹೊರತಾಗಿಲ್ಲ. ಆದರೆ, ಪ್ರಾಣಿವಧೆಯು ಹೃದಯ ವಿದ್ರಾವಕವನ್ನಾಗಿ ಮಾಡುತ್ತದೆ. ಯಾವುದೇ ಪ್ರಾಣಿಯು ವಿಕೃತ ಧ್ವನಿಯಲ್ಲಿ ತನ್ನ ತಾಪವನ್ನು ಹೊರಗೆಡವುತ್ತದೆ. ದಯೆಯು ಬೇಕೆಂದು ಅರಿಯುವ, ಉಸುರುವ ಮಾನವನು ಮತ್ತೂ ಮತ್ತೂ ಇದೇ ಕಾರ್ಯದಲ್ಲಿ ತೊಡಗಿದರೆ, ಜಗತ್ತಿನಲ್ಲಿ ಬಹುಮತವಿರುವ 'ನೈತಿಕ' ಸ್ಥಾನವನ್ನು ಕಳೆದುಕೊಂಡು ಪಶುವಾಗಬೇಕಾಗುತ್ತದೆ. ಕೇವಲ ಸ್ಥೂಲ ದೃಷ್ಟಿಯನ್ನಿಟ್ಟುಕೊಂಡು ತನಗೆ ಬೇಕಾದಂತೆ ಸ್ವಾರ್ಥದ ವರ್ತುಳದಲ್ಲಿ ಒಂದು ವಸ್ತುವನ್ನು ವಿವೇಚಿಸುವುದು ಸನ್ಮಾರ್ಗವಲ್ಲ. ಆದ್ದರಿಂದ, ಸಸ್ಯಗಳನ್ನು ಕೊಲ್ಲುವುದೂ ಹಿಂಸೆಯಲ್ಲವೆ? ಎಂಬ ಕಟುಕರ ಸವಾಲು ಸ್ವಾರ್ಥದ ಕೇಂದ್ರವಾಗಿದೆ. ರುಚಿಯ ಬೆನ್ನು ಹತ್ತುವ ಜಿಹ್ವಾಲಂಪಟತನವಾಗಿದೆ.

"ಸಸ್ಯಗಳಿಗೂ ಜೀವವಿದೆ ; ಅವು ಉಸಿರಾಡುತ್ತವೆ, ಆಹಾರವನ್ನು ಸ್ವೀಕರಿಸುತ್ತವೆ", ಎಂಬ ಮಾತನ್ನು ಜಗದೀಶಚಂದ್ರಭೋಸರು ಹತ್ತೊಂಬತ್ತನೆ ಶತಮಾನದಲ್ಲಿ ಹಳೆಯ ವಿಷಯವನ್ನೇ ಚರ್ವಣ ಮಾಡಿದ್ದಾರೆ. ಹನ್ನೆರಡನೆಯ ಶತಮಾನದ ಅಲ್ಲಮನೇ ಈ ಮಾತನ್ನು ಮೇಲಿನ ವಚನದಲ್ಲಿ ಸ್ಪಷ್ಟೀಕರಿಸಿದ್ದಾರಲ್ಲಾ ! ಸಸ್ಯಗಳನ್ನು ಹಿಂಸಿಸುವಲ್ಲಿ ಅಥವಾ ಕೊಯ್ಯುವಲ್ಲಿ ಸಸ್ಯಗಳಿಂದ ಯಾವುದೇ ಧ್ವನಿಯೊಡನೆ, ಅಥವಾ ನುಸುಳಿಕೊಂಡು ಹೋಗುವ ಪ್ರತೀಕಾರದೊಡನೆ ಯಾವ ಪಾಪಭಾವವೂ ಕಂಡುಬರುವುದಿಲ್ಲ. ಸರ್ವಶಕ್ತನು ಸಸ್ಯ ಜೀವಿಗಳನ್ನು ಮಾನವನ ಬದುಕುವಿಕೆಗಾಗಿಯೇ ಸೃಷ್ಟಿಸಿದ್ದಾನೆ. ಆಲೋಚನಾ ಶಕ್ತಿ ಸಂಪನ್ನನೆನಿಸಿಕೊಂಡ ಮಾನವ ಜಾತಿಯೂ ಇದನ್ನು ಪರಾಮರ್ಶಿಸಿ ಸನ್ಮಾರ್ಗಪ್ರವೃತ್ತರಾಗಬೇಕಷ್ಟೆ. ಕಾರಣ, ಸಸ್ಯಗಳನ್ನು ಕೊಯ್ಯುವುದು ಹಿಂಸೆಯಲ್ಲ ; ಅದು ಪಾಪವೂ ಅಲ್ಲ.

ಪ್ರಭುದೇವನು ಮತ್ತೊಂದು ವಿಷಯವನ್ನು ಸಂಸ್ಕಾರ ಪೂರ್ಣವಾಗಿ ಪ್ರತಿಪಾದಿಸುತ್ತಾನೆ. ಧಾನ್ಯಕ್ಕೆ ಅಥವಾ ಪಾಕಕ್ಕೆ ದೇವಭಾವನೆಯ ತಿರುಪಿನೊಡನೆ ಪ್ರಸಾದವನ್ನಾಗಿ ಪರಿವರ್ತಿಸಿಕೊಂಡು ಸ್ವೀಕರಿಸಬೇಕು. ಅಂತೆಯೇ ಲಿಂಗಾರ್ಪಿತ ಶುದ್ಧ ; ಅದು ದೇವಂಗರ್ಪಿತ ! ಉಳಿದುದೆಲ್ಲವೂ ಜೀವಮಯ ; ಅದು ಅನರ್ಪಿತ ! "ಅಹಿಂಸಾ ಪರಮೋ ಧರ್ಮಃ", ಎಂಬ ಅನುಕಂಪೆಯನ್ನೂ, ಸಸ್ಯಹಾರದ ಶ್ರೇಷ್ಠತೆಯನ್ನೂ, ಸಸ್ಯಗಳಲ್ಲೂ ಜೀವವಿದೆಯೆಂಬ ವೈಜ್ಞಾನಿಕ ಸತ್ಯವನ್ನೂ, ಪದಾರ್ಥದ ಕಣಕಣದಲ್ಲೂ ದೈವೀಭಾವನೆಯನ್ನು ಪ್ರರೂಢಿಸಿಕೊಳ್ಳುವ ಸಂಸ್ಕಾರವನ್ನೂ, ಅತಿಶಯ ಮಾನವೀಯ ಸಂವೇದನಾಶೀಲವನ್ನೂ ತನ್ನ ಮೇಲಿನ ವಚನದಲ್ಲಿ ಮನೋಜ್ಞವಾಗಿ ಚಿತ್ರಿಸಿರುವ ಅಲ್ಲಮನು ಉತ್ಕೃಷ್ಟ ತತ್ತ್ವವೇತ್ತಾರ : ಮಂತ್ರ ದ್ರಷ್ಟಾರ !

ಮಠಮಾನ್ಯಗಳು ಕರ್ನಾಟಕದ ಸಮಗ್ರ ಸಾಧನೆಗಾಗಿ ವಿದ್ಯಾಪ್ರಸಾರಕ್ಕಾಗಿ ಮೀಸಲಾಗಿರಬೇಕು

ಶ್ರೀ ಮದುಜ್ಜಯಿನಿಸಿದ್ಧರ್ಮಸಿಂಹಾಸನಾಧೀಶ ತರಳಬಾಳು ಜಗದ್ಗುರು
ಶ್ರೀ ೧೧೦೮ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ, ಚಿತ್ರದುರ್ಗ ತಾಲ್ಲೂಕು

ಶರಣ ಬಿ. ಜಿ. ಶಂಕರರಾವ್, ಕರ್ನಾಟಕ ರಾಜ್ಯದ ಶಿಕ್ಷಣ ಸಚಿವರು ಇವರಿಗೆ ಅರ್ಪಿಸುವ ಅಭಿನಂದನಾಗ್ರಂಥದಲ್ಲಿ ತಮ್ಮದೊಂದು ಲೇಖನವಿರಬೇಕೆಂದು ಸಂಪಾದಕರು ಕೇಳಿಕೊಂಡಿದ್ದಾರೆ. ಇದಕ್ಕಾಗಿ ನಾವು ಸಂಪಾದಕರಿಗೆ ಕೃತಜ್ಞರಾಗಿದ್ದೇವೆ.

ಮಠಮಾನ್ಯಗಳು ಕರ್ನಾಟಕದ ಸಮಗ್ರಸಾಧನೆಗಾಗಿ, ವಿದ್ಯಾಪ್ರಸಾರಕ್ಕಾಗಿ ಮೀಸಲಾಗಬೇಕು ಎಂಬ ಈ ವಿಷಯ ಆದರ್ಶವೇನೋ ಆಗಿದೆ. ಆದರೆ ಈ ಮೀಸಲಾತಿಯು ಜಾತೀಯವಾಗಿರಬಾರದು. ಜಾತಿವರ್ಣಗಳ ನಿಮಿತ್ತವಾಗಿ ಮಠಮಾನ್ಯಗಳ ಮೇಲೆ ಅಪಾರವಾದ ಅಪವಾದವೇ ಆದಿ ಅನಾದಿಕಾಲದಿಂದಲೂ ಇದ್ದೇ ಇದೆ. ಮಠಮಾನ್ಯಗಳು ಇದನ್ನು ಗಮನದಲ್ಲಿ ಇಟ್ಟುಕೊಂಡು ಮಾನವತೆಯ ತಳಹದಿಯಮೇಲೆ ತಾವು ಸೇವಾರಂಗದಲ್ಲಿ ಕಾಲಿಡಬೇಕು, ಆದರೆ ಈ ಬಗ್ಗೆ ಕೇವಲ ವಾಗಾಡಂಬರವನ್ನು ಜನರಲ್ಲಾಗಲೀ ಮಠಗಳಲ್ಲಾಗಲೀ ಕಾಣುತ್ತಿದ್ದೇವೆಯೇ ವಿನಾ ನಿಜವಾದ ಮಾನವತೆಯ ದೃಷ್ಟಿಯನ್ನು ಕಾಣುತ್ತಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಉಣ್ಣುವಲ್ಲಿ, ಉಡುವಲ್ಲಿ, ಮಲಗುವಲ್ಲಿ ಯಾವುದೇ ಕೆಲಸ ಕಾರ್ಯಗಳಲ್ಲಾಗಲೀ ಭೇದವೇ ಭೇದ. ಅದನ್ನೇ ತಮ್ಮ ವೈಶಿಷ್ಟ್ಯವೆಂದು ಅನೇಕ ಮಠಗಳು ಅನೇಕ ಜನರು ತಿಳಿದುಕೊಂಡಿದ್ದಾರೆ. ಈ ಸಮಸ್ಯೆಯು ನಮ್ಮ ರಾಷ್ಟ್ರದಲ್ಲಿ, 'ಹುಚ್ಚು ಬಿಡದೆ ಮದುವೆಯಾಗದು, ಮದುವೆಯಾಗದೆ ಹುಚ್ಚು ಬಿಡದು.' ಎಂಬ ನ್ಯಾಯವನ್ನನುಸರಿಸಿದೆ. ಮಠಮಾನ್ಯಗಳು ಎಷ್ಟೇ ವಿಶಾಲದೃಷ್ಟಿಯಿಂದ ಜನರ ಹಿತಕ್ಕಾಗಿ ದುಡಿದರೂ ಜನರಲ್ಲಿ ಮಠಮಾನ್ಯಗಳ ಬಗ್ಗೆ ವಾಸ್ತವಿಕವಾದ ಸದ್ಭಾವನೆಯಿಲ್ಲ. ಇರುವ ಸದ್ಭಾವನೆಯಾದರೂ ವ್ಯಾವಹಾರಿಕವಾಗಿದೆ. ಮಠಮಾನ್ಯಗಳಲ್ಲೂ ಅಷ್ಟೆ. ಇದೊಂದು ದೊಡ್ಡ ಭೂತ. ಇದನ್ನು ಮಠಮಾನ್ಯಗಳು ಮತ್ತು ಜನರು ಉಭಯರೂ ಸೇರಿ ಓಡಿಸಬೇಕು. ಈ ಕೆಲಸಕ್ಕೆ ಸಿದ್ಧರಿರುವ ಮಠಗಳೆಷ್ಟು ? ಜನರೆಷ್ಟು ?

ಬಸವಣ್ಣನವರು ಹೇಳುವಂತೆ, 'ಪರರ ಡೊಂಕ ನೀವೇಕೆ ತಿದ್ದುವಿರಯ್ಯಾ? ನಿಮ್ಮ ಡೊಂಕು ನಿಮಗೆ ಸಾಲದೇ?' ಈಗೀಗ ಇಂತಹ ಜನರೇ, ಇಂತಹ ಮಠಗಳೇ ಹೆಚ್ಚೆಂದು ಹೇಳಿದರೆ ಅದೊಂದು ದುಸ್ಸಾಹಸವಾದೀತು. ಎಷ್ಟೋ ಮಠಗಳು. ಎಷ್ಟೋ ಜನರು ನಮ್ಮ ಈ ಮಾತನ್ನು ಕೇಳಿ ಮೂಗು ಮುರಿಯುತ್ತಾರೆ. ಆದರೆ ಇದು ಅಚ್ಚ ಸತ್ಯ: ನಿಚ್ಚ ಸತ್ಯ. ಯಾವ ಮಠವೇ ಆಗಲೀ, ಯಾವ ಜನರೇ ಆಗಲೀ ಇಷ್ಟು ನಿಚ್ಚಳವಾಗಿ ಹೇಳಿ ಜನರ ಅವಿಶ್ವಾಸಕ್ಕೆ ಪಾತ್ರರಾಗಲಾರರು. ಮೂಲತಃ ಜನರ ನಡವಳಿಕೆಯಲ್ಲಿ, ಜನರ ಭಾವನೆಯಲ್ಲಿ ಬದಲಾವಣೆಯಾಗಬೇಕು. ಅದಿಲ್ಲದೆ ಮಠಗಳ ಸೇವೆ ಜನತೆಯ ಸೇವೆಗಾಗಿ ಮೀಸಲಾಗುವುದೆಂತು?

ಇದು ಕಾರಣ ಭಾರತದಲ್ಲಿ ಮಠಗಳ ಮತ್ತು ಜನರ ಬುನಾದಿಯೇ ಬದಲಾವಣೆ ಹೊಂದಬೇಕು. ಹುಟ್ಟುತ್ತಲೇ ಮಠಗಳಾಗಲೀ, ಜನರಾಗಲೀ ಒಂದು ಜನಾಂಗದ, ಒಂದು ದೇಶದ ಹೆಸರು ಹೇಳಿಕೊಂಡು ಹುಟ್ಟಬಾರದು. ಉದಾಹರಣೆಗೆ ನಮ್ಮನ್ನೇ ನಮ್ಮ ಮಠವನ್ನೇ ಮುಂದಿಟ್ಟುಕೊಳ್ಳೋಣ. ಮಠಗಳ ಸೇವೆಯು ಜಾತ್ಯತೀತವಾಗಿ ಲೋಕಕ್ಕೆ ಮೀಸಲಾಗಬೇಕೆಂದೇ ನಾವು ದುಡಿಯುತ್ತಿರುವುದು. ಇದು ಅಕ್ಷರಶಃ ಸತ್ಯ. ಆದರೆ ನೀತಿಗನುಗುಣವಾಗಿ ಜನತೆಯ ರೀತಿ ನೀತಿಗಳಿಲ್ಲ. ನಾವು ಇದನ್ನು ತಿದ್ದಬಹುದೆಂದು ನಂಬಿ ಬಹಳ ಯತ್ನ ಮಾಡಿದೆವು. ಉಣ್ಣುವಾಗ, ಉಡುವಾಗ ಎಲ್ಲರೂ ಒಂದೇ. ಮಾಡುವಾಗ ನಡೆಯುವಾಗ ಅವರು ಅವರೇ, ಇವರೇ ಇವರೇ. ಇದು ಕಾರಣ ಮಠಗಳ ಸೇವೆಯು ಸಮಗ್ರವಾಗಿರಬೇಕಾಗಿದ್ದಲ್ಲಿ ಬುನಾದಿಯನ್ನೇ ಬದಲಾಯಿಸಬೇಕು. ಇಷ್ಟೊಂದು ಜಾತಿಗಳು ಮಠಗಳ ಆಧಾರದ ಮೇಲೆ ಇರಬಾರದು. ಮಠಗಳು ಅನಂತವಿರಬಹುದು. ಮಠಗಳ ಕಾರಣಕ್ಕಾಗಿ ಜನರು ಭಿನ್ನ ಭಿನ್ನವಾಗಿರಬಾರದು. ನಾವು ಒಂದು ಪ್ರಯೋಗಾತ್ಮಕವಾಗಿಯೇ ನಮ್ಮ ಮಠೀಯ ಜೀವನವನ್ನು ಮೀಸಲಿಟ್ಟಿದ್ದೇವೆ. ಆದರೆ ನಾವು ಸಫಲರಾಗಿದ್ದೇವೆಂದು ನಮಗೆ ನಂಬಿಕೆಯಿಲ್ಲ. ನಮಗೆ ಸಮಗ್ರತೆಯೆಂಬುದೊಂದು ಕನಸಾಗಿದೆ. ಅದು ನನಸಾಗಬೇಕು. ಆಗ ಮಠಗಳ ಸೇವೆಯು ಸಾರ್ಥಕವಾದೀತು. ಅಂತಹ ಕಾಲವು ನಮ್ಮ ದೇಶಕ್ಕೆ ಇನ್ನೂ ಬಂದಿಲ್ಲ, ಬರುತ್ತದೆಂಬ ವಿಶ್ವಾಸವೂ ನಮಗಿಲ್ಲ. ಸುಮ್ಮನೆ ವೃಥಾ ಎಲ್ಲಾ ಒಂದೇ ಎಂದು ಮಾತನಾಡುವ ಮಠಾಧಿಪತಿಯಾಗಲೀ ಜನತೆಯಾಗಲೀ ರಾಷ್ಟ್ರಕ್ಕೆ ಉಪಯುಕ್ತವಾಗಬಾರದು. ಇದು ನಿಷ್ಠುರ ಸತ್ಯ,

ಕನ್ನಡ ಶಿಕ್ಷಣದ ವಿವಿಧ ಹಂತಗಳು ಇರಬೇಕಾಗಿರುವ ರೀತಿನೀತಿ

ಗುಂಡ್ಮಿ, ಚಂದ್ರಶೇಖರ ಐತಾಳ

ನಾವು ಬಾಲ್ಯದಲ್ಲಿ ಶಾಲೆಗೆ ಹೋಗುತ್ತಿದ್ದಾಗ ನಮ್ಮ ಚೀಲದಲ್ಲಿ ಒಂದು ಕನ್ನಡದ ಪಠ್ಯಪುಸ್ತಕ, ಒಂದು ಮಗ್ಗಿ ಪುಸ್ತಕ, ಒಂದು ಸ್ಲೇಟು ಮಾತ್ರ ಇರುತ್ತಿದ್ದವು. ನಮ್ಮ ಅಧ್ಯಾಪಕರು ಕನ್ನಡದ ಪಾಠ ಮಾಡಿ, ಲೆಕ್ಕ ಹೇಳಿಕೊಟ್ಟು, ಮಗ್ಗಿಯನ್ನು ಬಾಯಿಪಾಠ ಮಾಡಿಸುತ್ತಿದ್ದರು. ಕನ್ನಡ ಪಾಠ ಪುಸ್ತಕದಲ್ಲಿ ಏನಾದರೂ ಪದ್ಯ ಭಾಗ ವಿದ್ದರೆ ಅದನ್ನು ಬಾಯಿಪಾಠ ಹೇಳುವುದೇ ಬಹಳ ಮುಖ್ಯವಾಗಿರುತ್ತಿತ್ತು. ಕನ್ನಡದ ಪಾಠದಲ್ಲಿ ಬಂದ ಶಬ್ದಗಳನ್ನೂ, ಇತರ ಕ್ಲಿಷ್ಟ ಪದಗಳನ್ನೂ ಉಕ್ತ ಲೇಖನ ಬರೆಯಿಸು ತ್ತಿದ್ದರು. ಅದರಲ್ಲಿ ಯಾವುದಾದರೂ ಒಂದು ಶಬ್ದವನ್ನು ತಪ್ಪಾಗಿ ಬರೆದರೆ ಅದನ್ನು ಸರಿಯಾಗಿ ಹತ್ತುಸಾರಿ ಬರೆಯುವಂತೆ ಹೇಳುತ್ತಿದ್ದರು. ಅದರಲ್ಲಿ ತಪ್ಪಾದರೆ ಅದನ್ನು ಸರಿಯಾಗಿ ಇಪ್ಪತ್ತೈದು ಬಾರಿ ಬರೆಯಿಸುತ್ತಿದ್ದರು. ಮತ್ತೂ ತಪ್ಪಾದರೆ ಅದನ್ನು ನೂರು ಬಾರಿ ಬರೆದು ತೆಗೆದುಕೊಂಡು ಹೋಗಿ ಅಧ್ಯಾಪಕರಿಗೆ ತೋರಿಸ ಬೇಕಾಗುತ್ತಿತ್ತು ! ಮತ್ತೆ ಆ ಜನ್ಮದಲ್ಲಿ ಆ ಶಬ್ದವನ್ನು ಅವನು ತಪ್ಪಾಗಿ ಬರೆಯುವುದು ಸಾಧ್ಯವಿಲ್ಲ.

ಅಧ್ಯಾಪಕರು ಬಿಡುವಿನ ವೇಳೆಯಲ್ಲಿ-ಎಂದರೆ ಪಾಠವೆಲ್ಲ ಆದ ಮೇಲೆ ಮತ್ತೂ ಶಾಲೆ ಬಿಡಲಿಕ್ಕೆ ಹೊತ್ತಿದ್ದರೆ - ರಾಮಾಯಣ, ಮಹಾಭಾರತ, ಭಾಗವತಾದಿ ಪುರಾಣ ಪ್ರಸಂಗಗಳನ್ನು ರಮ್ಯವಾಗಿ ಕಥೆಯ ರೂಪದಲ್ಲಿ ಹೇಳುತ್ತಿದ್ದರು. ನಮಗೆ ಸಣ್ಣ ತರಗತಿಗಳಲ್ಲಿ ಗೋವಿನ ಕಥೆ, ಗೋವಿನ ಹಾಡು, ಪಂಜೆಯವರ ಶಿಶುಗೀತೆಗಳು, ನೀತಿ ಪದ್ಯಗಳು, ಪುರಂದರ ಕನಕರ ಕೀರ್ತನೆಗಳು, ಹರಿಭಕ್ತಿಸಾರದ ಕೆಲವು ಪದ್ಯಗಳು, ಸರ್ವಜ್ಞನ ವಚನಗಳು, ಉದಯರಾಗ, ಜೋಗುಳದ ಹಾಡು, ಕುಮಾರವ್ಯಾಸ, ಕುಮಾರ ವಾಲ್ಮೀಕಿ, ಜೈಮಿನಿ ಭಾರತ-ಇವೆಲ್ಲ ಇರುತ್ತಿದ್ದುವು. ಅವುಗಳನ್ನು ನಾವು ಮೊದಲು ಬಾಯಿಪಾಠ ಮಾಡುತ್ತಿದ್ದೆವು. ಅವುಗಳನ್ನು ರಾಗವಾಗಿ ಹಾಡಲು ನಮ್ಮ ಅಧ್ಯಾಪಕರು ಹೇಳಿಕೊಡುತ್ತಿದ್ದರು. ಅವುಗಳನ್ನು ಹಾಡುವಾಗ ನಮಗೆ ತುಂಬ ಆನಂದವಾಗುತ್ತಿತ್ತು. ಅವು ಎಲ್ಲಿಯವು, ಅವುಗಳನ್ನು ಯಾರು ಬರೆದರು, ಅವುಗಳ ಪೂರ್ಣ ಸ್ವರೂಪ ಹೇಗಿರಬಹುದು ಎಂಬುದರ ಬಗೆಗೆ ತುಂಬ ಕುತೂಹಲ ವುಂಟಾಗುತ್ತಿತ್ತು.

ನಮ್ಮ ಅಕ್ಷರಗಳು ಚೆಂದವಾಗುವಂತೆ ನಮ್ಮ ಅಧ್ಯಾಪಕರು ಎಚ್ಚರವಹಿಸು
ದ್ದರು. ನಿತ್ಯವೂ ಒಂದು ಪುಟ Copy ಬರೆಯುವುದು ಕಡ್ಡಾಯ. ಅದ
ಅಂಕಗಳಿವೆ. ನಾನು ಏಳನೆಯ ತರಗತಿಯವರೆಗೆ Copy ಬರೆದಿದ್ದೇನೆ. ನ
ಏಳನೆಯ ತರಗತಿಯಾಗುವುದರಲ್ಲಿ ಕನ್ನಡದಲ್ಲಿ ತಪ್ಪಿಲ್ಲದೆ ಬರೆಯುವುದು ಅಭ್ಯಾ
ವಾಗಿತ್ತು. ಈಗ ಶಿಕ್ಷಣ ಕೇವಲ ಉದ್ಯೋಗಕ್ಕಾಗಿಯೋ ಪದವಿಗಾಗಿಯೋ ಇದೆಯೆ
ವಿನಃ ಜ್ಞಾನಕ್ಕಾಗಿ ಅಲ್ಲ. ಹಾಗಾಗಿ ಇಂದು ನಿಜವಾದ ಶಿಕ್ಷಣ ಸಿಕ್ಕುತ್ತಿಲ್ಲ. ಇಂದ
ಮೊದಲು ಓದುವ ಪದಗಳೇ 'ಕಮಲಿ, ಬಸವ' ! ನಮಗೆ 'ದೇವರ ಭಯವೇ ಜ್ಞಾನ
ಆರಂಭ' ಎಂಬುದನ್ನೂ Copy ಬರೆಯಲು ಮೇಲ್ಪಂಕ್ತಿಯಾಗಿ ಹಾಕಿಕೊಟ್ಟರು.
ಇದು ಇಂದಿಗೂ ಮೇಲ್ಪಂಕ್ತಿಯಾಗಿರಬೇಕಾದ ಸೂಕ್ತಿ. ಆದರೆ ಇಂದಿನ ನಾಸ್ತಿ
ಜಗತ್ತಿನಲ್ಲಿ ದೇವರ ಭಯವೂ ಇಲ್ಲ ; ಜ್ಞಾನದ ಆರಂಭವೂ ಇಲ್ಲ !

ನಾನು ಎರಡನೆಯ ತರಗತಿಯಲ್ಲಿದ್ದಾಗ ನಮ್ಮ ಜಿಲ್ಲೆಯ ವಿದ್ಯಾಧಿಕಾರಿಗಳ
ನನ್ನ ತರಗತಿಗೆ ಬಂದರು. ಅವರನ್ನು ಆಗ D.E.O. ಎಂದು ಕರೆಯುತ್ತಿದ್ದರ
ಅವರ ಹೆಸರು ಸಂಜೀವರಾಯರು. ನೇರವಾಗಿ ಬಂದು ಕನ್ನಡದಲ್ಲಿ ಹತ್ತು ಶ
ಗಳನ್ನು ಬರೆಯುವಂತೆ ಉಕ್ತಲೇಖನ ಬರೆಯಿಸಿದರು. ನಾನು ಎಲ್ಲ ಹತ್ತು ಶ
ಗಳನ್ನು ತಪ್ಪಿಲ್ಲದೆ ಬರೆದುದನ್ನು ಕಂಡು ಅವರು ನನ್ನ ಬೆನ್ನ ಮೇಲೆ ತಟ್ಟಿ ಪ್ರೋತ್ಸಾಹಿ
ದರು. ಆನಂತರ ಯಾವುದೋ ಒಂದೆರಡು ಲೆಕ್ಕ ಮಾಡಲು ಕೊಟ್ಟರು. ಇ
ನಮ್ಮ ಪರೀಕ್ಷೆಯಾಗಿತ್ತು. ಈಗ ದೊಡ್ಡ ದೊಡ್ಡ ವಿದ್ವಾಂಸರೆನ್ನಿಸಿಕೊಂಡವರು
ತಪ್ಪುತಪ್ಪಾಗಿ ಬರೆದು ಅದು ಭಾಷೆಯ ಬೆಳವಣಿಗೆ ಎಂದು ಸಮರ್ಥಿಸಿಕೊಳ್ಳುತ್ತಾರೆ

ನಮ್ಮ ಪ್ರಾಥಮಿಕ ಶಾಲೆಯಲ್ಲಿ ಪ್ರತಿ ಶುಕ್ರವಾರದ ಸಂಜೆ ಭಜನೆ ಇರುತ್ತಿತ್ತು
ನಾವು ಅದರಲ್ಲಿ ಭಾಗವಹಿಸುತ್ತಿದ್ದೆವು. ಮುಖ್ಯೋಪಾಧ್ಯಾಯರೂ, ಇತರ ಅಧ್ಯಾ
ಕರೂ, ದೇವರ ನಾಮಗಳನ್ನೂ, ಕೀರ್ತನೆಗಳನ್ನು ಹೇಳಿಕೊಡುತ್ತಿದ್ದರು. ನಾವೆಲ್ಲರ
ವೃತ್ತಾಕಾರವಾಗಿ ನಿಂತು ತಾಳಹಾಕಿ ಕುಣಿದು ಅವುಗಳನ್ನು ಹಾಡುತ್ತಿದ್ದೆವು
ಇದರಿಂದ ರಾಗ ತಾಳ ಜ್ಞಾನವಾಗುತ್ತಿತ್ತು. ಅನೇಕ ಕೀರ್ತನೆಗಳು ಬಾಯಿಗೆ ಬಂದುವು
ದೇವರ ಮೇಲೆ ಭಕ್ತಿ ಉಂಟಾಯಿತು. ಭಜನೆ ಆದ ಮೇಲೆ ದೇವರ ನೈವೇದ್ಯವಾ
ಪಂಚಕಜ್ಜಾಯ, ಹುಳಿಅವಲಕ್ಕಿ, ಬೇಯಿಸಿದ ಕಡಲೆ, ಬಾಳೆಹಣ್ಣು, ಪಾನಕ. ಕೋಸು
ಬರಿ, ತೆಂಗಿನಕಾಯಿಯ ಚೂರು-ಇವೆಲ್ಲ ಸಿಕ್ಕುತ್ತಿದ್ದುವು. ಅಂದಿನ ದಿನಗಳಲ್ಲಿ ಶಾಲೆ
ಹೋಗುವುದೆಂದರೆ ಏನೋ ಒಂದು ರೀತಿಯ ಖುಷಿಯಾಗುತ್ತಿತ್ತು. ಯಾರು
ಶಾಲೆಗೆ ತಪ್ಪಿಸಿಕೊಳ್ಳುತ್ತಿರಲಿಲ್ಲ, ಕಾಯಿಲೆ ಏನಾದರೂ ಬಂದರೆ ವಿನಾ.

ನಾನು ನನ್ನ ಎಂ.ಎ., ತರಗತಿಯ ವಿದ್ಯಾರ್ಥಿಗಳು ತಪ್ಪು ಬರೆಯುವುದನ್
ನೋಡಿ ಸಂಕಟಪಟ್ಟು ಅವರು ಸರಿಯಾಗಿ ಹತ್ತೋ ಇಪ್ಪತ್ತೈದು ಬಾರಿಯೋ ಬರೆಯು
ವಂತೆ ಮಾಡಿ ಸರಿಪಡಿಸಿದ್ದುಂಟು. ಅದನ್ನು ಕಂಡ ನಮ್ಮ ಪ್ರಾಧ್ಯಾಪಕರು ನನ್ನನ್

ಹಾಸ್ಯ ಮಾಡಿದ್ದುಂಟು : 'ಅವರನ್ನು ಇನ್ನು ತಿದ್ದುವುದಕ್ಕೆ ಬ್ರಹ್ಮನಿಂದಲೂ ಸಾಧ್ಯವಿಲ್ಲ'. ಎಂ.ಎ., ವಿದ್ಯಾರ್ಥಿಗಳು ಅವರ ಉತ್ತರ ಪತ್ರಿಕೆಗಳಲ್ಲಿ ಬರೆದ ಕೆಲವು ತಪ್ಪುಗಳ ಪಟ್ಟಿಯನ್ನು ಈ ಕೆಳಗೆ ಕೊಡುತ್ತೇನೆ. ಅವರನ್ನು ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆಗಳಲ್ಲಿ ತಿದ್ದಲಿಲ್ಲ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ :

(i) ಅಲ್ಪಪ್ರಾಣ ಮಹಾಪ್ರಾಣದ ತಪ್ಪುಗಳು

ತಪ್ಪು	ಸರಿ
ವಿಧ್ವಾಂಸ	ವಿದ್ವಾಂಸ
ಧೃಡತೆ	ದೃಢತೆ
ಧಾರ್ಢ್ಯ	ದಾರ್ಢ್ಯ
ಗಧಾಯುದ್ಧ	ಗದಾಯುದ್ಧ
ಸಂಭೋಧನೆ	ಸಂಬೋಧನೆ
ಮದ್ಯ	ಮಧ್ಯೆ
ಮಧ್ಯ	ಮದ್ಯ
ಸಂಖೇತ	ಸಂಕೇತ
ಆಕ್ರಂಧನ	ಆಕ್ರಂದನ
ಎಂಥಹ	ಎಂತಹ, ಎಂಥ
ವ್ಯಷ್ಠಿ	ವ್ಯಷ್ಟಿ
ಸಮಷ್ಠಿ	ಸಮಷ್ಟಿ
ಸ್ಪರ್ಷ	ಸ್ಪರ್ಶ
ಘಾಡ	ಗಾಢ
ಘರ್ಜನೆ	ಗರ್ಜನೆ
ಪ್ರಭಲ	ಪ್ರಬಲ
ಮುಕ್ಯ	ಮುಖ್ಯ
ನಿಷ್ಟೆ	ನಿಷ್ಠೆ
ಶ್ರೇಷ್ಟ	ಶ್ರೇಷ್ಠ
ಸೌಂಧರ್ಯ	ಸೌಂದರ್ಯ
ಧೀರ್ಘ	ದೀರ್ಘ
ಭೋದನೆ	ಬೋಧನೆ
ವಿಧ್ಯೆ	ವಿದ್ಯೆ
ಉಪಾದ್ಯಾಯ	ಉಪಾಧ್ಯಾಯ
ವಿಧ್ಯಾರ್ಥಿ	ವಿದ್ಯಾರ್ಥಿ
ಗುಲಾಭಿ	ಗುಲಾಬಿ
ಮುಷ್ಠಿ	ಮುಷ್ಟಿ
ಛಂಧಸ್ಸು	ಛಂದಸ್ಸು
ವಿಧ್ಯಾಲಯ	ವಿದ್ಯಾಲಯ
ಸ್ಪೂರ್ತಿ	ಸ್ಫೂರ್ತಿ
ಪ್ರಸ್ಥುತ	ಪ್ರಸ್ತುತ
ಅಸ್ಥಿತ್ವ	ಅಸ್ತಿತ್ವ

ಪ್ರಸ್ತಭೂಮಿ	ಪ್ರಸ್ಥಭೂಮಿ
ಫ್ರೌಡಾವಸ್ತೆ	ಪ್ರೌಢಾವಸ್ಥೆ
ಸೂರ್ಯಾಸ್ಥಮಾನ	ಸೂರ್ಯಾಸ್ತಮಾನ
ಭೂಯಿಷ್ಟ	ಭೂಯಿಷ್ಠ
ಪ್ರುಷ್ಠಿ	ಪುಷ್ಟಿ
ಷಷ್ಟಿ ವಿಭಕ್ತಿ	ಷಷ್ಠೀವಿಭಕ್ತಿ
ಷಷ್ಠ್ಯಬ್ದಿ	ಷಷ್ಟ್ಯಬ್ದ
ಬೇಧ	ಭೇದ
ಸ್ವಚ್ಚಂಧ	ಸ್ವಚ್ಛಂದ
ಅದ್ಯಾಹಾರ	ಅಧ್ಯಾಹಾರ
ರಸನಿಷ್ಟ	ರಸನಿಷ್ಠ
ಸಂಭಂದ	ಸಂಬಂಧ
ನಿಧಾರ್ಕ್ಷಿಣ್ಯ	ನಿರ್ದಾಕ್ಷಿಣ್ಯ
ದ್ರುಷ್ಯ	ದೃಶ್ಯ
ವಿಶಯ	ವಿಷಯ
ನಿರ್ದಿಷ್ಠ	ನಿರ್ದಿಷ್ಟ
ಪ್ರಸ್ಥಾಪ	ಪ್ರಸ್ತಾಪ
ಸುಧ್ಧಿ	ಸುದ್ದಿ
ಉಧ್ಯಾನ	ಉದ್ಯಾನ
ಶೋಖ	ಶೋಕ
ಶತೃ	ಶತ್ರು
ಮಧುಮಗಳು	ಮದುಮಗಳು
ಭಲರಾಮ	ಬಲರಾಮ
ಧುರ್ಯೋಧನ	ದುರ್ಯೋಧನ
ಡಿಂಢಿಮ	ಡಿಂಡಿಮ
ಗಾಂಢೀವಿ	ಗಾಂಡೀವಿ

ಈ ಪಟ್ಟಿ ಇನ್ನೂ ಇದೆ. ಆದರೆ ಅದನ್ನು ಬೆಳೆಸಲು ನಾನು ಹೋಗುವುದಿಲ್ಲ. ದೀರ್ಘ ಹ್ರಸ್ವಗಳ ವ್ಯತ್ಯಾಸ ತಿಳಿಯದಿರುವುದಕ್ಕೆ ಕೆಲವು ಉದಾಹರಣೆಗಳನ್ನು ನಾವು ನೋಡಬಹುದು.

(ii) ದೀರ್ಘ ಹ್ರಸ್ವ ವ್ಯತ್ಯಾಸ

ತಪ್ಪು	**ಸರಿ**
ಜನಪ್ರೀಯತೆ	ಜನಪ್ರಿಯತೆ
ನಾಗರೀಕತೆ	ನಾಗರಿಕತೆ
ಸಾಹಿತ್ಯ ಪ್ರಾಕಾರ	ಸಾಹಿತ್ಯ ಪ್ರಕಾರ
ಅತೀ ಪ್ರಾಮುಖ್ಯ	ಅತಿ ಪ್ರಾಮುಖ್ಯ
ಸದಾವಕಾಶ	ಸದವಕಾಶ
ಆಲಂಕಾರಿಕರು	ಆಲಂಕಾರಿಕರು

ಸಂಚಾರೀ ಭಾವ	ಸಂಚಾರಿ ಭಾವ
ಸ್ಥಾಯೀ ಭಾವ	ಸ್ಥಾಯಿಭಾವ
ದ್ವಾಪರಾ ಯುಗ	ದ್ವಾಪರ ಯುಗ
ಶಾಕುಂತಲಾ ನಾಟಕ	ಶಾಕುಂತಲ ನಾಟಕ
ಅಸ್ವಾದ್ಯ	ಆಸ್ವಾದ್ಯ
ಭಯಾನಕಾ	ಭಯಾನಕ
ಪರಾಬ್ರಹ್ಮ	ಪರಬ್ರಹ್ಮ
ಸಮಾಜಿಕ	ಸಾಮಾಜಿಕ
ಅವಶ್ಯಕತೆ	ಆವಶ್ಯಕತೆ
ಸ್ವಾಭಾವ	ಸ್ವಭಾವ
ಸಾಮಾಗ್ರಿ	ಸಾಮಗ್ರಿ
ವಾಸ್ತವೀಕತೆ	ವಾಸ್ತವಿಕತೆ
ಸುತಾವತಾರ	ಸೂತಾವತಾರ
ಸಾಮಾರ್ಥ್ಯ	ಸಾಮರ್ಥ್ಯ

ಈಗ ಗಟ್ಟಿಯಾಗಿ ಬಾಯಿಬಿಟ್ಟು ಉಚ್ಚರಿಸುವ ಅಭ್ಯಾಸ ಇಲ್ಲದಿರುವುದರಿಂದ ಅಂಥ ಅನೇಕ ದೋಷಗಳು ಉಳಿಯುತ್ತವೆ.

(iii) ಉಚ್ಚಾರ ದೋಷದಿಂದಾಗಿ ತಪ್ಪು

ತಪ್ಪು	ಸರಿ
ಈಗೆ	ಹೀಗೆ
ಆಸನ	ಹಾಸನ
ಆತ್ಮಅತ್ಯೆ	ಆತ್ಮಹತ್ಯೆ
ಹಾದರ	ಆದರ
ಅಂಸ	ಹಂಸ
ಪುಃನ	ಪುನಃ
ಸುಃಖ	ಸುಖ
ಸನ್ಯಾಸಿ	ಸಂನ್ಯಾಸಿ
ವಿನಹ, ವಿನಃ, ವಿನಾಹ, ವಿನಹಾ, ವಿನಾಃ	ವಿನಾ
ಸ್ವಾರಶ್ಯ	ಸ್ವಾರಸ್ಯ
ಆಶ್ವಾದನೆ	ಆಸ್ವಾದನೆ
ತಕ್ಷಣ	ತತ್‌ಕ್ಷಣ
ನಿಸ್ಪತ್ತಿ	ನಿಷ್ಪತ್ತಿ
ಪ್ರಶಿದ್ಧ	ಪ್ರಸಿದ್ಧ
ಆವೇಷ	ಆವೇಶ
ವಿಶ್ಲೇಶಿಸು	ವಿಶ್ಲೇಷಿಸು

(iv) ರೂಪ ಸಾಮ್ಯದಿಂದಾಗುವ ತಪ್ಪು

ತಪ್ಪು	ಸರಿ
ಸುಯ್ಯೋಧನ	ಸುಯೋಧನ
ಬೈಯು	ಬಯ್ಯು
ಸುಃಖ	ಸುಖ
ಕೌಶಲ್ಯತೆ	ಕೌಶಲ್ಯ
ಪ್ರಾಮುಖ್ಯತೆ	ಪ್ರಾಮುಖ್ಯ
ವೈವಿಧ್ಯತೆ	ವೈವಿಧ್ಯ
ಪಾಧಾನ್ಯತೆ	ಪ್ರಾಧಾನ್ಯ
ಉದ್ಯಾವನ	ಉದ್ಯಾನ ಉದ್ಯಾನವನ
ವ್ಯಕ್ತಿತ್ತ್ವ	ವ್ಯಕ್ತಿತ್ವ
ನಾಯ್ಯ	ನ್ಯಾಯ

(v) ತಪ್ಪು ತಿಳಿವಳಿಕೆ ಅಥವಾ ಅಜ್ಞಾನ

ಈ ವಿಭಾಗದಲ್ಲಿ ಕಾಣುವ ಶಬ್ದಗಳು ತಪ್ಪು ಎಂಬುದು ವಿದ್ಯಾರ್ಥಿಗಳಿಗೆ ಗೊತ್ತೇ ಇಲ್ಲ : ಎಂದರೆ ಅವುಗಳನ್ನು ತಪ್ಪಾಗಿ ಬರೆದಾಗ ಅವುಗಳನ್ನು ತಿದ್ದಿದವರೇ ಇಲ್ಲ.

ತಪ್ಪು	ಸರಿ
ತುಮಲ	ತುಮುಲ
ನೆಡೆ	ನಡೆ
ನೆಡೆವಳಿಕೆ	ನಡೆವಳಿಕೆ
ತತ್ವ	ತತ್ತ್ವ
ಮಹತ್ವ	ಮಹತ್ತ್ವ
ಸತ್ವ	ಸತ್ತ್ವ
ವೈಯುಕ್ತಿಕ	ವೈಯಕ್ತಿಕ
ಗೀತೆ	ಗೀತ
ಸೋಪಜ್ಞತೆ	ಸ್ವೋಪಜ್ಞತೆ
ಸನ್ಯಾಸಿ	ಸಂನ್ಯಾಸಿ
ಮೌನ, ಮೌಢ್ಯ, ಮೌಲ್ಯ, ಇತ್ಯಾದಿ	ಮೌನ, ಮೌಢ, ಮೌಲ್ಯ
ಇಲ್ಲಿಯೂ ಕೂಡ	ಇಲ್ಲಿಯೂ, ಇಲ್ಲಿ ಕೂಡ
ಒಟ್ಟರ್ಥ	ತಾತ್ಪರ್ಯ
ಅಜಗಜಾಂತರ ವ್ಯತ್ಯಾಸ	ಅಜಗಜಾಂತರ ಅಜಗಜ ವ್ಯತ್ಯಾಸ
ತಕ್ಷಣ	ತತ್‌ಕ್ಷಣ, ತತ್ಕ್ಷಣ

ಸರ್ವೇ ಸಾಮಾನ್ಯ	ಸರ್ವಸಾಮಾನ್ಯ
ಮುಂದುವರೆದು	ಮುಂದುವರಿದು
ತುಟ್ಟ ತುದಿ	ತುತ್ತ ತುದಿ
ಮೊಟ್ಟ ಮೊದಲು	ಮೊತ್ತ ಮೊದಲು
ಮುಖಾಂತರ	ಮೂಲಕ, ಮುಖೇನ
ಕಾಯಾ ವಾಚಾ ಮನಸಾ	ಕಾಯೇನ ವಾಚಾ ಮನಸಾ
ಪ್ರಾಯಶಃ	ಪ್ರಾಯಃ
ಪ್ರಸ್ತಾಪ, ಪ್ರಸ್ತಾಪಿಸು	ಪ್ರಸ್ತಾವ, ಪ್ರಸ್ತಾವಿಸು
ದುಃಶ್ಯಾಸನ	ದುಶ್ಯಾಸನ ದುಃಶಾಸನ
ನಂತರ	ಅನಂತರ ಬಳಿಕ, ಆಮೇಲೆ, ಮತ್ತೆ

ಇತ್ಯಾದಿ

ಈ ಪಟ್ಟಿಯನ್ನು ಬಹಳ ವರ್ಷದ ಅಧ್ಯಾಪನದ ಅನುಭವದಿಂದ ಮುಂದುವರಿಸಬಹುದು. ಇಲ್ಲಿ ಮಾರ್ಗದರ್ಶನಕ್ಕಾಗಿ ಕೆಲವನ್ನು ಮಾತ್ರ ಕೊಡಲಾಗಿದೆ. ಏಕೆ ಹೀಗಾಗುತ್ತದೆ ? (೧) ವಿದ್ಯಾರ್ಥಿಗಳಲ್ಲಿ ಸರಿಯಾಗಿ ಎಂದರೆ ತಪ್ಪಿಲ್ಲದೆ ಬರೆಯುಬೇಕೆಂಬ ಶ್ರದ್ಧೆ ಇಲ್ಲ. (2) ಅಧ್ಯಾಪಕರಲ್ಲಿಯೂ ಯಾವುದು ತಪ್ಪು, ಯಾವುದು ಸರಿ ಎಂಬ ನಿಷ್ಕೃಷ್ಟ ಜ್ಞಾನವಿಲ್ಲ. ಈಗಿನ ಅಧ್ಯಾಪಕರಿಗೆ ಸಂಸ್ಕೃತದ ಸರಿಯಾದ ಹಿನ್ನೆಲೆಯಿಲ್ಲ. ಆದ್ದರಿಂದ ತಪ್ಪು ಒಪ್ಪು ಗೊತ್ತಾಗುವುದಿಲ್ಲ. (3) ಉದಾಸೀನತೆ (4) Mass Education. (5) ಶಿಕ್ಷಣ ಕ್ಷೇತ್ರದಲ್ಲಿ ಯೋಗ್ಯತೆಗೆ ಅವಕಾಶವಿರಬೇಕೇ ಹೊರತು ಇಂಥಿಂಥವರಿಗೆ ಇಷ್ಟಿಷ್ಟು ಸ್ಥಾನ ಕಾದಿರಿಸುವಿಕೆ (Reservation) ಕೂಡದು. ಜಾತಿಬಲದವನಿಗೆ ವಿದ್ಯಾಬಲವಿರಬೇಕೆಂದೇನಿಲ್ಲ. ಯಾವ ಜಾತಿಯವನೇ ಇರಲಿ ಅವನಲ್ಲಿ ಅಧ್ಯಾಪಕನಿಗಿರಬೇಕಾದ ಅರ್ಹತೆ ಇದ್ದಲ್ಲಿ ಮಾತ್ರ ಅವನನ್ನು ನೇಮಿಸಬೇಕು. ನಿನ್ನ ದೇಶದ ಶಿಕ್ಷಕರು ಹೇಗೆ ಎಂದು ಹೇಳು ; ನಿನ್ನ ದೇಶ ಹೇಗೆ ಎಂಬುದನ್ನು ನಾನು ಹೇಳುತ್ತೇನೆ. ಅಧ್ಯಾಪಕನಲ್ಲಿ ಈ ಲಕ್ಷಣಗಳು ಅಗತ್ಯ.

1. ಉಚ್ಚಾರ ಶುದ್ಧಿ
2. ಆಚಾರ ಶುದ್ಧಿ
3. ಓದುವ ಬುದ್ಧಿ
4. ವಿನಯ
5. ತಾಳ್ಮೆ
6. ಕರ್ತವ್ಯ ಶ್ರದ್ಧೆ

ಇವು ಇಂದು ಎಷ್ಟು ಜನ ಶಿಕ್ಷಕರಲ್ಲಿ ಇವೆ ಎಂದು ಪ್ರಶ್ನಿಸಿದರೆ ಉತ್ತರ ಸಿಕ್ಕುವು ದುರ್ಲಭ.

ಬ್ರಾಹ್ಮಣನ ಷಟ್ಕರ್ಮಗಳಲ್ಲಿ ಅಧ್ಯಾಪನವೂ ಒಂದು. ಅವನಲ್ಲಿ ಮೇ ಹೇಳಿದ ಲಕ್ಷಣಗಳು ಸಂಸ್ಕಾರ ವಿಶೇಷದಿಂದ ಬಂದಿರುವುದರಿಂದ ಅವನು ಶ್ರೇಷ್ಠ ಶಿ ನಾಗಲು ಅರ್ಹ. ಬೇರೆಯವರು ಅಲ್ಲ ಅಥವಾ ಇಲ್ಲ ಎಂದು ಇದರ ಅರ್ಥವ ಆದುದರಿಂದ ನಮ್ಮ ದೇಶ ಉದ್ಧಾರವಾಗಬೇಕೆಂಬವರು ಮೇಲೆ ಹೇಳಿದ ಲಕ್ಷಣಗಳಿರು ಅಧ್ಯಾಪಕರನ್ನು ನಿಯೋಜಿಸಲಿ. ಯಾರೇ ಆಗಲಿ, ತನ್ನ ಅಧ್ಯಾಪಕನ ಹೆಸರನ್ನು ಹೇ ಕೊಳ್ಳಲು ಹೆಮ್ಮೆಪಡುವಂತಿರಬೇಕು. ಎಷ್ಟು ಜನರಿಗೆ ಆ ಸೌಭಾಗ್ಯವಿದೆ? ನವ ಇಂದಿನ ಶಿಕ್ಷಕರಲ್ಲಿ ಹೆಚ್ಚಿನವರು ಬೀಡಿ ಸಿಗರೇಟು ಸೇದಿಕೊಂಡು, ಸೋಮಾರಿಗಳಾ ಬಿಡುವಿನ ವೇಳೆ ಇಸ್ಪೀಟು, ಸಿನೆಮಾ ಮೊದಲಾದ ಹವ್ಯಾಸಗಳಲ್ಲಿ ನಿರತರಾಗಿ ಇಂದ್ರಿ ಗಳಿಗೆ ದಾಸರಾಗಿರುವ ಬಡಪಾಯಿಗಳು. ಅವರ ಜೀವನದಲ್ಲಿ ಯಾವ ತ್ಯಾಗವಾ ಆದರ್ಶವಾಗಲಿ, ಸೇವಾ ಮನೋಭಾವವಾಗಲಿ, ವಿನಯ, ತಾಳ್ಮೆಗಳಾಗಲಿ ಇ ಕರ್ತವ್ಯ ಶ್ರದ್ಧೆಯಂತೂ ಮೊದಲೇ ಇಲ್ಲ. ಸಂಬಳದ ಸಿಪಾಯಿಗಳು ; ಓದುವ ಬು ಲದ್ದಿ-ಎಂದರೆ ಕಳಪೆ ಸಾಹಿತ್ಯ ಓದಿಕೊಂಡು ತಾವು ವಿದ್ವಾಂಸರೆನ್ನಿಸಿಕೊಂಡವರ ಹೀಗಾಗಬಾರದು. ಇಂಥವರು ಶಿಕ್ಷಣಕ್ಷೇತ್ರಕ್ಕೆ ಕಾಲಿಡಬಾರದು.

ಕನ್ನಡದ ಶಿಕ್ಷಣ ಆದರ್ಶಪ್ರಾಯವಾಗಬೇಕಾದರೆ ಈ ವಿಚಾರಗಳನ್ನು ದೃ ಯಲ್ಲಿಟ್ಟುಕೊಂಡು ಅಧ್ಯಾಪಕರನ್ನು ಆರಿಸಬೇಕು. ಅವನಲ್ಲಿ ಅಧ್ಯಾಪಕನಾಗಿರಬೇಕಾ ಎಲ್ಲ ಅರ್ಹತೆಗಳೂ ತಪ್ಪದೆ ಇರಬೇಕು. ಮೀಸಲಾತಿ ದೇಶಕ್ಕೆ ಫಜೀತಿ, ನವ ಮುಂದಿನ ಜನಾಂಗವನ್ನು ಯೋಚಿಸಿದರೆ ಹೆದರಿಕೆಯಾಗುತ್ತದೆ.

ಇಂದು ಪಠ್ಯಪುಸ್ತಕ ಸಮಿತಿಯಲ್ಲಿ ಏನಾಗುತ್ತಿದೆ? ಅಲ್ಲಿ ಯೋಗ್ಯರು ಹೆಚ್ಚಾ ಇರುವುದಿಲ್ಲ. ಲಂಚ, ಸ್ವಜನ ಪಕ್ಷಪಾತ, ಜಾತೀಯತೆ, ಪ್ರಭಾವ ಇವುಗಳಿಂದ ಪ್ರ ಯೊಂದು ಸಮಿತಿಯೂ ನರಳುತ್ತಿದೆ. ಅದರಿಂದ ಒಳ್ಳೆಯ ಪಠ್ಯಪುಸ್ತಕ ನವ ಮಕ್ಕಳಿಗೆ ಸಿಕ್ಕುತ್ತಿಲ್ಲ, ಸರಕಾರವು ಪ್ರಾಥಮಿಕ ಪಠ್ಯಪುಸ್ತಕ ಸಮಿತಿ, ಪ್ರೌಢಶಾಲ ಪಠ್ಯಪುಸ್ತಕ ಸಮಿತಿ, ಕಾಲೇಜು ಪಠ್ಯಪುಸ್ತಕ ಸಮಿತಿಗಳನ್ನು ನೇಮಿಸಿ ಅವರಲ್ಲಿ ನಿ ವಾಗಿ ಪಾಠ ಮಾಡಿದವರೂ, ಪ್ರತಿಭಾವಂತರೂ ಆದ ಅಧ್ಯಾಪಕರನ್ನು ಮಾತ್ರ ಸದಸ ರಾಗಿರುವಂತೆ ಮಾಡಬೇಕು. ಈಗ ಇರುವಂತೆ ವಿಶ್ವವಿದ್ಯಾನಿಲಯಗಳ ಪ್ರಾಧ್ಯಾಪಕ ಎಲ್ಲ ಸಮಿತಿಗಳಲ್ಲೂ ಇರುವುದು ಸರಿಯಲ್ಲ. ನಮ್ಮವರು ತಮ್ಮವರು ಎನ್ನದೆ ಗುಣ ಪ್ರಾಶಸ್ತ್ಯ ನೀಡುವವರು ಅಲ್ಲಿದ್ದರೆ ನಮ್ಮ ಕನ್ನಡದ ಶಿಕ್ಷಣ ಸುಧಾರಿಸೀತು.

ಒಳ್ಳೆಯ ಗ್ರಂಥಗಳನ್ನು ಸಮರ್ಥ ಅಧ್ಯಾಪಕರಿಂದ ಪಾಠ ಹೇಳಿಸಿದಾಗ ಆದ ಪರಿಣಾಮವೇ ಬೇರೆ, ಮಹಾ ಮಹಾ ವಿದ್ವಾಂಸರೂ, ಪ್ರತಿಭಾವಂತರಾದ ಅಧಿಕಾ

ಗಳೂ ಮೇಲಿನ ಅಂತಸ್ತಿನಲ್ಲಿದ್ದಾಗ ಇವೆಲ್ಲ ಸರಿಯಾಗುವುದು. ಅಧ್ಯಾಪಕರನ್ನು ಆರಿಸುವಾಗಲೂ ಸರಕಾರದವರೇ ಬಹಿರಂಗವಾಗಿ ಲಂಚವನ್ನು ಬೇಡಲು ಅಧ್ಯಾಪಕ ವೃತ್ತಿಯ ಘನತೆ ಎಲ್ಲಿ ಉಳಿಯಿತು ! ಲಂಚ ಕೊಟ್ಟು ನಿಯೋಜಿತನಾದ, ಜಾತಿನೋಡಿ ನೇಮಕವಾದ ಶಿಕ್ಷಕನಿಂದ ಯಾವ ಶಿಕ್ಷಣ ಉದ್ಧಾರವಾದೀತು. ಆದ್ದರಿಂದ ಇಂದಿನ ಕನ್ನಡದ ಶಿಕ್ಷಣ ದುರವಸ್ಥೆಗಿಳಿದಿದೆ. ಕನ್ನಡ ಎಂ.ಎ.,ಯ ವಿದ್ಯಾರ್ಥಿಗಳು ಬರೆಯುವ ಕನ್ನಡ ಹೀಗಾಗಿರಲು ಲಂಚ, ಪ್ರಭಾವ, ಜಾತೀಯತೆ, ಅನರ್ಹರ ಆರಿಸುವಿಕೆಯೇ ಕಾರಣ. ಈ ಕೆಳಗಿನ ಪಟ್ಟಿಯಲ್ಲಿರುವ ಮಾತುಗಳನ್ನು ಕನ್ನಡದ ಎಂ.ಎ., ವಿದ್ಯಾರ್ಥಿಗಳು ಬರೆದಿದ್ದಾರೆ ಎಂದರೆ ನೀವು ನಂಬಲಿಕ್ಕಿಲ್ಲ.

ಸತ್ಯಂ ವಧ ದರ್ಮಂ ಚರ
ಸತ್ತ್ಯಂ ಶಿವಂ ಸುಂದರಂ
ಸಮುಪರ್ಣೆ
ಧರಣಿ ಮಂಡಲ ಮದ್ಯದೊಳಗೆ
ಉತ್ತಮ್ಮ ಸಾಹಿತ್ಯ
ನಾಯಿಸೇನ (ನಯಸೇನ ಎಂಬುದಕ್ಕೆ)
ವಾಜ್ಞ್ಮ್ಮಯ
ಕೌಂಚಹಕ್ಕಿ
ದುಶ್ಯಂತ
ಶಂಕುಂತಲೆ
ಶಾಕುಂತಲೆ
ಮಿಮಾಂಸಕ
ಆದ್ಯಾಹಾರ
ಛರ್ಚೆ
ಉತ್ತಂಗ ಶಿಖರ
ಪರಿವಾಪ್ತಿ
ಸಮಾಜಿಕ
ಹರಿಚಂದ್ರ
ಯಮುನಕ್ಕ (ಯಮುನಕ್ಕ ಎಂಬುದಕ್ಕೆ)
ಗಂಟಾಘೋಶ
ವಂಶಂಪಾಯನ
ಆಶ್ರಯಧಾತ
ಚಿಂತ್ರಾಗಂದ (ಚಿತ್ರಾಂಗದಾ ಎಂಬುದಕ್ಕೆ)

ಗದಾಯುದ್ಧ
ಸಂತಾಪ ನುಡಿ (ಸಾಂತ್ವನದ ನುಡಿ ಎಂಬುದಕ್ಕೆ)
ಆಶಕ್ತಿ (ಆಸಕ್ತಿ ಎಂಬುದಕ್ಕೆ)

ಇತ್ಯಾದಿ, ಇತ್ಯಾದಿ

ಈ ಪಟ್ಟಿ ಬರಿಯ ಮಾದರಿ, ಅಷ್ಟೇ. ಇದೇ ರೀತಿಯ ಇನ್ನೆಷ್ಟೋ ಅಸಂಬದ್ಧತೆಗಳು ರಾಶಿರಾಶಿಯಾಗಿವೆ. ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆಗಳ ಹಂತದಲ್ಲಿ ತಿದ್ದಬೇಕಾದ ತಪ್ಪುಗಳು ಹಾಗೆಯೇ ಉಳಿದಿವೆ. ದೊಡ್ಡ ದೊಡ್ಡ ಅಧಿಕಾರಿಗಳೂ, ಪ್ರೊಫೆಸರುಗಳೂ ವೇದಿಕೆಗಳಲ್ಲಿ ಅಬದ್ಧಗಳನ್ನೂ ಅಸಂಬದ್ಧತೆಗಳನ್ನೂ ಅಮೃತ ವಾಕ್ಯಗಳೆಂಬಂತೆ ಹೇಳುವಾಗ ಅಯ್ಯೋ ಎನ್ನಿಸುತ್ತದೆ. ತಪ್ಪಿಲ್ಲದಿರುವುದೇ ಜ್ಞಾನ. ವಿದ್ಯೆ, ಶಿಕ್ಷಣ. ಒಂದು ಯಂತ್ರದಲ್ಲಿ ಒಂದು ಸ್ಕ್ರೂ, ನಟ್ ಹಾಕುವುದನ್ನು ಮರೆತರೆ ಯಂತ್ರ ಹಾಗೆಯೇ ಕಾಣಿಸುತ್ತದೆ; ಆದರೆ ಅಪಘಾತ ಸಂಭವಿಸುವುದೇನೂ ತಪ್ಪುವುದಿಲ್ಲ. ಹಾಗೆಯೇ ಕನ್ನಡ ಭಾಷೆಯ ಲಕ್ಷಣ ಇದು; ಇದು ಅದರ ವ್ಯಾಕರಣ; ಇದು ಅದರ ಶಬ್ದರೂಪ; ಇದು ಕನ್ನಡ ಸಾಹಿತ್ಯದಲ್ಲಿ ಕಲಿಯಬೇಕಾದುದು-ಎಂಬುದನ್ನು ನಿಷ್ಕೃಷ್ಟವಾಗಿ ಆ ಆ ಹಂತಗಳಲ್ಲಿ ತಿಳಿದು ಬೋಧಿಸಬಲ್ಲವನೇ ಶ್ರೇಷ್ಠ ಶಿಕ್ಷಕ. ಅಂಥವರು ಎಲ್ಲಿದ್ದಾರೆ? ಎಷ್ಟಿದ್ದಾರೆ? ಯಾರಿದ್ದಾರೆ?

ಪ್ರತಿಯೊಬ್ಬ ಭಾರತೀಯನೂ ಕಡ್ಡಾಯವಾಗಿ ಪ್ರೌಢಶಾಲೆಯ ಹಂತದವರೆಗೆ ನಮ್ಮ ನಿಜವಾದ ರಾಷ್ಟ್ರಭಾಷೆಯಾದ ಸಂಸ್ಕೃತವನ್ನು ಕಲಿಯಲು ಅವಕಾಶವಿರಲಿ. ಅನಂತರ ಅವನವನ ಮಾತೃಭಾಷೆ ಕಡ್ಡಾಯವಾಗಲಿ. ಅಂತಾರಾಷ್ಟ್ರೀಯ ಸಂಪರ್ಕಕ್ಕೆ ಅವಶ್ಯವಾದುದರಿಂದಲೂ, ಜಾಗತಿಕ ಜ್ಞಾನ ಸಂಪಾದನೆಗಾಗಿಯೂ ಇಂಗ್ಲಿಷ್ ಭಾಷೆ ಇರಲಿ. ಇದು ನಿಜವಾಗಿ ಇರಬೇಕಾದ ತ್ರಿಭಾಷಾ ಸೂತ್ರ. ಹಿಂದಿ ನಮ್ಮ ರಾಷ್ಟ್ರಭಾಷೆಯಲ್ಲ. ಅದು ಕನ್ನಡ, ತಮಿಳು, ಮರಾಠಿ, ಗುಜರಾತೀ, ಬಂಗಾಳಿ ಭಾಷೆಗಳ ಹಾಗೆ ಭಾರತೀಯ ಭಾಷೆಗಳಲ್ಲಿ ಒಂದು ಮಾತ್ರ. ಅದನ್ನು ರಾಷ್ಟ್ರ ಭಾಷೆಯ ಸ್ಥಾನಕ್ಕೇರಿಸಿ ಅದನ್ನು ಎಲ್ಲರ ಮೇಲೂ ಹೇರುವುದು ಅನ್ಯಾಯ. ಸಂಸ್ಕೃತವನ್ನು ರಾಷ್ಟ್ರಭಾಷೆಯನ್ನಾಗಿ ಮಾಡಿ ಎಲ್ಲರಿಗೂ ಕಲಿಸಿದಾಗ ಪ್ರತಿಯೊಬ್ಬನೂ ತನ್ನ ಮಾತೃಭಾಷೆಯಲ್ಲಿ ಹೆಚ್ಚು ಸಮರ್ಥನಾಗುವುದು ಸಾಧ್ಯ. ನಮ್ಮ ರಾಜಕಾರಣಿಗಳು. ಮಂತ್ರಿಗಳು ಇನ್ನಾದರೂ ಈ ಸುಧಾರಣೆಯ ಮಾರ್ಗದಲ್ಲಿ ಮುಂಬರಿದು ಶಿಕ್ಷಣ ಕ್ಷೇತ್ರವನ್ನಾದರೂ ರಾಜಕೀಯದಿಂದ ಮುಕ್ತಿಗೊಳಿಸಿ ಪರಿಶುದ್ಧಗೊಳಿಸಿದಲ್ಲಿ ನಮ್ಮ ದೇಶಕ್ಕೆ ಬರುವ ಆಪತ್ತು ತಪ್ಪೀತು. ದೇಶದ ದೇಹಕ್ಕೆ, ಮನಸ್ಸಿಗೆ ಅಂಟಲಿರುವ ಮಹಾ ಮಾರಿ ತೊಲಗೀತು।

" ಗುರುಕುಲ ಶಿವಯೋಗ ಮಂದಿರ "

ಶ್ರೀ ಶಿವಬಸವ ದೇವರು
ಶಿವಯೋಗ ಮಂದಿರ

ಗುರುಕುಲವೆಂದರೆ ಧರ್ಮ, ಸಂಸ್ಕೃತಿ, ನೀತಿ, ದಯೆ, ತ್ಯಾಗ ಮತ್ತು ವಿದ್ಯೆ ಮುಂತಾದವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಕಲಿಸುವ ಕಮ್ಮಟವೆನ್ನಬಹುದು. ಗುರುಕುಲಗಳು ಮಾನವ ಕೋಟಿಯನ್ನು ಎತ್ತರಕ್ಕೆ ಒಯ್ಯುತ್ತವೆ. ಬಾಳಿನ ಫಲಗಳಾದ ಶಾಂತಿ-ಸಮೃದ್ಧಿಗಳನ್ನು ಗುರುಕುಲಗಳೇ ದೊರಕಿಸುತ್ತವೆ. ಆದ್ದರಿಂದ ಗುರುಕುಲಗಳನ್ನು ಭೂಲೋಕದ ಸ್ವರ್ಗಗಳೆಂದೇ ಕರೆಯಬೇಕು. ದೇವಲೋಕದಲ್ಲಿ ನಮಗೆ ಸಿಗುವುದು ಒಂದೇ ಸ್ವರ್ಗ, ಒಂದೇ ದೃಶ್ಯ ! ಆದರೆ, ಈ ಭೂಲೋಕದಲ್ಲಿ ಎಲ್ಲೆಲ್ಲಿ ಗುರುಕುಲಗಳಿವೆಯೋ ಅವೆಲ್ಲವೂ ಒಂದೊಂದು ಸ್ವರ್ಗಲೋಕವೇ ! ಆದ್ದರಿಂದ ದೇವತೆಗಳ ಸ್ವರ್ಗಲೋಕವು ದೇವತೆಗಳಿಗೇ ಇರಲಿ ; ಅದಕ್ಕಾಗಿ ನಾವೇಕೆ ಬಡಿದಾಡಬೇಕು ? ನಮ್ಮ ಗುರುಕುಲಗಳು ಆ ದೇವಲೋಕವನ್ನು ಮೀರಿಸುವ ಸೌಂದರ್ಯದಿಂದ ಶೋಭಿಸುತ್ತವೆ. ಗುರುಕುಲಗಳೇ ಶಾಂತಿಧಾಮವಾಗಿವೆ. ಅಪ್ರತಿಮ ವಾಸ್ತವಿಕ ಸೌಂದರ್ಯದ ಪ್ರತೀಕಗಳಾಗಿವೆ. ಅಂತೆಯೇ ಅರಿತವರು ಗುರುಕುಲದಲ್ಲಿ ವಾಸ ಮಾಡಲು ಆತುರಪಡುತ್ತಾರೆ.

ಗುರುಕುಲಗಳ ಪರಂಪರೆ : ಭಾರತೀಯ ಸಂಸ್ಕೃತಿಯು ಎಷ್ಟು ಪ್ರಾಚೀನವೋ ಅಷ್ಟೇ ಪ್ರಾಚೀನ ಇತಿಹಾಸ ನಮ್ಮ ಗುರುಕುಲಗಳಿಗೂ ಇದೆಯೆಂದು ಹೇಳಿದರೆ ತಪ್ಪಾಗದು. ಪ್ರಾಚೀನ ವೇದಕಾಲದ ಋಷಿಗಳೆಲ್ಲರೂ ತಮ್ಮವೇ ಆದ ಗುರುಕುಲಗಳನ್ನು ಹೊಂದಿದ್ದರೆಂದು ಹೇಳಬಹುದು. ರಾಮಾಯಣ ಕಾಲದ ವಾಲ್ಮೀಕಿಯಾಗಲೀ ಮಹಾಭಾರತ ಕಾಲದ ವ್ಯಾಸರಾಗಲೀ ಗುರುಕುಲಗಳ ಸಂಸ್ಥಾಪಕರೂ ಕುಲಪತಿಗಳು ಆಗಿದ್ದರೆಂದು ತಿಳಿದುಬರುತ್ತದೆ. ಇದರಂತೆ ಗೌತಮ, ಪತಂಜಲಿ ಮುಂತಾದವರೂ ಗುರುಕುಲಕರ್ತಾರರಾಗಿದ್ದರು ಸಾವಿರಾರು ವರ್ಷಗಳ ಹಿಂದಿನಿಂದಲೂ ಗುರುಕುಲ ಪರಂಪರೆಯು ಅವ್ಯಾಹತವಾಗಿ ಬಂದಿದೆಯೆಂದು ಹೇಳಬಹುದು. ಇದೇ ಗುರುಕುಲ ಸಂಪ್ರದಾಯವು ಇದೇ ಶತಮಾನದ ಮೂವತ್ತು-ನಾಲ್ವತ್ತು ವರ್ಷಗಳ ಹಿಂದಿನಿಂದಲೂ ಕೂಲಿ ಮಠಗಳೆಂಬ ಹೆಸರಿನಿಂದ ಅಯ್ಯನವರು ಅಧಿಪತಿಗಳಾಗಿ ನಡೆಸುತ್ತಿದ್ದರು. ಇವುಗಳಾದರೂ ಗುರುಕುಲ ಸಂಪ್ರದಾಯವನ್ನು ಹೋಲುತ್ತಿದ್ದವು ಹಿಂದಿನ ಆಚರಣೆ ನಿಯಮಗಳಂತೆ ಬಂಧುರವಾಗಿದ್ದುದು ಕಂಡುಬರುತ್ತಿರಲಿಲ್ಲ. ಈಗ ಹಳ್ಳಿವಾಡಗಳ

ಲ್ಲಿಯೂ ಕೂಲಿ ಮಠಗಳು ಇಲ್ಲವಾಗಿವೆ. ಆಧುನಿಕ ಶಿಕ್ಷಣದ ಪ್ರಭಾವವೇ ಇದಕ್ಕೆ ಕಾರಣವೆನ್ನಬಹುದು.

ಪುನಃ ಎರಡು ಮೂರು ಶತಮಾನಗಳಿಂದ ಹಿಂದಿನ ಗುರುಕುಲವನ್ನು ಸ್ಮರಣೆಗೆ ತರುವಂತಹ ಗುರುಕುಲಗಳು ಅಲ್ಲಲ್ಲಿ ಕಂಡುಬರುತ್ತವೆ. ಈ ಗುರುಕುಲಗಳೆಲ್ಲವೂ ಯೋಗಿಗಳಿಂದ, ತಪಸ್ವಿಗಳಿಂದ ಸ್ಥಾಪಿಸಲ್ಪಟ್ಟಿರುವುದು ಮಹತ್ವಪೂರ್ಣವಾಗಿದೆ. ಇಂತಹ ಗುರುಕುಲಗಳೆಲ್ಲವೂ ನಿರ್ಜನ ಪ್ರದೇಶದಲ್ಲೂ, ಪ್ರಶಾಂತ ವಾತಾವರಣದಲ್ಲಿಯೂ, ನಿಸರ್ಗ ದೇವಿಯ ಮಡಿಲಲ್ಲೂ ಸ್ಥಾಪಿಸಲ್ಪಟ್ಟಿರುವುದು ಮತ್ತೂ ವೈಶಿಷ್ಟ್ಯಪೂರ್ಣವಾಗಿದೆ. ಇಂತಹ ಗುರುಕುಲ ಪರಂಪರೆಯಲ್ಲಿ ಶ್ರೀ ಶಿವಯೋಗ ಮಂದಿರವೂ ಒಂದು.

ಶ್ರೀ ಶಿವಯೋಗ ಮಂದಿರ : ಶ್ರೀ ಶಿವಯೋಗ ಮಂದಿರ ಸುಪ್ರಸಿದ್ಧ ಗುರುಕುಲವಾಗಿದೆ. ಯೋಗಿಪುಂಗವರೆನಿಸಿಕೊಂಡ, ಪರಮ ತಪಸ್ವಿಗಳೆನಿಸಿಕೊಂಡ, ಶಾಸ್ತ್ರಕೋವಿದರೆನಿಸಿಕೊಂಡ, "ಶಿವಯೋಗಕ್ಕಾಗಿ ಮೀಸಲಿರಿಸಿದ ತನ್ನ ಮನವ, ಸಮಾಜಕ್ಕಾಗಿ ಮೀಸಲಿರಿಸಿದ ತನ್ನ ತನುವ, ಸಂಸ್ಕೃತಿಗಾಗಿ ಮೀಸಲಿರಿಸಿದ ತನ್ನ ಧನವ," ಎಂಬ ಶ್ರೀ ಜಚನಿಯವರ ನುಡಿನೈವೇದ್ಯವನ್ನು ಸಮರ್ಪಿಸಿಕೊಂಡ ಲಿಂಗೈಕ್ಯ ಶ್ರೀ ನಿ.ಮ.ಪ್ರ.ಕುಮಾರ ಮಹಾಶಿವಯೋಗಿಗಳೇ ಶ್ರೀಮಂದಿರದ ಸ್ಥಾಪಕರು ಕ್ರಿ.ಶ. 1909ರಲ್ಲಿ ಮಂದಿರವು ಸ್ಥಾಪನೆಗೊಂಡಿತು.

ನಿಸರ್ಗದ ಮಡಿಲಲ್ಲಿ: ಯಾವುದೇ ಗುರುಕುಲವು ತನ್ನ ನಾಮವನ್ನು ಸಾರ್ಥಕಪಡಿಸಿಕೊಳ್ಳಲು ನಿಸರ್ಗ ದೇವಿಯ ಮಡಿಲನ್ನು, ಪರಮ ತಪಸ್ವಿಗಳ ಅಡಿಗಳನ್ನೂ ಅರಸುತ್ತದೆ. ಶ್ರೀ ಶಿವಯೋಗ ಮಂದಿರವಾದರೂ ಇದಕ್ಕೆ ಹೊರತಾಗಿಲ್ಲ. ನಾಲ್ಕು ಕಡೆ ಬೆಳೆದು ನಿಂತಿರುವ ಗುಡ್ಡಗಳು ಮಂದಿರವನ್ನು ಸುತ್ತುವರಿದಿವೆ. ಬೆಟ್ಟಗಳಲ್ಲಿಯ ನೀಳವಾಗಿ ಬೆಳೆದಿರುವ ಹಸಿರು ಸೀರೆಯನ್ನುಟ್ಟ ವೃಕ್ಷಗಳು ನೀಲಗಗನಕ್ಕೆ ಚುಂಬನವಿಡುವ ಭೂದೇವಿಯಂತೆ ಕಾಣುತ್ತವೆ. ಬೆಟ್ಟಗಳ ಸಾಲುಗಳಲ್ಲಿ ನವಿಲುಗಳ ನೃತ್ಯವು ನಯನಮನೋಹರವಾಗಿರುತ್ತದೆ. ಸಮೀಪದಲ್ಲಿಯೇ ಮಲಪ್ರಭಾ ನದಿಯು ಉತ್ತರವಾಹಿನಿಯಾಗಿ ಜುಳುಜುಳು ಶಬ್ದ ಮಾಡುತ್ತಾ ಸಾಗುತ್ತಾಳೆ. ತನ್ನ ಜಡೆಯನ್ನು ಬಿಚ್ಚಿ ಮಡಿಯಾಗಿ ಯೋಗಿಗೆ ಭಕ್ತಿಸಮರ್ಪಿಸಲೋಸುಗವೋ ಎಂಬಂತೆ ಅನಂತ ಕವಲುಗಳಾಗಿ ರಭಸದಿಂದ ಹರಿದು ಬಂದು ಮಂದಿರದಲ್ಲಿ ಮಂದಗಾಮಿನಿಯಾಗುತ್ತಾಳೆ. ತನ್ನ ಜನ್ಮ ಸಾರ್ಥಕವಾಯಿತೆಂಬಂತೆ ಪುನಃ 'ಭರಲ್' ಎಂದು ನಿನಾದಗೈಯುತ್ತ ಮುಂದೆ ಸಾಗುತ್ತಾಳೆ. ಮುಂದೆ ಮುಂದೆ ಸಾಗಿ ಅನಂತ ಜನಕೋಟಿಯನ್ನು ಧನ್ಯತೆಯ ಕಡಲಲಿ ಮೀಯಿಸುತ್ತಾಳೆ. ಗಂಗಾಮಾತೆಯ ತೀರದಲ್ಲಿ ವೃಕ್ಷಶಿಖರಗಳು, ಪುಷ್ಪ ವೃಕ್ಷಗಳು, ಲತಾ ಮಂಟಪಗಳು ಮಾತೆಯ ತನಿರಸವನ್ನು ಕುಡಿದು ನಳನಳಿಸಿ ಸುನಗೆಯ ಬೆಳೆದಿವೆ. ಮಂದಿರದ ತುಂಬಾ ಹಸಿರು ಮನೆಗಳೇ ತುಂಬಿವೆ. ವೃಕ್ಷಗಳು ತಮ್ಮ ರೆಂಬೆಗಳಿಂದ ಅತಿಥಿಗಳನ್ನು

ಆಹ್ವಾನಿಸುತ್ತವೆ. ಶುಕಗಳು ತಮ್ಮ ತೊದಲ್ನುಡಿಗಳಿಂದ ಆಡಿ ಆನಂದಪಡಿಸುತ್ತವೆ. ಪಿಕಗಳು ಇಂಚರ ಗಾನವನ್ನು ಮಾಡಿ ಸಂತೋಷಪಡಿಸುತ್ತವೆ ಮಲಪ್ರಭೆಯು ನೀರು ಕೊಟ್ಟು ಸತ್ಕರಿಸುತ್ತಾಳೆ. ಇಂತಹ ನಿಸರ್ಗ ದಡಿಯಲ್ಲಿ ಶಿವಯೋಗ ಮಂದಿರವು ಮೈವೆತ್ತು ನಿಂತಿದೆಯೆಂದರೆ ಇದಕ್ಕಿಂತಲೂ ಕೈಲಾಸ ಬೇರಿದೆಯೇ.?

ಶ್ರೀಮಂದಿರದ ಪೂರ್ವಕ್ಕೆ ಪುರಾತನ ಸಿದ್ಧಾಶ್ರಮವಾದ ಸಿದ್ಧನಕೊಳ್ಳವೂ, ಪಶ್ಚಿಮದಲ್ಲೂ ಪುರಾತನ ತಪಸ್ವಿಗಳ ಜೀಡೆನಿಸಿದ ನಾಗನಾಥನ ದೇವಾಲಯವೂ, ನೈಋತ್ಯದಲ್ಲಿ ಜಗನ್ಮಾತೆ ಬನಶಂಕರಿಯ ದೇವಾಲಯವೂ, ಬಾದಾಮಿಯ ಚಾಲುಕ್ಯರಿಂದ ಕಟ್ಟಿಸಲ್ಪಟ್ಟ ಮೇಣ ಬಸದಿಯೂ, ಈಶಾನ್ಯದಲ್ಲಿ ಅನಂತ ಭಕ್ತ ಸಮೂಹವನ್ನು ನಿತ್ಯವೂ ಬರಮಾಡಿಕೊಳ್ಳುವ ದಕ್ಷಿಣ ಕಾಶಿಯೆನಿಸಿರುವ ಮಹಾಕೂಟ ಕ್ಷೇತ್ರವೂ, ಉತ್ತರದಲ್ಲಿ ವಾಸ್ತುಶಿಲ್ಪಕ್ಕೆ ಹೆಸರಾಂತ ಪಟ್ಟದಕಲ್ಲು ಹಾಗೂ ಐಹೊಳೆಗಳೂ ಇವೆ. ಹೀಗೆ ಶ್ರೀಮಂದಿರವು ತನ್ನ ಸುತ್ತಲೂ ಅನತಿ ದೂರದಲ್ಲಿ ಕ್ಷೇತ್ರಗಳು ಹಾಗು ಐತಿಹಾಸಿಕ ಪ್ರಸಿದ್ಧ ಸ್ಥಳಗಳನ್ನು ಹೊಂದಿದೆ. ಇದಕ್ಕಿಂತಲೂ ಭೂಕೈಲಾಸ ಬೇರಾವುದಿದೆ ?

ಬನ್ನಿ-ಬಿಲ್ವ-ಆರೆ ವೃಕ್ಷಗಳ ಬನಗಳು ಎಲ್ಲೆಲ್ಲಿಯೂ ಬೆಳೆದು ಮಂದಿರದ ಪಾವಿತ್ರ್ಯತೆಯನ್ನು ಉಗ್ಗಡಿಸುತ್ತಲಿವೆ. ಶ್ರೀ ಕುಮಾರ ಶಿವಯೋಗಿಯು ದೇವರಾಗಿ ಕುಳಿತಿರುವ ಭವ್ಯ ಶಿಲಾಯೋಗ ಮಂಟಪವು ದಣಿದ ಅಭ್ಯಾಗತರ ದಣಿವಾರಿಸುತ್ತದೆ. ಜಗದ ಜಂಜಡಕ್ಕೆ ಬೇಸತ್ತು ಬಂದವರಿಗೆ ಶಾಂತಿರಸವನ್ನು ಸುರುವುತ್ತದೆ. ಅಧ್ಯಾತ್ಮ ಪಿಪಾಸುಗಳನ್ನು ಬೇರೊಂದು ಅಲೌಕಿಕ ಲೋಕಕ್ಕೆ ಕರೆದೊಯ್ಯುತ್ತದೆ. ವಾಸ್ತುಶಿಲ್ಪಿಗಳ ನೇತ್ರಗಳನ್ನು ತನ್ನಲ್ಲಿ ಐಕ್ಯಮಾಡಿಕೊಳ್ಳುತ್ತದೆ. ಶಿವಯೋಗಿಯ ಭವ್ಯ ಮಂಟಪ ಪೂಜೆಗಾಗಿ ಎಲ್ಲೆಡೆಯೂ ವರ್ಣರಂಜಿತ ಕುಸುಮಗಳ ಗೊಂಚಲುಗಳು ತೊನೆತೊನೆದು ನಿಂತಿವೆ. ಮಂದ ಮಾರುತನೊಡನೆ ತಮ್ಮ ಸುಗಂಧವನ್ನು ಅತಿಥಿಗಳಿಗಾಗಿ ಕಳುಹಿಸುತ್ತವೆ.

ಧಾರ್ಮಿಕ ಸೊತ್ತುಗಳು : ಶ್ರೀ ಮಂದಿರವು ಸಂನ್ಯಾಸಿಗಳ ಗುರುಕುಲವಾಗಿದೆ. ಆದ್ದರಿಂದ ಈ ಗುರುಕುಲದ ನಿಗದಿಪಡಿಸಿದ ಆವಾರದೊಳಗೆ ಮಾತೆ [ಸ್ತ್ರೀ] ಯರ ನಿರಂತರ ವಾಸ್ತವ್ಯಕ್ಕೆ ಆಸ್ಪದವಿಲ್ಲ. ಮಾತೆಯೇ ಮಾನ್ಯಳಾಗಿರುವ ನಮ್ಮ ದೇಶದಲ್ಲಿ ಮಾತೆಯಿಲ್ಲದ ಸ್ಥಾನಕ್ಕೆ ಶೋಭೆಯೆಲ್ಲಿಯದು ? ಎಂಬ ಶಂಕೆ ಎಲ್ಲರ ಮನದಲ್ಲೂ ಹುಟ್ಟಬಹುದು. ಇದರ ಸಮಾಧಾನಕ್ಕಾಗಿಯೇ ಎಂಬಂತೆ, ಮಂದಿರವು ನೂರಾರು ಗೋಮಾತೆಗಳಿಗೆ ಆಶ್ರಯವಿತ್ತಿದೆ. ಗೋಮಾತೆಗಳ ಮುಖಾಂತರ ಮಂದಿರವು ತನ್ನ ಮುತ್ತೈದೆತನವನ್ನು ಕಾಯ್ದುಕೊಂಡಿದೆ. ಗೋಮಾತೆಗಳ ಶಿಶುಗಳೇ ಚಿಕ್ಕಂದದಿಂದ ಚಿನ್ನಾಟವಾಡುವ ಚಿಗುರೆಗಳಾಗಿ ಕಣ್ಣುಗಳಿಗೆ ಮೋಹವನ್ನುಂಟು ಮಾಡುತ್ತವೆ. ಗೋಮಾತೆಗಳ ಸಗಣಿಯಿಂದ ಪವಿತ್ರವಾದ ವಿಭೂತಿಗಳನ್ನು ತಯಾರಿಸಲಾಗುತ್ತದೆ,

ಪವಿತ್ರ ವಿಭೂತಿಯ ಲೇಪನವು ಪಾಪವೆಂಬ ಕೊಳೆಯನ್ನು ಕಳೆಯುವುದಕ್ಕೆ ಸಾಧನ ವೆಂಬುದನ್ನು ಎಲ್ಲ ಧಾರ್ಮಿಕಜ್ಞನೂ ಒಪ್ಪುತ್ತಾನಷ್ಟೆ! ಆದ್ದರಿಂದ ಭಸ್ಮವು ಮಂದಿರದ ಒಂದು ಶ್ರೇಷ್ಠ ಕ್ರಿಯೆಯಾಗಿದೆ.

ಪಂಚಸೂತ್ರದ ಪೀಠಿಕೆಗಳು ಶಾಸ್ತ್ರೋಕ್ತವಾಗಿ ತಯಾರಿಸಲ್ಪಡುತ್ತವೆ. ಇವಕ್ಕೆ ಕಂತೆಯನ್ನು ಧರಿಸಲಾಗುತ್ತದೆ; ಆಗ ಲಿಂಗವೆಂದು ಕರೆಯಲಾಗುತ್ತದೆ. ಹಿಂದೂ ಧರ್ಮದಲ್ಲಿ ಲಿಂಗ ಪೂಜೆಗೂ ಒಂದು ಶ್ರೇಷ್ಠ ಸ್ಥಾನ ಮೀಸಲಾಗಿದೆಯೆಂದು ಬೇರೆ ಹೇಳಬೇಕಾಗಿಲ್ಲ. ಲಿಂಗವೂ ತನ್ನ ಪುರಾತನತೆಯಿಂದಲೂ ಮೇಲ್ಮೆಯನ್ನು ಮೆರೆದಿದೆ. ಲಿಂಗ ಇದು ಶಿವನ ಪ್ರತೀಕ. ಇದರ ಪೂಜೆಯು ಶಾಂತಿ-ನೆಮ್ಮದಿಯ ದ್ಯೋತಕವೂ ಅಲ್ಲದೆ ನೈಜ ಆತ್ಮಶಕ್ತಿಯನ್ನು ಸಂಪಾದಿಸುವುದೂ ಆಗಿದೆ. ಇಂತಹ ಲಿಂಗಗಳು ಮಂದಿರದಲ್ಲಿಯೇ ತಯಾರಾಗುತ್ತವೆ. ಕನ್ನಡ ನಾಡಿನ ಜನತೆಯು ಇಲ್ಲಿಯ ಲಿಂಗ ಗಳನ್ನು ಧರಿಸಿ ಧನ್ಯವಾಗುತ್ತಲಿದೆ. ಇಷ್ಟೇ ಅಲ್ಲ, ಪರದೇಶದವರು ಇಲ್ಲಿಗೆ ಬಂದಾಗ ಲಿಂಗ ಗಳನ್ನು ಆದರದಿಂದ ಸ್ವೀಕರಿಸುತ್ತಾರೆ. ಪ್ರೇಮದಿಂದ ಅವರಲ್ಲಿ ದೃಷ್ಟಿಯಿಟ್ಟು ದೃಷ್ಟಿ ಯೋಗವನ್ನು ಸಾಧಿಸುತ್ತಾರೆ. ಆನಂದ ತುಂದಿಲರಾಗುತ್ತಾರೆ. ನೆಮ್ಮದಿಯನ್ನು ಸಂಪಾ ದಿಸುತ್ತಾರೆ. ಮನಸ್ಸಿಗೆ ನೆಮ್ಮದಿಯನ್ನು ಕರುಣಿಸುವ ರೂಪದಲ್ಲಿ ಲಿಂಗವು ಪರದೇಶಕ್ಕೂ ಕಲ್ಯಾಣಕಾರಕವಾಗಿದೆ, ಒಂದು ರೀತಿಯಿಂದ ಈ ಗುರುಕುಲವು ವೀರಶೈವಪರವಾಗಿಯೇ ಹಿಂದೂ ಧರ್ಮದ ಪ್ರಸಾರವನ್ನು ಪರರಾಷ್ಟ್ರಗಳಲ್ಲಿ ಮಾಡುತ್ತಿದೆಯೆಂದರೆ ತಪ್ಪಾಗ ಲಾರದು. ಇವರಂತೆ ರುದ್ರಾಕ್ಷಿ-ಶಿವದಾರಗಳೂ ಮಂದಿರ ಸಂಪದಗಳಾಗಿವೆ. ಜೀವನಕ್ಕೆ ನಿರಂತರ ಶಾಂತಿಯನ್ನು ಕೊಡುವ ಈ ವಸ್ತುಗಳಿಗಿಂತಲೂ ನಿಜವಾದ ಸಂಪತ್ತುಗಳು ಮತ್ತಾವು ಇವೆ.?

ಮಾತನಾಡುವ ದೇವರುಗಳು: ತಲೆಬರಹವನ್ನು ನೋಡಿದೊಡನೆ ಆಶ್ಚರ್ಯವಾಗಬಹುದು, ಆದರೂ ಚಿಂತೆಯಿಲ್ಲ. ಇದು ಸತ್ಯ ಸಂಗಾತಿಯೇ ಆಗಿದೆ. ದೇವಾಲಯಕ್ಕೆ ಬೀಗ ಜಡಿದುಕೊಂಡು ಹೋದರೂ ಬಂಧಿತನಂತೆ ಮೂಕನಾಗಿ ಕುಳಿತುಕೊಳ್ಳುವ ದೇವರು ದೇವರಲ್ಲ. ಮಾತನಾಡುವ ಯೋಗಿಗಳು ದೇವರು. ಜೀವಂತವಿರುವ ಸಂತರು ದೇವರು. ತಿರುಗಾಡುವ ಮಹಾಂತರು ದೇವರು. ಭಗ ವಂತನು ಇಂತಹವರ ಮುಖಾಂತರವೇ ಜಗದ ಕಲ್ಯಾಣವನ್ನು ಮಾಡಿಸುತ್ತಿರುತ್ತಾನೆ. ಇವರೊಳಗೆ ಭಗವಂತನು ಜಾಗೃತನಾಗಿರುತ್ತಾನೆ. ತ್ಯಾಗ-ದಯೆ-ಸತ್ಯ ಇವುಗಳೇ ಮಾತನಾಡುವ ದೇವರುಗಳ ಜೀವಾಳಗಳಾಗಿವೆ. ಈ ಮೂರರಲ್ಲಿ ಸಿದ್ಧಿಯನ್ನು ಪಡೆ ದವರೇ ಮಾತನಾಡಿಸುವ ದೇವರುಗಳು. ಇವರೇ ಯೋಗಿಗಳು, ಸಂತರು. ಪ್ರವಾ ತ್ಮರು, ಇಂತಹವರನ್ನು ಸಂಸ್ಕಾರದ ಆವಿಷ್ಕಾರದಿಂದ ತಯಾರಿಸುವುದೇ ಈ ಗುರುಕುಲದ ಉದ್ದೇಶವಾಗಿದೆ, ಮುಂದೆ ಯೋಗ್ಯತಾಸಂಪನ್ನರೆಂದು ಕಂಡಬಳಿಕ ಜನತೆಯ ನೈತಿಕ ಮಟ್ಟವನ್ನು ಎತ್ತರಿಸುವಂತೆ, ಧಾರ್ಮಿಕ ಆಚರಣೆಗಳನ್ನು ಬಿತ್ತರಿಸುವಂತೆ, ಅಸಾಧಾ

ರಣ ವಾತಾವರಣವನ್ನು ನಿರ್ಮಿಸುವಂತೆ ಮಾಡಿಸುವುದೇ ಈ ಗುರುಕುಲದ ಗುರಿಯಾಗಿದೆ. ಶ್ರೀಮಂದಿರದಲ್ಲಿ ವಾಸಮಾಡುವ ದೇವರುಗಳಿಗೇ "ಶಿವಯೋಗಿಗಳು" ಎಂದು ಕರೆಯುವ ವಾಡಿಕೆಯಾಗಿದೆ.

ಈ ಗುರುಕುಲವು ಯಾವುದೇ ಶುಲ್ಕವನ್ನು ಸ್ವೀಕರಿಸದೆ ಶಿಕ್ಷಣವನ್ನು ವಿತರಣೆ ಮಾಡುತ್ತದೆ. ಹಣವನ್ನು ಗಳಿಸುವುದಕ್ಕಾಗಿ ಶಿಕ್ಷಣದ ವಿತರಣೆಯು ಮೀಸಲಾದರೆ ಶೈಕ್ಷಣಿಕ ಪೂರ್ಣತೆಯು ಅಸಾಧ್ಯವೆಂಬುದನ್ನು ಹಣಕ್ಕಾಗಿಯೇ ಇರುವ ಶಿಕ್ಷಣವು ಅತ್ಯಾಚಾರದ ಕೇಂದ್ರವಾಗುವ ಸಾಧ್ಯತೆಯಿದೆಯೆಂಬುದನ್ನು ಶ್ರೀ ಗುರುಕುಲವು ಚೆನ್ನಾಗಿ ಅರಿತಿದೆ. ಆದ್ದರಿಂದ ಅಧ್ಯಯನಕ್ಕಾಗಿ ಬರುವ ಯಾವ ಜಿಜ್ಞಾಸುವಿನಿಂದಲೂ ಹಣವನ್ನು ಸ್ವೀಕರಿಸುವುದಿಲ್ಲ, ಯಾವ ಸರ್ಕಾರದಿಂದಲೂ ಸಹಾಯವನ್ನು ಪಡೆಯುತ್ತಿಲ್ಲ.

ಗುರುಕುಲದ ದೈನಂದಿನ ಚಟುವಟಿಕೆಗಳು : ನಸುಕಿನ ನಾಲ್ಕು ಘಂಟೆಗೆ ಏಳುವುದು ಹದಿನೈದು ನಿಮಿಷಗಳವರೆಗೆ ಕುಮಾರ ಶಿವಯೋಗಿಗಳ ಸಾಮೂಹಿಕ ಸುಪ್ರಭಾತವನ್ನು ಹಾಡುವುದು. ದೈವೀ ಭಾವನೆಯ ಅಧ್ಯಯನಕ್ಕಾಗಿ ಮೊದಲಿಸ ಸುಪ್ರಭಾತದ ಸಂದೇಶವಾಗಿದೆ. ಆರು ಗಂಟೆಯವರಗೆ ಅಧ್ಯಯನ ನಂತರ ಆಹ್ನಿಕ ಕ್ರಿಯೆಯು ಆರೂವರೆ ಗಂಟೆಯುವರೆಗೆ. ಏಳು ಗಂಟೆಯವರೆಗೆ ಯೋಗಾಸನಗಳನ್ನು ಮಾಡುವುದು. ಏಳರಿಂದ ಒಂಭತ್ತುವರೆ ಗಂಟೆಯುವರೆಗೆ ಸಂಸ್ಕೃತ ಸಾಹಿತ್ಯದ ನಾನಾಪ್ರಕಾರಗಳು, ಆಂಗ್ಲ ಮತ್ತು ಹಿಂದೀ ಪಾಠಗಳು ನಡೆಯುತ್ತವೆ. ಈಗಿನ ಶ್ರೀ ನಿ. ಪ್ರ. ಸದಾಶಿವ ಮಹಾಸ್ವಾಮಿಗಳವರೇ ಸ್ವತಃ ಅಭ್ಯಾಸವನ್ನು ಹೇಳುತ್ತಾರೆ. ಒಂಭತ್ತೂವರೆಯಿಂದ ಹನ್ನೊಂದು ಗಂಟೆಯುವರೆಗೆ ನದಿಯಲ್ಲಿ ಸ್ನಾನ, ಲಿಂಗಾರ್ಚನೆ, ರುದ್ರಾಧ್ಯಯನಗಳು ನಡೆಯುತ್ತವೆ. ಹನ್ನೆರಡರವರೆಗೆ ಪ್ರಸಾದ ಸ್ವೀಕಾರ, ಅರ್ಧ ತಾಸು ವಿಶ್ರಾಂತಿ ಪುನಃ ಒಂದು ಗಂಟೆಯಿಂದ ನಾಲ್ಕುವರೆಯುವರೆಗೆ ಅಧ್ಯಯನದಲ್ಲಿ ತೊಡಗುವುದು. ನಾಲ್ಕೂವರೆಯಿಂದ ಐದೂವರೆಯುವರೆಗೆ ಮಹಾತ್ಮರ ಪುರಾಣ ಸ್ರವಣ. ಆರರವರಗೆ ಸಾಮೂಹಿಕ ಪ್ರಾರ್ಥನೆ. ಪೂಜ್ಯರ ದರ್ಶನ, ಆರರಿಂದ ಎಂಟರವರೆಗೆ ಪುನಃ ಸ್ನಾನ, ಅರ್ಚನೆ, ರುದ್ರಪಠಣ ಹಾಗೂ ಪ್ರಸಾದ ಸ್ವೀಕಾರ. ಎಂಟರಿಂದ ಹತ್ತರವರೆಗೆ ಅಧ್ಯಯನ ನಂತರ ಗುರು ಧ್ಯಾನದೊಡನೆ ಮಲಗುವುದು. ವಾಚನಾಲಯದಲ್ಲಿ ಎಲ್ಲಾ ನಮೂನೆಯ ಗ್ರಂಥಾವಲೋಕನಕ್ಕೂ ಅವಕಾಶವುಂಟು. ನಿತ್ಯದ ಅರ್ಧ ತಾಸು ಕಾಯಕಕ್ಕೂ ಮೀಸಲಾಗಿದೆ.

ನಿಯಮ : ಒಮ್ಮೆ ಈ ಗುರುಕುಲವನ್ನು ಸೇರಿದ ನಂತರ ತಮ್ಮ ಮನೆಗೆ ಹೋಗುವಂತಿಲ್ಲ. ತಮ್ಮ ತಂದೆ-ತಾಯಿಗಳ, ಬಂಧು-ಬಳಗದವರ ವ್ಯಾಮೋಹಕ್ಕೆ ಬಲಿಯಾಗುವಂತಿಲ್ಲ. ಹುಟ್ಟಿದ ಮನೆಯ ಆಸ್ತಿಪಾಸ್ತಿಯಲ್ಲಿ ಪಾಲು ಕೇಳುವಂತಿಲ್ಲ. ಗುರುಕುಲವು ಸಾಮಾಜಿಕ ಮಠಕ್ಕೆ ಶಿವಯೋಗಿಗಳನ್ನು ಕಳುಹಿಸುತ್ತದೆ. ಅದು ಸಮಾಜದ ಸೊತ್ತು. ಆ ಸೊತ್ತು ಧಾರ್ಮಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ರೀತಿಯಿಂದ ಸಮಾಜದ ಸಲುವಾಗಿಯೇ ಉಪಯೋಗಿಸಬೇಕಾಗುತ್ತದೆ. ಕಾರಣ, ಈ ಸಂದರ್ಭದಲ್ಲಿ ನಾವು

ಇಡುವ ಸಂಬಂಧಿಕರ ವ್ಯಾಮೋಹವು ಸಮಾಜದ ಆಸ್ತಿಯನ್ನೇ ಕಬಳಿಸುವ ಪ್ರಸಂಗ ಬರಬಹುದು. ಇದರಿಂದ ಸ್ವಾರ್ಥ ಭಾವನೆಯು ಬೆಳೆಯುತ್ತದೆ. ಆದ್ದರಿಂದ ತಂದೆ ತಾಯಿಗಳನ್ನು ಮಾತನಾಡಿಸುವ ನೇರ ಸಂಪರ್ಕವನ್ನೂ ಕೂಡ ಇಟ್ಟುಕೊಳ್ಳಬಾರ ದೆಂಬುದು ಗುರುಕುಲದ ಬಂಧುರವಾದ ನಿಯಮವಾಗಿದೆ.

2. ಶಿವಯೋಗಿಗಳಿಗೆ ಸಾತ್ವಿಕ ಆಹಾರವನ್ನು ಕೊಡಲಾಗುತ್ತಿದೆ. ಈ ಗುರು ಕುಲದ ಪ್ರಸಾದದಲ್ಲಿ ಉಪ್ಪು-ಖಾರ-ಹುಳಿ-ಈರುಳ್ಳಿ-ಬೆಳ್ಳುಳ್ಳಿ-ಮಸಾಲೆ ಮುಂತಾದ ತಾಮಸ ಪದಾರ್ಥಗಳನ್ನು ಬಳಸುವುದಿಲ್ಲ. ಅವರೆಬೇಳೆ, ತೊಗರಿಬೇಳೆ, ಕಡಲೆಬೇಳೆ ಮತ್ತು ಹಲಸಂದೆ, ಕುಂಬಳ, ಬದನೆ ಮುಂತಾದ ಪದಾರ್ಥಗಳನ್ನೂ ತೆಗೆದುಕೊಳ್ಳು ವಂತಿಲ್ಲ. ಏಕೆಂದರೆ, ಇವೆಲ್ಲವೂ ಯೋಗಸಾಧನೆಗೆ ವಿರೋಧವಾದವುಗಳು. ಸಾಧನೆ ಯನ್ನು ಕೆಡಿಸಿಕೊಂಡು ಬದುಕುವುದು ಜೀವನ್ಮೃತಿ ಹಾಗು ಸಾಮಾಜಿಕ ದ್ರೋಹವೆಂದು ತಿಳಿದಿರುವುದೇ ಎರಡನೆಯ ನಿಯಮದ ಕಾರಣವಾಗಿದೆ.

3. ಸುಗಂಧ ದ್ರವ್ಯಗಳನ್ನು ಬಳಸುವಂತಿಲ್ಲ. ರಸಜೀವನವು ಯೋಗಿಯ ಚಿತ್ತವನ್ನು ಪಲ್ಲಟಮಾಡುತ್ತದೆಂಬುದೇ ಇದರ ಕಾರಣವಾಗಿದೆ. ಉತ್ತಮ ಉಡುಪು ಗಳನ್ನು ತೊಡುವಂತಿಲ್ಲ. ಏಕೆಂದರೆ, ಇದು ಶರೀರವನ್ನು ವ್ಯಾಮೋಹಕ್ಕೊಳಪಡಿಸಿ, ತ್ಯಾಗ ಜೀವನವನ್ನು ದೂರ ಮಾಡಿಸುತ್ತದೆ. ತಲೆಗೂದಲನ್ನು ಉದ್ದವಾಗಿ ಬೆಳೆಸು ವಂತಿಲ್ಲ. ಏಕೆಂದರೆ, ಶೋಕಿಯತ್ತ ಮನಸ್ಸು ಹರಿದು ಸಂನ್ಯಾಸ ಜೀವನಕ್ಕೆ ತಿಲಾಂ ಜಲಿಯಿಡುವ ಸಂಭವವುಂಟು. ಹೀಗೆ ಸಾದಾ ಸೀದಾ ಜೀವನವನ್ನು ಕಲಿಸುವುದು ಗುರುಕುಲದ ಮತ್ತೊಂದು ನಿಯಮವಾಗಿದೆ.

ಶಿವಯೋಗ ಮಂದಿರ ಇದು ಅಮರ ಮಂದಿರ. ಇದು ಸರ್ವಾಂಗ ಸುಂದರ ! ಗುರುಕುಲ. ಇದು ಕೈಲಾಸದ ಮಹಲ ! ತಿಳುವಿನ ತಿಳಿಗೊಳದಲ್ಲಿ ಈಜಾಡುವವರಿಗೆ ಆನಂದದಾಯಿ. ಭಕ್ತಿಯೆಂಬ ರೆಕ್ಕೆಗಳನ್ನು ಹರಡಿ ಹಾರಾಡುವವರಿಗೆ ಮುಕ್ತಿದಾಯಿ! ಗುರುಕುಲ ಪರಂಪರೆಯನ್ನು ಉಳಿಸಿಕೊಂಡು, ಬೆಳಸಿಕೊಂಡು ಬಂದಿರುವ ಸಂಸ್ಕೃತಿಯ ಸಾಗರ, ತ್ಯಾಗ ಜೀವನವ ಕಲಿಸಿ, ನಿರಂಕುಶ ಶಿವಯೋಗಿಗಳನ್ನಾಗಿ ಮಾಡುವ ಕಮ್ಮಟ ! ಧರ್ಮದ ತಿರುಳನ್ನು ತೋರಿಸುವ ಆಧ್ಯಾತ್ಮಿಕ ಕೇಂದ್ರ ! ಇಂತಹ ಸೌಭಾಗ್ಯದ ತೌರುಮನೆಯನ್ನು, ಸಮರಸವನ್ನು ಸಾಧಿಸುವ ಗುರುಕುಲವನ್ನು ನಿರ್ಮಿ ಸಿದ ಆ ಯೋಗಿಪುಂಗವ ಗುರುಕುಮಾರಗೆ ಇರಲಿ ನಮ್ಮ ಸಹಸ್ರ ಸಹಸ್ರ ನಮನ !

ಕನ್ನಡ ನಿಘಂಟುಗಳು

ಹೀ. ಚಿ. ಶಾಂತವೀರಯ್ಯ, ಎಂ.ಎ., ಬಿ.ಇಡಿ.

ನಿಘಂಟು ಒಂದು ಬಗೆಯ ಶಾಸ್ತ್ರ. ಅರುವತ್ನಾಕು ಕಲೆಗಳಲ್ಲಿ ಒಂದು. ಶಬ್ದಗಳ ಕೋಶ, ಶಬ್ದಗಳಿಗೆ ಅರ್ಥವನ್ನು ಹೇಳುವ ಅರ್ಥಕೋಶ "ಅರ್ಥಾನ್ ನಿಘಂಟ ಯತ್ವಸ್ಮಾತ್ ನಿಘಂಟುಃ ಪರಿಕೀರ್ತಿತಾಃ" ಮೊದಲು ಭಾಷೆ, ನಂತರ ವ್ಯಾಕರಣ, ಅನಂತರ ಭಾಷಾಶಾಸ್ತ್ರ, ತದನಂತರ ನಿಘಂಟು, ವೇದ ಮಂತ್ರಗಳ ಅರ್ಥ ಪರಿಜ್ಞಾನವು ಬಹಳ ಕ್ಲಿಷ್ಟವಾಗಿ ಕಂಡುಬಂದುದರಿಂದ ಎಲ್ಲವನ್ನೂ ಬೇರ್ಪಡಿಸಿ ಒಂದು ಕಡೆ ಸಂಗ್ರಹಿಸಿರುವುದರಿಂದ ಈ ಸಂಗ್ರಹಕ್ಕೆ ನಿಘಂಟು ಎಂದು ಹೆಸರಾಯಿತು. ನಿಘಂಟುಗಳಲ್ಲಿ ಪ್ರಥಮತಃ ರಚಿತವಾದುದು, ವೈದಿಕ ನಿಘಂಟು. ಕನ್ನಡದಲ್ಲಿ ನಿಘಂಟು ನಡೆದು ಬಂದ ರೀತಿಯನ್ನು ತೋರಿಸುವುದೇ ಈ ಲೇಖನದ ಗುರಿ. ನಿಘಂಟು (ನಾ) ೧ ಶಬ್ದಾರ್ಥಗಳ ಕೋಶ. ಡಿಕ್ಷನರಿ ; ಛಂದಮಲಂಕಾರ ನಿಘಂಟು ಕಾವ್ಯ ನಾಟಕಂಗಳು......... ಮೊದಲಾಗೊಡೆಯ ಶಾಸ್ತ್ರಗಳೆಲ್ಲಮಂ ನೆಱೆಯೆ ಕಲ್ಪಿಸಿ (ವಡ್ಡಾರಾಧನೆ. 3-28) ಸಮುದಿತ ಸಂಖ್ಯಾಧ್ವಮರಹಿತವೆನಿಸಿ ವರ್ತಿಪನಿಘಂಟುವಿನ ನಾಮಪದೋತ್ತಮ ವರ್ಣ ಪ್ರಕೃತಿಗಳಂ ಸಮ ಸಂಸ್ಕೃತವೆಸರವಿಟ್ಟು ಲಿಂಗಂಮಾಳ್ಪರ್ (ಶಬ್ದಮಣಿದರ್ಪಣ. 80) ನಿಘಂಟುಗಳಲ್ಲಿ ಜನಸಾಮಾನ್ಯರಿಗೆ ಗೌರವ ಹುಟ್ಟುವುದು ಅಪೂರ್ವ: ನಿಘಂಟು ಒಂದು ಗ್ರಂಥವೆಂದು ಒಪ್ಪದವರೇ ಹಲವರಿದ್ದಾರು (ಸಮಾಲೋಕನ-266), ಮಗನಿಂದ ಕಾಗದ ಬಂದರೆ ಒಡೆನೆನಗರ್ಥಕ್ಕೆ ಬೇಕು ನಿಘಂಟು (ಇಂದ್ರಚಾಪ-169).

2. ಖಚಿತವಾದುದು. ನಿಶ್ಚಿತವಾದುದು, ಒಂದು ಪೊಳದ ಅಳತೆಯನ್ನು ತಾಮ್ರದ ಪಟ್ಟಿಯಲ್ಲಿ ನಿಘಂಟು ಮಾಡಿ (ಶಿಲ್ಪ ಮತ್ತು ನಾಗರಿಕತೆ. 39) 3. ಯಾಸ್ಕಾಚಾರ್ಯರಿಂದ ವಿರಚಿತವಾದ ನಿರುಕ್ತವೆಂಬ ವೇದ ಶಬ್ದಗಳ ಕೋಶ. ನಿಘಂಟಾಗಿ ಹೇಳು, ನಿಘಂಟಾಗು = ನಿಶ್ಚಿತವಾಗು; ಖಾತ್ರಿಯಾಗು; ನಿಘಂಟಾಗಿ ಹೇಳುವರು (ರೂಢಿ). ನಿಘಂಟಿನ ಹೇಳಿಕೆ ನಮ್ಮ ಜನತೆ ಅನ್ನುವಂತೆ ನಿಘಂಟಾಗಬೇಕಾದರೆ ಎಷ್ಟು ಕಾಲ ಎಷ್ಟು ದುಡಿದರೂ ಸಾಲದು (ಸಮಾಲೋಕನ-270) ಹೀಗೆ ನಿಘಂಟು ಶಬ್ದ ನಡೆದು ಬಂದಿದೆ.

ಕನ್ನಡ ನಿಘಂಟುಗಳಿಗೆ ವಿಶೇಷವಾದ ಚರಿತ್ರೆಯಿದೆ, ರನ್ನನಿಂದ (993) ಪ್ರಾರಂಭವಾಗಿ ರತ್ನಕೋಶದ (1977) ರವರೆಗೆ ಅದರ ಹರಹು ಹಬ್ಬಿದೆಯಲ್ಲದೆ

ತನ್ನದೇ ಆದ ವಿಶಿಷ್ಟ ಗುಣಗಳಿಂದಕೂಡಿದೆ. ಅವುಗಳ ಪಕ್ಷಿನೋಟವಿದು. ಕ್ರಿ.ಪೂ 4ನೆಯ ಶತಮಾನದಿಂದಲೇ ನಿಘಂಟು ರಚನೆ ಪ್ರಾರಂಭವಾಯಿತು. ಪ್ರಾಚೀನ ನಿಘಂಟುಗಳು ಹಲವು ಬಗೆಯವಾಗಿವೆ. ಏಕಾಕ್ಷರ, ನಾನಾರ್ಥ, ವೈದ್ಯ ಮೊದಲಾದ ನಿಘಂಟು, ಕನ್ನಡದಲ್ಲಿ ಸುಮಾರು ಒಂದು ಸಾವಿರ ವರ್ಷಗಳ ಚರಿತ್ರೆಯನ್ನು ಹೊಂದಿರುವ ನಿಘಂಟುಶಾಸ್ತ್ರ ವಿಪುಲವಾಗಿ ಬೆಳೆದು ನಿಂತಿದೆ. ಸುಮಾರು ಒಂದುನೂರಕ್ಕೂ ಹೆಚ್ಚು ನಿಘಂಟುಗಳಿವೆ. ಅವುಗಳ ಕಿರುಪರಿಚಯವಿದು.

1. ರನ್ನಕಂದ: ರನ್ನ (993) ಕನ್ನಡದ ಮೊದಲನೆಯ ನಿಘಂಟು ಕೇವಲ ಹನ್ನೆರಡು ಕಂದಪದ್ಯಗಳಿವೆ. ಹಳಗನ್ನಡದ ಕೆಲವು ಶಬ್ದಗಳಿಗೆ ಅರ್ಥ ಹೇಳಿದೆ. "ಕುಳಿರನೆ ಶೈತ್ಯಂ ಮಿಳಿರನೆ ಪೊಳೆದುದುಳ್ಳೆಂಪಲ್ಕೆ ಮಾರ್ಗಂ ಬರ್ದಂ" (ರನ್ನಕಂ-1)

2. ಅಭಿದಾನ ವಸ್ತುಕೋಶ: ನಾಗವರ್ಮ (1145) ಏಕಾರ್ಥ ನಾನಾರ್ಥ ಮತ್ತು ಸಾಮಾನ್ಯ ಎಂಬ ಮೂರುಕಾಂಡಗಳಿವೆ. ಕಂದ ಮತ್ತು ವೃತ್ತಗಳಲ್ಲಿ ಸಂಸ್ಕೃತ ಶಬ್ದಗಳಿಗೆ ಅರ್ಥವನ್ನು ಹೇಳಲಾಗಿದೆ. "ಮೃಗಬಂಧಿನಿವಾಗುರೆ ಬಲೆ" (ವಸ್ತು ಕೋ 5.51.25)

3, ಅಭಿದಾನರತ್ನಮಾಲಾ: ಕರ್ನಾಟಕ ಟೀಕೆ ಎರಡನೆಯ ನಾಗವರ್ಮ (1145) ಭಟ್ಟಹಲಾಯುಧನ ಸಂಸ್ಕೃತ ನಿಘಂಟಿಗೆ ಕನ್ನಡದಲ್ಲಿ ಟೀಕೆ ಹೇಳಲಾಗಿದೆ. ಸಂಸ್ಕೃತ ಶಬ್ದಗಳಿಗೆ ಸಮಾನವಾದ ಕನ್ನಡ ಶಬ್ದಗಳನ್ನು ಕೊಡಲಾಗಿದೆ. ಸಂಸ್ಕೃತ ಶಬ್ದಗಳಿಗೆ ಕನ್ನಡ ಟೀಕೆಯಿರುವ ಮೊದಲನೆಯ ನಿಘಂಟು ಇದು. "ಅಶನಂ, ಭಕ್ಷಣಂ ಆಹಾರಂ, ಭೋಜನಂ, ಸ್ವರನಂ.- ಈ 11 ಊಟಂ"(ಹಲಾಯುಧ. 58-170)

4. ನಾಚಿರಾಜೀಯ : ನಾಚಿರಾಜ (1300) ಸಂಸ್ಕೃತದ ಪ್ರಸಿದ್ಧ ಕೋಶವಾದ ಅಮರಕೋಶಕ್ಕೆ ಮೊದಲನೆಯ ಕನ್ನಡ ವ್ಯಾಖ್ಯಾನ. ವಿಠಲ ಲಕ್ಷ್ಮಣ ಶಾಸ್ತ್ರೀ (1300) ಸಿದ್ಧಾಂತಿ ಸುಬ್ರಮಣ್ಯ ಶಾಸ್ತ್ರೀ (1800) ಇವರುಗಳು ಅಮರಕೋಶಕ್ಕೆ ಕನ್ನಡವ್ಯಾಖ್ಯಾನವನ್ನು ಬರೆದಿದ್ದಾರೆ.

5. ಅಕಾರಾದಿ ವೈದ್ಯ ನಿಘಂಟು: ಅಮೃತನಂದಿ(1300) ಸಂಸ್ಕೃತಶಬ್ದಗಳಿಗೆ ಕನ್ನಡದ ಪರ್ಯಾಯ ಶಬ್ದಗಳನ್ನು ಕೊಟ್ಟಿದೆ. ಅಕ್ಷಿ-ನರುವಂಜಿ ಅಲಸಾ-ಚಿನ್ನದಾಲೆ. ಅಳಕ-ಗರುಗ. ಅಳಕ-ಬಳಸೊಂಡೆ, ಅಳಿಷ್ಮ-ತಿಲಕ.

6. ಅಭಿನವಾಭಿದಾನಂ: ಎರಡನೆಯ ಮಂಗರಾಜ (1398) ಸ್ವರ್ಗ. ಭೂ, ಪಾತಳ, ಸಾಮಾನ್ಯ ಮತ್ತು ನಾನಾರ್ಥ ಹೀಗೆ ಐದು ಕಾಂಡಗಳಿವೆ. ಪ್ರತಿ ಕಾಂಡದಲ್ಲಿಯೂ ವರ್ಗಗಳ ವಿಭಾಗವಿದೆ. ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದೆ.

ಹೆಚ್ಚಾಗಿ ಅಭಿದಾನರತ್ನಮಾಲೆಯ ಕನ್ನಡ ಟೀಕೆಯನ್ನು ಹೆಚ್ಚಾಗಿ ಅನುಸರಿಸಲಾಗಿದೆ. ಗಿರಿಶನೊಳು ಕಾಲನೊಳು ಪುಣ್ಯದೊಳು ಬಿಲ್ಲಿನೊಳು ಗರಳದೊಳು ಕ್ರತುವಿನೊಳು ಧರ್ಮಮಕ್ಕು (ಮಂಗರಾ. 148-44).

7. **ಕರ್ಣಾಟಕ ಶಬ್ದಸಾರ:** ಕವಿ ಗೊತ್ತಿಲ್ಲ, ಕಾಲ 1400 ಗದ್ಯದಲ್ಲಿರುವ ಮೊದಲನೆಯ ಕನ್ನಡ ನಿಘಂಟು. ಇದರಲ್ಲಿ ಸುಮಾರು ಒಂದೂವರೆ ಸಾವಿರ ಕನ್ನಡ ಪದಗಳಿವೆ. ಕನ್ನಡದಲ್ಲಿ ಅರ್ಥವನ್ನು ಹೇಳಲಾಗಿದೆ, ಮಾಕಾಳಿ, ಮಾದೇವಿ, ಸಬ್ಬಾಣಿ ಐಕಿಲ್ಚೆಟುಣುಗಿ ಸಿಗಂದೇರಳ್-ಈಶ್ರೀ-5ಪಾರ್ವತಿಯ ಪೆಸರ್(ಕಶಸಾ-1-4)

8. **ಕರ್ಣಾಟಕ ನಿಘಂಟು:** ಕವಿ ಗೊತ್ತಿಲ್ಲ. ಕಾಲ 1400 ಹಳಗನ್ನಡ ಶಬ್ದಗಳಿಗೆ 99 ಕಂದ ಮತ್ತು ವಿವಿಧ ವೃತ್ತಗಳಲ್ಲಿ ಅರ್ಥವನ್ನು ಹೇಳಲಾಗಿದೆ "ಸರಸತಿ ಸಾರದೆ ನುಡಿವೆಣ್ ಸಿರಿಯೆಱೆಯಂ ಸೌರಿಮೆಂದು ತಾವರಿಗಣ್ಣಂ ಸಿರಿಯಾಣ್ಮಂ ಪೊಡೆಯಲರಂ ಸಿರಿಯೆನೆ ಮಾಲಕುವಿಯೆನೆ ಮಹಾಲಕ್ಷ್ಮಿಯೊಳಂ"(ಕರ್ಣಾನಿ-3).

9. **ಚತುರಾಸ್ಯ ನಿಘಂಟು:** ಚತುರಾಸ್ಯ ಬೊಮ್ಮರಸ (1450) ದೇಶ್ಯ ತತ್ಸಮ, ತದ್ಭವ, ಶಬ್ದಗಳಿಗೆ ಕಂದದಲ್ಲಿ ಅರ್ಥ ಹೇಳಿದೆ "ಗಾಡಿಯೆನೆ ಸೊಬಗು ಸೋಡಂ ಬಾಡಮೆನಲ್ ಬಱೆದು ಬಗ್ಗುಮನೆ ರುಛಂಕಣೆ ಚತುನಿ-22).

10. **ಕಾಶಕುತ್ಸ್ನ ಧಾತಪಾಠ:** ಚನ್ನವೀರ (1500) ಪ್ರಸಿದ್ಧ ವ್ಯಾಕರಣ ಗ್ರಂಥಗಳಲ್ಲಿ ಮೂರನೆಯದಾದ ಕಾಶಕೃತ್ಸ್ನ ವ್ಯಾಕರಣ ಶಾಸ್ತ್ರದ ಧಾತುಪಾಠ, ಸಂಸ್ಕೃತ ಶಬ್ದಗಳಿಗೆ ಕನ್ನಡದಲ್ಲಿ ಅರ್ಥವಿದೆ. ವಂಚತಿ ಮಾಚಿದಪಂ ವಂಚನಂ ಮಾಜು (ಕಾಶಕೃ-11)

11. **ಧನ್ವಂತರೀಯ ನಿಘಂಟು:** ಕವಿ ಗೊತ್ತಿಲ್ಲ (1500) ಸಂಸ್ಕೃತದ ಗಿಡಮೂಲಿಕಾದಿಗಳಿಗೆ ಕನ್ನಡದಲ್ಲಿ ಸಮಾನ ಶಬ್ದವನ್ನು ಹೇಳಿದೆ.

12. **ಕಬ್ಬಿಗರ ಕೈಪಿಡಿ:** ಲಿಂಗಮಂತ್ರಿ (1300) ಹಳಗನ್ನಡ ಶಬ್ದಗಳಿಗೆ 101 ವಾರ್ಧಕಪಟ್ಪದಿಯಲ್ಲಿ ಅರ್ಥನ್ನು ವಿವರಿಸಲಾಗಿದೆ.ಹೆಸರುಘಟ್ಟದ ಹೊನ್ನಪ್ಪನವರು (1884) "ಚಕೋರಚಂದ್ರಿಕೆ" ಎಂಬ ಟೀಕನ್ನು ಬರೆದಿದ್ದಾರೆ. ಎರಕಮೆನೆ ಪ್ರೀತಿಯಪ್ಪದು ಕಮ್ಮಿತೆನೆತೋರ್ಪ ಪರಿಮಳದ ಕಿಟ್ಟಳ ಸಂದಣಿಯೆನಿಕ್ಕು ಪರಿಹರಿಸೆನಿಪುದಕೆಪೀರ್ಚೆಂಬನುಡಿಯಕ್ಕು ಸಲೆಯಾರ್ಯ‌ದೆನೆ ಯಜ್ಞನಕ್ಕುಂ (ಕಬ್ಬಿಕೈ-67).

13. **ಕರ್ಣಾಟಕ ಶಬ್ದಮಂಜರಿ;** ವಿರಕ್ತ ತೋಂಟದಾರ್ಯ (1550) 120 ವಾರ್ಧಕಪಟ್ಪದಿ ಪದ್ಯಗಳಲ್ಲಿ ಹಳಗನ್ನಡ ಶಬ್ದಗಳಿಗೆ ಅರ್ಥವನ್ನು ಹೇಳಲಾಗಿದೆ. ಕಬ್ಬಿಗರ ಕೈಪಿಡಿಯನ್ನು ಬಹುಮಟ್ಟಿಗೆ ಹೋಲುತ್ತದೆ. ಇದು ಬಹಳ ಜನಪ್ರಿಯ

ವಾಗಿತ್ತೆಂಬುದಕ್ಕೆ ಮಸೇಗೌಡರು (1870) ಹೆಸರುಘಟ್ಟದ ಹೊನ್ನಪ್ಪ (1884) ವಿಬುಧಾನಂದಿನೀ, ಎಸ್. ಆರ್. ಕರಿಬಸವಶಾಸ್ತ್ರಿ (1891) ಸುಜನೋಲ್ಲಾಸಿನೀ ಪತ್ತೊಂದು ಕವಿ ಗೊತ್ತಿರದ ಟೀಕೊ ಇವೆ. ಎಳೆಬೂವಿಬುವಿಧರೆನೆಲಂತಿರೆಯುುರನ್ನ ಪಸಿರಳು ಪೊಡವಿಯೆನೆ ಮೇದಿನಿಯು ನಾಮಮರಸುಮಗನೊಳರಗುವರ ನೆಂದೊಡಕ್ಕು ಗದ್ದುಗೆ ಪಟ್ಟವಣೆಯೆನಲ್ ಸಿಂಹಾಸನಂ (ಶಬ್ದಮಂ. 38)

14. ಭಾರತ ನಿಘಂಟು : ಇದರ ಕರ್ತೃ ಯಾರೆಂಬುದು ತಿಳಿಯದು ಕಾಲ (1600). ಕುಮಾರವ್ಯಾಸನೇ ಬರೆದಿರಬಹುದೆಂದು ಪ್ರತೀತಿಯಿದೆ. 67 ಕಂದ ಪದ್ಯಗಳಲ್ಲಿ ಕುಮಾರವ್ಯಾಸ ಭಾರತದಲ್ಲಿನ ಶಬ್ಧಗಳಿಗೆ ಅರ್ಥ ಹೇಳಿದೆ. ಅಡಬಳ ಮೆಂದೆನೆ ಮಾಂಸಂ ಪಡಿಸಣಮೆಂದನೆ ಪರೀಕ್ಷೆ ಕಡುಹನೆ ಶೌರ್ಯಂ ಕಡುಹನೆ ಪರಾ ಕ್ರಮಮಂಮುಕ್ಕುಡಿಯೆ ನೆಲವಗಡಕೆ ನಾಮ (ಭಾರನಿ. 4).

15. ಕರ್ಣಾಟಕ ಸಂಜೀವನಂ: ಶೃಂಗಾರ ಕವಿ(1600) 35 ವಾರ್ಧಕ ಷಟ್ಪದಿಯ ಪದ್ಯಗಳಲ್ಲಿ ಕನ್ನಡದ ರಳ-ಕುಳಕ್ಷಳ ಶಬ್ಧಗಳಿಗೆ ಅರ್ಥವನ್ನು ಹೇಳಿದೆ. "ಸೂಚನೆಲ್ ಬಾರಿ ಗಜೆಮೆನೆ ಸರಳ ಭೇಧಮಾ ವಿಾಚಿಗಂ ಸಾಮಾನ್ಯದಾಮೂಲ್ಯ ಬಂಧಮದು ಬಾಮಿಕಂ ಸೀಪ್ರಾಣಗಿ ಬಾಳಶಾಖಂ ಪೊಟವು ಸಾಮಾನ್ಯ ಕೃತಿಗೆ ನಾಮಂ" (ಕರ್ಣಾಸಂ-6)

16. ಶಬ್ದರತ್ನಾಕರ: ಕವಿ ಮತ್ತು ಕಾಲ ಗೊತ್ತಿಲ್ಲ, ಸುಮಾರು 1600 ಇರಬಹುದು. ಸಂಸ್ಕೃತ ಶಬ್ದಗಳಿಗೆ ಮೂವತ್ತು ಕಂದ ಪದ್ಯಗಳಲ್ಲಿ ನಾನಾರ್ಥವನ್ನು ಹೇಳಿದೆ 'ಶಬ್ದಾಗಮದೊಳ್' ಎಂದು ಮುಗಿಯುತ್ತದೆ "ಶ್ರೀಧರಮೆನೆ ಗಿರಿಯಕ್ಕುಂ ಶ್ರೀಧರಮೆನೆ ಸಿಂಹಮಕ್ಕು ಸಿಂಗರಮಕ್ಕು. ಶ್ರೀಧರಮೆನೆ ಜಲಮಕ್ಕುಂ ಶ್ರೀಧರಮೆನೆ ವಿಷ್ಣುವಕ್ಕು ಶಬ್ದಾಗಮದೊಳ್"

17. ನಾನಾರ್ಥ ಕಂದ: ಚನ್ನಕವಿ (1600) ಸಂಸ್ಕೃತ ಶಬ್ದಗಳಿಗೆ ನಾನಾರ್ಥವನ್ನು ನೂರ ಅರವತ್ತು ಕಂದಪದ್ಯಗಳಲ್ಲಿ ಹೇಳಿದೆ. ಹೆಸರುಘಟ್ಟದ ಹೊನ್ನಪ್ಪನವರು (1884) ವಿದ್ವಂದ್ರಜನೀ ಎಂಬ ಟೀಕೆಯನ್ನು ರಚಿಸಿದ್ದಾರೆ. "ಅಳಿಗರುಗ ಕಪ್ಪು ಘನಕತ್ತಲೆಯಭ್ರಕವಾರು ಭೃಂಗ ಶಬ್ದಂ ಸುರ ರವಿನಿಳಯಂ ಶರ ಪಕ್ಷಿನಭಂ ತಿಳಿಯಲ್ಕಾರುಂ ಪೆಸರು ಜಪಕೆ ಖಗ ಶಬ್ದಂಗಳ್" (ನಾನಾಕಂ. 89)

18. ನಾನಾರ್ಥ ರತ್ನಾಕರ: ದೇವೋತ್ತಮ (1609) ನೂರ ಅರವತ್ತೊಂಬತ್ತು ವೃತ್ತಗಳಲ್ಲಿ ಸಂಸ್ಕೃತ ಶಬ್ದಗಳ ನಾನಾರ್ಥವನ್ನು ಹೇಳಿದೆ ತೋವಿನ ಕೆರೆ ರಾಯಣ್ಣವಾಗ್ಮಿ ಒಂದು ಟೀಕೆಯನ್ನು ಇದಕ್ಕೆ ರಚಿಸಿದ್ದಾನೆ "ಕಾಲದೊಳ್ ಆಂಬು ಜಾಸನನೋಳ್ ಉತ್ತಮ ಕಪಿಯೋಳ್ ವಿಧಾನದೊಳ್ ಮೇಳದೊಳುಂ

ವಿಚಕ್ಷಣದೊಳ್ ಶ್ರುತಿಯೊಳ್ ವಿಧಿ ಶಬ್ದಮಕ್ಕುಂ ಶುಂಡಾಲ ಕರಾಗ್ರದೊಳ್ ಶ್ರವಣ ಕುಂಡಲದೊಳ್ ವನಜಾತಮಧ್ಯದೊಳ್ ಬಾಲೆಯೊಳ್ ಆಹವಂಗಳೊಳ್ ತೀರ್ಥ ಕೊಳುಂ ನಿಜಕರ್ಣಿಕಾಪ್ವಯಂ" (ನಾನಾರ.22)

19. **ಕವಿಕಂಠಹಾರ :** ಸೂರ್ಯಕವಿ (1160) ಕನ್ನಡ ಶಬ್ದಗಳಿಗೆ ಇನ್ನೂರೆಪ್ಪತ್ತೊಂದು ಕಂದಪದ್ಯಗಳಲ್ಲಿ ಅರ್ಥ ಹೇಳಿದೆ. ಕರಿಮೊಗನಿಲಿದೇರಂ ತಾಂನೆಯ ಬಿಂಕಣಗಿವಿಯ ಬಿಜ್ಜೆವಳನುಮೆಯಣುಗಂ ಇರದೆಡರ್ಗೇಡಿಗನೆನಲತಿ ಭರದಿಂ ಗಣನಾಥನಮರ್ದನಾಮ ವಿವಕ್ಕುಂ (ಕವಿಕಂ. 20)

20. **ಅಕ್ಷರಾದಿ ನಿಘಂಟು :** ಶಾಲ್ಯದ ಕೃಷ್ಣರಾಜ (1775) ಸಂಸ್ಕೃತ ಶಬ್ದಗಳಿಗೆ ಕನ್ನಡದ ಪರ್ಯಾಯ ಶಬ್ದಗಳನ್ನು ಕೊಟ್ಟಿದೆ.

21. **ಅಕರಾದಿ ನಿಘಂಟು:** ಲಕ್ಷ್ಮಣ ಪಂಡಿತ (1375) ಸಂಸ್ಕೃತ ಶಬ್ದಗಳಿಗೆ ಮುಖ್ಯವಾಗಿ ವೈದ್ಯ ಶಬ್ದಗಳಿಗೆ ಕನ್ನಡದ ಪರ್ಯಾಯ ಶಬ್ದಗಳನ್ನು ಹೇಳಿದೆ.

22. **ಶಬ್ದಾರ್ಥಮಂಜರಿ:** ಚಂದ್ರಸಾಗರವರ್ಣಿ (1810) ವಿವರ ಸಿಕ್ಕಿಲ್ಲ.

23. **ಶಬ್ದಮಂಜರಿ :** ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯ (1830) ವಿವರ ಸಿಕ್ಕಿಲ್ಲ.

24. **ಚಾಮುಂಡಿಕಾ ಲಘುನಿಘಂಟು :** ಮುಮ್ಮಡಿ ಕೃಷ್ಣರಾಜ(1838) ದೇವತೆಗಳು ಧರಿಸುವ ಆಯುಧ, ಹಸ್ತವಿಶೇಷ, ಮೃಗ ನಾಮಾವಳಿ ಇವುಗಳಿಗೆ ಸಂಬಂಧಿಸಿದ ಸಂಸ್ಕೃತ ಶಬ್ದಗಳಿಗೆ ಕನ್ನಡದ ಪರ್ಯಾಯ ಶಬ್ದಗಳನ್ನು ಕೊಡಲಾಗಿದೆ.

25. **ಕನ್ನಡ-ಇಂಗ್ಲಿಷ್-ನಿಘಂಟು :** ರೆವರೆಂಡ್ ರೀವ್ (1832) ಅಕಾರಾದಿ ಕ್ರಮದಲ್ಲಿ ಹೊರ ಬಂದ ನಿಘಂಟು. ಕನ್ನಡ ಮತ್ತು ಸಂಸ್ಕೃತ ಶಬ್ದಗಳಿಗೆ ಇಂಗ್ಲಿಷ್‌ನಲ್ಲಿ ಅರ್ಥ ಹೇಳಿದೆ. ಪಾಶ್ಚಿಮಾತ್ಯ ವಿದ್ವಾಂಸರು ರಚಿಸಿದ ಎಲ್ಲ ನಿಘಂಟುಗಳಿಗೂ ಇದು ಆಕರ ಗ್ರಂಥ a.c. ದಿಂಡುರುಳ v.n. To be Slain or die ದಿಂಡುರುಳ್ಚು, ದಿಂಡುರುಳಿಸು to Kill (793)

26. **ಕನ್ನಡ-ಇಂಗ್ಲಷ್-ನಿಘಂಟು :** ಡ್ಯಾನಿಯಲ್ ಸ್ಯಾಂಡರ್‌ಸನ್ 1858) ರೆ. ರೀವ್ ಅವರ ನಿಘಂಟನ್ನು ಪರಿಷ್ಕರಿಸಿ ವಿಸ್ತರಿಸಿ ಕನ್ನಡ ಶಬ್ದಗಳಿಗೆ ಇಂಗ್ಲೀಷಿನಲ್ಲಿ ಅರ್ಥ ಕೊಡಲಾಗಿದೆ 1979ರಲ್ಲಿ ಪುನರ್ ಮುದ್ರಣವಾಗಿದೆ ಕದೀಮ Kadima, S. an old Servent 2, An old inhabitant-old and heredatary cultivator (249)

27. ಕನ್ನಡ ಇಂಗ್ಲಿಷ್ ನಿಘಂಟು : ಜಾನ್ ಗ್ಯಾರೆಟ್ (1882) ಸ್ಯಾಂಡರ್‌ಸನ್ ನಿಘಂಟಿನಂತೆಯೇ ಇದೆ. ಅಕ್ಕರ, ಅಕ್ಕರತೆ, ಅಕ್ಕರಿತೆ S. Attachment, Love, indulgence (26).

28. ಶಬ್ದಸಂಗ್ರಹ ; ಗುರುರಾವ್ ವಿಠ್ಠಲ್ ಮೋಹರೆ (1874) ಕನ್ನಡ ಮತ್ತು ಸಂಸ್ಕೃತ ಶಬ್ದಗಳಿಗೆ ಅರ್ಥ ಹೇಳಿದೆ.

29. ಕರ್ಣಾಟಕ ಶಬ್ದಕಲ್ಪದ್ರುಮ: ರಾಮಶಾಸ್ತ್ರೀ ಮತ್ತು ಹೆಸರು ಘಟ್ಟದ ಹೊನ್ನಪ್ಪ (1885) ಕನ್ನಡ ಮತ್ತು ಸಂಸ್ಕೃತ ಶಬ್ದಗಳಿಗೆ ಅರ್ಥವನ್ನು ಕೊಟ್ಟು ಜೊತೆಗೆ ಪ್ರಯೋಗಗಳನ್ನು ಕೊಟ್ಟು ಅವುಗಳಿಗೆ ಆಕರವನ್ನು ತಿಳಿಸಿದ್ದಾರೆ. ಕಾಸು (ಕ್ರಿ.) ಬೇಯಿಸುವುದು ನಾಣ್ಯದಲ್ಲಿ ಭೇದ ಶ-ಕಾಸು-ದಾಹೇ, ವಿವರೇ ಜ. ಕಾಸುವೀಸ ಬಾಕಿಯಿಲ್ಲದ ಹಾಗೆ (82).

30. ಶಬ್ದಮಂಜರಿ: ಗಂಗಾಧರ ಮಡಿವಾಳೇಶ್ವರ ತುರಮುರಿ (1890) ಕನ್ನಡ ಸಂಸ್ಕೃತ ಶಬ್ದಗಳಿಗೆ ಅರ್ಥವನ್ನು ಕೊಡಲಾಗಿದೆ. ಕಟ್ಟು ಕ (ನಾ) ಮೇರೆ, ಗೊತ್ತು. 2. ಕಾಳಿನ ರಸ, 3. ಅಡ್ಡಿ, 4. ಆಜ್ಞಾ. 5. ಮೋಹಿಸೋಣ 6. ದೇವರ ಅರಿಕೆ, 7. ನಿಶ್ಚಯ, 8. ರೀತಿ. (66)

31. ಕಿಸಂಪಾರ್ ಗ್ಲಾಸರಿ : ಉಲ್ಲಾಳ ನರಸಿಂಗರಾವ್ (1891) ವ್ಯವಸಾಯ, ವಾಣಿಜ್ಯ, ವಾಸ್ತು, ತಾಂತ್ರಿಕ, ನ್ಯಾಯಾಲಯ, ಔಷಧ, ಖಗೋಳ, ಭೂಗೋಳ, ಸಂಗೀತ ಮೊದಲಾದ ವಿಭಾಗಗಳ ಶಬ್ದಗಳನ್ನು ವರ್ಗೀಕರಿಸಿ ಇಂಗ್ಲೀಷಿನಲ್ಲಿ ಅರ್ಥಕೊಡಲಾಗಿದೆ. ಅಲ್ಲದೆ ಇಂಗ್ಲಿಷ್ ಲಿಪಿಯಲ್ಲಿ ಶಬ್ದರೂಪವನ್ನು ಕೊಡಲಾಗಿದೆ.

ಪೈರು: Pairu, Standing crop or corn: ಅಕ್ಕಡಿ: (Akkadi -Sowing different kinds of pulse at the fit season (Mg) ಕೀಳು-(Kilu) fruit Etc growing on lower level as opposed to ಮೇಲು-ಬೆದ್ದಲು-(beddalu) corn growng on dry and: ಮುಂಗಾರು-(Mungaru) the earlier crop ; ಹಿಂಗಾರು-(hingaru) later crop (೧೪).

ಪ್ರಾದೇಶಿಕ ಭೇದವನ್ನು (Mg-Mangalore) ತಿಳಿಸಿ ಅನುಬಂಧದಲ್ಲಿ ಅಕಾರಾದಿ ಕೊಟ್ಟು ಓದುಗರಿಗೆ ಉಪಕಾರ ಮಾಡಿದ್ದಾರೆ.

30. ಕರ್ಣಾಟಕ ಭಾಷಾಕರ : ಜಯರಾಮಾಚಾರ್ಯ (1891) ಸಂಸ್ಕೃತ ಕನ್ನಡ ಶಬ್ದಗಳ ಅರ್ಥವನ್ನು ಹೇಳಲಾಗಿದೆ. ಒಡೆಯ ನಾ. ಸ್ವಾಮಿ: ೭(ಪ್ರ) ಇದು ಇದನ್ನಲ್ಲಿ ಇರುವುದೆಂಬರ್ಥದಲ್ಲಿ ಒಡೆಯ ಪ್ರತ್ಯಯ ಸೇರ್ಪಡೆಯೊಡೆಯ (೪೧).

31. **ಕನ್ನಡ-ಇಂಗ್ಲಿಷ್-ನಿಘಂಟು :** ರೆವರೆಂಡ್, ಪಾದರ್ ಕಿಟ್ಟೆಲ್ (1893) ಕನ್ನಡ ನಿಘಂಟುಗಳ ಇತಿಹಾಸವಲ್ಲಿ ಇದೊಂದು ಮೈಲಿಗಲ್ಲು' ರೆವರೆಂಡ್ ರೀವ್ ಅವರ ನಿಘಂಟನ್ನು ಆಧರಿಸಿ ಹಲವಾರು ಕನ್ನಡ ಕಾವ್ಯಗಳಿಂದ ಶಬ್ದಗಳನ್ನು ಆರಿಸಿಕೊಂಡು ದೇಶ್ಯ, ತತ್ಸಮ, ತದ್ಭವ ಮತ್ತು ಅನ್ಯದೇಶ್ಯ ಶಬ್ದಗಳನ್ನು ಕೊಟ್ಟು ಇಂಗ್ಲಿಷಿನಲ್ಲಿ ಲಿಪ್ಯಂತರ ಮತ್ತು ಅರ್ಥವನ್ನು ಕೊಡಲಾಗಿದೆ, ಕನ್ನಡದ ಮೊಟ್ಟ ಮೊದಲನೆಯ ಶಾಸ್ತ್ರೀಯವಾದ ನಿಘಂಟು, ಶಬ್ದ, ಅರ್ಥ, ಪ್ರಯೋಗ ಮತ್ತು ನಿಷ್ಪತ್ತಿಯನ್ನು ಸಾಧ್ಯವಾದಷ್ಟು ಮಟ್ಟಿಗೆ ಸೂಚಿಸಲಾಗಿದೆ. ಜೊತೆಗೆ ಪಡೆನುಡಿ, ಗಾದೆಗಳನ್ನುಕೊಡಲಾಗಿದೆ. ಮುಂದಿನಎಲ್ಲನಿಘಂಟುಗಳಿಗೂ ಆಕರವಾಯಿತು. ಪಾಶ್ಚಾತ್ಯ ವಿದ್ವಾಂಸರಾಗಿ ಕನ್ನಡಕ್ಕೆ ಸೇವೆ ಸಲ್ಲಿಸಿದವರಲ್ಲಿ ರೆ.ಕಿಟ್ಟೆಲ್ ಅಗ್ರಗಣ್ಯರು. ಇವರಂತೆ ದೇಶಭಾಷೆಗಳಾದ ತಮಿಳು (1923) ಮಲಯಾಳ-ಗುಂಡರ್ಟ್ (1872) ತುಳು-ಮನ್ನಾರ್ (1886)ತೆಲುಗು-ಬ್ರೌನ್ (1852)ಅವರುಗಳೂ ನಿಘಂಟು ರಚಿಸಿದ್ದಾರೆ. ಅವರೆಲ್ಲರಿಗೂ ಕಿಟ್ಟೆಲ್ ಅವರ ಕೋಶ ದಾರಿದೀಪವಿದ್ದಂತೆ. ಅಲಭ್ಯವಾಗಿದ್ದ ಈ ನಿಘಂಟನ್ನು ಮದರಾಸು ವಿಶ್ವವಿದ್ಯಾನಿಲಯದವರು ಪ್ರೊ.ಎಂ. ಮರಿಯಪ್ಪಭಟ್ಟರ ನೇತೃತ್ವದಲ್ಲಿ 1968ರಲ್ಲಿ ನಾಲ್ಕು ಸಂಪುಟಗಳಲ್ಲಿ ಪ್ರಕಟಿಸಿದರು. ಅಕ್ಷರಗಳ ಗಾತ್ರ, ವಿರಾಮ ಚಿಹ್ನೆಯನ್ನು ಅರ್ಥಪೂರ್ಣವಾಗಿ ಉಪಯೋಗಿಸಿದ ಈ ನಿಘಂಟು ಇಂದಿಗೂ ಅಸಮಾನ ನಿಘಂಟು ಎಂದು ಖ್ಯಾತಿ ಪಡೆದಿದೆ. ಸುಮಾರು ಐವತ್ತೈದು ಪುಟಗಳ ಸುದೀರ್ಘ ಮುನ್ನುಡಿ, ಗ್ರಂಥಗಳ ಸಂಕೇತ ಮತ್ತು ವಿವರಣೆಯೊಂದಿಗೆ ಸುಮಾರು 1750 ಪುಟದಷ್ಟು ಹಿರಿದಾಗಿದೆ.

ಕಬ್ಬಿಣ: Kabbina, ಕಬ್ಬಿಣ, ಕಬ್ಬುನ, ಕರ್ಬುನ, ಕರ್ಬೊನ್, ಕಾರ್ಬೊನ್(the dark coloured black metal): iron. (ಲೋಹ ಕಾಲಾಯಾಸ)etc. Si 332: C: Te. ಇನುಮು. T. ಇರುಮ್ಬು, ಕರುಪ್ಪೊನ್ Tu ಕರ್ಬ See 1). ಕಬ್ಬಿಣದ ಕಿಟ್ಟ [ಮಣ್ಡೂರ Si 382] ಕಬ್ಬಿಣದ ಪ್ರತಿಮೆ (346) ಕಬ್ಬಿಣದ ಕೊಪ್ಪರಿಗೆ (B. 3,46) ಕಬ್ಬಿಣದ ಅಂಗಡಿಯಲ್ಲಿ ನೊಣಕ್ಕೆ ಏನು ಅಗ್ಗ ? ಕಬ್ಬಿಣದ ಅಂಗಡಿಯಲ್ಲಿ ಕಡ್ಲೇ ಹುಡುಕಿದ ಹಾಗೆ (Prvs) See ಮುದ್ದೇ ಕಬ್ಬಿಣಕಿಟ್ಟ. Rust of iron, Scoriae drass [ಮಣ್ಡೂರ ಸಿಂಘಾಣ G] ಕಬ್ಬಿಣಗೊಮ್ಬೆ an iron inrage [ಸ್ಥೂಣೆ Si 420] ಕಬ್ಬಿಣ ಅಂಚು. ಅಂಚು-an iron plate for beaking, bakes etc. [B, 4, 158]. ಕಬ್ಬಿಣದ ಲಾಳ a bar an iron ಕಬ್ಬಿಣದ ಸಲಾಕೆ an iron spike etc. ದಸಿ.) G [೩೮೬].

31. **ನಾನಾರ್ಥ ಶಬ್ದಾವಳಿ ಮತ್ತು ಸಂಜ್ಞಾರ್ಥಗಳು ;** ಬೋಳಾರ ರಾಮಕೃಷ್ಣಯ್ಯ [1890] ಕನ್ನಡ ಮತ್ತು ಸಂಸ್ಕೃತ ಶಬ್ದಗಳಿಗೆ ಅರ್ಥಹೇಳಿ ಉಪಯುಕ್ತವಾದ ಸಂಜ್ಞಾರ್ಥವನ್ನು ಕೊಡಲಾಗಿದೆ.

ಎಚ್ಚರ ಎಚ್ಚರಿಕೆ [ಶ] ಇಷಾರೆ, ಮುಂದಾಗಿ ತಿಳಿವಳಿಕೆ: 2. ವರದಿ' ಸೂಚನೆ, 3. ಜಾಗ್ರತೆ, ಮೆಲುಕು,[೪೩] ತ್ರಿಲೋಹ-ಚಿನ್ನ: ೨. ಬೆಳ್ಳಿ:೩, ತಾಮ್ರ [೨೮೨]

32. ಸಿರಿಗನ್ನಡ ಅರ್ಥಕೋಶ : ಶಿವ ರಾಮ ಕಾರಂತ [1940] ಕನ್ನಡ, ಸಂಸ್ಕೃತ ಅನ್ಯದೇಶ್ಯ ಶಬ್ದಗಳಿಗೆ ಕನ್ನಡ ಅರ್ಥ ಹೇಳಿದೆ. ಕಟ್ಟು. ಸುತ್ತು ಬಿಗಿ. ತಡೆ: ಕಡೆ ನಿಯಮ, ನಿರ್ಬಂಧ, ದಂಡೆ, ಸಾರ, ನೀರ್ಕಟ್ಟೆ, ಕಡಿ, ಮೇರೆ ಮೀರು, ಮರ್ಯಾದೆ ಮೀರು, ನಿಯಮ ಉಲ್ಲಂಘಿಸು: ವ್ಯಾಕುಲಪಡು, ಪಾಡು ನಿರ್ಬಂಧ, ಕಟ್ಟಳೆಯ ಕಡೆ [೮೮]. ಹಲವಾರು ಬಾರಿ ಅಚ್ಚಾಗಿರುವುದೇ ಇದರ ಜನ್ಮ ಪ್ರಿಯತೆಗೆ ಸಾಕ್ಷಿ.

33. ಕನ್ನಡ ನಿಘಂಟು : ಮಚ್ಚಿಮಲೆ ಶಂಕರನಾರಾಯಣರಾವ್, ಆರ್. ಎಸ್. ನಾಪೂರ್ಕರ, ಮತ್ತು ಸೇಡಿಯಾಪು ಕೃಷ್ಣಭಟ್ಟ [1951] ಕನ್ನಡ ಮತ್ತು ಸಂಸ್ಕೃತ ಶಬ್ದಗಳಿಗೆ ಅರ್ಥವನ್ನು ಹೇಳಿದೆ. ಕೊತ್ತಲ, ಕೊತ್ತಳ ಕೋಟೆಯ ಮೇಲ್ಭಾಗ ೨. ಕೋಟೆಯ ಮೇಲಿನ ಅಟ್ಟಳೆ. ಬುರುಜು. [೮೪] ಕೆಲವು ಸಂಕೇತಾರ್ಥಗಳನ್ನು ಕೊಡಲಾಗಿದೆ.

34. ಕನ್ನಡ-ಕನ್ನಡ-ಶಬ್ದಕೋಶ : ಎಚ್. ವಿ. ರಮಾಕಾಂತರಾವ್ [1952] ಕನ್ನಡ ಮತ್ತು ಸಂಸ್ಕೃತ ಶಬ್ದಗಳಿಗೆ ಅರ್ಥ ಹೇಳಿದೆ. ಇಪ್ಪತ್ತು ಸಾವಿರಕ್ಕಿಂತ ಹೆಚ್ಚು ಶಬ್ದಗಳಿವೆ ಕೊಬ(ಬ್ಬ)ರಿ [ಕ. ನಾ.] ತೆಂಗಿನಕಾಯ ತಿರುಳು : ಒಣಗಿಸಿದ ತೆಂಗಿನಕಾಯಿ [೧೬೧]

35. ಕನ್ನಡ-ಕನ್ನಡ ಕಸ್ತೂರಿಕೋಶ (ಸಚಿತ್ರ) : ಪಂಡಿತ ಜಿ. ವಿ. ಕವಲಿ [1957] ಕನ್ನಡ ಮತ್ತು ಸಂಸ್ಕೃತ ಶಬ್ದಗಳಿಗೆ ಅರ್ಥ ಹೇಳಿರುವುದಲ್ಲದೆ ವಿಜ್ಞಾನ, ತತ್ವ, ವಾಸ್ತು ಶಿಲ್ಪ ಮೊದಲಾದ ಪರಿಭಾಷೆಯೊಡನೆ ಸಂದರ್ಭೋಚಿತವಾಗಿ ಚಿತ್ರಗಳನ್ನು ಕೊಡಲಾಗಿದೆ. ಕನ್ನಡದ ಮೊದಲನೆಯ ಸಚಿತ್ರ ನಿಂಘಟು. ಖಡ್ಗಮೃಗ [ಸಂ] ನಾ. ಮೂಗಿನ ಮೇಲೆ ಕೊಂಬಿರುವ ಗಂಡಕ [ಇವು ನೇಪಾಲದಲ್ಲಿ ಹೆಚ್ಚಾಗಿವೆ [೨೯೦] ನಿತ್ಯೋಪಯೋಗದ ನ್ಯಾಯಗಳು ಮತ್ತು ಸಂಕೇತ ಸಮಾಲೋಚನೆಯನ್ನು ಅಂತ್ಯದಲ್ಲಿ ಕೊಡಲಾಗಿದೆ.

36. ಕನ್ನಡ-ಕನ್ನಡ ಶಬ್ದಕೋಶ : ಗುರುನಾಥ ಜೋಶಿ ಮತ್ತು ಜಿ. ಅಶ್ವತ್ಥನಾರಾಯಣರಾವ್ [1956] ಕನ್ನಡ ಮತ್ತು ಸಂಸ್ಕೃತ ಶಬ್ದಗಳಿತ ಅರ್ಥ ಹೇಳಿದೆ,

37. **ಕನ್ನಡ ಕನ್ನಡ ಇಂಗ್ಲೀಷ್ :** ಆರ್. ಎಸ್: ರಾಮರಾವ್ 1965 ಕನ್ನಡ ಶಬ್ದಗಳಿಗೆ ಕನ್ನಡ ಮತ್ತು ಇಂಗ್ಲೀಷಿನಲ್ಲಿ ಅರ್ಥ ಕೊಟ್ಟಿದೆ. ಜೇಬಿನಾಕಾರದ ಚಿಕ್ಕ ನಿಘಂಟು, ಕೋಡಂಗಿ. ಹಾಸ್ಯಗಾರ. buffoon apishman.

38. **ಕಾವ್ಯ ಪದಮಂಜರಿ :** ಸ. ಸ. ಮಾಳವಾಡ ಮತ್ತು ಕ. ವೆಂ. ರಾಜಗೋಪಾಲ್, ಟಿ. ಕೇಶವಭಟ್ಟ (1970) ಕನ್ನಡ ಕಾವ್ಯಗಳಲ್ಲಿ ಬರುವ ಕನ್ನಡ ಸಂಸ್ಕೃತ ಶಬ್ದಗಳಿಗೆ ಅರ್ಥ ಹೇಳಿದೆ. **ಮುದವಳಿಗೆ :** ಮುದವಣಿಗಿತ್ತಿ, ವಧು (೨೦೨).

39. **ಕುಮಾರವ್ಯಾಸ ಭಾರತ ನಿಘಂಟು :** ಎಸ್ಕೆ (1971) ಕುಮಾರ ವ್ಯಾಸ ಭಾರತದಲ್ಲಿನ ಜಾಣ್ನುಡಿ, ನಾಣ್ನುಡಿ, ಕುಸ್ತಿ ಮೊದಲಾದ ಶಬ್ದಗಳಿಗೆ ಅರ್ಥ ದೊಡನೆ ಪ್ರಯೋಗವನ್ನು ಕೊಡಲಾಗಿದೆ. ಕರಿಮುಳಿಪೋಯ್ತು-ಕಮರಿತು (೧೩)

40. **ಶ್ರೀವತ್ಸ ನಿಘಂಟು :** ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ (1971) ಅನೇಕ ಶಾಸ್ತ್ರಗಳ ಸಂಖ್ಯಾ ವಿಶಿಷ್ಟಪದವನ್ನು ವಿವರಿಸುವ ಕೋಶ. ಸುಮಾರು ನಾಲ್ಕು ಸಾವಿರ ಸಂಖ್ಯಾ ವಿಶಿಷ್ಟ ಪದದ ವಿವರಣೆಯಿದೆ. ಈ ತೆರದಲ್ಲಿ ಇದೇ ಮೊದಲನೆಯದು. ಈ ಹಿಂದಿನ ಹಲವಾರು ನಿಘಂಟುಗಳಿಂದ ಇದನ್ನು ಸಿದ್ಧಪಡಿಸಲಾಗಿದೆ. ಪ್ರಾಣ-4 ವಾಕ್ಕು. ಚಮಸ್ಸು. ಶ್ರೋತ್ರ, ಮನಸ್ಸು (ಬೃಹ್ಮಭಾ. 11-321), ಪ್ರಾಣ 5. ನೋ. ವಾಯು 10. ಪ್ರಾಣಾಃ ಶ್ರೋತ್ರಭ್ಚಯ; ಚಮುಧ್ವರ್ಯು. ನಾಸಿಕಾಧ್ವಯು, ವಾಕ್ಕು, (ಬೃಹ್ಮಭಾ. 11-183, ತೈತ್ತಿರಿ. 5-1-70) ಪ್ರಾಣ ; ನೋ ದ್ವಾರ-9 ಪ್ರಾಣ-10 : (ಅ) ದ್ವಾರ 9 + ನಾಭಿ (ಬೃಹ್ಮಭಾ. 11-183) ಆ. ನೋ. ಗುಣ-10 (ಇ) ನೋ. ತಾಳದ ಪ್ರಾಣಗಳು 10. (ಈ) ಸ್ಪರ್ಶನಾಸನ, ಪ್ರಾಣ, ಚಕ್ಷುಸ್ಸು ಶ್ರೋತ್ರ (ಪಂಚೇಂದ್ರಿಯ ಪ್ರಾಣಗಳು) ಮನೋಬಲ, ವಚನಬಲ, ಕಾಯಬಲ (3 ಬಲಪ್ರಾಣಗಳು) ಶ್ವಾಸೋಚ್ಛ್ವಾಸ ಮತ್ತು ಆಯು (ಜೈ. ಧ. ೩೩೯) (೨೮೫)

41. **ಕನ್ನಡ ಸಮನಾರ್ಥಕ ಕೋಶ :** ಜೆ. ಎಂ. ಹನಸೋಗೆ (1974) ಕನ್ನಡ ಮತ್ತು ಸಂಸ್ಕೃತ ಶಬ್ದಗಳಿಗೆ ಸಮಾನ ಶಬ್ದಗಳನ್ನು ಕೊಡಲಾಗಿದೆ. ಅಂಬಿಗ. ಅಂಬಿಗಾರ, ಕಬ್ಬಿಲ, ಕಬ್ಬಿಲಿಗ, ಕಬ್ಬೆಯ, ಕೈವರ್ತ. ಗಡೆಕಾರ, ಗಣೆಕಾರ, ತೊರೆಯ, ದಾಶ, ಧೀವರ, ಮಿಾಂಗುಲಿ, ನಿಯಾಮಕ, ನಾವಾಡಿಗ, ಮಿಾನುಗಾರ ನೋ ಬೆಸ್ತ (೨)

42. **ಪಂಡಿತ ನಿಘಂಟು :** ಪಿ. ಡಿ. ಪಂಡಿತ್ (1913) ಆರುಭಾಷೆಗಳಲ್ಲಿ ಸಮಾನ ಶಬ್ದಕೊಡುವ ಮೊದಲ ನಿಘಂಟು. ಬಹುಭಾಷಾ ಸಮಾನಾರ್ಥಕ ರೀತಿಯ

ವಿಶಿಷ್ಟವಾದ ನಿಘಂಟು. ಮೊದಲ ಭಾಗದಲ್ಲಿ ಕನ್ನಡ ಅಕ್ಕಿ, ಹಿಂದಿ ಚಾವಲ್ ಮರಾಠಿ ತಾಂದೂಳ್, ಗುಜರಾತಿ ಚಾಂದೂಳ್, ತೆಲುಗು ಬಿಯ್ಯಮು, ತಮಿಳು ಅರಿಶಿ, ಆಮೇಲೆ ಸಂಸ್ಕೃತ-ಕನ್ನಡ, ಲ್ಯಾಟಿನ್ ಮತ್ತು ಗ್ರೀಕ್ ಸಸ್ಯಗಳಿಗೆ ಕನ್ನಡದ ಅರ್ಥ ಕೊಡಲಾಗಿದೆ. ಕೊನೆಯಲ್ಲಿ ಅಕಾರಾದಿಯಿದೆ.

43. **ಕನ್ನಡ ನಿಘಂಟು**: ಕನ್ನಡ ಸಾಹಿತ್ಯ ಪರಿಷತ್ತು. (ಸಂಪುಟ 1-1970, 2-1976, 3-1977, 4-1979 ರಲ್ಲಿ ಅಚ್ಚಾಗಿವೆ) ಇನ್ನೆರಡು ಸಂಪುಟಗಳು ಪ್ರಕಟವಾಗಬೇಕು, "ನಾಘ"ಯಲ್ಲಿ ನಿಂತಿದೆ. ಇದುವರೆಗೆ ಲಭ್ಯವಾಗಿರುವ ಶಾಸನ, ಕಾವ್ಯ, ನಿಘಂಟುಗಳೆಲ್ಲವನ್ನು ಸೇರಿಸಿ ಭಾಷಾಶಾಸ್ತ್ರತತ್ವಗಳಿಗನುಸಾರವಾಗಿ ಚಾರಿತ್ರಿಕ ವಿವರಣೆಯಿಂದ ಪ್ರಮಾಣಭೂತವಾದ ಪ್ರಯೋಗ ಮತ್ತು ನಿಷ್ಪತ್ತಿವಿಭಾಗದಿಂದ ಭಾರತದ ದೇಶಭಾಷೆಗಳಲ್ಲಿಯೇ ಮೊತ್ತಮೊದಲನೆಯದು. ಕ್ರಿ. ಶ. 450 ರ ಹಲ್ಮಿಡಿಶಾಸನದಿಂದ ಕನ್ನಡ ವಿಶ್ವಕೋಶದವರೆಗೆ ಸುಮಾರು ಒಂಬತ್ತು ಲಕ್ಷ ಶಬ್ದಪ್ರಯೋಗಗಳನ್ನು ಸಂಗ್ರಹಿಸಲಾಗಿದೆ. ಸುಮಾರು ಎರಡು ಲಕ್ಷ ಶಬ್ದಗಳೂ ಪಡೆನುಡಿಗಳೂ ಗಾದೆಗಳನ್ನೂ ಒಳಗೊಂಡಿವೆ. ಎಲ್ಲ ಶಾಸ್ತ್ರಗಳ ಪಾರಿಭಾಷಿಕ ಶಬ್ದಗಳೂ ಆಧುನಿಕ ವೈಜ್ಞಾನಿಕಶಬ್ದಗಳೂ ಸೇರಿವೆ. ಕನ್ನಡಿಗರ ಬಹುದಿನಗಳ ಆಶೋತ್ತರವಾಗಿ ಈ ನಿಘಂಟು ರೂಪ ತಳೆಯುತ್ತಿದೆ. "ಶಬ್ದಪಾರವಾಗನಾಮಶಕ್ಯಂ" ಎಂಬ ಶಿರೋನಾಮೆಯನ್ನು ಹೊತ್ತ ಈ ನಿಘಂಟು, ಸರ್ಕಾರದ ಲಕ್ಷಾಂತರ ರೂಪಾಯಿಗಳ ಉದಾರ ನೆರವಿನಿಂದ ಈ ಯೋಜನೆ ನಡೆಯುತ್ತಿದೆ.

ಕೊಬ್ಬರಿ 1 (ಕ್ರಿ). ಕೊಬ್ಬಿ ನುಗ್ಗು ; ಗರ್ವದಿಂದ ನುಗ್ಗು (?) : ಕೂಗಿ ಕೊಬ್ಬರಿವೃತ್ತ ಕದಳಿವೃಂದಂಗಳಂ ನಾಗಸಿಕರಂ ಪ್ರೋಕ್ಷ್ಯ ಮುರಿವಂತೆ (ತುರಂಗ, ೪೯-೨೮). [(ಕೊಬ್ಬು 1) <(ಕೊರ್ವು-1)+ಪರಿ1)]

ಕೊಬ್ಬರಿ 2. ಕೊಪರಿ, ಕೊಪ್ಪರಿ, ಕೊಬರಿ, ಕೋಬರಿ, ಕೊಬರಿ (ನಾ). ತೆಂಗಿನ ಕಾಯಿಯ ಒಳಗೆ ಗಟ್ಟಿಗೊಂಡ ತಿರುಳು: ಒಣಗಿದಕಾಯಿ; ಕೊಬ್ಬರಿಯು ಕಾಯೊಳಗಿಲ್ಲಾಯಿಲ್ಲ (ಗರುಡಾ. ೧೬-೩೦) ಅವು ಚಿಪ್ಪುಗಟ್ಟಿದ ಬಳಿಕ ಒಳಗೆ ಕೊಬ್ಬರಿಯಾಗುತ್ತವೆ. (ಮುಂಬಯಿ. ೨-೫೧) ಕೊಬ್ಬರಿಗೆ ಸಲ್ಲಬೇಕಾದ ಗಮನವನ್ನು ಕರಟಕ್ಕೆ ಸಲ್ಲಿಸಬೇಕಾಗಿದೆ. (ಸಾಹಿಪ. ೫೫): ಎಳ್ಳು ಕೊಬ್ಬರಿ ಬೆಲ್ಲ ಎಳ್ಳು ಬಾಳೆಹಣ್ಣು [ಇಂಚಾಪ ೧೧೭-೬೮] **ಕೊಪರಿ** : ಮುಂಗಡಲಿ ಕೊಪರಿ ಮೊದಲಾದ ವಸ್ತುಗಳು (ಸೌಗಂಧಿ. ೪೪. ೧೮); ಹಸನಾದ ಕಡಲೆ ಕೊಪರಿ ಬೆಲ್ಲ ಬಿಳಿಎಲೆ ರಸದಾಳೆ ಕಬ್ಬು (ಜಂಪ್ರ.ಸಾಂ ೧೫ ೧೧೦). **ಕೊಪ್ಪರಿ** (ಸಿರಿಕೋ. ೧೩೮). **ಕೊಬರಿ**: ತಿಪಟೂರು ಕೊಬರಿ (ರೂಢಿ) **ಕೋಬರಿ** : ಕೊಬರಿ ಮೆಣಸು ರಾಶಿಲ್ಲಿ ಪಟ್ಟ (ಎಕ. viii. ಸಾಗರ. ೫೩-೬೧; 1674)

ಖೊಬರಿ : ಖೊಬರಿ ಅಡಕೆ ಝಲ್ಲಿಪಟ್ಟಿ (ಎಕ. vii. ಶಿವಮೊ. ೨೮-೧೫: 1670)

ಕೊಬ್ಬರಿಚಟ್ನಿ : ಕೊಬ್ಬರಿಯ ತುರಿಯನ್ನು ಸೇರಿಸಿ ರುಬ್ಬಿದ ಚಟ್ಣಿ ; ಕಾಯಿಚಟ್ನಿ : (ಕ). **ಕೊಬ್ಬರಿ ತುಪ್ಪ** : ಕೊಬ್ಬರಿಯೆಣ್ಣೆ : (ಕ). **ಕೊಬ್ಬರಿ ದೋಸೆ** =ಕೊಬ್ಬರಿ ತುರಿಯನ್ನು ಅರೆದು ಅಕ್ಕಿಯ ಹಿಟ್ಟಿನಲ್ಲಿ ಬೆರಸಿ ಮಾಡಿದ ದೋಸೆ [ಕ]. **ಕೊಬ್ಬರಿ ಬಟ್ಟಲು** 1. ತೆಂಗಿನಕಾಯನ್ನು ಒಡೆದಾಗ ಆಗುವ ಎರಡು ಹೋಳು. 2. ಒಣಗಿದ ಕೊಬ್ಬರಿಯ ಗಿಟುಕಿನ ಎರಡು ಹೋಳು. ಎರಡು ಕೊಬ್ಬರಿ ಬಟ್ಟಲುಕೊಡು (ರೂಢಿ). **ಕೊಬ್ಬರಿ ಎಣ್ಣೆ, ಖೊಬರಿಯೆಣ್ಣೆ** = ಕೊಬ್ಬರಿಯನ್ನು (ಗಾಣದಲ್ಲಿ) ಹಿಂಡಿ ತೆಗೆದ ಎಣ್ಣೆ ; (ಕ). ಖೊಬ್ಬರಿಯೆಣ್ಣೆಯ ಡಬ್ಬಿಗಳನ್ನು.........ತರಿಸಿ [ಮುಂಬಪ್ರಾ. 11. ಪ್ರಸ್ತಾಪನೆ] **ಕೊಬ್ಬರಿಸರ** = (ಹೋಳಿ ಹಬ್ಬದಲ್ಲಿ ಕೊಡುವ) ಕೊಬ್ಬರಿ ಬಟ್ಟಲುಗಳಸರ : [ಕ]. **ಕೊಬ್ಬರಿ ಹಿಂಡಿ** ಕೊಬ್ಬರಿಯಿಂದ ಎಣ್ಣೆ ತೆಗೆದ ಮೇಲೆ ಉಳಿಯುವ ಚರಟ. ಕೊಬ್ಬರಿಹಿಂಡಿ ಯನ್ನು ದನಗಳಿಗೆ ಹಾಕುತ್ತಾರೆ. (ರೂಢಿ).

[ದೇ.॥ ತಮಿ ಕೊಪ್ಪರೈ, ಕೊಪ್ಪರಿ ; ಮಲ, ಕೊಪ್ಪರ. ತುಳು; ಕೊಪ್ಪರ, ಕೊಬರಿ ; ತೆಲು ಕೊಬ್ಬರಿ, ಕೊಪ್ಪೆರ: ಹಿಂ. ಖೋಪ್ರಾ : ಇಂ. coppra [2188].

ಸಂಕ್ಷಿಪ್ತ ಕನ್ನಡ ನಿಘಂಟು : ಕನ್ನಡ ಸಾಹಿತ್ಯ ಪರಿಷತ್ತು [1975] ಮೇಲಿನ ನಿಘಂಟಿನ ಆಧಾರದ ಮೇಲೆ ಮುಖ್ಯವಾದ ಶಬ್ದ ಮತ್ತು ಅರ್ಥಗಳನ್ನು ಕೊಡಲಾಗಿದೆ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗಾಗಿಯೇ ವಿಶೇಷವಾಗಿ ತಯಾರಿಸಲಾದ ನಿಘಂಟು, ಸರ್ಕಾರದ ಸಹಾಯದಿಂದ ಕೇವಲ 5 ರೂಪಾಯಿಗಳ ಅಗ್ಗದ ಬೆಲೆಯಲ್ಲಿ ಮಾರಲಾಗುತ್ತದೆ. 1977 ರಲ್ಲಿ ಲಕ್ಷಾಂತರ ಪ್ರತಿಗಳಲ್ಲಿ ಪುನರ್ ಮುದ್ರಣ ವಾಗಿದೆ.

ಕುರಿ : [ಕ್ರಿ.] 1. ಗುರುತಿಸು ; ಗುರುತುಮಾಡು 2. ಗಮನಿಸು ; ಲಕ್ಷ್ಯ ಕೊಡು. 3. ಉದ್ದೇಶಿಸು : ಆಲೋಚಿಸು 4. ಬಳಿ ; ಲೇಪಿಸು [ನಾ] 5. ಗುರುತು ಚಿಹ್ನೆ 6. ಲಕ್ಷ್ಯ : ಗುರಿ 7. ಉದ್ದೇಶ 8. ಸೀಮೆ : ಗಡಿ 9. ಮೇಕೆ ಬಳಗದ ಒಂದು ಪ್ರಾಣಿ. -ಮನ-1 ಕುರಿಯ ಮನಸ್ಸು; ಸ್ವಭಾವ. 2. ಪ್ರಕ್ಕಲು : ಪೇಡಬುದ್ಧಿ [223]

2. **ರತ್ನಕೋಶ** : ಕನ್ನಡ ಸಾಹಿತ್ಯ ಪರಿಷತ್ತು [1977] ಮೇಲಿನ ಸಂಕ್ಷಿಪ್ತ ನಿಘಂಟನ್ನು ಆಧರಿಸಿ ಸಿದ್ಧವಾದುದು. ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಸಂಯೋಜಿಸಲಾಗಿದೆ. ಕೇವಲ ಎರಡು ರೂ ಅಗ್ಗದ ಬೆಲೆಯಲ್ಲಿ ಮಾರಲಾಗುತ್ತಿದೆ. ಸರ್ಕಾರದ ಉದಾರ ನೆರವೇ ಇದಕ್ಕೆ ಕಾರಣ.

ತಣ್: [ಕ್ರಿ.] ತಣ್ಣಗಾಗು - ಪಿಲರ್ [ರು] ತಂಗಾಳಿ -ಕೂ- [ಗೂ] ಬುರ್ ಳ್[ಟು]-ಅರಿದಲಿನ್ನ -ಕ [ಗ] ದಿರ್-ತಂಪಾದ ಕಿರಣ. ಕ [ಗ] ದಿರೆ ಚಂದ್ರ - ಗಾಳಿ ತಂಪಾದ ಗಾಳಿ-ದೀರ್ [ರು] ತಂಪಾದ ನೀರು -ಪ್ರ (ಬು)ಚ್(ಚ್)ಲ್) ತಂಪಾದ ಉದ್ಯಾನ - ಬಿಸಿಲ್ (ಲು) ಹೂಬಿಸಿಲು. - ಬೆಳಗು - ಸೊ(ಜೊ)ಡರ್(ರು) ತಂಪಾದ ಬೆಳಕನ್ನು ಬೀರುವ ದೀಪ (92) ಕೊನೆಯಲ್ಲಿ ಕೆಲವು ಸಂಖ್ಯಾ ವಿಶಿಷ್ಟ ಪದಗಳು, ನುಡಿಗಟ್ಟುಗಳು ಮೊದಲಾದ ಉಪಯುಕ್ತ ಮಾಹಿತಿಗಳಿಂದ ಓದುಗರಿಗೆ ಬಹಳ ಅನುಕೂಲವಾಗಿದೆ.

43. **ತದ್ಭವ ಸಂಸ್ಕೃತ ಶಬ್ದಕೋಶ:** ಡಿ. ವಿ. ಹೊಳ್ಳ (1956) ತದ್ಭವ ಶಬ್ದಗಳಿಗೆ ತತ್ಸಮಶಬ್ದಗಳೊಡನೆ ಅರ್ಥವನ್ನು ಕೊಡಲಾಗಿದೆ. ಶಬ್ದಮಣಿದರ್ಪಣ ಮತ್ತು ಶಬ್ದಾನುಶಾಸನದಲ್ಲಿನ ತದ್ಭವ ಶಬ್ದಗಳೂ ಇಲ್ಲಿ ಸೇರಿವೆ.

ಪಹರೆ (ಪಾರೆ, ಪ್ರಹರ-ಕಾವಲು) 25.

44. **ಶಿವಾನುಭವ ಶಬ್ದಕೋಶ:** ಫ. ಗು. ಹಳಕಟ್ಟಿ (1943) ವೀರಶೈವ ಮತವು ಕೆಲವೊಂದು ವಿಶಿಷ್ಟ ಸ್ವರೂಪವನ್ನು ಹೊಂದಿರುತ್ತದೆ. ಅದಕ್ಕೆ ಶಿವಾನುಭವಶಾಸ್ತ್ರ ಅಥವಾ ಷಟ್‌ಸ್ಥಲ ಸಿದ್ಧಾಂತ ಎಂದು ಹೆಸರು ಬಂದಿದೆ. ಇದರಲ್ಲಿ ವಿಶಿಷ್ಟಾರ್ಥವುಳ್ಳ 403 ವೀರಶೈವ ಪಾರಿಭಾಷಿಕ ಶಬ್ದಗಳಿಗೆ ವಿವರಣೆ ಕೊಟ್ಟಿವೆ.

ಪಂಚಾಚಾರಗಳು: ಕ್ರಿಯೆಗಳು ಸಂಖ್ಯೆ 109 ರಲ್ಲಿ ಹೇಳಿದಂತೆ ಅನೇಕವಾಗಿರುತ್ತದೆ. ಅವುಗಳ ಸಾರವನ್ನು ಷಟ್‌ಸ್ಥಲ ಶಾಸ್ತ್ರಜ್ಞರು ತೆಗೆದು ಅದನ್ನು ಪಂಚಾಚಾರ ಮತ್ತು ಸಪ್ತಾಚಾರಗಳಲ್ಲಿ ಸೇರ್ಪಡೆ ಮಾಡಿದ್ದಾರೆ. ಪಂಚಾಚಾರಗಳು, ಲಿಂಗಾಚಾರ, ಸದಾಚಾರ, ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರ ಎಂದಿರುತ್ತವೆ. ಇವುಗಳ ಮೂಲಕ ಬಾಹ್ಯ ಕ್ರಿಯೆಗಳು ಶುದ್ಧವಾಗುತ್ತವೆ ಅಲ್ಲದೆ. ಕ್ರಿಯಾಚಾರ, ಜ್ಞಾನಾಚಾರ, ಭಾವಾಚಾರ. ಸತ್ಯಾಚಾರ, ನಿತ್ಯಾಚಾರ, ಧರ್ಮಾಚಾರ, ಸರ್ವಾಚಾರ ಸಂಪತ್ತಿನಾಚಾರ ಎಂಬ 7 ವಿಭೇದಗಳಿವೆ ಇವುಗಳಿಂದ ಅಂತರಂಗ ಕ್ರಿಯೆಗಳು ಶುದ್ಧವಾಗುತ್ತವೆ. (93)

45. **ಜೈನ ಪರಿಭಾಷಾ ರತ್ನಕೋಶ:** ತ. ಸು. ಶಾಮರಾಯ ಮತ್ತು ತ. ನಾಗರಾಜಯ್ಯ (1981) ಕನ್ನಡದಲ್ಲಿ ಲಭ್ಯವಿರುವ ಎಲ್ಲ ಜೈನ ಪುರಾಣಗಳನ್ನೂ ಅವಲೋಕಿಸಿ ಪಾರಿಭಾಷಿಕ ಶಬ್ದಗಳನ್ನು ಸ್ಥೂಲವಾಗಿ ಪಟ್ಟಿಮಾಡಲಾಗಿದೆ.

ಅಪ್ರಿಯ ವಚನ: ಮನಸ್ಸಿಗೆ ಪ್ರಿಯವಾಗದ, ಹಿತವಾಗದ ಮಾತು. ಇದರಲ್ಲಿ ಹತ್ತು ವಿಧ. 1 ಕರ್ಕಶ 2 ಕಟು 3 ಪರುಷ 4 ನಿಷ್ಠುರ 5 ಪರಕೋಪಿನಿ 6 ಮಧ್ಯಕೃಶ 7 ಅಭಿಮಾನಿನಿ 8 ಅನಯಂಕರಿ 9 ಛೇದಂಕರಿ 10 ಭೂತವಧಕರಿ (19)

46. **ಕುಮಾರವ್ಯಾಸನ ಭಾರತದ ನಿಘಂಟು** : ತ. ಸು. ಶಾಮರಾಯ (1981) ವ್ಯಾಸರಂತೆ ಕುಮಾರವ್ಯಾಸನೂ ಹಲವಾರು ವ್ಯಾಸಘಟ್ಟಗಳನ್ನು ಅಲ್ಲಲ್ಲಿ ನಿರ್ಮಿಸಿದ್ದಾನೆ. ಆಳವಾಗಿ ಆಲೋಚಿಸದೆ, ಸಂಸ್ಕೃತ ಆಧಾರ ಗ್ರಂಥಗಳನ್ನೂ ಬಳಸಿಕೊಳ್ಳದೆ ಅರ್ಥೈಸುವುದು ಕಷ್ಟ. ಈ ಎಲ್ಲ ಕಾರಣಗಳಿಂದ ಕುಮಾರವ್ಯಾಸ ಭಾರತಕ್ಕೆ ಒಂದು ನಿಘಂಟು ಅಗತ್ಯ (ಈಗಾಗಲೇ ಭಾರತ ನಿಘಂಟು, ಕುಮಾರವ್ಯಾಸ ಭಾರತ ನಿಘಂಟು-ಎನ್ನೆ ಬಂದಿವೆ) ಅನುಬಂಧದಲ್ಲಿ ನಾಮಾವಳಿ ಮತ್ತು ವಿಶೇಷಾರ್ಥವನ್ನು ಕೆಲವು ಪದ್ಯಗಳಿಗೆ ಕೊಟ್ಟಿದ್ದಾರೆ. ಸಾಧ್ಯವಾದಲ್ಲಿ ಪ್ರಯೋಗವನ್ನು ಕೊಟ್ಟಿದ್ದಾರೆ.

ತಲೆಕಾಯಿ : ಪ್ರಾಣವನ್ನು ಉಳಿಸು. ದ್ರೋಣ 13-42.

47. **ಕನ್ನಡ–ಕನ್ನಡ–ಇಂಗ್ಲಿಷ್-ನಿಘಂಟು** : ಪ್ರಾ. ಜಿ. ವೆಂಕಟಸುಬ್ಬಯ್ಯ, ಪ್ರಾ. ಎಲ್. ಎಸ್. ಶೇಷಗಿರಿರಾವ್ ಮತ್ತು ಎಚ್. ಕೆ. ರಾಮಚಂದ್ರಮೂರ್ತಿ (1981). ಇದೊಂದು ದ್ವಿಭಾಷಾ ನಿಘಂಟು, ಕನ್ನಡ ಶಬ್ದಗಳಿಗೆ ಕನ್ನಡ ಮತ್ತು ಇಂಗ್ಲಿಷಿನಲ್ಲಿ ಅರ್ಥ ಹೇಳಿದೆ. **ಅಡಿ** (ನಾ), 1. ಪಾದ (n) the foot 2. 12 ಅಂಗುಲದ ಅಳತೆ, a measure of 12 inches, 3. ಕೆಳಭಾಗ the foot : the bottom, the base 4. ಮರ್ಮ a secret purpose the design. 5. ಆಧಾರ. ಆಶ್ರಯ Support 6. ಆದಿ, the beginning. (೧೭)

ಹಸ್ತಪ್ರತಿ ನಿಘಂಟುಗಳು :

48. **ಷಟ್ಪದಿ ನಿಘಂಟು** : ಕನ್ನಡ ಸಾಹಿತ್ಯ ಪರಿಷತ್ತು (1930) ಬಸವಪುರಾಣ. ಕುಮಾರವ್ಯಾಸಭಾರತ, ತೊರವೆರಾಮಾಯಣ, ಭಾಗವತ ಮೊದಲಾದ ಷಟ್ಪದೀ ಕಾವ್ಯಗಳಲ್ಲಿ ಬರುವ ಕನ್ನಡ ಶಬ್ದಗಳಿಗೆ ಅರ್ಥ ಹೇಳಿದೆ. 582 ಪುಟಗಳಲ್ಲಿ ಪ್ರತಿಯೊಂದು ಶಬ್ದದ ಉಲ್ಲೇಖನಕ್ಕೂ ಒಂದೊಂದು ಚೀಟಿ ಅಂಟಿಸಿದೆ.
ಬಾಸೆ (ಸಂ, ಭಾಷಾ) ಬ (೨-೧). ಭಾಚಿಂ. (೨-೩) ಸಂಕಲ್ಪ (ಬ ೨೭೩). (೩೯೧)

49. **ನಿಘಂಟುಗಳ ನಿಘಂಟು** : ಕನ್ನಡ ಸಾಹಿತ್ಯ ಪರಿಷತ್ತು (1930) ಕಬ್ಬಿಗರ ಕೈಪಿಡಿ, ಶಬ್ದಮಂಜರಿ, ಕವಿಕಂಠಹಾರ ಮೊದಲಾದ ನಿಘಂಟುಗಳಲ್ಲಿ ಬರುವ ಶಬ್ದಗಳಿಗೆ ಅರ್ಥ ಹೇಳಿದೆ. 191 ಪುಟಗಳಿವೆ.

ಗೊರವಂ-ಈಶ್ವರ, ಗೊರವಂಕ (ಕಂಠ, ೧೮೪). ಕಬ್ಬ. ೪. (೬೯).

50. **ಜಟಿ ಕುಳ ನಿಘಂಟು** : ಕನ್ನಡ ಸಾಹಿತ್ಯ ಪರಿಷತ್ತು. (1930) ಕನ್ನಡ ಕಾವ್ಯಗಳಲ್ಲಿ ಬರುವ ಜಟಿ, ಕುಳ ಶಬ್ದಗಳಿಗೆ ಅರ್ಥ ಹೇಳಿದೆ. (ಕರ್ನಾಟಕ

ಸಂಜೀವನಂ ನೋಡಿ) 66 ಪುಟಗಳಿವೆ. ಬಾಟಿರ್-ಜೀವಿಸು. ಜೀವನ. ಬದುಕು. ಕೃಷಿ ಮಾಡು (48).

51. **ಶಾಮಣ್ಣನವರ ನಿಘಂಟು** : ತಿರುಮಕೂಡಲು ನರಸೀಪುರದ ಶಾಮಣ್ಣ (1920) ಎರಡು ಸಂಪುಟಗಳಲ್ಲಿ ಕನ್ನಡ ಮತ್ತು ಸಂಸ್ಕೃತ ಶಬ್ದಗಳಿಗೆ ಅರ್ಥ ಹೇಳಿದೆ 995 ಪುಟಗಳಿವೆ: ಒಪ್ಪು-ಶೋಭಿಸು. ಶೋಭೆ. ಅಂಗೀಕಾರ-ಅಂಗೀಕಾರ, ಪ್ರಕಾಶಿಸು-ಸೊಗಸು. (೧೯೨).

52. **ರುದ್ರಯ್ಯನವರ ನಿಘಂಟು** : ಮಠದ ರುದ್ರಯ್ಯ. (1918) ಕನ್ನಡ ಮತ್ತು ಸಂಸ್ಕೃತ ಶಬ್ದಗಳಿಗೆ ಅರ್ಥ-ಹೇಳಿದೆ. 520 ಪುಟಗಳಿವೆ. **ನುಣಿ** ಲಿಂಗದ ತುದಿ, ಗುಡಾಣಿ-ಮುತ್ತು ಕೆಂಪು ಪಚ್ಚೆ ಮುಂತಾದ್ದು. ನೋಕಿ ಕೊರಳಿನ ಮಾಲೆ (೪೩೨).

53. **ಪ್ರಭಣ್ಣನವರ ನಿಘಂಟು** : ನ್ಯಾಮತಿ ಪ್ರಭಣ್ಣ (1922) ಪಂಪ ಭಾರತ ಮೊದಲಾದ ಸುಮಾರು ಅರುವತ್ತು ಕಾವ್ಯಗಳಲ್ಲಿ ಬರುವ ಕನ್ನಡ ಶಬ್ದಗಳಿಗೆ ಅರ್ಥ ಹೇಳಿದೆ. ಅಲ್ಲದೆ ಹಳಗನ್ನಡ ಕಾವ್ಯಗಳ ಪ್ರಯೋಗವನ್ನು ಕೊಡಲಾಗಿದೆ. **ಸಾರ್ಚು** ಚಾಚು. ನೀಡು. ಮೌಲಿಯಂ ಸಾರ್ಚಿದಂ ರೇವಣಪ್ರಭುವಿನಡಿಯೊಳು (ರೇ. ೪-೩೦) ಸಮೀಪವಾಗವನೇ (ದ) ಬರಿಸು. ಬರಗೂಡು. ಮನೆಯತ್ತ ಸಾರ್ಚು ಪಿತರಪ್ಪರಂ (ಕಾ ಅ. ೩೭೮) ಸೇರಿಸು. ಸಮರ್ಪಿಸು. ಕೊಡು : ಸಾರ್ಚಿದ ಶೋಭ ಸನದೊಳು (ವಿ. ೧೪-೨೪) ತೊಡಿಸು ಹಾಕು : ನಿಗಡಮಾ ಸಾರ್ಚಲ್ (ದಶ. ೫-೨೬) ಕಳುಹಿಸು, ಮುಂದಕ್ಕೆ ತಳ್ಳು : ಸಾರ್ಚಲಿನನೆಂಬ ನೊಡರಂ (ಕಾ. ಅ. ೫೫೬) ಹಾಳಿ ಗಳಲ್ಲಿ ಬರೆಯಲಾಗಿದೆ.

54. **ಜಾನಪದಕೋಶ** : ಬಿ. ಎಸ್. ಗದ್ದಿಗಿಮಠ (1959) ಎರಡು ಸಂಪುಟಗಳ (1-68. 2-59) ಒಟ್ಟು 127 ಪುಟಗಳಿವೆ. ಜಾನಪದದಲ್ಲಿ ಬರುವ ಶಬ್ದಗಳಿಗೆ ಅರ್ಥ ಹೇಳಿದೆ. ಜಾನಪದ ಲೋಕದ ಮೊದಲನೆಯ ನಿಘಂಟು. **ಗುರ್ಚಿ** (ನಾ). ಮಳೆ ತರುವ ದೇವರು. ಎರೆಗಂಬಳಿ ಮಠದ ಗುರುಸಿದ್ಧ ದೇವರು. ಗುರು ಸಿದ್ಧ-ಗುಸಾರ್ಯ-ಗುರ್ಚಿ (೫೦).

55. **ಕರ್ನಾಟಕ ಶಬ್ದರತ್ನಾಕರ** : ಕೊಳನಾಡು ನರಸಿಂಹಶಾಸ್ತ್ರೀ. (1850). 132 ವಾರ್ಧಕ ಷಟ್ಪದಿಗಳಲ್ಲಿ ಹಳಗನ್ನಡ ಶಬ್ದಗಳಿಗೆ ಅರ್ಥ ಹೇಳಿದೆ ಕಬ್ಬಿಗರ ಕೈಪಿಡಿ. ಶಬ್ದಮಂಜರಿಯಂತಿದೆ. ಬುಕ್ಕುಡಿಯೆನಲ್ ಬೆರಗು ಬರ್ದಗರೆನಲ್ ಸುರರು ಬಕ್ಕರೆನೆ ಬಗರಿಯೆನಲುಂ ಬೋಕಿ ಬರ್ದುಗನೆನಲ್ಕೆ ಪಾರ್ವನೆ (೭೩)

56. **ಶಬ್ದಾರ್ಥ ಸಂಗ್ರಹ :** ಟಿ. ಕೆ. ಅನಂತನಾರಾಯಣ (1933) ಇದುವರೆಗೆ ಲಭ್ಯವಿರುವ ಎಲ್ಲ ಕನ್ನಡ ನಿಘಂಟುಗಳಲ್ಲಿರುವ ಕನ್ನಡ, ಸಂಸ್ಕೃತ ಮತ್ತು ಅನ್ಯದೇಶ್ಯ ಶಬ್ದಗಳಿಗೆ ಅರ್ಥ ಹೇಳಿದೆ. ಬಹು ದೊಡ್ಡ ಸಂಪುಟ 2060 ಪುಟಗಳಿವೆ. ಸುಮಾರು ಏಳುನೂರು ಪುಟಗಳ ಸಾಜ್ಞಾರ್ಥ ಮತ್ತು ಕೋಷ್ಟಕಗಳು ಉಪಯುಕ್ತ

ರಜತ ಬಿಳುಪಾದ. ಬೆಳ್ಳಗಿನ. ಬಿಳಿಬಣ್ಣದ, ಹಾರ, ಆನೆ, ದಂತ. ನಕ್ಷತ್ರ. ಚಿನ ಬೆಳ್ಳಿ. ಪರಿಶುದ್ಧವಾದ್ದು. ನಿರ್ಮಲವಾದ್ದು. ಮುತ್ತಿನಹಾರ, ಕೈಲಾಸ ಪರ್ವತ, ರಕ್ತ (೧೪೭೮)

57. **ಕನ್ನಡದ ಕಣಜ :** ಕವಿ, ಕಾಲ ಗೊತ್ತಿಲ್ಲ. 126 ಪುಟಗಳಿವೆ ಕನ್ನಡ ಶಬ್ದಗಳಿಗೆ ಅರ್ಥ ಹೇಳಿದೆ. ಕಳ್ಳಿ ಕಳ್ಳತನ ಮಾಡುವವಳು, ಕಳ್ಳಿಗಿಡ, ಬಲೆ ಚೀಲ (೫೬).

58. **ಇಂದ್ರ ದೀಪಿಕಾನಿಘಂಟು :** ಕವಿ ಮತ್ತು ಕಾಲ ಗೊತ್ತಿಲ್ಲ. ವೈದ್ಯದಲ್ಲಿ ಬರುವ ಕನ್ನಡ ಶಬ್ದಗಳಿಗೆ ಅರ್ಥ ಹೇಳಿದೆ.

59. **ಏಕಾಕ್ಷರ ನಿಘಂಟು :** ಕವಿ ಮತ್ತು ಕಾಲ ಗೊತ್ತಿಲ್ಲ. ಸಂಸ್ಕೃತ ಏಕಾಕ್ಷರ ನಿಘಂಟಿನ ಕನ್ನಡ ಟೀಕು.

60. **ಕೋಶ ಪ್ರತಿಕೋಶದ ಟೀಕು :** ಪೂರ್ಣಾನಂದ ಅವಧೂತ ಶಿವಯೋಗಿ ಕಾಲ ? ಮಂತ್ರ ಶಾಸ್ತ್ರದ ಶಬ್ದಗಳಿಗೆ ಅರ್ಥ ಹೇಳಿದೆ.

61. **ತತ್ತ್ವಾಭಿನಯ ನಿಘಂಟು :** ಕವಿ ಮತ್ತು ಕಾಲ ಗೊತ್ತಿಲ್ಲ. ಹಸ್ತಭಾವಗಳ ನಿಘಂಟು.

62. **ಧನಂಜಯ ನಿಘಂಟು :** ಕವಿ ಮತ್ತು ಕಾಲ ಗೊತ್ತಿಲ್ಲ ಸಂಸ್ಕೃತ ಧನಂಜಯ ನಿಘಂಟಿನ ಕನ್ನಡ ಟೀಕು.

63. **ಕನ್ನಡ ಶಬ್ದಸಾಗರ :** ಜಿ. ಎಂ. ಹನಸೋಗೆ (1972) ಕನ್ನಡ, ಇಂಗ್ಲಿಷ್-ಕನ್ನಡ ಸಮಾನಾರ್ಥಕ, ವಿರೋಧಾರ್ಥಕಗಳಿವೆ,

64. **ಶಬ್ದಕೋಶ :** ಎಚ್. ಎಸ್. ಅಜ್ಜಪ್ಪ (1969) ಕನ್ನಡ ಗ್ರಂಥಸ್ಥ ಗಾದೆಗಳ ಕೋಶದಲ್ಲಿನ ಶಬ್ದಗಳಿಗೆ ಅರ್ಥ ಕೊಟ್ಟಿದೆ.

ಕನ್ನಡ ನಿಘಂಟುವಿನ ಮೂಲ : ಆರ್. ವಿ. ಜಾಗೀರ್‌ದಾರ್ ಕನ್ನಡದ ಒಂದೊಂದು ಶಬ್ದಕ್ಕೂ ಅಸಂಖ್ಯಾತ ಶಬ್ದಗಳು ಹೇಗೆ ಪ್ರತಿಯಾಗಿವೆ ಎಂಬುದರ ವಿವರಣೆ.

66. **ಕನ್ನಡದ ಪದಪಟ್ಟಿ** : ಬಿ. ಕುಪ್ಪುಸ್ವಾಮಿ (1974) ಕನ್ನಡದಲ್ಲಿ ಬಹಳವಾಗಿ ಉಪಯೋಗವಾಗುತ್ತಿರುವ 4800 ಸರಳ ಶಬ್ದಗಳ ವರ್ಗೀಕರಣವಿದೆ.

67. **ಸಮಯ ಸಂಜೀವಿನಿ** : ಟಿ. ಎಸ್ ರಾಮಾಚಾರ್ಯ (1889) ಕೆಲವು ಸಮಾನಾರ್ಥಕ ಮತ್ತು ನಾನಾರ್ಥಕ ಶಬ್ದಗಳಿವೆ.

68. **ನೀಲಮಣಿ ಅಥವಾ ಕನ್ನಡ ತಿರುಳು** : ಬ. ಮ. ಹಿರೇಮಠ ಮತ್ತು ಸಜ್ಜನರಾಶಿ (1939) ಒಂದೇ ಅರ್ಥದ ಅನೇಕ ಶಬ್ದಗಳು, ವಿರುದ್ಧಾರ್ಥಕ ಶಬ್ದಗಳು, ತತ್ಸಮ, ತದ್ಭವ ಗಾದೆ ಮುಂತಾದುಗಳಿವೆ.

69. **ಕನ್ನಡ ಶಬ್ದಸಾರ** : ಹೊಲಿಸಿದ್ಧನಾಥ (1951) ಶಬ್ದಗಳ ವ್ಯುತ್ಪತ್ತಿ. ನಾನಾರ್ಥ ಸಮಾನಾರ್ಥ, ಜೋಡಿನುಡಿ, ವಿಶಿಷ್ಟಾರ್ಥ ಶಬ್ದಗಳಿವೆ.

70. **ಹಳಗನ್ನಡ ನಿಘಂಟು** : ಎಸ್. ಬಸವರಾಧ್ಯ (1976) ಈ ಹಿಂದಿನ ರನ್ನಕಂಠದಿಂದ ಕವಿಕಂಠಹಾರದವರೆಗಿನ ಹದಿನೇಳು ನಿಘಂಟುಗಳಿವೆ. ಶಬ್ದಮಣಿ ದರ್ಪಣದ ಧಾತು ಪ್ರಕರಣ. ಸಹಜ ಜೀ. ಮತ್ತು ಪ್ರಯೋಗಸಾರವೂ ಸೇರಿದೆ. ಕಬ್ಬಿಗರಕೈಪಿಡಿಯೊಡನೆ 'ಚಕೋರಚಂದ್ರಿಕೆ' ಶಬ್ದಮಂಜಯೊಡನೆ ವಿಬುಧಾನಂದಿನೀ. ಸುಜನೋಲ್ಲಾಸಿನೀ, ಮೊದಲಾದ ಟೀಕಿನೊಡನೆ. ಅನುಬಂಧದಲ್ಲಿ ಶಬ್ದಾರ್ಥಕೋಶ, ಪದ್ಯದ ಅಕಾರಾದಿಯಿಂದ ಕೂಡಿದೆ.

71. **ಶಬ್ದರತ್ನಾಕರ** : ಕವಿ ಮತ್ತು ಕಾಲ ಗೊತ್ತಿಲ್ಲ. 30 ಕಂದಪದ್ಯಗಳಿಗೆ. ಸಂಸ್ಕೃತ ಶಬ್ದಗಳಿಗಿರುವ ನಾನಾರ್ಥವನ್ನು ತಿಳಿಸಲಾಗಿದೆ.

72. **ಪದ್ಯ ನಾನಾರ್ಥ** : ಕವಿ ಮತ್ತು ಕಾಲ ಗೊತ್ತಿಲ್ಲ. ಸಂಸ್ಕೃತ ಶಬ್ದಗಳಿಗೆ 39 ಕಂದ ಪದ್ಯದಲ್ಲಿ ನಾನಾರ್ಥ ಹೇಳಿದೆ.

73. **ಶಬ್ದಾರ್ಥಮಂಜರಿ** : ಚಂದ್ರಸಾಗರವರ್ಣಿ (1810) ವಿವರ ಸಿಕ್ಕಿಲ್ಲ.

74. **ಶಬ್ದಮಂಜರಿ** : ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯ (1891) ವಿವರ ಸಿಕ್ಕಿಲ್ಲ.

75. **ಕಿಸಂವಾರ್ ಗ್ಲಾಸರಿ :** ಉಲ್ಲಾಳ ನರಸಿಂಗರಾವ್ (1891) ಲೆಕ್ಕ, ಸಂಬಂಧ, ವ್ಯವಸಾಯ, ವೈದ್ಯ, ಲೋಹ, ಸಂಗೀತ, ವಾಣಿಜ್ಯ, ಸಸ್ಯಶಾಸ್ತ್ರ ಗ್ರಾಮೀಣ ಮೊದಲಾದ ಕನ್ನಡ ಶಬ್ದಗಳಿಗೆ ಇಂಗ್ಲಿಷ್‌ನಲ್ಲಿ ಅರ್ಥ ಹೇಳಿದೆ. **ಬೇರು** beru, The root : ಕೂಗಟ, ತಾಯಿ Kugata, tayi the to-root ಜಡೆ (Jade) the abventions roots of the banyan ಭ್ರೂಣದ- (bhrunada) the radidle, ಸದೆ (Sade) the loose roots (my), (೪೫).

76. **ಪುರಾಣ ಭಾರತ ಕೋಶ :** ಪಂಡಿತ ಯಜ್ಞನಾರಾಯಣ ಉಡುಪ (1975) ವೇದ, ಉಪನಿಷತ್ತು, ರಾಮಾಯಣ, ಮಹಾಭಾರತ, ಪುರಾಣಗಳಲ್ಲಿ ಬಂದಿರುವ ದೇವತೆ, ವ್ಯಕ್ತಿ, ಕ್ಷೇತ್ರ, ನದಿ ಇವೇ ಮೊದಲಾದುವುಗಳ ಪರಿಚಯ ಕೊಡಲಾಗಿದೆ.

77. **ಪುರಾಣನಾಮ ಚೂಡಾಮಣಿ :** ಬೆಸಗರ್ ರಾಮರಾವ್ ಮತ್ತು ಪಾನ್ಯಂ ಸುಂದರಶಾಸ್ತ್ರೀ, (1941). ರಾಮಾಯಣ, ಭಾರತ, ಭಾಗವತ, ಪುರಾಣಗಳಲ್ಲಿ ಬರುವ ಹೆಸರುಗಳ ವಿವರಣಾತ್ಮಕ ಪರಿಚಯವನ್ನು ಕೊಡಲಾಗಿದೆ.
ದೇವದತ್ತ : (i) ಇಂದ್ರ ಅರ್ಜುನನಿಗೆ ಕೊಟ್ಟ ಶಂಖದ ಹೆಸರು (ಭಾರ-ವನ ೧೭೮). (ii) ದೇಹದೊಳಗಣ ಉಪವಾಯುಗಳಲ್ಲಿ ಒಂದು ಇದು ಆಕಳಿಕೆಯನ್ನು ಹುಟ್ಟಿಸುತ್ತದೆ. (೩೦೬).

78. **ಓಷಧಿಕೋಶ :** ಎ. ವೆಂಕಟರಾವ್ ಮತ್ತು ಎಚ್. ಶೇಷ ಅಯ್ಯಂಗಾರ್ (1940) ಪಶು, ಪಕ್ಷಿ, ಮೃಗ, ಪಂಚಭೂತ, ಸಸ್ಯ ಮೊದಲಾದ ಹಲವು ಶಬ್ದಗಳಿಗೆ ಕನ್ನಡದಲ್ಲಿ ಅರ್ಥ ಹೇಳಿದೆ.

ಕಂಚುಕಿ : ಹಾವಿನಹೆಡೆ, ಯವೆ, ಕಡಲೆ, ಕ್ಷೀರಕಂದ (೨೧)

79. **ಶಬ್ದವಿಹಾರ :** ಡಿ. ಎಲ್. ನರಸಿಂಹಾಚಾರ್ (1956) ಅಪರೂಪವಾದ ಕನ್ನಡ ಶಬ್ದಗಳಾದ, ಪೊರಸು, ಅಗ್ರಹಾರ, ಕಾಳಸೆ, ಡಂಗಹಾಕು, ರಪಣ ಮೊದಲಾದುವುಗಳ ವಿವರಣೆಯಿದೆ.

80. **ನಮ್ಮ ನುಡಿ :** ಮಾಸ್ತಿ ವೆಂಕಟೇಶ ಅಯ್ಯಂಗಾರ್ (1960) ಜೀವನ ಪತ್ರಿಕೆಯಲ್ಲಿ ಪ್ರಕಟವಾದ ಭಾಷಾವಿಭಾಗಕ್ಕೆ ಸೇರಿದ ಅನೇಕ ಲೇಖನಗಳ ಸಂಕಲನ ನಮ್ಮ ನುಡಿಯ ಬಗ್ಗೆ ವಿವರ ಕೊಟ್ಟಿದ್ದಾರೆ. ಬಟ್ಟೆ, ದಾರ, ಸಿಕ್ಕಾಬಟ್ಟೆ

ಎಂಬ ಪಾಡಿಕೆಯ ಮಾತಿನಲ್ಲಿ ಬಟ್ಟೆಗೆಡು ಎಂಬ ಸಾಹಿತ್ಯದ ಪ್ರಯೋಗದಲ್ಲಿ ಈ ಪದ ಕಾಣುತ್ತದೆ. ಉಳಿದಂತೆ ಬಳಕೆಯಿಂದ ತಪ್ಪಿದೆ (೨೦೧).

81. **ಕಂನುಡಿಯ ಹುಟ್ಟು :** ಶಂ. ಬಾ. ಜೋಶಿ (ಮೂರನೆಯ ಮುದ್ರಣ, 1962) ಕನ್ನಡವೆಂದರೆ ನಮ್ಮ ಪಂಚಪ್ರಾಣವೆಂದು ಹೆಮ್ಮೆಯಿಂದ ಪ್ರತಿಯೊಬ್ಬರೂ ಆಡಿಕೊಳ್ಳುವ ಆ ಕನ್ನಡ ಎಂದರೆ ಏನು ಎಂಬುದರ ಅರಿವು ಇದರಲ್ಲಿದೆ. ಅಂಚು, ಎಣ್ಣು, ತುದಿ, ದಂಡೆ, ದಡ, ಜಡೆ, ಕಡೆ, ತಡಿ, ಸೀರೆ, ಪದ್ಮ, ಎಲ್ಲೆ (೭೮).

82. **ಅಯ್ಯಾಶಾಸ್ತ್ರಿ ನಿಘಂಟು :** ಅಯ್ಯಾಶಾಸ್ತ್ರೀ ಹೊಸಕೆರೆ (8934) ರುದ್ರಭಟ್ಟನ ಜಗನ್ನಾಥವಿಜಯದಲ್ಲಿ ಬರುವ ದೇಶ್ಯ ಶಬ್ದಗಳಿಗೆ ಅರ್ಥ ಕೊಡಲಾಗಿದೆ.
ಕಣಿತಲೆ : ಬಿಸ್ಗ ವಿಶೇಷ (೧೨-೧೩) ಕಡಿತಲೆಯುಂ ಜಡಿದೆಯ್ದು ದಣಿಯೆ (೩೦).

83. **ಪಂಪಭಾರತ ನಿಘಂಟು :** ಕನ್ನಡ ಸಾಹಿತ್ಯ ಪರಿಷತ್ತು (1931) ಪಂಪಭಾರತದಲ್ಲಿ ಬರುವ ಕಠಿಣ ಶಬ್ದಗಳಿಗೆ ಅರ್ಥ ಕೊಡಲಾಗಿದೆ. ಸಂಸ್ಕೃತ, ತದ್ಭವ ಎಂದು ಗುರುತಿಸಿರುವುದಲ್ಲದೆ ಆದಿಪುರಾಣ. ಶಾಂತಿಪುರಾಣ ಮತ್ತು ಗದಾಯುದ್ಧಗಳ ಪ್ರಯೋಗದ ಸಂಖ್ಯೆಯನ್ನು ಕೊಡಲಾಗಿದೆ.

ಗುಣಣೆ : ನಾಟಕಶಾಲೆ ೧-೫೬, ೫-೪೭ರ, ೮-೭೩ರ **ಗುಣನೆ** ಶಾಂ. ೩-೧೮ ; ೬-೧೦೬.

84. **ಪಂಪರಾಮಾಯಣ ನಿಘಂಟು :** ಕನ್ನಡ ಸಾಹಿತ್ಯ ಪರಿಷತ್ತು (1931) ಪಂಪರಾಮಾಯಣದಲ್ಲಿ ಬರುವ ಕಠಿಣ ಶಬ್ದಗಳಿಗೆ ಅರ್ಥವನ್ನು ಕೊಡಲಾಗಿದೆ.

ಕೊಳರ್ವಕ್ಕಿ : ಜಲಪಕ್ಷಿ (ಸಾರಸ) ೩-೧೧೧

85. **ಹವ್ಯಕ ಪದ ಸಂಚಯ :** ಟಿ. ಕೇಶವಭಟ್ಟ, 1972. 190 ಕಂದ ಪದ್ಯಗಳಲ್ಲಿ ಹವ್ಯಕ ಪದಗಳಿಗೆ ಅರ್ಥ ಹೇಳಿದೆ. "ಬೊಗಾಸೆಸೆ ಗಂಡುನಾಯುದು ಬೊಗ್ಗಿಯು ಪೆಣ್ಣಾಯಿ ಕೂಳಿ ಪಾರಂಗಿಯೆನಲ್ಕಗ್ಗದ ಸಿಗುಳಿನ ಗುದ್ದಲಿ ಜಿಗ್ಗು ಎನಲ್ ಗಿರಿಯ ಕೋಲು ಸಾದೆಯೆನಿಕ್ಕು (೮)".

ಹೀಗೆ ಕನ್ನಡ ನಿಘಂಟುಗಳು ವಿಪುಲವಾಗಿ ಬೆಳೆದು ನಿಂತಿವೆ. ಭಾರತದ ಯಾವ ಭಾಷೆಗೂ ಇಷ್ಟು ಅಸಂಖ್ಯ ನಿಘಂಟುಗಳಿಲ್ಲ. ಕಾಲಕಾಲಕ್ಕೆ ಯಾರಾದರೊಬ್ಬರು ಒಂದೊಂದು ನಿಘಂಟನ್ನು ರಚಿಸಿದ್ದಾರೆ. ರನ್ನನಿಂದ ರತ್ನಕೋಶದವರೆಗೆ ಬಂದಿರುವ

ನಿಘಂಟು ತನ್ನದೇ ಆದ ವಿಶೇಷ ಗುಣಗಳಿಂದ ಕೂಡಿವೆ. ಗುಣ ಮತ್ತು ಗಾತ್ರಗಳ ತಾರತಮ್ಯವಿಲ್ಲದೆ ಎಲ್ಲವೂ ಕೀರ್ತಿ ಪಡೆದಿವೆ. ಜನಪ್ರಿಯತೆಯ ದೃಷ್ಟಿಯಿಂದ 'ಸಿರಿಗನ್ನಡಕೋಶ', 'ಕಸ್ತೂರಿಕೋಶ' ಕನ್ನಡ ಸಂಕ್ಷಿಪ್ತ ನಿಘಂಟು' ರತ್ನಕೋಶಗಳು ಪ್ರಸಿದ್ಧವಾಗಿವೆ. ಪಾಂಡಿತ್ಯದ ದೃಷ್ಟಿಯಿಂದ ಕಿಟಲ್, ಪ್ರಭಣ್ಣ ನಿಘಂಟುಗಳು ಖ್ಯಾತಿ ಪಡೆದಿವೆ, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು ಮುನ್ನಿನ ಎಲ್ಲ ನಿಘಂಟುಗಳನ್ನು ಇಕ್ಕಿ ಮೆಟ್ಟಿದೆ. ಕನ್ನಡದ ಸಮಗ್ರ ನಿಘಂಟು ಎಂದು ಹೇಳುವುದರಲ್ಲಿ ಅತಿಶಯೋಕ್ತಿಯಿಲ್ಲ. ದೇಶ ನೋಡಬೇಕು ಕೋಶ ಓದಬೇಕು ಎಂಬ ನಾಣ್ಣುಡಿಯಂತೆ ಸರ್ವರೂ ಕೋಶಪ್ರಿಯರಾಗಬೇಕು. ನಿಘಂಟುಗಳನ್ನು ಕೊಂಡು ಓದಬೇಕು. ತನ್ಮೂಲಕ ಅರ್ಥವಂತರಾಗಬೇಕು.

ನಮ್ಮ ಜನ ಕೇವಲ ಗಂಟು ನೋಡುತ್ತಾರೆ ಹೊರತು ನಿಘಂಟನ್ನಲ್ಲ ಎಂಬ ಅಪವಾದಕ್ಕೆ ದೂರವಾಗಿ ಎಲ್ಲರೂ ನಿಘಂಟುಪ್ರಿಯರಾಗಲಿ ಎಂದು ಪ್ರಾರ್ಥಿಸುತ್ತೇನೆ.

ಕರ್ನಾಟಕದ ಇತಿಹಾಸದಲ್ಲಿ ಕೆಳದಿಯ ಪಾತ್ರ

ಕೆಳದಿ ಗುಂಡಾಜೋಯಿಸ್

ಕ್ರಿ.ಶ. ೧೪೯೯ ರಿಂದ ೧೭೬೩ ರವರೆಗೆ ಭಾರತದ ಇತಿಹಾಸದಲ್ಲಿ ವೈಭವದಿಂದ ಬಾಳಿದ ಕೆಳದಿಯು ಶಿವಮೊಗ್ಗ ಜಿಲ್ಲೆಯಲ್ಲಿರುವ ಗ್ರಾಮ. ಈ ಗ್ರಾಮವು ಕರ್ನಾಟಕ ಭಾರತವಷ್ಟೇ ಅಲ್ಲದೆ ವಿದೇಶೀಯರ ಆಕರ್ಷಣೆಗೂ ಒಳಗಾಗಿರುವ ಐತಿಹಾಸಿಕ ಪ್ರವಾಸೀ ತಾಣ. ಈಗ್ಯೆ ಸುಮಾರು ನಾಲ್ಕುನೂರು ವರ್ಷಗಳ ಹಿಂದೆ ಕೆಳದಿ ಸಂಸ್ಥಾನವು ದಕ್ಷಿಣದಲ್ಲಿ ಕೇರಳದ ಬಲಿಯಾಪಟಮ್‌ನಿಂದ ಉತ್ತರದ ಕಾರವಾರ-ಗೋವಾದ ಸಮೀಪದವರೆಗೂ ಹಾಗೂ ಪೂರ್ವದಲ್ಲಿ ಅರಬ್ಬೀ ಸಮುದ್ರವೇ ಮೇರೆಯಾಗಿ ಪಶ್ಚಿಮದಲ್ಲಿ ಚಿಕ್ಕನಾಯಕನಹಳ್ಳಿಯ ಗಡಿಯವರೆಗೂ ವಿಸ್ತಾರ ಹೊಂದಿರುವುದನ್ನು ಯಾರೂ ನಂಬಲಾರದಂತೆ ಕಾಣಬರುತ್ತದೆ. ಆದರೆ ಈ ಸಂಗತಿಗಳು ಇತಿಹಾದ ಪುಟಗಳಲ್ಲಿ ಮಾತ್ರ ಗೋಚರಿಸುತ್ತಿರುದು. ಒಂದೆಡೆ ದುಃಖವಾದರೆ ಮಗುದೊಂದೆಡೆ ಅಭಿಮಾನಾಸ್ಪದವಾಗಿದೆ. ಮಧ್ಯಕಾಲೀನ ಭಾರತದ ಚರಿತ್ರೆಯಲ್ಲಿ ಮೈಸೂರು ಪಾಳೆಯಪಟ್ಟಿನ ವಿಸ್ತೀರ್ಣಕ್ಕಿಂತಲೂ ಕೆಳದಿಯು ಮೂರು ಪಟ್ಟು ವಿಶಾಲವಾಗಿತ್ತೆಂಬುದನ್ನು ಇತಿಹಾಸದಲ್ಲಿ ಕಂಡುಕೊಳ್ಳಬಹುದಾಗಿದೆ. ವಿಜಯನಗರದ ಪ್ರೀತಿಯ ಮಗುವೆನಿಸಿದ ಕೆಳದಿಯು ಕ್ರಿ.ಶ. ೧೫೬೫ರ ರಕ್ಕಸಗಿ-ತಂಗಡಗಿ ಯುದ್ಧದ ನಂತರ ಸ್ವತಂತ್ರವಾಗಿ ಆಳತೊಡಗಿತು. ಇದು ಸ್ವತಂತ್ರವಾದರೂ ಇಲ್ಲಿನ ಆಳರಸರು ವಿಜಯನಗರವನ್ನು ಕಡೆಗಣಿಸಲಿಲ್ಲವೆಂಬುದು ಗಮನಾರ್ಹವಾದುದು. ವಿಜಯನಗರದ ಸನಾತನ ಧರ್ಮದ ಪರಂಪರೆಯನ್ನು ಚಾಚೂ ತಪ್ಪದೆ ಪಾಲಿಸಿಕೊಂಡು ಕೆಳದಿ ನಾಯಕರು ಸಾಮಾನ್ಯ ಜನತೆಯ ಕ್ಷೇಮಾಭಿವೃದ್ಧಿಗಾಗಿ ಸತತವಾಗಿ ಹೋರಾಡಿದರು. ವಿದೇಶೀ ಪ್ರವಾಸಿಗಳಾದ ಫ್ರೋಬ್ಸ್‌ನ್, ಇಟಲಿಯ ಪಿಯತ್ರೋ ಡೆಲ್ಲಾವಾಲ್ಲೆ, ಪೀಟರ್ ಮುಂಡಿ, ಡಾ|| ಫ್ರಾಯರ್, ಅಬೇಕರಿ, ಅಲೆಗ್ಸಾಂಡರ್ ಹ್ಯಾಮಿಲ್ಟನ್ ಹಾಗೂ ಜಾಕೋಬಸ್ ಕ್ಯಾಂಟರ್ ವಿಶ್ಚರ್ (Jacobus Cauter Visscher) ಮುಂತಾದವರು ಆಯಾ ಕಾಲದಲ್ಲಿ ಕೆಳದಿ ರಾಜ್ಯದಲ್ಲಿ ಸಂಚರಿಸಿ ಸಾಮಾನ್ಯ ಜನತೆಯ ನೆಮ್ಮದಿಯನ್ನು ಆಡಳಿತ ವೈಖರಿಯನ್ನೂ ಕುರಿತು ಮನಸಾರೆ ಕೊಂಡಾಡಿ ಶ್ಲಾಘಿಸಿದ್ದಾರೆ. ಇಂತಹ ಇಂತಹ ಕಥನಗಳು ಕೆಳದಿ ರಾಜ್ಯದ ಹಿರಿಮೆಯನ್ನು ಪ್ರತಿಬಿಂಬಿಸಿವೆ. ಪ್ರಕೃತ ಕರ್ನಾಟಕದ ಇತಿಹಾಸದಲ್ಲಿ ಕೆಳದಿ ಸಂಸ್ಥಾನದ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕೊಡುಗೆಗಳ ಸ್ಥೂಲ ಪರಿಚಯವನ್ನು ಇಲ್ಲಿ ನಿರೂಪಿಸಲಾಗಿದೆ.

ಕೆಳದಿಯ ದೊರೆಗಳು

ಈ ಸಂಸ್ಥಾನವನ್ನು ಸುಮಾರು ೨೬೮ ವರ್ಷಗಳವರೆಗೆ ಚೌಡಪ್ಪನಾಯಕನಿಂದ ಆರಂಭಿಸಿ ವೀರಮ್ಮಾಜಿಯವರೆಗೂ ೧೬ ಜನ ಅರಸರು ಆಳಿದರು. ಇವರಲ್ಲಿ ಈರ್ವರು ರಾಣಿಯರೂ ರಾಜ್ಯಭಾರ ನಡೆಸಿದ್ದಾರೆ. ಕೆಳದಿ ನೃಪವಿಜಯದಲ್ಲಿಯೇ-

ಇಂತಪ್ಪ ರಾಜಲಾಂಛನೋಪಯುಕ್ತವಾದ ಬಿರುದುಗಳು-
ಪುಸಿತ್ತು ಪುಸ್ಕಿಸಿ ತದಾರಭ್ಯ ಕೆಳದಿ ಮೂಲ ಸಂಸ್ಥಾನದ
ಮನ್ನೆಯ ಚೌಡಪ್ಪನಾಯಕನೆಂದು.... ....[1]

ಎಂದು ಉಲ್ಲೇಖಿಸಿದಂತೆ ಕೆಳದಿಯನ್ನೇ ಮೂಲ ಸಂಸ್ಥಾನದ ಕೇಂದ್ರ ಬಿಂದುವನ್ನಾಗಿಸಿಕೊಂಡು ಈ ದೊರೆಗಳು ರಾಜ್ಯಭಾರ ನಡೆಸಿದರು. ಅನಂತರ-

ಕಂ|| ಸುತಸಹಿತಂ ಚೌಡಪಭೂ
ಪತಿ ತಾನಿಕ್ಕೇರಿಗೈದಿರಿಲ್ ಪೊಲಪ್ರೊಂದು
ಸ್ನಾತವಾದ ಶುನಕನಂ ತ
ತ್ಸ್ಥಿತಿಯೊಳ್ ಬೆಂಬತ್ತಿ ಪರಿಯುತಿರಲೀಕ್ಷಿಸುತುಂ
ಇದು ತಾಂ ಪುಂಭೂಮಿಯೆನಿ
ಪ್ಪುದನರಿದೊಡನಲ್ಲಿ ಕೋಂಟೆಯುಂ ಬಲಿದು ಬಳಿ
ಕ್ಕದರೊಳರಮನೆಯನಿಂದ್ರನ
ಸದನಕ್ಕಧಿಕಮೆನೆ ರಚನೆಗೈಸಿದನನುಪಿಂ[2]

ಎಂಬಂತೆ ಕ್ರಿ. ಶ. ೧೫೧೨-೧೩ರಲ್ಲಿ ರಾಜಧಾನಿಯು ಮಾತ್ರ ಕೆಳದಿಯಿಂದ ಇಕ್ಕೇರಿಗೆ ಬದಲಾಯಿಸಲ್ಪಟ್ಟಿತು.

ಕಂ|| ಆ ನರನಾಥಂ ರಣದುಲ
ಖಾನನ ಪಿಂದೆಗೆಸಿ ವೇಣುಪುರದೊಳ್ನಿಂದೀ
ಶಾನಪದ ಕಮಲ ಮಧುಕರ
ನಾನಂದ ದೊಳಖಿಲರಾಜ್ಯಮಂ ಪಾಲಿಸಿದಂ

ಇಂತಾ ವೀರಭದ್ರನಾಯಕಂ ರಾಜನೀತಿ ಮಾರ್ಗವಿಡಿದು ಸಂಧಾನ ಮುಖದಿಂ ದುಣಿಲ್ಲಾರಖಾನನಂ ಮುತ್ತಿಗೆದೆಗೆಸಿ ಕಳುಹಿ ರಾಜ್ಯ ರಾಷ್ಟ್ರವನುಳುಹಿಕೊಂಡು ಶಾಲಿ

---

1. ಲಿಂಗಣ್ಣ ಕವಿಯ ಕೆಳದಿ ನೃಪ ವಿಜಯ, ಪು. ೪೯; ಕ.ಸಾ.ಪ. 1977 ಬೆಂಗಳೂರು.
2. ಅದೇ- ಪು. ೫೦-೫೧.

ವಾಹನ ಶಕ ವರ್ಷ ೧೫೬೧ನೆಯ ಬಹುಧಾನ್ಯ ಸಂವತ್ಸರದ ಮಾರ್ಗಶಿರ ಮಾಸದಲ್ಲಿ ಬಿದನೂರ ಕೋಟೆಯರ ಮನೆಯೊಳ್ ನೆಲೆಯಾಗಿ ನಿಂದು..........[3]

ಎಂಬಂತೆ ಕ್ರಿ.ಶ. ೧೬೩೯ರಲ್ಲಿ ರಾಜಧಾನಿಯ ಪ್ರದೇಶವು ಮಾತ್ರ ಇಕ್ಕೇರಿಯಿಂದ ಬಿದನೂರಿಗೆ ವರ್ಗಾಯಿಸಲ್ಪಟ್ಟಿತು. ಇತಿಹಾಸದಲ್ಲಿ ರಾಜಧಾನಿಯ ಬದಲಾವಣೆ ಕುರಿತು ರಾಜ ಪರಂಪರೆಯಲ್ಲಿ ಕಂಡುಬಂದ ಸಂಪ್ರದಾಯದಂತೆ ಕೆಳದಿ ಇತಿಹಾಸದಲ್ಲಿಯೂ ಇದು ಸಾಮಾನ್ಯ ಸಂಗತಿಯಾಗಿದೆ. ಭುವನಗಿರಿ ದುರ್ಗವು ಈ ಅರಸರ ರಕ್ಷಣೆಯ ಕೇಂದ್ರವಾಗಿತ್ತು. ......[4]

ಆರ್ಥಿಕ

ಕೆಳದಿ ಸರಕಾರದ ರಾಜ ಭಂಡಾರವು ಯಾವಾಗಲೂ ಸಂಪದ್ಭರಿತವಾಗಿತ್ತೆಂಬುದನ್ನು ಐತಿಹಾಸಿಕ ಸಂಗತಿಗಳು ಸ್ಪಷ್ಟೀಕರಿಸಿವೆ. ಈ ರಾಜ್ಯಕ್ಕೆ ಸ್ವಾಭಾವಿಕವಾಗಿಯೇ ಇರುವ ಮಲೆನಾಡಿನ ನೈಸರ್ಗಿಕ ಪರಿಸರ ಹಾಗೂ ಸಂಪತ್ತುಗಳು, ನದಿಗಳು, ಕರಾವಳಿ ಪ್ರದೇಶಗಳು, ಪಶ್ಚಿಮಘಟ್ಟಗಳು ಆದಾಯದ ಮೂಲ ಕೇಂದ್ರಗಳಾಗಿದ್ದವು. ಅಕ್ಕಿ, ಮೆಣಸು, ಅಡಕೆ ಹಾಗೂ ಶ್ರೀಗಂಧಗಳು ಹೇರಳವಾಗಿ ಈ ಸಂಸ್ಥಾನಕ್ಕೆ ಸಂಪತ್ತನ್ನು ಗಳಿಸಿಕೊಟ್ಟವು. ಪೂನಾ ವಿಶ್ವವಿದ್ಯಾಲಯದ ಡಾ॥ ಚಿಟ್ನೀಸ್‌ರವರು ಅಭಿಪ್ರಾಯ ಪಡುವಂತೆ—"The immense quantities of rice, pepper, cinnamon, cardamom, coral, sandalwood and Ivory, that abound in this kingdoom have caused it to be called the granary and warehouse of all India."[5]

ಹಾಗೆಯೇ ಮುಂದುವರಿದು—In the mountains there are mines of gold, diamonds, rubies and other precious stones; and even in the fortress of Rama Bednoor, there is a rich gold mine. When Hyder took possessi n of the place, he found an immense treasure in gold coined and in ingots, in trinklets and precious stones, that was indeed stupendous, if credit may be given to the accounts of the French, who accompanied him in that expedition. they say that the prince caused pearls and precious

---

3. (a) ಅದೇ- ಪು ೧೪೭ (b) ಇಕ್ಕೇರಿಯ ಐತಿಹಾಸಿಕ ಹಿನ್ನೆಲೆ. ಪು. ೬೫.
4. ತೀರ್ಥಹಳ್ಳಿ ತಾಲ್ಲೂಕಿನಲ್ಲಿರುವ ಈಗಿನ ಕೌಲೇದುರ್ಗ.
5. M.M.D.L.T., H.H S., (London, 1855) P. 58. (Keladi Polity P. 103, Dr. Chitnis, University of Poona.

stones to be measured in their sight with a corn measure and that having made two heaps of gold in ingots and trinklets, they surpassed the height of a man on horse back'' ಎಂಬುದಾಗಿ ವ್ಯಕ್ತಪಡಿಸಿದ್ದಾರೆ.

ಈ ಐತಿಹಾಸಿಕ ಸಂಗತಿಗಳು ಕೆಳದಿಯ ಆರ್ಥಿಕ ಸಂಪತ್ತಿನ ನೈಜ ಅಂಶಗಳನ್ನು ಪ್ರತಿಬಿಂಬಿಸುತ್ತವೆ. ಈ ದೊರೆಗಳು ರಾಜ್ಯದಲ್ಲಿ ವಾಣಿಜ್ಯ ಹಾಗೂ ಕೈಗಾರಿಕೆಗಳಿಗೆ ವಿಶೇಷ ಪ್ರೋತ್ಸಾಹ ನೀಡಿದರು. ಇಲ್ಲಿನ ಅಕ್ಕಿ, ಮೆಣಸು, ಶ್ರೀಗಂಧ ಮುಂತಾದ ಪದಾರ್ಥಗಳು ವಿದೇಶಗಳಿಗೂ ರಫ್ತಾಗುತ್ತಿತ್ತು. ಇದಕ್ಕಾಗಿಯೇ ಪ್ರತ್ಯೇಕ ಇಲಾಖೆ ಯೊಂದು ಕಾರ್ಯ ನಿರ್ವಹಿಸುತ್ತಿದ್ದುವು. ಇದಕ್ಕೆ ವಿಶೇಷ ಅಧಿಕಾರವನ್ನು ಅರಸರು ನೀಡಿದರು. ವಿದೇಶೀಯ ದಾಖಲೆಯೊಂದು—Thus Surappayya, Governor of Mangalore, made a treaty, on behalf of Somasekhara Nayaka II of Keladi, with Honourable English Company on February 9.20, 1736/37. In the treaty he mentions that, ''By virtue of the powers committed to me by the king, my master, I have concluded the above article in his behalf with the Honourable English Company.[6]

ಕೆಳದಿ ಅರಸರು ತಮ್ಮದೇ ಆದ ಟಂಕಸಾಲೆಯನ್ನು ಸ್ಥಾಪಿಸಿ ನಾಣ್ಯ ಚಲಾವಣೆ ಯನ್ನೂ ಜಾರಿಗೆ ತಂದರು. ಹೀಗೆ ಎಲ್ಲ ರೀತಿಯಿಂದಲೂ ಈ ಸಂಸ್ಥಾನವು ಆರ್ಥಿಕ ವಾಗಿ ಸಂಪದ್ಭರಿತವಾಗಿತ್ತು. ಈ ಮಾದರಿಯನ್ನು ಅನುಸರಿಸಿ ದಿವಾನ್ ಸರ್. ಎಂ ವಿಶ್ವೇಶ್ವರಯ್ಯನವರು ಆಪತ್ಕಾಲದಲ್ಲಿ ಒದಗಲು ಗೊತ್ತುಪಡಿಸಿದ ಕ್ರಮದಲ್ಲಿ ಹಣ ವನ್ನು ಸರಕಾರಿ ಖಜಾನೆಯಲ್ಲಿ ತೆಗೆದಿರಿಸುತ್ತಿದ್ದರೆಂದು ವ್ಯಕ್ತಪಟ್ಟಿದೆ. ಕೆಳದಿ ಅರಸರ ಇತಿಹಾಸದಿಂದ ಇದು ಪಾಠ ಕಲಿಯುವಂತಹ ಅಂಶವಾಗಿದೆ.

ಸಾಮಾಜಿಕ ಅಂಶಗಳು

ಭಾರತವು ಹಳ್ಳಿಗಳ ಬೀಡು. ಹಳ್ಳಿಗಳು ನೆಮ್ಮದಿಯಿಂದಿದ್ದಷ್ಟೂ ದೇಶಕ್ಕೆ ಶಾಂತಿ ಎಂಬುದನ್ನು ಪ್ರಾಚೀನ ಇತಿಹಾಸದಿಂದ ಈವರೆಗೂ ಕಂಡು ಬಂದ ಅಂಶಗಳಾ ಗಿವೆ. ಇದನ್ನು ಕೆಳದಿ ಅರಸರು ಮನಗಂಡಿದ್ದರು, ಗ್ರಾಮದ ಜೀವಾಳವೇ ಕೃಷಿ. ಇದಕ್ಕೆ ಪೂರಕವಾಗಿ ವಿಶಿಷ್ಟ ಹಾಗೂ ವಿಭಿನ್ನತೆಯಿಂದ ಕೂಡಿದ್ದ ಭೂಸುಧಾರಣೆಯನ್ನು [illegible] ಶಿವಪ್ಪನಾಯಕನು ಲೀಲಾಜಾಲವಾಗಿ ಬಗೆಹರಿಸಿ ರೈತರ ಹಿತವನ್ನು ಕಾಪಾಡಿ ದನು. ದೆಹಲಿಯ ಷೇರ್‌ಷಹನಂತೆ ಕೆಳದಿ ಶಿವಪ್ಪನಾಯಕನೂ ಜಾರಿಗೆ ತಂದ ಈ

6. Logan, opp. cit., pp 31-32 (K.P—p. 90—Ibid).

ಸಿಸ್ತು[7] ಸರಕಾರದ ಆದಾಯಕ್ಕೆ ವಿಶಿಷ್ಟ ಪ್ರಮಾಣದಲ್ಲಿ ಮಾದರಿಯದಾಗಿತ್ತು. ವ್ಯವಸಾಯದ ಪ್ರಗತಿಯು ದೇಶದಲ್ಲಿಯೇ ರೈತರಿಗೆ ನೀಡಿದ ವರದಾನವೆಂಬುದಾಗಿ ಕೆಳದಿ ಅರಸರು ಸಾಧಿಸಿ ತೋರಿಸಿದರು. ಈಗಿನಂತೆ ರೈತರ ಬಂಡಾಯವು ಈ ದೊರೆಗಳ ಕಾಲದಲ್ಲಿ ನಡೆದುದೇ ಇತಿಹಾಸದಲ್ಲಿ ಕಾಣಸಿಗುವುದಿಲ್ಲ. ಇತಿಹಾಸ ಅಧ್ಯಯನವು ಸಾಮಾನ್ಯ ಜನತೆಯ ಚರಿತ್ರೆಯನ್ನು ಮಹತ್ವಪೂರ್ಣವಾಗಿ ಪರಿಗಣಿಸುತ್ತದೆ. ಈ ದಿಸೆಯಲ್ಲಿ ಸಾಮಾನ್ಯ ಜನತೆಗೆ ಒದಗಿದ ಸೌಲಭ್ಯಗಳು, ತೆರಿಗೆಯ ನೀತಿ, ನೀರಾವರಿ ಯೋಜನೆಗಳು ಮುಂತಾದ ಸುಧಾರಣೆಗಳು ಸರಕಾರಕ್ಕೆ ಯಾವ ರೀತಿಯ ತೊಂದರೆಯೂ ಇಲ್ಲದೆ ರಾಜಾದಾಯಕ್ಕೆ ಸುಗಮ ಹಾದಿಯನ್ನು ರೂಪಿಸಿದ ರಾಜ್ಯವೆಂದರೆ ಕೆಳದಿ ಸಂಸ್ಥಾನ. ಈಚೆಗಿನ ಸಂಗತಿಗೆ ಇದನ್ನು ಹೋಲಿಸಿದಲ್ಲಿ ಸಾಮಾನ್ಯ ಕೊಡುಗೆಯಲ್ಲವೆಂಬುದು ವ್ಯಕ್ತಪಡುತ್ತದೆ. ಕಾಲಕಾಲಕ್ಕೆ ತೆರಿಗೆ ನೀತಿಯಲ್ಲಿ ಒದಗಿದ ಮಾರ್ಪಾಟುಗಳು ರೈತರಿಗೂ ಸಾಮಾನ್ಯ ಜನತೆಗೂ ಬಾಧಕವನ್ನುಂಟು ಮಾಡುತ್ತಿರಲಿಲ್ಲವೆಂದರೆ ಮಧ್ಯಕಾಲೀನ ಯುಗದ ಭಾರತ ಚರಿತ್ರೆಯಲ್ಲಿ ಈ ರಾಜ್ಯದ ದಕ್ಷ ಆಡಳಿತವನ್ನು ಮನಗಾಣಬಹುದಾಗಿದೆ. 31-5-1800 ರಲ್ಲಿ ಜೇಮ್ಸ್ ಮನ್ರೋ ಒಂದೆಡೆ ಈ ರಾಜ್ಯದ ಆಡಳಿತ ದಕ್ಷತೆಯನ್ನು ಪ್ರಶಂಸಿಸುತ್ತಾ—**Whatever proportion the assessment might have borne to the gross produce in 1763, at the time of the conquest of Kanara by Hyder, it still seems to have been sufficiently moderate to have enabled the country if not to extend its cultivation, at least to pressure it in the same flourishing state in which it had been in earlier times**[8] ಎಂಬುದಾಗಿ ಕೊಂಡಾಡಿದ್ದಾರೆ.

ಕೆಳದಿ ನೃಪವಿಜಯದಲ್ಲಿ ಲಿಂಗಣ್ಣ ಕವಿಯ ಉಲ್ಲೇಖನದಂತೆ-

ಪ್ರಜೆಗಳುಸಿರ್ವ ಬಿನ್ನಪವನಾಲಿಸಿಯೊಳ್ಗೆರೆ ಕಾಳ್ಪುರಂಗಳಂ
ಸೃಜಯಿಸಿ ಮೇಣವರ್ಗೆ ಕರಮೂಲಧನಂಗಳನಿತ್ತು ಬಿತ್ತುಮಂ।
ನಿಜಮೆನರಿತ್ತು ಗೋಷ್ಪದದನಿತ್ತಿಳೆಯಂ ಮಿಗೆ ಬೀಳಲೀಯದಾ
ದ್ವಿಜಸುರಪಾದಪಂ ಶಿವನೃಪಂ ಮಿಗೆ ಗೈಮೆಗೆ ತಂದನಳ್ತಿಯಿಂ।[9]

ಹೀಗೆ ಸಾಮಾನ್ಯ ಜನತೆ ಹಾಗೂ ರೈತರು ಸದಾ ನೆಮ್ಮದಿಯಿಂದ ಬಾಳುತ್ತಿದ್ದು ಸರಕಾರಕ್ಕೆ ನೀಡಬೇಕಾದ ಬಾಕಿಯೇ ಇರುತ್ತಿರಲಿಲ್ಲ.

---

7. ಸಿಸ್ತು = ಕಂದಾಯ ವ್ಯವಸ್ಥೆ—ವಿವರಗಳಿಗೆ ಮೈಸೂರು ವಿಶ್ವವಿದ್ಯಾನಿಲಯದ 'ಬಿದನೂರಿನ ಕೆಳದಿ ನಾಯಕರು' ಪುಸ್ತಕದಲ್ಲಿ ಅವಲೋಕಿಸಬಹುದು.
8. North Kanara Gezetteer II p 157.
9. ಲಿ.ಕೆ.ನೃ.ವಿ. ಪು. ೧೬೪. ಕ.ಸಾ.ಪ. 1977.

ನ್ಯಾಯ ತೀರ್ಮಾನದ ಸೌಲಭ್ಯಗಳು ಜನತೆಗೆ ಹೇಗೆ ಲಭಿಸುತ್ತಿತೆಂಬುದನ್ನು ಲಿಂಗಣ್ಣನು—

ದುಷ್ಟ ಜನರ್ಕಳ ಶಿಕ್ಷಿಸಿ
ಶಿಷ್ಟರನುರೆ ಪೊರೆದು ಸಂತತಂ ಶಿವಪೂಜಾ
ನಿಷ್ಠನೆಂದೆನಿಸಿ ಲೋಗರ
ಬಿಷ್ಟಿಗಳಂ ತವಿಸಿ ಪ್ರೌಢಪಿಯುಂ ಪಾಲಿಸಿದಂ
ಪಂಪಪಿಯುಂ ನಿಲಿಸಿದನಾ
ದೊರೆ ತನ್ನಯ ಮೋಲಕಾಣ ಘೋಷಣೆಯಿಂದಂ
ಪರವಸ್ತುವ ನೊಯ್ದಡಗಿದ
ನರಿಯಂ ಪಿಡಿತರಿಸಿ ಶಾಸ್ತಿಯಂ ಮಾಡಿಸಿದಂ[10]

ಹೀಗೆ ಉಲ್ಲೇಖಿಸಿ, ಕೆಳದಿ ಚೆನ್ನಮ್ಮಾಜಿಯ ರಾಜ್ಯಭಾರವನ್ನು

ಉನ್ನತ ಶುಭ ಗುಣಗಣ ಸಂ
ಪನ್ನತೆಯಿಂ ಕ್ಷಾತ್ರದಾನ ಧರ್ಮಾದಿಗಳಿಂ
ಚೆನ್ನಮಾಜಿಗೆ ಸರಿಯುಪ
ಮನ್ನೆಯರಿಲ್ಲೆನಿಸಿ ರಾಜ್ಯಮಂ ರಕ್ಷಿಸಿದಳ್[11]

ಎಂದು ಕೊಂಡಿದ್ದಾನೆ.

ಹ್ಯಾಮಿಲ್ಟನ್ನನ ಕಥನದಲ್ಲಿ—**Speaking about a highway in the Keladi State, Jacobus Cauter Visscher remarks that this road was so secure that any stranger might go and sleep there with bags full of money, and nobady would molest or rob him, for if such a thing occurred the people in the neighbour hood would not only be severely punished, but wolud be forced to make good the money.**

ಈ ಉಲ್ಲೇಖನವು ಕೆಳದಿ ರಾಜ್ಯದ ಸಾಮಾನ್ಯ ಜನತೆಯ ಶಾಂತಿ ಹಾಗೂ ನೆಮ್ಮದಿಯ ಜೀವನವನ್ನು ಚಿತ್ರಿಸಲ್ಪಟ್ಟಿದೆ. ಈಗಿನ ಪರಿಸ್ಥಿತಿಗೆ ಇದನ್ನು ತುಲನಾತ್ಮಕವಾಗಿ ವಿಮರ್ಶಿಸುವುದು ಅಗತ್ಯ. ಈ ಇತಿಹಾಸದಿಂದ ಮುಂದಿನ ಪೀಳಿಗೆಗೆ ಇದು ಮಾರ್ಗದರ್ಶನ ಒದಗಿಸುತ್ತದೆ.

---

10. ಅದೇ. ಪು. ೧೬೭.
11. ಅದೇ. ಪು. ೨೪೩.

ಸಾಹಿತ್ಯ, ಸಂಸ್ಕೃತಿ ಹಾಗೂ ಕಲೆ

ಕೆಳದಿ ಅರಸರು ಮಹಾ ಧರ್ಮಾಭಿಮಾನಿಗಳು. ವಿಜಯನಗರದ ಸನಾತನ ಧರ್ಮಪರಂಪರೆಯನ್ನೇ ಇವರು ಮುಂದುವರಿಸಿಕೊಂಡು ಬಂದರು. ವಿಖ್ಯಾತ ಕೆಳದಿ ರಾಣಿ ಚೆನ್ನಮ್ಮಾಜಿಯ ರಾಜನೀತಿ ಧರ್ಮವನ್ನು ಲಿಂಗಣ್ಣ ಕವಿಯು—

> ವ॥ ಅದೆಂತೆಂದೊಡಾ ಶಿವಾಜಿಯ ಪುತ್ರನಪ್ಪ ರಾಮರಾಜಂ ಪನ್ನಾಳಿಯಿಂ ಪಲಾಯನಂಬಡೆದೈದಿ ಪ್ರಾಸ್ಸಾಳಿಯಿಂ ಪೊಕ್ಕೆ ತಾನೈತಂದು ಪೊಕ್ಕ ವೃತ್ತಾಂತವೆಲ್ಲಮಂ ಚೆನ್ನಮ್ಮಾಜಿಯವರ್ಗರುಪಿ ಮೊಗಲರ್ಗೆ ಗೋಚರವಾಗದಂತು ನಿಮ್ಮ ಗಡಿರಾಜ್ಯದಿಂ ತನ್ನಂ ಜಿಂಜಿಗೆ ದಾಂಟಿಸಿಕೊಡಲ್ವೇಳ್ಕೆಂದು ಬಹು ಪ್ರಕಾರದಿಂ ಪೇಳಿಸಲ್ ಕರುಣಾನಿಧಿಯಪ್ಪ ಚೆನ್ನಮ್ಮಾಜಿಯವರ್ ಕೇಳ್ದು ಸಬನೀಸು ಕೋಳಿವಾಡದ ಬೊಮ್ಮಯ್ಯ ಚೊಕ್ಕನದ ಸಿದ್ಧಬಸವಯ್ಯ ಮುಂತಾದ ಮಂತ್ರಿಮನ್ನೆಯ ಸಾಮಾಜಿಕರೊಳ್ ಮಂತ್ರಾಲೋಚನೆಯಂ ರಚಿಸಿ ಡಿಳ್ಳಿಯವರಂಗಜೇಬಪಾತುಶಾಹನೇ ಮುನಿದೈತಂದೆಮ್ಮ ಸಂಸ್ಥಾನಮಂ ತೆಗೆದುಕೊಂಡೊಡಂ ಕೊಳಲೀನಾದೊಡಂ ಮರೆವೊಕ್ಕವನಂ ಕೊಡುವುದು ರಾಜಧರ್ಮಮಲ್ತೆಂದಿತು ಮತಮಂ ನಿಶ್ಚಯಂಗೆಯ್ದು...[12]

ಉಲ್ಲೇಖಿಸಿ ಶಿವಾಜಿಯಿಂದ ಕೆಳದಿ ರಾಜ್ಯಕ್ಕೆ ತೊಂದರೆಯಾಗಿದ್ದರೂ ಅದನ್ನು ಗಣಿಸದೆ ರಾಜಾರಾಮನನ್ನು ರಕ್ಷಿಸಿ ಮೊಗಲ್ ಬಾದಷಹನನ್ನು ಎದುರಿಸುವ ಮೂಲಕ ಮಹಾರಾಷ್ಟ್ರವನ್ನು ಉಳಿಸಿದಳು. ಕರ್ನಾಟಕದ ಹಾಗೂ ಮರಾಠಾ ಇತಿಹಾಸದಲ್ಲಿ ಇದೊಂದು ಉಜ್ವಲ ಅಧ್ಯಾಯವೆನಿಸಿದಾಗಿ ಮರಾಠಾ ಇತಿಹಾಸಕಾರ ಡಾ. ಶೆಜ್ವಾಲ್‌ಕರ್‌ರವರೇ ನಿರೂಪಿಸಿದ್ದಾರೆ. ಕೆಳದಿ ಅರಸರ ಮತೀಯ ಸೌಹಾರ್ದ ನೀತಿಯು ಮುಂದಿನ ಪೀಳಿಗೆಗೆ ಮಾರ್ಗದರ್ಶನವೀಯುವಂತಿದೆ. ಇವರು ವಿವಿಧ ಧರ್ಮಪಂಥಗಳನ್ನು ಸಮಾನ ರೀತಿಯಲ್ಲಿ ಪ್ರೋತ್ಸಾಹಿಸಿ ಉದಾರ ನೀತಿಯನ್ನು ಪಾಲಿಸಿಕೊಂಡು ಬಂದರು. ಶೃಂಗೇರಿ ಮಠಕ್ಕೆ ಅಪಾರ ಕೊಡುಗೆಗಳನ್ನು ಸಲ್ಲಿಸಿದರು, ಈ ಅರಸರು ಮನಸ್ಸು ಮಾಡಿದಲ್ಲಿ ತಮ್ಮ ರಾಜ್ಯದಲ್ಲಿ ಬೇಕೆಂದಲ್ಲಿ ಸ್ವಮತ ಸ್ಥಾಪನೆಗೆ ಔರಂಗಜೇಬನ ರೀತಿಯಂತೆ ಯೋಗ್ಯ ಪರಿಸರಗಳನ್ನೇ ಜಾರಿಗೆ ತರಬಹುದಾಗಿತ್ತು. ಆದರೆ ಹಾಗೆ ಮಾಡದೆ "ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್। ಸ್ವಧರ್ಮೇ ನಿಧನಂ ಶ್ರೇಯಃ। ಪರಧರ್ಮೋ ಭಯಾವಹಃ." ಎಂಬ ಭಗವದ್ಗೀತೆಯ ಉಕ್ತಿಯಂತೆ ಆಯಾ ಮತದವರಿಗೆ ಆಯಾ ಧರ್ಮಮಾರ್ಗದಲ್ಲಿಯೇ ಕ್ರಮಿಸುವಂತೆ ಅನುವು ಮಾಡಿಕೊಟ್ಟರು. ಅನೇಕ ಅಗ್ರಹಾರಗಳನ್ನು ನಿರ್ಮಿಸಿ

---

12. ಅದೇ. ಪು. ೨೩೨.

ಖಿಲವಾಗುತ್ತಿರುವ ವೇದ ಹಾಗೂ ಪ್ರಾಚೀನ ಜ್ಞಾನಪಾಶಗಳನ್ನು ಪುನರುದ್ಧರಿಸುವಂತೆ ಮಾಡಿದರು. ವಿದ್ಯಾಭ್ಯಾಸವು ಉನ್ನತ ದರ್ಜೆಯಿಂದ ಕೂಡಿದ್ದುದನ್ನು ಇಟಲಿಯ ಪ್ರವಾಸಿ ಪಿಯತ್ರೋ ಡೆಲ್ಲಾವಾಲ್ಲೆಯು ತಾ॥ 16-11-1623 ರಲ್ಲಿ ಇಕ್ಕೇರಿಗೆ ಸಂದರ್ಶಿಸಿ ಪ್ರವಾಸಿ ಕಥನದಲ್ಲಿ ಉಲ್ಲೇಖಿಸಿದ್ದಾನೆ.[13] ಜಾನ್ ಫ್ರಾಯಡನ ನಿರೂಪಣೆಯೊಂದು—It is an university of the Brahmins and well endowed This, though a principal university, can boast of no Bodlean or vatican ; their libraries being old manuscripts of their own cabalas, or mysteries understood only by the Brahmis........etc., ಹೀಗೆ ಕೆಳದಿ ಅರಸರ ಕಾಲದ ವಿದ್ಯಾಭ್ಯಾಸದ ಸ್ವರೂಪವನ್ನು ಪ್ರತಿಬಿಂಬಿಸುತ್ತದೆ.

ಕೆಳದಿ ಅರಸರ ಕಲಾ ಸ್ಮಾರಕಗಳು (ಕೆಳದಿ ರಾಮೇಶ್ವರ, ಇಕ್ಕೇರಿ ಅಘೋರೇಶ್ವರ, ಕೊಲ್ಲೂರು ಮೂಕಾಂಬಾ, ಭುವನಗಿರಿ ದುರ್ಗ ಮುಂತಾದುವು) ಅಪಾರವಿವೆ. ಅನೇಕ ಭಗ್ನಾವಶೇಷಗಳು ಶರಾವತಿ ಹಾಗೂ ವಾರಾಹಿ ಯೋಜನೆಗಳಲ್ಲಿ ಜಲಾವೃತವಾಗಿವೆ. ಈ ಅರಸರ ಕಾಲದ ನಿರ್ಮಾಣವನ್ನು "Keladi style of architecture" ಎಂಬುದಾಗಿ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಇವರ ಕಾಲದ ಮರದ ಕೆತ್ತನೆಗಳು, ಮೂರ್ತಿಗಳು, ಚಿತ್ರಕಲೆಗಳು ಮುಂತಾಗಿ ಅಳಿದುಳಿದುವನ್ನಾದರೂ ಶೇಖರಿಸಿ ಕೆಳದಿ ಪ್ರಾಚ್ಯವಸ್ತು ಸಂಶೋಧನಾಲಯದಲ್ಲಿ ಕಲೆಹಾಕಿ ಸುವ್ಯವಸ್ಥಿತಗೊಳಿಸಲು ಪ್ರಯತ್ನಿಸಲಾಗಿದೆ.

ಕೆಳದಿ ಅರಸರ ಕಾಲದ ಸಾಹಿತ್ಯ ಪ್ರೋತ್ಸಾಹವೂ ವಿಪುಲವಾಗಿವೆ. ಶಿವತತ್ವರತ್ನಾಕರ, ಸುಭಾಷಿತ ಸುರದ್ರುಮ, ಕೆಳದಿ ನೃಪವಿಜಯ, ಶಿವಗೀತೆ ಮುಂತಾದ ಕೃತಿಗಳು ವಿದ್ವತ್ಪ್ರಪಂಚದ ಕೊಡುಗೆಗಳಾಗಿವೆ.

ಕರ್ನಾಟಕದ ಇತಿಹಾಸದಲ್ಲಿ ಕೆಳದಿಯ ಪಾತ್ರವು ಹಿರಿದಾದುದು. ಜನರಲ್ ಸ್ಟೋಕ್ಸನು (General Stokes) ಈ ರಾಜ್ಯದ ನೈಜ ಸ್ವರೂಪ ಹಾಗೂ ಜನರ ಶೀಲ ಸ್ವಭಾವಗಳನ್ನು—

> "I have nowhere in India seen so much honesty and veracity as among the country people of Nagara. The ryots of Nagara have always prided themselves on their nationality."[14]

ಎಂಬುದಾಗಿ ಉದ್ಗರಿಸಿದ್ದಾನೆ.

---

13. ಇಕ್ಕೇರಿಯ ಐತಿಹಾಸಿಕ ಹಿನ್ನೆಲೆ. ಪು. 93 (1975).
14. Stokes, Survey of Nagar Division. (K.P—P 212).

ಚೀನಾದ ಕನ್ಫ್ಯೂಷಿಯಸ್ಸನು ಮುಂದಿಟ್ಟಿರುವ ಆದರ್ಶ ಸಮಾಜದ ಚಿತ್ರ ಬಹು ಉದಾತ್ತವಾದುದು-

ಧರ್ಮವು ಜಗತ್ತಿನಲ್ಲಿ ವರ್ಧಿಸಿದಾಗ ಪ್ರಪಂಚವೆಲ್ಲ ಪ್ರಜಾಸತ್ತಾತ್ಮಕವಾಗುವು ಸತ್ಯಶೀಲರು ಸನ್ಮಾನಿಸಲ್ಪಡುವರು. ದಕ್ಷರಾದವರು ಅಧಿಕಾರ ಸೂತ್ರವನ್ನು ವಹಿಸು ವರು. ಸತ್ಯಸಂಧತೆಯೂ ಶಾಂತಿಯೂ ಜಗತ್ತಿನಲ್ಲಿ ವರ್ಧಿಸುವುದು. ಆಗ ಜನ ಇತರರ ತಂದೆ ತಾಯಿಯರನ್ನು ತಮ್ಮ ತಂದೆ-ತಾಯಿಯರೆಂದೂ ಇತರರ ಮಕ್ಕಳ ತಮ್ಮ ಮಕ್ಕಳೆಂದೂ ಭಾವಿಸುವರು. ವೃದ್ಧರ ಪೋಷಣೆಗೂ ಮಕ್ಕಳ ವಿದ್ಯಾಭ್ಯಾಸಗಳಿಗೂ ಸರಿಯಾದ ಗಮನ ಸಲ್ಲುವುದು. ಪ್ರಾಯಸ್ಥರಿಗೆ ಜೀವನೋಪಾಯ ದೊರೆಯುವುದು. ರೋಗಿಗಳನ್ನೂ ಅಂಗಹೀನರನ್ನೂ ನಿರಾಶ್ರಿತರನ್ನೂ ಸರಕಾ ದವರೇ ಸಂರಕ್ಷಿಸುವರು. ಯಾರೊಬ್ಬರ ಹಕ್ಕು ಬಾಧ್ಯತೆಗೂ ಕುಂದು ಬರುವುದಿ ಸ್ತ್ರೀಯರು ತಮ್ಮ ವ್ಯಕ್ತಿತ್ವಕ್ಕೆ ಲೋಪ ತರದೆ ಗೃಹಿಣಿಯರಾಗಿ ಮಾನ್ಯ ಸ್ಥಾನವ ಪಡೆಯುವರು. ಸಮಾಜದ ಸಾಧನ ಸಂಪತ್ತುಗಳು ವ್ಯರ್ಥವಾಗುವುದಿಲ್ಲ. ಯಾರೊ ಬ್ಬರ ಸ್ವಾರ್ಥಕ್ಕಾಗಿಯೂ ಅವು ಮೀಸಲಾಗುವುದಿಲ್ಲ. ಕೆಲಸಗಾರರ ಶಕ್ತಿಯು ಸ ಯಾದ ಉಪಯೋಗವನ್ನು ಹೊಂದುವುದು. ಅವರ ದುಡಿಮೆಯ ಫಲವನ ಮತ್ತಾರೂ ಕಸಿದುಕೊಳ್ಳುವುದಿಲ್ಲ. ಹೀಗಾಗಿ ಸ್ವಾರ್ಥತೆಗೆ ಸ್ಥಾನವಿಲ್ಲದಾಗುವುದ ಕಳ್ಳರೂ-ದಂಗೆಕೋರರೂ ಮಾಯವಾಗುವರು. ಮನೆಯ ಬಾಗಿಲುಗಳಿಗೆ ಬೀ ಹಾಕಬೇಕಾದ ಅವಶ್ಯಕತೆಯೇ ಇರುವುದಿಲ್ಲ.

ಇಂತಹ ಸಾಧನೆಗಳನ್ನು ಸಾಧಿಸಿದ ಕೆಳದಿ ಅರಸರ ಪಾತ್ರವು ಕರ್ನಾಟಕ ಉಜ್ವಲ ಇತಿಹಾಸದಲ್ಲಿ ಮಹತ್ವದ ಅಧ್ಯಾಯವಲ್ಲದೆ ಮತ್ತೇನು ? ಈ ಇತಿಹಾಸ ಧ್ಯಯನಕ್ಕೆ ವಿಪುಲ ಅವಕಾಶವಿರುವುದರಿಂದ ಸದ್ಯಕ್ಕೆ ಇಷ್ಟು ಸಾಕು !

ವಿದ್ಯಾರ್ಥಿಗಳಿಗೆ ಹರಿದಾಸ ಸಾಹಿತ್ಯ ಶಿಕ್ಷಣದ ಅಗತ್ಯ

ಕೊರಟಿ ಶ್ರೀನಿವಾಸರಾವ್

ಶಿಕ್ಷಣವೆಂದರೇನು—ಎಂಬುದರ ಬಗೆಗೆ ಜಗತ್ತಿನ ಚಿಂತನಶೀಲರ ಅಭಿಪ್ರಾಯಗಳಲ್ಲಿ ಭಿನ್ನಾಭಿಪ್ರಾಯವಿದ್ದರೂ, ಶಿಕ್ಷಣದ ಅಗತ್ಯದ ಬಗೆಗಾಗಲೀ, ಉದ್ದಿಶ್ಯ, ಗುರಿಗಳ ಬಗೆಗಾಗಲೀ ಅಭಿಪ್ರಾಯ ಭೇದವಿರುವುದಿಲ್ಲ. ಶಿಕ್ಷಣದ ಬಗ್ಗೆ ಹಲವು ವಿದ್ವಾಂಸರು ಹೀಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

1. ವ್ಯಕ್ತಿತ್ವದ ವಿಕಾಸವೇ ಶಿಕ್ಷಣದ ಗುರಿ —ಸರ್. ಟಿ. ಪರ್ಸಿನನ್

2. ವಿಚಾರಕ್ಕೆ ಮತ್ತು ಸುಂದರವಾದುದನ್ನು ಮೆಚ್ಚುವುದಕ್ಕೆ ಅಗತ್ಯವಾಗುವ ಶಿಕ್ಷಣವನ್ನು ನೀಡುವುದೇ ಉದಾರ ಶಿಕ್ಷಣದ ಧ್ಯೇಯ. ನಿರುಪಮಾನವಾದ, ಆಲೋಚನೆಗಳ ಸಾಹಿತ್ಯ ಕಲಾಕೃತಿಗಳ ಪರಿಚಯವನ್ನು ಮಾಡಿಕೊಡುತ್ತಾ ಉದಾರ ಶಿಕ್ಷಣ ಮುಂದುವರೆಯುತ್ತದೆ. —ವೈಟ್‌ಹೆಡ್

'ಶಿಕ್ಷಣದ ಧ್ಯೇಯಗಳು', ಪು. 73

3. ದೇಹ, ಮನಸ್ಸು ಮತ್ತು ಆತ್ಮ ಬೆಳವಣಿಗೆಯೇ ಶಿಕ್ಷಣ.

—ಪಂಡಿತ ಜವಹರಲಾಲ್ ನೆಹರು

4. ಶಿಕ್ಷಣ ಬರಿಯ ಜ್ಞಾನ ಸಂಪಾದನೆಯಲ್ಲ; ಜೀವನದ ಗುರಿಯ ಸ್ವಯಂ ಪರಿಪೂರ್ಣತೆಯಾಗಿರಬೇಕು. ಅದು ದೇಹ, ಬುದ್ಧಿ ಮತ್ತು ನೀತಿಗಳೆಲ್ಲದರ ಬೆಳವಣಿಗೆಗೂ ಸಹಾಯ ಮಾಡಬೇಕು. —ಫ್ರೊಬೆಲ್

5. ಮನುಷ್ಯನಿಗೆ ಮನುಷ್ಯತ್ವವು ಪ್ರಾಪ್ತವಾಗಬೇಕಾದರೆ ಶಿಕ್ಷಣವು ಅತ್ಯಾವಶ್ಯಕವಾಗಿರಬೇಕು. ಶಿಕ್ಷಣವೆಂದರೆ ಮನಸ್ಸು, ಬುದ್ಧಿ ದೇಹಗಳಿಗೆ ದೊರೆಯುವ ಸಂಸ್ಕಾರವು. ಇಂಥ ಸಂಸ್ಕಾರವು ಮನುಷ್ಯನಿಗೆ ಸಕಾಲದಲ್ಲಿ ದೊರೆಯದಿದ್ದರೆ ಆತನು ಸುಖ ಶಾಂತಿಗಳನ್ನನುಭವಿಸುವುದು ಸಾಧ್ಯವೇ ಇಲ್ಲ.

—ಹರ್ಡೇಕರ ಮಂಜಪ್ಪ 'ರಾಷ್ಟ್ರಧರ್ಮದ್ರಷ್ಟಾರ'

6. ಜನತೆಗೆ ಯಾವುದು ಗೊತ್ತಿಲ್ಲವೊ ಅದನ್ನು ತಿಳಿಸುವುದು ವಿದ್ಯಾಭ್ಯಾಸದ ಉದ್ದೇಶವಲ್ಲ; ಹೇಗೆ ವರ್ತಿಸಬೇಕೆಂಬುದನ್ನು ತಿಳಿಸುವುದೇ ಅದರ ಗುರಿ.

—ಜಾನ್ ರಸ್ಕಿನ್

7. ಶಿಕ್ಷಣ ಜೀವನದ ಬೆಳಕು. ಧನಿಕರು ಬಡವರು ಎಂಬ ಭೇದವಿಲ್ಲದೆ ಇದು ಎಲ್ಲರಿಗೂ ಅವಶ್ಯಕ.

—ಗೋರೂರು ರಾಮಸ್ವಾಮಿ ಅಯ್ಯಂಗಾರ್-'ಸಾಹಿತ್ಯ ರಶ್ಮಿ'-ಪು. 73

8. ವಿದ್ಯಾಭ್ಯಾಸ ಕ್ರಮವೇ ಶಿಕ್ಷಣ. ಸಂಪೂರ್ಣವಾದ ಜ್ಞಾನವನ್ನುಂಟು ಮಾಡುವುದೇ ಸರ್ವೋತ್ತಮ ಶಿಕ್ಷಣ. ಇದರಲ್ಲಿ ಆತ್ಮರಕ್ಷಣೆ, ಕುಟುಂಬ ಪೋಷಣೆ, ಮನೋರಂಜನೆ, ಸಮಾಜಸೇವೆ-ಎಂಬ ನಾಲ್ಕು ಭಾಗಗಳಿವೆ.

—ಡಿ. ಕೃಷ್ಣ ಐಯ್ಯಂಗಾರ್ 'ರೈತರ ಸಮಾಜ' ಪು. 93

9. ಗುರು, ಶಿಷ್ಯ, ಪಾಠ—ಈ ಮೂರೂ ಶಿಕ್ಷಣದ ತ್ರಿಪುಟಿಗಳು. ಇವು ಒಂದೊಂದೂ ಮತ್ತೊಂದಷ್ಟೇ ಮುಖ್ಯ.

—ಡಾ। ಎಂ. ಸಿದ್ದಲಿಂಗಯ್ಯ

10. ಎಲ್ಲ ಶಿಕ್ಷಣಕ್ಕೂ ಮೂಲವಾದ ಶಿಕ್ಷಣ ಅಂತರಾತ್ಮನ ಆವಿರ್ಭಾವ.

—ವಿ. ಕೃ. ಗೋಕಾಕ್

ಹೀಗೆ ಶಿಕ್ಷಣದ ಗುರಿಯು ವ್ಯಕ್ತಿತ್ವದ ವಿಕಾಸ, ಅಂತರಾತ್ಮನ ಆವಿರ್ಭಾವಕ್ಕೆ ಅಂದರೆ ಜೀವನದ ಮುಖ್ಯ ಉದ್ದೇಶ್ಯ ಸಾಧನೆಗೆ ನೆರವಾಗುವುದು. ಮನುಷ್ಯನನ್ನು ಪಶುಗಳಿಗಿಂತ ಬೇರ್ಪಡಿಸಿ, ಅವನನ್ನು ಭಗವಂತನ ಸಾಕ್ಷಾತ್ಕಾರಕ್ಕೆ ಒಯ್ಯುವ ಮಾರ್ಗ ಎಂದು ಎಲ್ಲ ಚಿಂತನಪರ ಶಿಕ್ಷಣವೇತ್ತರೂ, ಸಮಾಜದ ಚಿಂತಕರೂ, ದಾರ್ಶನಿಕರೂ ಅಭಿಪ್ರಾಯ ಪಡುತ್ತಾರೆ.

ವ್ಯಕ್ತಿಗೆ ಶಿಕ್ಷಣದಿಂದ ದೊರಕುವ ಲಾಭ ಒಂದೆರಡಲ್ಲ. ಶಿಕ್ಷಣದಿಂದ ವಿದ್ಯೆ, ಆ ಮೂಲಕ ಅರಿವು ಮೂಡುತ್ತದೆ. ಅರಿವೇ ಜೀವನದ ಗುರುವಾಗಿ, ಅವನ ಇಹಪರದ ಬಾಳಿಗೆ ಬೇಕಾದ ಅಮೃತವನ್ನು ಒದಗಿಸುತ್ತದೆ. 'ವಿದ್ಯಾ ದದಾತಿ ವಿನಯಂ'—ಎಂದು ತಿಳಿಸಿಕೊಡುವ ಹಿತೋಪದೇಶಕಾರನು, ವಿದ್ಯೆಯು ವಿನಯವನ್ನು ಕೊಡುತ್ತದೆ. ವಿನಯದಿಂದ ಯೋಗ್ಯತೆ, ಯೋಗ್ಯತೆಯಿಂದ ಧನ, ಧನದಿಂದ ಧರ್ಮ, ಧರ್ಮದಿಂದ ಸುಖಪ್ರಾಪ್ತಿಯುಂಟಾಗುತ್ತದೆ. ಹೀಗೆ ಜೀವನದ ಮೆಟ್ಟಿಲುಗಳನ್ನು ನಿರ್ದೇಶಿಸಿದ್ದಾನೆ.

ವಿದ್ಯೆಯು ಮಾತೆಯಂತೆ ಸಲಹುತ್ತದೆ: ತಂದೆಯಂತೆ ಹಿತವಾದುದರಲ್ಲಿ ನಿಯೋಜಿಸುತ್ತದೆ; ಕಾಂತೆಯಂತೆ ಖೇದವನ್ನು ಹೋಗಲಾಡಿಸಿ ಸಂತೋಷಪಡಿಸುತ್ತದೆ. ದಿಕ್ಕುದಿಕ್ಕುಗಳಲ್ಲಿಯೂ ಕೀರ್ತಿಯನ್ನುಂಟು ಮಾಡುತ್ತದೆ; ಹಣವನ್ನು ಕೊಡುತ್ತದೆ. ಅದು ನೀಡದಿರುವುದು ಯಾವುದನು? ವಿದ್ಯೆಯು ಕಲ್ಪವೃಕ್ಷದ ಫಲ—ಎಂದಿದ್ದಾನೆ ಮಹಾಕವಿ ಬಿಲ್ಹಣ, ತನ್ನ ವಿಕ್ರಮಾಂಕ ಚರಿತ ಕಾವ್ಯದಲ್ಲಿ. ಭಾರತೀಯ ಸಂಸ್ಕೃತಿ ಹಾಗೂ ತತ್ತ್ವಜ್ಞಾನಗಳ ಆಕರ ಗ್ರಂಥಗಳಾದ ಭಗವದ್ಗೀತೆ, ಉಪನಿಷತ್ತುಗಳಲ್ಲಿ

ವಿದ್ಯೆಯನ್ನು ಪರಾ, ಅಪರಾ ವಿದ್ಯೆಗಳೆಂದು ಕರೆದು ಲೌಕಿಕ ಜೀವನಕ್ಕೆ ಅಪರಾ ವಿದ್ಯೆಯೂ, ಆಧ್ಯಾತ್ಮಿಕ ಬದುಕಿಗೆ ಪರಾ ವಿದ್ಯೆಯೂ ಅಗತ್ಯವೆಂದು ತಿಳಿಸಿ, ನಿಜವಾದ ಶ್ರೇಷ್ಠ ವಿದ್ಯೆಯು ಭಗವಂತನ ಬಗೆಗೆ ತಿಳಿಸಿಕೊಡುವ ದರ್ಶನ ಶಾಸ್ತ್ರಗಳ ಅಧ್ಯಯನ ವೆಂದು ನಿರೂಪಿಸಿದೆ.

ಈಶೋಪನಿಷತ್ತಿನಲ್ಲಿ ವಿದ್ಯೆಯಿಂದ ಅಮೃತವು ಪ್ರಾಪ್ತವಾಗುವುದೆಂದು ಹೇಳಿದ್ದಾರೆ. ಭಗವದ್ಗೀತೆಯು "ನಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ" ಅಂದರೆ ಜ್ಞಾನಕ್ಕೆ ಸಮಾನವಾದುದೂ, ಪವಿತ್ರವಾದುದೂ ಮತ್ತಾವುದೂ ಇಲ್ಲ—ಎಂದು ಸ್ಪಷ್ಟ ಮಾತುಗಳಲ್ಲಿ ತಿಳಿಸಿದೆ. ಈ ಮಾತಿನ ಅರ್ಥವನ್ನೇ ಸುಭಾಷಿತಕಾರನು 'ವಿದ್ಯಾ ಸಮಂ ನಾಸ್ತಿ ಶರೀರ ಭೂಷಣಂ' -ಎಂದು ಘೋಷಿಸಿದ್ದಾನೆ. ವಿದ್ಯೆಯು ಶರೀರದ ಆಭರಣ ಮಾತ್ರದಲ್ಲಿ, ಅದು ಆತ್ಮ ಜ್ಞಾನದ ಪ್ರಗತಿಯೂ ಆಗಿದೆ. ಉಪನಿಷತ್ತುಗಳು ಇದನ್ನು ಕ್ಷರ, ಅಕ್ಷರ ವಿದ್ಯೆಗಳೆಂದು ಕರೆದಿದೆ. ಕ್ಷರ ಎಂದರೆ ಲಕ್ಷ್ಮೀದೇವಿ ಎಂದೂ, ಅಕ್ಷರನೆಂದರೆ ಶ್ರೀಹರಿ ಎಂದೂ—ಲೌಕಿಕ ಬದುಕು ಹಸನಾಗಲು ಲಕ್ಷ್ಮೀಕಟಾಕ್ಷವೂ, ಪಾರಮಾರ್ಥಿಕ ಜೀವನಕ್ಕೆ ಅಕ್ಷರನಾದ ಭಗವಂತನ ಆತ್ಮವಿದ್ಯೆಯೂ ಅಗತ್ಯವೆಂದು ಒತ್ತಿ ಹೇಳಿದೆ. ಈ ಎಲ್ಲಾ ವಿವರಣೆಗಳಿಂದ ಶಿಕ್ಷಣ ಹಾಗೂ ವಿದ್ಯೆಯ ಮಹತ್ವವನ್ನು ಅರಿಯಬಹುದಾಗಿದೆ.

ಆದುದರಿಂದ ಪ್ರಾಚೀನ ಭಾರತದಲ್ಲಿ ಲೌಕಿಕ ವಿದ್ಯೆಗಳಿಗೂ ಅಧ್ಯಾತ್ಮಿಕ ಜ್ಞಾನೋಪಾಸನೆಗೂ, ಸಮಾನವಾದ ಅವಕಾಶಗಳು ಕಲ್ಪಿಸಿ ಕೊಟ್ಟಿದ್ದರು. ಪ್ರಾಚೀನರ ಗುರುಕುಲ ಪದ್ಧತಿಯಲ್ಲಿ ವಿದ್ಯೆಯನ್ನು ಜ್ಞಾನ ವಿಜ್ಞಾನ ಸಹಿತವಾಗಿ ಒತ್ತು ಕೊಟ್ಟಿದ್ದರು. ಛಾಂದೋಗ್ಯ ಉಪನಿಷತ್ತು ತಿಳಿಸುವಂತೆ, ಕೇವಲ ವಿದ್ಯಾರ್ಥಿಗಳು ಯಂತ್ರವಾದರಾದ ಮಾತ್ರಕ್ಕೆ ಪುರುಷಾರ್ಥ ಸಾಧನೆಯಾಗದು; ಅವರು ಆತ್ಮವಾದರೂ ಆಗಬೇಕಿತ್ತು. ಇದನ್ನೇ ಪ್ಲೇಟೊ ಎಂಬ ಗ್ರೀಸಿನ ದಾರ್ಶನಿಕ, ವಿದ್ಯೆ ಎಂದರೆ ವಿವರ ಸಂಗ್ರಹಣೆ ಮಾತ್ರವಿಲ್ಲ ; ಅವುಗಳಿಂದ ಅರಿವೂ ಬರಬೇಕೆಂದಿದ್ದಾನೆ.

ಒಬ್ಬ ಮನುಷ್ಯನನ್ನು ಸುಶಿಕ್ಷಿತನನ್ನಾಗಿ ಇಲ್ಲವೇ ಸದ್ಗುಣಿಯನ್ನಾಗಿ ಮಾಡಲು ವಿಷಯಗಳ ಮಾಹಿತಿಯನ್ನು ನೀಡುವುದರಿಂದ ಸಾಧ್ಯವಾಗುವುದಿಲ್ಲ. ಆಧ್ಯಾತ್ಮಿಕ ಜೀವನಕ್ಕೆ ಸಿದ್ಧಗೊಳಿಸದ ಇಂಥ ಶುಷ್ಕವಿದ್ಯೆ ವ್ಯರ್ಥವೆಂದೇ ಹೇಳಬೇಕು. ಇಂಗ್ಲೆಂಡಿನ ದಾರ್ಶನಿಕ, ನವ್ಯಕವಿ ಇಲಿಯಟ್ ಈ ಮಾತನ್ನು ಕಾವ್ಯಶೈಲಿಯಲ್ಲಿ ಕೇಳಿದ್ದಾನೆ—

Where is the wisdom we have lost in knowledge?
Where is the knowledge we have lost in information?
The cycles of Heaven in twenty centuries,
Bring us father from God and nearer to the dust.

೨

ಭಾರತವು ಸ್ವಾತಂತ್ರ್ಯ ಪಡೆದಮೇಲೆ ಭಾರತೀಯರ ಅನೇಕ ಸಮಸ್ಯೆಗಳಲ್ಲಿ ಪ್ರಮುಖವಾದ ಸಮಸ್ಯೆ ದೇಶದ ಲಕ್ಷಲಕ್ಷ ಜನರ ಬಡತನ ಮತ್ತು ಆರ್ಥಿಕ ಅಸಮಾನತೆ ಇವನ್ನು ನಿವಾರಿಸಲು ಬದ್ಧಕಂಕಣವಾಯಿತು. "ಆರ್ಥಿಕ ಪ್ರಗತಿಗೆ ಶಿಕ್ಷಣ ಅಗತ್ಯ. ಶಿಕ್ಷಣವು ಪ್ರತಿಯೊಬ್ಬ ಮನುಷ್ಯನೂ ನೆಮ್ಮದಿಯ ಉತ್ತಮ ಮತ್ತು ಸಮಗ್ರ ವ್ಯಕ್ತಿತ್ವದಿಂದ ಕೂಡಿದ ಬಾಳ್ವೆಯನ್ನು ಬಾಳಲು ನೆರವಾಗುತ್ತದೆ" -ಎಂದು ವಿ.ಕೆ.ಆರ್.ವಿ. ರಾವ್ ಅಭಿಪ್ರಾಯ ಪಟ್ಟರೆ, ಸುಪ್ರಸಿದ್ಧ ಗಾಂಧೀ ಚಿಂತಕರಾದ ಜೆ. ಸಿ. ಕುಮಾರಪ್ಪನವರು "ಜೀವನದ ಎಲ್ಲ ಕ್ಷೇತ್ರಗಳ ಬಾಗಿಲನ್ನು ತೆರೆಯುವ ಬೀಗದ ಕೈ ಶಿಕ್ಷಣ. ಶಿಕ್ಷಣವು ನಮ್ಮನ್ನು ಜೀವನಕ್ಕೆ ಅಣಿಮಾಡಬೇಕು. ಉತ್ತಮ ಪೌರರು. ಉತ್ತಮ ಮಾತಾಪಿತೃಗಳು, ಉತ್ತಮ ಪತಿಪತ್ನಿಯರು ಆಗುವಂತೆ ಮಾಡಬೇಕು. ಜನರನ್ನೂ, ಜೀವನವನ್ನೂ ಆಳಿಯುವ ಶಕ್ತಿಯನ್ನು ಪಡೆಯಬೇಕು" ಎಂದು ಸಾಮಾಜಿಕ ಮಾರ್ಪಾಟಿಗೆ ಅಗತ್ಯವಾದ ಶಿಕ್ಷಣವನ್ನು ಕುರಿತು ಒತ್ತಿ ಹೇಳಿದರು.

ಇಂಥ ಹೊಣೆಗಾರಿಕೆಯನ್ನು ಅರಿತ ಪೌರರನ್ನು ಅಂದರೆ ರಾಷ್ಟ್ರಕವನ್ನು ತಯಾರಿಸಲು, ರಾಷ್ಟ್ರ ನಿರ್ಮಾಪಕರು ಭಾರತದ ಸಂವಿಧಾನವನ್ನು ರೂಪಿಸಿದಾಗ, ಪ್ರಜಾಪ್ರಭುತ್ವದ ಆಧಾರದ ಮೇಲೆ ನಿಂತ ಸೆಕ್ಯುಲರ್ ಸ್ಟೇಟ್ ನಿರ್ಮಿಸಲು ಹೊರಟರು. ಇದು ಶ್ಲಾಘ್ಯವಾದ ಉನ್ನತ ಆದರ್ಶವಾದರೂ ಸೆಕ್ಯುಲರಿಸಮ್ ಅಂದರೇನು -ಎಂಬ ಪದದ ವ್ಯಾಖ್ಯೆ ನೀಡುವಾಗ ಒಬ್ಬೊಬ್ಬರು ಒಂದೊಂದು ರೀತಿಯಾಗಿ ವ್ಯಾಖ್ಯಾನ ಮಾಡಿದರು. ಕೆಲವರು ಇದನ್ನು ಧರ್ಮಾತೀತವೆಂದು ಅರ್ಥೈಸಿದರೆ. ಮತ್ತೆ ಕೆಲವರು ಧರ್ಮನಿರಪೇಕ್ಷ, ಧರ್ಮರಹಿತ ಎಂಬುದಾಗಿ ಅರ್ಥಮಾಡಿಕೊಂಡರು. ಭಾರತವನ್ನು ಯಾವುದೇ ಒಂದು ಧರ್ಮದ ತಳಹದಿಯ ಮೇಲೆ ಕಟ್ಟಬಾರದೆಂಬುದು ಅವರ ಕಲ್ಪನೆಯಾಗಿತ್ತು. ಈ ನೆಲದಲ್ಲಿರುವ ಹಿಂದೂ, ಮುಸಲ್ಮಾನ, ಕ್ರೈಸ್ತ ಮುಂತಾದ ಎಲ್ಲ ಧರ್ಮಗಳೂ ಸಮಾನವೆಂದು, ಸರ್ವಧರ್ಮ ಸಮನ್ವಯ ಸೂತ್ರವನ್ನು ಪ್ರತಿಪಾದಿಸಲು ಹೊರಟರು. ಎಲ್ಲ ಧರ್ಮದವರಿಗೆ ತಮ್ಮ ಧರ್ಮಗಳನ್ನು ಅನುಸರಿಸಲು ಸಮಾನ ಅವಕಾಶವಿರಬೇಕೆಂಬುದೇ ಅವರ ವಿಚಾರವಾಗಿತ್ತು. ಈ ಅರ್ಥವನ್ನು ಅವರು ಸೆಕ್ಯುಲರ್ ಸ್ಟೇಟ್ -ಎಂದು ಹೇಳಿದರು. ಆದರೆ ಇದನ್ನು ಅನುಷ್ಠಾನಕ್ಕೆ ತಂದವರು. ಇದರ ಸತ್ವವನ್ನು ಮರೆತು, ಹೊರಗಿನ ಹೊಟ್ಟನ್ನಷ್ಟೇ ಹಿಡಿದುಕೊಂಡು, ಭಾರತವು ಧರ್ಮರಹಿತ ರಾಷ್ಟ್ರವೆಂದು ಹೇಳಲು ತೊಡಗಿದರು. ಇದರ ಪರಿಣಾಮವಾಗಿ ನಮ್ಮ ರಾಷ್ಟ್ರದ ಕಲ್ಪನೆಯಲ್ಲಿ ಯಾವುದು ಜೀವನಾಡಿಯಾಗಿ ಅಂತಸ್ಸತ್ವವಾಗಿ ಭ್ರಾತೃತ್ವ, ಸಮಾನತೆ, ಸ್ವಾತಂತ್ರ್ಯಗಳನ್ನು ರಾಷ್ಟ್ರ ಜೀವನದಲ್ಲಿ ಬೆಸುಗೆ ಹಾಕಬೇಕಾಗಿತ್ತೋ, ಅಂಥ ಧರ್ಮಕ್ಕೆ ಸಂವಿಧಾನದಲ್ಲಿ ಸ್ಥಾನವಿಲ್ಲದೆ ಹೋಯಿತು. ಭಾರತದ ಸುಭದ್ರ ನೆಲದಲ್ಲಿ ಬೇರುಬಿಟ್ಟಿದ್ದ ಸನಾತನ ಧರ್ಮದ ವೃಕ್ಷವನ್ನು ಜಗ್ಗಿ, ಹೊರತೆಗೆದು, ಅದನ್ನು ಅಭದ್ರಗೊಳಿಸಲಾಯಿತೆಂಬುದು ವಿಷಾದದ ಸಂಗತಿ.

ಧರ್ಮದ ಮಾತನಾಡಿದರೆ ಜಾತೀಯತೆ ಪ್ರಜ್ವಲಿಸಿ, ನಮ್ಮ ನಾಡಿನ ಶಾಂತಿ ನೆಮ್ಮದಿಗಳನ್ನು ಕದಡಬಹುದೆಂದು ಹೆದರಿಸಿ ರಾಜಕಾರಣಿಗಳು ನಾಡಿನ ಶಿಕ್ಷಣದಲ್ಲೂ ಧರ್ಮಕ್ಕೆ ಅರ್ಧ ಚಂದ್ರ ಪ್ರಯೋಗ ಮಾಡಿದರು. ಅ ಮೂಲಕ ಶಿಕ್ಷಣದ ಗುರಿಯಾದ ವ್ಯಕ್ತಿತ್ವ ನಿರ್ಮಾಣಕ್ಕೆ ಬೇಕಾಗಿದ್ದ, ನೀತಿ ಸಂಹಿತೆಯನ್ನು. ಧಾರ್ಮಿಕ ಮೌಲ್ಯಗಳನ್ನು ಚಾರಿತ್ರ್ಯ ಶೀಲಗಳನ್ನು ಗಾಳಿಗೆ ತೂರಿದರು, ಇದೇ ರಾಷ್ಟ್ರದ ಎಲ್ಲ ಸಮಸ್ಯೆಗಳಿಗೆ ಸಮಾಜದ ಅಧಃಪತನಕ್ಕೆ ಪ್ರಮುಖ ಕಾರಣ. ಆದುದರಿಂದ ೧೯೪೯ ರಷ್ಟು ಹಿಂದೆಯೇ ವಿಚಾರವೇತ್ತರೂ, ಶಿಕ್ಷಣ ತಜ್ಞರೂ, ದಾರ್ಶನಿಕರೂ ಆಗಿದ್ದ ಸರ್ವಪಲ್ಲಿ ರಾಧಾಕೃಷ್ಣನ್ ಅವರ ನೇತೃತ್ವದಲ್ಲೂ ನೇಮಕಗೊಂಡಿದ್ದ ತಜ್ಞರ ಸಮಿತಿಯು ತನ್ನ 'ಯೂನಿವರ್ಸಿಟಿ ಎಜುಕೇಷನ್ ಕಮಿಸನ್ ರಿಪ್ರೋರ್ಟ್' ಎಂಬ ವರದಿಯಲ್ಲಿ ಶಿಕ್ಷಣದ ವಿಲ್ಲಾ ಸಮಸ್ಯೆಗಳನ್ನು ಕೂಲಂಕಷವಾಗಿ ಚರ್ಚಿಸುವಾಗ ಧಾರ್ಮಿಕ ಶಿಕ್ಷಣವನ್ನು ಕುರಿತು ಚರ್ಚಿಸಿದ್ದಾರೆ. ಈ ಸಮಿತಿಯಲ್ಲೂ ಡಾ. ತಾರಾಚಂದ್, ಡಾ, ಜಕೀರ ಹುಸೇನ್, ಡಾ. ಎ, ಲಕ್ಷ್ಮಣಸ್ವಾಮಿ ಮೊದಲಿಯಾರ್, ಡಾ. ಮೇಘನಾಥ, ಡಾ. ಕರಮನಾರಾಯಣ ಭಾಲ್, ಪ್ರೊ. ನಿರ್ಮಲಕುಮಾರ ಸಿದ್ಧಾಂತರಂಥ ಶಿಕ್ಷಣ ತಜ್ಞರು ಇದ್ದು ಬೆಲೆಯುಳ್ಳ ವರದಿಯನ್ನು ತಯಾರಿಸಿದರು.

ಅವರು The Secular State ಎಂಬುದನ್ನು ಹೀಗೆ ವಿವರಿಸಿದ್ದಾರೆ. "It dose not-mean that nothing is secred or worthy of reverence, It dose not say that all our activities are profane and devoted to sordid ideas of selfish advancement, We do not accept a purely scientific materialism as philosophy of the State, That would be to Violate our nature, our ಸ್ವಭಾವ, our characteristic genius, ಸ್ವಧರ್ಮ. Though we have no State religion, we cannot forget that a deeply rueligious strain has run throughout our history like a golden thread" ನಮ್ಮ ಸ್ವಭಾವ, ನಮ್ಮ ಪ್ರತಿಭೆ, ನಮ್ಮ ಸ್ವಧರ್ಮಗಳಿಗೆ ಅನುಗುಣವಾದ ಧಾರ್ಮಿಕ ಶಿಕ್ಷಣದ ಅಗತ್ಯವನ್ನು ಕುರಿತು ಅವರು ಒತ್ತಿ ಹೇಳಿದ್ದಾರೆ.

ಅವರು ಪ್ರಜಾಪ್ರಭುತ್ವ ಮತ್ತು ಧರ್ಮ, ಭಾರತೀಯ ಧಾರ್ಮಿಕ ದೃಷ್ಟಿ (ಸಂವಿಧಾನದಲ್ಲಿ ನಿರೂಪಿತವಾಗಿರುವಂತೆ) ಧರ್ಮ ಮತ್ತು ಅನುಷ್ಠಾನಮಾರ್ಗ. ಆಧ್ಯಾತ್ಮಿಕ ತರಬೇತು, ಸ್ವಪ್ರಯತ್ನ, ಜಿಜ್ಞಾಸಾ ಸ್ವಾತಂತ್ರ್ಯ—ಹೀಗೆ ಬೇರೆ ಬೇರೆ ಮಜಲುಗಳಲ್ಲಿ ಈ ವಿಷಯವನ್ನು ಕುರಿತು ವಿಚಾರ ಮಾಡಿದ್ದಾರೆ.

ಅವರ ಅಭಿಪ್ರಾಯದಲ್ಲಿ ಹೊರಪಟ್ಟ ಅಂಶಗಳೆಂದರೆ, ಪ್ರಜೆಗಳಿಗೆ ತಮ್ಮ ಧಾರ್ಮಿಕ ಆಚರಣೆಯ ಸ್ವಾತಂತ್ರ್ಯ. ಇತರ ಧರ್ಮಗಳ ಬಗೆಗೆ ಗೌರವ, ಎಲ್ಲ ಧರ್ಮ ಹೀಗೆ ಉದಾರ ನೀತಿಯ ತಳಹದಿಯ ಮೇಲೆ ಶಿಕ್ಷಣದಲ್ಲಿ ಧರ್ಮ ಅಳವಡಬೇಕೆಂದು

ಸೂಚಿಸಿದ್ದಾರೆ. ವಿಶ್ವದ ಮಾನವರೆಲ್ಲರನ್ನೂ ಒಂದಾಗಿ ಬೆಸೆಯುವ ಮಾನವಧರ್ಮ ವಿಶ್ವಧರ್ಮದ ಪ್ರಚಾರಕ್ಕೆ ಭಾರತವು ಪ್ರಮುಖ ಕಾಣ್ಕೆ ನೀಡಬಹುದೆಂದು ಅವರು ಸ್ಪಷ್ಟವಾಗಿ ತಿಳಿಸಿದ್ದಾರೆ.

ಈ ಸಂದರ್ಭದಲ್ಲೂ ವಾರ್ಧಾಯೋಜನೆಯಲ್ಲೂ 1930ರಲ್ಲಿ ಗಾಂಧೀಜಿ ಹೇಳಿರುವ ಮಾತನ್ನು ಅವರು ಉಲ್ಲೇಖಿಸಿದ್ದಾರೆ.

"I hold that the truths that are common to all religi n can and should be to all children."

"Fundamental principles of ethics are Common to all religions. These should certadnly be taught to the Children and That should be regarded as adequate religious instruction so for as the schools under the waro a Scheme are concerned"

ಇಂಗ್ಲೆಂಡಿನ ಬ್ರಿಟಿಷ್ ಸೆಕೆಂಡರಿ ಸ್ಕೂಲ್ಸ್-ಕುರಿತು ಸರ್. ಸಿರಿಲ್ ನಾರ್ವುಡ್ (Sir Cyril Norwood) ಅವರು ತಮ್ಮ ವರದಿಯಲ್ಲಿ

"We believe that education can not stop short of recog nising ideals of truth and beauty and goodness as final and binding for all times and in all places as utimate Values" ಈ ಸತ್ಯ ಮನವರಿಕೆಯಾಗಬೇಕಾದರೆ ರಾಷ್ಟ್ರೀಯ ಶಿಕ್ಷಣದಲ್ಲಿ ಧರ್ಮದ ಬಗೆಗೆ ವಿಶಾಲವಾದ ನಿಲುವು ಅಗತ್ಯವಿದೆ—ಎಂಬುದು ನಿರ್ವಿವಾದವಾದ ಅಂಶ.

ರಾಧಾಕೃಷ್ಣನ್ ಅವರು ಮಾಡಿರುವ ಶಿಫಾರಸುಗಳು ಹೀಗಿವೆ :

We recommend—

1) That all educational institutions start work with a few minutes for silent meditation.

2) That in the first year of Degree Course lives of the great religious leaders like Gautama the Buddha, Confucius. Zoraster, Socrates, Jesus, Sankara, Ramanuja, Madhva, Mohammed, Kabir, Nanak, Gandhi, be taught,

3) That in the second year some selections of a universe list character from the scriptures of the world be studied.

4) That in the third year, central problem of the philsophy of religion be consfdered :

ಅಂದರೆ ಶಿಕ್ಷಣದಲ್ಲಿ ಧರ್ಮಕ್ಕೆ ಅವಕಾಶ ಕಲ್ಪಿಸುವುದು, ಜಗತ್ತಿನ ಧರ್ಮ ಬೋಧಕರಾದ ಗೌತಮಬುದ್ಧ, ಕನ್‌ಫ್ಯೂಷಿಯಸ್, ಝೊರಾಷ್ಟ್ರ, ಸಾಕ್ರೆಟೀಸ್, ಜೀಸಸ್ ಶಂಕರ, ರಾಮಾನುಜ, ಮಧ್ವ, ಮಹಮದ್, ಕಬೀರ್, ನಾನಕ್, ಗಾಂಧಿ-ಮುಂತಾ ದವರ ಬೋಧೆಗಳಿಂದ ಆರಿಸಿದ ಭಾಗಗಳನ್ನು ಅಭ್ಯಾಸಕ್ಕೆ ಇಡುವುದು. ವಿಶ್ವಧರ್ಮಕ್ಕೆ ಪ್ರಚೋದಕವಾದ ಗ್ರಂಥಭಾಗಗಳನ್ನು ಅಭ್ಯಾಸಿಸುವುದು, ಆಯಾ ದರ್ಶನಿಕರ ಮುಖ್ಯ ತತ್ವಗಳ ಬಗ್ಗೆ ಜಿಜ್ಞಾಸೆ ಮಾಡುವುದು-ಹೀಗೆ ವಿಶ್ವವಿದ್ಯಾನಿಲಯದ ಹಂತದಲ್ಲೂ ಮೂರುವರ್ಷಗಳ ಬೋಧನ ಕ್ರಮವನ್ನು ಅವರು ಶಿಫಾರಸು ಮಾಡಿರುವರು. ಇದ ರಿಂದ ಶಿಕ್ಷಣ ಕ್ಷೇತ್ರದಲ್ಲಿ ಧರ್ಮದ ಬಗ್ಗೆ ಕಲಿಯುವುದು ಎಷ್ಟು ಮುಖ್ಯ ವೆಂಬುದನ್ನು ಮನಗಾಣಬಹುದಾಗಿದೆ.

೩

ಕರ್ನಾಟಕದ ಧಾರ್ಮಿಕ ಹಾಗೂ ಸಾಂಸ್ಕೃತಿಕ ಪರಂಪರೆಯಲ್ಲಿ ವಚನ ಸಾಹಿತ್ಯ ಮತ್ತು ಹರಿದಾಸ ಸಾಹಿತ್ಯಗಳು ಪ್ರಮುಖ ಪಾತ್ರವಹಿಸಿವೆ. ಒಂದು ತುಂಗೆಯಾದರೆ ಇನ್ನೊಂದು ಭದ್ರೆಯಾಗಿ ನಾಡಿನ ಜನಮನವನ್ನು ಪವಿತ್ರಗೊಳಿಸಿ ತುಂಗಭದ್ರೆಯಾಗಿ ಹರಿದಿವೆ. ಒಂದೇ ನಾಣ್ಯದ ಎರಡು ಮುಖಗಳಂತೆ ಈ ಸಾಹಿತ್ಯ ಮೌಲ್ಯ ಕೆಲಸಮಾಡಿವೆ, ಎರಡು ಕಣ್ಣುಗಳು, ಒಂದು ನೋಟವಿದ್ದಂತೆ, ಇವುಗಳ ಗುರಿ ಒಂದೇ ಆಗಿವೆ. ಒಂದೇ ವೃಕ್ಷದ ಎರಡು ಹಣ್ಣುಗಳು; ಒಂದೇ ಬಳ್ಳಿಯ ಎರಡು ಹೂಗಳು. ಮಾಧುರ್ಯ ಬೇರೆ. ರುಚಿ ಬೇರೆ ಆದರೂ, ದೇಹದ ಪುಷ್ಟಿಗೆ, ಮನಸ್ಸಿನ ಆರೋಗ್ಯಕ್ಕೆ ಇವೆರಡು ಸಾಹಿತ್ಯ ಪರಂಪರೆಗಳು ನಿತ್ಯನವೀನವಾದ, ಎಲ್ಲ ಕಾಲಕ್ಕೂ ಎತ್ತಿ ಹಿಡಿಯುವ ಸಾಮಾಜಿಕ ಮೌಲ್ಯಗಳನ್ನು ಬೋಧಿಸುತ್ತವೆ. ಈ ಎರಡು ಸಾಹಿತ್ಯದಲ್ಲೂ ಲೌಕಿಕ ಶಿಕ್ಷಣವನ್ನೂ ಆಧ್ಯಾತ್ಮಿಕ ಶಿಕ್ಷಣವನ್ನೂ ನೀಡುವ ಹೆಬ್ಬಯಕೆ ಇದೆ. ವಚನಕಾರರು, ಸಮಾಜ ಸುಧಾರಕರು, ಸಂಸ್ಕೃತಿ ಪೋಷಕರು, ಜೀವಂತ ಸಾಹಿತ್ಯದ ನಿರ್ಮಾಪಕರ ಆದರಂತೆಯೇ ಹರಿದಾಸರೂ ಆಗಿದ್ದಾರೆ. ಇಬ್ಬರೂ ತಮ್ಮ ಕಾಲದ ಡಂಭಾಚಾರ ವನ್ನೂ, ವರ್ಣವ್ಯವಸ್ಥೆಯ ನ್ಯೂನತೆಗಳನ್ನು, ಆರ್ಥಿಕ ಮತ್ತು ಸಮಾಜಿಕ ಅಸಮತೆ ಯನ್ನು, ಶೋಷಿತಜನರ ಕಷ್ಟಕಾರ್ಪಣ್ಯಗಳನ್ನು ಚಿತ್ರಿಸುವ ಮೂಲಕ ಅವರ ಉದ್ಧಾರ ವನ್ನು ಬಯಸಿದ ದ್ರಷ್ಟಾರರು, ವಿಶ್ವಸತ್ಯಗಳ ದಾರ್ಶನಿಕರು: ನಿತ್ಯ ಸೌಂದರ್ಯೋ ಪಾಸಕರು, ಮಾನವೀಯ ಮೌಲ್ಯಗಳ ಹರಿಕಾರರು. ಒಂದು ಮಾತಿನಲ್ಲೂ ಹೇಳಬೇಕೆಂ ದರೆ ಇವರು ವಿಶ್ವಧರ್ಮದ ದಿವ್ಯ ಜ್ಯೋತಿಗಳು.

ಈ ಸಾಹಿತ್ಯಗಳ ಆಳವಾದ ಅಧ್ಯಯನ ಮಾಡಿದ ಮೊಗ್ಲಿಂಗನೆಂಬ ಜರ್ಮನ್ ಪಾದ್ರಿಯು ಹದಿನೆಂಟನೆಯ ಶತಮಾನದಲ್ಲಿ ಈ ಎರಡು ಸಾಹಿತ್ಯದಲ್ಲಿನ ಶ್ರೇಷ್ಠ ಕೃತಿ ಗಳನ್ನು ಜರ್ಮನ್ ಭಾಷೆಗೆ ಅನುವಾದಿಸಿ, ಬರ್ಲಿನಿನಲ್ಲಿ ಪ್ರಕಟಿಸಿದನು. ವಚನ

ಕಾರರಾದ ಬಸವಣ್ಣ, ಅಕ್ಕಮಹಾದೇವಿ, ಪ್ರಭುದೇವ, ಸಿದ್ಧರಾಮ, ಚನ್ನಬಸವರ ಕೃತಿಗಳೂ, ಶ್ರೀಪಾದರಾಜ, ವ್ಯಾಸರಾಜ, ಪುರಂದರ, ಕನಕದಾಸರ ಹಾಡುಗಳೂ ಪ್ರಥಮ ಬಾರಿಗೆ ಯೂರೋಪಿಗೆ ಪರಿಚಯವಾಯಿತು. ಮುಂದೆ ಕರ್ನಾಟಕದಲ್ಲಿ ಕ್ರೈಸ್ತ ಧರ್ಮಪ್ರಸಾರಕ್ಕೆ ಬಂದ ರೆವರೆಂಡ್ ಕಿಟ್ಟೆಲರೂ, ಅಧಿಕಾರಿಗಳಾದ ಪ್ಲೀಟ್ ಲೂಯಿರೈಸ್ ಮುಂತಾದವರೂ ಈ ಸಾಹಿತ್ಯ ಕೃತಿಗಳ ಪರಿಚಯವನ್ನು ಇಂಗ್ಲಿಷ್ ಬಲ್ಲ ಪಾಶ್ಚಾತ್ಯ ವಿದ್ವಾಂಸರಿಗೆ ಮಾಡಿಕೊಟ್ಟರು. ಇಂಥವರ ಸೇವೆಯಿಂದಾಗಿ ಶಿವಶರಣರ ವಚನಗಳೂ, ಹರಿದಾಸರ ಕೀರ್ತನೆಗಳೂ, ದೇಶದ ನಾನಾಭಾಗಗಳ ಸಾರಸ್ವತ ಪ್ರಿಯರ ಗಮನವನ್ನು ಸೆಳೆಯುವಂತೆ ಆಯಿತು.

ಹರಿದಾಸ ಸಾಹಿತ್ಯಕ್ಕೆ ಇರುವ ವಚನಗಳಿಗೆ ಇಲ್ಲದ ಒಂದು ಪ್ರಯೋಜಕ ದೃಷ್ಟಿ ಹಿಂದೆ ವಚನಗಳನ್ನು ಹಾಡುತ್ತಿದ್ದರೆಂದು ಹೇಳಲಾಗಿದ್ದರೂ ಆ ಪರಂಪರೆ ಈಗ ನಷ್ಟವಾಗಿದೆ. ಆದರೆ ಹರಿದಾಸರ ಕೃತಿಗಳು ಹಾಡುಗಬ್ಬಗಳಾಗಿ ಇಂದಿನವರೆಗೂ, ಅವರ ಸಾಹಿತ್ಯದಷ್ಟೇ ಸಂಗೀತ ಲಕ್ಷಣಗಳು, ಅಂದರೆ ರಾಗ, ತಾಳ ಮುಂತಾದ ಲಕ್ಷ್ಯ ಲಕ್ಷಣಗಳೂ ಉಳಿದುಕೊಂಡು ಬಂದಿವೆ. ಇದು ಕರ್ನಾಟಕ ಸಂಗೀತ ಪದ್ಧತಿಗೆ ಬಲವಾದ ಅಸ್ತಿವಾರವನ್ನು ನಿರ್ಮಿಸಿ, ಶಾಸ್ತ್ರ ಮರ್ಯಾದೆಯನ್ನು ಕಾಪಾಡಿಕೊಂಡು ಬಂದಿದೆ. ದಕ್ಷಿಣಾದಿ ಸಂಗೀತ ಪರಂಪರೆ ಎಂದರೆ ಪುರಂದರದಾಸರು ಹಾಕಿಕೊಟ್ಟ ಕರ್ನಾಟಕ ಸಂಗೀತ ಪರಂಪರೆಯೇ ಆಗಿದೆ,

ಹರಿದಾಸರ ಕೃತಿಗಳನ್ನು ಸಮೀಕ್ಷಿಸಿದವರು ಈ ಸಾಹಿತ್ಯದ ಕೆಲವು ಪ್ರಮುಖ ಅಂಶಗಳನ್ನು ಕುರಿತು ಹೀಗೆ ಹೇಳಿದ್ದಾರೆ.

"ದಾಸರ ವಾಙ್ಮಯವು ಕನ್ನಡ ಭಾಷೆಯ ಬೆಳವಣಿಗೆಗೆ ಮಾಡಿದ ಉಪಕಾರದ ಪ್ರಕಾರಗಳನ್ನು ತಿಳಿಸುವೆವು. ಜನ ಸಾಮಾನ್ಯದ ಭಾಷೆಯು ವಾಙ್ಮಯ ರಚನೆಗೆ ಉಪಯೋಗಿಸಲ್ಪಡುತ್ತಿತ್ತು. ಭಾಷೆಯು ವಿಚಾರಗಳ ಹೊರ ಹೊದಿಕೆಯಾದ್ದರಿಂದ ದಾಸರ ಕಾಲದ ಆ ಹೊದಿಕೆಯು ಬಿಗಿಯಾದ ಅರ್ಥದಿಂದ ಸುಸಂಸ್ಕೃತ ಮಾಡಲ್ಪಟ್ಟಿತು. ಭಾಷೆ ಮತ್ತು ಪ್ರಬಂಧದ ರೀತಿಗಳಲ್ಲಿ ರಾಜಕೀಯ ಮತ್ತು ಧಾರ್ಮಿಕ ಕ್ರಾಂತಿಗಳಿಂದ ಹೊಸ ಹೊಳಪು ಹುಟ್ಟಿತು. ಹಳೆಯ ಹೊದಿಕೆಯ ನಿರ್ಬಂಧಗಳು ಸಡಿಲಾಗಿ ವಿಚಾರ ಪ್ರವಾಹವು ಭಾಷೆಯ ಕಟ್ಟುಗಳನ್ನು ದಾಟಿ ಹೊಸ ಹೊಸ ವೃತ್ತಗಳನ್ನು ಬಂಧಗಳನ್ನು ರೂಢಿಯಲ್ಲಿ ತಂದಿತು. ಈ ಬದಲಾವಣೆಯಲ್ಲಿ ವಿಶೇಷವಾಗಿ ಹರಿದಾಸರು ಪ್ರಚಾರಕ್ಕೆ ತಂದ ಷಟ್ಪದಿ, ರಗಳೆ, ಉಗಾಭೋಗ, ಸುಳಾದಿ, ಸಾಂಗತ್ಯ ಯಕ್ಷಗಾನ ಇವೇ ಮುಂತಾದುವು ಮುಖ್ಯವಾಗಿವೆ. ಕರ್ನಾಟಕ ಸಂಗೀತಕ್ಕೆ ತಕ್ಕಂತೆ ಅನುಭಾವಿಗಳಾದ ದಾಸರು ನರ್ತನ ಅಥವಾ ನೃತ್ಯ ವಿದ್ಯೆಯನ್ನು ಆಧ್ಯಾತ್ಮಿಕವಾಗಿ ಬಳಕೆಯಲ್ಲಿ ತಂದರು."

—ಡಾ. ಆರ್. ಪಂಚಮುಖಿ, ಹರಿದಾಸ ಸಾಹಿತ್ಯ

"ದಾಸ ಸಾಹಿತ್ಯವು ಅತ್ಯಂತ ವ್ಯಾಪಕವಾದ ವಾಙ್ಮಯವು. ಇದರಲ್ಲಿ ವೇದೋಪನಿಷತ್ತುಗಳಲ್ಲಿ ಉಕ್ತವಾದ ಪರಬ್ರಹ್ಮ ಮತ್ತು ಜಗತ್ತಿನ ಅನೇಕ ವಿಷಯಗಳು ಭಾರತದ ವಿವಿಧ ದರ್ಶನಗಳಲ್ಲಿ ಚರ್ಚಿತವಾದ ಕೆಲವು ಗಡುಸಾದ ತತ್ವಗಳೂ, ಭಾಗವತಾದಿ ಪುರಾಣಗಳಲ್ಲಿ ಹೇಳಲ್ಪಟ್ಟ ಹರಿಭಕ್ತಿದ್ಯೋತಕವಾದ ಅನೇಕ ಉಪಾಖ್ಯಾನಗಳು ಅಡಕವಾಗಿರುವುದಲ್ಲದೆ ಭಾರತದ ರಾಜನೀತಿಯು, ಧರ್ಮದ, ಲೋಕವ್ಯವಹಾರದ ವಿಷಯಗಳೂ ಸುಂದರವಾಗಿ ಚಿತ್ರಿತವಾಗಿವೆ. ಶೃಂಗಾರಾದಿ ಎಲ್ಲ ರಸಗಳನ್ನು ಸಮುಚಿತವಾಗಿ ಪ್ರದರ್ಶಿಸುವ ಹರಿಯ ಲೀಲಾ ವಿಲಾಸದ ರಮಣೀಯ ಸಾಹಿತ್ಯವಿದೆ. ಇವೆಲ್ಲವೂ ಭಾರತ ಸಂಗೀತದ ಹಿರಿಯ ಸಂಪ್ರದಾಯವಾದ ಕರ್ಣಾಟಕ ಸಂಗೀತದ ಅಚ್ಚುಕಟ್ಟಿನಲ್ಲಿ ಷಟ್ಪದಿ ಮೊದಲಾದ ಕನ್ನಡ ಛಂದಸ್ಸಿನಲ್ಲಿ ರಚಿತವಾಗಿವೆ. ಈ ವಾಙ್ಮಯವು ಲಲಿತಪದ ವಿನ್ಯಾಸದಿಂದ ಸರಳವಾಗಿರುವುದಷ್ಟೇ, ಜಟಿಲಾಲಂಕಾರಗಳಿಂದ ಪ್ರೌಢವೂ ಹೌದು. ಒಟ್ಟಿನ ಮೇಲೆ ಇದು ವಿವಿಧ ಮನೋಭಾವದ ಸಹೃದಯರು, ದಾರ್ಶನಿಕರು, ಸುಧಾರಕರು, ಸಂತರು, ಸ್ತ್ರೀಯರು ಮೊದಲಾದವರಿಗೆಲ್ಲ ಬೇಕಾದುದನ್ನು ಒದಗಿಸುವ ಆಕರವಾಗಿರುವುದು,"

—ಡಾ. ಎಚ್. ಕೆ. ವೇದವ್ಯಾಸಚಾರ್ಯ, ಕರ್ಣಾಟಕದ ಹರಿದಾಸರು.

"ಕನ್ನಡ ಸಾಹಿತ್ಯದ ಸಾವಿರದ್ವೈನೂರು ವರ್ಷಗಳ ಸುದೀರ್ಘ ಇತಿಹಾಸದಲ್ಲಿ ಹರಿದಾಸ ಸಾಹಿತ್ಯ ಒಂದು ಪ್ರಮುಖ ಘಟ್ಟ. ಹೆಚ್ಚು ಕಡಿಮೆ ಐದು ಶತಮಾನಗಳ ವ್ಯಾಪ್ತಿಯುಳ್ಳ ಈ ಭಕ್ತಿ ಸಾಹಿತ್ಯ ಪ್ರಕಾರದಲ್ಲಿ ಸುಮಾರು ಇನ್ನೂರು ಜನ ಹರಿದಾಸರು ಬಗೆ ಬಗೆಯ ರಚನೆಗಳಿಂದ, ಮುಖ್ಯವಾಗಿ ಕೀರ್ತನೆಗಳಿಂದ ಸಮೃದ್ಧವಾಗಿಸಿದ್ದಾರೆ. ಈ ಕೀರ್ತನೆಗಳು ಇಂದು ಜನಪ್ರಿಯವಾಗಿ ಪ್ರಚಾರದಲ್ಲಿದೆ. ಕೆಲವು ಮುಖ್ಯ ಹರಿದಾಸರ ಹೆಸರು ಮನೆ ಮಾತಾಗಿದೆ, ಸಾಹಿತ್ಯಕ ಶ್ರೀಮಂತಿಕೆಯಿಂದ ಮಾತ್ರವಲ್ಲದೆ ದ್ವೈತ ಸಿದ್ಧಾಂತವನ್ನು ಅಧ್ಯಯನ ಮಾಡುವ ದೃಷ್ಟಿಯಿಂದಲೂ ಹರಿದಾಸಸಾಹಿತ್ಯ ಮಹತ್ವದ್ದಾಗಿದೆ."

—ಡಾ. ಹ. ಮಾ. ನಾಯಕರು, ಶ್ರೀ ಮಹಿಪತಿರಾಯರ ಕೃತಿಗಳು, ಮುನ್ನುಡಿ

"ಹರಿದಾಸರು ನಾಡು ನುಡಿಗಳಿಗೆ ಮಹೋಪಕಾರ ಮಾಡಿದ್ದಾರೆ. ಅವರ ಎಲ್ಲ ವೈಶಿಷ್ಟ್ಯಗಳಲ್ಲಿ ಮೊದಲು ನೆನೆಯಬೇಕಾದುದು ಅವರು ತಮ್ಮ ತಾಯ್ನುಡಿಯಾದ ಕನ್ನಡದಲ್ಲಿ ಕೃತಿಗಳನ್ನು ರಚಿಸಿ ಅಧ್ಯಾತ್ಮ ವಿಷಯಗಳನ್ನು ಪಂಡಿತರಲ್ಲದವರಿಗೆ, ಸಂಸ್ಕೃತ ತಿಳಿಯದವರಿಗೆ ಮನದಟ್ಟು ಮಾಡಿದುದು. ಜನ ಸಾಮಾನ್ಯರಲ್ಲಿ ಬೆರೆತು, ಪರಂಪರೆಯಿಂದ ಬಂದ ಕಟ್ಟುಗಳನ್ನು ಸಡಲಿಸಿ ಕಿತ್ತುಹಾಕಿ, ಪಾಮರರಿಗೆ ಸುಗಮ, ಸುಲಭವಾಗುವಂತೆ ಅವರ ನಿತ್ಯದ ಬಳಕೆಯ ಭಾಷೆಯಲ್ಲಿಯೇ ಧರ್ಮ ತತ್ವಗಳನ್ನು ಹೇಳಿ ಬರೆದು ಪ್ರಚಾರ ಮಾಡಿದರು."

—ಡಾ. ಕೆ. ಎಂ. ಕೃಷ್ಣರಾಯರು, ಶ್ರೀ ಜಗನ್ನಾಥದಾಸರು.

ಹೀಗೆ ಹರಿದಾಸರೂ ಹರಿದಾಸ ಸಾಹಿತ್ಯವೂ, ಕನ್ನಡ ನಾಡು ನುಡಿಗಳಿಗೆ ಮಾಡಿದ ಉಪಕಾರ ಅಮೋಘವಾದುದು. ಹರಿದಾಸರ ಕೃತಿಗಳಲ್ಲಿ ವಿಶ್ವಬಂಧುತ್ವ-ಮೈತ್ರೀ ಭಾವಗಳು ಹೇಗೆ ಒಡಮೂಡಿವೆ ಎಂಬುದನ್ನು ಅವರ ಕೃತಿಗಳಿಂದಲೇ ನೋಡಬಹುದು.

೪

ಹರಿದಾಸರು ಅನೇಕ ಸಾಹಿತ್ಯ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ್ದರೂ ಶಿವ ಶರಣರ ವಚನಗಳ ಶೈಲಿ, ಛಂದಸ್ಸು, ಭಾವ ಮತ್ತು ಭಾಷೆಗಳನ್ನು ಹೋಲುವ ಆದರೆ ಹಾಡು ಗಬ್ಬವಾದ ಉಗಾಭೋಗಗಳು ಅತ್ಯಂತ ಜನಪ್ರಿಯ ರಚನೆಗಳಾಗಿವೆ. ಅವು ಗಳಲ್ಲಿ ಅನೇಕ ಲೋಕೋಕ್ತಿಗಳೂ, ಬೋಧಪ್ರದವೂ ಸುಂದರವೂ ಆದ ಸಾಹಿತ್ಯಕ ಅಂಶಗಳು ಇರುವುದರಿಂದ ಅವುಗಳಲ್ಲಿ ಕೆಲವನ್ನು ಇಲ್ಲಿ ಕೊಡಲಾಗಿದೆ. ಇದರಿಂದ ಸಮಗ್ರ ಹರಿದಾಸ ಸಾಹಿತ್ಯ ಸಂಪತ್ತನ್ನು ಮನಗಾಣುವುದು ಸಾಧ್ಯವಿಲ್ಲವಾದರೂ, ಈ ಉಗಾಭೋಗಗಳು ಕರಿಯನ್ನ ಕನ್ನಡಿಯಲ್ಲಿ ತೋರಿದಂತೆ, ಶ್ರೀಕೃಷ್ಣನು ತನ್ನ ಪುಟ್ಟ ಬಾಯಲ್ಲಿ ವಿಶ್ವವನ್ನು ತೋರಿದಂತೆ ಒಂದು ಸಣ್ಣ ಪ್ರಯತ್ನವಾಗಿದೆ. ಅನ್ನವನ್ನು ಬೆಂದಿದೆಯೋ ಇಲ್ಲವೋ ಎಂಬುದನ್ನು ಒಂದು ಅಗುಳನ್ನು ಒತ್ತಿ ನೋಡಿದಂತೆ ದಾಸ ಸಾಹಿತ್ಯದ ಪರಿಪಕ್ವತೆ ತಿಳಿಯಲು ಇದೊಂದು ಅಗುಳು, ಅಷ್ಟೇ.

ಹರಿದಾಸ ಸಾಹಿತ್ಯಕ್ಕೆ ಶ್ರೀಮಧ್ವಾಚಾರ್ಯರು ಆದ್ಯ ಹರಿದಾಸರೆಂದು ಹೇಳುತ್ತಾರೆ. ಅವರು ಸಂಸ್ಕೃತದಲ್ಲಿ ರಚಿಸಿದ ದ್ವಾದಶ ಸ್ತೋತ್ರವು ಒಂದು ಒಳ್ಳೆ ಭಕ್ತಿಗೀತೆಯಾಗಿದ್ದರೂ, ಅವರ ಶಿಷ್ಯರಾದ ನರಹರಿ ತೀರ್ಥರಿಂದ ಆರಂಭವಾದ ಕನ್ನಡ ಕೃತಿಗಳಿಂದ ಹರಿದಾಸ ಸಾಹಿತ್ಯ ಸೊಂಪಾಗಿ ಬೆಳೆದುಬರಲು ನೆರವಾಯಿತು.

ನರಹರಿತೀರ್ಥರು ಮಾನವರ ಧಾಂಬಿಕತನವನ್ನು ಹೀಗೆ ತಮ್ಮ ಒಂದು ಕೃತಿಯಲ್ಲಿ ಟೀಕಿಸಿದ್ದಾರೆ:

ಎಂತು ಮರುಳಾದೆ। ನಾ। ನೆಂತು ಮರುಳಾದೆ
ಎಂತು ಮರುಳಾದೆ। ಭವದೊಳು ಬಳಲಿದೆ। ಸಂತತ ಪೊರೆ ರಘುಕುಲತಿಲಕ॥

ಮಾತಿನಲಿ ಹರಿದಾಸತನ। ನೀತಿಯಲಿ ಪ್ರಭುದಾಸತನ॥
ಪ್ರೀತಿಧನಾದಿ ವಿಷಯದಲ್ಲಿ। ಸಿ। ರ್ಖ್ಯಾತಿ ದೈವ ಗುರುದ್ರೋಹದಲಿ॥

ಏಕಾಂತಧನದ ಗೋಷ್ಠಿ। ಲೋಕಾಂತದಿ ವೈರಾಗ್ಯದ ಗೋಷ್ಠಿ॥
ಶ್ರೀಕಾಂತನ ಸೇವೆಗೆ ಅನುಮಾನ। ಭೂಕಾಂತನ ಸೇವೆಗೆ ಸುಮ್ಮಾನ॥
ಧರ್ಮಕ್ಕೆ ಒಂದು ಕಾಸು ಸಾವಿರ ಹೊನ್ನು। ಅಧರ್ಮಕ್ಕೆ ಕೋಟಿ ಹೊನ್ನು ಒಂದೇ ಕಾಸು॥
ಧರ್ಮ ಮಾಡಲು ಬೇಸರಿಕೆ। ಅಧರ್ಮ ಮಾಡಲು ಎಚ್ಚರಿಕೆ॥

ಶ್ರೀಪಾದರಾಜರ ಕಾಲದಲ್ಲಿ ದಾಸ ಸಾಹಿತ್ಯ ವೃಕ್ಷವು ಪೂರ್ಣ ಫಲಭರಿತ ವೃಕ್ಷವಾಗಿ ಶಾಖೋಪಶಾಖೆಗಳಾಗಿ ಹರಡಿತು.

ಶ್ರೀ ಪಾದರಾಜರು—

ಮನೆಯಿಂದ ಸಂತೋಷ ಕೆಲವರಿಗೆ ಲೋಕದೊಳು
ಧನದಿಂದ ಸಂತೋಷ ಕೆಲವರಿಗೆ ಲೋಕದೊಳು
ವನಿತೆಯಿಂ ಸಂತೋಷ ಕೆಲವರಿಗೆ ಲೋಕದೊಳು
ತನಯರಿಂ ಸಂತೋಷ ಕೆಲವರಿಗೆ ಲೋಕದೊಳು
ಇನಿತು ಸಂತೋಷವವರವರಿಗಾಗಲಿ ನಿನ್ನ
ನೆನಹೆನಗೆ ಸಂತೋಷ ರಂಗ ವಿಠಲರೇಯ ॥

ಶ್ರೀ ವ್ಯಾಸರಾಜರು—

ನೀರಿಲ್ಲದ ಬಾವಿ ಊರಿಲ್ಲದ ಮರವು।
ನೆಳಲಿಲ್ಲದ ಫಲವಿಲ್ಲದ ಮರ।
ಧನವಿಲ್ಲದದಾತ ದಯವಿಲ್ಲದ ನಾಥ।
ಮನಸಿಲ್ಲದ ಶಕುತಿ ಭಯವಿಲ್ಲದ ಭಕುತಿ।
ನರಹರಿ ಮುಕ್ಕುಂದ ಶ್ರೀ ಕೃಷ್ಣ ಎನ್ನದ।
ನರಿದಿದ್ದು ಫಲವೇನು ಇಲ್ಲದಿದ್ದರೆ ಏನು॥

ಶ್ರೀ ವಿಜಯೇಂದ್ರರು—

ತಪ್ಪುಗಳನರಸ ತನ್ನ ನಂಬಿದವರ।
ಶ್ರೀಪತಿ ತಪ್ಪು ಮಾಡಿದ ಅಜಮಿಳನ ಉಮಾಪತಿ ಮುಖರ।
ತಪ್ಪು ನೋಡಿದನೆ।
ಎನ್ನಪ್ಪ ಶ್ರೀ ವಿಜಯೀಂದ್ರ ರಾಮ ದಯಾನಿಧಿ॥

ಶ್ರೀ ವಾದಿರಾಜರು—

ನಿನ್ನ ಧ್ಯಾನದ ಶಕ್ತಿಯ ಕೊಡು।
ಅನ್ಯರಲಿ ವಿರಕ್ತಿಯ ಕೊಡು।
ನಿನ್ನ ಪಾದಾರವಿಂದದ ಭಕ್ತಿಯ ಕೊಡು।
ನಿನ್ನ ವಿಭವ ಸಂಪತ್ತಿಯ ಕೊಡು।
ನಿನ್ನ ನೋಡುವ ರೂಪವ ಕೊಡು।
ಉನ್ಮತ್ತ ಜನರ ಅತ್ತಿತ್ತ ನೂಕುವ।
ಚಿತ್ತತತ್ವದ ಕೃತ್ಯವ ಕೊಡು।
ಕತ್ತಲೆ ಎನ್ನೊಳು ಭವ ಮುತ್ತಿದೆ ಹಯವದನ॥

ಶ್ರೀ ಪುರಂದರ ದಾಸರು—

ಹೊಲೆಯು ಹೊರಗ್ಹಾನೆಂದು ಒಳಗೆ ಬೇವರಸಿಟ್ಟು।
ಘಣಗಣ ಗಂಟೆಯ ಬಾರಿಸೋರು ಈ।
ತನುವಿನ ಕ್ರಾಮ ಕ್ರೋಧ ಹೊಲೆಯಲ್ಲವೆ
ಈ ಮದ ಮತ್ಸರಗಳು ಹೊಲೆಯಲ್ಲವೆ
ಈ ಪರಧನ ಪರಸತಿ ಹೊಲೆಯಲ್ಲವೆ
ಈ ಗುರು ನಿಂದೆ ಪರನಿಂದೆ ಹೊಲೆಯಲ್ಲವೆ
ಹೊರಗಪ್ಪ ಹೊಲೆಯರ ಒಳಗೆ ಬಿಟ್ಟುಕೊಂಡು।
ಇವಕೇನು ಮದ್ದು ಶ್ರೀ ಪುರಂದರ ವಿಠಲ॥

ಶ್ರೀ ಕನಕದಾಸರು—

ಕುಲ ಕುಲ ಕುಲ ವೆನುತಿಹರೇ-ಕುಲ ಯಾವುದು ನೋಡಿ ಸಜ್ಜನರೆ।
ಆತ್ಮಯಾವ ಕುಲ ಜೀವ ಯಾವ ಕುಲ
ತತ್ವ ಪಂಚೇಂದ್ರಿಯ ಕುಲವ್ಯಾವುದು
ಆತ್ಮಾಂತರಾತುಮ ನೆಲೆಯಾದಿ ಕೇಶವ
ಪ್ರೀತನಾದ ಮೇಲೆ ಯಾತರ ಕುಲವೊ॥

ಶ್ರೀ ವಿಜಯದಾಸರು—

ಉಪವಾಸ ವಿದ್ದವಗೆ ಊರು ತುಂಬಿದರೇನು
ಅಪಹಾಸಗೊಳಿಸುವ ಗೆಳೆಯನಾದರೆ ಏನು?
ಕುಪಿತವ ಬಿಡದವನ ಕುಲಜರಾದರೇನು
ಕಪಟವ ಬಿಡದವನ ಕೂಡ ಉಂಡರೆ ಏನು
ಕೃಪೆ ಮಾಡದವನ ಕಾಲಿಗೆ ಬಿದ್ದರೇನು
ತಪಸಿಗಳೊಡೆಯ ನಮ್ಮ ವಿಜಯ ವಿಠಲರೇಯ॥

ಶ್ರೀ ಗೋಪಾಲದಾಸರು—

ಆರಿಗಾರಾಗುವರೊ ಆಪತ್ತು ಕಾಲಕ್ಕೆ।
ಆರಿಗಾರೊದಗುವರೊ ಸಂಪತ್ತು ಕಾಲಕ್ಕೆ।
ಆರಿಂದ ಒಪ್ಪುವದು ಆರಿಂದ ತಪ್ಪುವದು।
ಅರಸಿ ನೋಡುವದು ಇದರ ಕಾರಣವನು। ಇದ
ಕಾರು ವಾರಣರು ನೋಡಿ।
ಆರೋಪಿಸಲು ಬಲ್ಲ ಭಾರ ಅವಗೆ।
ಕಾರುಣ್ಯ ಮಾರುತಿ ಗೋಪಾಲ ವಿಠಲ।
ಈ ರೀತಿ ಅರಿದವಗೆ ಇಲ್ಲೆ ಪೊರೆವ॥

ಶ್ರೀ ಜಗನ್ನಾಥದಾಸರು
ಆರುವಂದಿಸಲೇನು ಆರುನಿಂದಿಸಲೇನು
ಆರುಶಪಿಸಲೇನು ಆರುಕೋಪಿಸಲೇನು
ಆರು ಮುನಿದು ಮಾತನಾಡದಿದ್ದರೇನು
ಮಾರುತಾಂತರ್ಯಾಮಿ ಜಗನ್ನಾಥವಿಠಲನ
ಕಾರುಣ್ಯಪತ್ರರ ಕರುಣವೆನ್ನೊಳಗಿರೆ
ಆರು ವಂದಿಸಲೇನು ಆರು ನಿಂದಿಸಲೇನು ॥

ಹರಿದಾಸರ ಕೃತಿಗಳಲ್ಲಿ ಧರ್ಮವಿದೆ. ಲೋಕಾನುಭವವಿದೆ, ಸಾಹಿತ್ಯವಿದೆ, ಸಂಗೀತವಿದೆ, ಶಾಸ್ತ್ರ ಜ್ಞಾನವಿದೆ, ದರ್ಶನವಿದೆ. ಬದುಕಿಗೆ ಬೇಕಾದ ಎಲ್ಲವೂ ಇದೆ. ಸಾಹಿತ್ಯವನ್ನು ಜನಜೀವನದ ಕೈಗನ್ನಡಿ. ಪ್ರತಿಬಿಂಬ ಎಂದು ವಿಮರ್ಶಕರು ಹೇಳುತ್ತಾರೆ. ಈ ಎಲ್ಲ ಗುಣಗಳು-ಹರಿದಾಸರ ಸಾಹಿತ್ಯದಲ್ಲಿ ಇದ್ದು ತನ್ನನ್ನು ತಿದ್ದಿಕೊಳ್ಳಲು ಉತ್ತಮನಾಗಲು ಕಾಂತಾ ಸಮ್ಮಿತ ಉಪದೇಶಮಾಡುತ್ತವೆ ದಾಸರ ಕೃತಿಗಳು. ಲೌಕಿಕ ಜೀವನವು ಪರಿಶುದ್ಧವಾದರೆ, ಅದು ಪಾರಮಾರ್ಥಿಕ ಜೀವನಕ್ಕೆ ಬುನಾದಿಯಾಗುತ್ತದೆ. ಪರವಿದ್ಯೆಯಲ್ಲೂ ಪಾರಂಗತನಾದವನು ಅಕ್ಷರ ವಿದ್ಯೆಯಲ್ಲೂ ಪಾರಂಗತನಾಗಲು ಹೆಚ್ಚು ಅವಕಾಶವಿದೆ. ಅಪಾರವಿದ್ಯೆ ಕಲಿತವನಿಗೆ ಪರವಿದ್ಯೆ ಸುಲಭವಾಗಿ ಹಸ್ತಗತವಾಗುವುದು. ಹರಿದಾಸರ ಕೃತಿಗಳಲ್ಲಿ ಅವರು ನೀಡುವ ಉಪದೇಶವಿದು. "ಮಾನವ ಜನ್ಮ ದೊಡ್ಡದು. ಇದಹಾನಿಮಾಡಿಕೊಳ್ಳ ಬೇಡಿ ಹುಚ್ಚಪ್ಪಗಳಿರಾ" ಇದಕ್ಕಿಂತ ಮಿಗಿಲಾದ ಬೇರೆ ಯಾವ ಸಾಹಿತ್ಯ ತಾನೇ ಮಾಡೀತು?

ಃ

ಹರಿದಾಸರು ಜತೆ, ಉಗಾಭೋಗಗಳಿಂದ ಹಾಡಿದ ವೃತ್ತನಾಮ, ಚಂಪೂಕೃತಿ, ಸಾಹಿತ್ಯ. ಷಟ್ಪದಿಗಳ ರಚನೆಗಳವರೆಗೆ ಬರೆದಿದ್ದಾರೆ. ಇವುಗಳಲ್ಲಿ ಹೆಚ್ಚಿನ ಪಾಲು ಕೃತಿಗಳಲ್ಲಿ ದ್ವೈತಮತ ಪ್ರಕ್ರಿಯೆಗಳನ್ನು ಹೇಳಲು ಹೊರಟಿದ್ದರೂ ಸತ್ಯವಾದ ಜಗತ್ತಿನಲ್ಲಿ, ಮಾನವರ ಜೀವನ ಸತ್ಯವಾಗಿರುವುದರಿಂದ, ಅವರ ಬದುಕು ಹಸನಾಗಲು ಏನೆಲ್ಲ ಪರಿಕರಗಳು, ರೂಢಿ ರಿವಾಜುಗಳು-ಎಲ್ಲವನ್ನು ಅವರು ಕೈಗೆ ಎಟುಕುವಂತೆ. ಅನುಷ್ಠಾನಕ್ಕೆ ಒದಗುವಂತೆ ಹೇಳಿದ್ದಾರೆ. ಹರಿದಾಸರು ತತ್ವಬೋಧೆಗಿಂತಲೂ ಆಚರಣೆಗೆ ಮಹತ್ವ ನೀಡಿದ್ದರು. ಹೀಗಾಗಿ ಆಚರಣೆಗೆ ಬಾರದ ಯಾವ ಅಂಶವನ್ನೂ ಹರಿದಾಸರು ಹೇಳಲಿಲ್ಲ, ಬೋಧಿಸಲಿಲ್ಲ. 'ಈಸ ಬೇಕು, ಇದ್ದು ಜೈಸಬೇಕು'-ಎಂಬ ಲೋಕೋತ್ತರವಾದ ಉಪದೇಶ ಅವರು ನೀಡಿದ್ದಾರೆ. ಜೀವನದಲ್ಲಿ ಕಮಲ ಪತ್ರದ ಜಲಬಿಂದುವಿನಂತೆ ಅಂಟಿಯೂ ಅಂಟದಂತೆ ಇರಬೇಕು. ಮಾಡುವವನು, ಮಾಡಿಸುವವನು ಭಗವಂತನೆಂಬ ತತ್ತ್ವ ಚಿಂತನೆಯಲ್ಲಿ—ಬದುಕು ಈಶ್ವರ ಸಮರ್ಪಣೆಯಾಗುತ್ತದೆ; ಪೂಜೆ

ಯಾಗುತ್ತದೆ. ಇದರಿಂದ ನಿರಾಶೆ, ದುಃಖಗಳು ವ್ಯಕ್ತಿಯ [illegible] ಜೀವನ ಬಿಡುಗಡೆಯಾಗುತ್ತಾರೆ. ಹೀಗೆ ಜಗತ್ತೆಂಬ, ವ್ಯಾಕುಲ ಗೊಂಡ ಜೀವನದಲ್ಲಿ ಹೇಗೆ ಬಾಳಬೇಕೆಂಬುದನ್ನು ಜೀವನವಿಧಾನವನ್ನು ದಾಸರಾಯರು ತಮ್ಮ ಕೃತಿಗಳಲ್ಲಿ ಚೆನ್ನಾಗಿ ತಿಳಿಸಿದ್ದಾರೆ. ಜೀವನದಲ್ಲಿ ಧೈರ್ಯವನ್ನು, ಭರವಸೆಯನ್ನು ಮಾಡಿಸುತ್ತಾರೆ, ಅವರ ಒಂದೊಂದು ಜೀವನಾನುಭವವೂ-ಗಾದೆಗಳಂತೆ ಸುಭಾಷಿತಗಳಂತೆ ಬಾಳನ್ನು ಸರಿಪಡಿಸಲು ನೆರವಾಗುತ್ತವೆ.

ಆದುದರಿಂದ ವ್ಯಕ್ತಿತ್ವದ ನಿರ್ಮಾಣ ಕಾರ್ಯದಲ್ಲಿ, ಜೀವನದಲ್ಲಿ ಶ್ರದ್ಧೆಯನ್ನು ನಂಬಿಗೆಯನ್ನೂ, ಋಜುಮಾರ್ಗವನ್ನೂ, ಶೀಲಸಂವರ್ಧನೆ, ಚಾರಿತ್ರ್ಯ ಶುದ್ಧಿಗಳನ್ನೂ, ಕರ್ತವ್ಯ ಪ್ರಜ್ಞೆ—ಮೇಲಾಗಿ ಜೀವನವು ಬದುಕುವುದಕ್ಕಾಗಿ ಇದೆ ಎಂಬ ಕಠೋರ ಸತ್ಯವನ್ನು ಉಪದೇಶಿಸುವ ಹರಿದಾಸ ಸಾಹಿತ್ಯ ಜಗತ್ತಿನ ಎಲ್ಲಾ ಮತಾಚಾರ್ಯರು, ಪ್ರವಾದಿಗಳು, ಸಾಧು ಸಂತರು, ದಾರ್ಶನಿಕರು, ಚಿಂತನಶೀಲರು, ಅನುಭಾವಿಗಳು ಹೇಳುವ ಉಪದೇಶಸಾರದಲ್ಲಿ ಅಡಗಿಸಿ ಕೊಂಡಿದೆ, ಹೀಗಾಗಿ ಇದು ಜೀವಂತ ಸಾಹಿತ್ಯ.

ಇಂಥ ಸಾಹಿತ್ಯದಲ್ಲಿ ಕೆಲವನ್ನು ಆಯ್ದು ಪ್ರಾಥಮಿಕ, ಪ್ರೌಢ, ಸ್ನಾತಕೋತ್ತರ ಮತ್ತು ಪದವಿ ಪೂರ್ವದ ಕಾಲೇಜು ಶಿಕ್ಷಣದ ಪಠ್ಯ ಭಾಗಗಳಲ್ಲಿ ಡೀಟೈಲ್ಡ್, ನಾನ್ ಡೀಟೈಲ್ಡ್ ಪಠ್ಯಗಳಾಗಿ ಇಡಬಹುದಾಗಿದೆ. ಇಂಥ ಭಾಗವೆಂದರೆ ಶ್ರೀ ಪಾದರಾಜರ ಹಾಡುಗಳು—ಪುರಂದರದಾಸರ ಲೋಕ ಗೀತೆಗಳು, ಕನಕದಾಸರ ತಿರುಕನಕನಸು, ನಳ ಚರಿತ್ರೆ, ವಿಜಯದಾಸರ ಕೃತಿಗಳು, ಗೋಪಾಲದಾಸರ ವಾದಿರಾಜರ ಕೃತಿಗಳು, ಜಗನ್ನಾಥದಾಸರ ತತ್ವಸುವ್ವಾಲಿ. ಹರಿಕಥಾಮೃತಸಾರ, ಹೀಗೆ ಎಲ್ಲಾ ಹಂತಗಳಲ್ಲಿ ಪಠ್ಯವಾಗಬಲ್ಲ ಸಹಸ್ರಾರು ಕೃತಿಗಳಿವೆ. ಇವುಗಳ ಸಂಗ್ರಹಗಳನ್ನು ಸಿದ್ಧಪಡಿಸಿಕೊಂಡು ಅವುಗಳಿಂದ ಬೇಕಾಗಿದ್ದ ಬಿಡಿಭಾಗಗಳನ್ನು ಆಯ್ಕೆಮಾಡಿಕೊಳ್ಳಬಹುದಾಗಿದೆ, ಹೀಗೆ ದಾಸ ಸಾಹಿತ್ಯವು ರುಚಿಗೂ, ಶುಚಿಗೂ, ಶುದ್ಧ ಚಾರಿತ್ರ್ಯಕ್ಕೂ ಒದಗುವ ಶ್ರೇಷ್ಠ ಮಟ್ಟದ ಸಾಹಿತ್ಯವಾಗಿದ್ದು, ಜಾಗತಿಕ ಧರ್ಮಗಳ ಸಾರವನ್ನು ಅಂದರೆ ಭಕ್ತಿ ಜ್ಞಾನ ವೈರಾಗ್ಯಗಳ ತ್ರಿವೇಣಿಯಲ್ಲಿ ನಮ್ಮನ್ನು ಪುನೀತಗೊಳಿಸುತ್ತದೆ.

ಕರ್ನಾಟಕದ ಶಿಲ್ಪಕಲೆಯಲ್ಲಿ ಶಿಲಾವೈಶಿಷ್ಟ್ಯ

—ಸಿ. ರಾ. ಸ. ಮೂರ್ತಿ

ಪ್ರಸ್ತಾವನ

ಭಾರತದ ಶಿಲ್ಪ ಸಂಪತ್ತಿನಲ್ಲಿ ಕರ್ನಾಟಕ ಶೈಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಭಾರತದ ವಾಸ್ತು ಶಿಲ್ಪವನ್ನು, ಉತ್ತರದ ನಾಗರ, ದಕ್ಷಿಣದ ದ್ರಾವಿಡ ಮತ್ತು ಮಿಶ್ರಿತ ವೇಸರ ಎಂದು ಸ್ಥೂಲವಾಗಿ ವಿಂಗಡಿಸಲಾಗಿದೆ. ಕರ್ನಾಟಕದ ಶೈಲಿಯಲ್ಲಿ ಬಹುವಾಗಿ ದ್ರಾವಿಡ ಮತ್ತು ವೇಸರ ಗುಂಪುಗಳ ಗುಣಗಳನ್ನು ಕಾಣಬಹುದು. ಕರ್ನಾಟಕದಲ್ಲಿ ಈಗ ಉಪಲಬ್ಧವಿರುವ ಅನೇಕ ಹರಿ-ಗುರು ಮನೆಗಳಲ್ಲಿ ಕೆಲವು ದ್ರಾವಿಡ ಶೈಲಿಯಲ್ಲಿವೆ. ಪ್ರಾರಂಭದಲ್ಲಿ ಚಾಲುಕ್ಯ ಶೈಲಿ ಎನಿಸಿಕೊಂಡು, ಅನಂತರದಲ್ಲಿ ಹೊಯ್ಸಳ ಶೈಲಿಯಲ್ಲಿ ಶಿಲ್ಪದ ಪರಾಕಾಷ್ಠೆಯನ್ನು ಹೊಂದಿ-ಬಹುಮತದಲ್ಲಿ ಕರ್ನಾಟಕ ಶೈಲಿ ಎಂದೆನಿಸಿಕೊಂಡಿದೆ.

ಇಂತಹಾ ಪ್ರಪಂಚ ಪ್ರಸಿದ್ಧವಾದ ಕರ್ನಾಟಕ ಶೈಲಿಯಲ್ಲಿರುವ ಶಿಲ್ಪ ಕಲಾ ಸಂಪತ್ತಿಗೆ ಮೂಲ ಸಾಮಗ್ರಿಗಳಾದ ಶಿಲಾವಿಶೇಷಗಳನ್ನು ಅರಿಯುವುದರಿಂದ ಆ ಶಿಲ್ಪ ಕಲೆಯ ವಿಕಾಸವನ್ನು ವೈಜ್ಞಾನಿಕವಾಗಿ ತಿಳಿಯುವುದಕ್ಕೂ ಮತ್ತು ಆ ಕಲೆಯನ್ನು ಮತ್ತೂ ಪ್ರೋತ್ಸಾಹಿಸಿ ಕರ್ನಾಟಕದ ಶಿಲ್ಪ ಸಂಪತ್ತನ್ನು ವೃದ್ಧಿ ಪಡಿಸುವುದಕ್ಕೂ ಸಹಾಯವಾಗುವುದು. ಭಾರತೀಯ ಶಿಲ್ಪದ ಹಿನ್ನೆಲೆಯಲ್ಲಿ ಕರ್ನಾಟಕ ಶೈಲಿಯ ವಿಕಾಸವನ್ನು ಅರಸುವುದು ಒಂದು ಅಧ್ಯಯನ. ಈ ಅಧ್ಯಯನದಿಂದ, ಪ್ರಾರಂಭದ ದೆಶೆಯಿಂದ ಭಾರತೀಯ ವಾಸ್ತು ಮತ್ತು ಮೂರ್ತಿ ಶಿಲ್ಪಗಳು ಮಣ್ಣು, ಗಾರೆ, ಮರ, ದಂತ, ಲೋಹ ಮುಂತಾದ ಮೂಲ ಸಾಮಗ್ರಿಗಳನ್ನು ಉಪಯೋಗಿಸಿ ನಂತರ ಶಿಲಾಮಯವನ್ನಾಗಿ ಮಾಡಿರುವುದು ವೇದ್ಯವಾಗುತ್ತದೆ. ವೇದಗಳ ಕಾಲದಿಂದ-ಯಜ್ಞದ ಇಷ್ಟಿಕಾ-ಇಟ್ಟಿಗೆಗಳಿಗಾಗಿ ಉಪಯೋಗಿಸುವುದರಿಂದ ಪ್ರಾರಂಭವಾದ ಮಣ್ಣು, ಕಲ್ಪಗಳು ತಿಳಿಸಿರುವ ಪ್ರಕಾರ ರಚಿತವಾದ ಮೂರ್ತಿ ಶಿಲ್ಪಗಳಿಗೆ ಬೇಕಾದ ಲೋಹಗಳವರೆಗೂ ವಿಕಾಸ ಹೊಂದಿತು, ಸಂಸ್ಕೃತಿ, ಸಿಂಧೂ, ಗಂಗಾನದಿಗಳ ಆಸರೆಯಲ್ಲಿ ವಿಕಾಸ ಹೊಂದಿತು. ಸರಸ್ವತಿ, ಸಿಂಧೂ, ಗಂಗಾ ನದಿಗಳ ಆಸರೆಯಲ್ಲಿ ವಿಕಾಸವಾದ ಸಂಸ್ಕೃತಿ, ಶಿಲೆಗಳನ್ನು ಕಾಣಲು ಈ ಮೆಕ್ಕಲು ಮಣ್ಣಿನ ಸ್ಥಳಗಳಿಂದ ದಕ್ಷಿಣಕ್ಕೆ ಬರಬೇಕಾಯ್ತು. ದಕ್ಷಿಣಕ್ಕೆ ಬಂದಂತೆಲ್ಲಾ, ಆರಾವಳಿ, ವಿಂಧ್ಯ, ಸಾತ್ಪುರ, ದಖ್ಖನ್ ಪ್ರಸ್ಥಭೂಮಿಯಲ್ಲಿ ಬಹುಪಾಲು ಪಶ್ಚಿಮಾರ್ಧದಲ್ಲಿ ಪ್ರಸಾರವಾಗಿರುವ ಕರಿಮಣ್ಣಿನ

ಮಾತೃಶಿಲೆಗಳಾದ 'ಡೆಕ್ಕನ್ ಟ್ರ್ಯಾಪ್' ಎಂಬ ಅಗ್ನಿ ಪರ್ವತೀಯ ಕ್ಷಾರ ಶಿಲಾವಾಹಿಗಳು, ಸಹ್ಯಾದ್ರಿ ಮತ್ತು ಪೂರ್ವಘಟ್ಟಗಳು, ಹಾಗೂ ಇವುಗಳ ಮಧ್ಯದಲ್ಲಿರುವ ಶಿಲೆಗಳು ಬಹಳವಾಗಿ ದೊರಕಿದುದರಿಂದ ಭಾರತೀಯ ಕಲಾಸಂಪತ್ತು ಸಜೀವ ಶಿಲೆಗಳನ್ನು "ಕಲೆಯ ಬಲೆ"ಯನ್ನಾಗಿ ಮಾಡಿದೆ.

ಟಾಜ್ ಮಹಲ್, ಆಗ್ರಾಕೋಟೆ ಹಾಗೂ ಕಲ್ಕತ್ತೆಯಲ್ಲಿರುವ ವಿಕ್ಟೋರಿಯಾ ಮೆಮೋರಿಯಲ್ ಮುಂತಾದ ಕಟ್ಟಡಗಳಿಗೆ ಬೇಕಾದ ಅಮೃತಶಿಲೆಯನ್ನು ಪಶ್ಚಿಮದ ಮೇಕ್ರಾನ ಮತ್ತು ಅದರ ಸಮೀಪದ ಸ್ಥಳಗಳಿಂದ ತಂದಿರುವ ನಿದರ್ಶನಗಳನ್ನು ಬಿಟ್ಟರೆ ಮುಖ್ಯವಾಗಿ ರಾಜ ಪ್ರೋತ್ಸಾಹಿತವಾಗಿ ಬೆಳೆದುಬಂದ ಭಾರತೀಯ ಶಿಲ್ಪಕಲೆ ಬಹುಪಾಲು ಆಯಾ ರಾಜರುಗಳ ರಾಜಧಾನಿಯ ಸಮೀಪದಲ್ಲೇ ದೊರೆತ ಕಲ್ಲುಗಳಿಂದ ಕೆತ್ತಲಾಗಿದೆ. ಈ ವಿಷಯವನ್ನು ಆಯಾ ರಾಜವಂಶದ ಚರಿತ್ರೆಯ ಹಾಗೂ ಅವರು ದಯಪಾಲಿಸಿರುವ ದೇವಾಲಯಾದಿಗಳ ಒಂದು ಸಂಯುಕ್ತ ಅಧ್ಯಯನದಿಂದ ಕಾಣಬಹುದು. ಇದನ್ನು ಕರ್ನಾಟಕ ಶೈಲಿಯ ಶಿಲ್ಪ ವಿಕಾಸವನ್ನು ವಿವರಿಸುವಾಗ ದೃಢೀಪಡಿಸಲಾಗುವುದು.

ಭಾರತೀಯ ಶಿಲ್ಪ ಕಲೆಯ ವಿಕಾಸದಲ್ಲಿ ಅನೇಕ ವಿಧವಾದ ಶಿಲೆಗಳನ್ನು ಉಪಯೋಗಿಸಿಕೊಳ್ಳಲಾಗಿದೆ. ಅವುಗಳಲ್ಲಿ ಮುಖ್ಯವಾಗಿ, ಅಮೃತಶಿಲೆ, ಮರಳುಗಲ್ಲುಗಳು ಕಣಶಿಲೆ, ಕ್ಷಾರಶಿಲಾವಾಹಿಗಳು, ವಿಶೇಷವಾದ ಚಾರ್ನ್ಕೈಟ್, ಖಾಂಡೋಲೈಟ್ ಮುಂತಾದವು. ಬಹುತರವಾಗಿ ತಮಿಳುನಾಡಿನ ಮತ್ತು ಕೇರಳ ದೇಶದ ಸುಪ್ರಸಿದ್ಧ ದೇವಾಲಯಗಳು, ಬಹುತೇಕ ಚಾರ್ನ್ಕೈಟ್ ಕಲ್ಲಿನವು. ಪೂರಿ, ಕೋಣಾರ್ಕ ಮುಂತಾದ ಸ್ಥಳಗಳ (ಒರಿಸ್ಸಾದಲ್ಲಿರುವ) ದೇವಾಲಯಗಳು ಖಾಂಡೋಲೈಟ್‌ನಿಂದ ಮಾಡಲ್ಪಟ್ಟಿವೆ. ಅಜಂತಾ, ಎಲ್ಲೋರಾ ದೇವಾಲಯಗಳು ಕ್ಷಾರಶಿಲಾವಾಹಗಳಲ್ಲಿ ಕೊರೆಯಲ್ಪಟ್ಟಿವೆ. ಈ ವಿಚಾರಗಳು ಎಷ್ಟು ಮಟ್ಟಿಗೆ ಸ್ಥಳೀಯ ಶಿಲೆಗಳಿಂದಾಗಿ ಭೂ ವಿಜ್ಞಾನ ತತ್ತ್ವವನ್ನವಲಂಬಿಸಿದೆ ಎನ್ನುವುದು ವ್ಯಕ್ತವಾಗುತ್ತದೆ. ಈ ಅಂಶವನ್ನು, ಭಾರತೀಯ ಶಿಲ್ಪ ಕಲಾ ಮಂದಿರಗಳನ್ನು, ಭಾರತದ ಭೂತತ್ತ್ವ ನಕ್ಷೆಯ ಮೇಲೆ ಉದ್ಧರಿಸುವುದರಿಂದ ಸೂಕ್ಷ್ಮವಾಗಿ ಸಮರ್ಥಿಸ ಬಹುದು.

ನಮ್ಮ ದೇಶದ ದೇವಾಲಯಗಳನ್ನೂ, ತೀರ್ಥಕ್ಷೇತ್ರಗಳನ್ನೂ ಭೂವಿಜ್ಞಾನದ ದೃಷ್ಟಿಯಲ್ಲಿ ತಿಳಿಯುವುದು ಒಂದು ವಿಶೇಷ ಅಧ್ಯಯನ. ಸೌಂದರ್ಯಮಯವಾದ ನಿಸರ್ಗವನ್ನೂ ಹಾಗೂ ಯಾವುದೊಂದು ಪ್ರಕೃತಿಯ ವೈಚಿತ್ರ್ಯವನ್ನೂ ದೈವೀಭಾವನೆಯಿಂದ ಕಾಣುವುದು ಭಾರತೀಯರಿಗೆ ವೇದಗಳ ಕಾಲದಿಂದ ಬಂದ ಒಂದು ಶ್ಲಾಘನೀಯ ಗುಣವಾದರೂ, ಅದನ್ನು ವಿಜ್ಞಾನದ ದೃಷ್ಟಿಯಿಂದ ಕಾಣುವುದರಿಂದ ಆ ಭಾವನೆ ಮತ್ತೂ ಬೃಹತ್ತರವಾದ ಶ್ಲಾಘನೆಗ ಪಾತ್ರವಾಗ ಬಹುದು. ಈ ವಿಜ್ಞಾನ ಯುಗದಲ್ಲಿ, ದೈವೀಭಾವನೆಗಳು ಮತ್ತೂ ಪ್ರಬಲ ಆಧಾರಗಳಿಂದ ಕೂಡಿ ಸೃಷ್ಟಿಕರ್ತನ ಸೂಕ್ಷ್ಮತೆಯನ್ನು ತಿಳಿಯಲು ಅನುಕೂಲವಾಗಬಹುದು, ಹಾಗೂ ಅಂತಹ "ಸೃಷ್ಟಿ

ಕರ್ತನ"ನಲ್ಲಿ ಅಚಲವಾದ ಶ್ರದ್ಧೆ ಮತ್ತು ಭಕ್ತಿಗಳನ್ನು ಹೊಂದಿ ನೈತಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಆಸಕ್ತಿಯನ್ನು ವೃದ್ಧಿಪಡಿಸಿಕೊಂಡು ತಮ್ಮ ಜೀವನವನ್ನು ಸಂಸ್ಕಾರಿತವನ್ನಾಗಿಯೂ ಮಾಡಿಕೊಳ್ಳಬಹುದು.

ಈ ತರಹದ ಒಂದು ವಿಮರ್ಶಾತ್ಮಕ ಮತ್ತು ವಿಜ್ಞಾನ ಪೂರ್ವ ನೈಜ ಸಾಧನೆಯಲ್ಲಿ, ವಸ್ತು ವಿಶೇಷಗಳಲ್ಲಿರತಕ್ಕ ದೈವೀಭಾವನೆಗೆ ಧಕ್ಕೆಯುಂಟಾಗಬಹುದೆಂಬ ಆಕ್ಷೇಪಣೆ ಬರುವುದು ಸಹಜ. ಆದರೆ ಆ ಬಗೆಯ ಆಕ್ಷೇಪಣೆಗಳಿಗೆ ಯಾವ ಆಧಾರಗಳೂ ಇಲ್ಲ. ಹಾಗೂ, ಈ ಕೆಳಗೆ ಭಾಷಾಂತರಿಸಿರುವ ಎಡ್ಗರ್ ಮಿಷೆಲ್‌ರ (ಅಪೋಲೊ ೧೪ರ ಪ್ರಯಾಣಿಕ-೧೯೭೧ರ ಫೆಬ್ರುವರಿ) ಅಭಿಪ್ರಾಯ ಅತ್ಯಂತ ಸ್ವಾರಸ್ಯವಾಗಿಯೂ, ಹೃದಯಂಗಮವಾಗಿಯೂ ಇದೆ.

"ನಾನು ಚಂದ್ರಯಾನವನ್ನು ಕೈಗೊಂಡಾಗ, ನನ್ನ ಇತರ ಸಹೋದ್ಯೋಗಿಗಳಂತೆ ನಾನೂ ಸಹಾ ಕೇವಲ ಪೈಲೆಟ್—ಎಂಜಿನಿಯರ್—ವಿಜ್ಞಾನಿಗಳ ಅಭಿಪ್ರಾಯ ನಿಷ್ಠರೊಂದಿಗೆ ಹೋದೆ. ವಿಶ್ವದ ವಿದ್ಯಮಾನವನ್ನು ಅರಿಯುವ ವಿಧಾನವನ್ನು ಕಂಡು ಹಿಡಿಯುವುದರಲ್ಲಿ ಕಾಲು ಶತಮಾನವೇ ಕಳೆದಿದೆ. ಈ ಸಂದರ್ಭದಲ್ಲಿ ಅನೇಕ ವೇಳೆ ನನ್ನ ಜೀವನ ವೈಜ್ಞಾನಿಕ ತತ್ವಗಳ ಮತ್ತು ಈ ತತ್ವಗಳನ್ನಾಧರಿಸಿ ರೂಪಿಸಿದ ತಂತ್ರಜ್ಞಾನ, ಇದಕ್ಕೂ ಮಿಗಿಲಾಗಿ ಅಂತಹಾ ತಂತ್ರಜ್ಞಾನದ ಮೇಲಿಟ್ಟ ನಂಬಿಕೆಯನ್ನು ಆಧರಿಸಿತ್ತೆಂಬುದು ವಾಸ್ತವ ಸಂಗತಿ. ವಸ್ತುನಿಷ್ಠ ಅಂಶಗಳನ್ನು ಆಧರಿಸಿ ವಿಶ್ಲೇಷಣಾತ್ಮಕ, ಹಾಗೂ ತಾತ್ವಿಕ ಚಿಂತನೆಯಿಂದ ರೂಪಿಸಿದ ತಂತ್ರಜ್ಞಾನ ಅಂತರಿಕ್ಷವನ್ನು ನಿಲುಕುವಷ್ಟು ದೂರ, ಪರಮಾಣುಗಳ ರಚನೆಯನ್ನು ಸೂಕ್ಷ್ಮದರ್ಶಿಯ ಹಂತದವರೆಗೆ ನಮಗೆ ದರ್ಶಿಸ ಬಲ್ಲದೆಂಬ ವಿಶ್ವಾಸ ನನಗಿದೆ. ಚಂದ್ರ ಶೋಧನೆಗೆ ಮೊದಲು ವ್ಯೋಮ ನೌಕೆ-ಅದರ ಹಿಂದಿರುವ ಮಾನವ ಶಕ್ತಿ-ತಂತ್ರ ಸಾಮಗ್ರಿ, ಇವುಗಳ ಬಗೆಗೆ ಯಾವುದೇ ಸಾಮಾನ್ಯಾಸಕ್ತಿಗಳಿಸಬಹುದಾದ ಪರಿಜ್ಞಾನವನ್ನು ನಾನು ಪಡೆದೆ. ಅಂತಹುದರ ಬಗೆಗೆ ನನಗೆ ಪರಮ ವಿಶ್ವಾಸ, ಇಟ್ಟಿದ್ದರೂ ಸಹಾ, ಯಾನ ಕೈಗೊಂಡ ಸಮಯದಲ್ಲಿ ಕೆಲವ ಚಣ ವ್ಯೋಮಯಾನದ ಈ ಪುಟ್ಟ ಲೋಹದ ಯಂತ್ರವನ್ನು ಅತಿ ನಿಖರವಾಗಿ, ದೋಷರಹಿತವಾಗಿ, ಐವತ್ತು ಸಹಸ್ರ ಮೈಲಿಗಳಷ್ಟು ಅಂತರಿಕ್ಷದಲ್ಲಿ ತೂರಿಸಿದ ಮಾನವ ಬುದ್ಧಿ ಮತ್ತು ಕ್ರಿಯಾ ಸಾಮರ್ಥ್ಯಗಳ ಬಗೆಗೆ ನನಗೆ ಆಶ್ಚರ್ಯವುಂಟಾದದ್ದು ಸಹಜ. ಅದರ ಬಗೆಗೆ ಗೌರವ ಕೂಡ ಸತ್ಯ. ನನ್ನ ಆಲೋಚನೆ ವಸ್ತು ನಿಷ್ಠವಾಗಿತ್ತು' ಏಕೆಂದರೆ ವಿಜ್ಞಾನ ನಿಜಕ್ಕೂ—ಕೆಲಸಮಾಡಬಲ್ಲದು—ಎಂಬ ವಿಶ್ವಾಸವನ್ನು ನನ್ನ ಅನುಭವ ತಂದು ಕೊಟ್ಟಿತು".

"ಆದರೆ ಇದೇ ಯಾನದ ಸಮಯದಲ್ಲಿ ನನಗೆ ಮತ್ತೊಂದು ಅನುಭವವಾಯ್ತು. ಅಷ್ಟೇ ಅಲ್ಲ—ಅದು ಒಬ್ಬ ವಸ್ತು ನಿಷ್ಠ ಎಂಜನಿಯರ್ ತಳೆಯುವ ಅಭಿಪ್ರಾಯಕ್ಕೆ

ತೀರ ವಿರುದ್ಧವಾಗಿತ್ತು. ಅಂತರಿಕ್ಷದ ಅನಂತ ವಿಸ್ತಾರದಲ್ಲಿ ಭೂಗ್ರಹ ತೇಲುತ್ತಿರು ದೃಶ್ಯ ನನ್ನ ಉಸಿರನ್ನು ಬಿಗಿಹಿಡಿಯಿತು. ಭೂಮಿಯ ಅನನ್ಯ ಸೌಂದರ್ಯ ವರ್ಣನಾ ತೀತ! ಯಾವುದೇ ಅದ್ಭುತ ಛಾಯಾಚಿತ್ರ ಕೂಡ ಧರೆಯ ಆ ಸೌಂದರ್ಯವನ್ನು ಅಷ್ಟು ಚೊಕ್ಕವಾಗಿ ಪ್ರತಿ ಬಿಂಬಿಸಲಾರದು! ಆ ದೃಶ್ಯ ಸತ್ಯವಾಗಿಯೂ ಸ್ಫೂ ಪ್ರೋಪೇತ! ನೀರಳಿರಂಗಿನ ಅಂತರಿಕ್ಷದ ಹಿನ್ನೆಲೆಯಲ್ಲಿ ತೇಲಿಬಿಟ್ಟ ಭೂಮಿ, ನೀ ಹಾಗೂ ಶ್ವೇತ ವರ್ಣಗಳಿಂದ ಕೂಡಿದ ಒಂದು ಪ್ರಜ್ವಲಿಸುವ ಆಭರಣ. ಈ ಭೂವಿ ವಿಶ್ವವಿಕಾಸದೊಡನೆ ಅದೆಷ್ಟು ಸೂತ್ರಬದ್ಧವಾಗಿ ಹೊಂದಿಕೊಂಡಿದೆ! ಎಂಬ ಉದ್ಗಾ ನನ್ನ ಅರಿವಿಗೆ ಬಾರದೆ ನನ್ನಿಂದ ಹೊರ ಹೊಮ್ಮಿತು. ಅನುಭವದ ಪರಾಕಾಷ್ಠೆಯ **ಒಂದು ಹಂತದಲ್ಲಿ ದೈವತ್ವದ ಬಗ್ಗೆ ಜೀವಂತ ನಿದರ್ಶನವೇ ದೊರೆಯಿತು.** ವಿಶ್ವದ ಯಾವುದೇ ಪ್ರತಿಕ್ರಿಯೆಯಿಂದ ಜೀವ ಇದ್ದಕ್ಕಿದಂತೆ ಮೊಳೆಯುಲಿಲ್ಲ—ಎಂಬ ಸತ್ಯ ನನ್ನ ಮನಸ್ಸಿಗೆ ನಾಟಿತು. ಈ ಅರಿವು ನನಗೆ ಬಂದಿದ್ದು ಮಾನಸಿಕ ದರ್ಶನಿಂದ: ಕಾರಣಿಕ ಚಿಂತನೆಯಾಗಲಿ ಅಥವಾ ತಾತ್ವಿಕ ಲೆಕ್ಕಾಚಾರದಿಂದಾಗಲೀ ನನಗಿದು ಲಭಿಸಲಿಲ್ಲ ಇದೊಂದು ವ್ಯಕ್ತಿಗತ ಅಂತರಿಕ ದರ್ಶನಕ್ಕೆ ಸಂಬಂಧಿಸಿದ ಅನುಭವ. ನಮ್ಮ ನೌಕಾ ತಂತ್ರ ಜ್ಞಾನ, ಸಂಪರ್ಕ ತಂತ್ರಜ್ಞಾನ, ಯಾವ ನಿರ್ದಿಷ್ಟವಾದ ಅಂಶಗಳ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿವೆಯೋ—ಅಷ್ಟೇ ಸತ್ಯ ಈ ಅಂತರಿಕ ದರ್ಶನ. ವಿಶ್ವದ ಪ್ರತಿ ಅಂಶಕ್ಕೂ ನಿರ್ದಿಷ್ಟವಾದ ಅರ್ಥವಿದೆ, ಸಾಗುವ ಪಥವಿದೆ. ಇದು ನಮ್ಮ ನೋಟಕ್ಕೆ ದಕ್ಕುವ ಸೃಷ್ಟಿಯ ಹಿಂದೆ ಅಗೋಚರವಾಗಿ ಉಳಿದಿರುವ ವಿಶ್ವದ ಮತ್ತೊಂದು ಆಯಾಮ. ಜೀವ-ಜೀವನಕ್ಕೆ ಉದ್ದೇಶವನ್ನು ನೀಡುವ ಬೌದ್ಧಿಕ ವಿನ್ಯಾಸವೂ ಹೌದು".

"ನಮ್ಮ ಭೂಗ್ರಹಕ್ಕೆ ಜೀವ ತುಂಬುವ ಅಂಶಗಳ ಬಗ್ಗೆ ನನ್ನ ಮನಸ್ಸು ಹೊರಳಿತು. ಜಲಾವೃತವಾದ ಈ ಪುಟ್ಟ ಗೋಳ, ಮೋಡಗಳು, ಆ ನೆಲ ಇಡಿಯಾಗಿ ನನ್ನ ಹೆಬ್ಬೆರಳಿಗಿಂತಲೂ ಹೆಚ್ಚು ಗಾತ್ರವಿಲ್ಲ. ಅದು ನನ್ನನೆಲೆ-ಈಗ ಈ ಪ್ರಯಾಣದ ನಂತರ ಮರಳಿ ನಮ್ಮ ನೌಕೆ ಸೇರಬೇಕಾದ ಸ್ವರ್ಗ, ಈ ಧರೆಯನ್ನು ಬಕ್‌ಮಿನಿಸ್ಟರ್ ಫುಲ್ಲರ್ "ವ್ಯೋಮನೌಕೆ" ಎಂದಿರುವುದು ಅದೆಷ್ಟು ಒಪ್ಪುತ್ತದೆ"!

೨೦ನೇ ಶತಮಾನದ ಅತ್ಯಂತ ಪ್ರಗಾಢವಾದ ವಿಜ್ಞಾನಿಗಳ ಅಭಿಪ್ರಾಯ ಹೀಗಿ ರುವಲ್ಲಿ, ವಿಜ್ಞಾನ ಮಾನವನ ಅಂತರಾತ್ಮಕ್ಕೆ ವಿಶ್ವರೂಪ ದರ್ಶನದ ಸೌಭಾಗ್ಯವನ್ನು ಕರುಣಿಸಿ—ಅವನನ್ನು ಸೃಷ್ಟಿಕರ್ತನ ದಾಸಾನುದಾಸನನ್ನಾಗಿ ಮಾಡಲು ಸಹಾಯಕ ವಾಗಿಯೂ, ಅನುರೂಪವಾಗಿಯೂ ಇರುವುದೇ ವಿನಃ, ಅಣುಬಾಂಬುಗಳನ್ನು ಸಿಡಿಸಿ ಸಾರ್ವಜೀವ ವಿಧ್ವಂಸನ ಕಾರ್ಯಕ್ಕಲ್ಲ. ಈ ದಿಶೆಯಲ್ಲಿ ವಿಚಾರಮಾಡಿದಲ್ಲಿ ವಿಜ್ಞಾನ ಅರ್ಥ ಪೂರ್ಣವಾಗುತ್ತದೆ, ಹಾಗೂ ದೈವತ್ವ ಸಿದ್ಧಿಗೆ ಸೋಪಾನವಾಗುತ್ತದೆ.

ಮೇಲಿನ ವಿಚಾರ ಸರಣಿಗಳು ಹೀಗಿರುವಲ್ಲಿ ಶಿಲ್ಪಕ್ಕಾಗಿ ಉಪಯೋಗಿಸಿಕೊಂಡಿರುವ ಶಿಲಾಪ್ರಪಂಚದ ವೈಶಿಷ್ಟ್ಯವುಯ ವಿಹಂಗಮ ದರ್ಶನ ಮತ್ತು ಅವುಗಳ ನೈಜತ್ವ ಸಮ್ಮ ಭಾವನೆಗಳನ್ನು ಮತ್ತಷ್ಟು ಸಂಸ್ಕಾರಗೊಳಿಸಲು ಸಹಾಯವಾಗ ಬಲ್ಲದೇ ಹೊರತು, ಅಂತಹಾ ದಿವ್ಯಭಾವನೆಗಳನ್ನು ಕದಡುವುದಕ್ಕಲ್ಲಾ. ಈ ದೃಷ್ಟಿಯಿಂದ ಕರ್ನಾಟಕದ ಶಿಲ್ಪದಲ್ಲಿ ಶಿಲಾರತ್ನಗಳ ಪರಿಚಯವನ್ನ ಮಾಡಿಕೊಳ್ಳಬಹುದು.

ಕರ್ನಾಟಕದ ಶಿಲ್ಪ ಕಲೆಗಳು

ಕರ್ನಾಟಕದ ಶಿಲ್ಪ ಶಿಲೆಗಳನ್ನು ತಿಳಿಯಬೇಕಾದರೆ. ಅವನ್ನು ಕರ್ನಾಟಕದ ಭೂತತ್ವ ವಿಚಾರದ ಹಿನ್ನೆಲೆಯಲ್ಲಿ ತಿಳಿಯುವುದು ಸುಲಭ. ಕರ್ನಾಟಕದ ಭೂತತ್ವ ವಿಚಾರ ಭಾರತದ ಭೂ ವಿಜ್ಞಾನದಲ್ಲೇ ಬಹಳ ಪ್ರಾಚೀನ ತಮವಾದ ಕಾಲಕ್ಕೆ ಸೇರಿದು ದೆಂದು ಪ್ರಸಿದ್ಧವಾಗಿದೆ. ಸುಮಾರು ಒಂದು ಶತಮಾನಕ್ಕೂ ಮೀರಿದ ಕಾಲಾವಧಿ ಯಲ್ಲಿ ಭಾರತದ ಭೂ ವಿಜ್ಞಾನ ರೂಪ ಗೊಂಡಿದೆ. ಹಾಗೂ ಕರ್ನಾಟಕದ ಭೂ ವಿಜ್ಞಾನ ಕಳೆದ ಶತಮಾನದ ಅಂತ್ಯ ಭಾಗದಿಂದ, ಕೇವಲ ಸುವರ್ಣಾಸಕ್ತಿಯಿಂದ ಬ್ರಿಟಿಷರು ಕೈಗೊಂಡ ಸರ್ವೇಕ್ಷಣ ಕಾರ್ಯದಿಂದಾಗಿ ಪ್ರಾರಂಭವಾಗಿ—ಈವರೆವಿಗೂ ಮುನ್ನಡೆದಿದೆ. "ಚಿನ್ನದ ನಾಡಿದು" ಎಂದು ಉದ್ಗರಿಸಿದ ಕವಿ ವಾಣಿಯಂತೆ ಕರ್ನಾಟಕ ಇಂದಿಗೂ ಭಾರತದ ಬಹುತೇಕ ಸುವರ್ಣೋತ್ಪತ್ತಿ ಸ್ಥಾನವಾಗಿದೆ.

ಈ ಬಗೆಯ ಅನೇಕ ದಶಕಗಳ ಸತತವಾದ ಭೂ ಸರ್ವೇಕ್ಷಣ ಕಾರ್ಯದಿಂದ ಸಿದ್ಧಪಿ ರುವ ಭೂತತ್ವ ನಕ್ಷೆಗಳು ಕರ್ನಾಟಕದ ಶಿಲಾ ಸಂಪತ್ತನ್ನು ತಿಳಿಸುವವು. ಹಾಗೂ ಖನಿಜ, ಭೂಜಲ, ಭೂಕಂಪ ಇತ್ಯಾದಿಗಳ ವಿಚಾರವಾಗಿಯೂ ಈ ನಕ್ಷೆಗಳು ವಿಚಾರ ಸಮೃದ್ಧವಾಗಿವೆ. ಅಂತಹಾ ನಕ್ಷೆಗಳ ಪರಾಮರ್ಶೆಯಿಂದ ಕರ್ನಾಟಕದಲ್ಲಿ ಮುಖ್ಯ ವಾಗಿ ಈ ಕೆಳಕಂಡ ಶಿಲಾಸಂಪತ್ತು ಅಲ್ಲಿನ ದೇವಾಲಯಗಳನ್ನು ರೂಪಿಸಲು ಮೂಲ ಸಾಮಗ್ರಿಗಳನ್ನ ಒದಗಿಸಿರುವುದು ತಿಳಿಯು ಬರುತ್ತದೆ. ಆ ಶಿಲೆಗಳಾದರೂ :—

(೧) ದಕ್ಷಿಣ ಪ್ರಸ್ಥಭೂಮಿಯ ಕ್ಷಾರ ಶಿಲಾವಾಹಗಳು
(Deccan Traps)
(೨) ಮರಳುಗಲ್ಲುಗಳು
(೩) ಕಣಶಿಲೆ ಮತ್ತು ರೂಪಾಂತರ ಶಿಲೆಗಳು (ನೈಸ್)
(೪) ಮರಗಿ ಕಲ್ಲು ಅಥವಾ ಬಳಪದ ಕಲ್ಲು
(೫) ಜಮ್ಮಿಟ್ಟಿಗೆ
(೬) ಚಾರ್ನಕೈಟ್
(೭) ಗೋಡೆಗಲ್ಲುಗಳು (Dykes) :—ಡಾಲರೈಟ್, ಬ್ರಾನ್ಜೈಟ್ ಫೆಲ್ಸೈಟ್, ಪಾರ್ಫಿರಿ, ಕರೀಕಣಶಿಲೆ ಇತ್ಯಾದಿಗಳು.

(೮) ಕ್ವಾರ್ಟ್ಜೈಟ್ ಹಾಗೂ ಹಸಿರುಗಲ್ಲುಗಳು
(೯) ಬೇರೆ ಬೇರೆ ವಿಧವಾದ ಇತರ ಶಿಲೆಗಳು

ಈ ಶಿಲೆಗಳ ಪಂಚಿಕೆ ಭೂತತ್ವವನ್ನಾಧರಿಸಿದೆ. ಈ ಶಿಲೆಗಳು ಭೂತತ್ವ ಶಾಸ್ತ್ರದ ಪ್ರಕಾರ ಸುಮಾರು ೩೫೦ ಕೋಟಿ ವರ್ಷಗಳಿಂದ ಹಿಡಿದು ಇತ್ತೀಚಿನ ಅವಧಿಯ ಕಾಲಾಂತರದಲ್ಲಿ ಉತ್ಪನ್ನವಾಗಿರುವವು. ದಕ್ಷಿಣ ಪ್ರಸ್ಥಭೂಮಿಯ ಕ್ಷಾರ ಶಿಲಾ ವಾಹಗಳು ಸುಮಾರು ೬ ಕೋಟಿ ವರ್ಷಗಳ ಪೂರ್ವದಲ್ಲಿ ೧೨ ಕೋಟಿ ವರ್ಷಗಳಿಂದ ಸೀಳು ಭೂಮಿಯ ಅಗ್ನಿ ಪರ್ವತಗಳ ಶಿಲಾ ಪ್ರವಾಹಗಳಾಗಿ ರೂಪುಗೊಂಡಿವೆ, ಕೆಲವು ಪಶ್ಚಿಮ ಕರಾವಳಿಯ ಜಮ್ಮಿಟ್ಟಿಗೆಗಳನ್ನು ಬಿಟ್ಟರೆ, ಪ್ರಾಯಃ ಈ ಕ್ಷಾರ ಶಿಲಾವಾಹಗಳೇ ಅತ್ಯಂತ ಆಧುನಿಕ ಶಿಲಾ ವರ್ಗಗಳು. ಈ ಪೂರ್ವದ ಭೂ ಚರಿತ್ರೆಯಲ್ಲಿ, ಕಲಡ್ಗಿ ಮತ್ತು ಬದಾಮಿ ಪ್ರದೇಶದಲ್ಲಿ ಕಾಣ ಬಹುದಾದ ಅತ್ಯಲ್ಪವಾಗಿ ರೂಪಾಂತರ ಗೊಂಡಿರುವ ಜಲಜ ಶಿಲಾವರ್ಗ ಹಾಗೂ ಭೀಮಾ ನದಿಯ ಶಿಲಾಶ್ರೇಣಿಗಳು, ಆಂಧ್ರದ ಕರ್ನೂಲ್ ಶಿಲಾ ಶ್ರೇಣಿಯೂ ಮತ್ತು ವಿಂಧ್ಯ ಪರ್ವತಗಳೂ ರೂಪುಗೊಂಡ ಕಾಲದವೆಂದು ನಿರ್ಧರಿಸಲಾಗಿದೆ. ಈ ಶಿಲೆಗಳು ಭೂ ಚರಿತ್ರೆಯ ಸುಮಾರು ೧೫೦ ಕೋಟಿ ವರ್ಷಗಳ ಮತ್ತು ೬೦ ಕೋಟಿ ವರ್ಷಗಳ ಅವಧಿಯಲ್ಲಿ ರೂಪುಗೊಂಡವಾಗಿವೆ, ಮಿಕ್ಕಿತರ ಶಿಲಾಶ್ರೇಣಿಗಳು ಗೊಡೆಗಲ್ಲುಗಳ ಗುಂಪಿಗೂ ಹಾಗೂ ಧಾರವಾಡ ಪದರು ಶಿಲಾ ಸಮುದಾಯವೆಂದು ಸುಪ್ರಸಿದ್ಧವಾದ ಶಿಲಾ ಶ್ರೇಣಿಗಳ ಗುಂಪಿಗೂ ಸೇರಿ ಅತಿ ಪ್ರಾಚೀನ ಕಾಲದವುಗಳಾಗಿವೆ. ಆಧುನಿಕ ವಿಜ್ಞಾನ ರೀತ್ಯಾ ಭೂಮಿ ಸುಮಾರು ೪೫೦ ಕೋಟಿ ವರ್ಷಗಳಿಗೂ ಮಿಗಿಲಾದ ಕಾಲದಲ್ಲಿ ರೂಪುಗೊಂಡಿದೆ, ನಮ್ಮ ಹಿಂದೂ ಪಂಚಾಂಗಗಳು ಈ ಸೃಷ್ಟಿಯಾಗಿ ೧೯೫ ಕೋಟಿಗೂ ಮೀರಿ ವರ್ಷಗಳು ಸಂದಿವೆ ಎಂಬುದಾಗಿ ತಿಳಿಸುತ್ತವೆ.

ಕ್ಷಾರ ಶಿಲಾವಾಹಗಳಲ್ಲಿನ ದೇವಾಲಯಗಳು

ಕ್ಷಾರ ಶಿಲಾವಾಹಗಳು (Deccan Traps) ಕರ್ನಾಟಕದ ಉತ್ತರ ಜಿಲ್ಲೆಗಳಲ್ಲಿ ಪ್ರಸರಿಸಿವೆ. ಮೌರ್ಯರ ನಂತರ ಆಳಿದ ಶಾತವಾಹನರ ಕಾಲದಲ್ಲಿ ಗೌತಮೀ ಪುತ್ರ ಶಾತಕರ್ಣಿಯು ಪೈಠಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ಭಾಜ್, ನಾಸಿಕ್, ಕನ್ಹೇರಿ. ಕಾರ್ಲೆ ಮುಂತಾದ ಸ್ಥಳಗಳಲ್ಲಿ ಶಾತವಾಹನರ ಕಾಲದಲ್ಲಿ ಕೊರೆದ ಗುಹಾಂತ ದೇವಾಲಯಗಳು ಕ್ಷಾರ ಶಿಲಾವಾಹಗಳಲ್ಲಿ ರೂಪುಗೊಂಡಿದೆ, ಈ ಶಿಲಾವಾಹಗಳು ಬಹುತೇಕ ಬಸಾಲ್ಟ್ ಎಂಬ ಕಲ್ಲಿನವು. ಈ ಕಲ್ಲುಗಳು ಕೊರೆಯಲು ಸುಲಭವಲ್ಲ. ಹಾಗೂ ಬಿಹುಭಿದ್ರಗಳಿಂದಲೂ, ಹಾಳೆ ಹಾಸುಗಳನೇಕವನ್ನು ಒಂದರ ಮೇಲೊಂದರಂತೆ ಪೇರಿಸಿರುವುಗಳಾಗಿಯೂ ಇವೆ. ಈ ಹಾಸುಗಳು ಪ್ರತಿಯೊಂದು ಶಿಲಾರಸ ಪ್ರವಾಹ

ಗಳು ಒಣಗಿ ಘಟ್ಟಿಯಾಗುವುದರಿಂದಾದವು, ಮಧ್ಯೆ ಮಧ್ಯೆ ಈ ಹಾಸು ಹಾಳೆಗಳ ಅಂತರದಲ್ಲಿ ಅಗ್ನಿ ಪರ್ವತದ ಭಸ್ಮಾವಶೇಷಗಳು ಹರಡಿಕೊಂಡು, ಅನಂತರ ನೀರಿನಲ್ಲಿ ಕರಗಿಹೋಗುವುದರಿಂದ, ಸ್ಥಳಾವಕಾಶ ಒದಗಿ, ಮೇಲಿನ ಹಾಸುಹಾಳೆಗಳು ಒಮ್ಮೆಲೇ ಕುಕ್ಕರಿಸುವ ಸಂದರ್ಭಗಳೂ ಉಂಟು. ಈ ಕಾರಣಗಳಿಂದ ಈ ಶಿಲಾ ಪ್ರಸ್ತರಗಳಲ್ಲಿ ಅಷ್ಟು ಸಾಮ್ಯವಾಗಿ, ನಾಜೂಕಾಗಿ ಗುಹಾಂತರ್ದೇವಾಲಯಗಳನ್ನು ನಿರ್ಮಿಸಿರುವುದು ಅಪೂರ್ವ ಶಿಲ್ಪವೇ ಆಗಿದೆ.

ಮರಳುಗಲ್ಲುಗಳು

ಮರಳುಗಲ್ಲುಗಳು ಅತ್ಯಲ್ಪ ರೂಪಾಂತರಗೊಂಡ ಅಥವಾ ರೂಪಾಂತರ ಹೊಂದದ ಜಲಜ ಶಿಲೆಗಳ ಗುಂಪಿಗೆ ಸೇರಿದ ಶಿಲಾ ಪ್ರಸ್ತರಗಳು. ಇವು ಬಹುವಾಗಿ ಭೀಮಾನದಿಯ ಅಂಚು, ಬಾದಾಮಿ, ಕಲಡ್ಗಿ ಮುಂತಾದೆಡೆಗಳಲ್ಲಿವೆ. ಇವುಗಳಲ್ಲಿ ಕೆತ್ತನೆಯ ಕೆಲಸ ಸುಲಭವಾಗಿದ್ದರೂ, ಅವು ಪ್ರಕೃತಿಯ ವ್ಯತ್ಯಾಸಗಳಿಂದಾಗುವ ಪರಿಸರ ವಿಕೋಪದಿಂದ ಬಾಳಿಕೆ ಬರಲಾರವು. ಹಾಗಾಗಿ ಅದರಲ್ಲಿ ಕೊರೆದ ಚಿತ್ರ ಮಾಲಿಕೆಗಳೂ, ಕುಸುರಿ ಕೆಲಸಗಳೂ ಕಾಲಾಂತರದಲ್ಲಿ ಮೌಲಿಕ ರೂಪಗಳನ್ನು ಕಳೆದುಕೊಂಡು ನೋಡಲಸಾಧ್ಯವಾದ ಚಿತ್ರಗಳಾಗಿ ಮಾರ್ಪಡುತ್ತವೆ. ಕ್ರಿ. ಶ. ಮೂರನೆಯ ಶತಮಾನದ ಮಧ್ಯಂತರದಲ್ಲಿ ಕದಂಬರು ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಇವರು ಬನವಾಸಿಯ ಮಧುಕೇಶ್ವರ ದೇವಾಲಯ ಮತ್ತು ದೇಗಾಂವೆಯ ಕಮಲನಾರಾಯಣ ದೇವಾಲಯಗಳನ್ನು ಕಟ್ಟಿಸಿದರೆಂದು ಪ್ರತೀತಿ, ಈ ದೇವಾಲಯದ ಶಿಲೆಗಳು ಪ್ರಾಯಶಃ ಮರಳುಗಲ್ಲುಗಳಿರಬಹುದು, ಆದರೆ, ಗಂಗರ ನಂತರ ಕರ್ನಾಟಕವನ್ನಾಳಿದ ಚಾಲುಕ್ಯರು ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದರು. ಈ ವಂಶದ ಮೂಲ ಪುರುಷನಾದ ಜಯಸಿಂಹ ಕಟ್ಟಿಸಿದ ಐಹೊಳೆಯ ಕೊಂಟಿಗುಡಿ, ದುರ್ಗಾದೇವಾಲಯಗಳು ಹಾಗೂ ಬಾದಾಮಿಯ ವೈಷ್ಣವ ಗುಹಾಂತರ್ದೇವಾಯಗಳೂ ಮರಳುಗಲ್ಲಿನವು.

ಕಣ ಶಿಲೆ ಮತ್ತು ನೈಸ್ ಶಿಲೆಗಳು

ಕಣಶಿಲೆ ಮತ್ತು ನೈಸ್ ಶಿಲೆಗಳು, ಅದರಲ್ಲೂ ನೈಸ್ ಶಿಲೆಗಳು ಕರ್ನಾಟಕದಲ್ಲಿ ಬಹಳವಾಗಿ ಹರಡಿವೆ. ಇವುಗಳು ಬಹುಗಟ್ಟಿಯಾಗಿಯೂ, ಕಲಾಪೂರ್ಣವಾಗಿಯೂ, ಅತ್ಯುತ್ತಮವಾದ ಹೊಳಪು ಪಡೆಯುವ ಶಿಲೆಗಳಾಗಿ, ಬಹಳ ಬಾಳಿಕೆ ಬರುತ್ತವೆ. ಈ ಕಲ್ಲುಗಳು ಪ್ರಪಂಚದ ಯಾವುದೇ ಈ ತರಹೆಯ ಕಲ್ಲುಗಳಿಗೆ ಕಡಿಮೆಯಿಲ್ಲ. ಈ

ಕಲ್ಲುಗಳಿಗಾಗಿ ಜರ್ಮನಿ ಮುಂತಾದೆಡೆಗಳಿಂದ ಬರುವಾಗ ಕೇಳಿಕೆಗಳಿವೆ. ಆದರೆ ಇದರಲ್ಲಿ ಶಿಲ್ಪಕಾರ್ಯ ಕಷ್ಟಸಾಧ್ಯ. ಸೂಕ್ಷ್ಮ ವಿನ್ಯಾಸಗಳನ್ನು ಈ ಕಲ್ಲುಗಳಲ್ಲಿ ಕೊರೆದು ತೋರಿಸಲು ಸಾಧ್ಯವಾಗುವುದಿಲ್ಲ. ಗಂಗರ ಶ್ರೀಪುರುಷ ನೆಲಮಂಗಲ ತಾಲ್ಲೂಕಿನ ಮನ್ನೆ (ಮಾನ್ಯಪುರ) ಯನ್ನು ರಾಜಧಾನಿಯಾಗಿ ಮಾಡಿಕೊಂಡಿದ್ದ. ಗಂಗರು ಈ ಮನ್ನೆ ಹರಿವರ್ಮನ ಕಾಲದಲ್ಲಿ ತಲಕಾಡಿನಿಂದ ಆಳಿದರು. ಇವರ ಕಾಲದಲ್ಲಿ ತಲಕಾಡಿನ ದೇವಾಲಯಗಳೂ, ಶ್ರವಣಬೆಳಗೊಳದ, ಕಾರ್ಕಳದ, ವೇಣೂರಿನ ಗೊಮ್ಮಟ ವಿಗ್ರಹಗಳೂ ಕಟ್ಟಲ್ಪಟ್ಟವು. ಮೊದಲಿನ ಗಂಗರು ಜೈನರಾಗಿದ್ದರು. ವಿಷ್ಣುಗೋಪನ ಕಾಲದಿಂದ ವೈಷ್ಣವ ಮತಾವಲಂಬಿಗಳಾದರು. ಆದುದರಿಂದ ಜೈನ ಬಸ್ತಿಗಳನ್ನೂ ಮತ್ತು ವೈಷ್ಣವ ದೇವಾಲಯಗಳನ್ನೂ ಕಟ್ಟಿಸಿದರು. ಶ್ರವಣಬೆಳಗೊಳದಲ್ಲಿರುವ ೫೭ ಅಡಿ ಎತ್ತರವಿರುವ ಬಾಹುಬಲಿ ವಿಗ್ರಹ ಪ್ರಾಯಃ ಕರ್ನಾಟಕದ ವಿಗ್ರಹಗಳಿಗೆಲ್ಲಾ ಅತಿ ದೊಡ್ಡದು, ಇದು ಕಣಶಿಲೆಗಳ ವಿಗ್ರಹಗಳ ದೃಷ್ಟಿಯಿಂದ ಅತ್ಯುತ್ತಮ ನಿದರ್ಶನವಾಗಿದೆ. ಹಾಗೂ ವಿಜಯನಗರದ ಮಂದಿರಗಳು ಕಣ ಶಿಲೆಗಳಿಂದಾಗಿವೆ.

ಮರಗಿ ಕಲ್ಲುಗಳು

ಮರಗಿ ಕಲ್ಲುಗಳು ಅಥವಾ ಬಳಪದ ಕಲ್ಲುಗಳು ರೂಪಾಂತರ ಶಿಲೆಗಳ ಗುಂಪಿಗೆ ಸೇರಿದವು. ಈ ಕಲ್ಲುಗಳು ಬಹಳ ಭಾರವಾಗಿಯೂ, ಒಂದು ವಿಧವಾದ ಬೂದಿ ಬಣ್ಣದಿಂದ ಕೂಡಿಯೂ, ಮುಟ್ಟಲು ನುಣುಪಾಗಿಯೂ ಸಿಗುವವು. ಹಾಗೂ ಗಟ್ಟಿಯಿಲ್ಲದಿರುವುದರಿಂದ ತೇದರೆ ಧೂಳಾಗುವವು. ಈ ಕಾರಣದಿಂದ ಈ ಕಲ್ಲುಗಳನ್ನು ಬಳಪಗಳನ್ನು ಮಾಡಲು ಉಪಯೋಗಿಸುತ್ತಾರೆ. ಈ ಮೃದುತ್ವಾದಿ ಕಾರಣಗಳಿಂದ ಈ ಶಿಲೆಗಳು ಬಹುಬೇಗ ಸವೆದು ಹೋಗುತ್ತವೆ. ಆದರೆ ಮರದ ಸೂಕ್ಷ್ಮ ವಿನ್ಯಾಸಗಳನ್ನು ಕಿಂಚಿತ್ತೂ ವ್ಯತ್ಯಾಸವಿಲ್ಲದಂತೆ ನಕಲು ಮಾಡಲು ಈ ಕಲ್ಲಿನ ಸಮಾನ ಮತ್ತೊಂದಿಲ್ಲ. ದಂತ ಮತ್ತು ಅಮೃತ ಶಿಲೆಗಳಲ್ಲಿ ಯಾವ ಸೌಲಭ್ಯದಿಂದ ಸೂಕ್ಷ್ಮವಿನ್ಯಾಸಗಳನ್ನು ಕೊರೆಯಲು ಸಾಧ್ಯವೋ, ಅದಕ್ಕಿಂತ ಮಿಗಿಲಾಗಿ ಈ ಶಿಲಾ ವಿಶೇಷದಲ್ಲಿ ಸ್ಥಪತಿಗಳು ತಮ್ಮ ಚಮತ್ಕಾರವನ್ನು ತೋರಿಸಬಹುದು. ಈ ಕಲ್ಲುಗಳನ್ನು ಸ್ಟಿಯಟೈಟ್ ಎಂದೂ ಮೂಲಶಿಲೆಯನ್ನು ಕ್ಲೋರೈಟ್-ಟಾಲ್ಕ್ ಶಿಸ್ಟ್ ಎಂದೂ ಕರೆಯುತ್ತಾರೆ. ಈ ಕಲ್ಲುಗಳ ಮೂಲಧಾತುಗಳಾದರೊ ಅತಿ ಕ್ಷಾರ ಶಿಲೆಗಳ ಜಲಯುಕ್ತ ಮ್ಯಾಗ್ನೀಸಿಯಂ ಸಿಲಿಕೇಟ್‌ಗಳು, ಇವು ಭಾರವಾದ ಪದರು ಶಿಲೆಗಳ ಸಮುದಾಯದಲ್ಲಿ ಅನೇಕ ಕಡೆಗಳಲ್ಲಿ ದೊರೆಯುತ್ತವೆ. ಆದರೆ ಬಹಳಷ್ಟು ದೊರೆಯುವುದಿಲ್ಲ. ಈ ಕಾರಣದಿಂದಲೇ ಬಳಪದ ಕಲ್ಲಿನಿಂದ ಮಾಡಿದ ದೇವಾಲಯಗಳು ಚಿಕ್ಕವಾಗಿಯೂ, ಚೊಕ್ಕವಾಗಿಯೂ ಇವೆ. ಈ ಕಲ್ಲುಗಳಿಂದ ಮಾಡಿದ ವಿಗ್ರಹಗಳು ಗಾಳಿ ಬಿಸಿಲಿನ ಹೊಡೆತಕ್ಕೆ ಸಿಕ್ಕಿ ಬಹು ಬೇಗ ಸವೆಯುವುದನ್ನು ತಪ್ಪಿಸಲೋಸುಗ,

ಆ ದೇವಾಲಯಗಳು ಒಂದು ವಿಧವಾದ ಸೆಜ್ಜೆಯಿಂದ ಕೂಡಿವೆ. ಹಾಗೂ ಈ ಕಲ್ಲಿನ ವಿಗ್ರಹಗಳನ್ನು ಅಷ್ಟಬಂಧದಿಂದ ಬಂಧಿಸಿದಲ್ಲಿ ಬಹುಕಾಲ ಉಳಿಯುವುದು.

ಕರ್ನಾಟಕವನ್ನು ಸುಮಾರು ಕ್ರಿ. ಶ. ೧೦೦೦ ದಿಂದ ೧೩೪೬ ರ ವರೆಗೆ ಹೊಯ್ಸಳರು ಆಳಿದರು. ಅವರ ರಾಜಧಾನಿ "ದೋರ ಸಮುದ್ರ" ವಾಗಿತ್ತು. ಅದು ಈಗಿನ ಹಳೆಯಬೀಡು ಎಂದು ಪರಿಗಣಿಸಲಾಗಿದೆ. ಹಳೇಬೀಡಿನ ಅನತಿ ಪೂರ್ವದಲ್ಲಿ ಈ ಬಗೆಯ ಕಲ್ಲುಗಳು ದೊರೆತದ್ದರಿಂದ ಹೊಯ್ಸಳರ ಕಾಲದ ಸ್ಥಪತಿಗಳು ಅದರಿಂದ ಹಳೇಬೀಡಿನ ಮತ್ತು ಬೇಲೂರಿನ ದೇವಾಲಯಗಳನ್ನು ನಿರ್ಮಿಸಿದರು. ಈ ದೇವಾಲಯಗಳು ಹಾಗೂ ಇನ್ನಿತರ ಸ್ಥಳಗಳಲ್ಲೂ ಇದೇ ಕಲ್ಲಿನಿಂದ ಕೊರೆದು ಕಟ್ಟಿದ ಹೊಯ್ಸಳ ದೇವಾಲಯಗಳು ತಮ್ಮ ಸೂಕ್ಷ್ಮ ವಿನ್ಯಾಸಗಳಿಗೆ ಪ್ರಪಂಚ ಪ್ರಸಿದ್ಧವಾಗಿವೆ. ಭಾರತೀಯ ಶಿಲ್ಪಶಾಸ್ತ್ರದ ನಿಯಮಗಳಿಗನುಸಾರವಾಗಿ, ಚಾತು ತಪ್ಪದೆ ಹೃದಯಂಗಮವಾಗಿ ಕೊರೆಯಲು ಅನುಕೂಲವಾದ ಕಲ್ಲನ್ನು ಇಲ್ಲಿ ಕಂಡರು ಹೊಯ್ಸಳರು. ಹೊಯ್ಸಳರಿಗಿಂತ ಮುಂಚೆ ಇದ್ದ ರಾಜರುಗಳ ಸ್ಥಪತಿಗಳು ಪ್ರಾಯಶಃ ಹೊಯ್ಸಳರ ಕಾಲದ ಸ್ಥಪತಿಗಳಿಗೆ ಕಡಿಮೆ ಇದ್ದಿಲ್ಲದಿರಬಹುದು. ಆದರೆ ಅನುಕೂಲವಾದ ಮೂಲ ಸಾಮಗ್ರಿ ದೊರೆಯದೇ ಅವರು ತಮಗೆ ಸಿಕ್ಕಿದ ಕಲ್ಲುಗಳಲ್ಲೇ ಸಮಾಧಾನಪಟ್ಟರು. ಮತ್ತೂ ಅನೇಕ ಹಿಂದಿನ ರಾಜರುಗಳ ರಾಜಧಾನಿಗಳೇ ಇದಕ್ಕೆ ಕಾರಣವಾಗಿ ಕಾಣುತ್ತದೆ. ಹಿಂದಿನ ರಾಜಧಾನಿಗಳು ಬೇರೆ ಬೇರೆ ಶಿಲಾಗುಂಪುಗಳು ದೊರೆತ ಸ್ಥಳಗಳಲ್ಲಿದ್ದವು. ಹೊಯ್ಸಳರ ಅದೃಷ್ಟವೋ ಎಂಬಂತೆ ಅವರು ದೋರ ಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿದರು. ಸನಿಯದ ಈ ಶಿಲೆಗಳು ಅವರ ಕುಶಲ ಕಲಾ ಪ್ರೋತ್ಸಾಹಕ್ಕೆ ಸಮೃದ್ಧಿಯನ್ನೂ, ಸಂಪೂರ್ಣತೆಯನ್ನೂ ತಂದವು. ಹಾಗಾಗಿ, ಹೊಯ್ಸಳರ ಶಿಲ್ಪ ಭಾರತೀಯ ಶಿಲ್ಪಕಲೆಯ "ಪರಾಕಾಷ್ಠೆ" ಎಂದು ಉದ್ಗರಿಸುವಂತಾಯಿತ್ತು.

ಜಕಣ, ಡಕಣ, ಚಾಣ, ದಾಸೋಜ, ಮಲ್ಲಿಯಣ್ಣ, ನಾಗೋಜ, ಚಿಕ್ಕಹಂಪ, ಪಾದರಿ ಮಲ್ಲೋಜ, ಕೇದಾರೋಜ, ಹರಿಪ. ಮಂಜ, ಹೋನೋಜ ಇತ್ಯಾದಿ ಸ್ಥಪತಿ ಶ್ರೇಷ್ಠರು ಕೆತ್ತಿರುವ ಹೊಯ್ಸಳ ದೇವಾಲಯಗಳ ಭುವನೇಶ್ವರಿ, ಜಾಲಂದ್ರ, ಕಂಬಗಳು, ಶಿಲಾಬಾಲಿಕೆಯರು, ಶಿಲ್ಪಶಾಸ್ತ್ರದ ಸೋಪಾನಗಳಂತಿರುವ ಆನೆ, ಕುದುರೆ ಚಿತ್ರಗಳ ಸಾಲುಗಳಿಂದಲಂಕೃತವಾದ ದೇವಾಲಯಗಳ ಬಹಿಃಪ್ರಾಕಾರಗಳು, ಮುದ್ದಾದ ವಿಗ್ರಹಗಳು, ಬೇಲೂರು ಕೇಶವ ದೇವಾಲಯದ ನೃಸಿಂಹ ಕಂಬ, ಅದರಲ್ಲಿರತಕ್ಕ ಕಡಲೆ ಗಣಪತಿ, ಸ್ತ್ರೀಲಕ್ಷಣಾದ್ಯಲಂಕೃತ ವಿಗ್ರಹಗಳು ಇವೇ ಮುಂತಾದವು ಪ್ರಪಂಚದ ಯಾವ ಶಿಲ್ಪಕ್ಕೂ ಕಡಿಮೆಯಿಲ್ಲ. ಹಾಗೂ ಅಸದೃಶವಾಗಿದೆ.

ಇತರ ಶಿಲ್ಪ ಶಿಲೆಗಳು

ಪಶ್ಚಿಮ ಕರಾವಳಿಯ ಕೆಲವು ದೇವಾಲಯಗಳು ಜಂಬಿಟ್ಟಿಗೆಯಿಂದಾಗಿವೆ. ಹಾಗೂ ಚಾರ್ನಕೈಟ್ ಕಲ್ಲಿನಿಂದಾದ ವಿಗ್ರಹಗಳು ಕರ್ನಾಟಕದಲ್ಲಿ ಅಪರೂಪ. ಗೋಡೆ

ಗಲ್ಲಿನ ವಿಗ್ರಹಗಳು ಬಹಳವಿವೆ. ಕಾರಣ ಕೆಲವು ಗೋಡೆಗಲ್ಲುಗಳು ಬಹಳ ಕಾಠಿಣ್ಯವನ್ನು ಹೊಂದಿ, ಸುತ್ತಿಗೆ ಏಟಿಗೆ ಒಂದು ವಿಧವಾದ ಕಂಚಿನ ಧ್ವನಿಯನ್ನು ಕೊಡುತ್ತವೆ. ಇವು ಭಾರತೀಯ ಶಿಲ್ಪ ಶಾಸ್ತ್ರದಲ್ಲಿ ಪುಂಶಿಲೆಗಳೆಂದು ಕರೆಯಲ್ಪಟ್ಟಿವೆ. ಹಾಗೂ ಕೆಲವು ಘಂಟನಾದವನ್ನು ಕೊಡುತ್ತವೆ. ಇವುಗಳನ್ನು ಸ್ತ್ರೀ ಶಿಲೆಗಳೆಂದು ಕರೆದಿದ್ದಾರೆ. ಈ ವಿಧವಾದ ಶಿಲೆಗಳಿಂದ ಕ್ರಮವಾಗಿ ಪುಂದೇವತಾ ಮತ್ತು ಸ್ತ್ರೀ ದೇವತಾ ವಿಗ್ರಹಗಳನ್ನು ಮಾಡುತ್ತಾರೆ. ಈ ಶಿಲೆಗಳು ಅಲ್ಪ ಪ್ರಮಾಣದಲ್ಲಿ ದೊರೆಯುತ್ತವೆ. ಮತ್ತು ಕೆತ್ತಲು ಬಹಳ ಶ್ರಮ ಬೇಕು. ಬಹುವಾಗಿ ಬಾಳಿಕೆ ಬರುತ್ತವೆ. ಅತ್ಯುತ್ತಮವಾದ ಸಪೆತದಿಂದ ಅತ್ಯಂತ ನುಣುಪಿನಿಂದ ಹೊಳೆಯುತ್ತವೆ. ಹಾಗೂ ಈ ಬಗೆಯ ಕರೀ ಕಣ ಶಿಲೆ ಎಂಬುದು ಜಪಾನ್ ಮತ್ತು ಐರೋಪ್ಯ ದೇಶಗಳಲ್ಲಿ ಬಹಳ ಬಳಕೆಯಲ್ಲಿವೆ. ಕ್ವಾರ್ಟ್ಜೈಟ್ ಮತ್ತು ಹಸಿರು ಕಲ್ಲುಗಳೂ ಕೂಡಾ ವಿಗ್ರಹಗಳ ಕೆತ್ತನೆಗೆ ಉಪಯೋಗಿಸಲ್ಪಡುತ್ತವೆ. ಹಸಿರುಗಲ್ಲಿನಿಂದ ಕಡೆದ ವಿಗ್ರಹಗಳು ಪಚ್ಚೆಯಿಂದ ಮಾಡಿದ ವಿಗ್ರಹಗಳಂತೆಯೇ ಇರುತ್ತವೆ. ಆದರೆ ಪಚ್ಚೆ ಅಷ್ಟು ಸಮೃದ್ಧವಲ್ಲ.

ಉಪ ಸಂಹಾರ

ಕರ್ನಾಟಕ ಶೈಲಿಯ ಶಿಲ್ಪ ವಿಕಾಸದಲ್ಲಿ ಕರ್ನಾಟದ ಶಿಲಾ ಸಂಪತ್ತಿನ ಪಾತ್ರ ಅಮೋಘವಾದದ್ದು. ಚಾರಿತ್ರಿಕ ದೃಷ್ಟಿಯಿಂದ ರಾಜ ವಂಶಗಳು ತಮ್ಮ ರಾಜಧಾನಿಗಳನ್ನು ಬೇರೆ ಬೇರೆ ಸ್ಥಳಗಳಿಗೆ ವರ್ಗಾಯಿಸಿದರೂ, ಆಯಾ ಕಾಲದ ಶಿಲ್ಪ ಚಾತುರ್ಯಗಳು ಅಲ್ಲಿನ ಸಮೀಪದ ಶಿಲಾ ಸಂಪತ್ತಿನಿಂದಾಗಿವೆ. ಈ ಅನೇಕ ರಾಜ ವಂಶಗಳ ಸ್ಥಪತಿಗಳಿಗೂ ಭಾರತೀಯ ಶಿಲ್ಪಶಾಸ್ತ್ರದ ಒಂದೇ ನಿಯಮಗಳ ಪಾಲನೆಯಿದ್ದಾಗ್ಯೂ, ಮೂಲ ಸಾಮಗ್ರಿಗಳ ವೈವಿಧ್ಯತೆ ಅವರ ಚಾತುರ್ಯ ದರ್ಶನಕ್ಕೆ ಅಡ್ಡಿಯನ್ನೋ ಅಥವಾ ಪರಾಕಾಷ್ಠೆಯನ್ನೋ ಒದಗಿಸಿವೆ. ಇದರ ಕಾರಣಗಳನ್ನು ಆಧುನಿಕ ಶಿಲಾ ಶಾಸ್ತ್ರದ ಆಧಾರದಿಂದಲೂ ಹಾಗೂ ಭೂತತ್ತ್ವ ಶಾಸ್ತ್ರಾಧಾರಿತ ಶಿಲಾ ಸಮುದಾಯಗಳ ಹಂಚಿಕೆಯ ಮೇಲೂ ನಿರ್ಧರಿಸಬಹುದಾಗಿದೆ.

ಈ ಕಾರಣಗಳಿಗೋಸ್ಕರ, ಆಧುನಿಕ ಸ್ಥಪತಿಗಳಿಗೆ ಸ್ಥೂಲವಾದ ಶಿಲಾ ಶಾಸ್ತ್ರ ಪರಿಚಯವನ್ನು ಮಾಡಿಸಬೇಕಾದುದು ಅತ್ಯಗತ್ಯವಾಗಿದೆ. ಹಾಗೂ ತಜ್ಞರ ಅಭಿಪ್ರಾಯಗಳನ್ನು ಪಡೆದು ಕಟ್ಟಡಗಳಿಗೂ, ವಿಗ್ರಹಾದಿಗಳಿಗೂ ಶಿಲೆಗಳನ್ನು ಚೆನ್ನಾಗಿ ಪರೀಕ್ಷಿಸಿ, ಸ್ಪಷ್ಟವಾದುವುಗಳನ್ನು ಆಯ್ದು ಉಪಯೋಗಿಸಬೇಕಾದದ್ದು ಪ್ರಾಚೀನ ಮತ್ತು ಅರ್ವಾಚೀನ ಶಾಸ್ತ್ರ ಸಮ್ಮತ ಎಂದು ಮತ್ತೆ ಮತ್ತೆ ದೃಢಪಡಿಸುವುವನಗತ್ಯ.

ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನೊಂದೆ ಚಿತ್ತದಿಂ

ಅನಂತ ಬುರ್ಲಿ
ನಿವೃತ್ತ ಪ್ರಾಧ್ಯಾಪಕರು, ಬಾಗಲಕೋಟಿ

ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯಕರ್ಣನೊಳಾರ್ ದೊರೆ ಕರ್ಣನೇಱು ಕ
ರ್ಣನ ಕಡುನನ್ನಿ ಕರ್ಣನಳವಂಕದ ಕರ್ಣನಚಾಗಮೆಂದು ಕ
ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ॥
(ಆಶ್ವಾಸ ೧೨ ಪದ್ಯ ೨೧೭)

ಮಹಾ ಕವಿ ಪಂಪನು ಕರ್ಣನು ಅವಸಾನಹೊಂದಿದ ಸಂದರ್ಭದಲ್ಲಿ ಮನದುಂಬಿ ಹೇಳಿದ ಚರಮಗೀತೆಯಿದು. ಈ ಪದ್ಯವನ್ನು ಬಹಳಷ್ಟು ಕನ್ನಡ ವಿದ್ವಾಂಸರು ಮುಖ್ಯವಾಗಿಟ್ಟುಕೊಂಡು ಪಂಪ ಮಹಾಕವಿಯ ಕರ್ಣ ಪ್ರೀತಿಯನ್ನು ವಿಧ ವಿಧವಾಗಿ ಅರ್ಥೈಸಿದ್ದಾರೆ. ಕವಿ ಕರ್ಣಗುಣ ಪಕ್ಷಪಾತಿಯೆಂದೂ ಕರ್ಣನ ಗುಣಾತೀತಶಯಗಳಿಗೆ ಮಾರುಹೋಗಿ ಕಥಾನಾಯಕ ಅರ್ಜುನನ್ನು ಮರೆತುಬಿಟ್ಟಿದ್ದಾನೆಂದೂ ಹೇಳಿದ್ದಾರೆ. ಕರ್ಣನಿಂದಾಗಿ ಮಹಾಭಾರತ ಕರ್ಣರಸಾಯನವೆಂದೂ, ಮಹಾಭಾರತದಲ್ಲಿ ಒಂದೇ ಮನದಿಂದ ನೆನೆವೊಡೆ ಕರ್ಣನನ್ನು ನೆನೆಯೆಂದು ಕವಿಯೇ ಹೇಳಿದ ಮೇಲೆ ಬೇರೆ ಮಾತಿಲ್ಲವೆಂದೂ ಅಭಿಪ್ರಾಯ ಪಟ್ಟಿದ್ದಾರೆ. ಕರ್ಣನ ಏಱು, ಕರ್ಣನ ಕಡುನನ್ನಿ, ಕರ್ಣನ ಅಳವು, ಅಂಕದ ಚಾಗ ಇತ್ಯಾದಿಗಳನ್ನು ಮೆಚ್ಚಿದ ಕವಿ ಪಂಪನು 'ಭಾರತಂ ಕರ್ಣರಸಾಯನಮಲ್ತೆ' ಎಂದಿರುವುದು ಸಹಜ ಸ್ವಾಭಾವಿಕವೆಂದು ಪ್ರತಿಪಾದಿಸಿದ್ದಾರೆ.

ಪಂಪ ಮಹಾಕವಿ ಕನ್ನಡದ ಆದಿಕವಿ, ಗುಣಗ್ರಾಹಿಕವಿ. ತನ್ನ ಕಾಲದ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯಲೆಂದು ಕಾವ್ಯ ಬರೆದ ಕವಿ. ಆಶ್ರಯ ದಾತನಾದ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿ ಮಹಾಭಾರತವನ್ನು ಸಮಸ್ತ ಭಾರತವಾಗಿ ಬರೆದುದು ಅರಿಕೇಸರಿಯ ಶೌರ್ಯ ಔದಾರ್ಯಗಳನ್ನು ಹೊಗಳಲೆಂದೇ ಅರಿಕೇಸರಿಯ ಗುಣಗಳನ್ನು ಹೊಗಳುವಲ್ಲಿ ಅವನಿಗೆ ಯಾವ ದೋಷ ಕಾಣುವದಿಲ್ಲ; ಬದಲು ಪ್ರೀತಿಯುಂಟಾಗಿದೆ. ಹೀಗೆ ತಗುಳ್ಚಿ ಹೇಳಿದುದಕ್ಕೆ ಹಲವು ಮಾರ್ಪಾಡು ಗಳನ್ನು ಕಥೆಯಲ್ಲಿ ಮಾಡಿಕೊಳ್ಳಬೇಕಾಯಿತು. ಕವಿ ಪಂಪನು ಮಹಾ ಪ್ರತಿಭಾವಂತ

ಕವಿ, ಕಾವ್ಯಶಾಸ್ತ್ರ ಅಲಂಕಾರ ಶಾಸ್ತ್ರಗಳನ್ನು ಬಲ್ಲ ಪಂಡಿತಕವಿ, ರಸಿಕಕವಿ, ಕಾವ್ಯದ ನಾಯಕನನ್ನು ಹೇಗೆ ಚಿತ್ರಿಸಬೇಕೆಂಬುದನ್ನು ತಿಳಿದ ಕವಿ. ಕಾವ್ಯನಾಯಕನನ್ನು ಮೂಲೆಗೆತಳ್ಳಿ ಖಲನಾಯಕನನ್ನು ಪಟ್ಟಗಟ್ಟುವ ಅವಿವೇಕದ ಕವಿಯೆಂದು ಹೇಳಲಾಗದು. 'ಭಾರತಂ ಕರ್ಣರಸಾಯನಮಕ್ಕೆ' ಎಂಬ ಒಂದೇ ಮಾತಿನಿಂದ ಕವಿ ಪಂಪನು ಅರಿಕೇಸರಿಯನ್ನು ಅರ್ಥಾತ್ ಅರ್ಜುನನನ್ನು ಮರೆತು ಭಾರತದಲ್ಲಿ ಕರ್ಣನ ಕಥೆಯನ್ನೇ ಚಿತ್ರಿಸಿದ್ದಾನೆಂದು ಹೇಳುವುದು ಕವಿಗೆ ಅಪಚಾರವೆಸಗಿದಂತೆ. 'ಒಂದೇ ಚಿತ್ತದಿಂದ ನೆನೆವೊಡೆ ಕರ್ಣನಂ ನೆನೆ' ಎಂದು ಹೇಳಿದ ಮಾತಿನಿಂದ ಕವಿಯ ಹೃದಯದಲ್ಲಿ ಕರ್ಣನ ಚಿತ್ರ ಅಚ್ಚೊತ್ತಿದೆ. ಅರ್ಜುನನಿಗಿಂತಲೂ ಕರ್ಣನ ವ್ಯಕ್ತಿತ್ವಕ್ಕೆ ಕವಿ ಬೆಚ್ಚು ಮಾರು ಹೋಗಿದ್ದಾನೆ ಎಂದು ನಿರ್ಣಯಿಸುವುದು ಸಾಹಸದ ಮಾತಾಗುವುದು. ಈ ಬಗೆಯ ಅಭಿಪ್ರಾಯಗಳನ್ನು ಬಹುಕಾಲದಿಂದ ಕನ್ನಡಸಾಹಿತ್ಯ ವಿಮರ್ಶಕ ವಿದ್ವಾಂಸರು ಪ್ರಕಟಪಡಿಸಿದ್ದುಂಟು. ಕರ್ಣನ ಪಾತ್ರದ ವಿಷಯವಾಗಿ ಆಯ್ದ ಭಾಗಗಳನ್ನೇ ಮತ್ತೆ ಮತ್ತೆ ಎತ್ತಿ ತೋರಿ ತಮ್ಮ ಅಭಿಪ್ರಾಯಕ್ಕೆ ಪುಷ್ಟಿಕೊಡುವುದುಂಟು. ಕಾರಣ ಪ್ರಸ್ತುತ ಪಂಪ ಭಾರತವನ್ನು ಇಡಿಯಾಗಿ ಮಥಿಸಿ ಕರ್ಣನ ಬಗೆಗೆ ಕವಿ ಬೇರೆ ಏನು ಹೇಳಿದ್ದಾನೆಂಬುದನ್ನು ನೋಡಬೇಕು. ಆಗ ಕವಿಯ ನಿಜವಾದ ಅಭಿಪ್ರಾಯ ವೇನು ಎಂಬುದು ವಿದಿತವಾಗುವುದು.

(೧) 'ಇಷ್ಟ ವಿದ್ಯಾಪಾರಗ' ನೆನಿಸಲು ಕರ್ಣನು ಪರಶುರಾಮನಲ್ಲಿ ಬಂದವನಷ್ಟೆ. 'ಪಾರ್ವನೆಂದು ಪುಸಿದು ವಿದ್ಯೆಯಂ ಕೈಕೊಂಡುದರ್ಕೆ' ಪರಶುರಾಮನಿಂದ 'ನಿನಗಾನಿತ್ತ ಬ್ರಹ್ಮಾಸ್ತ್ರವೆಂಬ ದಿವ್ಯಾಸ್ತ್ರಮ್ ಅವಸಾನ ಕಾಲದೊಳ್ ಬೆಸಕೆಯ್ಯದಿರ್ಕೆ' ಎಂದು ಶಾಪ ಪಡೆಯಬೇಕಾಯಿತು. ಕರ್ಣನು ಶರವಿದ್ಯಾ ಪಾರಂಗತನಾಗುವ ಭರದಲ್ಲಿ ಪುಸಿದನೇಕೆ ಎಂಬುದಕ್ಕೆ ಉತ್ತರವಿಲ್ಲ. ಭಾರ್ಗವ ರಾಮನು ಕರ್ಣನನ್ನು ಶಿಕ್ಷಿಸುವುದು ಅವನ ಅಸತ್ಯ ವಿಧಾನಕ್ಕಾಗಿ ಈ ಮಾತು ಕರ್ಣನನ್ನಿಗೆ ಭಂಗ ತರುವಂತಹದು.

(೨) ಕೌರವ ಪಾಂಡವರ ವಿದ್ಯಾ ಪ್ರದರ್ಶನದಲ್ಲಿ ಅರ್ಜುನನ ಶರ ಪರಿಣತಿಯನ್ನು ಕಂಡು ಕರುಬಲು, ಎದೆಯ ಮುಳಿಸು ನಾಲಗೆಗೆ ಬರಲು ಕಾರಣವೇನು ? ಎಂದು ಹೇಳಿ ಕೌರವಪಕ್ಷಪಾತವೆಂದು ಒಪ್ಪಿದರೂ ಈ ಹಿಂದೆ ದ್ರೋಣನಲ್ಲಿ ಧನುರ್ವೇದ ಕಲಿಯಲು ಬಂದಾಗಲೆ 'ಕೌರವಗನಾಳ ಪ್ರಾಣಂ ಬರ್ಪಂತೆ' ಬಂದನೆಂದು ಕವಿ ಹೇಳಿದ ಮಾತನ್ನು ಗಮನಿಸಬೇಕು. ಮೊದಲ ಪರಿಚಯದಲ್ಲಿಯೇ ಒಬ್ಬನಲ್ಲಿ ಪ್ರೀತಿ ಇನ್ನೊಬ್ಬನಲ್ಲಿ ದ್ವೇಷ ಏಕೆ ? ಪ್ರಾರಂಭದಿಂದಲೇ 'ಗುಣಾರ್ಣವನಲ್ಲಿ ನೋಡಿ ಪಗೆಯನಭ್ಯಾಸಗೆಯ್ವಂತೆ' ವಿದ್ಯಾಭ್ಯಾಸ ಮಾಡಲು ಕಾರಣವೇನು ? ಧನುರ್ವಿದ್ಯೆಯಲ್ಲಿ ಆಗಲೆ ಪ್ರಸಿದ್ಧಿ ಪಡೆದಿದ್ದ ಅರ್ಜುನನಲ್ಲಿ ಮತ್ಸರವೆಂದರೆ ಕರ್ಣ ಮತ್ಸರ ಗುಣಕ್ಕೆ ಆಶ್ರಯನೆಂದಂತಾಗುವುದು. ಕರ್ಣನಲ್ಲಿ ಗುಣಗ್ರಾಹಕತೆಯೇ ಸ್ವಭಾವಜನ್ಯವಾಗಿದ್ದರೆ ಅರ್ಜುನನ

ನನಲ್ಲಿ ದ್ವೇಷ ಮಾಡುವ ಕಾರಣವಿರಲಿಲ್ಲ. ಮಾತ್ಸರ್ಯವೇ ಕರ್ಣನಲ್ಲಿ ಅಸಹನೆ ಯುಂಟುಮಾಡಿದೆ. ಭೀಷ್ಮರಿಗೆ ವೀರಪಟ್ಟ ಕಟ್ಟುವ ಸಂದರ್ಭದಲ್ಲಿ ಆಡಿದ ಕರ್ಣನ ಮಾತುಗಳನ್ನು ಇಲ್ಲಿ ನೆನೆಯಬಹುದು. ಮತ್ಸರ, ಅಸಹನೆ, ದುಡುಕುಗಳೇ ಕರ್ಣನ ದುರಂತಕ್ಕೆ ಕಾರಣವೆಂದು ಕಥಾವಲೋಕನದಿಂದ ತಿಳಿಯಬಹುದಾಗಿದೆ.

(೩) ವಿದ್ಯಾ ಪ್ರದರ್ಶನದಲ್ಲಿ ಭೀಮಾರ್ಜುನರು ತೋರಿದ ಪರಿಣತಿಯನ್ನು ಕಂಡು ಖಿನ್ನನಾದ ದುರ್ಯೋಧನನ ಎದೆಯು ಉರಿಯುವ ಹೊಳ್ಳು ಮರದಂತಾಯಿ ತಂತೆ. 'ಸೈರಿಸಲಾರದೆ ಕರ್ಣನಂ ಕರೆದು ಆಲೋಚಿಸಿ,' ತಂದೆ ಧೃತರಾಷ್ಟ್ರನ ಬಳಿಗೆ ಹೋಗಿ ವಂದಿಸಿ, ಕಟ್ಟೇಕಾಂತದಲ್ಲಿ 'ಹಾವಿಗೆ ಹಾಲೆರೆದಿರಿ ದಾಯಾದಿಗಳನ್ನು ಹಿರಿದಾಗಿ ಮಾಡಿದಿರಿ, ನಮ್ಮ ಸಾವು ಉಳಿವು ದೈವೇಚ್ಛೆಯಾಯಿತು' ಎಂದು ನುಡಿದನು. 'ಗುಣಾರ್ಣವಂ ನಮ್ಮಂ ಈ ನೆಲೆಯಿಂ ಎಳೆದಿಕ್ಕುಗುಂ—ಅಮ್ಮ ವಿಧಾತ್ರಯೋಗದಿಂ ಕಣ್ ಕುರುಡಾದೊಡೇನೊ ನಿಮ್ಮ ಬುದ್ಧಿಯುಂ ಕುರುಡಾಗಲೆವೇಳ್ಕುದೇ ?' ಎಂದು ಕೇಳಲು, ಧೃತರಾಷ್ಟ್ರನು ಮಗನ ಮಾತನ್ನು ಒಪ್ಪಿ ಪಾಂಡವರನ್ನು ಬೇರೆಡೆಗೆ ಕಳುಹು ವೆನೆಂದನು. ಅದೇ ಪ್ರಕಾರ ವಾರಣಾವತಕ್ಕೆ ಕಳಿಸಿದನು. ಮೊದಲೇ ದುರ್ಯೋಧನನು ಪುರೋಚನನನ್ನು ಕಳಿಸಿ ಅರಗಿನ ಮನೆಯಲ್ಲಿ ಪಾಂಡವರನ್ನು ಸುಡುವ ವ್ಯವಸ್ಥೆ ಮಾಡಿದ್ದನು.

ಈ ಸಂದರ್ಭದಲ್ಲಿ 'ಕರ್ಣನಂ ಕರೆದು ಆಲೋಚಿಸಿ' ಎಂಬ ಕವಿಯ ಮಾತನ್ನು ಲಕ್ಷಿಸಬೇಕು. ಪಾಂಡವರನ್ನು ಮೋಸದಿಂದ ಅರಗಿನ ಮನೆಯಲ್ಲಿ ಸುಡುವ ದುಷ್ಟ ಸಂಚಿನಲ್ಲಿ ಕರ್ಣನ ಪಾತ್ರವಿದೆ ಯೆಂಬುದನ್ನು ನಿರಾಕರಿಸಲು ಆಗದು. ಹಾಗಾದರೆ ಇದು ಕರ್ಣನ ವೀರಕ್ಕೆ ಉಚಿತವೇ ? ನನ್ನಿಗೆ ಯೋಗ್ಯವೇ ? ದುರ್ಯೋಧನನ ಇಂತಹ ಮೋಸದ ಕೃತಿಗೆ ಪುಷ್ಟಿ ಕೊಡುವ, ಸೈಗುಡುವ ಕರ್ಣನ ಮುಂದೆ ಕೃಷ್ಣ ಕುಂತಿಯರ ಕೃತಿಯನ್ನು ಮೋಸವೆಂದು ಹೇಳಬಹುದೇ ? ನಿರಾಯುಧನಾಗಿ ರಥದ ಗಾಲಿಯೆತ್ತು ತ್ತಿದ್ದ ಕರ್ಣನ ಮೇಲೆ ಅಸ್ತ್ರ ಪ್ರಯೋಗ ಮಾಡಲು ಹೇಳಿದ ಕೃಷ್ಣನಿಗೆ ಕಪಟಿ ಎನ್ನು ವವರು ವಿಚಾರಮಾಡಬೇಕು.

ಇಲ್ಲಿ ಇನ್ನೊಂದು ವಸ್ತು ವಿಚಾರಾರ್ಹವಾಗಿದೆ. ಈ ಸಂದರ್ಭದಲ್ಲಿ ಕೌರವನಿಗೆ ಕರ್ಣನ ಬಲದ ಬಗ್ಗೆ ವಿಶ್ವಾಸ ಮೂಡಿರಲಿಲ್ಲವೆಂದೇ ಅರಗಿನ ಮನೆಯಲ್ಲಿ ಮೋಸದಿಂದ ಪಾಂಡವರನ್ನು ಕೊಲ್ಲುವ ವಿಚಾರ ಮಾಡಿದನೆನ್ನಬೇಕಾಗುತ್ತದೆ. ಕರ್ಣನ ಶಕ್ತಿ ಸಾಮರ್ಥ್ಯಗಳಲ್ಲಿ ಅಂತಹ ವಿಶ್ವಾಸವಿದ್ದರೆ ತಂದೆಯ ಮುಂದೆ 'ನಮ್ಮಂ ಎಳೆದಿಕ್ಕುಗುಂ ಈ ನೆಲೆಯಿಂ ಗುಣಾರ್ಣವಂ' ಎಂದು ಹೇಳುತ್ತಿದ್ದನೆಂತು ?

(೪) ಕರ್ಣನ ವೀರವನ್ನು ಬಾಯ್ತುಂಬ ಹೊಗಳಿದ ಪಂಪ ಕವಿಯೇ ದ್ರೌಪದೀ ಸ್ವಯಂವರದಲ್ಲಿ ಕರ್ಣನ ಬಗೆಗೆ ಹೇಳುವ ಮಾತಿದು.

ಆನೇರಿಪೆನೆಂದು ತಾ
ನೀನಂ ಬಂದೆತ್ತಿ ಬಿಲ್ಲನೇರಿಸಿ ತೆಗೆಯಲ್
ತಾನಾರ್ತನಿಲ್ಲ ತೆಗೆವಂ
ತಾ ನೃಪತಿಗಳರಿಗನಿದಿರೋಳೇಂ ಪುಟ್ಟಿದರೇ ॥

ನೆಲದಿಂದ ಬಿಲ್ಲನ್ನು ಎಳ್ಳನಿತು ಎತ್ತಲು ಸಮರ್ಥನಾಗದೆ ತಲೆ ತಗ್ಗಿಸಿಕೊಂಡು ಬಂದ ಸುಯೋಧನನನ್ನು ಕಂಡು ಕರ್ಣನು ತಾನು ಮತ್ಸ್ಯಭೇದನಗೈವೆನೆಂದು ಬಂದನು. 'ಬಿಲ್ಲನೇರಿಸಿ ತೆಗೆಯಲ್ ತಾನಾರ್ತನಿಲ್ಲ' ಇದು ಕರ್ಣನ ಸಾಮರ್ಥ್ಯದ ನಿದರ್ಶನ. ಕವಿ ಪಂಪನೇ ಈ ಸಂದರ್ಭದಲ್ಲಿ ಹೇಳುವ ಮಾತಿದು 'ತೆಗೆವಂತಾ ನೃಪತಿಗಳ್ ಅರಿಗನಿದಿರೋಳೇಂ ಪುಟ್ಟಿದರೆ'. ಈ ಮಾತು ಕರ್ಣನಿಗೆ ಅವಹೇಳನಕರವಾದುದೆಂಬುದನ್ನು ಲಕ್ಷಿಸಬೇಕು. ಕರ್ಣನಲ್ಲಿ ಕವಿಗೆ ಅಷ್ಟೊಂದು ಅಭಿಮಾನವಿದ್ದರೆ ಈ ಸಂದರ್ಭದಲ್ಲಿ ಈ ಉದ್ಗಾರ ತೆಗೆದಿರಬಹುದಿತ್ತು.

ಮರುಕ್ಷಣದಲ್ಲಿಯೇ ಅರ್ಜುನನು ಬಂದು 'ದೆಸೆ ಕಂಪಂಗೊಳೆ ದಿವ್ಯ ಶರಮಂ ಕರ್ಣಾದಿಗಳ್ ಕಂಡು ಬೆಕ್ಕಸಮಾಗಿರ್ಪವೊಂದೆ ಸೂಳೆತೆಗೆದಾಕರ್ಣಾಂತಮಂ ತಾಗೆ— ಅಚ್ಚು ಮೆಚ್ಚಿಸಿದ ದೇವರುಮಂ ಧನುರ್ಧರರುಂ ವಿದ್ವಿಷ್ಟ ವಿದ್ರಾವಣಂ' ಎಂದು ಕವಿ ವರ್ಣಿಸುವದನ್ನು ಗಮನಿಸಬೇಕು. ಇಬ್ಬರ ಶೌರ್ಯದ ಪರೀಕ್ಷೆ ಇಲ್ಲಿ ನಡೆದಿದೆ. **ಪರಿಣಾಮ ಸ್ಪಷ್ಟವಿದೆ.**

ಹೀಗೆ ಬಿಲ್ಲೆತ್ತಲಾರದ ಕರ್ಣನು ಬಾಯಿ ಬಡುಕನಂತೆ ನಂತರ ದುರ್ಯೋಧನ ನೆದುರು 'ಕೇಳ್ ಆಂತರಸಿಕ್ಕ ಮಿಕ್ಕ ವಿಜಯಶ್ರೀ ಕಾಂತೆಗಂ ಕಾಂತೆಗಂ ನಿನಗಂ ದೋರ್ವಲದಿಂದವೊಂದೆ ಪಸೆಯೊಳ್ ಪಾಣಿಗ್ರಹಂಗೆಯ್ವೆನೇ ?' ಎಂದು ಆಡುವ ಮಾತುಗಳಿಗೆ ಅರ್ಥವಿದೆಯೆ ? ಇಲ್ಲವೆಂಬುದನ್ನು ಕವಿಯೇ ಸೃಷ್ಟಿಪಡಿಸಿದ್ದಾನೆ. 'ಪಾರ್ಥನೊಳ್ ಕಲಹಮಾಗದು ಜ. ದೊರೆಯಲ್ತಿದೆಂದು:' ಬದಿಗೆ ಸರಿಯುವ ವರ್ತನೆ ಕರ್ಣನ ಪರಾಕ್ರಮಕ್ಕೆ ಭೂಷಣವೇ ? 'ಅಂದು ಗೆಲಕ್ಕೆ ಪಾರ್ಥನ ಶರಾಸನ ವಿದ್ಯೆಯುಂ' ಎಂದು ಪಂಪನು ಹೇಳಿದುದನ್ನು ಲಕ್ಷಿಸಬೇಕು. ತನ್ನ ಸೋಲನ್ನು ಒಪ್ಪಿಕೊಳ್ಳದೆ ಬ್ರಾಹ್ಮಣನೆಂದು ನೆಪವೊಡ್ಡಿ ಹಿಂದೆ ಸರಿಯುವ ಕರ್ಣ ದ್ರೌಪದಿಯನ್ನು ಕೌರವನನ್ನು ಒಂದೆ ಹಸೆಯಲ್ಲಿ ಕೂಡಿಸುವದೆಂತು ?

(೫) ಪಾಂಡವರು ದ್ರೌಪದಿಯೊಡಗೂಡಿ ಹಸ್ತಿನಾವತಿಗೆ ಮರಳಿ ಬಂದಾಗ ಭೀಷ್ಮರು ದುರ್ಯೋಧನನೆದುರು ಹೇಳಿದ ಮಾತುಗಳಿವು.

ಕ್ರಮಮರಿದನ್ನ ಕೊಟ್ಟುದನೆ ಕೊಂಡುಮನೋ ಮುದದಿಂದೆ ಬಾಳ್ವುದುಂ
ತವರಿವರೆಲ್ಲರುಂ ಸಮನಲ್ಲದೆ ಮಾರ್ಮಲೆದುರ್ಕಿ ಭೀಮನೊಳ್

ಸಮರದೆ ಗರ್ವದಿಂ ಪೊಣರಲಾರ್ಪಿರೆ ಗಾವಿಲರಿನ್ನು ಮೆಲ್ಲರಂ
ಯಮಸುತನಂ ಸುರೇಂದ್ರ ಸುತನುಂ ಪೋಸೆದಿಗಳೆ ಮುಕ್ಕಿ ತೋರರೇ ॥

'ನಿನ್ನ ಶರಾಳಿಗಳ್ಗೆ ಮುನ್ನನ್ನಡುಗುತ್ತು ವಿರ್ಪುದು ಅರಿಸಾಧನ ಸಂಪದಂ' ಎಂದು ಕರ್ಣನನ್ನು ಕೊನೆಯಲ್ಲಿ ಹೊಗಳಿದ ಭೀಷ್ಮರೇ ಹೇಳಿದ ಈ ಮಾತನ್ನು ಸುಲಭವಾಗಿ ತೆಗೆದು ಹಾಕಲಾಗದು. ಕರ್ಣ ದುರ್ಯೋಧನರ ಶಕ್ತಿ ಸಾಮರ್ಥ್ಯಗಳನ್ನು ಚೆನ್ನಾಗಿ ಗಮನಿಸಿಯೇ ಭೀಷ್ಮರು ಈ ಮಾತು ಹೇಳಿದ್ದಾರೆ. "ಗರ್ವದಿಂ ಪೊಣರಲಾರ್ಪಿರೆ ಗಾವಿಲರಿನ್ನುಂ" ಎಂದು ನುಡಿದದನ್ನು ಇನ್ನೂ ಹೆಚ್ಚಾಗಿ ಗಮನಿಸಬೇಕು. ಪ್ರತಿ ಭಾವಂತ ಕವಿ ಮಹಾಭಾರತ ಯುದ್ಧ, ಅದರ ಪರಿಣಾಮವನ್ನು ಭೀಷ್ಮರ ಬಾಯಿಂದ ಈಗಲೇ ಹೇಳಿಸಿದ್ದಾನೆಂಬುದು ಇನ್ನೂ ವಿಶೇಷ. 'ಎಲ್ಲರಂ ಯಮಸುತನುಂ ಸುರೇಂದ್ರ ಸುತನು ಪೊನೆದು ಈಗಳೇ ಮುಕ್ಕಿ ತೋರರೇ' ಎಂಬಲ್ಲಿರುವ ಈಗಳೆ ಎಂಬ ಪದದ ಧ್ವನಿಯನ್ನು ಗುರುತಿಸಬೇಕು.

ಭೀಷ್ಮರ ಮಾತಿಗೆ ದುರ್ಯೋಧನನು ವಿರೋಧ ವ್ಯಕ್ತಪಡಿಸಿದಾಗ ಕೆರಳಿ 'ಅವಗಳ ಪಟ್ಟಮಂ ಕಟ್ಟಿ ನೆಲಸಂ ಪಚ್ಚುಕೊಡುವೆ, ಆಗಳ್ ಅಡ್ಡಬರ್ಪ ಗಂಡರಂ ನೋಳ್ಪೆಂ' ಎಂದು ಗುಡುಗಿದಾಗ ದುರ್ಯೋಧನನು 'ನೀಮೆಂದುದನೆಂದು ಬಾಳ್ವೆ' ಎಂದು ಬಾಗಿ ನಡೆಯುತ್ತಾನೆ. ಭೀಷ್ಮರ ಆಹ್ವಾನವನ್ನು ಸ್ವೀಕರಿಸಲು ಅವನಿಗೆ ಧೈರ್ಯವಿಲ್ಲ. ಕರ್ಣನ ಬಲದ ನೆನಪೂ ಕೂಡ ಅವನಿಗೆ ಈ ಪ್ರಸಂಗದಲ್ಲಿ ಬರುವದಿಲ್ಲ.

(೬) ಧರ್ಮಸುತನು ಕೃಷ್ಣನ ಮಾರ್ಗದರ್ಶನ ಕೃಪೆಗಳಿಂದ ರಾಜಸೂಯ ಯಾಗವನ್ನು ನಿರ್ವಹಿಸಿದನಷ್ಟೇ. 'ಪೃಥಾನಂದನರ ಉದ್ಯೋಗದ ಚಾಗದ ಯಾಗದ ಭೋಗದ ಮೈಮೆಗೆ' ಸುಯೋಧನ ಬೆರಗಾದುದು ಸಹಜವೇ, ಬಳಿಕ "ದುಶ್ಯಾಸನ ಕರ್ಣ ಶಕುನಿ ಸೈಂಧವರೆಂಬ ದುಷ್ಟ ಚತುಷ್ಟಯಗೊಳ್ ಮಂತ್ರಣಮಿರ್ದು............ ಇನ್ನಾವ ಮಳ್ಕೆಯೊಳ್ ಪಗೆಯಂ ಕೆಯ್ಗೆ ಮಾಡುವಂ ಪೇಳಿ' ಮನೆ, ಶಕುನಿ 'ನೆತ್ತಮ ನಾಡಿಸಿ ಗೆಲ್ವುಕೊಳ್ವ ನೀ ವಸುಮತಿಯುಂ' ಎಂದು ಸೂಚಿಸುತ್ತಾನೆ.

ಇಲ್ಲಿ ಕರ್ಣನನ್ನು 'ಹೊಗಳಿ ತಣಿಯದ ದಣಿಯದ' ಕವಿಯೇ 'ದುಷ್ಟ ಚತುಷ್ಟಯ'ದಲ್ಲಿ ಸೇರಿಸಿದ್ದಾನೆಂಬುದನ್ನು ಗಮನಿಸಬೇಕು. 'ಒಂದೆ ಚಿತ್ರದಿಂ ನೆನೆವೊಡೆ ಕರ್ಣನಂ ನೆನೆಯು' ಎಂದು ಹೇಳುವ ಕವಿ ಪಂಪನ ಮಾತನ್ನು ವಿಮರ್ಶಕರ ಮಾತಿನಲ್ಲಿ ಅರ್ಥವಿಸುವದಾದರೆ, ಅದೇ ಕವಿ ಪಂಪನು ಇಲ್ಲಿ ಘಂಟಾಘೋಷವಾಗಿ 'ದುಷ್ಟ'ನೆಂದು ಕರ್ಣನನ್ನು ಕರೆಯುವದಕ್ಕೆ ಏನು ಹೇಳಬೇಕು ? ಶಕುನಿಯ ಕಪಟ ದ್ಯೂತಕ್ಕೆ ಸೈಗುಡುವ ಕರ್ಣನನ್ನು ವೀರನೆನ್ನಬೇಕೆ?

(೭) ದ್ವೈತವನದಲ್ಲಿ ಗಂಧರ್ವ ಚಿತ್ರಾಂಗದನು ದುರ್ಯೋಧನ ದುಶ್ಶಾಸನ ರನ್ನು ಕೋಡಗಟ್ಟು ಕಟ್ಟಿ ಒಯ್ಯುವಾಗ—

> ಮಿಡುಕದೆ ಭೀಷ್ಮ ನೋಡುತಿರೆ। ಕುಂಭಜ ಸುರ್ಕಿರು, ಕರ್ಣಮಿಕ್ಕುಮಾ
> ನುಡಿಯದೆ ಮೂಗುವಟ್ಟಿರು। ಗುರುಪ್ರಿಯನಂದನ ಕೂಗಡಂಗದಿ॥
> ರ್ದೊಡೆ ಬರ್ದುಕಾವುದಿರೆ ಪೊಡರ್ದೊಡೀಗಡೆ ಕೊಂದಪೆನೆಂದು ಕೂಡೆಕ।
> ಣ್ಗಿಡೆ ಜಡಿದುಯ್ದನಾ ಖಚರ ನಿರ್ವರುಮಂ ಪರಮಾಣು ಮಾರ್ಗದಿಂ॥

ಎಂದು ಕವಿ ಪಂಪನು ವರ್ಣಿಸಿರುವುದನ್ನು ಲಕ್ಷಿಸಬೇಕು. ಚಿತ್ರಾಂಗದನಿಗೆ ಎದುರಾಡದೆ ಕರ್ಣ ಮೂಗುಚ್ಚಿರಲು ಸಾಕು. ನಿಜವಾಗಿಯೂ ಪಂಪ ಕವಿ ಕರ್ಣನ ಅಭಿಮಾನಿಯೇ ಆಗಿದ್ದರೆ ಈ ಪ್ರಸಂಗದಲ್ಲಿ ಕರ್ಣನ ಹೆಸರನ್ನಾದರೂ ಬಿಡಬಹುದಾಗಿತ್ತು. ಆದರೆ ಪಂಪ ಕವಿ ಅಷ್ಟು ಮೂರ್ಖನಲ್ಲ. ಅರಿಕೇಸರಿಯನ್ನು ಅರ್ಜುನನಿಗೆ ತಗುಳ್ಚಿ ಹೇಳಲು ಪಕ್ರಮಿಸಿದ ಕವಿ ಅರ್ಜುನನ ಮೇಲ್ಮೆಯನ್ನು ತೋರುವ ಯಾವ ಪ್ರಸಂಗವನ್ನೂ ಬಿಟ್ಟು ಕೊಟ್ಟಿಲ್ಲ. ವ್ಯಾಸ ಭಾರತದಲ್ಲಂತೂ ಕರ್ಣ ತನ್ನ ರಥದಿಂದ ಹಾರಿ ವಿಕರ್ಣನ ರಥ ವೇರಿ ಓಡಿ ಹೋಗುತ್ತಾನೆ. ದುರ್ಯೋಧನ ದುಶ್ಶಾಸನರು ಬಂಧಮುಕ್ತರಾಗುವದು ಕೂಡ ಅರ್ಜುನನ ಪರಾಕ್ರಮದಿಂದಲೇ ಎಂಬುದನ್ನು ಮರೆಯಬಾರದು. ಭೀಷ್ಮ ದ್ರೋಣ ಗುರುಸುತ ಕರ್ಣರಂತಹ ಮಹಾವೀರರನ್ನೂ ಕಡೆಗಣಿಸಿ ದುರ್ಯೋಧನ ದುಶ್ಶಾಸನರನ್ನು ಕೋಡಗಗಟ್ಟು ಕಟ್ಟಿ ಒಯ್ಯುವ ಚಿತ್ರಾಂಗದನನ್ನು ತನ್ನ ಶೌರ್ಯ ದಿಂದ ಸೋಲಿಸಿ ಬಿಡಿಸಿಕೊಂಡು ಬರುವ ಅರ್ಜುನನ ಶೌರ್ಯವನ್ನು ಅಲ್ಲಿಯೇ ಕಾಣಿ ಸಿದ್ದಾನೆ.

ಚಿತ್ರಾಂಗದನು ದುರ್ಯೋಧನ ದುಶ್ಶಾಸನರನ್ನು ಕೋಡಗಗಟ್ಟು ಕಟ್ಟಿ ಒಯ್ಯು ವಾಗ ನೆಗಳ್ತೆಯ ವೀರರೆಲ್ಲಂ ಬಡವರ ಪಿತರರಂತೆ ಮಿಳ ಮಿಳ ನೋಡುತ್ತಿದ್ದರೆಂದು ಪಂಪಕವಿ ಹೇಳುತ್ತಾನೆ. ಪಂಪಕವಿ ಕೊಡುವ ಈ ಉಪಮೆ ಆ ವೀರರ ಸ್ಥಿತಿಯನ್ನು ಬಹು ಮಾರ್ಮಿಕವಾಗಿ ಚಿತ್ರಿಸುತ್ತದೆ. 'ಮಿಕ್ಕುದುಂಡರಂತೆ ತಲೆಯುಂ ಬಾಗಿ ಬಿಲ್ಗಳು ಮಂದಿಟ್ಟು ಬಿಲ್ಲುಂ ಜಿರಗಾಗಿದ್ದ'ರೆಂದು ಕವಿ ವರ್ಣಿಸಿರುವುದನ್ನು ಗಮನಿಸಬೇಕು. ವೀರರಿಗೆ ಬಳಸಿದ ಈ ಮಾತುಗಳಿಗಿಂತ ಹೆಚ್ಚು ಅಪಮಾನಕರವಾದುದು ಬೇರಿಲ್ಲ.

(೮) ಪಾಂಡವರು ಅರಣ್ಯದಲ್ಲಿರುವಾಗ ಮಹರ್ಷಿ ವ್ಯಾಸರು ಬಂದು ಅರ್ಜುನ ನನ್ನು ಇಂದ್ರಕೀಲಕ್ಕೆ ದಿವ್ಯಾಸ್ತ್ರಗಳನ್ನು ಪಡೆಯಲು ಕಳಿಸುವಾಗ, ಭೀಷ್ಮ, ದ್ರೋಣ ಕೃಪ, ಕರ್ಣರನ್ನು 'ಗೆಲ್ವಾಗಳ್ ವಿಕ್ರಮಾರ್ಜುನನಲ್ಲದೆ ಗೆಲ್ಲಂ' ಎಂದು ಹೇಳುತ್ತಾರೆ. ಅರ್ಜುನನ ಸಾಮರ್ಥ್ಯವನ್ನು ಗಮನಿಸಿಯೇ ಹೇಳಿದ್ದಾರೆಂಬುದನ್ನು ಲಕ್ಷಿಸಬೇಕು! ಕವಿ ಪಂಪನಿಗೆ ಅರ್ಜುನನಲ್ಲಿ ವಿಶೇಷ ಅಭಿಮಾನ ಹೆಮ್ಮೆಗಳಿಲ್ಲದಿದ್ದರೆ. ಇಂದ್ರಕೀಲದಲ್ಲಿ

ಶಿವನಲ್ಲಿ ಸೆಣಸಿ ಅವನನ್ನು 'ನೆಲಕಿಕ್ಕಿ ಗಂಟಲಂ ಮೆಟ್ಟಿದನೆಂದು ಹೇಳಬಹುದಾಗಿತ್ತೇ?" ಎಂಬುದನ್ನು ಯೋಚಿಸಬೇಕು. ಅರ್ಜುನನ ಸಾಮರ್ಥ್ಯ ಪರಾಕ್ರಮಗಳಿಗೆ ನಿದರ್ಶನ ವಾದ ಈ ಪ್ರಸಂಗವನ್ನು ಮತ್ತು ಕವಿ ಕರ್ಣಾಶ್ವತ್ಥಾಮ ವಾಗ್ವಾದ ಪ್ರಸಂಗದಲ್ಲಿ ಅಶ್ವತ್ಥಾಮನಿಂದ 'ಯುದ್ಧದೊಳ್ ವೃಷಭ ಧ್ವಜಮನಿಕ್ಕಿ ಗೆಲ್ದ ಅರಿಗನೊಳ್ ತಲೆ ವಟ್ಟದಿರಾಗಿ ನಿಂದು ಸೂತತನಿರಿವಂ ಗಡ। ಎಂದು ಕೊಂಕು ನುಡಿಸಿರುವದನ್ನು ಗಮನಿಸಬೇಕು. ಒಂದೇ ಸಲ ಹೇಳಿಸಿದ್ದರೆ ಅದು ಅರಿಗನಲ್ಲಿಯ ಅಳ್ತಿಯಿಂದಾಗಿ ಯೆಂದು ಹೇಳಬಹುದಿತ್ತು. ಮತ್ತೆ ಹೇಳಿಸುವಲ್ಲಿ ಕರ್ಣನನ್ನು ಅವ ಹೇಳನ ಮಾಡ ಲೆಂದೇ ಕವಿಗೆ ಉದ್ಯೋಗವಿದೆಯೆನ್ನಬೇಕಾಗುತ್ತದೆ.

(೯) ಉತ್ತರ ಗೋಗ್ರಹಣ ಯುದ್ಧದಲ್ಲಿ ಕವಿ ಪಂಪನು ಅರ್ಜುನನ ಪರಾ ಕ್ರಮವನ್ನು ವರ್ಣಿಸುವದನ್ನು ನೋಡಿ.

ಅಂಗರಾಜ ಕೆರಳಿ ವಿಕರ್ಣನೊಡನೆ ಎದುರಿಸಿದಾಗ, ಅಮರ ನರೋರಗರು ಸಮೆ ದುದು ಪೋಗು ಗೋಗ್ರಹಣದಲ್ಲಿಯೇ ಭಾರತಂ ಎಂದರಂತೆ. 'ಕರ್ಣನ ವಕ್ಷಮನೆಚ್ಚು ಗರ್ವಮುಂ ಸಮೆಯಿಸಿ, ಅಂಕದ ವಿಕರ್ಣನಂ ಒಂದೆ ಬಾಣದಿಂ ಕೊಂದ ಕದನ ತ್ರಿಣೇ ತ್ರನಂ 'ಮಸಂಗಲಿಗಳ್ ಇದಿರ್ಚಲಾರದೆ ಓಡಿದರ್' ಎನ್ನುತ್ತಾನೆ.

ಈ ಮಾತನ್ನು ಎತ್ತಿಕೊಂಡು ಕೃಷ್ಣನು ಸಂಧಾನಕ್ಕೆ ಕೌರವನಲ್ಲಿ ಬಂದಾಗ, ದುರ್ಯೋಧನೆದುರೇ ತುಂಬಿದ ಸಭೆಯಲ್ಲಿ ಭೀಷ್ಮ ದ್ರೋಣ ಗುರುನಂದನ ಕೃಪ ಕರ್ಣರು ಉಪಸ್ಥಿತರಿರುವಾಗಲೇ—

ಗುರುವಿಲ್ಲಾ ಕರ್ಣನಿಲ್ಲಾ ಗುರುವಿನ ಮಗನಿಲ್ಲಾ ಕೃಪಾಚಾರ್ಯನಿಲ್ಲಾ
ಕುರುರಾಜಾ ನಿನ್ನ ತಮ್ಮಂದಿರೊಳಿನಿಬರೊಳಾರಿಲ್ಲ ಗಾಂಗೇಯನಿಲ್ಲಾ
ಮರುಳೆ ಗಾಂಡೀವಿ ಯಾರೆಂದೆಣಿಕೆಗಳವೆ ಗಂಧರ್ವರುಯ್ವಂದು ನಿನ್ನಂ
ಕರುವಿಟ್ಟಂತಿರ್ದುದಿಲ್ಲಾ ನೆರೆದ ಕುರುಬಲಂ, ತಂದವಂ ಪಾರ್ಥನಲ್ಲಾ?॥

ಎಂದು ಕೇಳುವದನ್ನು ಗಮನಿಸಬೇಕು. ಕರ್ಣನ ಪರಾಕ್ರಮ ಸಾಮರ್ಥ್ಯಗಳು ಆ ಪ್ರಸಂಗದಲ್ಲಿ ದುರ್ಯೋಧನನಿಗೆ ಜಯವನ್ನು ತಂದವೇ? ಇಂಥ ಕರ್ಣನು 'ಪಗೆವರ ನಿಟ್ಟೆಲ್ವಂ ಮುರಿವಡೆ ಎನಗೆ ಪಟ್ಟಂಗಟ್ಟಾ' ಎಂದು ಹೇಳುವ ಮಾತಿಗೆ ಬೆಲೆಯುಂಟೇ ಎಂಬುದನ್ನು ವಿಚಾರಿಸಬೇಕು. ಹಿಂದಿನ ಸೋಲು, ಅಪಮಾನಗಳನ್ನು ಕವಿ ಮತ್ತೆ ಕೃಷ್ಣನಿಂದ ಸಭೆಯಲ್ಲಿ ಹೇಳಿಸುವ ಉದ್ದೇಶವೇನು? ಅರ್ಜುನನ ಕೀರ್ತಿಯನ್ನು ಹೊಗಳಲೆಂದೇ ಅಲ್ಲವೇ?

(೧೦) ಕಾರಣವಿಲ್ಲದೇ ಭೀಷ್ಮರನ್ನು ನಿಂದಿಸಿ—

ಗಂಗಾಸುತಂ ಪೃಥಾಸುತ
ರಂಗೆಲ್ದೊಡೆ ತಪಕೆಪೋಪೆನವರ್ಗಳ ಕೆಯ್ಯೊಳ್

ಗಾಂಗೇಯ ನಳಿದೊಡೆ ಅಹಿತರ
ನಾಂಗಲೆ ತಳ್ತಿಂವಿನನ್ನೆಗಂ ಬಿಲ್ವಿಡಿಯೆಂ॥

ಎಂದು ಪ್ರತಿಜ್ಞೆ ಮಾಡುವ ಕರ್ಣನನ್ನು ಸ್ವಾಮಿ ನಿಷ್ಠನೆಂದು ಹೇಳುವದು ಹೇಗೆ? ತನ್ನ ಅಹಂಕಾರ ಅಭಿಮಾನಗಳನ್ನೇ ಮೆರೆದನಲ್ಲದೆ ಸ್ವಾಮಿಯ ಹಿತವನ್ನು ಬಗೆಯಲಿಲ್ಲ. 'ಬಿಲ್ವಿಡಿಯೆಂ' ಎಂಬುದು ಯಾವ ಜೋಳದ ಪಾಳಿ? ಈ ಹಿಂದೆ ಕೃಷ್ಣನೆದುರು 'ಕುರುಪತಿಗೆ ದೈವಬಲವಿಲ್ಲ'ವೆಂದು ಚಿಂತಿಸಿದ ಕರ್ಣನೇ ಈ ಮಾತುಗಳನ್ನು ಆಡುತ್ತಾನೆಂದರೆ ಏನೆನ್ನಬೇಕು? 'ಆಳ್ದನಿಂ ಅನೆ ಮುಂಚೆ ನಿರಿಪೆಂ ಕೆಯ್ಕೊಂಡು ಕಟ್ಟಾಯಮಂ' ಎಂದು ಹೇಳಿ ಈಗ ಅಂತರನ್ನು ಗೆಲ್ಲುವ ಮಾತನಾಡುವವೆಂದರೆ, ಅವನನ್ನು ಎಂತಹುದು ಎಂಬುದನ್ನು ಪುನರಾಲೋಚಿಸಬೇಕು.

ಮುಂದಿನ ಸಂದರ್ಭಗಳಲ್ಲಿ ಕವಿ ಬೇರೆ ಬೇರೆ ಪಾತ್ರಗಳ ಮುಖದಿಂದ ಕರ್ಣನ ಪರಾಕ್ರಮವನ್ನು ಕುರಿತು ಆಡಿಸಿದ ಮಾತುಗಳಿಗೆ ವಿಶೇಷ ಮಹತ್ವ ಕೊಡಬೇಕಾದುದಿಲ್ಲ. ಕೃಷ್ಣ ಕುಂತಿಯೆದುರು ಹೇಳುವ ಮಾತಾಗಲಿ, ಧರ್ಮರಾಜ ಗಾಬರಿಯಿಂದ ವರ್ಣಿಸಿದ ಕರ್ಣನ ಪರಾಕ್ರಮವಾಗಲಿ ಒಂದು ವಿಶಿಷ್ಟ ಉದ್ದೇಶ ಸಾಧನೆಗೆ, ಮನದ ನೋವು ಕಾಣಿಸಲೆಂದೇ ಅಲ್ಲದೆ ಬೇರಿಲ್ಲ. ಭೀಷ್ಮರು ಕೂಡ ಕರ್ಣನ ಉರ್ಕು ಸೊರ್ಕುಗಳ ಮಾತೆತ್ತಿದುದು ಅಣಕದ ಧ್ವನಿಯಲ್ಲದೆ ನಿಜವಾಗಿ ಹೊಗಳದೆಂದಲ್ಲ. ಯುದ್ಧಾರಂಭದಲ್ಲಿ ಧರ್ಮಸುತ ಬಂದು ಭೀಷ್ಮ, ದ್ರೋಣ ಕೃಪ ಶಲ್ಯರಿಗೆ ಎರಗಿದಾಗ ಅವರು 'ನಿನ್ನ ಬರವಿಂದ ಎಮ್ಮ ಮನಂ ನಿನಗೆರಗಿದುದು, ಜಯಮುಂ ಎಮ್ಮೀ ದೆಸೆಯಿಂದ ನಿನಗೆ ಸಾರ್ಗೆ ಪೋಗು' ಎಂದು ಹರಸಿ ಕಳಿಸುತ್ತಾರೆ. ಈ ಹರಕೆ ಪೊಳ್ಳು ಹರಕೆಯಲ್ಲ. ಪಾಂಡವರಿಗೆ 'ಜಯಸಿದ್ಧ' ಎಂಬ ಅಭಿಪ್ರಾಯ ಅವರೆಲ್ಲರ ಮಾತಿನಲ್ಲಿದೆ. ಭೀಷ್ಮ ದ್ರೋಣರಿಗೆ ಕರ್ಣನ ಪರಾಕ್ರಮದಿಂದ ಕೌರವನಿಗೆ ಗೆಲುವಾಗುವದೆಂಬ ಭಾವನೆ ತಪ್ಪಿಯೂ ಸುಳಿವುದಿಲ್ಲ.

(೧೧) ಭಗದತ್ತನು ಅಳಿದುವನ್ನು ಕಂಡು ನೊಂದು ದ್ರೋಣರಲ್ಲಿಗೆ ಬಂದು ದುರ್ಯೋಧನನು 'ನರಂ ಕೊಲ್ವಲ್ಲಿ ಕಂಡು ಇಂತುಪೇಕ್ಷಿಸಿ ನೀಮುಂ ನಡೆ ನೋಡುತಿರ್ದಿರೆ' ಎನ್ನಲಾಗಿ, ದ್ರೋಣರು ಸ್ಪಷ್ಟವಾಗಿ 'ಎನಗಲ್ತು ಆರ್ಗಂ ಅಸಾಧ್ಯನಲ್ತೆ ವಿಜಯಂ, ನೀನಾತನಂ ಗೆಲ್ವ ಮಾತಂ ಅಮೋಘಂ ಬಿಡು' ಎಂದೆನ್ನುತ್ತಾರೆ. ದ್ರೋಣರಿಗೆ ಕರ್ಣನ ಬಲದ, ಸಾಮರ್ಥ್ಯದ ಅರಿವು ಇರಲಿಲ್ಲವೆಂದು ಹೇಳಬೇಕೆ? ಒಂದಲ್ಲ ಪತ್ತು ಸಲ ಅರ್ಜುನನ ಪರಾಕ್ರಮವನ್ನು, ಪಾಂಡವರ ಗೆಲವನ್ನು ಕುರಿತು ಕವಿ ಪಂಪನು ಮುಕ್ತ ಕಂಠದಿಂದ ಹೊಗಳಿದುದನ್ನು ಮರೆತು ಸಂದರ್ಭೋಚಿತವಾಗಿ ಅನುಕಂಪದಿಂದ ಮರುಕದಿಂದ ವರ್ಣಿಸಿದ ಕರ್ಣನ ಪರಾಕ್ರಮ ಗುಣಾತಿಶಯಗಳನೆಲ್ಲಾ

ಮುಂದೆ ಮಾಡಿ ಅರ್ಜುನನಿಗಿಂತಲೂ ಕರ್ಣನೇ ಕವಿಯ ಮನವನ್ನು ಸೂರೆಗೊಂಡಿದ್ದಾನೆಂದು ಹೇಳುವದು ಅತಿರೇಕದ ಮಾತಾಗುವದು. ವಿಮರ್ಶೆ ಪಕ್ಷಪಾತ ಮನೋಭಾವದ್ದಾಗುವದು.

(೧೨) ಅಭಿಮನ್ಯುವನ್ನು ಕೊಲ್ಲುವ ಉದ್ದೇಶದಿಂದ 'ದ್ರೋಣ, ದ್ರೋಣಪುತ್ರ, ಕೃಪ ಕೃತವರ್ಮ, ಕರ್ಣ ಶಲ್ಯ ವೃಷಸೇನಾದಿಗಳ್ ಅಳ್ಕದ ಮುಳಿದ ಪೂಗಮನರಿದು ಧರ್ಮಯುದ್ಧಮಂ ಬಿಸುಟು ನರನಂದನ ರಥಮುಂ ಸುತ್ತಿ' ಮುತ್ತಿದರಷ್ಟೆ, 'ಕರ್ಣಂ ನಿಶಿತ ಶರದಿಂ ಎಚ್ಚಂ'. ಅಭಿಮನ್ಯುವಿನ ಎರಡು ಕೈಗಳೂ ಕತ್ತರಿಸಿದವು, ಅಭಿಮನ್ಯು ಅಳಿದನು. ಈ ಸಂದರ್ಭದಲ್ಲಿ ಧರ್ಮಯುದ್ಧವನ್ನು ಬಿಸುಟ ಕರ್ಣನ ವರ್ತನೆ ಕ್ಷಮ್ಯವೇ? ಮೋಸದಿಂದ ಯುದ್ಧ ಮಾಡಿ ಗೆಲ್ಲುವ ಸಂಚಿನಲ್ಲಿ ಕರ್ಣನೂ ಕೂಡಿರುವನಲ್ಲವೇ? ಅಂದ ಮೇಲೆ ಕುಂತಿ ಕೃಷ್ಣರು ಭೇದೋಪಾಯದಿಂದ ಕರ್ಣನನ್ನು ಘಾತಿಸಿದುದು ತಪ್ಪೆಂದು ಹೇಳುವದು ಹೇಗೆ? ಇಂದ್ರ ಕವಚ ಕುಂಡಲ ಬೇಡಿ ಕರ್ಣನ ಬಲ ಕುಂದಿಸಿದುದು ತಪ್ಪೇ? 'ಸತ್ಯಮೇವ ಜಯತೆ' ಎಂಬುದು ಮಹಾಭಾರತದ ಸಾರ ತತ್ವ, ಸತ್ಯದ ಗೆಲುವಿಗಾಗಿ ಕೃಷ್ಣ ನಾನಾ ವಿಧಾನಗಳನ್ನು ಅನುಸರಿಸಿದುದು ನಿಜ. ಕರ್ಣನು ಆದಾವ ಸತ್ಯ ಪಕ್ಷಕ್ಕಾಗಿ ಹೋರಾಡಿದನು ? ಆಶ್ರಯಿಸಿದುದೇ ಅಸತ್ಯ ಪಕ್ಷವನ್ನು, ಕಪಟ ಕಾರ್ಯಗಳನ್ನು, ಆಯೋಗ್ಯರನ್ನು ಕೂಡಿ ಅಳಿದನು ಕರ್ಣನು ಎಂಬುದು ನಿಜಮಾತು. ಈ ಮಾತನ್ನು ದುರ್ಯೋಧನನೇ ಒಪ್ಪಿಕೊಂಡಿದ್ದಾನೆ. ಶಲ್ಯ ಸತ್ತ ಸಂದರ್ಭದಲ್ಲಿ ದುರ್ಯೋಧನನು 'ನದೀಜ ಘಟ ಸಂಭವ ಸೂರ್ಯತನೂಜ ಮದ್ರರಾಜಾದಿ ಮಹೀಭುಜರ್ ಧುರದೊಳ್ ಎನ್ನಯ ದೂಸರಿಂ ಆಳ್ಗಿ ಮುಳ್ಗಿದಂತಾದರ್' ಎನ್ನುತ್ತಾನೆ. 'ಇದೊಂದವಸ್ಥೆ ನಿಮಗೆನ್ನಯ ಕರ್ಮದಿಂ ಆದುದು' ಎಂದು ಭೀಷ್ಮರೆದುರು ಹೇಳುವ ದುರ್ಯೋಧನನ ಮಾತನ್ನು ಲಕ್ಷಿಸಬೇಕು.

ಜೈನನಾದ ಕವಿ ಪಂಪನು ಕಾವ್ಯದಲ್ಲೆಲ್ಲ ದೈವದ ಮಹಿಮೆಯನ್ನು ಎತ್ತಿ ಹೇಳಿದಂತಿದೆ. ಅಂತೆಯೇ ಕರ್ಣನಿಂದ 'ಬಿದಿವಸದಿಂದೆ ಪುಟ್ಟುವದು, ಪುಟ್ಟಿಸುವಂಬಿದಿ ಬಿದಿಸಮುಕಟ್ಟಿಕೊ ಡ್ಯೊಡೆದೆಯೊಳ್ ಕಿಡಿಸಲ್ ಕುಡಿಸಲ್ ಸಮರ್ಥರಾರ್' ಎಂದು ಹೇಳಿಸುತ್ತಾನೆ. ವಿಧಿವಶನಾಗಿ ದುರಂತ ಮರಣ ಹೊಂದಿದ ಕರ್ಣನ ಬಗೆ ಕಂಡು ಪಂಪನ ಮನ ಕರಗಿದೆ. ಕರ್ಣನ ಚಾಗ, ನನ್ನಿ, ಅಣ್ಮುಗಳ ಬಗೆ ತಿಳಿದ ಕವಿ ಗುಣಗ್ರಾಹಿಯಾದುದರಿಂದಲೇ ಆಮುಟ್ಟಿಗಾದರೂ ಅವುಗಳನ್ನು ಮನದುಂಬಿನೆನೆದುದ ಯೋಗ್ಯವೇ ಆಗಿದೆ. 'ನೆನೆಯದಿರಣ್ಣ ಭಾರತದೊಳಿಂ................' ಎಂಬ ಶ್ಲೋಕ ಕರ್ಣನ ಚರಮಗೀತೆಯೆಂಬುದನ್ನು ಮರೆಯಬಾರದು. ಎಷ್ಟೆಲ್ಲ ಸದ್ಗುಣಗಳಿದ್ದರೂ ಎಂಥ ದುರಂತ ಮರಣವಾಯಿತಲ್ಲ ಎಂಬ ಕುದಿಯಿಂದ ಪಂಪ ಇಂತು ವರ್ಣಿಸಿರಬಹುದು. ಯಾವನೊಬ್ಬ ಸಾವನಪ್ಪಿದಾಗ ಅವನ ಸದ್ಗುಣಗಳನ್ನು ನೆನೆಯುವದು

ಸುಸಂಸ್ಕೃತನ ಲಕ್ಷಣ. ಪಂಪನಂತಹ ಕವಿ ಅದಕ್ಕೆ ಹೊರತಾಗುವನೇ? ಕರ್ಣನ ಬಗೆಗಿನ ತೀವ್ರವಾದ ಅನುಕಂಪದಿಂದಾಗಿ ಇಂತಹ ದುರಂತ ವ್ಯಕ್ತಿ ಇನ್ನೊಬ್ಬನಿಲ್ಲವೆಂಬ ದೃಷ್ಟಿಯಿಂದ 'ನೆನೆಯದಿರಣ್ಣ ಪೆರರಾರುಮನುಂ' ಎಂದು ಹೇಳಿದ್ದಾನೆ. ಕರ್ಣನ ತ್ಯಾಗ, ಔದಾರ್ಯಗಳಿಗೆ ಕವಿ ಪಂಪ ಮುಗ್ಧನಾಗಿರುವನೆಂದೇ ಅನೇಕ ಸಲ ಬೇರೆ ಬೇರೆ ಪ್ರಸಂಗಗಳಲ್ಲಿ ಬಾಯಿ ತುಂಬ ಹೊಗಳಿದ್ದಾನೆ. ಅಂದ ಮಾತ್ರಕ್ಕೆ ಕವಿ ಬೇರೆಡೆ ಕರ್ಣನ ಬಗೆಗೆ ಹೇಳಿದ ಮಾತುಗಳನ್ನು ಮರೆತು, ಕವಿ ಆಗ ಅರ್ಜುನರನ್ನೂ ಮರೆತು ಕರ್ಣನ ತ್ಯಾಗ ಅಣ್ಮು ನನ್ನಿಗಳಿಗೆ ಮಾರು ಹೋಗಿರುವನೆಂದು ಹೇಳುವದು ಎಷ್ಟರ ಮಟ್ಟಿಗೆ ಯೋಗ್ಯ?

'ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನೊಂದೆ ಚಿತ್ತದಿಂ. ....' ಈ ಪದ್ಯದಲ್ಲಿರುವ ಅಭಿಪ್ರಾಯವನ್ನು ಸ್ವಲ್ಪ ವಿಮರ್ಶಾತ್ಮಕವಾಗಿ ಕವಿಯ ಹಿಂದಿನ ಮಾತುಗಳ ಹಿನ್ನೆಲೆಯಲ್ಲಿ ಆಲೋಚಿಸುವದು ಸೂಕ್ತವು. ಪದ್ಯದ ಮಟ್ಟಿಗೆ 'ಭಾರತ', 'ಭಾರತದೊಳಿಂ' ಎಂಬ ಪದಗಳಿಗೆ ವಿದ್ವಾಂಸರೆಲ್ಲ ಮಹಾಭಾರತ ಕಾವ್ಯವೆಂದೇ ಅರ್ಥ ಮಾಡಿದಂತಿದೆ. ಕಾರಣ ಕವಿ ಪಂಪನೇ ವಿವಿಧ ಸಂದರ್ಭಗಳಲ್ಲಿ ಬಳಸಿದ 'ಭಾರತ' ಹಾಗು 'ಸಮಸ್ತ ಭಾರತ' ಪದಗಳ ಅರ್ಥವನ್ನು ಕಾಣಲೆಳಿಸುವದು ಯೋಗ್ಯ.

(೧) ಉತ್ತರ ಗೋಗ್ರಹಣದ ಕಾಲದಲ್ಲಿ ಕರ್ಣ ವಿಕರ್ಣರು ಅರ್ಜುನನನ್ನು ಎದುರಿಸಿ ಕಾದುವಾಗ, ಅಮರನರೋರಗರು 'ಸಮೆದುದು ಪೋಗು ಗೋಗ್ರಹಣದಲ್ಲಿಯೇ ಭಾರತಂ' ಎಂದು ನುಡಿದಂತೆ.

(೨) ದುರ್ಯೋಧನನ ತಮ್ಮಂದಿರು ನೂರ್ವರು ಬಂದು ಭೀಮನನ್ನು ತಾಗಿದಾಗ 'ಅನಿಬರುಮ ವಿರಥವರ್ಗಾದಿ ಭಾರತಮನಿಂದೆ ಸಮೆಯಿಸುವ' ಎಂದು ಕೋದಂಡ ಬಿಸುಟು ಗದೆಯನ್ನು ಕೊಂಡನೆಂದು ಕವಿ ಪಂಪ ವರ್ಣಿಸಿದ್ದಾನೆ.

(೩) ಕರ್ಣನು ಭೀಷ್ಮರನ್ನು ಹಳಿದು ತನಗೆ ಪಟ್ಟಗಟ್ಟೆಂದು ಕೌರವನನ್ನು ಕೇಳಿದಾಗ ಭೀಷ್ಮರು 'ಭಾರತಂ ಕಲಹಂ ಇದಿರ್ಚುವಂ ಅರಿಗಂ' ಎಂದು ಮರುತ್ತರ ಕೊಡುವರು.

(೪) ದುರ್ಯೋಧನನಿಗೆ ಆಪ್ತರಾದ ಸಂಸಪ್ತಕರು ಅರ್ಜುನನ ರಥವನ್ನು ತಮ್ಮತ್ತ ತೆಗೆಯಲು. ಅವರ ರಥಕ್ಕೆ ಅಭಿಮುಖವಾಗಿ ನುಗ್ಗಿ 'ಪಟು ಪಡದಾಯ್ತು ಭಾರತಮಿವಂದಿರ ಕಾರಣದಿಂದೆ.......' ಎಂದು ಕೆರಳಿ ನುಡಿಯುತ್ತಾನೆ ಅರ್ಜುನನು.

(೫) ಕರ್ಣನಿಗೆ ಶಲ್ಯ ಸಾರಥಿಯಾಗುವನೆಂದರಿದು ಗಾಬರಿಯಾಗಿ ಧರ್ಮಸುತನು ಕೃಷ್ಣನನ್ನು ಕರೆಸಿ ಏನು ಮಾಡುವದೆಂದು ಪ್ರಶ್ನಿಸಿದಾಗ, ಕೃಷ್ಣನು 'ಕರ್ಣಂಗೊಡ್ಡಿತ್ತುದಲ್ ಭಾರತಂ' ಎಂದು ಹೇಳುತ್ತಾನೆ.

(೬) ಭೀಮನು ದುಶ್ಯಾಸನನನ್ನು ಕೊಂದು ದ್ರೌಪದಿಯನ್ನು ಕರೆಸಿ ದುಶ್ಯಾಸನನ ಎದೆಯಿಂದ ರಕ್ತವನ್ನು ಮೊಗೆದು ತೆಗೆದು ಅವಳ ನೆತ್ತಿಯೊಳೆರೆದು ಕರುಳ ಮಾಲೆಯ ಮುಡಿಸಿ—'ಭವತ್ ಕೇಶ ಪಾಶ ಪ್ರಪಂಚಂ, ಇದುವೆ ಮಹಾಭಾರತಕ್ಕಾದಿಯಾಯ್ತು' ಎಂದು ಹೇಳುತ್ತಾನೆ.

(೭) ಕರ್ಣಾರ್ಜುನರು ನಿರ್ಣಾಯಕ ಕಾಳಗದಲ್ಲಿ ಪರಸ್ಪರರನ್ನು ಸಂಧಿಸಿದಾಗ ಅರ್ಜುನನು 'ಕರ್ಣಂಗೊಂಡ್ಡಿತ್ತು ಭಾರತವೇಂ ಬೆಸಂಪಿರಿದು ನಿನಗಂ' ಎಂದು ನುಡಿಯುತ್ತಾನೆ ಕರ್ಣನಿಗೆ.

(೮) ಕವಿ ಪಂಪನು ಕರ್ಣನ ಮರಣಾನಂತರ ಹೇಳುವ ಪದ್ಯವಿದು—'ನೆನೆಯದಿರಣ್ಣ ಭಾರತದೊಳಿಂ ಪರರಾರುಮನಂ....ಕರ್ಣ ರಸಾಯನ ಮಲ್ತೆ ಭಾರತಂ'

(೯) ಧರ್ಮಪುತ್ರನು ಶಲ್ಯನನ್ನು ಎದುರಿಸಿ 'ಈಗಳೀ ಭಾರತಂ ಸಮರಮಪ್ಪುದು, ಅಳ್ಕದೆ ನಿಂದು ಕಾದು' ಎನ್ನುತ್ತಾನೆ.

(೧೦) ಪಂಪಕವಿ ಪೀಠಿಕೆಯಲ್ಲಿ 'ಕತೆಯು ಮೆಯ್ಗೆ ಕಲೀಯದೇ ಮುಂ ಸಮಸ್ತ ಭಾರತಮನ ಪೂರ್ವಮಾಗೆ ಸಲೆಪೇಳ್ದ ಕವೀಶ್ವರರಿಲ್ಲ' ಎಂದು ಹೇಳಿದ್ದಾನೆ.

(೧೧) ಕಾವ್ಯದ ಕೊನೆಯಲ್ಲಿ 'ಎಸೆಯೆ ಸಮಸ್ತ ಭಾರತಮನಾವ ನರೇಂದ್ರರು ಮಾರ್ತುಕೊರ್ತು ಪೇಳಿಸರೆ' ಎಂದು.

(೧೨) 'ಬೆಳಗುವನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ ಸಮಸ್ತ ಭೂತಳಕೆ ಸಮಸ್ತ ಭಾರತಮುಮಾದಿ ಪುರಾಣ ಮುಂ' ಎಂದು ನುಡಿದಿದ್ದಾನೆ.

(೧೩) 'ಮುನ್ನಿನ ಕಬ್ಬಮನೆಲ್ಲ ಮಿಕ್ಕಿ ಮೆಚ್ಚಿದುವು ಸಮಸ್ತ ಭಾರತಮುಮಾದಿ ಪುರಾಣ ಮಹಾ ಪ್ರಬಂಧ ಮುಂ' ಎಂದು ಅಭಿಮಾನದಿಂದ ಕವಿ ಹೇಳಿಕೊಂಡಿದ್ದಾನೆ.

(೧೪) 'ಕ್ಷಿತಿಗೆ ಸಮಸ್ತ ಭಾರತಮುಮಾದಿ ಪುರಾಣ ಮುಮೀಗಳೊಂದಳಂ ಕೃತಿಯವೊಲಿರ್ದು—' ಎಂಬ ಮಾತನ್ನು ಗಮನಿಸಿರಿ.

(೧೫) 'ಚಲದೊಳ್ ದುರ್ಯೋಧನಂ....ಇವರ್ಗಳಿಂ ಈ ಭಾರತಂ ಲೋಕಪೂಜ್ಯಂ' ಎಂಬುದು ಕವಿ ಮಂಗಳಕ್ಕೆ ಮೊದಲು ಹೇಳಿದ ಮಾತು.

೧ ರಿಂದ ೯ ಅವತರಣಿಕೆಗಳಲ್ಲಿ ೯ ನೆಯದರಲ್ಲಿ ಬರುವ 'ಭಾರತ'ದ ಅರ್ಥವೇನು? ಎಂಬುದನ್ನು ತಿಳಿಯುವದಕ್ಕಾಗಿ ಉಳಿದೆಡೆ ಬರುವ 'ಭಾರತ' ಪದದ ಅರ್ಥವೇನು ಎಂಬುದನ್ನು ಆಲೋಚಿಸಬೇಕು. ದಿವಂಗತ ಡಿ. ಎಲ್. ಎನ್. ಅವರು 'ಪಂಪ ಭಾರತದೀಪಿಕೆ'ಯಲ್ಲಿ 'ಭಾರತ' ಪದಕ್ಕೆ ಭಾರತ ಯುದ್ಧವೆಂದು ಇತರತ್ರ ಅರ್ಥ ಹೇಳಿದ್ದಾರೆ. ಭಾರತ ಯುದ್ಧವೆಂಬುದು ವಿಶಿಷ್ಟ ಅರ್ಥವುಳ್ಳ ಪದವು. ಇದರ ಅರ್ಥಕ್ಕೆ

ನಾವು ದಶಮಾಶ್ವಾಸದ ೧೦ ನೆಯ ಪದ್ಯವನ್ನು ನೋಡಬೇಕು. ಭೀಷ್ಮರು ದುರ್ಯೋಧನನಿಗೆ 'ನಿನ್ನೊರಂಜು ತನಂ ಕ್ರಿಗಳಿವಾಯ್ತುದಪ್ಪೊಡೆ ಮಹಾಭಾರಾವತಾರಂ, ರಣೋದ್ಯತನಾಗು' ಎಂದು ಹೇಳುವುದನ್ನು ಗಮನಿಸಬೇಕು. 'ಮಹಾಭಾರಾವತಾರ' ಎಂಬ ಪದಕ್ಕೆ ಶ್ರೀ ಡಿ.ಎಲ್.ಎನ್. ಅವರು ಭೂಮಿಯ ಮಹಾಭಾರವನ್ನು ಇಳಿಸುವ ಯುದ್ಧ ಎಂದು ಅರ್ಥ ಹೇಳಿದ್ದಾರೆ. 'ಭಾರತ' ಎಂಬುದು ಕೇವಲ ಯುದ್ಧವಲ್ಲ: ಯುಗಾಂತ್ಯದಲ್ಲಿ ಸರ್ವರನ್ನೂ ನಾಶಗೈದು ಭೂಭಾರವನ್ನು ಇಳಿಸುವ ಘೋರ ಸಂಗ್ರಾಮ. ಪುಲಿಗೆರೆಯ ತಿರುಳ್ಗನ್ನಡದಲ್ಲಿ ಕಾವ್ಯ ಬರೆದ ಪಂಪ ಕವಿಯ ಸಾಜದ ನುಡಿ 'ಭಾರತ' ದೇಸಿ ನುಡಿಯೆಂದರೆ ಹಲವರಿಗೆ ಆಶ್ಚರ್ಯವಾಗಬಹುದು. ಈಗಲೂ ಮಾತಿನಲ್ಲಿ 'ಅದೊಂದು ದೊಡ್ಡ ಭಾರತವೇ ಆಯ್ತು, ಅದೊಂದು ರಾಮಾಯಣ' ಇತ್ಯಾದಿಯಾಗಿ ಹೇಳುವ ರೂಢಿಯುಂಟು. ಈ ದೇಸಿಪದದ ಅರ್ಥವನ್ನೇ ಮನದಲ್ಲಿಟ್ಟು 'ಭಾರತ' ಎಂದು ಬಳಸಿರುವನೆಂದರೆ ತಪ್ಪಾಗದು. ಈ ದೃಷ್ಟಿಯಿಂದ ಉಳಿದ ಅವತರಣಿಕೆಗಳಲ್ಲಿ ಬಳಸಿದ 'ಭಾರತ'ಕ್ಕೆ ಅರ್ಥವಿಸಿರಿ. ಅದರ ಸೊಗಸನ್ನು ಕಾಣಿರಿ. ಗೋಗ್ರಹಣ ಕಾಲದ ಯುದ್ಧ ನಡೆದಾಗಲೆ 'ಸಮೆದುದು ಗೋಗ್ರಹಣದಲ್ಲಿಯ ಭಾರತಂ' ಎಂಬ ಮಾತನ್ನು ಮೆಲುಕು ಹಾಕಿರಿ. ಆಗ ಭಾರತ ಕೇವಲ ಯುದ್ಧವೇ ಪೃಥ್ವಿಯ ಭಾರವನ್ನು ಇಳುಹುವ ಮಹಾಯುದ್ಧವೇ ಎಂಬುದನ್ನು ಆಲೋಚಿಸಿರಿ. ಭೀಮನು ಹೇಳುವ 'ಭಾರತಮನಿಂದೆ ಸಮೆಯಿಸುವೆಂ' ಎಂದು ಕುರುಕ್ಷೇತ್ರ ರಣಾಂಗಣದಲ್ಲಿಯೇ ಹೇಳುವದನ್ನು ಪರ್ಯಾಲೋಚಿಸಿರಿ. 'ಭಾರತಂ ಕಲಹಂ ಇದಿರ್ಚುವಂ ಹರಿಗಂ' ಎಂದು ಭೀಷ್ಮರು ಕರ್ಣನನ್ನು ಎಚ್ಚರಿಸುವಲ್ಲಿ ಹೇಳಿದ ಮಾತು 'ಭಾರತ' ಪದಕ್ಕೆ ಬರೆದ ಭಾಷ್ಯವಾಗಿದೆ. ೮ನೆಯ ಅವತರಣಿಕೆಯೊಂದನ್ನು ಬಿಟ್ಟು ಉಳಿದ ಅವತರಣಿಕೆಗಳಲ್ಲಿ ಬರುವ 'ಭಾರತ' ಪದಕ್ಕೆ ಯಾರೂ ಭಾರತ ಕಾವ್ಯ ಎಂದು ಅರ್ಥವಿಸದಿರುವದು ಗಮನಾರ್ಹ. ಹಾಗೆ ಅರ್ಥವಿಸಲು ಸಾಧ್ಯವೂ ಇಲ್ಲ ಎಂಬ ಮಾತು ಬೇರೆ.

ಇನ್ನು ಉಳಿದ ೧೦ ರಿಂದ ೧೪ರವರೆಗಿನ ಅವತರಣಿಕೆಗಳಲ್ಲಿ ಬಳಸಿದ 'ಸಮಸ್ತ ಭಾರತ' ಎಂಬ ಪದಕ್ಕೆ ಎಲ್ಲ ವಿದ್ವಾಂಸರೂ ಸಮಗ್ರ ಭಾರತ ಕಥೆ, ಭಾರತ ಕಾವ್ಯವೆಂದೇ ಹೇಳಿದ್ದಾರಲ್ಲದೆ ಯಾರೂ ಸಮಗ್ರ ಭಾರತ ಯುದ್ಧವೆಂದು ಹೇಳಿಲ್ಲ. ಕವಿ ಪಂಪನು ಮಹಾಭಾರತ ಕಾವ್ಯವೆಂಬ ಅಭಿಪ್ರಾಯವಿರುವಲ್ಲೆಲ್ಲ 'ಸಮಸ್ತ ಭಾರತ' ಎಂದೇ ಪ್ರಯೋಗಿಸಿದ್ದಾನೆಂಬುದು ವಿಶೇಷ. ಮುಳಿಯ ತಿಮ್ಮಪ್ಪಯ್ಯನವರನ್ನುಳಿದು ಇತರ ಪಂಡಿತರು 'ಸಮಗ್ರ ಭಾರತ' ಎಂದೇ ಹೇಳಿದ್ದಾರೆ. ಹೀಗೆ ಒಂದು ಪದವನ್ನು ಕವಿ ಮತ್ತೆ ಮತ್ತೆ ಹೇಳುವ ಔಚಿತ್ಯವನ್ನು ಪ್ರಶ್ನಿಸಬೇಕಾಗುತ್ತದೆ. ದಿ. ಮುಳಿಯ ತಿಮ್ಮಪ್ಪಯ್ಯನವರು ಮಾತ್ರ ಸಮಸ್ತ ಭಾರತವೆಂಬ ಪದಕ್ಕೆ ತಗುಳ್ಚಿ ಬರೆದ ಭಾರತ ಕಾವ್ಯ ಎಂದು ಹೇಳಿರುತ್ತಾರೆ. ಕವಿ ಪಂಪನು ಕೂಡ ಕೊನೆಯ ಮಂಗಳ ಪದ್ಯದಲ್ಲಿ "ಕರಮ್ ಅಳ್ಕರ್ತು ಸಮಸ್ತ ಭಾರತ ಕಥಾ ಸಂಬಂಧಮಂ ಬಾಜಿಸಲ್ ಬರೆಯಲ್..." ಎಂದೇ ಹೇಳುತ್ತಾನೆ. "ಮುನ್ನಿನ ಕಬ್ಬಮ ನೆಲ್ಲಮನಿಕ್ಕಿ ಮೆಟ್ಟಿದುವು ಸಮಸ್ತ

ಭಾರತಮುಮಾದಿ ಪುರಾಣ ಮಹಾಪ್ರಬಂಧಮುಂ" ಎಂದು ಹೇಳಿದ ಮಾತಿನಲ್ಲಿ ಆದಿ ಪುರಾಣದಂತೆ ವಿಕ್ರಮಾರ್ಜುನ ವಿಜಯಕ್ಕೆ ಸಮಸ್ತ ಭಾರತವೆಂಬ ಪದವನ್ನು ಪರ್ಯಾಯವಾಗಿ ಬಳಸಿದ್ದಾನೆಂಬುದು ಸ್ಪಷ್ಟ. ಇಲ್ಲಿ ಸಮಸ್ತಕ್ಕೆ ಸಮಗ್ರವೆಂದು ಅರ್ಥಮಾಡುವದು ಅಷ್ಟೊಂದು ಉಚಿತವೆನಿಸದು. ಕಾರಣ ಕವಿ ಬಳಸಿದ "ಸಮಸ್ತ ಭಾರತ" ಎಂಬ ಪದದಲ್ಲಿ ಸಮಸ್ತ ಪದದ ತಿರುಳು ಏನೇ ಇರಲ್ಲಿ ಒಟ್ಟಂದದಲ್ಲಿ "ಭಾರತ ಕಾವ್ಯ" ಎಂಬುದು ಮಾತ್ರ ಶತಶಃ ಸತ್ಯ.

ಕೊನೆಯ ಅವತರಣಿಕೆಯಲ್ಲಿಯ "ಭಾರತಂ ಲೋಕ ಪೂಜ್ಯಂ" ಎಂಬಲ್ಲಿ ಮಾತ್ರ ಕವಿ "ಭಾರತಂ" ಎಂಬ ಪದವನ್ನು ಭಾರತ ಮಹಾಕಾವ್ಯ ಎಂಬರ್ಥದಲ್ಲಿ ಬಳಸಿದ ನೆಂಬುದು ನಿರ್ವಿವಾದ, ಆದರೆ ಉಳಿದೆಡೆ ಇದೇ ಮಾತನ್ನು ಹೇಳಬರುವದಿಲ್ಲ. ಕಾರಣ "ನೆನೆಯದಿರಣ್ಣ ಭಾರತದೊಳಿಂ.... ಕರ್ಣ ರಸಾಯನ ಮತ್ತಿ ಭಾರತಂ" ಎಂಬಲ್ಲಿಯೂ "ಭಾರತ" ಪದಕ್ಕೆ ಭಾರತ ಕಾವ್ಯ ಎಂದು ಅರ್ಥ ಮಾಡುವ ಬದಲು ಭಾರತ ಮಹಾ ಯುದ್ಧವೆಂದು ಅರ್ಥವಿಸುವದು ಹೆಚ್ಚು ಉಚಿತವೆನಿಸುತ್ತದೆ. ಹೀಗೆ ಅರ್ಥವಿಟ್ಟು ಕೊಂಡು ಈ ಪದ್ಯಕ್ಕೆ ಸಮಂಜಸವಾಗಿ ಅರ್ಥ ಕಲ್ಪಿಸಬಹುದೇ ಎಂಬುದನ್ನು ಸ್ವಲ್ಪ ವಿಚಾರಿಸಿದರೆ ತಪ್ಪಿಲ್ಲ.

ವೀರರಾದವರು ಮಡಿದಾಗ ಅವರವರ ಅಂತಸ್ತು ಉನ್ನತಿಗಳನ್ನು ಅಳಿದು ರಣಾಂಗಣದಲ್ಲಿ ಉಭಯ ಕಡೆಗಳು ವೀರರನ್ನು ಸ್ತುತಿಸುವದನ್ನು ಇದೇ ಕಾವ್ಯದಲ್ಲಿ ಬೇರೆ ಸಂದರ್ಭಗಳಲ್ಲಿ ಕಾಣಬಹುದು. ಕವಿಯು ಮನದುಂಬಿ ಚರಮಗೀತೆ ಒಂದೆಡೆ ಹೇಳಿದರೆ ಬಾಂದಳದಲ್ಲಿ ನಿಂತು ನಿರೀಕ್ಷಿಸುವ ದೇವತೆಗಳಿಂದ ಪ್ರಶಂಸಿಸುವದು ಇನ್ನೊಂದೆಡೆ. ವೀರಸ್ಮರಣೆ ಮಹಾಸಂಸ್ಕೃತಿಯ ಲಕ್ಷಣ. ಅದರಲ್ಲೂ ಹತ್ತನೆಯ ಶತಮಾನದ ಕ್ಷಾತ್ರಯುಗದ ಪ್ರತಿನಿಧಿಯಾದ ಮಹಾಕವಿ ಪಂಪನು ಇಂತಹ ಸಂದರ್ಭ ಗಳನ್ನು ಸರಿಯಾಗಿ ಬಳಸಿ ವೀರ ಪ್ರಶಂಸೆ ಮಾಡಿದುದುಂಟು. ಇಂಥಲ್ಲಿ ಕವಿಯ ಮಾತುಗಳಿಗೆ ಅತಿರೇಕದ ವಿಪರೀತ ಅರ್ಥ ಮಾಡುವದು ಸರಿಯಲ್ಲ. ಸಂದರ್ಭವನ್ನು ಲಕ್ಷಿಸದೆ ಕೇವಲ ಪದಕ್ಕೆ ಅರ್ಥಮಾಡುವದು ಅನರ್ಥಕ್ಕೆ ಕಾರಣ.

ಭಾರತ ಕರ್ಣ ರಸಾಯನವಾದುದು 'ಕರ್ಣನ ಪಡೆ ಮಾತಿನೊಳ್‌ಪುದಿದು' ಎಂದು ಕವಿಯೇ ಹೇಳಿದ್ದಾನೆ. 'ಪಡೆಮಾತು' ಎಂಬುದಕ್ಕೆ (3) ಡಿ. ಎಲ್. ಎನ್, ವೃತ್ತಾಂತ ಎಂದು ಅರ್ಥ ಹೇಳಿದ್ದಾರೆ. 'ಬಿದಿವಸದಿಂದೆ ಪುಟ್ಟುವದು—ಇದು ಪಡೆ ಮಾತು ಇವಂಗಿದು ಪರಾಕ್ರಮ' ಎಂಬಲ್ಲಿ ಪಡೆಮಾತು ಎಂಬುದಕ್ಕೆ ಕೀರ್ತಿ ಎಂದು ಅರ್ಥವಿಸಿದ್ದಾರೆ. ಭಾರತ ಯುದ್ಧ (ಭೂಮಿ) ಕರ್ಣ ವೃತ್ತಾಂತದಿಂದ ತುಂಬಿ ಕರ್ಣ ಗಳಿಗೆ ರಸಾಯನವಾಯಿತು ಎಂದು ಹೇಳಿದರೆ ಯಾವ ದೋಷವೂ ಬರದು. ಕರ್ಣ ನನ್ನು ಅವನ ಗುಣಗಳನ್ನು ನೆನೆದರ ತಪ್ಪೇನಿಲ್ಲ, ಬದಲು ಯೋಗ್ಯವೇ, ಅದು ಪ್ರಾಸಂ

ಗಿಕವೂ ಹೌದು. ಬಾಂದಳದಲ್ಲಿ ನಿಂತ ದೇವತೆಗಳ 'ಹಿಡಿದನೆ ಪುರಿಗಣೆಯುಂ.......,' ಎಂದು ಹೊಗಳಿದರಷ್ಟೆ. ಹಾಗೆಯೆ ಯೋಧರು ಕರ್ಣನ ಒಂದೊಂದು ಗುಣವನ್ನು ಎತ್ತಿ ಪ್ರಶಂಸಿದ್ದರೆ ಅಸ್ವಾಭಾವಿಕವಲ್ಲ, ಅವನ ಪರಾಕ್ರಮ ಪ್ರತ್ಯಕ್ಷ ಕಂಡ ಮಾತು ಅವರಿಗೆ. ನನ್ನಿ ಚಾಗ ನಿಷ್ಠೆ ಸರ್ವರಿಗೂ ವೇದ್ಯ, ಕಾರಣ ಇಂಥ ಸಂದರ್ಭದಲ್ಲಿ ಭಟರೆಲ್ಲ ಬಾಯಿ ಮುಚ್ಚಿಕೊಂಡು ಕುಳಿತರೆಂದು ಭಾವಿಸುವದು ಆಯುಗಕ್ಕೇ ಅಪಮಾನ. ಈ ಪದ್ಯದಲ್ಲಿಯ ಒಂದೊಂದು ಮಾತನ್ನೂ ವೀರರು ಎತ್ತಿ ಕೊಂಡಾಡಿದರೆಂದು ಭಾವಿಸಿರಿ. 'ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನಂ', 'ಒಂದೇ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆ', 'ಕರ್ಣನೊಳಾರ್ ದೊರೆ', 'ಕರ್ಣನ ಏರು', 'ಕರ್ಣನ ಕಡುನನ್ನಿ', 'ಕರ್ಣನ ಅಂಕದ ಆಳವು', 'ಕರ್ಣನ ಚಾಗ' ಎಂದು ಎಲ್ಲರೂ ಒಂದೊಂದು ಗುಣವೆತ್ತಿ ಪಾಡಿದರೆಂದು ಭಾವಿಸಿ. ಈ ಕರ್ಣನ ಪ್ರಶಂಸಾ ವೃತ್ತಾಂತದಲ್ಲಿ ಭಾರತ ರಣರಂಗ ಮುಳುಗಿ ಕರ್ಣ ರಸಾಯನವಾಯಿತೆಂದು ಹೇಳಿದರೆ ತಪ್ಪೇನು ?

"ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನಂ" ಎಂಬಲ್ಲಿಯೂ ಈ ಮಹಾ ಭಾರತ ಯುದ್ಧದಲ್ಲಿ ಅಳಿದ ಮಹಾ ವೀರರಲ್ಲಿ ಬೇರಾರನ್ನು ನೆನೆಯದಿರಿ. ಒಂದೇ ಚಿತ್ತದಿಂ ನೆನೆದಲ್ಲಿ ಕರ್ಣನನ್ನು ನೆನೆ ಎಂದು ಹೇಳಿದ್ದರೆ, ಕವಿಯ ಅಭಿಪ್ರಾಯಕ್ಕೆ, ಮನದಾಶಯಕ್ಕೆ ಹೆಚ್ಚು ಸಮೀಪವಾದೀತು. ಗುಣಾರ್ಣವ ಅರಿಗ ನೀನಾಗಿಯೇ ರಚಿಸಿದ ಸಮಸ್ತ ಭಾರತದಲ್ಲಿ ಇನ್ನಾರನ್ನೂ ನೆನೆಯದೆ ಕರ್ಣನನ್ನೇ ನೆನೆಯಿರೆಂದು ಕವಿ ಹೇಳುತ್ತಾನೆಂದು ಅರ್ಥ ಮಾಡುವದು ಎಷ್ಟರ ಮಟ್ಟಿಗೆ ಸಮಂಜಸ? ಆಲೋಚಿಸಬೇಕು. ಇಷ್ಟೊಂದು ಕರ್ಣನ ಬಗೆಗೆ ಕವಿಯಲ್ಲಿ ಅಭಿಮಾನವಿದ್ದುದೇ ನಿಜವಾದರೆ ಈ ಹಿಂದೆ ಹೇಳಿದ ಪ್ರಸಂಗಗಳಲ್ಲಿ ಕರ್ಣನ ಪಾತ್ರಕ್ಕೆ ಕುಂದು ತರುವ ಸನ್ನಿವೇಶಗಳನ್ನಾಗಲಿ, ಅವಹೇಳನೆಯ ಮಾತುಗಳನ್ನಾಗಲಿ ಪಂಪಕವಿ ಒತ್ತಿ ಒತ್ತಿ ಹೇಳಬೇಕಾಗಿರಲಿಲ್ಲ. ಈ ಮಾತನ್ನು ಕರ್ಣನು ಅಳಿದ ಮೇಲೆ ಹೇಳಿದ್ದಾನೆಂಬುದು ಅತ್ಯಂತ ಮುಖ್ಯಮಾತು. ಅದರ ಮಿತಿಯಲ್ಲಿಯೆ ಅರ್ಥ ಮಾಡಬೇಕು. ಇಡೀ ಕಾವ್ಯದಲ್ಲಿಯ ಕವಿಯ ಆಶಯವನ್ನು ಅಲಕ್ಷಿಸಿದರೆ ಅದು ಕವಿಗೇ ಅನ್ಯಾಯ ಮಾಡಿದಂತೆ. ಇದರರ್ಥ ಕವಿಗೆ ಕರ್ಣನ ಬಗೆಗೆ ಸದ್ಭಾವನೆ ಇಲ್ಲವೆಂದಲ್ಲ. ಅವನ ವೀರ ಗುಣ, ದಾನ ಗುಣ, ಸ್ನೇಹಗಳನ್ನು ಒಂದಲ್ಲ ಹತ್ತು ಸಲ ಹೊಗಳಿ ಹಾಡಿದ್ದಾನೆ. ಕಾವ್ಯದಲ್ಲಿ ಆಯಾ ಪಾತ್ರಗಳಿಗೆ ಯೋಗ್ಯತೆಯನ್ನು ಅರಿತು ಸ್ಥಾನವೀವ ತಾರತಮ್ಯ ಜ್ಞಾನವೇ ಕವಿಗಿಲ್ಲ ಎಂದು ಹೇಳಬಾರದು. ಕರ್ಣನ ಸ್ಥಾನ ಕರ್ಣನಿಗೆ ಕೊಟ್ಟಿದ್ದಾನೆಯೇ ಹೊರತು ಗುಣಾರ್ಣವನ ತಲೆಯ ಮೇಲೆ ಕರ್ಣನನ್ನು ಕೂಡಿಸಿಲ್ಲವೆಂಬುದನ್ನು ತಿಳಿಯಬೇಕು. ಕನ್ನಡನಾಡಿನ ವಿದ್ವಾಂಸರು ಈ ವಿಚಾರವನ್ನು ಇನ್ನೂ ಆಳವಾಗಿ ಆಲೋಚಿಸಬೇಕು, ವಿಮರ್ಶಿಸಬೇಕೆಂಬುದೇ ಈ ಲೇಖಕನ ಸದಿಚ್ಛೆ.

ಶಕ್ತಿವಿಶಿಷ್ಟಾದ್ವೈತ-ದರ್ಶನ

ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು
ಶ್ರೀ ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳು
ಮೂರು ಸಾವಿರ ಮಠ, ಹುಬ್ಬಳ್ಳಿ

ಶಕ್ತಿವಿಶಿಷ್ಟಾದ್ವೈತವೆಂದರೆ; ಶಕ್ತಿವಿಶಿಷ್ಟ ಜೀವನಿಗೂ ಶಕ್ತಿವಿಶಿಷ್ಟ ಶಿವನಿಗೂ ಸಾಮರಸ್ಯವೆಂದರ್ಥವಾಗುತ್ತದೆ, "ಶಕ್ತಿಶ್ಚ ಶಕ್ತಿಶ್ಚ ಶಕ್ತಿ ತಾಭ್ಯಾಂ ವಿಶಿಷ್ಟೌ ಜೀವೇಶೌತಯೋಃ ಅದ್ವೈತಂ"ಶಕ್ತಿವಿಶಿಷ್ಟಾದ್ವೈತಂ ಎಂದು ಪೂರ್ವಾಚಾರ್ಯರು ಶಕ್ತಿವಿಶಿಷ್ಟಾದ್ವೈತ ಪದದ ವ್ಯುತ್ಪತ್ತಿಯನ್ನು ತೋರಿಸಿರುವರು. ಶಕ್ತಿಯು ಚಿದಚಿದಾತ್ಮಶಕ್ತಿ, ಸೂಕ್ಷ್ಮಚಿದಚಿದಾತ್ಮ ಶಕ್ತಿಯೆಂದು ಎರಡು ಪ್ರಕಾರವಾಗಿರುವುದು, ಜೀವನು ಸ್ಥೂಲಚಿದಚಿದಾತ್ಮಶಕ್ತಿಯುಕ್ತನಾಗಿರುವನು. ಶಿವನು ಸೂಕ್ಷ್ಮ ಚಿದಚಿದಾತ್ಮ ಶಕ್ತಿಯುಕ್ತನಾಗಿರುವನು. ಜೀವನ ಸ್ಥೂಲಚಿಚ್ಛಕ್ತಿಯು ಕಿಂಚಿಜ್ಞಾತಾ ರೂಪವಾಗಿರುವದು. ಸ್ಥೂಲಾಚಿಚ್ಛಕ್ತಿಯು ಕಿಂಚಿತ್ಕರ್ತೃತಾ ರೂಪವಾಗಿರುವದು. ಶಿವನ ಸೂಕ್ಷ್ಮ ಚಿಚ್ಛಕ್ತಿಯು ಸರ್ವತಾ ರೂಪವಾಗಿರುವದು. ಈ ದ್ವಿವಿಧ ಶಕ್ತಿಗಳಿಂದ ಯುಕ್ತರಾದ ಜೀವ ಮತ್ತು ಶಿವ ಇವರ ಅದ್ವೈತವೇ (ಸಾಮರಸ್ಯವೇ) ಶಕ್ತಿವಿಶಿಷ್ಟಾದ್ವೈತವೆನಿಸುವದು. ಶಕ್ತಿಯು ಪರಶಿವನಲ್ಲಿ ಅವಿನಾಭವ ಸಂಬಂಧದಿಂದಿದ್ದು ನಿತ್ಯವೆನಿಸುವದು, ಇದೇ ವಿಷಯವನ್ನು ಶ್ವೇತಾಶ್ವತರ ಶ್ರುತಿಯು

> ಪರಾಸ್ಯ ಶಕ್ತಿರ್ವಿವಿಧೈವಶ್ರೂಯತೇ।
> ಸ್ವಾಭಾವಿಕೀ ಜ್ಞಾನಬಲ ಕ್ರಿಯಾ ಚ॥

ಎಂಬ ವಾಕ್ಯದಿಂದ ಸಾರುತ್ತಿರುವುದು. ಈ ಮಂತ್ರಾರ್ಥವನ್ನು ಪರ್ಯಾಲೋಚಿಸಿದರೆ, ಪರಬ್ರಹ್ಮದಲ್ಲಿ ಶಕ್ತಿಯು ಸ್ವಭಾವಸಿದ್ಧವಾಗಿರುವದೆಂದೂ, ಈ ಶಕ್ತಿಯು ಜ್ಞಾನಶಕ್ತಿ, ಕ್ರಿಯಾಶಕ್ತ್ಯಾದಿ ರೂಪದಿಂದ ನಾನಾ ಪ್ರಕಾರವಾಗಿರುವದೆಂದೂ ಸಿದ್ಧವಾಗಿರುತ್ತದೆ. "ಸ್ವಾಭಾವಿಕೀ" ಎಂಬ ಪದವು ಶಕ್ತಿಯ ನಿತ್ಯತ್ವವನ್ನು ಘಂಟಾಘೋಷವಾಗಿ ಹೇಳುತ್ತಿರುವದು. ಇದೇ ಶ್ರುತಿಯ ಮತ್ತೊಂದೆಡೆಯಲ್ಲಿ

> ಯದಾ ತಮಸ್ತನ್ನ ದಿವಾ ನ ರಾತ್ರಿ ರ್ನ ಸನ್ನಚಾಸಚ್ಛಿವ ಏವ ಕೇವಲಃ।
> ತದಕ್ಷರಂ ತತ್ಸವಿತುರ್ವರೇಣ್ಯಂ ಪ್ರಜ್ಞಾಚ ತಸ್ಯಾಃ ಪ್ರಸೃತಾ ಪುರಾಣೀ॥

ಎಂಬ ವಾಕ್ಯದಿಂದ ಪ್ರತಿಪಾದಿಸುತ್ತಿರುವುದು. ಪುರಾಣೀ ಅನಾದಿ ಸಂಸಿದ್ಧವಾದ, ಪ್ರಜ್ಞಾ ಚಿಚ್ಛಕ್ತಿಯು ತ ಪರಶಿವ ಬ್ರಹ್ಮದಿಂದ ಪ್ರಸೃತಾ ಕ್ರಿಯಾಶಕ್ತಿ ಅನಾದ್ಯತತರೂಪದಿಂದ

ಪ್ರಸೃತವಾಯಿತೆಂದು ಬೋಧಿಸುತ್ತಿರುವದು. ಈ ಶ್ರುತಿ ವಾಕ್ಯದಲ್ಲಿ ಶಕ್ತಿ ವಿಕಸನವು ಸ್ಫುಟವಾಗಿ ತೋರಿಸಲ್ಪಟ್ಟಿರುವದು.

ಮಾಯಾಂ ತು ಪ್ರಕೃತಿಂ ವಿದ್ಯಾನ್ಮಾಯಿನಂ ತು ಮಹೇಶ್ವರಂ॥

ಎಂಬ ಮಂತ್ರವೂ ಸಹ ಪರಮಾತ್ಮನು ಶಕ್ತಿ ವಿಶಿಷ್ಟನಾಗಿರುವನೆಂದು ಬೋಧಿಸುತ್ತಿರುವದು. ಪೂರ್ವಾಚಾರ್ಯರು ಮಾಯಾಶಬ್ದಕ್ಕೆ ಮಂ ಶಿವಂ ಅಯತಿ ಸ್ವಭಾವತಃ ಪ್ರಾಪ್ನೋತೀತಿ ಮಾಯಾ ಎಂದು ವಿಗ್ರಹ ಮಾಡಿರುವದರಿಂದ ಈ ಮಾಯೆಯು ಅದ್ವೈತಿಗಳು ಹೇಳಿರುವಂತೆ ಮೂಲಾವಿದ್ಯಾರೂಪಮಾಯೆಯಾಗಿರದೆ ವಿಮರ್ಶಶಕ್ತಿ ರೂಪಮಾಯೆಯಾಗಿರುವವೆಂದು ತಿಳಿಯಬೇಕು. ಈ ಮಂತ್ರಾಭಿಪ್ರಾಯವನ್ನು ಸಿದ್ಧಾಗಮವು :

ಮಂ ಶಿವಂ ಪರಮಂ ಬ್ರಹ್ಮ ಪ್ರಾಪ್ನೋತೀತಿ ಸ್ವಭಾವತಃ ।
ಮಾಯೇತಿ ಪ್ರೋಚ್ಯತೇ ಲೋಕೇ ಬ್ರಹ್ಮನಿಷ್ಠಾ ಸನಾತನೀ ॥

ಎಂಬ ಶ್ಲೋಕದಿಂದ ಬೋಧಿಸುತ್ತಿರುವದು.

ಮತ್ತೊಂದೆಡೆಯಲ್ಲಿ—

In the Shiva Siddhant "Shakti is not maya but an imporrtant factor eternally associated with Shiva, without the Cooperation of which Shiva is Powerless and cannot bring into existence the Universe hidden within Him."
ಎಂದು ಮುಂತಾಗಿ ಶಿವಜ್ಞಾನ ಬೋಧದ ಸಾರವನ್ನೇ ಇಲ್ಲಿ ಹೇಳಲಾಗಿದೆ.

ಯಜುರ್ವೇದ ತೈತ್ತಿರೀಯ ಸಂಹಿತೆಯು—

ಅಖುಸ್ತೇ ರುದ್ರ ಪ್ರಶುಂಸ್ತ ಜುಷಸ್ವೇಕ್ಷತೇ ರುದ್ರಭಾಗಃ।
ಸಹಸ್ವಸ್ರಾsಂಬಿಕ-ಯಾ ತಂ ಜುಷಸ್ವ॥

ಎಂಬೀ ಮಂತ್ರದಿಂದ ಶಕ್ತಿನಿತ್ಯತ್ವವನ್ನು ಪ್ರತಿಪಾದಿಸುತ್ತಿರುವದು, ಈ ಮಂತ್ರದಲ್ಲಿರುವ "ಸ್ವಸ್ರಾ ಅಂಬಿಕಯಾ" ಎಂಬ ಪದಗಳನ್ನು ಪರ್ಯಾಲೋಚಿಸಿದರೆ ಪರಮಾತ್ಮನಲ್ಲಿ ಶಕ್ತಿಯು ಸ್ವಾಭಾವಿಕವಾಗಿರುವದೆಂದು ಸಿದ್ಧವಾಗುವದು.

"Shakti is not different from Shiva but has its source in Shiva and in fact in the Power of Shiva and becomes the s urce of Maya or cosmic matter" ಎಂಬುದಾಗಿ ಕಾಶ್ಮೀರ ಶೈವಸಿದ್ಧಾಂತದ ಭಾವವನ್ನೇ ಇಲ್ಲಿ ಚಿತ್ರಿಸಲಾಗಿದೆ.

"ನಮಃ ಸೋಮಾಯ ಚ ರುದ್ರಾಯ ಚ" ಎಂಬ ಶ್ರೀ ರುದ್ರ ಮಂತ್ರವೂ ಸಹ ಪರಮೇಶ್ವರನು ಉಮಾ ರೂಪ ಶಕ್ತಿಯುಕ್ತನಾಗಿರುವನೆಂದು ಬೋಧಿಸಿರುತ್ತದೆ. ಇದೇ ಅಭಿಪ್ರಾಯವನ್ನು ಕೈವಲ್ಯ ಶ್ರುತಿಯು—

"ಉಮಾ ಸಹಾಯಂ ಪರಮೇಶ್ವರಂ ಪ್ರಭುಂ"

ಎಂಬ ಮಂತ್ರದಿಂದ ಸಮರ್ಥಿಸುತ್ತಿರುವದು. ಇದೇ ರೀತಿಯಾಗಿ ಅನೇಕ ಶ್ರುತಿವಾಕ್ಯಗಳು ಶಕ್ತಿನಿತ್ಯತ್ವವನ್ನು ಪ್ರತಿಪಾದಿಸುತ್ತಿರುವವು.

ಯಥಾಚಂದ್ರೇ ಸ್ಥಿರಾ ಜ್ಯೋತ್ಸ್ನಾ ವಿಶ್ವ ವಸ್ತು ಪ್ರಕಾಶಿನೀ।
ಕಥಾ ಶಕ್ತಿರ್ವಿಮರ್ಶಾಖ್ಯಾ ಪ್ರಕಾಶೇ ಬ್ರಹ್ಮಣಿಸಿರಾ॥
ಅಂತಃಕರಣರೂಪೇಣ ಜಗದಂಕಿತರೂಪತಃ।
ಯಸ್ಮಿನ್ ವಿಭಾತಿ ಚಿಚ್ಛಕ್ತಿ ರ್ಬ್ರಹ್ಮಭೂತಃ ಸ ಉಚ್ಯತೇ॥

ಸಮಸ್ತ ವಸ್ತುಗಳನ್ನು ಪ್ರಕಾಶಪಡಿಸುವ ಚಂದ್ರಿಕೆಯು ಚಂದ್ರನಲ್ಲಿ ಹೇಗೆ ಸ್ಥಿರವಾಗಿರುವದೋ, ಹಾಗೆಯೇ ಚರಚರಾತ್ಮಕ ಸಕಲ ಪದಾರ್ಥಗಳನ್ನೂ ಪ್ರಕಾಶಪಡಿಸುವ ವಿಮರ್ಶಶಕ್ತಿಯೂ ಪ್ರಕಾಶಸ್ವರೂಪವಾದ ಪರಬ್ರಹ್ಮದಲ್ಲಿ ಸ್ಥಿರವಾಗಿರುವದೆಂದೂ ವಿಮರ್ಶಶಕ್ತಿಯು ಮೂಲಾಹಂಕಾರ ರೂಪದಿಂದಲೂ ಸೂಕ್ಷ್ಮ ಜಗದ್ರೂಪದಿಂದಲೂ ಯಾವನಲ್ಲಿ ಪ್ರಕಾಶಿಸುತ್ತಿರುವದೊ ಆವನೇ ಪರಬ್ರಹ್ಮ ಸ್ವರೂಪನೆಂದೂ, "ಸಿದ್ಧಾಂತ ಶಿಖಾಮಣಿ"ಯಲ್ಲಿ ಸ್ಫುಟವಾಗಿ ಪ್ರತಿಪಾದಿಸಲ್ಪಟ್ಟಿರುವದು.

ಲೋಕವಿಖ್ಯಾತನಾದ ಕಾಲಿದಾಸ ಮಹಾಕವಿಯು ತನ್ನಿಂದ ರಚಿಸಲ್ಪಟ್ಟ ರಘುವಂಶ ಕಾವ್ಯದ ಆರಂಭದಲ್ಲಿ—

"ವಾಗರ್ಥಾವಿವ ಸಂಪೃಕ್ತೌ ವಾಗರ್ಥಪ್ರತಿಪತ್ತಯೇ।
ಜಗತಃ ಪಿತರೌ ವಂದೇ ಪಾರ್ವತೀಪರಮೇಶ್ವರೌ॥

ಎಂದು ಮಂಗಲವನ್ನಾಚರಿಸಿ, ಈ ಮಂಗಲ ಶ್ಲೋಕದಲ್ಲಿ ಪಾರ್ವತೀ ಪರಮೇಶ್ವರರು ಶಬ್ದಾರ್ಥದಂತೆ ನಿತ್ಯ ಸಂಬಂಧದಿಂದಿರುವರೆಂದು ಉಲ್ಲೇಖಿಸಿರುತ್ತಾನೆ. ಪಾರ್ವತಿ ಪರಮೇಶ್ವರರೆಂದರೆ ಶಕ್ತಿ-ಶಿವರೆಂದರ್ಥ. ಶಬ್ದವನ್ನು ಬಿಟ್ಟು ಅರ್ಥವೂ, ಅರ್ಥವನ್ನು ಬಿಟ್ಟು ಶಬ್ದವೂ ಹೇಗೆ ಇರುವದಿಲ್ಲವೋ, ಹಾಗೆಯೇ ಶಿವನನ್ನು ಬಿಟ್ಟು ಶಕ್ತಿಯೂ ಶಕ್ತಿಯನ್ನು ಬಿಟ್ಟು ಶಿವನೂ ಇರುವದಿಲ್ಲವೆಂದು ಈ ಮಹಾಕವಿಯ ಅಭಿಪ್ರಾಯವಾಗಿದೆ.

ವೀರಶೈವಾನಂದ ಚಂದ್ರಿಕೆಯಲ್ಲಿಯೂ ಸಹ—
ನ ಶಿವೇನ ವಿನಾ ಶಕ್ತಿರ್ನ ಶಕ್ತಿರಹಿತಃ ಶಿವಃ ।
ಪುಷ್ಪಗಂಧವದನ್ಯೋನ್ಯಂಮಾರುತಾಂಬರಯೋರಿವ ॥

ಇದೇ ಭಾವವು ವ್ಯಕ್ತವಾಗಿದೆ.

ವೀರಶೈವಸಿದ್ಧಾಂತದಲ್ಲಿ ಬ್ರಹ್ಮವು ನಿರ್ವಿಶೇಷವಾಗಿರದೆ ಸವಿಶೇಷವಾಗಿರುವದು, ಪರಬ್ರಹ್ಮವು ಶಕ್ತಿವಿಶಿಷ್ಟವಾದುದರಿಂದ ಸವಿಶೇಷವೆನಿಸಿಕೊಳ್ಳುವದು. ಬ್ರಹ್ಮವು ಸವಿಶೇಷವಾದುದರಿಂದಲೇ ಚರಾಚರಾತ್ಮಕ ಜಗದುತ್ಪತ್ತಿಕಾರಣೀಭೂತವಾಗಿರುವದು. ಶಕ್ತಿವಿಶಿಷ್ಟ ಬ್ರಹ್ಮದಿಂದುತ್ಪನ್ನವಾದ ಜಗತ್ತು ಕೂಡಾ ಶಕ್ತಿವಿಶಿಷ್ಟವಾಗುವದು. ಈ ಜಗತ್ತಿನಲ್ಲಿರತಕ್ಕ ಪ್ರತಿಯೊಂದು ಪದಾರ್ಥವನ್ನು ಪರ್ಯಾಲೋಚಿಸಿದ್ದಾದರೆ ಪ್ರತಿಯೊಂದು ಪದಾರ್ಥದಲ್ಲಿಯೂ ಒಂದೊಂದು ವಿಧವಾದ ಶಕ್ತಿಯಿರುವದಾಗಿ ಕಂಡು ಬರುವದು. ಪೃಥ್ವಿಯಲ್ಲಿ ಧಾರಣಶಕ್ತಿ, ಜಲದಲ್ಲಿ ಆಪ್ಯಾಯನ ಶಕ್ತಿ, ತೇಜಸ್ಸಿನಲ್ಲಿ ಉಜ್ವಲನಶಕ್ತಿ ವಾಯುವಿನಲ್ಲಿ ಸ್ಪಂದನ ಶಕ್ತಿ, ಆಕಾಶದಲ್ಲಿ ವ್ಯಾಪನಶಕ್ತಿ, ಆತ್ಮನಲ್ಲಿ ಬುದ್ಧಿಶಕ್ತಿಯಿರುವದಲ್ಲದೆ ವೃಕ್ಷಾದಿಗಳಲ್ಲಿ ಜಲಾಕರ್ಷಣಾದಿಶಕ್ತಿಗಳು, ಅಗ್ನ್ಯಾದಿಗಳಲ್ಲಿ ದಾಹಾದಿಶಕ್ತಿಗಳು, ವನಸ್ಪತಿಗಳಲ್ಲಿ ಮಹಾರೋಗಗಳನ್ನು ಗುಣಪಡಿಸುವ ಶಕ್ತಿಯು. ಪಾದರಸದಲ್ಲಿ ತಾಮ್ರವನ್ನು ಸುವರ್ಣವನ್ನಾಗಿ ಮಾಡುವ ಶಕ್ತಿಯು, ವಜ್ರದಲ್ಲಿ ಶಿಲೆಯನ್ನು ಭೇದಿಸುವ ಶಕ್ತಿಯು, ಮಣಿ-ಮಂತ್ರಾದಿಗಳಲ್ಲಿ ವಿಷಬಾಧೆಯನ್ನು, ಭೂತ-ಪ್ರೇತ-ಪಿಶಾಚಾದಿಗಳಿಂದುಂಟಾಗುವ ಬಾಧೆಯನ್ನು ಪರಿಹರಿಸುವ ಶಕ್ತಿಯು, ಧ್ವನ್ಯಾಕರ್ಷಕ-ಯಂತ್ರ (ರೇಡಿಯೋ) ದಲ್ಲಿ ಧ್ವನಿಯನ್ನು ಆಕರ್ಷಿಸಿ ಅದನ್ನು ವಿಸ್ತಾರಗೊಳಿಸುವ ಶಕ್ತಿಯು ವಿದ್ಯುತ್ತಿನಲ್ಲಿ ನಾನಾವಿಧ ಯಂತ್ರಚಾಲನ ಶಕ್ತಿಯು, ಸೂಜಿಗಲ್ಲಿನಲ್ಲಿ ಸೂಜಿಯನ್ನು ಆಕರ್ಷಿಸುವ ಶಕ್ತಿಯು ಇದೇ ರೀತಿಯಾಗಿ ಬ್ರಹ್ಮಸೃಷ್ಟ್ಯಂತರ್ಗತ ಸಕಲ ಪದಾರ್ಥಗಳಲ್ಲಿಯೂ ಒಂದೊಂದು ವಿಧವಾದ ಶಕ್ತಿಯು ಇರುವದು ಲೋಕದಲ್ಲಿ ಪ್ರತಿಯೊಬ್ಬನಿಗೂ ಪ್ರತ್ಯಕ್ಷವಾಗಿ ಕಂಡುಬರುವದಷ್ಟೇ? ಇದರಿಂದ ಸಕಲ ಚರಾಚರಾತ್ಮಕವಾದ ಜಗತ್ತು ಶಕ್ತಿವಿಶಿಷ್ಟವಾಗಿರುವದೆಂದೂ ಇಂಥ ಶಕ್ತಿವಿಶಿಷ್ಟ ಜಗತ್ತನ್ನು ನಿರ್ಮಿಸಿದ ಬ್ರಹ್ಮವು ಅರ್ಥಾತ್ ಶಕ್ತಿವಿಶಿಷ್ಟವಾದುದೆಂದೂ ಸರ್ವರಿಗೂ ಅನುಭವದಿಂದ ವೇದ್ಯವಾಗುವದು. ಸತ್, ಚಿತ್, ಆನಂದ ಸ್ವರೂಪವಾದ "ಪರಬ್ರಹ್ಮವೂ" ಅಸ್ಮಿ ಪ್ರಕಾಶೇ ನಂದಾಮಿ ಅಂದರೆ ನಾನು ಇದ್ದೇನೆ ಪ್ರಕಾಶಿಸುತ್ತೇನೆ: ಆನಂದಿಸುತ್ತೇನೆ ಎಂಬ ಅನುಭವದಿಂದ ಕೂಡಿರುವದಷ್ಟೇ? ಈ ಅನುಭವವೇ ಪರಬ್ರಹ್ಮದ ವಿಮರ್ಶಶಕ್ತಿ.

ಈ ಅನುಭವವು ಆ ಪರಬ್ರಹ್ಮದಲ್ಲಿ ಇರದಿದ್ದರೆ ಆ ಬ್ರಹ್ಮಕ್ಕೆ ಪ್ರಕಾಶರೂಪವಾದ ಸ್ಫಟಿಕಶಿಲೆಯಂತೆ ಜಡವೆಂದು ಹೇಳಬೇಕಾಗುವ ಪ್ರಸಂಗ ಬರಬಹುದು. ಸೌಂದರ್ಯವಿಶಿಷ್ಟನಾದ ಅಂಧನಿಗೆ ತನ್ನ ಸೌಂದರ್ಯವನ್ನು ತಿಳಿಯುವ ಶಕ್ತಿ ಇಲ್ಲದಿರುವದರಿಂದ ಅವನಿಗೆ ಅವನ ಸೌಂದರ್ಯವು ವ್ಯರ್ಥವಾಗುವಂತೆ, ಬ್ರಹ್ಮಕ್ಕೆ ತನ್ನ ಸಚ್ಚಿದಾನಂದ ಸ್ವರೂಪವೂ ವ್ಯರ್ಥವಾಗುವುದಷ್ಟೇ? ಆದುದರಿಂದ ಬ್ರಹ್ಮನಲ್ಲಿ ಸಚ್ಚಿದಾನಂದ ರೂಪಾನುಭವ ಶಕ್ತಿಯನ್ನು ಒಪ್ಪಲೇಬೇಕಾಗುವದು. ಇದರಿಂದ ಬ್ರಹ್ಮವು ಶಕ್ತಿವಿಶಿಷ್ಟ ಸಿದ್ಧವಾಗುವುದು. ಇಂತಹ ಶಕ್ತಿ ವಿಶಿಷ್ಟ ಪರಬ್ರಹ್ಮವು "ಅಥಾತೋ ಬ್ರಹ್ಮಜಿಜ್ಞಾಸಾ" "ಚೈತನ್ಯಮಾತ್ಮಾ" ಇತ್ಯಾದಿ ಬ್ರಹ್ಮಸೂತ್ರ, ಶಿವಸೂತ್ರಮಯ ವೇದಾಂತ ಶಾಸ್ತ್ರ ಪ್ರತಿಪಾದ್ಯವಾಗಿರುವದು.

ಸತ್-ಚಿತ್, ಆನಂದ, ನಿತ್ಯ, ಪರಿಪೂರ್ಣ ಎಂಬ ಪಂಚಲಕ್ಷಣ ಲಕ್ಷಿತವಾದ ಪರಶಿವ ಬ್ರಹ್ಮದಲ್ಲಿ ಅವಿರ್ಭಾವ ಸಂಬಂಧದಿಂದಿರುವ ವಿಮರ್ಶ ಶಕ್ತಿಯು ಸ್ಫುರಣವೇ ಮೂವತ್ತಾರು ತತ್ವಗಳ ರೂಪವಾಗಿ ಪರಿಣಮಿಸುತ್ತಿದೆ. ಆ ಮುವತ್ತಾರು ತತ್ವಗಳು- ೧ ಶಿವ, ೨ ಶಕ್ತಿ, ೩ ಸದಾಶಿವ, ೪ ಈಶ್ವರ, ೫ ಶುದ್ಧ ವಿದ್ಯಾ, ೬ ಮಾಯಾ, ೭ ಕಲಾ, ೮ ವಿದ್ಯಾ, ೯ ರಾಗ, ೧೦ ಕಾಲ, ೧೧ ನಿಯತಿ, ೧೨ ಪುರುಷ, ೧೩ ಪ್ರಕೃತಿ, ೧೪ ಬುದ್ಧಿ, ೧೫ ಅಹಂಕಾರ, ೧೬ ಮನಃ, ೧೭ ಶ್ರೋತ್ರ ೧೮ ತ್ವಕ್, ೧೯ ನೇತ್ರ, ೨೦ ಜಿಹ್ವಾ, ೨೧ ಘ್ರಾಣ, ೨೨ ವಾಕ್, ೨೩ ಪಾಣಿ, ೨೪ ಪಾದ, ೨೫ ಪಾಯು, ೨೬ ಉಪಸ್ಥ, ೨೭ ಶಬ್ದ, ೨೮ ಸ್ಪರ್ಶ, ೨೯ ರೂಪ, ೩೦ ರಸ, ೩೧ ಗಂಧ, ೩೨ ಆಕಾಶ, ೩೩ ವಾಯು, ೩೪ ಅಗ್ನಿ, ೩೫ ಜಲ, ೩೬ ಪೃಥ್ವಿ ಇವುಗಳು.

ಪ್ರಥಮದಲ್ಲಿ ಶಕ್ತಿವಿಶಿಷ್ಟ ಪರಶಿವ ಬ್ರಹ್ಮವು ಛಾಂದೋಗ್ಯೋಪನಿಷತ್ತಿನಲ್ಲಿ ಹೇಳಿದ “ಬಹು ಸ್ಯಾಂ ಪ್ರಜಾಯೇಯ” ೬-೨-೩ ಎಂಬ ಶ್ರುತ್ಯನುಸಾರವಾಗಿ ಸೃಷ್ಟಿ ಗನ್ಮುಖವಾಗಲು ತನ್ನಿಷ್ಟವಾದ ವಿಮರ್ಶಶಕ್ತಿಯೇ ಇಚ್ಛಾಶಕ್ತಿರೂಪವಾಗಿ ಪರಣಮಿ ಸುವದು.

“ಅನಾದಿ ನಿಧನಾತ್ ಶಾಂತಾತ್ ಶಿವಾತ್ ಪರಮಕಾರಣಾತ್।
ಇಚ್ಛಾಶಕ್ತಿರ್ವಿಗಪ್ಯಾಕ್ರಂತಾ ತತೋ ಜ್ಞಾನಂ ತತಃಕ್ರಿಯಾ॥
ತತೋsತ್ರನ್ನಾನಿ ಭೂತಾನಿ ಭುವನಾನಿ ಚತುರ್ದಶ”

ಎಂಬ ಶಿವಾಗಮ ವಚನಾನುಸಾರವಾಗಿ ಉತ್ಪತ್ತಿನಾಶರಹಿತವೂ, ಶಾಂತವೂ ಪರಮ ಕಾರಣವೂ ಆದ ಪರಶಿವ ಬ್ರಹ್ಮದಿಂದ ಮೊದಲು ಇಚ್ಛಾಶಕ್ತಿಯೂ, ಆ ಇಚ್ಛಾಶಕ್ತಿ ಯಿಂದ ಜ್ಞಾನಶಕ್ತಿಯೂ, ಕ್ರಿಯಾಶಕ್ತಿಯೂ ಅವಿರ್ಭವಿಸುವವು. ಆ ಇಚ್ಛಾ ಶಕ್ತಿಗೆ ಜ್ಞಾನಶಕ್ತಿಯು ಅಂತರಂಗವಾಗಿಯೂ, ಕ್ರಿಯಾಶಕ್ತಿಯು ಬಹಿರಂಗವಾಗಿಯೂ ಇರುವವು. ಪರಶಿವ ಬ್ರಹ್ಮವು ಜ್ಞಾನಶಕ್ತಿಯಲ್ಲಿ ಬೆರೆತು "ನಾನು ಸರ್ವಜ್ಞನು" ಎಂಬ ಅಭಿಮಾನವನ್ನು ಪಡೆಯಲು “ಶಿವತತ್ವ”ವೆನಿಸಿಕೊಳುವದು. ಜೇಡರ ಹುಳವು ಜಾಲಕ್ಕೆ ನಿಮಿತ್ತ ಕಾರಣವಾಗುವಂತೆ, ಈ ಶಿವತತ್ವಾತ್ಮಕವಾದ ಪರಶಿವ ಬ್ರಹ್ಮವೇಜ್ಞಾನ ವಿಶಿಷ್ಟತ್ವಾಕಾರದಿಂದ ಭಾವೀ ಪ್ರಪಂಚಕ್ಕೆ ನಿಮಿತ್ತಕಾರಣವಾಗುವದು.

ಪರಶಿವಬ್ರಹ್ಮವು ಕ್ರಿಯಾಶಕ್ತಿಯಲ್ಲಿ ಬೆರೆತು “ನಾನು ಸರ್ವಕರ್ತೃವು” ಎಂಬ ಅಭಿಮಾನವನ್ನು ಪಡೆಯಲು, “ಶಕ್ತಿತತ್ವ”ವೆನಿಸಿಕೊಳ್ಳುವುದು. ಜೇಡರ ಹುಳುವು ಜಾಲೋತ್ಪತ್ತಿಯೋಗ್ಯ ಶರೀರವಿಶೇಷ ವಿಶಿಷ್ಟತ್ವಾಕಾರದಿಂದ ಜಾಲಕ್ಕೆ ಉಪಾದಾನ ಕಾರಣವಾಗುವಂತೆ, ಈ ಶಕ್ತಿತತ್ವಾತ್ಮಕವಾದ ಪರಶಿವ ಬ್ರಹ್ಮವೇ ಕ್ರಿಯಾವಿಶಿಷ್ಟತ್ವಾ ಕಾರದಿಂದ ಭಾವೀ ಪ್ರಪಂಚಕ್ಕೆ ಉಪಾದಾನಕಾರಣವೂ ಆಗುವದು, ಪರಶಿವ ಬ್ರಹ್ಮ

ವೊಂದೇ ಪ್ರಪಂಚಕ್ಕೆ ಅಭಿನ್ನನಿಮಿತ್ತೋಪಾದಾನ ಕಾರಣವಾಗುವದೆಂಬುದನ್ನು ಮುಂಡಕ ಶ್ರುತಿಯು—

ಯಥೋರ್ಣನಾಭಃ ಸೃಜತೇ ಗೃಹ್ಣೀತೇ ಚ (೧-೧-೩)

ಎಂಬೀ ವಾಕ್ಯದಿಂದ ಪ್ರತಿಪಾದಿಸುತ್ತಿರುವದು.

ಈ ಶಕ್ತಿತತ್ತ್ವವು ಇಚ್ಛಾಶಕ್ತಿಗೆ ಅಂತರಂಗವಾದ ಜ್ಞಾನಶಕ್ತಿಯಲ್ಲಿ ಪ್ರವೇಶಿಸಿ, ಜಲಾಧಿವಾಸದಿಂದ ಅಂಕುರೋನ್ಮುಖವಾದ ಕಡಲೆಯಂತೆ ಉಬ್ಬಿ, ಅಂಕುರಾಯಮಾಣವಾದ ಭಾವೀ ಪ್ರಪಂಚವನ್ನು ಕುರಿತು "ಅಹಮಿದಂ" –"ನಾನು ಈ ಪ್ರಪಂಚವು" ಎಂದು ಅಭಿಮಾನವನ್ನು ಪಡೆಯಲು "ಸದಾಶಿವತತ್ತ್ವ"ವೆನಿಸಿಕೊಳ್ಳುವದು. ಈ ಇಚ್ಛಾಶಕ್ತಿಗೆ ಬಹಿರಂಗವಾದ ಕ್ರಿಯಾಶಕ್ತಿಯಲ್ಲಿ ಪ್ರವೇಶಿಸಿ, ಸುಕ್ಷೇತ್ರದಲ್ಲಿ ಬಿತ್ತಿದ ಸುಬೀಜದಂತೆ ಅಂಕುರಿಸಿ, ಅಂಕುರಿತವಾದ ಪ್ರಪಂಚವನ್ನು ಕುರಿತು– "ಅಹಮಿದಂ" "ನಾನು ಈ ಪ್ರಪಂಚವು" ಎಂದು ಅಭಿಮಾನವನ್ನು ಪಡೆಯಲು "ಈಶ್ವರ ತತ್ತ್ವ"ವೆನಿಸಿಕೊಳ್ಳುವದು.

ಈ ಶಕ್ತಿತತ್ತ್ವವು, ಸಾಗರತರಂಗನ್ಯಾಯದಂತೆ (ಸಮುದ್ರಕ್ಕೂ ಸಮುದ್ರದಲ್ಲಿರುವ ತೆರೆಗಳಿಗೂ ಅಭೇದವಿರುವಂತೆ) ಅಹಮಿದಂ "ನಾನು" ಎಂಬ ಅಹಂಕಾರಕ್ಕೂ "ಇದು" ಎಂಬ ಪ್ರಪಂಚಕ್ಕೂ ಅಭೇದಜ್ಞಾನವನ್ನು ಪಡೆಯಲು "ಶುದ್ಧವಿದ್ಯಾತತ್ತ್ವ"ವೆನಿಸಿಕೊಳ್ಳುವದು.

ಶುದ್ಧವಿದ್ಯಾತತ್ತ್ವರೂಪವಾಗಿ ಪರಿಣಮಿಸಿರುವ ಈ ಶಕ್ತಿತತ್ತ್ವವು ಮಯೂರಾಂಡರಸನ್ಯಾಯದಂತೆ (ನವಿಲಿನ ತತ್ತಿಯರಸದಲ್ಲಿ ಪಾದ-ಪಕ್ಷ ವರ್ಣ ವೈಚಿತ್ರ್ಯಾದಿಗಳು ವಿಭಾಗ ರೂಪಿತವಾಗಿ ಸೂಕ್ಷ್ಮದಿಂದಿರುವಂತೆ ತನ್ನಲ್ಲಡಕವಾಗಿರುವ ಪ್ರಪಂಚ ನಿರ್ಮಾಣ ಕಾರಣೀಭೂತ ಸೂಕ್ಷ್ಮ ಪದಾರ್ಥಗಳಲ್ಲಿ ಅನ್ಯೋನ್ಯಾಭಾವರೂಪ ಭೇದ ಬುದ್ಧಿಪ್ರಾಧಾನ್ಯದಿಂದ "ಮಾಯಾತತ್ತ್ವ"ವೆನಿಸಿಕೊಳ್ಳುವದು.

ಕಲಾ-ವಿದ್ಯಾ-ರಾಗ-ಕಾಲ-ನಿಯತಿಗಳೆಂಬ ಪಂಚತತ್ತ್ವಗಳು ಪುರುಷನಿಗೆ ಕಂಚುಕರೂಪವಾಗಿರುವುದರಿಂದ ಮೊದಲು ಕಂಚುಕಿಯಾದ ಪುರುಷತತ್ತ್ವವನ್ನು ನಿರೂಪಿಸಿ ಬಳಿಕ ಕಾಲಾದಿ ಪಂಚತತ್ತ್ವಗಳನ್ನು ನಿರೂಪಿಸುವುದಾಗುವದು.

ಕಾಷ್ಟಯೋಗದಿಂದ ಅಗ್ನಿಕಣಗಳು ಆವಿರ್ಭವಿಸುವಂತೆ ಪರಶಿವನ ಇಚ್ಛಾಶಕ್ತಿಯ ಯೋಗದಿಂದ ಆವಿರ್ಭವಿಸುವ ಶಿವಾಂಶವೇ ಮಾಯಾಶಕ್ತಿಯಲ್ಲಿ ಪ್ರವೇಶಿಸಿ, "ಪುರುಷತತ್ತ್ವ"ವೆನಿಸಿಕೊಳ್ಳುವದು. ಈ ಪುರುಷತತ್ತ್ವಕ್ಕೆ ಮಾಯಾಮಲ ಸಂಬಂಧವುಂಟಾಗುವದರಿಂದ ಆತ್ಮನಲ್ಲಿ ಅನಾತ್ಮತ್ವಜ್ಞಾನವೂ "ನಾನು ಸುಖಿಯು—ನಾನು ದುಃಖಿಯು" ಎಂಬ ಬುದ್ಧಿಯೂ ಉತ್ಪನ್ನವಾಗುವವು. ಪುರುಷನು ಈ ರೀತಿಯಾಗಿ ಅಣವಾದಿ ಮಲಗಳಿಂದ ಯುಕ್ತನಾಗುವುದರಿಂದ ಸಂಸಾರಿಯೆನಿಸುವನು.

ಪುರುಷನು ಮಾಯಾಪಾಶಾವೃತನಾಗಿ ತನ್ನ ಸರ್ವಕರ್ತೃತ್ವ ಸರ್ವಜ್ಞತ್ವ ಪೂರ್ಣತ್ವ-ನಿತ್ಯತ್ವ-ವ್ಯಾಪಕತ್ವ ರೂಪಶಕ್ತಿಗಳನ್ನು ಕಳೆದುಕೊಂಡು. ಕಿಂಚಿತ್ಕರ್ತೃತ್ವಾದಿ ಶಕ್ತಿಗಳಿಂದ ಯುಕ್ತನಾಗುವನು. ಪುರುಷನ ಈ ಕಿಂಚಿತ್ಕರ್ತೃತ್ವ ರೂಪಶಕ್ತಿಯೇ "ಕಲಾ ತತ್ತ್ವ"ವೆನಿಸಿಕೊಳ್ಳುವದು, ಕಿಂಚಿಜ್ಞತ್ವ ರೂಪಶಕ್ತಿಯೇ "ವಿದ್ಯಾತತ್ವ"ವೆನಿಸಿಕೊಳ್ಳುವದು. ಅಪೂರ್ಣತ್ವ ರೂಪಶಕ್ತಿಯೇ ಸ್ರಕ್ಚಂದನನವನಿತಾದಿ ವಿಷಯಕ ಪ್ರೀತಿರೂಪವಾದ "ರಾಗತತ್ವ"ವೆನಿಸಿಕೊಳ್ಳುವದು. ಅನಿತ್ಯತ್ವರೂಪಶಕ್ತಿಯೇ ಭೂತಭವಿಷ್ಯದ್ವರ್ತಮಾನಕಾಲದ ವ್ಯವಹಾರಕ್ಕೆ ಅಸಾಧಾರಣ ಕಾರಣವಾದ "ಕಾಲತತ್ತ್ವ"ವೆನಿಸಿಕೊಳ್ಳುವದು. ಅವ್ಯಾಪಕತ್ವ ರೂಪಶಕ್ತಿಯೇ ಈ ಕಾರಣದಿಂದ, ಕಾರ್ಯವೇ ಹುಟ್ಟುವದು ಮತ್ತೊಂದು ಹುಟ್ಟುವದಿಲ್ಲವೆಂಬ ನಿಯಮಕ್ಕೆ ಅಸಾಧಾರಣ ಕಾರಣವಾದ 'ನಿಯಮ ತತ್ತ್ವ'ವೆನಿಸಿಕೊಳ್ಳುವದು.

ಕಾರ್ಯೋನ್ಮುಖ್ಯಗರ್ಭಿತವಾದ ಇಚ್ಛಾಶಕ್ತಿಯು ಸ್ವಗತವಾದ ಜ್ಞಾನಶಕ್ತಿ ಕ್ರಿಯಾಶಕ್ತಿಗಳಲ್ಲಿರುವ "ಜ್ಞಾನ ಕ್ರಿಯಾ ನ ಭವತಿ ಕ್ರಿಯಾ ಜ್ಞಾನಂ ನ ಭವತಿ" ಎಂಬ ಅನ್ಯೋನ್ಯಭಾವರೂಪ ಭೇದಬುದ್ಧಿಪ್ರಧಾನವಾದ ಮಾಯಾತತ್ತ್ವದಲ್ಲಿ ಪ್ರತಿಸ್ಫುರಿಸಲು 'ಪ್ರಕೃತಿ ತತ್ತ್ವ'ವೆನಿಸಿಕೊಳ್ಳುವದು. ಈ ಪ್ರಕೃತಿ ತತ್ತ್ವವು ಸುಖ ದುಃಖ ಮೋಹಗಳಿಗೆ ಕಾರಣಗಳಾದ ಸತ್ವರಜಸ್ತಮೋಗುಣಗಳ ಸಾಮ್ಯಾತಸ್ಥಾ-ರೂಪವಾಗಿದ್ದು ಮಹತ್ತತ್ವವೇ ಮೊದಲ್ಗೊಂಡು ಪೃಥಿವ್ಯಂತವಾಗಿರುವ ೨೩ ತತ್ತ್ವಗಳಿಗೆ ಮೂಲ ಕಾರಣವಾಗಿರುವದು.

ಪ್ರಕೃತಿ ತತ್ವರೂಪವಾದೀ ಶಕ್ತಿತತ್ತ್ವವೇ "ಇದಮಿತ್ಥಂ" ಇದು ಹೀಗೆಯೇ ಸರಿ ಎಂಬ ನಿಶ್ಚಯಕ್ಕೆ ಕಾರಣವಾದುದಾಗಿ "ಬುದ್ಧಿತತ್ತ್ವ"ವೆನಿಸಿಕೊಳ್ಳುವದು. ಇದಕ್ಕೆ ಮಹತ್ವವೆಂಬ ನಾಮಾಂತರವೂ ಉಂಟು. ಬುದ್ಧಿತತ್ತ್ವ ತತ್ತ್ವ ರೂಪವಾದೀ ಶಕ್ತಿ ತತ್ತ್ವವೇ 'ನಾನು-ನನ್ನದು' ಎಂಬ ಅಹಂಕಾರ ಮಮಕಾರಗಳಿಗೆ ಕಾರಣವಾದುದಾಗಿ "ಅಹಂಕಾರತತ್ತ್ವ"ವೆನಿಸಿವದು. ಆಹಂಕಾರ ತತ್ತ್ವ ರೂಪವಾಧೀ ಶಕ್ತಿತ್ವವೇ "ಸ್ಥಾಣುರ್ವಾ ಪುರುಷೋ ವಾ ಎಂಬ ಸಂಕಲ್ಪ ವಿಕಲ್ಪಗಳಿಗೆ ಕಾರಣವಾದುದಾಗಿ 'ಮನಸ್ತತ್ವ'ವೆನಿಸಿಕೊಳ್ಳುವದು. ಬುದ್ಧ್ಯಹಂಕಾರ ಮನಸ್ತತ್ವಗಳು ಶರೀರದೊಳಗಿರುವದರಿಂದ ಈ ಮೂರು "ಅಂತಃಕರಣ"ವೆನಿಸುವುದು. ಈ ಅಂತಃಕರಣವು ಇಚ್ಛಾಶಕ್ತಿ ಪ್ರಧಾನವಾಗಿರುವದು.

ಅಂತಃಕರಣರೂಪವಾಗಿ ಪರಿಣಮಿಸಿದ ಈ ಶಕ್ತಿ ತತ್ತ್ವವೇ, ಬಾಹ್ಯಶರೀರವನ್ನವಲಂಬಿಸಿ ಶಬ್ದಜ್ಞಾನಕ್ಕೆ ಸಾಧನವಾಗಿ "ಶ್ರೋತ್ರ ತತ್ತ್ವ"ವೆಂದೂ ಸ್ಪರ್ಶಜ್ಞಾನಕ್ಕೆ ಸಾಧನವಾಗಿ, "ತ್ವಕ್ ತತ್ತ್ವ"ವೆಂದೂ ರೂಪಜ್ಞಾನಕ್ಕೆ ಸಾಧನವಾಗಿ, "ನೇತ್ರತತ್ತ್ವ"ವೆಂದೂ ರಸಜ್ಞಾನಕ್ಕೆ ಸಾಧನವಾಗಿ, ಜಿಹ್ವಾ ತತ್ತ್ವ"ವೆಂದೂ ಗಂಧಜ್ಞಾನಕ್ಕೆ ಸಾಧನ

ವಾಗಿ "ಘ್ರಾಣತತ್ತ್ವ"ವೆಂದೂ ಹೇಳಿಸಿಕೊಳ್ಳುವದು. ಈ ಐದು ಇಂದ್ರಿಯಗಳು ಜ್ಞಾನಶಕ್ತಿ ಪ್ರಧಾನವಾದುದರಿಂದ ಜ್ಞಾನೇಂದ್ರಿಯಗಳೆಂದು ಹೇಳಿಸಿಕೊಳ್ಳುವವು.

ಜ್ಞಾನೇಂದ್ರಿಯ ರೂಪವಾಗಿ ಪರಿಣಮಿಸಿದ ಈ ಶಕ್ತಿತತ್ತ್ವವೇ ಉಚ್ಚಾರಣ ಕ್ರಿಯೆಗೆ ಸಾಧನವಾಗಿ, "ವಾಕ್ತತ್ತ್ವ"ವೆಂದೂ, ಗಮನಾಗಮನಾದಿ ಕ್ರಿಯೆಗಳಿಗೆ ಸಾಧನವಾಗಿ "ಪಾದತತ್ತ್ವ"ವೆಂದೂ, ದಾನಾದಾನ ಕ್ರಿಯೆಗಳಿಗೆ ಸಾಧನವಾಗಿ "ಪಾಣಿತತ್ತ್ವ"ವೆಂದೂ ಮಲಪರಿತ್ಯಾಗಕ್ಕೆ ಸಾಧನವಾಗಿ, "ಉಪಸ್ಥತತ್ತ್ವ"ವೆಂದೂ ಹೇಳಿಸಿಕೊಳ್ಳುವದು. ಈ ಐದು ಇಂದ್ರಿಯಗಳು ಕ್ರಿಯಾಶಕ್ತಿಪ್ರಧಾನವಾದುದರಿಂದ ಕರ್ಮೇಂದ್ರಿಯಗಳೆಂದು ಹೇಳಿಸಿಕೊಳ್ಳುವವು. ಈ ಮೇಲೆ ಹೇಳಿದ ಬುದ್ಧಿತತ್ತ್ವಾದಿ ತ್ರಯೋದಶ ತತ್ತ್ವಗಳು ಇಚ್ಛಾಶಕ್ತಿ ಜ್ಞಾನಶಕ್ತಿ, ಕ್ರಿಯಾಶಕ್ತಿ, ಪ್ರಧಾನವಾಗಿರುವವು.

ಈ ಶಕ್ತಿತತ್ತ್ವವೇ ಕೇವಲ ಶ್ರೋತ್ರೇಂದ್ರಿಯ ಗ್ರಾಹ್ಯವಾದ "ಶಬ್ದ ತತ್ತ್ವ" ರೂಪವಾಗಿ ಕೇವಲ ತ್ವಗಿಂದ್ರಿಯಗ್ರಾಹ್ಯವಾದ "ಸ್ಪರ್ಶತತ್ತ್ವ" ರೂಪವಾಗಿ ಕೇವಲ ನೇತ್ರೇಂದ್ರಿಯ ಗ್ರಾಹ್ಯವಾದ "ರೂಪತತ್ತ್ವ" ರೂಪವಾಗಿ. ಕೇವಲ ಜಿಹ್ವೇಂದ್ರಿಯ ಗ್ರಾಹ್ಯವಾದ "ರಸತತ್ತ್ವ" ರೂಪವಾಗಿ, ಕೇವಲ ಘ್ರಾಣೇಂದ್ರಿಯ ಗ್ರಾಹ್ಯವಾದ "ಗಂಧತತ್ತ್ವ" ರೂಪವಾಗಿ ಪರಿಣಮಿಸುವದು. ಶಬ್ದದಲ್ಲಿ ಧ್ವನ್ಯಾತ್ಮಕ-ವರ್ಣಾತ್ಮಕವೆಂದೂ, ಸ್ಪರ್ಶದಲ್ಲಿ ಶಿತೋಷ್ಣಸ್ಪರ್ಶವೆಂದೂ, ರೂಪದಲ್ಲಿ ನೀಲಪೀತಾದಿ ರೂಪವೆಂದೂ ರಸದಲ್ಲಿ ಮಧುರಾಮಾದಿ ರಸವೆಂದೂ ಗಂಧದಲ್ಲಿ ಸುಗಂಧ ದುರ್ಗಂಧವೆಂದೂ ವಿಭಾಗವು ವ್ಯಕ್ತವಾಗದೆ. ಸಾಮಾನ್ಯರೂಪವಾಗಿರುವದರಿಂದ ಶಬ್ದಾದಿಗಳು ತನ್ಮಾತ್ರಗಳೆಂದೂ ಹೇಳಿಸಿಕೊಳ್ಳುವವು.

ಪೂರ್ವೋಕ್ತವಾದೀ ಶಕ್ತಿತತ್ತ್ವದ ಶಬ್ದೈಕಗುಣವುಳ್ಳ "ಆಕಾಶತತ್ತ್ವ" ರೂಪವಾಗಿಯೂ, ಸ್ಪರ್ಶವೆಂಬ ಪ್ರಧಾನ ಗುಣವುಳ್ಳ "ವಾಯುತತ್ತ್ವ" ರೂಪವಾಗಿಯೂ ರೂಪವೆಂಬ ಪ್ರಧಾನ ಗುಣವುಳ್ಳ "ತೇಜಸ್ತತ್ತ್ವ" ರೂಪವಾಗಿಯೂ, ರಸವೆಂಬ ಪ್ರಧಾನ ಗುಣವುಳ್ಳ "ಜಲತತ್ತ್ವ" ರೂಪವಾಗಿಯೂ, ಗಂಧವೆಂಬ ಪ್ರಧಾನ ಗುಣವುಳ್ಳ ಪೃಥ್ವೀತತ್ತ್ವ ರೂಪವಾಗಿಯೂ ಪರಿಣಮಿಸುವದು. ಈ ಪಂಚಭೂತಗಳಲ್ಲಿ ಉತ್ತರೋತ್ತರ ಭೂತಗಳೊಳಗೆ ಪೂರ್ವಾಪೂರ್ವ ಭೂತಗಳ ಗುಣಗಳು ಅನುವರ್ತಿಸುವವು.

ನಿಗಮಾಗಮಪ್ರಸಿದ್ಧವಾದೀ ಮೂವತ್ತಾರು ತತ್ವಗಳು ಸಚ್ಚಿದಾನಂದ ರೂಪವಾದ, ಶಕ್ತಿವಿಶಿಷ್ಟ ಪರಶಿವ ಬ್ರಹ್ಮದ ಪರಿಣಾಮ ರೂಪವಾಗಿರುವದರಿಂದ ವೀರಶೈವ ಮತವು ಅವಿಕೃತಪರಿಣಾಮವನ್ನೂ ಜಗತ್ಸತ್ಯತ್ವ ವಾದವನ್ನೂ ಬೋಧಿಸುತ್ತಿರುವದು.

ಯಜ್ಞ-ಯಾಗ-ಕ್ರತು—

ಪ್ರತಿಯೊಬ್ಬ ದರ್ಶನಕಾರರು ತಮ್ಮ ವಿಚಾರಗಳನ್ನು ಜನರ ಮುಂದೆ ಇರಿಸುದದಕ್ಕಾಗಿ ಯಾವ ಶಾಸ್ತ್ರಗಳನ್ನು ಬರೆಯುತ್ತಿರುವರೋ ಅವುಗಳಲ್ಲಿ ಭಾಷೆಯು ಮತ್ತು ವ್ಯಾಖ್ಯೆಯ ಉದ್ದುದ್ದವಾದ ವಾಕ್ಯಗಳನ್ನು ಸೇರಿಸಬಾರದೆಂದು ಕೆಲವು ಪಾರಿಭಾಷಿಕ ಶಬ್ದಗಳನ್ನು ಕಲ್ಪಿಸುವರು. ಹಾಗೂ ಉತ್ಪತ್ತಿ ರೂಢಿ ಮೊದಲಾದವುಗಳಿಂದಲೇ ಅವುಗಳ ಅರ್ಥವನ್ನು ನಿರ್ಣಯಮಾಡದೇ ತಮಗೆ ಅಭಿಪ್ರೇತವಾದುದನ್ನೇ ಆಯಾ ಪಾರಿಭಾಷಿಕ ಶಬ್ದಗಳಿಗೆ ಅರ್ಥ ಕಲ್ಪನೆಮಾಡುವರು. ಪ್ರಸಂಗಾನುಸಾರವಾಗಿ ಆಯಾ ಶಬ್ದಗಳ ರೂಢಾರ್ಥಗಳನ್ನು ಒತ್ತಟ್ಟಿಗಿಟ್ಟು ತಾವು ಯೋಚಿಸಿದ ಅರ್ಥಗಳಿಂದಲೇ ತಮ್ಮ ದರ್ಶನಗಳಲ್ಲಿ ಆ ಶಬ್ದಗಳನ್ನು ಉಪಯೋಗಿಸುವರು, ಒಬ್ಬ ದರ್ಶನಕಾರನು ಒಂದು ಶಬ್ದವನ್ನು ಒಂದು ಅರ್ಥದಿಂದ ಉಪಯೋಗಿಸಿದರೆ, ಅನ್ಯ ದರ್ಶನಕಾರನು ಆ ಶಬ್ದವನ್ನು ಅದೇ ಅರ್ಥದಲ್ಲಿ ಉಪಯೋಗ ಮಾಡೇ ತೀರಬೇಕೆಂಬ ನಿಯಮವಿಲ್ಲ. ಇಷ್ಟೇ ಅಲ್ಲ. ಇತರರಿಗಿಂತ ಬೇರೆಯಾದ ಅರ್ಥದಲ್ಲಿ, ಕೆಲವು ಪ್ರಸಂಗದಲ್ಲಿ ವಿಪರೀತಾರ್ಥಗಳಲ್ಲಿಯೂ ಉಪಯೋಗಿಸಿರುವ ಉದಾಹರಣೆಗಳು ಅನೇಕವುಂಟು.

ವಿಸ್ತಾರಭಯದಿಂದ ಪ್ರಕೃತದಲ್ಲಿ ಒಂದನ್ನೇ ತೋರಿಸುತ್ತೇವೆ,—(೧) ಪ್ರತ್ಯಕ್ಷ (೨) ಅನುಮಾನ ಎಂಬ ಎರಡೂ ಪಾರಿಭಾಷಿಕ ಶಬ್ದಗಳನ್ನು ದರ್ಶನಕಾರರು ಯಾವ ಯಾವಬಗೆಯಿಂದಉಪಯೋಗಿಸಿರುವರೆಂಬುದನ್ನುನೋಡೋಣ.ನ್ಯಾಯದರ್ಶನಕಾರರು ಇಂದ್ರಿಯಗಳು ಪದಾರ್ಥಗಳೊಡನೆ ಸಂಬಂಧ್ಧವಾಗುವದರಿಂದ ಉಂಟಾಗುವ ಜ್ಞಾನಕ್ಕೆ "ಪ್ರತ್ಯಕ್ಷ" ಎಂದೂ, ಹೊಗೆಯುಳ್ಳ ಬೆಟ್ಟವನ್ನು ನೋಡಿ, ಬೆಂಕಿ ಹೊಗೆಗಳ ಸಾಹಚರ್ಯ ನಿಯಮದಿಂದ ಹೊಗೆಯನ್ನು ಕಂಡು ಅಲ್ಲಿ ಬೆಂಕಿಯನ್ನು ಊಹಿಸಿ ತಿಳಿಯುವದೇ ಅನುಮಾನ. ಅದಕ್ಕೆ ಸಾಧನವಾದುದೇ "ಅನುಮಾನ"ವೆಂದು ಹೇಳುವರು. ಆದರೆ ಅದನ್ನೇ ವೇದಾಂತ ದರ್ಶನಕಾರರು—"ಅಪಿ ಸಂರಾಧನೆ ಪ್ರತ್ಯಕ್ಷಾನುಮಾನಾಭ್ಯಾಂ" (ಬ್ರ.ಸೂ. ೩-೨-೧೪) ಎಂಬಲ್ಲಿ ಪ್ರತ್ಯಕ್ಷವೆಂದರೆ "ಶ್ರುತಿ" ಎಂದೂ, ಅನುಮಾನವೆಂದರೆ "ಸ್ಮೃತಿ" ಎಂದೂ ಅರ್ಥಮಾಡುವರು. ಅದರಂತೆ ಪೂರ್ವ ಮೀಮಾಂಸಕರು ಯಜ್ಞ, ಯಾಗ, ಕ್ರತು ಮುಂತಾದ ಶಬ್ದಗಳ ಅರ್ಥಗಳ ಅರ್ಥವನ್ನು ಕರ್ಮಕಾಂಡದಲ್ಲಿ ಒಂದು ವಿಧವಾಗಿ ಮಾಡಿದರೆ, ಉತ್ತರ ಮೀಮಾಂಸಕರು ಬ್ರಾಹ್ಮಣ ಅರಣ್ಯಕ ಹಾಗೂ ಉಪನಿಷತ್ತುಗಳಲ್ಲಿ ಇದೇ ಶಬ್ದಗಳಿಗೆ ಬೇರೆ ವಿಧವಾಗಿ ಅರ್ಥ ಮಾಡುವರು. ಉದಾಹರಣೆಗಾಗಿ — ಛಾಂದೋಗ್ಯೋಪನಿಷತ್ತಿನ ಮೂರನೇ ಅಧ್ಯಾಯದ ಹದಿನಾಲ್ಕನೆಯ ಖಂಡದ ಮಂತ್ರದಲ್ಲಿ—

"ಸರ್ವಂ ಖಲ್ವಿದಂ ಬ್ರಹ್ಮ ತಜ್ಜಾಲಾನಿತಿಃ ಶಾಂತ ಉಪಾಸೀತಾಽಥ ಖಲು ಕ್ರತುಮಯಃ ಪುರುಷೋಯಥಾ ಕ್ರತುರಸ್ಮಿನ್‌ಲೋಕೇ ಪುರುಷೋಭವತಿ ತಥೇತಃ ಪ್ರೇತ್ಯ

ಭವತಿ ಸಕ್ರತುಂ ಕುರ್ವೀತ ಮನೋಮಯಃ ಪ್ರಾಣ ಶರೀರೋ ಭಾ-ರೂಪಃ ಸತ್ಯ ಸಂಕಲ್ಪ ಆಕಾಶಾತ್ಮ ಸರ್ವ ಕರ್ಮಾ ಸರ್ವಕಾಮಃ............

ಎಂಬಲ್ಲಿ ಸತ್ಯಸಂಕಲ್ಪನೂ ಆಕಾಶಸ್ವರೂಪನು ಸರ್ವ ಕಾಮಾದಿ ಗುಣಯುಕ್ತನೂ ಆದ ಪರಶಿವನೇ ಕ್ರತುಶಬ್ದಕ್ಕೆ ವಾಚ್ಯನಾದ ಪರಶಿವನನ್ನು ಉಪಾಸನೆ ಮಾಡಿರಿ ಎಂಬುದೇ ಇದರ ಸಾರ. ಭಗವದ್ಗೀತೆಯಲ್ಲಿಯೂ ಯಜ್ಞ ಶಬ್ದದ ಅರ್ಥವು ಬೇರೆ ರೀತಿಯಾಗಿ ಮಾಡಲ್ಪಟ್ಟಿದೆ.

"ದ್ರವ್ಯಯಜ್ಞಾಸ್ತಪೋಯಜ್ಞಾ ಯೋಗಯಜ್ಞಾಸ್ತಥಾಪರೇ।
ಸ್ವಾಧ್ಯಾಯ-ಜ್ಞಾನಯಜ್ಞಾಶ್ಚ ಯತಯಃ ಸಂಶಿತವ್ರತಾಃ॥

(ಭಗವದ್ಗೀತೆ. ೪-೨೮)

ಎಂಬುದಾಗಿ ತಪಸ್ಸು, ಯೋಗ, ವೇದಾಧ್ಯಯನ, ಜ್ಞಾನ ಹಾಗೂ ದಾನಗಳಿಗೇನೇ ಯಜ್ಞ ಎಂದು ಹೇಳಿದೆ.

ವೀರಶೈವದರ್ಶನಕಾರರೂ ಸಹ, ಯಜ್ಞ ಯಾಗಾದಿಗಳ ಅರ್ಥವನ್ನು ಬೇರೆ-ಬೇರೆಯಾಗಿ ಮಾಡಿರುವರು, ಶ್ರೀ ರೇಣುಕಾಚಾರ್ಯರು–

"ಶಿವಾರ್ಥೇ ದೇಹಸಂಶೋಸ್ತಪಃ ಕೃಚ್ಛ್ರಾದಿ ನೋಮತಮ್॥
ಶಿವಾರ್ಚಾ ಕರ್ಮವಿಜ್ಞೇಯಂ, ಬಾಹ್ಯಂ ಯಾಗಾದಿನೋಚ್ಯತೇ"॥

(ಸಿದ್ಧಾಂತ ಶಿಖಾಮಣಿ ೯-೨೨)

ಎಂದು ಮುಂತಾಗಿ ವಿವರಿಸುತ್ತ........
"ತಪಃ ಕರ್ಮ ಜಪೋ ಧ್ಯಾನಂ ಜ್ಞಾನಂ ಚೇತ್ಯನುಪೂರ್ವಕಮ್"

(ಸಿ–ಶಿ–೯-೨೧)

ಎಂಬುದಾಗಿ (೧) ಯೋಗಾನುಷ್ಠಾನ, (೨) ಕಾಯಕ, (೩) ಜಪ, (೪) ಧ್ಯಾನ ಮತ್ತು (೫) ಶಿವಾನುಭವ ಈ ಐದು ವೀರಶೈವ ಪಂಚಯಜ್ಞಗಳೆಂದು ನಿರೂಪಿಸಿರುವರು. ಅರ್ಥಾತ್ ಬ್ರಾಹ್ಮಣಾದಿ ತ್ರಿವರ್ಣಗಳಲ್ಲಿ, ದ್ವೈತಾದಿ ಮತಗಳಲ್ಲಿ ಯಾವುದನ್ನಾದರೂ ಆಶ್ರಯಿಸಿದ ಗುರುವಿನಿಂದಾದ ಉಪನಯನದಿಂದ "ದ್ವಿಜ"ನಾಗಿ ಬ್ರಹ್ಮಚರ್ಯಾದ್ಯಾಶ್ರಮಗಳಲ್ಲಿ ಕ್ರಮವಾಗಿ ನಡೆದು ಕೊನೆಗೆ ಜುಟ್ಟು-ಜನಿವಾರಗಳನ್ನು ತ್ಯಜಿಸಿ ಸನ್ಯಾಸಿಯಾಗಿ ನಿಂತ ಕಾಲದಲ್ಲಿ ಅವನು ಕೊನೆಯ ಮೆಟ್ಟಲಲ್ಲಿ ವೀರಶೈವರಾದವರು ದೀಕ್ಷಾ ಸಂಸ್ಕಾರವಾದ ಸಮಯದಲ್ಲಿಯೇ ಹುಟ್ಟು ಮೊದಲಿಗೆ–ಆ ಮೆಟ್ಟಲಲ್ಲಿರುವರು.

"ಯಥಾ ಮತೇಷು ಸರ್ವೇಷು ತುರಿಯತ್ವೇನಕಥ್ಯತೇ।
ಸಂನ್ಯಾಸ ಇತ್ಯಯಂ ದೇವಿ। ವೀರಶೈವಸ್ತಥಾಽಽ ಶ್ರಮಃ"॥

ಅಂದರೆ, ಬೇರೆ ಮತದವರ ಅಂತಿಮ ಮೆಟ್ಟಲು ವೀರಶೈವರ ಪ್ರಥಮ ಮೆಟ್ಟಲು ಎಂದು ಆಗಮವು ಉದ್ಘೋಷಿಸಿದೆ.

ವಿವೇಚನಾತ್ಮಕವಾದ ಈ ತತ್ವಜ್ಞಾನದ ಬಗೆಗೆ ಸಾಕಷ್ಟು ವಿಸ್ತರಿಸಬಹುದು. ಈ ಶಕ್ತಿವಿಶಿಷ್ಟಾದ್ವೈತದ ಶಿವಾದ್ವೈತಶಕ್ತಿಯ ಮರ್ಮವನ್ನು ಪ್ರತಿಯೊಬ್ಬರು ತಿಳಿದುಕೊಂಡು ಅದರಂತೆ ಆಚರಿಸಿದ್ದಾದರೆ ಸರ್ವರೂ ಶಕ್ತಿಯುತರಾಗಲು ಸಾಧ್ಯ.

ಇದು ವಿಜ್ಞಾನಯುಗವಾದುದರಿಂದ ಜನತೆಯಲ್ಲಿ ದಿನ ದಿನಕ್ಕೂ ವಿಚಾರ ಕ್ರಾಂತಿ ನಡೆದಿದೆ. ಆದುದರಿಂದ "ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ" (ಗೀತಾ ೩-೩೫) ಎಂಬುದನ್ನು ಸ್ಮರಿಸಿಕೊಂಡು ನಮ್ಮ ಧರ್ಮವನ್ನು ಬಿಡದೆ, ಅನ್ಯ ಧರ್ಮವನ್ನು ತೆಗಳದೆ ಸಹಕರಿಸಿ ಬಾಳಬಂಡಿ ಸಾಗಿಸಬೇಕು.

————

ಶಿಕ್ಷಣದಲ್ಲಿ ಮಹಾಭಾರತದ ಪಾತ್ರ

ಜಯತೀರ್ಥಾಚಾರ್ಯ ವಾ. ಮಳಗಿ, ಎಂ.ಎ.
ಅಧ್ಯಾಪಕರು
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮಾನವ ಜೀವನದ ಪ್ರಧಾನ ಹಂತ ಶಿಕ್ಷಣ. ಅದೊಂದು ಅವನ ಜೀವನದಲ್ಲಿ ಹೊಸ ಜನ್ಮ. ಅಂತೆಲೇ ಶಿಕ್ಷಣದ ಪ್ರಾರಂಭಕ್ಕೆ ದ್ವಿತೀಯ ಜನ್ಮ "ದ್ವಿಜ" ಎಂಬುದಾಗಿ ಕರೆದರು. ಗುರುವಿನೆಡೆಗೆ ಕಲಿಯಲು ಕಳಿಸುವದೇ "ಉಪನಯ"ವೆಂದರು. ಅದನ್ನೆ ಜೀವನದ ಹೊಸಕಣ್ಣು "ಉಪನಯನ"ವೆಂದು ಹೆಸರಿಸಿದರು. ಈ ಶಬ್ದಗಳು ಯಾವ ಜಾತಿ-ಜನಾಂಗಕ್ಕೆ ಮೀಸಲಾದವುಗಳಲ್ಲ. ಮಾನವರಿಗೆಲ್ಲ ಮೀಸಲಾದವುಗಳು. "ಮನು"-ಎಂಬ ಧಾತುವಿಗೆ ಅವಬೋಧನೆ, ತಿಳುವಳಿಕೆ, ತಿಳಿ, ಎಂದರ್ಥ. ಅದು ಇದ್ದವರೆಲ್ಲ ಮಾನವರು. ಮಂಗನಿಂದ ಮೇಲೇರಿದ ಮನುಷ್ಯ ಮಾನವನಾಗುವದು ಶಿಕ್ಷಣದಿಂದ. ಅದು ಆಹಾರದಂತೆ ಅನಿವಾರ್ಯವಾದದ್ದು. ಅಂತೆಲೇ ವೇದ "ಸ್ವಾಧ್ಯಾಯ ಪ್ರವಚನಾಭ್ಯಾಂ ನ ಪ್ರಮದಿತವ್ಯಮ್" ಎಂದು ಆದೇಶ ನೀಡಿದೆ. ಶಿಕ್ಷಣ ಇದೊಂದು "ಸಂಸ್ಕಾರ" ಶಿಕ್ಷಣ ಪಡೆದವ "ಸಂಸ್ಕೃತ" ಅಂಥವರ ಬಾಳುವೆಯೇ 'ಸಂಸ್ಕೃತಿ'. ಇದೇ ನಮ್ಮ ಪರಂಪರೆ.

ಆದರೆ ಇಂದಿನ ಶಿಕ್ಷಣ ಮಾತ್ರ ಮನುಷ್ಯನನ್ನು ಮಂಗನನ್ನು ಮಾಡುತ್ತಿದೆ. ಪಡೆಯುವ ಶಿಕ್ಷಣ ಬಾಳುವೆಗೆ ಬಲುದೂರ, ಸಂಬಂಧವೇ ಇಲ್ಲ. ಕಲಿತದ್ದು ರಸಾಯನ ಇಲ್ಲವೇ ಭೌತಶಾಸ್ತ್ರ. ಮಾಡುವದು ಬ್ಯಾಂಕಿನಲ್ಲಿ ಕಾರಕೂನ ಇಲ್ಲವೇ ಇನ್ನೆಲ್ಲಿಯಾದರೂ ಅಂತಹ ವೃತ್ತಿ. ಹಾಗಾಗಿ ಶಿಕ್ಷಣ ಕೆಲವರಿಗೇ ಉಪಯೋಗವಾಗುತ್ತ ಜೀವನ ಹಾಗೂ ಶಿಕ್ಷಣಗಳ ಮಧ್ಯದಲ್ಲಿ ಕಂದಕವನ್ನು ಏರ್ಪಡಿಸಿದೆ. ಮಾಡುವ ವೃತ್ತಿಗೆ ಪಡೆದ ಶಿಕ್ಷಣಕ್ಕೆ ಸಂಬಂಧವೇ ಇಲ್ಲ. ಆದರೆ ಪದವಿಯ ಅನಿವಾರ್ಯತೆ ಇದೆ. ಇದೇ ಇಂದಿನ ಶಿಕ್ಷಣದ ವಿಸಂಗತಿ, ಆದರೆ ಇದಕ್ಕೆ ಉತ್ತರವಾಗಿ ಮಹಾಭಾರತ ಏನು ಹೇಳುವದೆಂಬುದನ್ನು ತಿಳಿಯೋಣ.

ಶಿಕ್ಷಣ ನೀಡುವವ ಶಿಕ್ಷಕ. ಇವನು ಭಾವಿ ಸಮಾಜದ ನಿರ್ಮಾಪಕ. ಕರ್ತವ್ಯ ಭಾವನೆ, ಸ್ವಾರ್ಥತ್ಯಾಗದ ಮನೋವೃತ್ತಿಯ ಶಿಕ್ಷಕ ತಾನು ಆದರ್ಶನಾಗಿದ್ದು ಮಕ್ಕಳನ್ನು ಆದರ್ಶರನ್ನಾಗಿಸುವದು ಅವಶ್ಯ. ಇದಕ್ಕಾಗಿ ಮಹಾಭಾರತ ಕಾಲದಲ್ಲಿ ಶಿಕ್ಷಕರ ಸ್ವತಂತ್ರ ವರ್ಗವನ್ನೇ ಕಾಣುತ್ತೇವೆ. ಅವರಿಗೆ ಇಂದಿನಂತೆ ಸಮಾಜ ಅನಾದರ ತೋರಿ

ಸುತ್ತಿರಲಿಲ್ಲ. ಅದರಿಂದಾಗಿ ಅವರ ವೃತ್ತಿ ಅವರಿಗೆ ಆತ್ಮತೃಪ್ತಿ ನೀಡುತ್ತಿತ್ತು. ಗೌರ ವಯುತವಾಗಿ ಬಾಳುತ್ತಿದ್ದರು. ತಮ್ಮ ಅನುಭವದ ಆವಿಷ್ಕಾರಗಳಿಂದ ಶಿಕ್ಷಣ ಕ್ರಮದಲ್ಲಿ ಪರಿವರ್ತನೆತಂದು ಅದನ್ನು ಇನ್ನಷ್ಟು ಜನಾಭಿಮುಖವಾಗಿರಿಸುತ್ತಿದ್ದರು. ಮಹಾಭಾರತದ ಆದಿಪರ್ವದಲ್ಲಿ ಧೌಮ್ಯರ ಶಿಷ್ಯವೇದ (ಬೇದ) ಈ ಮಾತು ಹೇಳು ತ್ತಾನೆ. ತನಗೆ ಗುರುಕುಲದಲ್ಲಿ ಆದ ತೊಂದರೆ ತನ್ನಲ್ಲಿಯ ವಿದ್ಯಾರ್ಥಿಗಳಿಗೆ ತಾನು ಕೊಡುವದು ಬೇಡವೆಂದು, ಅದರಿಂದಾಗುವ ಹಲವು ಪರಿಣಾಮಗಳನ್ನು ವಿಶ್ಲೇಷಿಸಿ ಶಿಕ್ಷಣ ಕ್ರಮವನ್ನು ಸುಲಭಗೊಳಿಸುತ್ತಾನೆ. ವಿದ್ಯಾರ್ಥಿಗಳಿಗೆ ಉಚಿತವಾದ ಸ್ವಾತಂತ್ರ್ಯ ವನ್ನು ಹೆಚ್ಚಿಗೆ ನೀಡುತ್ತಾನೆ. ಇಂದು ನಮಗೆ ಶಿಕ್ಷಣ ಕ್ರಮದ ಕುಂದುಕೊರತೆಗಳು ಗೊತ್ತಿದ್ದರೂ ಅಸಹಾಯಕರಾಗಿರುವೆವು. ರಾಷ್ಟ್ರಪತಿಯಿಂದ ಸಾಮಾನ್ಯ ನಾಗರಿಕನ ವರೆಗೆ ಎಲ್ಲರೂ ಶಿಕ್ಷಣ ಕ್ರಮದ ಪರಿವರ್ತನೆ ಉಚ್ಚರಿಸುತ್ತಾರೆ ಆದರೆ ಕ್ರಾಂತಿಕಾರಕ ಬದಲಾವಣೆ ಅಸಂಭವವಾಗಿದೆ. ಆವಶ್ಯಕವಾದರೂ ಅಶಕ್ಯವಾಗಿದೆ. ಆದರೆ ಮಹಾ ಭಾರತ ಮಾತ್ರ ಅನುಭವದ ಅವಿಷ್ಕಾರಗಳನ್ನು ಕೂಡಲೇ ಜಾರಿಗೊಳಿಸುವಂತೆ ಬಲ ಪಡಿಸುತ್ತದೆ.

ಶಿಕ್ಷಕ-ಶಿಕ್ಷಣ ಗುಣವಂತರಿಗೆ ಅಂದರೆ ಬುದ್ಧಿವಂತರಿಗೆ ಹಾಗೂ ಅದೇ ವಿಷಯ ದಲ್ಲಿ ವಿಶೇಷ ಆಸಕ್ತಿ ಇದ್ದವರಿಗೆ ಎಂಬುದು ಮಹಾಭಾರತದ ಸೂತ್ರ. "ಕ್ವಚ್ಚಿತ್ತೆ ಸರ್ವವಿದ್ಯಾಸು ಗುಣತೋಽರ್ಚಾ ಪ್ರವರ್ತತೆ" (ಸಭಾಪ ೯೬ ಅ ೫.ಶ್ಲೊ) ಎಂಬ ನಾರ ದರ ಮಾತಿನಿಂದ ಸ್ಪಷ್ಟವಾಗುತ್ತದೆ. ಯೋಗ್ಯತೆ ಇಲ್ಲದವರು ಇಂದು ಪದವಿಗಾಗಿ ಉನ್ನತ ಶಿಕ್ಷಣ ಪಡೆಯುತ್ತಾರೆ. ಅವರೆಲ್ಲರ ಅನುಕೂಲಕ್ಕಾಗಿ ಶಿಕ್ಷಣಸ್ತರ, ಕ್ರಮ ಶಿಥಿಲಗೊಂಡು ಕೆಳಮಟ್ಟಕ್ಕಿಳಿಯುತ್ತಿವೆ. ಆದ್ದರಿಂದ ವಿದ್ಯಾರ್ಥಿ ಸ್ನಾತಕೋತ್ತರ ಶಿಕ್ಷಣ ಪಡೆದರೂ ಕೆಲಸಕ್ಕೆ ಅರ್ಜಿ ಬರೆಯಲೂ ಅಸಮರ್ಥನಾಗಿದ್ದಾನೆ. ವಿದ್ಯೆಯ ಆಕರ್ಷಣೆಗಿಂತ ಪದವಿ, ಅಧಿಕಾರಗಳ ಆಕರ್ಷಣೆ ಹೆಚ್ಚಿವೆ. ಮಹಾಭಾರತ ಇದನ್ನು ಪುರಸ್ಕರಿಸುವದಿಲ್ಲ. ಶಿಕ್ಷಣದ ಸ್ತರ ಇಳಿಸುವದಕ್ಕಿಂತ ಬುದ್ಧಿಯ ಮಟ್ಟ ಹೆಚ್ಚಿಸ ಬೇಕೆನ್ನುವದು. ಮಹಾಭಾರತದಲ್ಲಿ ಸೂತನಂತಹ ಶೂದ್ರನೂ ಬ್ರಾಹ್ಮಣರಿಗೆ ಉಪ ದೇಶಕನಾಗಿರುವ, ವಿದುರನಂತಹ ಜ್ಞಾನಿಯೂ ಪೂಜ್ಯನಾಗಿರುವ ಗುಣಕ್ಕೆ ಬೆಲೆ, ಸ್ಥಾನ ಇದು ಮಹಾಭಾರತದ ಮಾತು. ಕರ್ಣ ಏಕಲವ್ಯರಿಗೆ ದ್ರೋಣ ನಿರಾಕರಿಸಿದ್ದು ಜಾತಿ ಮುಂದೆಮಾಡಿ ಅಲ್ಲ. ವಾಸ್ತವಿಕವಾಗಿ ಅವರ ಶಿಕ್ಷಣದ ಉದ್ದೇಶ್ಯ, ಅದರ ಭಾವೀ ಪರಿಣಾಮ ಅವರ ಸ್ವಭಾವ ಇವುಗಳನ್ನು ಲಕ್ಷ್ಯದಲ್ಲಿ ಇಟ್ಟುಕೊಂಡು ನಿರಾಕರಿಸಲ್ಪ ಟ್ಟಿದೆ. ಮುಂದೆ ಕರ್ಣನಿಗೆ ದ್ರೋಣರು ಶಿಕ್ಷಣ ನೀಡಿದ್ದಾರೆ. ಅವನಲ್ಲಿಯ ಪಾತ್ರತೆ ಗಮನಿಸಿ.

ಶಿಕ್ಷಣ ಇದು ಶಿಕ್ಷಕನ ಸನ್ನಿಧಿಯಲ್ಲಿಯೇ ದೊರೆಯಬೇಕಾದದ್ದು ಅನಿವಾರ್ಯ. ಇದಕ್ಕೆ 'ಗುರುಕುಲ ಶಿಕ್ಷಣ' ಎನ್ನುವರು, ಮಹಾಭಾರತ ಇದನ್ನು ಎತ್ತಿ ಹೇಳುತ್ತದೆ.

ವಿದ್ಯಾರ್ಥಿಗೆ ಕೇವಲ ವಿದ್ಯೆ ದೊರೆಯುವುದು ಮುಖ್ಯವಲ್ಲ ಆದರೆ ಶಿಕ್ಷಕನ ಸನ್ನಿಧಿಯಲ್ಲಿ ವಿದ್ಯಾರ್ಥಿಯ ಸಮಗ್ರ ಜೀವನವೇ ನಿರ್ಮಾಣವಾಗಬೇಕಾದದ್ದು ಮುಖ್ಯ. ಆದ ರಿಂದಾಗಿ ಇಂದಿನ ಪದವೀಧರರಲ್ಲಿ ಕಂಡುಬರುವ ವ್ಯವಹಾರ ಜ್ಞಾನ ಶೂನ್ಯತೆ ಅಂದು ಕಂಡು ಬರುತ್ತಿರಲಿಲ್ಲ. ಗುರು ತನ್ನ ಅನುಭವದ ಅರ್ಕವನ್ನೇ ವಿದ್ಯಾರ್ಥಿಗೆ ನಿರೂಪಿ ಸಿದ್ದರಿಂದ ಅವನ ಬಾಳುವೆ ಸುಗಮ ಹಾಗೂ ಸಂಪೂರ್ಣವಾಗುತ್ತಿತ್ತು.

ಶಿಕ್ಷಕ ಎಲ್ಲರಿಗೂ ಉಚಿತವಾಗಿ ಅನ್ನ ವಸ್ತ್ರಕೊಟ್ಟು ಶಿಕ್ಷಣ ಕೊಡುತ್ತಿದ್ದ. ಅದನ್ನೇ ತನ್ನ ಪವಿತ್ರ ಕರ್ತವ್ಯವೆಂದು ಭಾವಿಸುತ್ತಿದ್ದ. ಹಾಗಾಗಿ ಯೋಗ್ಯತೆ ಇದ್ದ ವರಿಗೆ ಶಿಕ್ಷಣ ಸುಲಭವಾಗುತ್ತಿತ್ತು, ಇಂದಿನಂತೆ ಬಡತನದಿಂದಾಗಿ ವಿದ್ಯಾ ವಿಮುಖಿ ನಾಗುವ ಪ್ರಸಂಗವಿರಲಿಲ್ಲ. ಗುರುವಿನಿಂದ ಶಿಷ್ಯ ದೂರ ಇರಬಾರದೆಂಬುದು ಮಹಾ ಭಾರತದ ನಿಯಮ. ಗುರುಕುಲದಲ್ಲಿಯೇ ಶಿಕ್ಷಣ ಪಡೆಯಬೇಕು ಇನ್ನೊಂದು ನಿಯಮ. ಇವುಗಳಿಂದಾಗಿ ವಿದ್ಯಾರ್ಥಿ ಸ್ವಾವಲಂಬಿ, ಪರಿಶ್ರಮಿ, ಆರೋಗ್ಯವಂತ, ಹಾಗೂ ಸಮರಸನಾಗುತ್ತಿದ್ದ. ಗುರುಕುಲದಲ್ಲಿ ತನ್ನೆಲ್ಲ ಕರ್ತವ್ಯಗಳನ್ನು ತಾನೇ ಪೂರೈಸಿ ಕೊಳ್ಳಬೇಕಾದದ್ದು ಅನಿವಾರ್ಯವಾದದ್ದರಿಂದ ಸ್ವಾವಲಂಬನ, ಕರ್ತವ್ಯ ದಕ್ಷತೆ ತಾನಾಗಿಯೇ ಬರುತ್ತಿದ್ದವು. ದುಡಿದು ಉಣ್ಣುವದು ಗುರುಕುಲದಲ್ಲಿ ಆವಶ್ಯಕ ವಾದದ್ದರಿಂದ ವಿದ್ಯಾರ್ಥಿ ಕಷ್ಟ ಸಹಿಷ್ಣು, ಪರಿಶ್ರಮಿಯಾಗುತ್ತಿದ್ದ. ಮಹಾಭಾರತದ ನಾಯಕ ಶ್ರೀಕೃಷ್ಣ ತಾನೂಕೂಡ ಗುರುಪತ್ನಿಯ ಆದೇಶದಂತೆ ಉರುವಲು ಕಟ್ಟಿಗೆ ತರಲು ಅಡವಿಗೆ ಹೋದದ್ದು ಪ್ರಸಿದ್ಧ. ಜಗದೊಡೆಯ ಕೃಷ್ಣ, ಕಡುಬಡವ ಸುಧಾಮ ಇವರಿಬ್ಬರ ಸ್ನೇಹ ಅಂದೇ ಅಭಿವ್ಯಕ್ತವಾದದ್ದು. ಇಬ್ಬರೂ ಕೂಡಿಯೇ ಕಟ್ಟಿಗೆ ತರಲು ಹೋದದ್ದು. ಗುರುಕುಲ ಅದರಲ್ಲಿ ಸಮರಸವಾಗಿ ಬೆಳೆಯುವದನ್ನು ಕಲಿಸಿತು. ಅಂತಲೇ ಅವರಿಬ್ಬರೂ ಅಜಗಜಾಂತರದಷ್ಟು ಅವಸ್ಥೆಯಲ್ಲಿ ವೈಷಮ್ಯ ಹೊಂದಿದರೂ ಆದರ್ಶ ಸ್ನೇಹಿತರಾದರು. ದ್ರುಪದ ದ್ರೋಣರಂತಹ ಸ್ನೇಹಿತರಾಗಲಿಲ್ಲ. ಇವೆಲ್ಲ ಆದರ್ಶ ಮೈಗೂಡುವದು ಗುರುಕುಲದಲ್ಲಿ. ಅದೇ ಕ್ರಮದಲ್ಲಿ "ಬೋರ್ಡಿಂಗ್ ಸ್ಕೂಲು"ಗಳಂತೆ ಬಂದವು. ಆದರೆ ಶಿಕ್ಷಕನಿಂದ ದೂರಾದ ಅವು ಯಶಸ್ವಿಯಾಗಲಿಲ್ಲ. ಇಂದು ವ್ಯಕ್ತಿ ತನ್ನ ವಿದ್ಯಾರ್ಥಿ ಜೀವನದಿಂದ ಒಮ್ಮೆಲೆ ಗ್ರಹಸ್ಥಾ ಜೀವನ ಸ್ವೀಕರಿಸಿ ದಾಗ, ಸ್ವಚ್ಛಂದತೆಯಿಂದ ಅರಿಯದ ಬಂಧನಕ್ಕೆ ಬಂದಂತಾಗಿ ಒಮ್ಮೆಲೆ ದಿಗ್ಭ್ರಮ ನಾಗುತ್ತಾನೆ. ಕಣ್ಣು ಕಟ್ಟಿ ತಂದು ಕಾಡಿನಲ್ಲಿ ಬಿಟ್ಟಂತಾಗುವದು. ಗುರುಕುಲದ ಶಿಕ್ಷಣ ಇವೆಲ್ಲವುಗಳನ್ನು ಹೊಡೋಡಿಸುವದು. ಸ್ವಾವಲಂಬನ, ಪರಿಶ್ರಮ, ಕಷ್ಟ ಸಹಿಷ್ಣುತೆ, ಸ್ನೇಹಭಾವ, ಹೊಂದಿಕೊಳ್ಳುವ ಪ್ರವೃತ್ತಿ, ಬಡತನದ ಕುಂದುಕೊರತೆ ಗಳ ಜ್ಞಾನ, ನೈಷ್ಠಿಕ ಬ್ರಹ್ಮಚರ್ಯ ಇವು ಗುರುಕುಲದ ಶಿಕ್ಷಣದ ಪ್ರಯೋಜನಗಳು. ಪಾಶ್ಚಾತ್ಯ ಆರ್ಯದೇಶಗಳಲ್ಲಿಯೂ ಗುರುಗಳ ಮನೆಯಲ್ಲಿದ್ದು ಕಲಿಯುವ ಪದ್ಧತಿ ಕಂಡುಬರುವದು. ಗುರುಕುಲದಲ್ಲಿ ಗುರುವಿನ ನಿರ್ದೇಶನದಲ್ಲಿ ವಿದ್ಯಾರ್ಥಿ ಇಂದಿನಂತೆ

ಕುಡಿಯುವ, ಸೇದುವ, ತಿನ್ನುವ ಚಟಗಳಿಗೆ ಬಲಿಯಾಗಲಾರ. ಹಿತವಾದ ಮಿತವಾದ ಸಾತ್ವಿಕ ಅಹಾರ ಬುದ್ಧಿಗೆ ತೀವ್ರತೆಯನ್ನು, ದೇಹಕ್ಕೆ ಚಟುವಟಿಕೆಯನ್ನು, ಮನಸ್ಸಿಗೆ ಸಮಾಧಾನವನ್ನು ನೀಡುವದು. ಇದು ಶಾಂತಿಪರ್ವದ ೧೯೧ ಅಧ್ಯಾಯದಲ್ಲಿ ಹೇಳಲ್ಪಟ್ಟಿದೆ.

ಮಹಾಭಾರತ ಅಭಿರುಚಿಗೆ ತಕ್ಕ ಶಿಕ್ಷಣವನ್ನೇ ನೀಡಬೇಕೆಂದು ಆದೇಶಿಸುತ್ತದೆ. ಅಸಪೇಕ್ಷಿತವಾದದ್ದನ್ನು ಕಡ್ಡಾಯವಾಗಿ ಕಲಿಸಬೇಕೆಂದಲ್ಲ. ಇದನ್ನೆ ನಾವು ಇನ್ನೊಂದರ್ಥದಲ್ಲಿ ವೃತ್ತಿ ಶಿಕ್ಷಣ ಎನ್ನಬಹುದು. ಇದನ್ನು ಪ್ರಾರಂಭದ ಹಂತ ದಿಂದಲೇ ಕಲಿಸಲಾಗುತ್ತಿತ್ತು. ಅದರಿಂದಾಗಿ ವಿದ್ಯಾರ್ಥಿ, ತನ್ನ ದೇವದತ್ತಯೋಗ್ಯತೆ, ಅಭಿರುಚಿಗೆ ತಕ್ಕ ವಿದ್ಯೆ, ಹಾಗೂ ಗುರುವಿನ ಮಾರ್ಗದರ್ಶನಗಳಿಂದಾಗಿ ತನ್ನ ಸಮರ್ಥ ವ್ಯಕ್ತಿತ್ವವನ್ನು ಪೂರ್ಣವಾಗಿ ನಿರೂಪಿಸಿಕೊಳ್ಳುವದರಲ್ಲಿ ಸಫಲನಾಗುತ್ತಿದ್ದ. ಸಭಾ ಪರ್ವದ ೯೬ನೇ ಅಧ್ಯಾಯದಲ್ಲಿ ನಾರದರು ಯುಧಿಷ್ಠರನನ್ನು ಕುರಿತು ಪ್ರಶ್ನಿಸುವದರಿಂದ ಇವು ತಿಳಿದುಬರುತ್ತವೆ.

"ಸ್ತ್ರೀ ಶಿಕ್ಷಣ" ಮಹಾಭಾರತದ ಸೂತ್ರ. ಎಲ್ಲ ಸ್ತ್ರೀಯರಿಗೂ ಸಾಮಾನ್ಯ ಶಿಕ್ಷಣ ಅನಿವಾರ್ಯವಾಗಿತ್ತು. ದ್ರೌಪದಿಯನ್ನು "ಪಂಡಿತಾಚ ಪತಿವ್ರತಾ" (ವನ ಪರ್ವ ೨೭೮) ಎಂದು ಕರೆದಿದ್ದಾರೆ. ಪಾಂಡಿತ್ಯ ಇದು ಸ್ತ್ರೀಕೂಡಾ ಪಡೆಯಬಹು ದಾದದ್ದು. ತನ್ನ ತಂದೆಯ ಮನೆಯಲ್ಲಿ ಋಷಿಗಳಿಂದ ನಾನು ಈ ಜ್ಞಾನಪಡೆದೆ ಎಂದು ದ್ರೌಪದಿಯೇ ಉದ್ಗರಿಸಿದ್ದಾಳೆ. ಅಂದಿನ ಸ್ತ್ರೀ-ಶಿಕ್ಷಣ ವ್ಯಕ್ತಿ ಹಾಗೂ ಸಮಾಜ ಜೀವನಕ್ಕೆ ಪೂರಕವಾಗಿದ್ದೀತು. ಇಂದಿನಂತೆ 'ಸ್ವೇಚ್ಛಾಚಾರ' ಬೆಳಸಿ, ವ್ಯಕ್ತಿ ಹಾಗೂ ಕುಟುಂಬ ಜೀವನಕ್ಕೆ ಮಾರಕವಾಗಿರಲಿಲ್ಲ. ಇಂದಿನ ಸ್ತ್ರೀ ಶಿಕ್ಷಣ ಅವರಲ್ಲಿ ಸ್ವತಂತ್ರ ಜೀವನದ ಹಮ್ಮುತಂದು, ಕರ್ತವ್ಯ ವಿಮುಖತೆಯುನ್ನು ಹುಟ್ಟಿಸಿ, ಅಂತಃಕರಣವನ್ನೇ ಅಲ್ಲಗಳೆದು, ಕುಟುಂಬ ಜೀವನವನ್ನೇ ಉಧ್ವಸ್ತಗೊಳಿಸುತ್ತಿದೆ. ಮಹಾಭಾರತ ಸ್ತ್ರೀ ಯರಿಗೆ ಗೃಹ ವಿಜ್ಞಾನ ಶಿಕ್ಷಣ ನೀಡಿ ಕರ್ತವ್ಯಪ್ರಜ್ಞೆ ಜಾಗ್ರತಗೊಳಿಸಲು ಕುಟುಂಬ ಜೀವನ ಸುಗಮವಾಗಲು ಪ್ರೋತ್ಸಾಹಿಸುವದು. ಇದು ಇಂದು ಆವಶ್ಯಕ. ಮಹಾ ಭಾರತ ಅಭಿರುಚಿಯುಳ್ಳ ಯೋಗ್ಯ ಸ್ತ್ರೀಯರಿಗೆ ಶಾಸ್ತ್ರಾಧ್ಯಯನವನ್ನು ನಿರೂಪಿಸು ವದು. ಆದರೆ ಪುರುಷರಂತೆ ಅನಿವಾರ್ಯ ಶಿಕ್ಷಣವನ್ನಲ್ಲ.

ರಾಜನೀತಿ, ದಂಡನೀತಿ, ವಾರ್ತಾಶಾಸ್ತ್ರ, ಶಿಲ್ಪಶಾಸ್ತ್ರ, ಕೃಷಿ, ವಾಣಿಜ್ಯ, ಇವುಗಳಲ್ಲಿ ಪರಿಣತನಾದವನೇ ಆ ಆ ಕ್ಷೇತ್ರಗಳಲ್ಲಿ ವಿಧಾಯಕ ಕಾರ್ಯ ನೆರವೇರಿಸಲು ಸಮರ್ಥನಾಗುತ್ತಿದ್ದ. ಆ ವಿಷಯದ ಜ್ಞಾನವಿಲ್ಲದವ ಇಂದಿನಂತೆ ಎಲ್ಲೆಡೆಗೂ ಕಾರು ಭಾರು ಮಾಡುತ್ತಿರಲಿಲ್ಲ. ಅದರಿಂದಾಗಿ ವಿದ್ಯೆಯ ಪ್ರಯೋಜನ ಸಮಾಜಕ್ಕೆ ಚನ್ನಾಗಿ ದೊರೆಯುತ್ತಿತ್ತು.

ಸಮಾಜದ ಪ್ರತಿಯೊಬ್ಬ ನಾಗರಿಕನಿಗೂ ಧಾರ್ಮಿಕ ಹಾಗೂ ನೈತಿಕ ಶಿಕ್ಷಣ ಅನಿವಾರ್ಯವಾಗಿ ದೊರೆಯಲು ಭೀಮಸೇನ ತನ್ನ ಆಡಳಿತದಲ್ಲಿ ಊರಿಗೆ ಐದು ಜನರಂತೆ ಪಂಡಿತರನ್ನು ಇದಕ್ಕಾಗಿಯೇ ನಿಯಮಿಸುತ್ತಿದ್ದನಂತೆ. "ಸವೇತನಾಸ್ ಪಂಚಪಾಚ ಬುಧಾನ್" ಎಂಬುದಾಗಿ ಕಂಡುಬರುವದು. ಇಂದಿನ ಯುಗದಲ್ಲಿ ಗುರುಕುಲ ಶಿಕ್ಷಣ ಅಸಂಭವವಾದದ್ದರಿಂದ ಸಮಾಜಕ್ಕೆ ನೈತಿಕ ಹಾಗೂ ಧಾರ್ಮಿಕ ಶಿಕ್ಷಣ ಅವಶ್ಯಕ. ಇದಕ್ಕಾಗಿ ಅಂತಹ ಶಿಕ್ಷಣ ದೊರೆಯುವಂತೆ ಪ್ರಯತ್ನಿಸುವದು ಸರಕಾರದ ಆದ್ಯಕರ್ತವ್ಯ. ಕಾಯ್ದೆ ಕಾನೂನು ಮಾಡದ ಕಾರ್ಯ ವ್ಯಕ್ತಿಯಲ್ಲಿಯ ನೈತಿಕ ಪ್ರಜ್ಞೆ ಸುಲಭವಾಗಿ ನೆರವೇರಿಸುವದು. ಇದು ಮಹಾಭಾರತ ನಿರೂಪಿಸುವ ಸೂತ್ರ. ಇಂದಿನ ಎಲ್ಲ ಶೈಕ್ಷಣಿಕ ಸಮಸ್ಯೆಗಳಿಗೆ ಮಹಾಭಾರತದ ಶಿಕ್ಷಣನೀತಿಗಳು ಸಮುಚಿತ ಪರಿಹಾರ ನೀಡಬಲ್ಲವು.

ವಿದ್ಯೆಯೆಂಬುದು ಮಾನವನ ಬಾಳಿನ ಸರ್ವೋನ್ನತ ಗುರಿ

ನಿ. ಪ್ರ ವಿಜಯಮಹಾಂತ ಸ್ವಾಮಿಗಳವರು
ಚಿತ್ತರಗಿ ಸಂಸ್ಥಾನ ಮಠ, ಇಲಕಲ್ಲ

ಸಕಲ ೬೩ ಕೋಟಿ ಜೀವರಾಶಿಗಳಲ್ಲಿ ಮಾನವಜೀವಿ ಪ್ರಾಧಾನ್ಯತೆ ಪಡೆದಿದ್ದಾನೆ. ಕಾರಣ ಸ್ವತಂತ್ರವಾಗಿ ವಿಚಾರಿಸುವ ಶಕ್ತಿ, ಬೌದ್ಧಿಕಜಾಣ್ಮೆ ಇವೆಲ್ಲ ದೇವರು ಅವನಿಗೆ ಕೊಟ್ಟಿರುವ ವಿಶೇಷತೆಗಳು. ಇವೆಲ್ಲ ಕಾರಣ ಮಾನವ ಈ ಎಲ್ಲ ಪ್ರಾಣಿಗಳ ನಡುವೆ ಜೀವಿಯಾಗಿ ಅದೂ ಬೌದ್ಧಿಕ ಜೀವಿಯಾಗಿ ಬದುಕುತ್ತಲಿದ್ದಾನೆ. ಇದಕ್ಕೆಲ್ಲ ಮೂಲ ಆತ ಪರಂಪರಾಗತವಾಗಿ ಪಡೆದುಕೊಂಡು ಬಂದಿರುವ ಸಂಸ್ಕಾರ. ಆದಿಕಾಲದಿಂದಲೂ ಮಾನವ ತನ್ನ ಬೆಳವಣಿಗೆಗಾಗಿ..ಉನ್ನತವಾದ ಆದರ್ಶ ಪ್ರಾಯವಾದ ಜೀವನದ ಮೇರು ಹಂತವನ್ನು ತಲುಪಲಿಕ್ಕಾಗಿ ಪ್ರಯತ್ನಿಸುತ್ತಲೇ ಬಂದಿದ್ದಾನೆ. ಅವನ ಜೀವನದ ಬೆಳವಣಿಗೆಯಲ್ಲಿ ಹಲವಾರು ನಾಗರೀಕತೆ, ಸಂಸ್ಕೃತಿಗಳ ಮುಖಗಳು ನಿಚ್ಚಳವಾಗಿ ಕಾಣುತ್ತವೆ. ನಮ್ಮ ಹಿಂದೂ ಧರ್ಮ ಭೂಮಿಯಲ್ಲಿ ಹರಪ್ಪಾ ಮೋಹಂಜೋದಾರೊ ಸಂಸ್ಕೃತಿಗಳು ನಾಗರೀಕತೆಯ ಬೆಳವಣಿಗೆಗಾಗಿ, ಮಾನವ ಜೀವನ ವಿಕಾಸಕ್ಕಾಗಿ ಟೊಂಕ ಕಟ್ಟಿ ಯತ್ನಿಸಿವೆ.

ಈ ಸಂಸ್ಕೃತಿಗಳ ಬೆಳವಣಿಗೆ, ಕಲ್ಪನೆಗಳ ಅಡಿಗರಾಗಿ ನೆಲೆನಿಲ್ಲುವದು ನಾಗರೀಕತೆ: ಈ ನಾಗರಿಕತೆಯು ಬೆಳವಣಿಗೆಗೆ ಮತ್ತೆ ಆದೇ ಸಂಸ್ಕೃತಿಯ ತಳಗಟ್ಟು; ಹೀಗೆ ಒಂದಕ್ಕೊಂದು ಸರಪಳಿಯೋಪಾದಿಯಲ್ಲಿ ಒಂದನ್ನು ಬಿಟ್ಟು ಮತ್ತೊಂದಿಲ್ಲ ಎನ್ನುವಂತೆ ಪರಸ್ಪರ ಹೆಣೆದುಕೊಂಡಿವೆ.

ಈ ಹೆಣೆದುಕೊಂಡಿರುವ ಸಂಸ್ಕೃತಿ, ನಾಗರಿಕತೆಗಳಿಗೆ ಮೂಲ ತಾಯಿ ಬೇರು ವಿದ್ಯೆ ಎಂಬುದು ಇಲ್ಲಿ ಗಮನಾರ್ಹ. ಸಮಾಜದಲ್ಲಿ ಮಾನವ ಜೀವಿಯ ಪ್ರತಿಯೊಂದು ಹಂತಹಂತದ ಬೆಳವಣಿಗೆಯನ್ನು ನಾಗರಿಕತೆ ನಿಯಂತ್ರಿಸುತ್ತದೆ. ......ಮಾರ್ಗದರ್ಶನ ಸೂಚಿಸುತ್ತದೆ. ಈ ರೀತಿ ನಾಗರಿಕತೆಯ ಅರಿವಳಿಕೆಗೆ ಅದನ್ನೂ ಅರಿತುಕೊಳ್ಳಲು ಅಳತೆಗೋಲಾಗುವದು ವಿದ್ಯೆಯೇ ಆಗಿದೆ, ಹೀಗೆ ಮಾನವನ ಸರ್ವಾಂಗೀಣ ವಿಶ್ವಾಸಕ್ಕಾಗಿ....ಕಣ ಕಣ.... ರಕ್ತಗಳಾಗಿ....ಹೃದಯವಾಗಿ ಜೀವಂತವಾಗಿ ಸ್ಪಂದಿಸುವದು ವಿದ್ಯೆಯೇ ಆಗಿದೆ.

ಹೀಗೆ ವಿದ್ಯೆಯ ಮಹತ್ವವನ್ನು ನಮ್ಮ ಪೂರ್ವಿಕರೂ, ವಚನಕಾರರೂ. ಪಂಡಿತರು ಅಲ್ಲಲ್ಲಿ ಉಲ್ಲೇಖಿಸಿದ್ದನ್ನೂ ನಾವು ಗಮನಿಸಬಹುದು. ವಚನಕಾರರಂತೂ ತಮ್ಮ

ವಚನಗಳ ಮೂಲಕ ವಿದ್ಯೆಯ ಆಳ, ಅರಿವನ್ನೂ ಜನ ಮನದಲ್ಲಿ ಆಳವಾಗಿಯೇ ಬಿತ್ತಿದ್ದಾರೆ.

........"ವಿದ್ಯೆ ಇದ್ದವನ ಮುಖವು ಮುದ್ದು ಬರುವಂತಿಕ್ಕು।
ವಿದ್ಯೆ ಇಲ್ಲದವನ ಮುಖವು ಹಾಳೂರು ಹದ್ದಿನಂತಿಕ್ಕು ಕಡೆ ಸರ್ವಜ್ಞಾ"

ಎಂದು ಒಂದೆಡೆ ಸರ್ವಜ್ಞ ಕವಿ ಅತ್ಯಂತ ಮಾರ್ಮಿಕವಾಗಿ ಎರಡು ಸಾಲಿನಲ್ಲೇ ವಿದ್ಯೆಯ ಮಹತ್ವವನ್ನು ವಿವರಿಸಿದ್ದಾನೆ.

ಸರ್ವಜ್ಞನೇ ಇನ್ನೊಂದೆಡೆ

...."ವಿದ್ಯೆ ಕಲಿಸದಾ ತಂದೆ
—ಬುದ್ಧಿ ಕೊಡದಾ ಗುರುವು
ಬಿದ್ದಿರಲು ಬಂದು ನೋಡದಾ ತಾಯಿಯು
—ಶುದ್ಧ ವೈರಿಗಳು ಕಾಣಾ ಸರ್ವಜ್ಞ"

ಎಂದು ವಿದ್ಯೆಯನ್ನು ಮಗುವಿಗೆ ಪ್ರಾರಂಭಿಕ ಹಂತದಿಂದಲೇ ಕಲಿಸಬೇಕೆಂದೂ, ಮಾರ್ಮಿಕವಾಗಿ ತಿಳಿಸುವದರೊಂದಿಗೆ ಸಮಾಜದಲ್ಲಿ ತನ್ನ ಮಗುವಿಗೆ ವಿದ್ಯೆ ಕಲಿಸದಾ ತಂದೆ, ತಾಯಿ, ಗುರುಗಳು ವೈರಿಗಳು ಎಂದು ಅರ್ಥೈಸುವದರೊಂದಿಗೆ ತಿಳಿಹೇಳಿದ್ದಾನೆ. ಹೀಗೆ ಹಲವಾರು ವಚನಕಾರರು, ಪಂಡಿತರೂ ಅನೇಕನೇರ ರೀತಿಗಳಲ್ಲಿ ವಿದ್ಯೆ ಅದರ ಮಹತ್ವ ಆಳ ಅರಿವನ್ನು ಜನರಲ್ಲಿ ತಮ್ಮ ತಮ್ಮ ಅನುಭವಗಳ ಮೂಲಕ ಬಿತ್ತರಿಸಿದ್ದಾರೆ.

ವಿದ್ಯೆ ಎಂದರೆ ಕೇವಲ ಓದು ಬರಹ ಮಾತ್ರವಲ್ಲ. ಈ ಭವ್ಯ ಸಮಾಜದಲ್ಲಿ ಮಾನವನಿಗೆ ಜೀವನ ನಡೆಸಲು ಹಲವಾರು ಕಾಯಕಗಳಿವೆ. ಈ ಕಾಯಕಗಳನ್ನು ನಡೆಯಿಸಲು, ಕಲಿಯಲು ಬುದ್ಧಿ ಬೇಕು. ಈ ಬುದ್ಧಿ ಸಾಮಾನ್ಯ ಅರಿವಳಿಕೆ ಮಾನವನ ಸ್ವ ತಿಳುವಳಿಕೆಯಿಂದ ಸ್ವಜಾಣ್ಮೆಯಿಂದ ನಿರ್ಮಿತವಾಗುವಂಥದು. ಸ್ವಜಾಣ್ಮೆ ಅನುಭವ ಮಾರ್ಗದರ್ಶನ ಮೂಲಕ ಬರುವಂಥದ್ದು. ಮಾರ್ಗದರ್ಶನ, ಅನುಭವ ದೊರೆಯುವದು, ಆ ಕಾರ್ಯದಲ್ಲಿ ವ್ಯಕ್ತಿ ನಿಷ್ಣಾತನಾಗುತ್ತ ನಡೆದಂತೆ ಕಾಯಕ, ನಿಷ್ಣತೆ, ಪರಿಪೂರ್ಣತೆ, ಹುಟ್ಟಿ ಅನುಭವ ಒಂದೆಡೆ ಕ್ರೋಢೀಕರಣಗೊಳ್ಳುವಂಥದ್ದು. ಈ ಅನುಭವ ಜನ್ಯ ಪರಿಪೂರ್ಣ ತಿಳುವಳಿಕೆಯೇ ವಿದ್ಯೆಯ ಸಾಕಾರ ರೂಪವಾಗಿ ನಿಲ್ಲುವಂಥದ್ದು! ಎಷ್ಟೊಂದು ಅರ್ಥಗರ್ಭಿತ!!

ಆ ಕಾರಣದಿಂದಲೇ ಇರಬೇಕು ನಮ್ಮ ಹಿರಿಯರು ವಿದ್ಯೆಗಳಲ್ಲಿ ಹಲವಾರು ವಿಂಗಡಣೆಗಳನ್ನು ಸೂಚಿಸಿ ಹಲವಾರು ಗಾದೆಗಳನ್ನೂ ಉಕ್ತಿಗಳನ್ನೂ ರಚಿಸಿದ್ದು ಈ ಸಂದರ್ಭದಲ್ಲಿ ಒಂದು ಗಾದೆಯನ್ನು ಉದಹರಿಸಬಹುದು.

'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಮೇಲು'

ಎಂದೆನ್ನುವದರ ಮೂಲಕ ನಮ್ಮಲ್ಲಿ ಸಾಮಾನ್ಯವಾಗಿ ವಿದ್ಯೆಗಳು ಕೋಟಿ! ಇರಬಹುದೇ ಎಂದು ಹುಬ್ಬೇರಿಸಬಹುದು. ಅದನ್ನೇ ಸೂಚ್ಯವಾಗಿ ವಿದ್ಯೆಗಳು ಹಲವು ಎನ್ನುವದನ್ನು ಸೂಚ್ಯವಾಗಿ ನಮ್ಮ ಹಿರಿಯರು ಈ ಮೇಲಿನ ಗಾದೆಯ ಮೂಲಕ ಸೂಚಿಸಿದ್ದಾರೆ. ಎಲ್ಲ ವಿದ್ಯೆಗಳಲ್ಲೂ ಒಕ್ಕಲುತನವೇ ಶ್ರೇಷ್ಠ ಎಂದು ರೈತ ಜೀವನದ ಏರನ್ನು ಸೂಚಿಸಿದ್ದಾರೆ.

ವಿದ್ಯೆಯನ್ನು ಅರಿಯುವದರ ಮೂಲಕ ನಾಗರಿಕತೆ ಸಂಸ್ಕೃತಿಯ ಉಚ್ಚ ಹಂತವನ್ನು ತಲುಪಿ ತನ್ನ ಸ್ವಂತದ ಅರಿವನ್ನೂ, ಜ್ಞಾನವನ್ನೂ ಹೆಚ್ಚಿಸಿಕೊಳ್ಳುವದರ ಮೂಲಕ ಸಮಾಜದಲ್ಲಿ ಸ್ವನಿಯಂತ್ರತೆಯನ್ನು ಗಳಿಸಿಕೊಂಡು ಅನುಭವದ ಆಳವನ್ನು ಹೆಚ್ಚಿಸಿಕೊಂಡು ಬಾಳಿನ ಸಾರವನ್ನು ತಿಳಿದುಕೊಂಡು, ನೈತಿಕ ತಾತ್ವಿಕ ತಳಹದಿಯ ಮೇಲೆ ಜೀವನ ಸಾಗಿಸುವದನ್ನು ಕಲಿತು, ಜೀವನ ಸಾರ್ಥಕ್ಯ ಮಾಡಿಕೊಳ್ಳುವದು ವಿದ್ಯೆಯ ಮೂಲಕವೆ. ಕಾರಣ ವಿದ್ಯೆ ಮಾನವ ಜೀವನಕ್ಕೆ ದಾರಿದೀಪ. ತನ್ನ ಬಾಳನ್ನು ಹಸನಾಗಿಸಿಕೊಂಡು ಜೀವಿಸಲು, ಬೆಳೆಯಲೂ ಕಟ್ಟಿಕೊಂಡ ಗುರಿಯನ್ನೂ ತಲುಪಲು ವಿದ್ಯೆ ತುಂಬ ಸಹಕಾರಿಯಾಗುತ್ತದೆ. ಕಾರಣ "ವಿದ್ಯೆ ಎಂಬುದು ಮಾನವನ ಬಾಳಿನ ಸರ್ವೋನ್ನತ ಗುರಿ"ಯಾಗಿದೆ.

ಇಂಥ ವಿದ್ಯಾ ವೈಭವವನ್ನು ಪ್ರತಿಬಿಂಬಿಸತಕ್ಕಂಥ ವಿದ್ಯಾ ಕ್ಷೇತ್ರದಲ್ಲಿ ಪರಿಣಿತರಾದ ರಾಜ್ಯ ಶಿಕ್ಷಣ ಸಚಿವರಾಗಿ ಸೇವೆ ಸಲ್ಲಿಸಿದ ಶ್ರೀ ಜಿ. ಬಿ. ಶಂಕರರಾವ್ ಅವರಿಗೆ "ಕರ್ನಾಟಕ ವಿದ್ಯಾ ವೈಭವ" ಎನ್ನುವಂಥ ಒಂದು ಮಹತ್ವ ಪೂರ್ಣ ಉಪಯುಕ್ತ ಅಭಿನಂದನಾ ಗ್ರಂಥವೊಂದನ್ನು ಸಮರ್ಪಿಸುತ್ತಿರುವದು ಅತ್ಯಂತ ಸಮರ್ಪಕವೂ ಸಾರ್ವಕಾಲಿಕ ಉಪಯುಕ್ತವೂ ಆದ ಗ್ರಂಥವಾಗಿದೆ.

————

ರಾಮಾಯಣ ರಸಗಂಗೆ

ಕಡಬ ದೊರೆಸ್ವಾಮಿ ಅಯ್ಯಂಗಾರ್ಯ,
ಬಿ. ಎ. (ಆನರ್ಸ್) ಬಿ. ಎಡ್.,

ಭಾರತೀಯ ಸುಂದರ ಸಂಸ್ಕೃತಿ ಮಹಾ ಸೌಧದ ಮಹಾ ಶಿಲ್ಪಿಗಳೆಂದರೆ ಇಬ್ಬರು ಮಹರ್ಷಿಗಳು. ಒಬ್ಬರು ಭಗವಾನ್ ವಾಲ್ಮೀಕಿ; ಮತ್ತೊಬ್ಬರು ಭಗವಾನ್ ವ್ಯಾಸರು. ಇವರೀರ್ವರೂ ಭುಜಕ್ಕೆ ಭುಜ ಕೊಟ್ಟು ನಿಲ್ಲುವ ಸರಿಸಮಾನಸ್ಕಂದರು.

ವ್ಯಾಸರದು ದ್ವಾಪರ ಯುಗವಾದರೆ ಭಗವಾನ್ ವಾಲ್ಮೀಕಿಯದು ತ್ರೇತಾಯುಗ ದಶರಥ ಪುತ್ರನಾದ ಶ್ರೀರಾಮನ ಸಮಕಾಲೀನರವರು. ಭಾರ್ಗವ ಚ್ಯವನ ಮಹರ್ಷಿಗಳ ವಂಶೋದ್ಭವರಾಗಿ ಘೋರ ತಪವನ್ನಾಚರಿಸುವಾಗ ಇವರ ಮೇಲೆ ವಲ್ಮೀಕ (ಹುತ್ತ) ಬೆಳೆದುಕೊಂಡಿದ್ದರಿಂದ ವಾಲ್ಮೀಕಿಯೆಂಬ ಹೆಸರು ಇವರಿಗೆ ಅನ್ವರ್ಥವಾಯಿತು. ಆದ್ದರಿಂದ ಶ್ರೀಮದ್ವೇದಾಂತ ದೇಶಿಕರು ಇವರನ್ನು ತಮ್ಮ ಪಾದುಕಾ ಸಹಸ್ರದಲ್ಲಿ "ವಸುಧಾ ಶ್ರೋತ್ರ ಜನ್ಮಾಮುನಿಃ" ಎಂದು ಕರೆದಿದ್ದಾರೆ. ಭವಭೂತಿಯ ಮಾತಿನಲ್ಲಿ ಇವರೇ "ಆದ್ಯಃ ಕವಿಃ" ಕ್ಷೇಮೇಂದ್ರನ ಶ್ಲಾಘನೆಯಲ್ಲಿ "ಜ್ಯೇಷ್ಠೋ ಜಯತಿ ವಾಲ್ಮೀಕಿಃ, ಸರ್ಗಬಂಧೇ ಪ್ರಜಾಪತಿಃ, ಕವೀನಾಂ ಚಕ್ರವರ್ತಿಃ".

ವಾಲ್ಮೀಕಿ ಪ್ರಚೇತಸಮರ್ಷಿಯ ಸತ್ಪುತ್ರ. ಶ್ರೀರಾಮ ಮಂತ್ರದ ಪ್ರಭಾವದಿಂದ ಪ್ರಬುದ್ಧರಾಗಿ ವಿಪಿನ ವಿಲಸಿತ ಚಿತ್ರಕೂಟ ಪರ್ವತದ ತಪ್ಪಲಿನಲ್ಲಿ ವಾಸಿಸತೊಡಗಿದರು. ಸೀತಾರಾಮ ಲಕ್ಷ್ಮಣರು ಬಂದಾಗ ಆ ಮೂವರನ್ನು ಸ್ವಾಗತಿಸಿದರು. ಸೀತೆಯನ್ನು ಪರಿತ್ಯಜಿಸಿದಾಗ ಗರ್ಭವತಿಯಾಗಿದ್ದ ಅವಳಿಗೆ ತಮ್ಮ ಎಲೆವನೆಯಲ್ಲಿ ಆಶ್ರಯವಿತ್ತು, ಅವಳ ಅವಳಿ ಮಕ್ಕಳಾದ ಲವ ಕುಶರನ್ನು ಲಾಲಿಸಿ ಪಾಲಿಸಿ ರಾಮಾಯಣದ ಉಪದೇಶವಿತ್ತು ರಾಮನ ಮುಂದೆಯೇ ಹಾಡಿಸದ ಕಥಾಪಲ್ಲವಿ ಈ ಆದಿ ಕಾವ್ಯದಲ್ಲಿ ನುಸುಳಿಕೊಂಡಿದೆ. ಇಷ್ಟನ್ನು ಬಿಟ್ಟರೆ ವಾಲ್ಮೀಕಿಯ ಜನ್ಮಸ್ಥಳವಾವುದು, ಈತನಿಗೆ ಜನ್ಮವಿತ್ತ ಪುಣ್ಯವತಿಯಾರು, ಮಾನವ ಸಹಜವಾದ ಹೃದಯ ವೀಣೆಯನ್ನು ಬಹು ನಯವಾಗಿ ನುಡಿಸಿದ ಕಲಾಕುಶಲನ ಸಂಸ್ಕೃತಿ ವೈಶಾಲ್ಯದ ಹಿನ್ನೆಲೆಯೇನು ಎಂಬ ಇವೆಲ್ಲ ಅಂಶಗಳೂ ಗಾಢಾಂಧಕಾರದಲ್ಲಿ ಮುಳುಗಿದ ನಿಗೂಢ ರಹಸ್ಯಗಳು.

ಈ ಕವಿ ಬ್ರಹ್ಮ ಶ್ರೀರಾಮನ ಸಮಕಾಲೀನನೆಂಬುದಕ್ಕೆ ರಾಮಾಯಣದ ಅಯೋಧ್ಯಾಕಾಂಡದಲ್ಲಿ ಹಾಗೂ ಉತ್ತರ ಕಾಂಡದಲ್ಲಿ ಮಿಂಚಿನಂತೆ ಹೊಳೆದು ಮಾಯ

ವಾಗುವ ಕೊಂಚ ಕೊಂಚ ಉಲ್ಲೇಖಗಳು ಅಲ್ಲಲ್ಲಿ ಮಿನುಗುತ್ತವೆ. ಈ ಕಾವ್ಯ ಭಾಗಗಳು ಪ್ರಕ್ಷಿಪ್ತಗಳೆಂದು ಹಲವು ವಿದ್ವಾಂಸರು ಅಭಿಪ್ರಾಯಪಟ್ಟರೂ ಅಶ್ವಘೋಷ, ಕಾಳಿದಾಸ, ಭವಭೂತಿ, ಆನಂದವರ್ಧನ, ರಾಜಶೇಖರರಂಥಕವಿವಿಮರ್ಶಕ ಲಾಕ್ಷಣಿಕರುರಾಮಾಯಣದ ಹಿರಿಮೆಯನ್ನು ಆಮೂಲಾಗ್ರವಾಗಿ ಒಪ್ಪಿ ಅದರ ಪ್ರಾಮಾಣ್ಯವನ್ನು ಮೆಚ್ಚಿದ್ದಾರೆ. ಆದರೂ ಆಧುನಿಕ ವಿಮರ್ಶಕರ ವಾದದಿಂದಾದ ವೈಖರಿ ಇನ್ನೂ ಮುಗಿದಿಲ್ಲ.

ವಾಲ್ಮೀಕಿಯ ಕಾಲ ನಿರ್ಣಯದಲ್ಲಿಯೂ ಭಿನ್ನಾಭಿಪ್ರಾಯಗಳಿವೆ. ಈ ರಸಸಿದ್ಧ ಕವೀಶ್ವರ ಸುಮಾರು ಕ್ರಿ. ಪೂ. ಆರು ಸಾವಿರ ವರ್ಷಗಳ ಹಿಂದಿನವನೆನ್ನುತ್ತಾರೆ ಕೆಲವರು, ಮತ್ತೆ ಕೆಲವರು ಮೂರು ಸಾವಿರ ವರ್ಷಗಳ ಪ್ರಾಚೀನತೆಗೆ ಸೇರಿದವನೆನ್ನುತ್ತಾರೆ. ಮಾನಿಯರ್ ವಿಲಿಯಂಸ್ ವಿಂಟರ್ ನಿಡ್ಸ್ ಕ್ರಿ. ಶ. ಎರಡನೆಯ ಶತಮಾನಾಂತ್ಯ ಅಥವಾ ಕ್ರಿ. ಪೂ. ಮೂರನೆಯ ಶತಮಾನದವನೆಂದು ವಾದಿಸುತ್ತಾರೆ. ಮ್ಯಾಕಡಾನೆಲ್ ಕ್ರಿ. ಪೂ. ೪೦೦-೨೦೦ ರಲ್ಲಿ ವಾಲ್ಮೀಕಿ ಇದ್ದಿರಬಹುದೆಂದು ಹೇಳುತ್ತಾರೆ. ಒಟ್ಟಿನಲ್ಲಿ ಬಾಹ್ಯಾಂಭ್ಯತರ ಕಾರಣಗಳ ಆಧಾರದ ಮೇಲೆ ಬುದ್ಧನ ಕಾಲಕ್ಕೂ ಹಿಂದೆ ಬಾಳಿದ ಆದಿ ಕವಿಯೆಂದು ಹೇಳಬಹುದು. ಕ್ರಿ. ಪೂ. ೫೦೦ಕ್ಕೂ ಪ್ರಾಚೀನನೆಂದು ಒಪ್ಪಿಕೊಳ್ಳಬಹುದಾಗಿದೆ, ಎಲ್ಲವೂ ಸಂದೇಹ ಸಂದೊಹ.

ವಾಲ್ಮೀಕಿ ರಾಮಾಯಣದ ಕೀರ್ತಿ ದಿಗಂತವ್ಯಾಪಿ. ಜಗತ್ತಿನ ಜನತೆಯ ವಿವಿಧ ನಾಡು ನುಡಿಗಳಲ್ಲಿ ಹಾಸು ಹೊಕ್ಕಾಗಿ ಸೇರಿಕೊಂಡಿದೆ. ದೂರಪ್ರಾಚ್ಯ ಹಾಗೂ ಪಾಶ್ಚಾತ್ಯ ನಾಗರಿಕತೆಗಳಲ್ಲಿ ನುಸುಳಿಕೊಂಡು ತನ್ನ ಪ್ರಭಾವ ಬೀರಿದೆ. ರಾಮಾಯಣದ ಮೇಲೆ ಯವನರ-ಗ್ರೀಕರ ಪ್ರಭಾವವಿದೆಯೆಂಬುದನ್ನು ಒಪ್ಪಲು ಸಾಧ್ಯವಿಲ್ಲ. ಇಂಡೋನೇಸಿಯಾ, ಇಂಡೋಚೈನಾ, ಕ್ಯಾಂಬೋಡಿಯಾ, ಬಾಲಿ, ಜಾವ, ಸುಮಾತ್ರ ಮುಂತಾದ ಕಡೆಗಳಲ್ಲಿಯೂ ರಾಮಾಯಣದ ಪ್ರಾಚುರ್ಯವಿತ್ತೆಂಬುದಕ್ಕೆ ಅಲ್ಲಿಯ ದೇವಾಲಯ ಶಿಲ್ಪ ಶಿಲಾಶಾಸನ ಹಾಗೂ ಭಗ್ನಾವಶೇಷಗಳಲ್ಲಿ ಸಾಮಾಜಿಕ ಸಂಪ್ರದಾಯಗಳಲ್ಲಿ ಸೂಚನೆಗಳು ಕಂಡುಬರುತ್ತವೆ.

ಈ ಮೇರು ಕೃತಿಯ ಉಗಮಕ್ಕೆ ಹೃದಯ ವಿದ್ರಾವಕವಾದ ಹಿನ್ನೆಲೆಯಿದೆ, ರಕ್ತವರ್ಣರಂಜಿತವಾದ ಗಂಭೀರ ನಾಟಕ (Tragedy) ರಂಗದ ಪೂರ್ವ ರಂಗವಿದ್ದಂತೆ. ಸಹೃದಯನಾದವನು ಒಂದೆರಡುಸಾರಿ ಅಷ್ಟೇ ಅಲ್ಲ, ಬಾರಿ ಬಾರಿಗೂ ಪುರಶ್ಚರಣೆ ಮಾಡಿ ಮೆಲುಕ ಹಾಕುತ್ತ ತನ್ಮಯನಾದರೆ ಮಾನವ ಜೀವನ ರಹಸ್ಯ ರಾಮಾಯಣದಲ್ಲಿ ರಾಗರಂಜಿತವಾಗಿ ಸೂಕ್ಷ್ಮವಾಗಿ ಬೆಳಗುತ್ತದೆ. ಆಗ ಕವಿಬ್ರಹ್ಮನ ಕುಂಚವಿನ್ನೆಷ್ಟು ತೆಳುವೊ, ವರ್ಣವಿನ್ಯಾಸವಿನ್ನೆಷ್ಟು ನಯವೊ ಎಂದು ಮಂತ್ರ ಮುಗ್ಧನಾಗುವ ಸನ್ನಿವೇಶ ಮಿಂಚಿನಂತೆ ಹೊಳೆಯುತ್ತದೆ.

ಕೃತ್ತಿವಾಸನ ಪ್ರಕಾರ ವಾಲ್ಮೀಕಿಯೊಬ್ಬ ವ್ಯಾಧ. ಹಿಂಸಾತ್ಮಕ ಜೀವನ ಅವನದು. ತಾಮಸವೃತ್ತಿ. ಕಾಲಕ್ರಮದಲ್ಲಿ ಭಗವಂತನ ಕೃಪೆ ಅವನ ಮೇಲೆ ಪ್ರಸರಿಸಿತು. ಶ್ರೀರಾಮಮಂತ್ರ ಜಪದಲ್ಲಿ ತೊಡಗಿ ಮೈ ಮರೆತ. ಒಂದೇ ಸಮವಾಗಿ ಕಾಲಚಕ್ರವುರುಳುತ್ತ ಬಂದಿತು. ಏನಾದರೂ ವ್ಯಾಧನಿಗೆ ಬಾಹ್ಯ ಜಗತ್ತಿನ ಅರಿವೇ ಆಗಲಿಲ್ಲ. ಚಿತ್ರಕೂಟ ಪರ್ವತದ ತಪ್ಪಲೇ ಅವನ ಬೀಡಾಯಿತು. ಕಲ್ಲು ಮುಳ್ಳಿಡಿದ ಕಗ್ಗಾಡಿನಲ್ಲಿ ಕುಳಿತು ತಪವೆಸಗುತ್ತಿದ್ದಾಗ ಅವನನ್ನು ಬಳಸಿ ಹುತ್ತ ಬೆಳೆಯಿತು. ತಪಸ್ವಿ ಅದರೊಳಗೆ ಅಡಗಿ ಹೋದ. ಆಮೇಲೆ ತಪಸ್ಸು ಫಲಿಸುವ ಕಾಲ ಬಂದಿತು. ನಾರದರು ತಾಪಸನ ಕಣ್ಣೆದುರಿಗೆ ಕಾಣಿಸಿಕೊಂಡು, "ಏಳೈ ಮುನಿಯೆ ಪ್ರಬುದ್ಧನಾದೆ, ಎದ್ದೇಳು, ವಾಗ್ದೇವಿಯ ಪ್ರಸಾದ ನಿನಗಾಗಿದೆ, ರಾಮಚರಿತೆಯನ್ನು ಹಾಡು, ನಿನ್ನ ಒಳಗಣ್ಣು ಬೆಳಗಲಿ, ಆದ್ಯಃ ಕವಿರಸಿ, ನೀನು ಆದಿ ಕವಿಯಾಗಿರುವೆ" ಎಂದು ಹರಸಿ ಮೈಗರೆದರಂತೆ. ವಲ್ಮೀಕದಿಂದೆದ್ದ ವ್ಯಾಧ ಆಗ ವಾಲ್ಮೀಕಿಯಾದ, ವ್ಯಾಧ ಸಾಧುವಾದ, ತನ್ನ ಕಣ್ಣರಳಿಸಿ ಸುತ್ತಿನ ಪ್ರಕೃತಿ ಸೌಂದರ್ಯವನ್ನು ನೋಡುತ್ತ ನೋಡುತ್ತ ಧ್ಯಾನ ಮಗ್ನನಾದ.

ಒಂದು ದಿನ ಸುಪ್ರಭಾತ ಸಮಯ. ಶಿಷ್ಯ ಭರದ್ವಾಜನೆಡೆಗೆ ತಿಳಿನೀರಿನ ತಮಸಾ ನದಿಯ ಸ್ನಾನಕ್ಕಾಗಿ ಹೊರಟ. ಶಿಷ್ಯನು ಕೊಟ್ಟ ನಾರುಡೆಯನ್ನು ಕೈಗೆತ್ತಿಕೊಂಡು ವನಲಕ್ಷ್ಮಿಯಾಗರದ ಚೆಲುವಿನಲ್ಲಿ ಮೈ ಮರೆತು ನೀಲ ಗಗನದತ್ತ ನೋಟ ಬೀರಿದ ವಾಲ್ಮೀಕಿ. ಗಗನ ಚುಂಬಿಯಾಗಿ ಬೆಳೆದಿದ್ದ ಮರವೊಂದರ ಕೊಂಬೆಯ ಮೇಲೆ ಕ್ರೌಂಚ ಮಿಥುನವನ್ನು ಥಟ್ಟನೆ ಕಂಡ. ರತಿಸುಖದಲ್ಲಿ ಮುಳುಗಿ ಹಾಡುತ್ತಿದ್ದ ಕ್ರೌಂಚ ಪಕ್ಷಿಗಳ ಇಂಚರವನ್ನು ಆಲಿಸುತ್ತಿದ್ದಂತೆಯೇ ವೈರಿಸಿಲಯನಾದ ಪಾಪಿಷ್ಠ ವ್ಯಾಧನೊಬ್ಬ ಗಂಡು ಕ್ರೌಂಚೆಗೆ ಗುರಿಯಿಟ್ಟು ಬಾಣ ಎಸೆದ. ಕೂರಂಬು ತಾಗಿದೊಡನೆ ಕ್ರೌಂಚಪತಿ ನೆಲಕ್ಕುರುಳಿತು, ನೆತ್ತರಿನ ಮಡುವಲ್ಲಿ ಹೊರಳುತ್ತಿದ್ದ ಅದರ ತೀವ್ರಾವಸ್ಥೆಯನ್ನು ಕಂಡ ಕ್ರೌಂಚಪತ್ನಿ "ರುರಾವ ಕರುಣಾಂ ಗಿರಮ್" ಕರುಳಿರಿಯುವಂತೆ ದನಿಗೆಟ್ಟು ಗೋಳಾಡಿತು. ಕಲ್ಲೂ ಕರಗುವಂಥ ಆ ರೋದನವು ವಾಲ್ಮೀಕಿಯ ಎದೆಯಾಳವನ್ನು ಮುಟ್ಟಿತು, ಮುನಿಗೆ ದುಃಖವುಕ್ಕಿತು, ಕಣ್ಣೆರಡು ಕೆಂಗಿಡಿಯನ್ನುಗುಳಿತು, ಅವನಿಗೆ ಮನೋವಾಕ್ಕಾಯಗಳ ಮೇಲಿನ ಸಂಯಮ ತಪ್ಪಿತು. ಕೋಪದಿಂದ.

"ಮಾ ನಿಷಾದ ಪ್ರತಿಷ್ಠಾಂ ತ್ವಮಗಮಃ ಶಾಶ್ವತೀಃ ಸಮಾಃ
ಯತ್ಕ್ರೌಂಚ ಮಿಥುನಾ ದೇಕಮವಧೀಃ ಕಾಮಮೋಹಿತಮ್"

ಬಾಳದಿರು ನಿಡುಗಾಲ ಓ ವ್ಯಾಧ, ಮಿಥುನದೊಳು ಕಾಮದಿಂ ಕಾತರಿತ ಖಗ ಪತಿಯ ಕೊಂದಿರುವೆ" ಎಂದು ಶಪಿಸುತ್ತ ತಮಸೆಯ ತಿಳಿನೀರಿನಲ್ಲಿ ಮುಳುಗಿ ಶಿಷ್ಯ

ನೊಡನೆ ನಿಜಾಶ್ರಮಕ್ಕೆ ತೆರಳಿದ. ಆದರೂ ಮುನಿಗೆ ದಾರಿಯುದ್ದಕ್ಕೂ ಹೆಣ್ಣು ಕ್ರೌಂಚೆಯ ಗೋಳು ಕಿವಿಯೊಳಗೆ ಅನುರಣಿತವಾಗಿ ಹೃದಯ ವೀಣೆಯನ್ನು ನುಡಿಯುತ್ತಿತ್ತು. ಆಗಾಗ ತನ್ನ ಶಿಷ್ಯನಿಗೆ ಹೇಳಿಕೊಳ್ಳುತ್ತ ಕುಳಿತ. ಎಲ್ಲಿಂದಲೋ ಚತುರ್ಮುಖ ಬ್ರಹ್ಮ, ಮುನಿಯ ಮುಂದೆ ಸುಳಿದ. ಮುನಿಗೆ ಪರಮಾಶ್ಚರ್ಯ. ಬಂದ ದೇವಾತಿಥಿಗೆ ಅರ್ಘ್ಯವಿತ್ತು ಕುಳ್ಳಿರಿಸಿ ತನ್ನ ಮನದಾಳದ ದುಗುಡವನ್ನು ತೋಡಿಕೊಂಡು ಕಂಬನಿ ಮಿಡಿದ. ಬ್ರಹ್ಮಗೆರೆ ನಗೆಯನ್ನು ಬೀರಿ ವಾಲ್ಮೀಕಿಗೆ ಸಮಾಧಾನೋಕ್ತಿಗಳನ್ನಾಡಿ, "ನಿನ್ನ ಶೋಕ ಶ್ಲೋಕತ್ವವನ್ನು ಹೊಂದಲಿ, ಅದು ಸತ್ಯಕ್ಕೆ ತವರಾಗಿ ಮನೋಹರ ಪದಬಂಧದಿಂದ ಮೆರೆಯಲಿ, ನಿನ್ನ ಪುಣ್ಯಮಯವಾದ ಕಥೆ ಲೋಕದಲ್ಲಿ ತೇಲಿ ನಿಡುಗಾಲ ನೆಲಸಿರಲಿ ಗಿರಿನಂದಿಗಳಂದದಲಿ' ಎಂದು ಹರಸಿ ಮರೆಯಾದ. ಇಂತು ಶೋಕದಿಂದುಕ್ಕಿ ಶ್ಲೋಕವಾಯಿತು, ಮನೋಹರ ಆದಿ ಕಾವ್ಯವಾಯಿತು ರಾಮಾಯಣ. ಆನಂದವರ್ಧನಾಚಾರ್ಯನು ಹೇಳಿರುವಂತೆ "ಕ್ರೌಂಚ ದ್ವಂದ್ವವಿಯೋಗೋತ್ಥಃ ಶೋಕಃ ಶ್ಲೋಕತ್ವಮಾಗತಃ".

ರಾಮಾಯಣವು ೨೪ ಸಹಸ್ರಗ್ರಂಥ, ಚತುರ್ವಿಂಶತಿ ಸಹಸ್ರಿಕಾ ಎಂದು ಹೆಸರಿತ್ತಿದೆ. ಗಾಯಿತ್ರಿಯಂಥ ಮಂತ್ರವಿಲ್ಲ, ಗೀತೆಯಂಥ ಗ್ರಂಥವಿಲ್ಲ ಎಂಬುದೊಂದು ವೇದಕ್ಕೆ ಸಮಾನವಾದ ಗಾದೆ, ಗಾಯಿತ್ರಿ ಮಂತ್ರದಲ್ಲಿ ಒಟ್ಟು ನಾಲ್ಕು ಪಾದಗಳಿಂದ ಇಪ್ಪತ್ತು ನಾಲ್ಕು ಅಕ್ಷರಗಳಿವೆ. ಒಂದೊಂದು ಅಕ್ಷರಕ್ಕೂ ಒಂದೊಂದು ಸಾವಿರದಂತೆ ೨೪ ಸಾವಿರ ಶ್ಲೋಕಗಳನ್ನು ಹಾಡಿದ್ದಾರೆ ವಾಲ್ಮೀಕಿ ಭಗವಾನ್. ಆದ ಕಾರಣ ರಾಮಾಯಣಕ್ಕೆ ಅಕ್ಷರ ಸಹಸ್ರಿಕಾ ಎಂಬ ಪ್ರಖ್ಯಾತಿ ಇದೆ. ಈ ಶ್ಲೋಕ ಸಮೂಹದಲ್ಲಿ ಎಂಟನೆಯ ಛಂದಸ್ಸಿಗೆ ಸೇರಿದ ಅನುಷ್ಟುಪ್ ವೃತ್ತಗಳೇ ಹೆಚ್ಚು ಸಂಖ್ಯೆಯಲ್ಲಿವೆ. ಆದ ಕಾರಣ ಆದಿ ಕವಿಗೆ ಅನುಷ್ಟುಪ್ ಶ್ಲೋಕ ರಚನೆ ಮಾತ್ರ ಗೊತ್ತಿತ್ತು; ಇನ್ನಿತರ ವೃತ್ತಗಳು ಬರದು, ಎಂದು ಮೊದಲಾಗಿ ವಾದಿಸುವ ಅತಿವಾದಿಗಳೂ ನಮ್ಮಲ್ಲಿದ್ದಾರೆ. ಈ ಮಾತನ್ನು ಒಪ್ಪಿಕೊಳ್ಳುವುದಾದರೆ ವಾಲ್ಮೀಕಿ ರಾಮಾಯಣದ ಹಲವಾರು ಸಂಧರ್ಭಗಳಲ್ಲಿ ಹಾಡಿರುವ ಮುದ್ದಾದ ಮನಮೋಹಕ ವೃತ್ತಗಳನ್ನೂ, ಸರ್ಗಗಳನ್ನೂ ಪ್ರಕ್ಷಿಪ್ತಗಳೆಂದು ಕೈ ಬಿಟ್ಟರೆ ಉಳಿಯುವುದೇನು? ಮೃದುವಾದ ರುಚಿಕರವಾದ ಕೊಬ್ಬರಿಯನ್ನು ಬಿಟ್ಟು, ಕಟ್ಟಿಗೆಯನ್ನು ಹುಡುಕಿಕೊಂಡು ಹೋದಂತಾಗುತ್ತದೆ.

ಮೇಲೆ ಹೇಳಿದ ೨೪ಸಹಸ್ರ ಶ್ಲೋಕಗಳನ್ನೆ ಬಾಲ,ಅಯೋಧ್ಯ.ಅರಣ್ಯ. ಕಿಷ್ಕಿಂಧ, ಸುಂದರ, ಯುದ್ಧ ಹಾಗೂ ಉತ್ತರ ಕಾಂಡಗಳೆಂದು ವಿಂಗಡಿಸಲಾಗಿದೆ. ಬಾಲ ಕಾಂಡದಲ್ಲಿ ಶ್ರೀರಾಮ,ಲಕ್ಷ್ಮಣ,ಭರತ,ಶತ್ರುಘ್ನರ,ಜನನ ಬಾಲ್ಯ,ವಿದ್ಯಾಭ್ಯಾಸ ಸೀತಾಕಲ್ಯಾಣ ಮುಂತಾದ ಕಥಾ ಭಾಗಗಳು ಅಡಗಿವೆ. ಅಯೋಧ್ಯಾ ಕಾಂಡದಲ್ಲಿ ಅಯೋಧ್ಯೆಯಲ್ಲಿ ನಡೆದ ಸಂಗತಿಗಳು, ಅರಣ್ಯ ಕಾಂಡದಲ್ಲಿ ದುಷ್ಟ ಶಿಕ್ಷಣ ಶಿಷ್ಟ ರಕ್ಷಣ ಸೀತಾಪಹರಣದ

ಸಮಾಚಾರಗಳು, ಕಿಷ್ಕಿಂಧಾ ಕಾಂಡದಲ್ಲಿ ಅಲ್ಲಿಗೆ ಸಂಬಂಧಪಟ್ಟ ಕಥಾ ವಸ್ತು ಮುಖ್ಯವಾಗಿ ರಾಮ ಸುಗ್ರೀವ ಸಖ್ಯ ವಾಲಿವಧೆ ಮುಂತಾದ ವಿಷಯಗಳು, ಯುದ್ಧ ಕಾಂಡದಲ್ಲಿ ರಾಮ ರಾವಣ ಯುದ್ಧೋದ್ಯಮ, ವಿಭೀಷಣ ಪಟ್ಟಾಭಿಷೇಕ, ಶ್ರೀರಾಮ ಪಟ್ಟಾಭಿಷೇಕ—ಹೀಗೆ ಆಯಾಯ ಸಂದರ್ಭೋಚಿತವಾದ ಸಂಗತಿಗಳನ್ನು ಸ್ಥಳದ ನಾಮ ನಿರ್ದೇಶನಮಾಡಿ ಕಾಂಡಗಳ ಹೆಸರಿಡಲಾಗಿದೆ. ಆದರೆ ಸುಂದರ ಕಾಂಡಕ್ಕೆ ಮಾತ್ರ ಹಾಗೆ ಮಾಡಿಲ್ಲ. ಈ ಕಾಂಡದಲ್ಲಿ ವಿವರಿಸಿರುವ ಕಥಾ ಭಾಗವೆಲ್ಲ ಲಂಕೆಗೆ ಸಂಬಂಧಪಟ್ಟದ್ದು. ಆದ್ದರಿಂದ ಇದಕ್ಕೆ ಲಂಕಾ ಕಾಂಡವೆಂದು ಹೆಸರಿಡಬಹುದಾಗಿತ್ತು. ಆದರೆ ಸುಂದರಕಾಂಡವೆಂಬ ಹೆಸರನ್ನೇ ಸಮರ್ಥಿಸಬೇಕಾದರೆ ಕೆಲವು ಸ್ವಾರಸ್ಯವಾದ ಕಾರಣಗಳನ್ನು ಹೇಳಬಹುದು. ಹನುಮಂತನ ವಿಜಯವು ಇಲ್ಲಿ ವರ್ಣಿತವಾಗಿರುವುದರಿಂದ ಹನುಮ ಕಾಂಡ ಅಥವಾ ಹನುಮದ್ವಿಜಯ ಕಾಂಡವೆನ್ನಬಹುದಾಗಿತ್ತು, ಇಲ್ಲವೆ ಸೀತೆಯ ಅಳಲನ್ನು ಚಿತ್ರಿಸಿರುವುದರಿಂದ ಸೀತಾ ಕಾಂಡವೆನ್ನಬಹುದಾಗಿತ್ತು. ಇವೆಲ್ಲವನ್ನೂ ಬಿಟ್ಟು ವ್ಯಕ್ತಿಗತವೂ, ಸ್ಥಾನನಿರ್ದೇಶಕವೂ ಅಲ್ಲದ ಸುಂದರಕಾಂಡವೆಂದು ಕರೆದಿರುವುದು ಸಕಾರಣವಾಗಿದೆ, ಈ ಐದನೆಯ ಕಾಂಡ ಈ ಆದಿ ಕಾವ್ಯದಲ್ಲಿ ನಾಯಕ ರತ್ನವಿದ್ದಂತಿದೆ. ಅಲಂಕಾರ, ವೃತ್ತ. ವರ್ಣನೆ. ರಸ, ಧ್ವನಿ. ವಿಪ್ರಲಂಭ ಶೃಂಗಾರ ಸೀತಾ ರಾಮರ ಸೌಂದರ್ಯ, ಸೌಂದರ್ಯ ದೌತ್ಯ, ದೌತ್ಯ ಸೌಂದರ್ಯ, ಶರಣಾಗತಿ ಸೌಂದರ್ಯ, ಜೀವಾತ್ಮ ಪರಮಾತ್ಮನ ಸಾನ್ನಿಧ್ಯವನ್ನು ಆಚಾರ್ಯ ಹನುಮಂತನ ಮೂಲಕ ಸೇರಬೇಕೆಂಬ ಆಸ್ತಿಕ ಸೌಂದರ್ಯ—ಇವೆಲ್ಲವೂ ಹಾಲು-ಜೇನು ಸೇರಿದಂತೆ, ಕಲೆತು ಚಿತ್ತಾಕರ್ಷಿತವಾಗಿರುವುದು ಇನ್ನೆಲ್ಲಿಯೂ ಇಲ್ಲ. ಅಲ್ಲದೆ ಹನುಮಂತನಿಗೆ "ಸುಂದರ"ವೆಂಬ ಸಮೀಚೀನವಾದ ಹೆಸರೊಂದುಂಟು. ಆದ್ದರಿಂದ ಈ ಕಾಂಡಕ್ಕೆ ಸುಂದರಕಾಂಡವೆಂದು ಹೆಸರಿಟ್ಟಿರುವುದು ಸೌಂದರ್ಯದ ಪರಕಾಷ್ಠೆಯನ್ನು ಮುಟ್ಟಿದೆ.

ಉತ್ತರ ಕಾಂಡದಲ್ಲಿ ಅವತಾರ ಸ್ತ್ರೀ ಪುರುಷರ ಕರ್ತವ್ಯ ಮುಗಿದ ಮೇಲೆ ಉಪಸಂಹಾರ ಸಂದರ್ಭವು ಕೆಲವು ಪ್ರಾಸಂಗಿಕ ಕಥೆಗಳೊಡನೆ ಮುಕ್ತಾಯವಾಗಿರುವುದು ಸ್ವಾಭಾವಿಕ. ಇದು ವಾಲ್ಮೀಕಿ ಪ್ರೋಕ್ತವೂ ಅಲ್ಲವೂ—ಈ ಅಂಶವನ್ನು ವಿಮರ್ಶಿಸುವುದು ಅಪ್ರಸ್ತುತ.

ವಾಲ್ಮೀಕಿ ರಾಮಾಯಣವು ಮೂರು ಪಾಠಕ್ರಮಗಳಲ್ಲಿ ಸಿಗುತ್ತಿದ್ದರೂ ಕನ್ನಡನಾಡಿಗೆ ದಾಕ್ಷಿಣಾತ್ಯ ಪಾಠವೇ ಅತ್ಯಂತ ಮಾನ್ಯ. ಇದು ಶ್ಲೋಕಸಂವಿಗ್ನಮಾನಸರಾಗಿದ್ದ ವಾಲ್ಮೀಕಿಯ ಹೃದಯಾಂತರಾಳದಿಂದ ಉಕ್ಕಿದ ರಾಮಾಯಣ ರಸಗಂಗೆ, ಕವಿಯೇ ಹೇಳಿಕೊಂಡಿರುವಂತೆ.

> "ರಾಮಾಯಣ ಕಾವ್ಯಮಿದು ಶ್ರೀರಾಮ ಚಾರಿತ್ರಂ :
> ಜಾನಕಿಯ ವೃತ್ತಾಂತವಡಗಿಹುದಿದರೊಳಗೆ

ದಶಶಿರನ ವಧೆಯಿಂದೆ ಮೆರೆವುದೀ ಮೇರುಕೃತಿ
ಪಠನಕ್ಕೆ ಗೇಯಕ್ಕೆ ಮಾಧುರ್ಯದಾಲಯವು,
ವೃತ್ತಿತ್ರಯ ಸರಿಗಮ ಪಧನಿಸಗಳೆಂಬ ಸಪ್ತ
ಸ್ವರಾನ್ವಿತ ಲಯಬದ್ಧ ಸಂಗೀತ ಕನುವಾಗಿ
ವಲ್ಲಕಿಯ ವಾದನಕೆ ಜೋಡಣೆಯು ; ಶೃಂಗಾರ
ವೀರ ಕರುಣಾದ್ಭುತ ಹಾಸ್ಯ ರೌದ್ರ ಬೀಭತ್ಸ,
ಭಯಾನಕ ಶಾಂತಾಖ್ಯ ನವರಸಗಳಿಂದೊಪ್ಪಿ
ಮೆರೆಯುದೀ ಕಾವ್ಯಮಂ ಪಾಡಿದರು ಲವಕುಶರು ;
ಗಾಂಧರ್ವ ತತ್ತ್ವವನರಿತವರು, ಮೂರ್ಛನಾ
ಕೋವಿದರು, ಸುಸ್ವರದ ಗಾಯಕರು ; ರೂಪದಲಿ
ಅಶ್ವಿನಿ ಕುಮಾರರೊಲು ಲಕ್ಷಣಾನ್ವಿತರು ;
ಮಾತಿನಲಿ ಮಾಧುರ್ಯ, ರೂಪದಲಿ ರಾಘವನ
ಪಡಿಯಚ್ಚು : ಋಷಿಯೋರೆದ ರೀತಿಯೊಳು ನಾಲಿಗೆಯ
ತುದಿಯಲ್ಲಿನಲಿವ ಸತ್ಕಾವ್ಯ ಧಾರೆಯನು
ಅಳುಪದಲೆ ಪಾಡಲ್ಕೆ ಋಷಿ ಸಾಧುಸಂತರಾ
ಸಂಕುಲದ ಶ್ರೋತೃಗಳು ಮನಮೆಚ್ಚಿ ಸಂತಸದ
ಕಂಬನಿಯ ಮಿಡಿಯುತ್ತ"

ಹೊಗಳಿದರು : ಕಲಶ ನಾರುಡೆ ಮೌಂಜಿ ಕಮಂಡಲು ಕಾಷಾಯ ಕೌಪೀನ ಕುಠಾರ ಕೃಷ್ಣಾಜಿನ ಜನ್ನಿವರ ಚೀರಾಂಬರ ಜಟಾ ಬಂಧನ ಸೂತ್ರ ಸಮಿತ್ಕುಶ ಯಜ್ಞ ಭಾಂಡಾದಿಗಳನ್ನು ಕೊಟ್ಟು ಚಿರಕಾಲ ಬಾಳಿರೆಂದು ಹರಸಿದರು. ಲವಕುಶರು ಹಾಡಿದ ಅಬ್ಯಾಸ ಕನಿಕುಲಕ್ಕೆ ಆಧಾರ : ಸಕಲ ಗೀತೆಗೆ ಅಭಿಗೀತೆಯಾಯಿತು. ಆಚಾರ್ಯನಿಂದ ಶಿಷ್ಯನಿಗೆ, ಅವನಿಂದ ಪ್ರಶಿಷ್ಯನಿಗೆ ಉಪದಿಷ್ಟವಾಗಿ ಕೇವಲ ಮುಖವಿದ್ಯೆಯಾಗಿ ದಾಂಗುಡಿಯಿಟ್ಟು ಜಗತ್ತನ್ನೇ ಆವರಿಸಿತು. ಇದರ ಕಥಾವಸ್ತುವಿಗೆ ನಾಡುನುಡಿಗಳ ಭೇದವಿಲ್ಲ. ಆರ್ಯ ಭಾಷೆಗಳಲ್ಲೆಲ್ಲ ರಚಿತವಾಗಿದೆ. ಇದರ ಪ್ರಾಚುರ್ಯ ಶತ ಕೋಟಿ ಪ್ರವಿಸ್ತರ, ಕಾಲಾತೀತ ; ಆಸೇತು ಹಿಮಾಚಲ ಪರ್ಯಂತ, ಪೂರ್ವಾಪರ ಸಾಗರ ಪರ್ಯಂತ. ಸಂಸ್ಕೃತ, ವಂಗ, ಹಿಂದಿ. ತಮಿಳು, ಕನ್ನಡ, ತೆಲುಗು, ತುಳು, ಮಲೆಯಾಳ, ಇಂಗ್ಲೀಷ್, ಜೆಕ್, ರಷ್ಯನ್, ಜರ್ಮನ್, ಫ್ರೆಂಚ್, ಮುಂತಾದ ಎಲ್ಲ ನಾಗರಿಕ ಭಾಷೆಗಳಲ್ಲಿಯೂ ರಚಿತವಾಗಿದೆ. ಪಂಚ ದ್ರಾವಿಡ ಭಾಷೆಗಳು ರಾಮಾಯಣಕ್ಕೆ ಆಡುಂಬೊಲಂ ಕವಿ ಚಕ್ರವರ್ತಿ ಕಂಬನ ತಮಿಳು ರಾಮಾಯಣ ತುಳುನಾಡಿನ ಸುಂದರ ಸಾಹಿತ್ಯ ಸಂಪತ್ತು. ಇದರಿಂದ ಕವಿಗೆ ಕವಿ ಚಕ್ರವರ್ತಿತ್ವ ದೊರಕಿತು : ಆಳ್ವಾರುಗಳ ಗೋಷ್ಠಿಯಲ್ಲಿಯೂ ಸ್ಥಾನ ಸಿಕ್ಕಿತು. ಅವನು ಹುಟ್ಟಿ ಬಾಳಿದ ನಾಡು

"ಕಂಬನಾಡು" ಆಯಿತು. ಅವನ ಕಾವ್ಯ ಸಂಸ್ಕೃತ ಮೂಲ ಗ್ರಂಥದ ಅರ್ಧದಷ್ಟು, ಅಂದರೆ ೧೨ ಸಾವಿರ ಪದ್ಯಗಳ ರೂಪ ತಾಳಿದೆ. "ನಾಡಿಯ ಪೊರುಳ್ ಕೈಕೊಡುಂ, ಕಮಲೈ ನೋಕ್ಕುವಳ್" ಎಂದು ಕವಿಯೇ ಹೇಳಿಕೊಂಡಿರುವಂತೆ ಅವನಿಗೆ ಸಕಲ ಸಂಪದಗಳೂ ಪ್ರಾಪ್ತವಾದುವು ಈ ಕೃತಿಯಿಂದಲೇ. "ರಾಮನಾಮ ನುಡಿದ ಬಾಯಿಗೆ ಹೊನ್ನು, ಇಲ್ಲದಿದ್ದರೆ ಮಣ್ಣು" ಎಂದು ಹಿರಿಯರು ಹೇಳಿರುವುದುಂಟು.

ತೆಲುಗಿನಲ್ಲಿಯೂ ರಾಮಾಯಣದ ರಚನೆಯಾಗದೆ ಇಲ್ಲ; ಭಾರತವೂ ಅಷ್ಟೆ. ವಿಜಯನಗರದ ಕೃಷ್ಣದೇವರಾಯನ ಕಾಲದಲ್ಲಿ ಈ ಇತಿಹಾಸಗಳನ್ನು ರಚಿಸಿದ ಕವಿಗಳಿಗೆ ಸಂದ ಗೌರವ ಅನ್ಯಾದೃಶ. ಕವಿ ಪೆದ್ದನನ ಕಾಲಿಗೆ ಚಕ್ರವರ್ತಿ ತನ್ನ ಕೈಯಿಂದಲೇ ಕವಿಗಂಡ ಪೆಂಡೆಯವನ್ನು-ಇದಕ್ಕೆ ತಮಿಳಿನಲ್ಲಿ ವೀರಕ್ಕಳಲ್ ಎಂದು ಹೆಸರು ತೊಡಿಸಿ ರಾಜಬೀದಿಗಳಲ್ಲಿ ಅಂಬಾರಿಯಲ್ಲಿ ಗಜೋತ್ಸವವನ್ನು ಮಾಡಿಸಿದನಂತೆ. ಆಗ ಉದ್ದಾಮ ಕವಿ ಭಾಸ್ಕರನು ಆಂಧ್ರ ರಾಮಾಯಣವನ್ನು ಬರೆದು ಪ್ರಸಿದ್ಧನಾದನು. ಇವನ ಗ್ರಂಥ ಗಣನೀಯ ಸ್ಥಾನ ಪಡೆದಿದೆ. ತಿಕ್ಕನನು ಉತ್ತರ ರಾಮ ಚರಿತೆಯನ್ನೂ ಬರೆದನು. ಏರ್ರಪ್ರಗಡನೆಂಬ ಉದ್ದಾಮ ಕವಿ ತನ್ನ ಮಾತೃ ಭಾಷೆಯಲ್ಲಿ ರಾಮಾಯಣವನ್ನು ರಚಿಸಿ ಕೀರ್ತಿಯನ್ನು ಗಳಿಸಿದನು.

ಮಲೆಯಾಳ ಬಾಷೆಯಲ್ಲಿಯೂ ರಾಮಾಯಣದ ಕಥೆ ಪ್ರಚಲಿತವಾಗಿದೆ. ಚೀರಮಾನ್, ರಾಮಪಣಿಕ್ಕರ್ ಮತ್ತು ಕುಂಜತ್ತು ರಾಮಾನುಜ—ಇವರು ಪಾಂಡಿತ್ಯಪೂರ್ಣವಾದ ಶೈಲಿಯಲ್ಲಿ ರಾಮಾಯಣವನ್ನು ರಚಿಸಿ ಪ್ರಸಿದ್ಧರಾಗಿದ್ದಾರೆ.

ರಾಮಾಯಣದ ಬಹು ಭಾಗ ತೆಂಕಣ ನಾಡಿಗೆ ಅನ್ವಯವಾಗುತ್ತದೆ. ಮೊದಲೊಂದು ಕಾಂಡಗಳನ್ನು ಬಿಟ್ಟರೆ ಅರಣ್ಯ ಕಿಷ್ಕಿಂಧೆ ಸುಂದರ ಯುದ್ಧ ಕಾಂಡಗಳ ಕಥಾಸರಣಿ ದಕ್ಷಿಣ—ದೇಶದ ಸ್ವತ್ತು. ಅದರಲ್ಲಿಯೂ ಕಿಷ್ಕಿಂಧಾ ಕಾಂಡದ ಕಥಾ ಕ್ಷೇತ್ರ ಕನ್ನಡನಾಡಿಗೆ ಸೇರಿದ್ದು. ಋಷ್ಯಮೂಕಪರ್ವತದ ಸಮೀಪ, ರಾಮ ಸುಗ್ರೀವರ ಸಖ್ಯ ಕ್ಷೇತ್ರ, ವಾಲಿಯ ಸಂಗ್ರಾಮ ರಂಗ, ಸುಗ್ರೀವನ ಪಟ್ಟಾಭಿಷೇಕ ಕ್ಷೇತ್ರ, ಕನ್ನಡದ ಕಲಿ ಹನುಮ ಸೀತಾನ್ವೇಷಣಕ್ಕಾಗಿ ಬಲಗಾಲಿಟ್ಟು ಹೊರಟ ಸನ್ನಿವೇಶ—ಈ ಕಥಾ ಭಾಗಗಳು ನಮ್ಮ ನಾಡಿನ ಸಂಪತ್ತು.

ವಾಲ್ಮೀಕಿ ರಾಮಾಯಣವು ಚರಿತ್ರೆಯೆ, ಪುರಾಣವೆ, ಶಾಸ್ತ್ರವೆ, ಮಹಾಕಾವ್ಯವೆ, ಜೀವನ ಚರಿತ್ರೆಯೆ, ವೇದಾಂತ ದರ್ಶನವೆ, ನಾಟಕವೆ, ಕಾದಂಬರಿಯೆ, ಇತಿಹಾಸವೆ, ನೀಳ್ಗತೆಯೆ, ಲಾವಣಿಯಂತೆ ಹಾಡುವ ಗೀತ ಕಾವ್ಯವೆ, (Bollad) ಎಂಬ ವಿಷಯದಲ್ಲಿ ವಿದ್ವಾಂಸರು ತಮ್ಮ ತಮ್ಮ ದೃಷ್ಟಿಕೋನಕ್ಕನುಗುಣವಾಗಿ ಕಂಡುಕೊಂಡಿದ್ದಾರೆ. ಸಾಹಿತ್ಯ ಪ್ರಕಾರದ, ಮಾನವ ಲೋಕದ ಜೀವನ ವೈವಿಧ್ಯವೆಲ್ಲ ರಾಮಾಯಣದಲ್ಲಿ ಅಡಕವಾಗಿರುವುದರಿಂದ ಈ ಮೇರು ಕೃತಿ ಯಾವುದು ತಾನೆ ಆಗಿರ

ಬಾರದು? ಇದರ ರೂಪ ವಿಶ್ವರೂಪ. ಆದರೆ ಇದನ್ನು ಇತಿಹಾಸವೆಂದರೆ ಬಹು ಒಪ್ಪು. "ಇತಿ+ಹ+ಆಸ" ನಡೆದುದನ್ನು ನಡೆದಂತೆ ಹೇಳುವ ಗ್ರಂಥ. "ಇತಿ ಹ ಪಾರಂಪರ್ಯೋಪದೇಶೀನ ಆಪ್ತೆ ಅಸ್ಮಿನ್" ಎಂದು ವರ್ಣಿತವಾಗಿದೆ. ಸುಳ್ಳಿನ ಕಂತೆಯಲ್ಲ; ಕಲ್ಪಿತ ಕಥೆಯಲ್ಲ; ರವಿ ಕಾಣದ ಕವಿತೆಯಲ್ಲ. ಆದರ್ಶ ಜೀವನ ಸಾಗಿಸಿದ ಪೀಳಿಗೆಯ ವಾಸ್ತವಿಕ ಸಾಹಿತ್ಯ ಪ್ರಕಾರ. ವೇದ ಪ್ರಾಮಾಣ್ಯವುಳ್ಳ ಏಕನಾಯಕಾತ್ಮಕ ಧಾರ್ಮಿಕ ಪರಿಕ್ರಿಯಾ. ಆದಿ ಕವಿ ತಾನೇ ಹೇಳಿಕೊಂಡಿರುವಂತೆ ಆದಿ ಕಾವ್ಯ, ಓಜಸ್ಕರ ಆಖ್ಯಾನ; ಮಾರ್ಗ ವಿಧಾನಸಂಪದದಿಂದ ಕೂಡಿದ ಮಹಾಗೇಯ ಕಾವ್ಯ. ಹಾಗೂ ಸಂಹಿತೆ. ಜೀವಂತನಾದ ಭಾರತೀಯ ಸಂಸ್ಕೃತಿಯ ದಿವ್ಯ ಜ್ಯೋತಿ.

ರಾಮಾಯಣ ಆದರ್ಶಸಾರ ಸರ್ವಸ್ವ ಪತಿ-ಪತ್ನಿ, ಅಣ್ಣ-ತಮ್ಮ, ಪಿತಾ-ಪುತ್ರ, ಶತ್ರು-ಮಿತ್ರ, ನರ-ವಾನರ, ದೇವ-ದಾನವ, ಸ್ವಾಮಿ-ಭೃತ್ಯ, ಮಾತಾ-ಪುತ್ರ, ತಮೋಗುಣ-ಸತ್ತ್ವಗುಣ-ಎಲ್ಲದರಲ್ಲಿಯ ಆದರ್ಶವನ್ನೆ ಎತ್ತಿ ಹಿಡಿದು ತೋರಿಸುವ ಆದರ್ಶದ ಭಾಂಡಾಗಾರ. ಮಾನವಯೋಗ್ಯವಾದ ವಿವಿಧ ಭಾವಾಭಿವ್ಯಕ್ತಿಯೂ ಅಸಮಾನ. ವ್ಯಕ್ತಿ ಚಿತ್ರಣದಲ್ಲಿ ವಾಲ್ಮೀಕರು ಸಿದ್ಧಹಸ್ತರು. ಶ್ರೀರಾಮನನ್ನು ಸುಂದರಕಾಂಡದ ೩೫ ನೆಯ ಸರ್ಗದಲ್ಲಿ ವರ್ಣಿಸುವಾಗ ಮೈ ಮರೆತಿದ್ದಾರೆ; ಸೀತೆಗೂ ನಮಗೂ ಮೈ ಮರೆಸುತ್ತಾರೆ. ಹನುಮಂತ ಸೌಂದರ್ಯ ದೌತ್ಯವನ್ನು ವಹಿಸಿ ಸೀತೆಗೆ ಶ್ರೀರಾಮನ ವೃತ್ತಾಂತವನ್ನು ತಿಳಿಸುವುದೊಂದು ಅನ್ಯಾದೃಶ ಶಬ್ದ ಚಿತ್ರ. ರಾಮನ ನಖ ಶಿಖಾಂತವಾದ ವರ್ಣನೆ ಎಂಥವನನ್ನಾದರೂ ಬೆರಗುಗೊಳಿಸುತ್ತದೆ :–

"ಬಿತ್ತರದ ಭುಜವೆರಡು ನಿಡುದೋಳು ಕಂಬು ಕಂಠ
ಸುಲಲಾಟ ಪೀನಾಂಸ ಚೆಂಬೊಗರ ಕಡೆಗಣ್ಣು
ಸುರಭೇರಿ ಗೊರೆಯೆನಿಪ ಸಿರಿಗೊರಲು ಪೊಗರುಗುವ
ಮೈ ಬಣ್ಣ ಪವಣರಿತ ಬಲ್ಲಾಳ ಮೈಗಟ್ಟು
ಕಂಗೊಳಿಪ ಶ್ಯಾಮಾಂಗ ಮಿಗೆ ಮೆರೆಯೆ ರಾಘವನು
ಸರ್ವಾಂಗ ಸುಂದರನು ಕೇಳಮ್ಮ ಜಾನಕೀ"

ಈ ವ್ಯಕ್ತಿ ಚಿತ್ರಣದಲ್ಲಿ ಬಣ್ಣಗಳ ಆಡಂಬರವಿಲ್ಲದಿದ್ದರೂ ವರ್ಣನಾ ವೈಭವವನ್ನು ಕಾಣಬಹುದು. ಶ್ರೀರಾಮನ ಬಾಲ್ಯಾವಸ್ಥೆಯ ಚಿತ್ರವೂ ಅದ್ವಿತೀಯ. ಮಹಾಕ್ರಾಂತಿಕಾರಿ ವಿಶ್ವಾಮಿತ್ರರು ತಮ್ಮ ಯಜ್ಞರಕ್ಷಣೆಗಾಗಿ ರಾಮನನ್ನು ಆಶ್ರಮಕ್ಕೆ ಕರೆದೊಯ್ದು ಅಂದಿನ ರಾತ್ರಿ ಜೋಗುಳ ಆಡುತ್ತಿರುವಾಗ ದಶರಥನ ಸುಮಕೋಮಲಕಾಯದ ಸುತರಂದು ತೃಣಾಳಿ ಸಂಭಾದಿತ ತಲ್ಪದೊಳು ಮಲಗಿದರು ಎಂದರೆ ನಮಗೆ ಕರುಳುಕಿತ್ತುಬರುತ್ತದೆ. ಮಾರನೆಯ ಬೆಳಗ್ಗೆ "ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ದೈವಮಾಹ್ನಿಕಂ" ಎಂದು ಮಹರ್ಷಿ ಅಧಿಕಾರವಾಣಿಯಿಂದ ನುಡಿದಾಗ ಅತ್ಯಂತ ವಿಧೇಯತೆ

ಯಿಂದ ರಾಜಕುಮಾರರು ಎದ್ದರು. ಗುರುಭಕ್ತಿಗದೊಂದು ಆದರ್ಶ. "ಸ್ತ್ರೀ ಹತ್ಯೆ ಪಾಪಕರ: ಅಕೃತ್ಯವೆಸಗಬೇಡ ರಾಮ: ಹೆಣ್ಣೆಂದು ಮರುಗದಿರು, ಕೊಲ್ಲುವಳ: ಇತ್ತಿಹೆನು ಆಜ್ಞೆಯನು" ಎಂದು ಕಟ್ಟಪ್ಪಣೆ ಮಾಡಿದಾಗ ಶ್ರೀರಾಮ ತಲೆ ಬಾಗಿ ತಾಟಕಿಯನ್ನು ಸಂಹರಿಸಿದ.

ಶ್ರೀರಾಮ ದಶರಥ ಪುತ್ರ, ರಾಜಕುಮಾರ, ಅವತಾರ ಪುರುಷ, ಆದರೂ ಅಹಲ್ಯೆಯ ಕಾಲಿಗೆ ಎರಗು ಎಂದಾಗ ರಾಮ ಹಿಂದು ಮುಂದು ನೋಡದೆ ಆಚಾರ್ಯನ ಆಜ್ಞೆಯನ್ನು ಪಾಲಿಸಿದ. "ದೇವರಾಜ ಕುತೂಹಲಾತ್" ದೇವೇಂದ್ರನೊಡನೆ ಸಂಭೋಗಿಸಬೇಕೆಂಬ ಅಳಿಯಾಸೆಯಿಂದ ವ್ಯಭಿಚಾರವೆಸಗಿದವಳ ಪಾದಮುಟ್ಟಿ ವಂದಿಸಿದ ಸನ್ನಿವೇಶ ಬಹಳ ಸಂದಿಗ್ಧ. ಅಹಲ್ಯೆ ಜಾರಿಣಿ, ಪತಿಯ ಶಾಪಕ್ಕೆ ಈಡಾದವಳು. ಶಾಪ ವಿಮೋಚನೆ ಮಾಡಿ ಉಪಕಾರವೆಸಗಿದವನು ಶ್ರೀರಾಮ. ಉಪಕೃತೆ ಅಹಲ್ಯೆ ನ್ಯಾಯವಾಗಿ ಅವಳು ಕೃತಜ್ಞತೆಯಿಂದ ರಾಮನಿಗೆ ನಮಸ್ಕಾರ ಮಾಡಬೇಕು. ಹಾಗಲ್ಲದೆ ರಾಮನೇ ಅವಳ ಕಾಲಿಗೆರಗಿದ, ಇದೇಕೆ? ಈ ಜಟಿಲ ಪ್ರಶ್ನೆಗೆ ಯಾರೂ ಸಮುತ್ತರವಿತ್ತಿಲ್ಲ. "ವೃದ್ಧ ಮುನಿ ಪತ್ನಿತ್ವಾತ್" ವೃದ್ಧ ಮುನಿಯ ಪತ್ನಿಯೆಂದು ಶ್ರೀರಾಮ ಅಹಲ್ಯೆಗೆ ವಂದಿಸಿದನಂತೆ. ಇದನ್ನು ಒಪ್ಪಬಹುದೆ? ಮುನಿಯೇನೋ ವೃದ್ಧ. ಪತ್ನಿ ವೃದ್ಧಳಲ್ಲ. ಅವಳು ಮುದುಕಿಯಾಗಿದ್ದರೆ ಈ ಅಕಾರ್ಯ ನಡೆಯುತ್ತಿರಲಿಲ್ಲ. ಈ ಸಮಸ್ಯೆಗೆ ಪರಿಹಾರವೇನು? ರಾಷ್ಟ್ರಕವಿ ಕುವೆಂಪು ರವರೊಬ್ಬರು ಮಾತ್ರ "ತನ್ನ—ಕಾವ್ಯಕೆ ತಾಂ ಮಹಾಕವಿ ಮಣಿಯುವಂತೆ" ಶ್ರೀರಾಮ ತಾನು ಒಂದು ಕಲಾಕೃತಿಯನ್ನು ಉದ್ಧರಿಸಿದೆನೆಂಬ ಸಂತೃಪ್ತಿಯಿಂದ ಆ ಸತಿಗೆ ಮಣಿದನೆಂದು ಬಹು ಒಪ್ಪಾಗಿ ಸಮಾಧಾನ ಹೇಳಿದ್ದಾರೆ ತಮ್ಮ ರಾಮಾಯಣ ದರ್ಶನದಲ್ಲಿ. ಅಂದರೆ ಶ್ರೀರಾಮನಿಗೆ ಅದೆಂಥ ಕಲಾಭಿಮಾನವಿತ್ತೆಂಬುದನ್ನು ಸೂಚಿಸಿದ್ದಾರೆ.

ಜಾನಕಿಯ ಸ್ವಯಂವರಕ್ಕಾಗಿ ಜನಕ ಮಹಾರಾಜ ಮಿಥಿಲಾ ನಗರದಲ್ಲಿ ಸುಂದರ ಕಲ್ಯಾಣ ಮಂಟಪವನ್ನು ವಿರಚಿಸಿದ. ವಿಶ್ವಾಮಿತ್ರರೊಡಗೂಡಿ ರಾಮಲಕ್ಷ್ಮಣರು ಅಲ್ಲಿಗೆ ತೆರಳಿದರು. ಮಿಥಿಲಾ ನಗರಾಧಿದೇವತೆ ತನ್ನ ಔರಸ ಪುತ್ರಿ ಸೀತೆಯನ್ನು ಹೆತ್ತಿಟ್ಟುಕೊಂಡಿದ್ದಳಂತೆ. "ಸೀತೆಯಿವಳೆನ್ನ ಸುತೆ: ಕೈ ಹಿಡಿದು ಸ್ವೀಕರಿಸೆಂದು ರಾಮನನ್ನು ಕರೆದಳಂತೆ. ಕವಿ ಚಕ್ರವರ್ತಿ ಕಂಬ ಈ ಸನ್ನಿವೇಶವನ್ನು ಮುದ್ದಾಗಿ ವರ್ಣಿಸಿದ್ದಾನೆ. ಕಲ್ಯಾಣ ಮಂಟಪವನ್ನು ಪ್ರವೇಶಿಸಿದ ಶ್ರೀರಾಮ ಬೇಳ್ವೆಯನ್ನು ಕಾಣಲು ಬಂದೆವು: ಬಿಲ್ಲನ್ನೊ ಒಂದು ಕೈ ನೋಡೋಣವೆಂದು ಹೆದೆ ಏರಿಸಿದ. ಶಿವ ಧನುಸ್ಸು ಫಳಾರೆಂದು ತುಂಡಾಗಿ ಬಿತ್ತು. ಭೋಜ ಚಂಪುವಿನಲ್ಲಿ ಈ ಸಂದರ್ಭದ ವರ್ಣನೆ ಮನೋಹರ. ತಮಿಳು ಕವಿಯೊಬ್ಬ ಶ್ರೀರಾಮನ ಕಾಲುಗುಣವನ್ನು ಅಹಲ್ಯೆಯ ಶಾಪ ವಿಮೋಚನೆಯಲ್ಲಿ ಕಂಡಾಯಿತು: ತಾಟಕೆಯ ವಧೆಯಲ್ಲಿ, ಶಿವಧನುರ್ಭಂಜನದಲ್ಲಿ ಅವನ ಕೈ ಗುಣವನ್ನು ಕಾಣುತ್ತೇನೆಂದು ವರ್ಣಿಸಿದ್ದಾನೆ.

ವಾಲ್ಮೀಕಿ ರಾಮಾಯಣದ ಅಯೋಧ್ಯಾ ಕಾಂಡ ೧೧೯ ಸರ್ಗಗಳಿಂದ ಕೂಡಿದೆ. ಕಾವ್ಯ ಸೌಂದರ್ಯಸಾರ ಸರ್ವಸ್ವ ಇಲ್ಲಿ ಅಡಗಿದೆ. ಭರತನ ಭ್ರಾತೃ ವಾತ್ಸಲ್ಯ ಇಲ್ಲಿ ಮೆಪ್ಪುಗಟ್ಟಿ ನಿಂತಿದೆ. "ಭರತೋ ಭ್ರಾತೃವತ್ಸಲಃ" ಎಂಬುದು ಅಕ್ಷರಶಃ ಸತ್ಯವೆಂಬು ದನ್ನು ಇಲ್ಲಿ ಕಾಣಬಹುದು. ತಂದೆಯ ಮಾತನ್ನು ಪಾಲಿಸಲು ಶ್ರೀರಾಮ ಕಾಡಿಗೆ ತೆರ ಳಿದ. ಭರತ ಅಣ್ಣನ ಅಗಲಿಕೆಯಿಂದ ನೊಂದು ಅವನನ್ನು ಹಿಂದಿರುಗಿಸಲು ಕಾಡಿ ಬೇಡಿದ. ಆಗ ಶ್ರೀರಾಮ ತಮ್ಮನಿಗೆ ಹೇಳಿದ.

"ಎಲೆ ಭರತ, ನರಪತಿಯು ನೀನಾಗು ನಾಡಿನೊಳು
ವನ್ಯಮೃಗಪತಿಯು ನಾನಾಗುವೆನು ಕಾಡಿನೊಳು
ಸಂತಸದ ಸವಿಯುಣಲು ಮರಳು ನೀಂಪುರವರಕೆ
ಚಿಂತಿಸದೆ ತೆರಳುವೆನು ಕಟ್ಟುಗ್ರ ದಂಡಕಕೆ.
ಬೆಂಗದಿರ ತಾಪವನು ನೀಗಿಸುವ ಬೆಳ್ಗೊಡೆಯು
ತಲೆ ಮೇಲೆ ರಾಜಿಸಲಿ ನಿನಗಿತ್ತು ತಣ್ಣೆಳಲ ;
ವನಲಕ್ಷ್ಮಿಯಾಗರದ ತರುನಿಕರ ವತಿಶಯದ
ತಣ್ಣೆಳಲ ನೆನಗೀಯೆ ನೆಲಸುವೆನರಣ್ಯದೊಳು"

ಈ ಮಾತುಗಳು ರಾಮನ ಸತ್ಯ ಪ್ರತಿಜ್ಞೆ ಹಾಗೂ ತಾಳ್ಮೆಗೆ ನಿದರ್ಶನ, ಹೃದಯ ವಿದ್ರಾವಕ. ರಾಮನ ಮಾತುಗಳನ್ನು ಕೇಳಿದ ಭರತನ ದುಃಖ ಎಲ್ಲೆಮೀರಿತು. ಸತ್ಯಾಗ್ರಹವನ್ನು ಹೂಡಿದ. ಆದರೂ ಶ್ರೀರಾಮ ಜಗ್ಗಲಿಲ್ಲ. ಅಗ್ರಜನು ಹಿಂದಿ ರುಗಿ ಬರುವವರೆಗೆ ಸಂನ್ಯಾಸಿಯಂತೆ ಜಟಾಮುಕುಟಧಾರಿಯಾಗಿ ಅಯೋಧ್ಯೆಯ ಹೊರ ವಳಯದಲ್ಲಿರುವುದಾಗಿ ಪ್ರತಿಜ್ಞೆ ತೊಟ್ಟು, ಹದಿನಾಲ್ಕು ವರ್ಷಗಳು ಕಳೆದೊಡನೆ ಹಿಂದಿರುಗಿದರೆ ಸರಿ, ಇಲ್ಲವಾದರೆ ಅಗ್ನಿಪ್ರವೇಶ ಮಾಡುವುದಾಗಿ ಹೇಳಿ ಅಣ್ಣನ ಪಾದುಕೆಗಳನ್ನು ತನ್ನ ತಲೆಯ ಮೇಲೆ ಧರಿಸಿ ನಂದಿ ಗ್ರಾಮದಲ್ಲಿ ನೆಲೆಸಿದ ಭರತ. ಆದ್ದರಿಂದ ಶ್ರೀರಾಮ ಚಾರಿತ್ರದಲ್ಲಿ ಭರತನಿಗೆ ಮೊದಲ ವಂದನೆ ಸಲ್ಲಬೇಕು. ರಾಮ ಪಾದುಕೆಗಳ ಪ್ರಭಾವ ಅವನಿಂದ ತಾನೆ ಪ್ರಕಟವಾದದ್ದು ಲೋಕಕ್ಕೆ? ನಾವೊಂದು ಬಯಸಿದರೆ ದೈವ ಮತ್ತೊಂದನ್ನು ಮಾಡುತ್ತದೆ. ಶ್ರೀರಾಮ ಪಟ್ಟಾಭಿಷೇಕದ ಆಸೆ ದಶರಥನಿಗೆ; ಭರತನ ರಾಜ್ಯಾಭಿಷೇಕದ ಆಸೆ ಕೈಕೆಗೆ: ಪಾದುಕಾ ರಾಜ್ಯದ ಲಭ್ಯ ಭರತನಿಗೆ. ಇದು ವಿಧಿ ವಿಲಾಸ. ಶ್ರೀರಾಮ ಪಾದುಕೆಯ ಪ್ರಭಾವವನ್ನು, ಹಿರಿಮೆಯನ್ನು ಕುರಿತು ಶ್ರೀ ವೇದಾಂತ ದೇಶಿಕರು :

"ನಿಶ್ಶೇಷ ಮಂಬರತಲಂ ಯದಿ ಪತ್ರಿಕಾ ಸ್ಯಾತ್
ಸಪ್ತಾರ್ಣವೀ ಯದಿ ಸಮೇತ್ಯ ಮಷೀ ಭವಿತ್ರೀ

ವಕ್ತಾ ಸಹಸ್ರವದನಃ ಪುರುಷಃ ಸ್ವಯಂ ಚೇತ್
ವಿಸ್ಮಿತೇ ರಂಗಪತಿ ಪಾದುಕಯೋಃ ಪ್ರಭಾವಃ"

ಎಂದಿದ್ದಾರೆ. ಕೈಕೆಯ ಆಳಿಯಾಸೆ ಕೈಗೂಡಿದ್ದರೆ ಭರತನಿಗೆ ಒಂದೇ ಕಿರೀಟವು ಲಭ್ಯವಾಗುತ್ತಿತ್ತು. ಶ್ರೀರಾಮ ತನ್ನ ಪಾದುಕೆಗಳನ್ನು ಅನುಗ್ರಹಿಸಿದ್ದರಿಂದ ಭರತನ ತಲೆಯನ್ನು ಎರಡು ಕಿರೀಟಗಳು ಅಲಂಕರಿಸಿದುವು. ಇದರಿಂದ ರಾಮ ರಾಜ್ಯಕ್ಕಿಂತ ಪಾದುಕಾ ರಾಜ್ಯವೇ ಮಿಗಿಲಾಯಿತು. ತಮ್ಮನಿಗೆ ಪಾದುಕೆಗಳನ್ನು ಅನುಗ್ರಹಿಸಿ ಶ್ರೀರಾಮ ಅರಣ್ಯ ಪ್ರವೇಶ ಮಾಡಿಬಿಟ್ಟ. ಇತ್ತ ಭರತ ನಂದಿ ಗ್ರಾಮಕ್ಕೆ ಹಿಂದಿರುಗಿದ.

ಅಯೋಧ್ಯಾ ಕಾಂಡ ರಾಮಾಯಣದ ಹೃದಯ ಸ್ಥಾನವಾದರೆ ಅರಣ್ಯ ಕಾಂಡ ಹೃದಯಾಂತರಂಗ: ಸೀತಾರಾಮರ ಸತ್ವಪರೀಕ್ಷಾ ರಂಗ, ರಾಮನ ಸತ್ಯ ಪ್ರತಿಜ್ಞೆ. ಸೀತೆಯ ತ್ಯಾಗ ಪ್ರತಿಜ್ಞೆ. ಇವೆರಡೂ ಇಲ್ಲಿಯ ವೈಭವ ಪತಾಕೆಗಳು, ಕಷ್ಟವರಿಯದ ಬಾಲೆ ಸೀತೆ ಅಡಿಗಡಿಗೆ ನಿಲ್ಲುವಳು; ಬಳಲಿಸುಯ್ವಳು, ಅಳುಕುವಳು ಬಳುಕುವಳು: ಬಿಡಿಯುವಳು ಕಂಬನಿಯ: ಆತ್ಮಪಲ್ಲಭನನ್ನು ನೆಮ್ಮಿ ಮರೆಯುವಳು ದುಗುಡವನ್ನು: ಮುಂದೆ ಸಾಗುವಳು ವನಸಂಚಾರ ಕುಶಲೆ ಸೀತೆ. ಆಗ ಪಂಚವಟಿಯಲ್ಲಿ ಸೀತೆಗೆ ಶೂರ್ಪನಖಿಯ ಉಪಟಳಪ್ರಾಪ್ತಿ. ತನ್ನ ಕಾಮ ಕಾತರತೆಯಿಂದಾಗಿ ಕಿವಿಮೂಗುಗಳನ್ನು ಕಳೆದುಕೊಳ್ಳುವಳು ರಕ್ಕಸಿ. ಈಗ ವಾಲ್ಮೀಕಿ ಮುಖದಿಂದುಕ್ಕಿದ ಹಾಸ್ಯ ರಸದ ಹೊನಲು ವರ್ಣನಾತೀತ. ಮೂಗು ಹೋಗಿ ಮುಖ ಸಣ್ಣಗಾಯಿತು ಶೂರ್ಪನಖಿಗೆ. ಖರ ದೂಷಣರಲ್ಲಿಗೆ ಓಡಿದಳು: ತನಗಾದ ಪರಿಭವವನ್ನು ತೋಡಿಕೊಂಡಳು. ಆಗ ತನ್ನ ನೋವನ್ನೂ ಮರೆತು ಕಾಮಿನಿ ರಾಮ ಲಕ್ಷ್ಮಣರ ಸೌಂದರ್ಯವನ್ನು ಮೆಚ್ಚಿ ಮೆಚ್ಚಿ—

ತರುಣಾ ರೂಪ ಸಂಪನ್ನಾ ಸುಕುಮಾರೌ ಮಹಾಬಲೌ
ಪುಂಡರೀಕ ವಿಶಾಲಾಕ್ಷಾ ಚೀರಕೃಷ್ಣಾಜಿನಾಂಬರೌ॥

ಎಂಬುದಾಗಿ ದೂರಿತ್ತಳು. ಇದು ದೂರು ಕೊಡುವ ಲಕ್ಷಣ; ಎಷ್ಟು ಚೆನ್ನಾಗಿದೆ? ಅವಳ ದೂರು ಅವಳಿಗೇ ತುತ್ತಾಯಿತು. ಖರ ದೂಷಣ ತ್ರಿಶಿರಸ್ಸುಗಳು ರಾಮ ಬಾಣಕ್ಕೆ ಬಲಿಯಾದರು ತಮ್ಮ ಸಕಲ ಸೈನ್ಯ ಸಮೇತ. ಕಳೆದುಳಿದ ರಾಕ್ಷಸರು ರಾವಣನಲ್ಲಿಗೆ ಓಡಿದರು. ಇತ್ತ ಸ್ವಲ್ಪ ಮಟ್ಟಿಗೆ ಗಾಯಗೊಂಡಿದ್ದ ಶ್ರೀರಾಮನ ಮೈನೋವು ವೈದೇಹಿಯ ಆಲಿಂಗನದಲ್ಲಿ ಪರಿಹಾರವಾಯಿತು. "ವೈದೇಹೀ ಭರ್ತಾರಂ ಪರಿಷಸ್ವಜೇ."

ಶೂರ್ಪನಖಿ ರಾವಣನಲ್ಲಿ ತನ್ನ ದುಃಖವನ್ನು ತೋಡಿಕೊಂಡಳು. ಅಕಂಪನನೂ ಯುದ್ಧರಂಗದಲ್ಲಿ ಖರ ದೂಷಣರು ಮಡಿದದ್ದನ್ನು ಹೇಳಿದ. ರಾವಣನಿಗೆ

ಕಣ್ಣು ಕೆರಳಿತು. ತನ್ನ ಸೇಡು ತೀರಿಸಿಕೊಳ್ಳುವ ನೆಪದಿಂದ ಸೀತಾಪಹರಣಕ್ಕೆ ಮನವಂದು ಮಾರೀಚನ ನೆರವು ಬೇಡಿದ. ರಾಮಬಾಣದ ಹೊಡೆತದ ರುಚಿ ಕಂಡಿದ್ದ ಅವನು ನಡನಡುಗುತ್ತ ಎಷ್ಟೆಷ್ಟೋ ಬುದ್ಧಿ ಹೇಳಿದ.

"ವೃಕ್ಷೇ ವೃಕ್ಷೇ ಚ ಪಶ್ಯಾಮಿ ಪಾಶಹಸ್ತಮಿವಾಂತಕಂ। ಗೃಹೀತ ಧನುಷಂ ರಾಮಮ್" ಬಿಲ್ಗೋಜ ರಾಮನನ್ನು ಮರಮರಗಳಲ್ಲೆಲ್ಲ ಕಾಣುತ್ತಿದ್ದೇನೆ. ನನಗೆ ಅವನೇ ಮೃತ್ಯು ಸ್ವರೂಪ; "ರ" ಕಾರವನ್ನುಚ್ಚರಿಸಿದರೆ ಸಾಕು, ಎದೆ ನಡುಗುತ್ತದೆ; ರಾಮನೊಡನೆ ವೈರ ಬೇಡವೆಂದು ಎಷ್ಟು ಹೇಳಿದರೂ ರಾವಣ ಕೇಳಲಿಲ್ಲ. ಹಠ ಹಿಡಿದು ಮಾರೀಚನ ಮೇಲೆ ಕತ್ತಿಯೆತ್ತಿದ. ರಾಕ್ಷಸನ ಕತ್ತಿಗೆ ಬಲಿಯಾಗುವ ಬದಲು ರಾಮ ಬಾಣಕ್ಕಾದರೂ ಆಹುತಿಯಾಗುವುದೇ ಮೇಲೆಂದು ರಾವಣನೊಡನೆ ಹೊರಟ. ಹೊನ್ನ ಜಿಂಕೆಯ ರೂಪತಾಳಿ ಸೀತೆಯ ಮುಂದೆ ಸುಳಿದಾಡಿದ. ಹರಿಣಿಯ ಸೌಂದರ್ಯವನ್ನು ಕಂಡ ಸೀತೆಗೆ ಜಿಂಕೆಯ ಮೇಲೆ ಆಸೆ ಮೂಡಿತು. ರಾಮ ಜಿಂಕೆಯನ್ನು ಅಟ್ಟಿಕೊಂಡು ಹೋಗಿ ಕೂರಂಬು ಪ್ರಯೋಗಿಸಿದ. ಪ್ರಾಣ ಬಿಡುವಾಗ "ಹಾ ರಾಮ, ಹಾ ಲಕ್ಷ್ಮಣ" ಎಂದು ಚೀರಿಡುತ್ತ ಜಿಂಕೆ ಪ್ರಾಣ ಬಿಟ್ಟಿತು. ಸೀತೆ ಕಠಿಣೋಕ್ತಿಗಳನ್ನಾಡಿ ಗಂಡನ ಸಹಾಯಕ್ಕಾಗಿ ಲಕ್ಷ್ಮಣನನ್ನು ಅಟ್ಟಿದಳು. ಪರ್ಣಶಾಲೆಯಲ್ಲಿ ಒಂಟಿಯಾಗಿ ಬಿಟ್ಟಳು. ಸಮಯ ಕಾಯುತ್ತಿದ್ದ ರಾವಣ ಸಂನ್ಯಾಸಿ ವೇಷ ತಾಳಿ ಸೀತೆಯನ್ನು ಆಕಾಶಮಾರ್ಗವಾಗಿ ಅಪಹರಿಸಿಕೊಂಡು ಹೋಗುವಾಗ ಅವಳ ಆಕ್ರಂದನ ಜಟಾಯುವಿಗೆ ಕೇಳಿಸಿತು. ರಾವಣನಿಗೂ ಜಟಾಯುವಿಗೂ ನಡೆದ ಯುದ್ಧದಲ್ಲಿ ಜಟಾಯು ನೊಂದು ನೆಲಕ್ಕುರುಳಿದ. ರಾವಣನಂತೂ ಸೀತೆಯನ್ನು ಸಾಗಿಸಿಕೊಂಡು ಹೊರಟೇಬಿಟ್ಟ. ಆಗ ಅವಳು ತೊಟ್ಟಿದ್ದ ಒಡವೆಗಳನ್ನು ತನ್ನ ಸೆರಗಿನಲ್ಲಿ ಕಟ್ಟಿ ಎಸೆಯಲು ಅದು ಒಂದು ಪರ್ವತ ಶಿಖರದ ಮೇಲೆ ಬಿತ್ತು.

ಇತ್ತ ರಾಮ ಲಕ್ಷ್ಮಣರು ಪಂಚವಟಿಯ ಎಲೆಮನೆಯಲ್ಲಿ ಸೀತೆಯನ್ನು ಕಾಣದೆ ಅರಣ್ಯದಲ್ಲಿ ಅಲೆದಾಡಿದರು. ರಾಮನಂತೂ ಹುಚ್ಚನಂತೆ ಚೇತನಾ ಚೇತನ ವಸ್ತುಗಳನ್ನು, "ತಳಿರೇ ತಾವರೆಯೇ ಮದಾಳಿ ಕುಲಮೆ ಕರ್ಣಿಯಿದ್ದಲೇ ಮಕಸೋ ಕಿಲಮೆ ಕಂಡಿರೇ ಪಲ್ಲವಾ ಧರೆಯಂ ಸೀತೆಯಂ" ಎಂದು ಗೋಳಾಡುತ್ತ ತನ್ನ ಇನಿಯಳ ವೃತ್ತಾಂತಕ್ಕಾಗಿ ತೊಳಲಿ ಬಳಲಿದ. ಕಾಳಿದಾಸನು ಅರ್ಥವತ್ತಾಗಿ ನುಡಿದಿರುವಂತೆ ರಾಮನ ಪಾಡು "ಕಾಮಾರ್ತಾ ಹಿ ಪ್ರಕೃತಿ ಕೃಪಣಾಶ್ಚೇತನಾ ಚೇತನೇಷು" ಎಂಬಂತಾಯಿತು. ದಾರಿಯಲ್ಲಿ ನೋವಿನಿಂದ ನರಳುತ್ತಿದ್ದ ಜಟಾಯುವಿನಿಂದ ಸ್ವಲ್ಪ ಸೂಚನೆ ಸಿಕ್ಕಲು ರಾಮ ಅವನಿಗೆ ಮೋಕ್ಷವಿತ್ತು, ವಿರಾಧ ಕಬಂಧರಿಗೆ ಶಾಪ ವಿಮೋಚನೆ ಮಾಡಿ, ಆಚಾರ್ಯ ನಿಷ್ಠೆಯನ್ನು ಸಾಧಿಸುತ್ತಿದ್ದ ಶಬರಿಗೆ ನಿಜಾಚಾರ್ಯರ ಸಾನಿಧ್ಯ ಸೇರುವಂತೆ ಅನುಗ್ರಹಿಸಿ, ನಮ್ಮ ಕರ್ನಾಟ ದೇಶದ ಪಂಪಾ ಸರೋವರದ

ಸಮೀಪ ಸಾಗಿ ವನಲಕ್ಷ್ಮಿಯ ಸೌಂದರ್ಯವನ್ನು ಮೆಚ್ಚುತ್ತ ತನ್ನ ಮನದ ದುಗುಡ ವನ್ನು ಸ್ವಲ್ಪ ಮಟ್ಟಿಗೆ ನುಂಗಿಕೊಂಡ.

ಇಂತು ಶ್ರೀರಾಮ ಲಕ್ಷ್ಮಣರು ದುಷ್ಟ ಶಿಕ್ಷಣ ಶಿಷ್ಟ ಪರಿಪಾಲನ ಕಾರ್ಯಗಳನ್ನು ನೇರವೇರಿಸುತ್ತ ತಮ್ಮ ಅವತಾರ ಪ್ರತಿಜ್ಞೆಯನ್ನು ಸಾಂಗಗೊಳಿಸುತ್ತ ಕಿಷ್ಕಿಂಧೆಗೆ ತೆರಳಿದರು ಇಲ್ಲಿಯ ಪ್ರಕೃತಿ ಮಾತೆಯ ಸೌಂದರ್ಯ. ಪಂಪಾತೀರದ ಚೆಲುವಿನ ಸಂಪದ, ಆಂಜನೇಯನ ಪರಿಚಯ ಅವನ ಅವಿಸ್ತರ ಅಸಂದಿಗ್ಧ ಅವಿಲಂಬಿತ ಅದ್ಭುತ ಚತುರ್ಗುಣ ಸಂಯುಕ್ತ ವಾಕ್ ಸೌಂದರ್ಯ, ವಾಲಿ ಸುಗ್ರೀವರ ವೈರಾನು ಕಥನ ಸುಗ್ರೀವ-ರಾಮ ಪ್ರಣಯ ಪ್ರಸಂಗ, ಸುಗ್ರೀವನಿಗೆ ಅಭಯ ಪ್ರಧಾನ ಇವುಗಳ ಸೊಬ ಗನ್ನು ಸವಿಯಲು ಮೂಲ ಗ್ರಂಥವನ್ನೇ ಮರೆ ಹೊಕ್ಕರೆ ಉತ್ತಮ.

ರಾಮ ಲಕ್ಷ್ಮಣರು ಸೀತೆಯನ್ನು ಅರಸುತ್ತ ಅರಣ್ಯದಲ್ಲಿ ಅಲೆದಾಡುತ್ತ ಋಷ್ಯ ಮೂಕಕ್ಕೆ ಬಂದರು. ಸುಗ್ರೀವ ತನಗೆ ಹಠಾತ್ತಾಗಿ ಸಿಕ್ಕಿದ ಆಭರಣದ ಗಂಟನ್ನು ಬಿಚ್ಚಿ ರಾಮನಿಗೆ ತೋರಿಸಿದ. ಆ ಒಡವೆಗಳಲ್ಲಿ ಯಾವುದನ್ನು ಕಂಡರೂ ಸೀತೆಯೇ ಬಂದು ನಿಂತಂತೆ ತೋರಿತು ರಾಮನಿಗೆ. ತನ್ನ ಮೋಹನಾಂಗಿಯ ವಿನಾ ಒಡವೆಗಳನ್ನು ನೋಡಿ ನೋಡಿ ಗೋಳಿಡುತ್ತ ಲಕ್ಷ್ಮಣನಿಗೆ ತೋರಿಸಿದ: ಅವುಗಳ ಪರಿಚಯವುಂಟೆ ಎಂದು ಕೇಳಿದ. ಆಗ ಸೌಮಿತ್ರಿ—

ನಾಹಂ ಜಾನಾಮಿ ಕೇಯೂರೇ ನಾಹಂ ಜಾನಾಮಿ ಕುಂಡಲೇ।
ನೂಪುರೇತ್ವಭಿ ಜಾನಾಮಿ ನಿತ್ಯಂ ಪಾದಾಭಿವಂದನಾತ್॥

ಅತ್ತಿಗೆಯ ಕೋಡ್ಗಳೆಗಳನ್ನು ತಾನು ಕಂಡಿಲ್ಲ; ಕಿವಿಯೋಲೆಗಳ ಗುರುತೂ ತನಗಿಲ್ಲ: ಕಾಲ್ಗಳೆಗಳ ಪರಿಚಯ ಮಾತ್ರವಿದೆ ಎಂಬ ಮೈದುನನ ಮಾತಿನ ಅರ್ಥಗಾಂಭೀರ್ಯ ವಾದರೂ ವರ್ಣನಾತೀತ. ಕುಂಡಲಗಳನ್ನು ಕಂಡೆನೆಂದರೆ ಸೀತೆಯ ಮುಖ ಸೌಂದ ರ್ಯದ ಪರಿಚಯವಿರಬೇಕು: ಕೋಳ್ವಳೆಗಳನ್ನು ನೋಡಿದ್ದೆನೆಂದರೆ ಆ ಸುತ್ತಮುತ್ತಿನ ಸ್ತ್ರೀ ಸಹಜವಾದ ಅಂಗ ಸೌಷ್ಠವ ಕಣ್ಣಿಗೆ ಬಿದ್ದಿರಬೇಕು. ಪಾದಾಭರಣ ಮಾತ್ರ ಪರಿಚಿತವಾಗಿದೆ ಎಂದರೆ ಅತ್ತಿಗೆಯ ಪಾದಾಭಿವಂದನೆಯ ಮೂಲಕ ಸೌಮಿತ್ರಿಯ ನೈಷ್ಠಿಕ ಬ್ರಹ್ಮಚರ್ಯದ ಚೆಲುವು ಸೂಚಿಕವಾಗುತ್ತದೆ. ಅಣ್ಣನೊಡನೆ ಅರಣ್ಯ ವಾಸಕ್ಕೆ ಹೊರಟಾಗ ಸುಮಿತ್ರೆ ಮಗನಿಗೆ "ಮಾಂ ವಿದ್ಧಿ ಜನಕಾತ್ಮಜಾ" ಎಂದು ಸಾರಿದ ಸಂದೇಶದ ಪ್ರತಿಫಲ ಸೌಮಿತ್ರಿಯ ನಡೆ ನುಡಿಗಳಲ್ಲಿ ಮಿನುಗುತ್ತವೆ. "ನಿತ್ಯಂ ಪಾದಾಭಿ ವಂದನಾತ್" ಎಂಬೀ ಮಾತುಗಳನ್ನು ಮನ ತುಂಬಿ ಉಚ್ಚರಿಸುವಾಗ ನಮ್ಮ ಮನ ಮಸ್ತಕಗಳೆರಡೂ ನಮ್ಮ ಅರಿವಿಲ್ಲದಂತೆಯೇ ಸೀತೆಯ ಸಿರಿಯಡಿಗೆ ಎರಗುತ್ತವೆ. ಇಲ್ಲಿ ಕಾವ್ಯಕಮಲದ ಮಕರಂದ ಸಾಹಿತ್ಯ ಮಧುಕರನಿಗೆ ತಾನಾಗಿ ಒದಗುವುದರಲ್ಲಿ ಸಂದೇಹವೇನಿದೆ?

ಋಷ್ಯಮೂಕ ಪರ್ವತ ಕನ್ನಡ ನಾಡಿಗೆ ಸೇರಿದ್ದು. ಅದೇ ರಾಮ ಸುಗ್ರೀವರ ಸಖ್ಯಕ್ಷೇತ್ರ. ಭಯಾರ್ತನಾದ ತನಗೆ ಅಭಯದ ವರದಾನ ಬೇಡಿದ ಸುಗ್ರೀವ. ಶರಣಾಗತ ರಕ್ಷಣದೀಕ್ಷಿತ ಶ್ರೀರಾಮ "ವಾಲಿನಂ ತಂ ವಧಿಷ್ಯಾಮಿ ತವ ಭಾರ್ಯಾಪಹಾರಿಣಂ" ಎಂದು ಭಾಷೆಕೊಟ್ಟ. ಈ ಸಂದರ್ಭವನ್ನು ವರ್ಣಿಸುವಾಗ ವಾಲ್ಮೀಕಿಯದು,

"ಸೀತಾ ಕಪೀಂದ್ರ ಕ್ಷಣದಾಚರಾಣಾಂ। ರಾಜೀವ ಹೇಮ ಜ್ವಲನೋಪಮಾನಿ।
ಸುಗ್ರೀವರಾಮ ಪ್ರಣಯ ಪ್ರಸಂಗೇ। ವಾಮಾನಿ ನೇತ್ರಾಣಿ ಸಮಂ ಸ್ಫುರಂತಿ॥

ಈ ಶ್ಲೋಕದಲ್ಲಿ ಅದೆಂಥ ಸನ್ನಿವೇಶ ಕಲ್ಪನೆ? ಸೀತೆ ಕಮಲ ನೇತ್ರೆ, ವಾಲಿ ಹೇಮ ನೇತ್ರ, ರಾವಣ ಅಗ್ನಿನೇತ್ರ (ಕೆಂಗಣ್ಣ): ಆ ಮೂವರ ಎಡಗಣ್ಣುಗಳೂ ರಾಮ ಸುಗ್ರೀವರ ಸಖ್ಯ ಸಮಯದಲ್ಲಿಯೇ ಏಕಕಾಲದಲ್ಲಿಯೇ ಅದುರುಹಿವಂತೆ, ನೇತ್ರ ಸ್ಫುರಣದ ಶುಭಾ ಶುಭ ಫಲಗಳು ಅವರವರ ಕರ್ಮಾನುಸಾರವಾಗಿ ಸೂಚಿತವಾದುವೆಂದು ಸಮುಪಯೋಗಿತ, ಕ್ರಮ, ಉಪಮಾ ಹಾಗೂ ಸಂಕರಾಲಂಕಾರಯುಕ್ತವಾದ ರೀತಿಯಲ್ಲಿ ಚಿತ್ರಿಸುತ್ತ ತಮ್ಮ ಆಲಂಕಾರ ಶಾಸ್ತ್ರ ಮತ್ತು ಶಕುನ ಶಾಸ್ತ್ರ ನೈಪುಣ್ಯವನ್ನು ಬೆಳ್ಳಿಯ ತೆರೆಯ ಮೇಲೆ ಚಿನ್ನದ ರೇಖೆಗಳಿಂದ ಅದಿನ್ನೆಷ್ಟು ಮನಮೋಹಕವಾಗಿ ವರ್ಣವಿನ್ಯಾಸ ಮಾಡಿದ್ದಾರೆ? ಇದು ಮಾತಿಗೆ ಮಿಗಿಲು ಭಾವನೆಗೆ ಭಾರ.

ಸತ್ಯವಾಕ್ಯನ ಮುಂದೆ ನುಡಿದ ಮಾತು ಸತ್ಯವೇ ಆಗಬೇಕೆಂದು ಸುಗ್ರೀವರಾಜ ಸೀತಾನ್ವೇಷಣಕ್ಕಾಗಿ ಸಕಲ ಕಪಿ ಸೇನೆಗಳನ್ನು ಒಟ್ಟುಗೂಡಿಸಿದ. ೬೭ ವಾನರರ ಕೋಟಿಗಟ್ಟಲೆ ಸೇನಾ ಸಮೇತರಾಗಿ ಉಗುರು ಊರುವುದಕ್ಕೂ ಎಡೆಯಿಲ್ಲದಂತೆ ಬಂದು ನೆರೆದರು. ಪೂರ್ವಕ್ಕೆ ವಿನತ, ಪಶ್ಚಿಮಕ್ಕೆ ಸುಷೇಣ, ಉತ್ತರಕ್ಕೆ ಶತಬಲಿ, ದಕ್ಷಿಣಕ್ಕೆ ಹನುಮಂತ ಹೊರಟರು. ಸುಂದರ ದೌತ್ಯವನ್ನು ವಹಿಸಿದ ವಾಯುಪುತ್ರ "ಶ್ರೀರಾಮನೆಚ್ಚವರ ನಾರಾಚದಂದದಲಿ" ನೆಗೆದು ನುಗ್ಗಿದ ಗಗನಮಾರ್ಗದಲ್ಲಿ. ನೂರು ಯೋಜನದ ನಿಡುಗಡಲನ್ನು ದಾಟುವಾಗ ದಾರಿಯಲ್ಲಿ ಮೈನಾಕನ ಆತಿಥ್ಯವನ್ನು ಸ್ವೀಕರಿಸಿ, ಸುರಸೆಯ ಬಾಯೊಳಗೆ ನುಗ್ಗಿ ಬಾಲರವಿಯಂತೆ ಬೆಳಗುತ್ತ ಹೊರಬಂದ. ಸಿಂಹಿಕೆಯ ಒಡಲನ್ನು ಸೀಳ್ಗೆಡೆದು ಲಂಬಗಿರಿಯ ಶಿರವಡರಿ "ದದರ್ಶ ಲಂಕಾಮಮರಾವತೀಮಿವ" ಅಮರಾವತಿಯಂಥ ಲಂಕೆಯನ್ನು ಕಂಡ. ಮಹಾದ್ವಾರದಲ್ಲಿ ಕಾವಲಿದ್ದ ಲಂಕಿಣಿಯನ್ನು ಗುದ್ದುವಾಗಲೂ ಹನುಮನಿಗೆ ಧರ್ಮದೃಷ್ಟಿ. ಹೆಣ್ಣವಳು ಬಲಗೈ ಹೊಡೆತಕ್ಕೆ ಸತ್ತಾಳು: ಎಡಗೈ ಏಟೇ ಸಾಕೆಂದು ಗುದ್ದಿ ಉರುಳಿಸಿದ. ಅವಳ ಸರಪ್ಪಣೆಯಿಂದ ಎಡಗಾಲನ್ನು ಮುಂದಿಟ್ಟು ಪೌಳಿಯನ್ನು ದಾಟಿ ಲಂಕಾನಗರಿಯನ್ನು ಪ್ರವೇಶಿಸಿದ. ಪ್ರಹಸ್ತಾದಿ ರಾಕ್ಷಸ ಮಂತ್ರಿಗಳ ಭವನಗಳನ್ನು ಕಂಡು ಬೆರಗಾದ. ಬಾಂದಳದ ಚಂದ್ರಬಿಂಬವನ್ನು ನೋಡಿ ನೋಡಿ ಹಿರಿ-ಹಿಗ್ಗಿದ. ವಸಂತದಂದವನು

ಸೋಲಿಸುವ ಪುಷ್ಪಕವಿಮಾನವನ್ನು ಮುಟ್ಟಿಕೊಳ್ಳುತ್ತ ರಾವಣನ ಅಂತಃಪುರದೊಳಕ್ಕೆ ಮೆಲ್ಲನೆ ನುಸುಳಿದ. ರಾಕ್ಷಸಿಯರೊಡನೆ ಮಲಗಿದ್ದ ರಾವಣನನ್ನೂ ಅವನ ಪಕ್ಕದಲ್ಲಿ ನಿದ್ರಿಸುತ್ತಿದ್ದ ಮಂಡೋದರಿಯನ್ನು ಕಂಡು "ತರ್ಕಯಾಮಾಸ ಸೀತೇತಿ ರೂಪ ಯೌವನ ಸಂಪದಾ" ಇವಳೇ ಸೀತೆಯೆಂದು ಭ್ರಮೆಗೆ ಒಳಗಾದ. ತನ್ನ ಬಾಲಕ್ಕೆ ಮುತ್ತಿಟ್ಟು ಭುಜ ತಟ್ಟಿ ಹರ್ಷದಿಂದ ಆಡಿ ಹಾಡಿ ಕಂಬವನ್ನೇರಿ ನೆಲಕ್ಕೆ ಧುಮುಕಿ ತನ್ನ ಕಪಿ ಚೇಷ್ಟೆಯನ್ನು ತೋರಿದ. ಪತಿದೇವನಿಂದಗಲಿದ ಪತಿವ್ರತೆ ಸೀತೆ ರಾಕ್ಷಸನ ಪಕ್ಕದಲ್ಲಿ ಮಲಗಲಾರಳೆಂದುಕೊಂಡ. "ನಾರಿಯರ ಕಾಣಲಹುದೆ ಹುಲ್ಲೆಗಳ ಹಂತಿಯಲಿ" ಎಂದು ಮತ್ತೆ ಹುಡುಕುತ್ತ ಹೊರಟ. ಅಶೋಕವನವನ್ನು ಹೊಕ್ಕು, ಮಲಿನಾಂಬರ ಧಾರಿಣಿ ಕಡುದೀನೆ ಕೃಶಾಂಗಿ ರಾಮಾರಾಮಮನುವ್ರತೆ ಹಿಂಡು ಹಿಪ್ಪಿದ ಹರಿಣಿಯಂತೆ ಮಮ್ಮಲ ಮರುಗಿ ನಿಟ್ಟುಸಿರು ಬಿಡುತ್ತಿದ್ದ ಸೀತೆಯನ್ನು ಕಂಡು ಕರುಣೆ, ಶೋಕ, ವೇದನೆ, ಧನ್ಯತೆ, ಉದ್ವೇಗಗಳ ಗೊಂದಲದಲ್ಲಿ ಸಿಲುಕಿ ಶ್ರೀರಾಮ ಮೂರ್ತಿಯನ್ನು ನಖಶಿಖಾಂತವಾಗಿ ವರ್ಣಿಸಿದ: ಸೀತಾ ಮಾತೆಯ ಮನಸೆಳೆದು ತಾನು ಕೋಸಲೇಂದ್ರನ ದಾಸನೆಂದು ಹೆಮ್ಮೆಯಿಂದ ಹೇಳಿಕೊಂಡ. ಆಗ ಸೀತೆಗೆ ಆದ ಭಯ ಗಾಬರಿ "ಸ ಏವಾಯಂ ಹಿ ರಾವಣಃ" ಎಂಬ ಮಾತಿನಲ್ಲಿ ಸೂರೆಗೊಂಡು ಸ್ಮೀತ್ಪದ ಭಾವನಾಚಿತ್ರ ಕಣ್ಣಿಗೆ ಕಟ್ಟುತ್ತದೆ.

ಸೀತೆಗೆ ನಂಬಿಕೆ ಹುಟ್ಟುವಂತಾದಾಗ ಹನುಮಂತ ಶ್ರೀರಾಮ ಮುದ್ರಿಕೆಯನ್ನು ಸಮುಯುಪರಿತು "ಪಶ್ಯ ದೇವಿ ಅಂಗುಳೀಯಕಂ" ಎಂದು ಹೇಳಿ ಆಕೆಯ ಕೈಗೆ ಕೊಟ್ಟ. ಅದು ರಾಮನ ಕರವಿಭೂಷಣ: ರಾಮನಾಮಾಂಕಿತದ ಉಂಗುರ, ಶಿವಧನುವನ್ನು ತುಂಡಾಗಿಸಿದ ರಾಮನ ಕೈಯ ಬೆರಳನ್ನು ಅಲಂಕರಿಸಿದ ಉಂಗುರ, ಪತಿದೇವನ ಅನಾಮಿಕೆಗೆ ಸಾರ್ಥಕ್ಯತೆಯನ್ನು ಕಲ್ಪಿಸಿದ ಉಂಗುರ, ಸೀತಾ–ರಾಮರನ್ನು ಒಂದಾಗಿಸಿದ ಉಂಗುರ. ಅದನ್ನು ತಿರುತಿರುಗಿಸಿ ನೋಡಿದಳು ಸೀತೆ: ಕಣ್ಣಿಗೆ ಒತ್ತಿಕೊಂಡು ಭಕ್ತಿಯಿಂದ ತನ್ನ ಬೆರಳಿಗೆ ತೊಡಿಸಿದಳು. ತನ್ನೆದುರಿಗೆ ಶ್ರೀರಾಮಮೂರ್ತಿ ಮೂರ್ತಿಮತ್ತಾಗಿ ಬಂದಂತೆ ಭಾವಿಸಿಕೊಂಡು ಆನಂದತುಂದಲಿತಳಾಗಿ "ಜಾನಕೀ ಮುದಿತಾ ಭವತ್".

ಆಗ ಹನುಮಂತ ತನ್ನ ನಿಜರೂಪ ತೋರಿ ತನ್ನ ವಾಗ್ವೈಖರಿಯಿಂದ ವಿಶ್ವಾಸೋತ್ಪಾದನೆ ಮಾಡಲು ಸೀತೆ ತನ್ನ ತಲೆಯಲ್ಲಿ ಧರಿಸಿದ್ದ ಚೂಡಾಮಣಿಯನ್ನು ಅವನ ಕೈಗೆ ಕೊಟ್ಟಳು. ಶ್ರೀರಾಮನಿಗೆ ತನ್ನ ಸಂದೇಶ ತಿಳಿಸುವಂತೆ ಹೇಳುತ್ತ ಕಾಕಾಸುರ ವೃತ್ತಾಂತವನ್ನೂ, ಮಣಿಶಿಲೆಯನ್ನು ತೇದು ತನ್ನ ಹಣೆಗೆ ಕುಂಕುಮವಿಟ್ಟದ್ದನ್ನೂ ಜ್ಞಾಪಿಸುವ ಹಾಗೆ ಹೇಳಿದಳು. ಕವಿ ಚಕ್ರವರ್ತಿ ಕಂಬ ತನ್ನ ರಾಮಾಯಣದಲ್ಲಿ ವರ್ಣಿಸಿರುವಂತೆ ಇನ್ನೆರಡು ಪ್ರಸಂಗಗಳನ್ನೂ ತಿಳಿಸೆಂದಳು: ಒಂದು, ಸುಂದರ ರಾಜೋದ್ಯಾನದಲ್ಲಿದ್ದಾಗ ಶ್ರೀರಾಮ ಎಷ್ಟು ಹೊತ್ತಾದರೂ ಬರದಿರಲು ಕಣ್ಣು ಗುಳಿ

ಬೀಳುವಷ್ಟು ಕಾದು ಬೇಸತ್ತು, ಅವನು ಬಂದ ಮೇಲೆ ಮತ್ತೆಲ್ಲಿಯೂ ತನ್ನನ್ನುಳಿದು ಹೋಗದಿರಲೆಂದು ನೀಲ, ಮೇಘ, ಶ್ಯಾಮನ ತಾವರೆಯಂಥ ಮೃದುವಾದ ಕೈಗಳಿಗೆ ತನ್ನ ತಲೆಯಲ್ಲಿದ್ದ ಮಲ್ಲಿಗೆಯ ಮಾಲೆಯನ್ನೇ ಕಟ್ಟಿದ ಮಾತ್ರಕ್ಕೆ ಸುಕೋಮಲವಾದ ಆವನ ಕೈ ಕೆಂಪಾಯಿತಂತೆ; ಇನ್ನೊಂದು ಅತ್ತೆಯ ಮನೆಯಲ್ಲಿದ್ದಾಗ ತಾನು ಸಾಕಿದ್ದ ಗಿಳಿಯ ಮರಿಗೆ ಹೆಸರಿಡಲು ರಾಮನನ್ನೇ ಕೇಳಿದಾಗ ಕೈಕೆಯ ಹೆಸರಿಟ್ಟರಾಯಿತೆಂದು ಅವನು ನುಡಿದ ಪ್ರಸಂಗ—ಇವೆರಡನ್ನೂ ಜ್ಞಾಪಿಸೆಂದಳು. ಹನುಮಂತ ಒಪ್ಪಿ ಸೀತೆಯ ಸೀಮಂತ ರತ್ನವನ್ನು ಎಲ್ಲಿ ಶೇಖರಿಸಿಕೊಳ್ಳುವುದೆಂದು ಯೋಚಿಸಿದ. ಒಬ್ಬ ಕವಿ ಹನುಮ ತನ್ನ ಜುಟ್ಟಿಗೆ ಕಟ್ಟಿಕೊಂಡನೆಂದೂ, ಮತ್ತೊಬ್ಬ ಕವಿ, ತನ್ನ ಸೊಂಟದ ಬಟ್ಟೆಯಲ್ಲಿ ಕಟ್ಟಿಕೊಂಡನೆಂದೂ, ಮಗುದೊಬ್ಬ ತನ್ನ ಹೃದಯ ಸ್ಥಳವನ್ನೇ ಬಗೆದು ಒಳಗೆ ಸೇರಿಸಿದನೆಂದು ಹೇಳುತ್ತಾರೆ. ಇವೆಲ್ಲವೂ ಅಸ್ವಭಾವಿಕ. ಭಗವಾನ್ ವಾಲ್ಮೀಕಿ ಹೇಳುತ್ತಾರೆ: ಹನುಮ ತನ್ನ ಕಪಿತ್ವಕ್ಕೆ ತಕ್ಕಂತೆ ತೋಳಿಗೆ ತೊಡಿಸಿಕೊಳ್ಳಲು ಪ್ರಯತ್ನಿಸಿದ. ಆಗಲಿಲ್ಲ. "ಅಂಗುಳ್ಯಾ ಯೋಜಯಾ ಮಾಸ" ಕೈಬೆರಳಿಗೆ ತೊಡಿಸಿದ ಎಂದು. ಇದೆಷ್ಟು ಸ್ವಾಭಾವಿಕವಾಗಿದೆ?

ಇನ್ನು ಮುಂದೆ ಧೀರ ಹನುಮ ಉಳಿದ ಕಾರ್ಯಗಳನ್ನು ಯೋಚಿಸಿ, ಅಶೋಕ ವನ ಭಂಜನ, ಕಿಂಕರ ನಿಷ್ಕಂದನ, ಚೈತ್ಯಪ್ರಾಸಾದ ದಹನ, ಜಂಬುಮಾಲಿ, ಸಪ್ತಾಮಾತ್ಯಪುತ್ರ, ಸೇನಾಪತಿ ಪಂಚಕ, ಅಕ್ಷಕುಮಾರ ವಧೆಗಳನ್ನು ಮಾಡಿ, ಇಂದ್ರಜಿತುವಿನೊಡನೆ ಸೆಣಸಿ ಬ್ರಹ್ಮಾಸ್ತ್ರದ ಕಟ್ಟುಂಡು ವಿಮೋಚನೆ ಹೊಂದಿ ರಾವಣನಿಗೆ ಬುದ್ಧಿಹೇಳಿ ಲಂಕೆಯನ್ನು ಸುಟ್ಟು, ಮರುಪಯಣಕ್ಕಾಗಿ ಹೊರಟು ನಿಂತ, ಆಗ ಸೀತೆಯ ಹೆಂಗರುಳ ಚಿತ್ರ ಇಲ್ಲಿ ಕಣ್ಣಿಗೆ ಕಟ್ಟುತ್ತದೆ. ಅತ್ತೆಯ ಮನೆಯ ಸೊಸೆ ತನ್ನ ತವರು ಮನೆಯವರಿಗೆ ಹೇಳಿಕೊಳ್ಳುವಂತೆ ಸೀತೆ ಕಂಬನಿ ದುಂಬಿ "ಕಸ್ಮಿಂಶ್ಚಿತ್ಸಂವೃತೇ ದೇಶೇ ವಿಶ್ರಾಂತಃ ಶ್ವೋಗಮಿಷ್ಯ" ಎಲ್ಲಿಯಾದರೂ ಅಡಗಿಕೊಂಡಿದ್ದು ವಿಶ್ರಾಂತಿ ಪಡೆದು ನಾಳೆ ಪ್ರಯಾಣ ಮಾಡು, ಎಂದು ಕಳಕಳಿಯಿಂದ ಬೇಡಿಕೊಳ್ಳುವುದೊಂದು ಮಾನವತ್ವದ (humanism) ಸುವರ್ಣರೇಖೆ. ಅಂತೂ ಹನುಮಂತ ಬೇಗನೆ ರಾಮನ ಸಾನಿಧ್ಯ ಸೇರಿದ. ಸೀತೆಯ ಸಮಾಚಾರ ತಂದ ಆನಂದದಲ್ಲಿ ವಾನರರು ಮಧುವನದಲ್ಲಿ ಕುಣಿದು ಕುಪ್ಪಳಿಸಿದರು, ಮಾತೆ ಇತ್ತ ಚೂಡಾಮಣಿಯನ್ನು ಶ್ರೀರಾಮ ಹನುಮನಿಂದ ಪಡೆದು ಹಲುಬಿ ಹಂಬಲಿಸಿ, ಅವನು ಮಾಡಿದ ಮಹೋಪಕಾರಕ್ಕೆ ಪ್ರತ್ಯುಪಕಾರವನ್ನೇನು ಮಾಡುವುದೆಂದು ಯೋಚಿಸಿ ಯೋಚಿಸಿ "ಏಷ ಸರ್ವಸ್ವ ಭೂತಸ್ತು ಪರಿಷ್ವಂಗೋ ಹನೂಮತಃ। ಮಯಾ ಕಾಲ ಮಿಮಂ ಪ್ರಾಪ್ಯ ದತ್ತಶ್ಚಾಸ್ತು ಮಹಾತ್ಮನಃ" ಆ ಸಮದಲ್ಲಿ ತನ್ನಲ್ಲಿರುವ ಸರ್ವಸ್ವವೆಂದರೆ ಆಲಿಂಗನ ಮಾತ್ರವೆಂದು ಹೇಳಿ ಶ್ರೀರಾಮ ಹನುಮನನ್ನು ಆಲಂಗಿಸುತ್ತ "ಪರಮಾತ್ಮನರ್ಪಿಸಿದನಾತ್ಮವನು". ಜೀವಾತ್ಮ ಪರಮಾತ್ಮ ಸಾನಿಧ್ಯ ಸೇರಲು ಆಚಾರ್ಯನೊಬ್ಬ ಬೇಕೇಬೇಕು, ಹನುಮಂತ

ಸುಂದರ ದೌತ್ಯದ ಮೂಲಕ ಆಚಾರ್ಯಪದವಿಯನ್ನಲಂಕರಿಸಿ, ಸೀತಾ ರಾಮರ ಸಮಾಗಮಕ್ಕೆ ದಾರಿ ತೋರಿದ. ಈ ಉಪಕಾರಕ್ಕಾಗಿ ಶ್ರೀರಾಮ ಆಚಾರ್ಯನಿಗೆ ಗುರುದಕ್ಷಿಣೆಯ ರೂಪವಾಗಿ ಆತ್ಮ ಸಮರ್ಪಣೆ ಮಾಡಿರುವುದು ವಿಶ್ವ ಸಾಹಿತ್ಯದಲ್ಲಿ ಇದೊಂದೇ ಸನ್ನಿವೇಶವಲ್ಲಿ, ಇದರ ದ್ಯೋತಕವೇ ಬೆಂಗಳೂರಿನ ಹನುಮಂತನಗರದ ಆನಂದಮಿಲನಾದ್ರಿಯಲ್ಲಿ ಈಗ ರೂಪುಗೊಂಡಿರುವ ಭಾವಪೂರ್ಣ ಶಿಲ್ಪ ಶಿಖರವಲ್ಲವೆ? ವಿಶ್ವದಲ್ಲಿ ಇನ್ನೆಲ್ಲೂ ಕಾಣದ ಅಪೂರ್ವ ಶಿಲ್ಪ ಶಿಖರವಿದು.

ಇನ್ನು ರಾಮ ರಾವಣರ ಯುದ್ಧೋದ್ಯಮ. ಸುಗ್ರೀವರಾಜ ಶ್ರೀರಾಮನಿಗೆ ಸಮಾಧಾನೋಕ್ತಿಗಳನ್ನಾಡಿ ಪ್ರೋತ್ಸಾಹಿಸಿದ. ಮತಿವಂತ ಪ್ರಾಜ್ಞ ಪಂಡಿತ ಎಂದು ತಿಳಿಸಲಾಗಿ ಹೊಗಳಿ ಆವನ ಮನದ ಚಿಂತೆಯನ್ನು ಕಳೆದ. ಕಪಿಸೇನಾ ಸಾಗರದೊಡನೆ ಸರ್ವರೂ ಸಮುದ್ರತೀರ ಸೇರಿದರು. ಆಗ ರಾಮನ ದುಗುಡವುಮ್ಮಳಿಸಲು ಲಕ್ಷ್ಮಣನ ಸಮಾಧಾನೋಕ್ತಿ ನೆರವಾಯಿತು. ಸೇತುವೆಯ ನಿರ್ಮಾಣಕ್ಕೆ ನಲ ಮುಖ್ಯಸ್ಥನಾಗಿ ನಿಂತ. ಕಪಿಗಳು ತಂದೊಟ್ಟಿದ ಬಂಡೆ, ಮರಗಳಿಂದ ರಾಮ ಸೇತು ಬಹು ಬೇಗನೆ ನಿರ್ಮಾಣವಾಯಿತು. ಸಮಯುಪರಿತು ಲಂಕೆಯಲ್ಲಿ ವಿಭೀಷಣ ಅಣ್ಣನಿಗೆ "ದೀಯತಾಂ ಅಸ್ಯ ಮೈಥಿಲೀ" ಎಂದು ಹಲವು ಸಾರಿ ಹೇಳಿದ. ಆವನ ಬುದ್ಧಿವಾದವೆಲ್ಲ ಗೋರ್ಕಲ್ಲ ಮೇಲೆ ಮಳೆ ಸುರಿದಂತಾಯಿತು. ಬೇಸರಗೊಂಡ ವಿಭೀಷಣ ತನ್ನ ಅಪ್ತ ಸಚಿವ ಚತುಷ್ಟಯದೊಡಗೂಡಿ ರಾಮನಲ್ಲಿಗೆ ಶರಣಾಗತನಾಗಿ ಬಂದ. ಇಲ್ಲಿ ಒಂದು ಸಮಸ್ಯೆ ಎಷ್ಟೇ ಕೆಟ್ಟವನಾದರೂ ಒಡ ಹುಟ್ಟಿದ ಅಣ್ಣನನ್ನು ತೊರೆದು ವಿಭೀಷಣ ಶತ್ರುಪಕ್ಷ ಸೇರಬಹುದೆ? ಧರ್ಮಲೋಪವಾಗುವ ಪಕ್ಷಕ್ಕೆ ಹೊಟ್ಟೆಯಲ್ಲಿ ಹುಟ್ಟಿದ ಮಗನನ್ನು ತ್ಯಜಿಸಬಹುದು, ಮರಣದಂಡನೆಗೆ ಗುರಿಮಾಡಬಹುದೆಂಬುದಕ್ಕೆ ನಮ್ಮ ಇತಿಹಾಸದಲ್ಲಿ ಹಲವಾರು ನಿದರ್ಶನಗಳಿವೆ, ಅದು ಹಾಗಿರಲಿ: ಶ್ರೀರಾಮ ಪರಮ ವೈರಿಯ ತಮ್ಮನನ್ನೇ ಸ್ವೀಕರಿಸಬಹುದೆ? ಇದು ಮತ್ತೊಂದು ಸಮಸ್ಯೆ. ಶ್ರೀರಾಮ ಶರಣಾಗತ ವಾತ್ಸಲ್ಯ ನಿರ್ಭರ. ಸುಗ್ರೀವಾದಿಗಳು ಎಷ್ಟು ವಾದಿಸಿದರೂ "ಯದಿ ವಾ ರಾವಣಃ ಸ್ವಯಮ್" ಅವನು ರಾವಣನೇ ಆಗಿದ್ದರೂ ಶರಣಾಗತನನ್ನು ನಾನು ತಿರಸ್ಕರಿಸಲಾರೆ. ಪುರಸ್ಕರಿಸಿಯೇ ತೀರುತ್ತೇನೆ:

"ಸಕೃದೇವ ಪ್ರಸನ್ನಾಯ ತವಾಸ್ಮೀತಿ ಚ ಯಾಚತೇ।
ಅಭಯಂ ಸರ್ವ ಭೂತೇಭ್ಯೋ ದದಾಮಿ ಏತತ್ ವ್ರತಂ ಮಮ॥"

ನಾನು ನಿನ್ನವನೆಂದು ಸ್ವಲ್ಪ ಯಾಚಿಸಿದರೂ ಸಾಕು: ಸರ್ವ ಜೀವಿಗಳಿಗೂ ಅಭಯ ನೀಡುತ್ತೇನೆ: ಇದು ನನ್ನ ವ್ರತ, ಸತ್ಯ ಸಂಕಲ್ಪ" ಎಂದು ತನ್ನ ಪಕ್ಷಕ್ಕೆ ಸೇರಿಸಿಕೊಂಡೇ ಬಿಟ್ಟ. ಇದು ಶ್ರೀರಾಮನ ಅಭಯ ಪ್ರಧಾನಸಾರ ಸರ್ವಸ್ವ ಸಿದ್ಧಾಂತ.

ನೀಳ್ಗಡಲನ್ನು ದಾಟಿ ಶ್ರೀರಾಮ ವಾನರ ಸೇನಾ ಸಮೇತನಾಗಿ ಲಂಕೆಗೆ ದಂಡೆತ್ತಿದ. ಘೋರ ಯುದ್ಧ ಪ್ರಾರಂಭಿಸಿತು. "war is the scourge of

mankind" ಎಂಬಂತೆ ಸಂಗ್ರಾಮದಲ್ಲಿ ನರವಾನರಾಸುರ ವೀರರು ಹತರಾದರು. ದುರ್ಧರ್ಷ, ಪ್ರಹಸ್ತ, ಇಂದ್ರಜಿತು ಮುಂತಾದ ರಾಕ್ಷಸ ಮಹಾಮಲ್ಲರು ಮಡಿದರು. ಸೇನಾಜಲಧಿ ರಕ್ತಜಲಧಿಯಾಯಿತು. ಕಡೆಗೆ ರಾವಣನೇ ರಣಾಂಗಣಕ್ಕಿಳಿದು ರಾಮನನ್ನು ಪ್ರತಿಭಟಿಸಿ ನಿಂತ. ದೇವತ್ವದಿಂದ ಮಾನವತ್ವಕ್ಕಿಳಿದ ರಾಮನಿಗೂ ಎದೆ ನಡುಗಿತು. ಅಗಸ್ತ್ಯರು—ನಮ್ಮ ದಾಕ್ಷಿಣಾತ್ಯ ಮಹರ್ಷಿ ಉಪದೇಶಿಸಿದ ಆದಿತ್ಯ ಹೃದಯ ಸ್ತೋತ್ರವನ್ನು ವಿಧಿವತ್ತಾಗಿ ಪುರಶ್ಚರಣೆ ಮಾಡಿ ಬ್ರಹ್ಮಾಸ್ತ್ರವನ್ನು ಹೂಡಿ ವೇದೋಕ್ತವಿಧಿಗನುಸಾರವಾಗಿ ಪ್ರಯೋಗಿಸಿದೊಡನೆ ಅದು ರಾವಣನ ಎದೆಯನ್ನು ಸೀಳಿತು, ರಾಕ್ಷಸೇಶ್ವರ ನೆಲಕ್ಕುರುಳಿದ. ಈ ಘೋರ ಸಂಗ್ರಾಮದ ಭೀಕರತೆ ಉಪಮಾತೀತ. ವಾಲ್ಮೀಕಿ ಇದನ್ನು

"ಗಗನಂ ಗಗನಾಕಾರಂ ಸಾಗರಃ ಸಾಗರೋಪಮಃ। ರಾಮ ರಾವಣಯೋ
ರ್ಯುದ್ಧಂ ರಾಮ ರಾವಣಯೋರಿವ॥

ಎಂದು ಅನನ್ವಯ ವಾಗ್ವೈಖರಿಯಿಂದ ವರ್ಣಿಸಿದ್ದಾರೆ.

ಈ ಯುದ್ಧೋದ್ಯಮವೊಂದು ಘೋರ ಗಂಭೀರ ರುದ್ರನಾಟಕ. ಮೃತ್ಯು ದೇವತೆ ವಿಕಟಾಟ್ಟಹಾಸದಿಂದ ರಕ್ತಪಾನ ಮಾಡುವ ರಣರಂಗ. ಈ ಕಥನ ಕೌತುಕವನ್ನು ಕೇಳಿ ಓದಿ ಮನನ ಮಾಡುವಾಗ ಸಹೃದಯರ ಕಣ್ಣುಗಳಲ್ಲಿ ರಕ್ತಾಶ್ರು ಬಿಂದುಗಳು ಬೀಳುವುದೊಂದೇ ಅಲ್ಲ, ನರಗಳ ಬಿಗಿತ ಹೃದಯದ ಮೇಲೆ ಘೋರ ಪರಿಣಾಮಗಳುಂಟಾಗುತ್ತವೆ. ಅದಕ್ಕಾಗಿಯೇ ಕರುಣಾರ್ದ್ರ ಹೃದಯರಾದ ಕವಿ ಬ್ರಹ್ಮ ವಾಲ್ಮೀಕಿ ಕುಂಭಕರ್ಣನ ನಿದ್ರಾವಸ್ಥೆಯನ್ನು ಬಣ್ಣಿಸುವ ನೆಪದಲ್ಲಿ ಹಾಸ್ಯರಸಪೂರಿತ ಸನ್ನಿವೇಶವೊಂದನ್ನು ಹಿತಮಿತವಾಗಿ ಹೀಗೆ ಚಿಮ್ಮಿದ್ದಾರೆ.

ಕೇಶಾನನ್ಯೇ ಪ್ರಲುಲುಪುಃ ಕರ್ಣಾವನ್ಯೇ ದಶಂತಿ ಚ। ಉದ ಕುಂಭ
ಶತಾನ್ಯನ್ಯೇಸ ಮಸಿಂ ಚಂತ ಕರ್ಣಯೋಃ|| ಸ ಕುಂಭಕರ್ಣಃ ಪಸ್ಪಂದೇ
ಮಹಾನಿದ್ರಾವಶಂ ಗತಃ।ಅನ್ಯೇಜ ಬಲಿನಸ್ತಸ್ಯ ಕೂಟ ಮುದ್ಗರ
ಪಾಣಯಃ ||

ಕುಂಭಕರ್ಣನನ್ನು ಎಚ್ಚರಿಸಲು ಕೆಲವರು ಅವನ ಜುಟ್ಟೆಳೆದರು; ಕೆಲವರು ಕಿವಿಕಚ್ಚಿದರು ಕಿವಿಯೊಳಕ್ಕೆ ನೂರಾರು ಬಿಂದಿಗೆ ನೀರು ತುಂಬಿದರು; ಮತ್ತೆ ಕೆಲವರು ಗದೆ ಸುತ್ತಿಗೆಗಳಿಂದ ಘಟ್ಟಿಸಿದರು. ಆದರೂ ಅವನು ಜುಮ್ಮೆನ್ನಲಿಲ್ಲವಂತೆ, ಕುಂಭಕರ್ಣನ ನಿದ್ರೆಯೆಂದರೆ ನಮ್ಮಲ್ಲಿ ದೀರ್ಘ ನಿದ್ರೆಗೆ ಸಮಾನವೆಂಬ ಹಾಸ್ಯದ ಗಾದೆ ಹುಟ್ಟಿದೆ. ವಾಲ್ಮೀಕಿಯ ಹಾಸ್ಯ ಇಲ್ಲಿ ತಿಳಿಹಾಸ್ಯ; ಯಾರ ಮನವನ್ನೂ ನೋಯಿಸತಕ್ಕದ್ದಲ್ಲ. ನಮ್ಮ ಕೈಲಾಸಂ, ಬೀಚಿಯವರ ಹಾಸ್ಯವಿದ್ದಂತೆ. ಇಲಿಗೆ ಪ್ರಾಣ ಸಂಕಟವನ್ನುಂಟುಮಾಡುವ ಬೆಕ್ಕಿನ ಚೆಲ್ಲಾಟವಲ್ಲ.

ರಾವಣ ಸಂಹಾರವಾಯಿತು. ಅವನಿಗೆ ಚರಮಕ್ರಿಯೆ ಮಾಡುವುದಕ್ಕೆ ಸ್ವಲ್ಪ ಹಿಂಜರಿದಾಗ ಶ್ರೀರಾಮ–ಧರ್ಮನಿಷ್ಠ–"ಕ್ರಿಯತಾಂ ಅಸ್ಯ ಸಂಸ್ಕಾರಃ ಮಮಾಪ್ಯೇಷ ಯಥಾ ತವ" ಉತ್ತರ ಕ್ರಿಯೆ ಮಾಡುವುದು ಸದ್ಧರ್ಮ: ರಾವಣ ನಿನಗೆ ಹೇಗೋ ನನಗೂ ಹಾಗೆ" ಎಂದು ವಿಭೀಷಣನಿಗೆ ಧರ್ಮೋಪದೇಶ ಮಾಡಿ ತನ್ನ ಧರ್ಮ ಶ್ರದ್ಧೆಯನ್ನು ಎತ್ತಿ ಹಿಡಿದ.

ಪತಿವ್ರತೆಯಾದ ಸೀತೆಗೆ ತನ್ನ ಯುವತಿಯರ ಮೂಲಕ ಮಂಗಳಸ್ನಾನ ಮಾಡಿಸಿ ದಿವ್ಯಾಭರಣ ತೊಡಿಸಿ ಶ್ರೀರಾಮನ ಸನ್ನಿಧಿಗೆ ಒಪ್ಪಿಸಲು ಪಲ್ಲಕ್ಕಿಯಲ್ಲಿ ಕೂರಿಸಿಕೊಂಡು ಬರುತ್ತಿರುವಾಗ ಲೋಕಮಾತೆಯ ದರ್ಶನಕ್ಕಾಗಿ ನರವಾನರಾಸುರರು ಗುಂಪು ಗುಂಪಾಗಿ ಮುನ್ನುಗ್ಗಿದರು. ವಿಭೀಷಣ ಎಷ್ಟೇ ಆಗಲಿ ರಾಕ್ಷಸ ಹುಟ್ಟು ಗುಂಪನ್ನು ಚದುರಿಸಲು ರಾಜಭಟರಿಗೆ ಅಪ್ಪಣೆ ಮಾಡಿದ. ಅವರು ತಮ್ಮ ಬೆತ್ತಗಳನ್ನು ಝಳಪಿಸಿ ಗುಂಪನ್ನು ಹಿಂದಕ್ಕೆ ತಳ್ಳಿದರು. ಇದನ್ನು ನೋಡಿ ರಾಮನಿಗೆ ಕಣ್ಣು ಕೆರಳಿತು. ವಿಭೀಷಣನನ್ನು ಗದರಿ ಗರ್ಜಿಸಿದ. "ಜನೇಯಂ ಸ್ವಜನೇಮಮ" ಜಗದಗಲದ ಹೃದಯ ವೈಶಾಲ್ಯವನ್ನು ತೋರಿ ಇವರವರೆನ್ನದೆ ಎಲ್ಲರನ್ನೂ ಅಪ್ಪಿಕೊಂಡ. ಈಗ ನಡೆಯುವ ರಾಜಕೀಯ ಚುನಾವಣೆಗಳಲ್ಲಿ ಪಕ್ಷ ಪ್ರತಿಪಕ್ಷಗಳ ಅಭ್ಯರ್ಥಿಗಳು, ಅವರ ಅನುಯಾಯಿಗಳು ಅಧಿಕಾರಿಗಳು ಹೋರಾಡುವುದುಂಟು. ಗೆಲ್ಲುವವರೆಗೆ ಪಕ್ಷಭೇದ, ಗೆದ್ದ ಮೇಲೆ ಎಲ್ಲ ಪಕ್ಷಗಳವರೂ ತಮ್ಮವರೇ ಎಂದು ತಮ್ಮ ಕ್ಷೇತ್ರದ ಮತದಾರರೆಲ್ಲರನ್ನೂ ಶ್ರೀರಾಮನಂತೆ ಭಾವಿಸಿದರೆ ಮಾತ್ರ ನಾವು ಶ್ರೀರಾಮ ರಾಜ್ಯದ ಪ್ರಜೆಗಳಾಗುತ್ತೇವೆ. ಹಾಗಿಲ್ಲದಿದ್ದರೆ ರಾವಣ ರಾಜ್ಯದವರಾಗುತ್ತೇವೆ.

ಶ್ರೀಮದ್ರಾಮಾಯಣವೊಂದು ಶರಣಾಗತಿ ಶಾಸ್ತ್ರ, ಇದರ ಪ್ರತಿ ಕಾಂಡದಲ್ಲಿಯೂ ಪ್ರಪತ್ತಿ ವೈಭವ ಎದ್ದು ಕಾಣುತ್ತದೆ. ಬಾಲಕಾಂಡದಿಂದ ಮೊದಲಾಗಿ ಯುದ್ಧ ಕಾಂಡದ ಪೂರ್ತಿಯಾಗಿ ಶರಣಾಗತಿ ವೈಭವವನ್ನು ಕಾಣುತ್ತೇವೆ. ದೇವತೆಗಳ, ಭರತನ ಋಷಿಗಳ, ಸುಗ್ರೀವನ, ಕಾಕಾಸುರನ, ರಾಕ್ಷಸಿಯರ, ವಿಭೀಷಣನ ಶರಣಾಗತಿಗಳು ಅಲ್ಲಲ್ಲಿ ಮಿನುಗುತ್ತವೆ ರಾಮಾಯಣದಲ್ಲಿ, "ಅನ್ಯಥಾ ಶರಣಂ ನಾಸ್ತಿ ತ್ವಮೇವ ಶರಣಂ ಮಮ" ಎಂದು ಸಮರ್ಪಣ ಮಾಡಿದರೆ, ಪರಮಾತ್ಮ "ಸರ್ವ ಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ। ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಷಂ" ಎಂದು ಅಭಯ ನೀಡುತ್ತಾನೆ. ಆದ ಕಾರಣ ಶರಣಾಗತಿಯೆಂದು ಖಚಿತವಾದ ಸರಳವಾದ ನೇರವಾದ ಮೋಕ್ಷೋಪಾಯ, ಸಮಸ್ತ ಜೀವಕೋಟಿಗೂ ಎಟುಕಬಹುದಾದ ಸಾಧನಮಾರ್ಗ. ಶ್ರೀಮದ್ರಾಮಾನುಜರ ಸಿದ್ಧಾಂತದಲ್ಲಿ ಇದೊಂದು ಸುವರ್ಣರೇಖೆ, ಶೈವ ಸಿದ್ಧಾಂತದಲ್ಲಿಯೂ ಇದಕ್ಕೆ ವಿಶಿಷ್ಟ ಸ್ಥಾನವಿದೆ. ಶರಣಾಗತಿಗೆ ತಮಿಳಿನಲ್ಲಿ "ಅಡೈಕ್ಕಲಂ" ಎಂದು ಹೆಸರು.

ದುಷ್ಟ ಶಿಕ್ಷಣ ಶಿಷ್ಟ ಪರಿಪಾಲನ ಕಾರ್ಯವೆಲ್ಲ ಮುಗಿದ ಮೇಲೆ ಶ್ರೀರಾಮನಿಗೆ ಸೀತೆಯೊಂದಿಗೆ ಅಯೋಧ್ಯೆಯಲ್ಲಿ ಪಟ್ಟಾಭಿಷೇಕ. ಭ್ರಾತೃವತ್ಸಲ ಭರತ ನಂದಿಗ್ರಾಮ ದಿಂದ ಶ್ರೀರಾಮನ ಪಾದುಕೆಗಳನ್ನು ತಲೆ ಮೇಲೆ ಧರಿಸಿ ರಾಮನೊಂದಿಗೆ ನಗರ ಪ್ರವೇಶ ಮಾಡಿದ. ಪಟ್ಟಾಭಿಷೇಕ ಸಮಯದಲ್ಲಿ ಪತಿದೇವನ ಇಂಗಿತವರಿತ ಸೀತೆ ತನ್ನ ಕೊರಳಿನ ಚಂದ್ರಹಾರವನ್ನು ಹನುಮಂತನಿಗೆ ಕೊಟ್ಟಳು, ಅದನ್ನು ಧರಿಸಿದ ಹನುಮಂತ "ಬೆಳಗಿದನು ಬೆಳ್ಮುಗಿಲ ಮಾಲೆಯದು ಬಳಸಿರ್ಪ ಗಿರಿಯಂತೆ".

ರಾಮಾಯಣದ ಮೂಲಕ ವಾಲ್ಮೀಕಿ ಜಗತ್ತಿಗೆ ಸಾರಿದ ಸಂದೇಶಗಳು ಹಲವಾರು. ಅವುಗಳಲ್ಲಿ ಮುಖ್ಯವಾದುವು ಸತ್ಯ ಹಾಗೂ ಧರ್ಮನಿಷ್ಠೆಗಳ ಹಿರಿಮೆ, ಇನ್ನೂ ಮಿಗಿಲೆಂದರೆ ಹೆಣ್ಣಿನ ಕಣ್ಣೀರಿನ ಪ್ರಭಾವ, ಸೀತೆಯ ಕಣ್ಣೀರಿನ ಪ್ರಭಾವದಿಂದ ರಾಕ್ಷಸ ಕುಲ ನಾಶವಾಯಿತು. ಭಗವಾನ್ ವ್ಯಾಸರ ಪ್ರಕಾರ ದ್ರೌಪದಿಯ ಕಣ್ಣೀರಿ ನಿಂದ ಕೌರವ ಕುಲ ನಾಮಾವಶೇಷವಾಯಿತು. ಅಗ್ನಿಗೆ ದಹಿಸುವ ಶಕ್ತಿ ಮಾತ್ರ; ನೀರಿಗೆ ಸಂಚಯನ ಮಾಡುವ ಶಕ್ತಿ ಮಾತ್ರ; ಹೆಣ್ಣಿನ ಕಣ್ಣೀರಿಗೆ ದಹನ-ಸಂಚಯನ ಶಕ್ತಿಗಳೆರಡೂ ಏಕಕಾಲದಲ್ಲಿಯೇ ಉಂಟೆಂಬುದು ಇತಿಹಾಸ ಪ್ರಸಿದ್ಧವಾಗಿದೆ.

"ರಾಮಾಯಣ ನಮಗೊಂದು ಅತುಲೈಶ್ವರ್ಯ; ಇದರ ಪಾರಾಯಣದಿಂದ ನಮಗೆ ಅಮಿತ ಶಾಂತಿ, ಸೌಖ್ಯ ಲಭಿಸುತ್ತವೆ. ಕಾಲಕ್ಷೇಪಕ್ಕೆ ಯೋಗ್ಯವಾದ ಪುಣ್ಯ ಕಥೆ ಇದು. ಬರಿಯ ಕಾವ್ಯವಲ್ಲ, ಜೀವನವನ್ನು ಪವಿತ್ರಗೊಳಿಸುವ ಭಕ್ತಿ ಪ್ರವಾಹ: ಗೃಹಸ್ಥ ಧರ್ಮದ ಆದರ್ಶ ಇಲ್ಲಿ ಪ್ರತಿಬಿಂಬಿತ. "ಪ್ರತಿ ವ್ಯಕ್ತಿಯು ಇದನ್ನು ಭಕ್ತಿ ಯಿಂದ ಓದಿ ಅದು ತೋರುವ ಮಾರ್ಗದಲ್ಲಿ ನಡೆದರೆ ಬಹುಬೇಗನೆ ರಾಮ ರಾಜ್ಯದ ಸ್ಥಾಪನೆಯಾಗುವುದರಲ್ಲಿ ಸಂಶಯವಿಲ್ಲ" ಎಂದಿದ್ದಾರೆ ಮಹಾತ್ಮ ಗಾಂಧಿ.

"ಸೀತೆ ಪರಿಶುದ್ಧೆ, ಪವಿತ್ರಾತ್ಮೆ, ಆಜನ್ಮ ದುಃಖಿಸಿ, ಭರತ ಖಂಡದಲ್ಲಿ ಯಾವುದು ಶುಭವೋ, ಪವಿತ್ರವೋ ಅದಕ್ಕೆಲ್ಲ ಸೀತೆ ಎಂದು ಹೆಸರು. ಸ್ತ್ರೀಯರಲ್ಲಿ ಯಾವುದನ್ನು ಸ್ತ್ರೀತ್ವವೆನ್ನುವೆವೋ ಅದೇ ಸೀತೆ. ಮನೆ ಮನೆಯಲ್ಲಿಯೂ ಆ ಮಹಾತಾಯಿಯ ಹೆಸರು ಬೆಳಗಬೇಕು. ಸೀತೆ ಸಹಿಷ್ಣುತಾ ಮೂರ್ತಿ; ನಿತ್ಯ ಪತಿವ್ರತೆ; ಎಷ್ಟು ಕಷ್ಟ ಬಂದರೂ ಶ್ರೀರಾಮನಲ್ಲಿ ತಪ್ಪನ್ನು ಎಣಿಸದವಳು, ಹಿಂಸೆಗೆ ಪ್ರತಿ ಹಿಂಸೆ ಬಯಸಿದವಳಲ್ಲ. ಆದ್ದರಿಂದಲೇ ಶ್ರೀರಾಮನೇ ಒಪ್ಪಿಕೊಂಡಿರುವಂತೆ "ಸೀತಾಯಾಶ್ಚರಿತಂ ಮಹತ್" ಎಂದು ಹೇಳಿದ್ದಾರೆ ಶ್ರೀ ಸ್ವಾಮಿ ವಿವೇಕಾನಂದರು.

"ಓಂ ತತ್ಸತ್"

ಕರ್ನಾಟಕದ ವಿದ್ಯುತ್ ಯೋಜನೆ-ಹೊಸ ಸಾಧ್ಯತೆಗಳು

ವಾ. ಗೋ. ಕುಲ್ಕರ್ಣಿ

ವಿದ್ಯುಚ್ಛಕ್ತಿಯನ್ನು ನಾನಾ ಮೂಲಗಳಿಂದ ಉತ್ಪಾದಿಸಬಹುದು. ಸಾಂಪ್ರದಾಯಿಕವಾಗಿ ಕಲ್ಲಿದ್ದಲು, ಎಣ್ಣೆ ಮತ್ತು ನೀರು ಇವು ಅಂತಹ ಮೂರು ಮುಖ್ಯ ಮೂಲಗಳು. ಆದರೆ ಇವುಗಳಲ್ಲಿ ಮೊದಲಿನ ಎರಡೂ ಮೂಲಗಳಿಗೆ ನಮ್ಮ ರಾಜ್ಯದಲ್ಲಿ ಅಷ್ಟೊಂದು ಅವಕಾಶವಿಲ್ಲ.

ಇನ್ನುಳಿದ ಮೂಲಗಳಲ್ಲಿ ಭೂಗರ್ಭಶಾಖ, ಗಾಳಿ ಮತ್ತು ಸೂರ್ಯ ಇವು ಮುಖ್ಯವಾದವು. ಕರ್ನಾಟಕಕ್ಕೂ ಭೂಗರ್ಭಶಾಖದ ಲಭ್ಯತೆಗೂ ಬಲು ದೂರ. ನಮ್ಮಲ್ಲಿ ಹೆಚ್ಚು ಕಡಿಮೆ ಎಲ್ಲ ಪ್ರದೇಶಗಳಲ್ಲೂ ಗಾಳಿಯ ವೇಗ ಅಷ್ಟಾಗಿ ಇಲ್ಲ. ಅಲ್ಲದೆ ಗಾಳಿಯ ವೇಗ ಯಾವಾಗಲೂ ಒಂದೇ ಪ್ರಮಾಣದಲ್ಲಿ ಇಲ್ಲ. ಹೀಗಾಗಿ ವಿದ್ಯುಚ್ಛಕ್ತಿಯ ಉತ್ಪಾದನೆಗೆ ಗಾಳಿಯನ್ನು ನಂಬುವಂತಿಲ್ಲ. ಸೌರಶಕ್ತಿಯಿಂದ ವಿದ್ಯುಚ್ಛಕ್ತಿಯ ಉತ್ಪಾದನೆ ಎರಡು ಬಗೆಯದು : ಒಂದು ಸೌರಕೋಶಗಳ ಮೂಲಕ ಸೂರ್ಯನ ಬೆಳಕನ್ನು ನೇರವಾಗಿ ವಿದ್ಯುಚ್ಛಕ್ತಿಯನ್ನಾಗಿ ಮಾರ್ಪಡಿಸುವುದು. ಎರಡನೆಯದು ಸೂರ್ಯನ ಉಷ್ಣತಾ ಮಾಧ್ಯಮದಿಂದ ನೀರುಕಾಯಿಸಿ ಉಗಿಯಾಗಿ ಮಾರ್ಪಡಿಸಿ ಉಗಿ-ಶಕ್ತಿಯಿಂದ ವಿದ್ಯುತ್ಪ್ರವಾಹ ಜನಕಗಳನ್ನು ತಿರುಗಿಸಿ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವುದು. ಆದರೆ ಇವೆರಡೂ ವಿಧಾನಗಳ ಕಾರ್ಯಕ್ಷಮತೆ 5 ರಿಂದ 15 ಪ್ರತಿಶತಮಾತ್ರ, ವೆಚ್ಚ ಬಹಳ. ಎರಡೂ ವಿಧಾನಗಳಿನ್ನೂ ಪ್ರಾಯೋಗಿಕ ಹಾಗೂ ಪ್ರಾರಂಭಿಕ ಹಂತದಲ್ಲಿವೆಯಷ್ಟೆ. ಏನೇ ಆದರೂ ದಿನೇ ದಿನೇ ಹೆಚ್ಚುತ್ತಿರುವ ನಮ್ಮ ವಿದ್ಯುಚ್ಛಕ್ತಿಯ ಕೊರತೆಯ ರಾಕ್ಷಸ ಹಸಿವು ಇಷ್ಟರಿಂದಲೇ ಹಿಂಗಲಾರದು ಆದ್ದರಿಂದಲೇ ಜಲ ವಿದ್ಯುಚ್ಛಕ್ತಿಗೆ ಪ್ರಧಾನ ಸ್ಥಾನವನ್ನು ನೀಡಬೇಕಾಗಿರುವುದು.

ಜಲ ವಿದ್ಯುದ್ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಸಾಧ್ಯತೆಯಿರುವಲ್ಲೆಲ್ಲ ಉಳಿದೆಲ್ಲ ಅಂಶಗಳು ಸಮಾನವಾಗಿದ್ದಾಗ ಕಡಿಮೆ ವೆಚ್ಚದಲ್ಲಿ ಹೆಚ್ಚು ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಹುದಾದ ಘಟಕಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಬಹಳ ಪ್ರಮಾಣದ ನೀರು ಹೆಚ್ಚು ಎತ್ತರದಲ್ಲಿ ಲಭ್ಯವಿದ್ದರಂತೂ ಸರಿಯೇ ಸರಿ. ಇಲ್ಲವಾದರೆ ಬಹಳ ಪ್ರಮಾಣದ ನೀರು ತುಸು ಎತ್ತರದಲ್ಲಿ ಇಲ್ಲವೆ ತುಸು ಪ್ರಮಾಣದ ನೀರು ಬಹಳ ಎತ್ತರದಲ್ಲಿ ಲಭ್ಯವಿದ್ದರೂ ವಿದ್ಯುಚ್ಛಕ್ತಿಯನ್ನು ಆರ್ಥಿಕವಾಗಿ ಲಾಭದಾಯಕವಾಗಿ ಉತ್ಪಾ

ದಿಸಬಹುದು. ಏಕೆಂದರೆ ನಮಗೆ ದೊರೆಯಬಹುದಾದ ವಿದ್ಯುಚ್ಛಕ್ತಿಯ ಪ್ರಮಾಣವು ಲಭ್ಯವಿರುವ ನೀರಿನ ಪ್ರಮಾಣ ಹಾಗೂ ಅದರ ಮಟ್ಟ ಇವುಗಳ ಗುಣಲಬ್ಧವನ್ನು ಅವಲಂಬಿಸಿರುತ್ತದೆ. ಇದನ್ನೇ ಇನ್ನೂ ಸ್ವಲ್ಪ ವಿಶದವಾಗಿ ಹೇಳುವುದಾದರೆ 50 ಮೀಟರುಗಳಷ್ಟು ಎತ್ತರದ ಮೇಲೆ ಲಭ್ಯವಿರುವ 2 ಮಿಲಿಯ ಘನ ಮೀಟರು ನೀರು ಮತ್ತು 100 ಮೀಟರುಗಳಷ್ಟು ಎತ್ತರದ ಮೇಲೆ ಲಭ್ಯವಿರುವ 1 ಮಿಲಿಯ ಘನ ಮೀಟರು ನೀರು ಇವೆರಡರಿಂದಲೂ ಹೆಚ್ಚು ಕಡಿಮೆ ಅಷ್ಟೇ ಪ್ರಮಾಣದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಹುದು.


ಆರ್ಥಿಕವಾಗಿ ಲಾಭದಾಯಕವಾದ, ಮೇಲೆ ವಿವರಿಸಿದಂತಹ ಸ್ಥಳಗಳಲ್ಲೆಲ್ಲ ಜಲ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಿದ ನಂತರ ದೇಶದ ಹೆಚ್ಚಿನ ಬೇಡಿಕೆಯ ಪೂರೈಕೆಗಾಗಿ, ಸ್ಥಾಪನೆ ಹಾಗೂ ನಿರ್ವಹಣಾ ವೆಚ್ಚಗಳು ಹೆಚ್ಚಾದಾಗ್ಯೂ ಅತಿ ಜಲ ವಿದ್ಯುತ್ ಸ್ಥಾವರಗಳತ್ತ ಹೊರಳಲೇಬೇಕಾಗುತ್ತದೆ. ಇವಕ್ಕೆ ಮೈಕ್ರೋ ಜಲ ವಿದ್ಯುತ್ ಸ್ಥಾವರಗಳೆಂದು ನಾವು ಕರೆಯುವುದು.

ನೀರಾವರಿಗಾಗಿ ತೋಡಿದ ಹಲ ಕಾಲುವೆಗಳು ಅಥವ ಕೆಲ ನದಿ, ನಾಲೆಗಳ ಪಾತಳಿ ಕಿಲೋಮೀಟರೊಂದಕ್ಕೆ ಒಂದೆರಡು ಮೀಟರಿನಂತೆ ಇಳಿಯುತ್ತ ಹೋಗುವುದುಂಟು. ನೀರಿನಲ್ಲಿನ ಎರಡು ಸ್ಥಾನಗಳ ಇಂಥ ಪಾತಳಿಗಳ ಅಂತರದ ಲಾಭವನ್ನು ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಮೈಕ್ರೋ ಜಲ ವಿದ್ಯುತ್ ಸ್ಥಾವರಗಳಲ್ಲಿ ಪಡೆಯಲಾಗುತ್ತದೆ. ಇಂಥ ಅಂತರ ಸುಮಾರು 5 ರಿಂದ 40 ಮೀಟರುಗಳಷ್ಟು ಇದ್ದರೂ ಸಾಕು. ವಿದ್ಯುಚ್ಛಕ್ತಿಯನ್ನು ಉತ್ಪಾದಿಸಬಹುದಾಗಿದೆ. ನಿಯಮಿತ ಅಂತರದಲ್ಲಿ ಅಣೆಗಳನ್ನು ಕಟ್ಟಿ ನೀರನ್ನು ಸುಮಾರು 10 ಮೀಟರುಗಳಷ್ಟು ಎತ್ತರದವರೆಗೆ ಒಡ್ಡಿದಿಟ್ಟು ನೀರಿನಲ್ಲಿನ ಗುಪ್ತಶಕ್ತಿಯ ಪ್ರಯೋಜನವನ್ನು ವಿದ್ಯುಚ್ಛಕ್ತಿಯ ಉತ್ಪಾದನೆಗೆ ಪಡೆಯಬಹುದು. ಒಂದು ಅಂದಾಜಿನಂತೆ ಇಂಥಲ್ಲಿ ಲಭ್ಯವಿರುವ ವಿದ್ಯುಚ್ಛಕ್ತಿಯ ಪ್ರಮಾಣ ದೊರೆಯಬಹುದಾದ ನೀರಿನ ಪ್ರಮಾಣವನ್ನು ಅವಲಂಬಿಸಿ 1 ರಿಂದ 40 ಮೆಗಾವಾಟ್ (1 ಮೆಗಾವ್ಯಾಟ್ ಅಂದರೆ 1 ಮಿಲಿಯ ವ್ಯಾಟುಗಳು) ಗಳಿಗೆ ಸೀಮಿತವಾಗಿರುತ್ತದೆ.

ಇಂಥ ಸ್ಥಾವರಗಳಲ್ಲಿ ವಿದ್ಯುತ್ಪ್ರವಾಹ ಜನಕಗಳಿಗಾಗಿ ಭ್ರಮರವನ್ನು ತಿರುಗಿಸಲು ವಿಶಿಷ್ಟ ವಿನ್ಯಾಸದ ಬಲ್ಬ್ ಘಟಕ ಎಂಬ ಘಟಕವನ್ನು ಉಪಯೋಗಿಸಲಾಗುತ್ತದೆ. (ಚಿತ್ರ ನೋಡಿ) ವಿದ್ಯುತ್ಪ್ರವಾಹ ಜನಕವನ್ನು ಬಲ್ಬಿನಾಕಾರದ ಕವಚದಲ್ಲಿ ಅಳವಡಿಸಲಾಗಿರುತ್ತದೆಯಾಗಿ ಇದಕ್ಕೆ ಬಲ್ಬ್ ಘಟಕ ಎಂದು ಹೆಸರು. ಇಂಥ ಘಟಕಗಳಲ್ಲಿನ ಜಲ ಚಕ್ರಯಂತ್ರದ ಗಾಲಿಗಳ ವ್ಯಾಸ 2 ರಿಂದ 8 ಮೀಟರುಗಳಿಗಷ್ಟೆ ಸೀಮಿತವಾಗಿ

ರುತ್ತದೆ. ಇಂಥ ಘಟಕವನ್ನು ಕಾರಖಾನೆಯಲ್ಲೇ ಜೋಡಿಸಿ ಅದು ಬೇಕಾದಲ್ಲಿ ಕೊಂಡೊಯ್ದು ಕೂಡಿಸಬಹುದು.

ಬಲ್ಬ್ ಘಟಕಗಳ ಕಾರ್ಯ ನಿರ್ವಹಣೆ ಸಮಸ್ಯಾಪೂರ್ಣ. ಇಂಥ ಸಮಸ್ಯೆಗಳು ಹಾಗೂ ಅವುಗಳ ಪರಿಹಾರದ ಬಗೆಯನ್ನು ಈ ಕೆಳಗೆ ಸ್ಥೂಲವಾಗಿ ನೀಡಲಾಗಿದೆ.



1) ನೀರ್ಗಾಲಿಯ ಅತಿ ಕಡಿಮೆ ಗತಿ :

ನೀರಿನ ಪಾತಳಿಗಳ ಅಂತರ ಬಹಳ ಕಡಿಮೆ ಇರುವುದರಿಂದ ನೀರ್ಗಾಲಿಯ ಗತಿ ಕೂಡ ಅತಿ ಕಡಿಮೆ. ನೀರ್ಗಾಲಿ ಮತ್ತು ವಿದ್ಯುತ್ಪ್ರವಾಹ ಜನಕಗಳ ನಡುವೆ, ಗತಿ-ವೃದ್ಧಿತಗಳನ್ನು ಹಾಕುವುದರಿಂದ ಈ ಸಮಸ್ಯೆಯನ್ನು ಬಹುಪಾಲು ಪರಿಹರಿಸ ಬಹುದು.

2) ಅವಶ್ಯಕವಾದ ದುರಸ್ಥಿಗಳನ್ನು ನೀರಲ್ಲಿಯೇ ಮಾಡಬೇಕಾಗುವಿಕೆ :

ವಿದ್ಯುತ್ಪ್ರವಾಹ ಜನಕಗಳನ್ನು ನೀರಿನ ಮಟ್ಟಕ್ಕಿಂತಲೂ ಮೇಲೆ ಇಟ್ಟು ಜಲ ಚಕ್ರಯಂತ್ರ ಹಾಗೂ ವಿದ್ಯುತ್ ಪ್ರವಾಹ ಜನಕಗಳನ್ನು ಅಚ್ಚಿನ ಮೂಲಕ ಜೋಡಿ ಸುವುದರಿಂದ ಈ ಸಮಸ್ಯೆಯನ್ನು ಪರಿಹರಿಸಬಹುದು. ಇಂಥ ಘಟಕಕ್ಕೆ ಟ್ಯೂಬ್ ಘಟಕ ಎಂದು ಹೆಸರು.

3) **ವಿದ್ಯುತ್ಪ್ರವಾಹ ಜನಕದಲ್ಲಿ ಉದ್ಭವಿಸುವ ಉಷ್ಣತೆ :**

ಗವಾಕ್ಷಗಳಿಂದ ಗಾಳಿಯನ್ನು ಬಿಡುವುದರ ಮೂಲಕ ಈ ಸಮಸ್ಯೆಯನ್ನು ಪರಿಹರಿಸಬಹುದು. ಎಣ್ಣೆಯನ್ನು ಹರಿಸಿ ತಂಪು ಮಾಡುವ ಪದ್ಧತಿಯನ್ನೀಚೆಗೆ ಕೈ ಬಿಡಲಾಗಿದೆ.

4) **ಗತಿ ನಿಯಂತ್ರಣದ ಕಷ್ಟಸಾಧ್ಯತೆ :**

ಈ ಸಮಸ್ಯೆ ಗುರುತರವಾದುದು. ಕೆಲ ಚಿಕ್ಕ ಘಟಕಗಳನ್ನು ಇಂಥ ನಿಯಂತ್ರಣವೇ ಇಲ್ಲದೆ ವಿನ್ಯಾಸಗೊಳಿಸಲಾಗಿರುತ್ತದೆ. ಇನ್ನು ಕೆಲ ಘಟಕಗಳಲ್ಲಿ ವಿದ್ಯುತ್ಪ್ರವಾಹ ಜನಕವು ಕಾರ್ಯ ನಿಲ್ಲಿಸಿದ ವೇಳೆಯಲ್ಲಿಯೇ ಹೊಂದಾಣಿಕೆಯಿಂದ ಗತಿ ನಿಯಂತ್ರಣ ಮಾಡಲಾಗುತ್ತದೆ. ಇನ್ನು ಕೆಲ ದೊಡ್ಡ ಘಟಕಗಳಲ್ಲಿ ಸ್ವಯಂ ಚಾಲಿತ ಹಾಗೂ ಕ್ರಮಪಡಿಸಿದ ಕವಾಟದ ಯಂತ್ರರಚನೆಯನ್ನು ಅಳವಡಿಸಲಾಗಿರುತ್ತದೆ. ಇಂಥ ಘಟಕಗಳ ಬೆಲೆ ಹೆಚ್ಚು.

ಭಾರತದಂಥ ಅಭಿವೃದ್ಧಿಶೀಲ ದೇಶಗಳಲ್ಲಿ ಜನಸಂಖ್ಯೆ ಬಹುತೇಕವಾಗಿ ಹಳ್ಳಿಯಲ್ಲಿರುತ್ತದೆ. ಕರ್ನಾಟಕದಲ್ಲಿ ಇಂಥ ಜನಸಂಖ್ಯೆ 70 ಪ್ರತಿಶತದಷ್ಟು. ಬೇಡಿಕೆಯ ಕೇಂದ್ರದಲ್ಲಿ, ಬೇಡಿಕೆಯು ಕೇಂದ್ರಿಕೃತವಾಗಿದ್ದು ಅದರ ಪ್ರಮಾಣವೂ ಹೆಚ್ಚಿದ್ದರೆ ದೊಡ್ಡ ವಿದ್ಯುತ್ ಸ್ಥಾವರಗಳು ಲಾಭದಾಯಕವಾಗಿ ಕಾರ್ಯ ನಿರ್ವಹಿಸಲು ಸಾಧ್ಯ. ಉದಾ : ಹೆಚ್ಚು ಉದ್ಯಮಗಳು, ಜನ ಬಾಹುಳ್ಯವಿರುವ ನಗರಗಳು. ಆದರೆ ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿಯ ಬೇಡಿಕೆ ಬಲು ಕಡಿಮೆ, ಅಲ್ಲದೆ ಅವು ಹಬ್ಬಿರುವುದು ವಿಶಾಲ ಕ್ಷೇತ್ರದಲ್ಲಿ. ಇಂಥಲ್ಲಿ ವಿದ್ಯುಚ್ಛಕ್ತಿಯನ್ನು ಪೂರೈಸಬೇಕಾದರೆ ವ್ಯಾಪಕವಾದ ವಿದ್ಯುತ್ ವಿತರಣಾ ಜಾಲ ಆವಶ್ಯ. ಇದು ತುಂಬ ವೆಚ್ಚದ್ದು. ಇದರ ಬದಲು ವಿಕೇಂದ್ರಿಕೃತ ಹಾಗೂ ಸ್ವಾಯತ್ತಾಧಿಕಾರ ಸಾಧ್ಯವಿರುವ ವಿದ್ಯುತ್‌ಸ್ಥಾವರಗಳ ಸ್ಥಾಪನೆ ಕಡಿಮೆ ವೆಚ್ಚದ್ದೂ ವ್ಯಾವಹಾರಿಕವೂ ಆಗಬಲ್ಲದು. ದೊಡ್ಡ ವಿದ್ಯುತ್ ಸ್ಥಾವರಗಳಲ್ಲಿ ಉತ್ಪಾದನೆ ನಿಂತಾಗ ಕೈಗಾರಿಕೋದ್ಯಮಿಗಳಿಗೆ ಆಗುವಂಥ ವ್ಯಾಪಕ ಅಡೆತಡೆ ವಿಕೇಂದ್ರಿಕೃತ ವಿದ್ಯುತ್ ಸ್ಥಾವರಗಳಲ್ಲಿ ಆಗಲಾರದು.

ಈ ವಿಷಯಗಳನ್ನು ಗಮನದಲ್ಲಿಟ್ಟುಕೊಂಡರೆ ವಿರಳ ಜನವಸತಿಯುಳ್ಳ ಕ್ಷೇತ್ರಗಳಲ್ಲಿ ನೀರಾವರಿ ಕಾಲುವೆಗಳು ಅಥವಾ ಚಿಕ್ಕ ಪುಟ್ಟ ನದಿ-ನಾಲೆಗಳು ಇರುವಲ್ಲಿ ಜನತೆಯ ಮೂಲಭೂತ ಬೇಡಿಕೆಗಳ ಪೂರೈಕೆಗಾಗಿ ಜಲ ಸಂಪನ್ಮೂಲಗಳನ್ನು ಬಳಸಿ ಮೈಕ್ರೋ ಜಲ ವಿದ್ಯುತ್ ಸ್ಥಾವರಗಳನ್ನು ಯೋಜಿಸಬಹುದು. ಇಂಥಲ್ಲಿ ಬೇಕಾಗುವ ಬಲ್ಬ್ ಘಟಕಗಳಿಗೆ ಕ್ಲಿಷ್ಟವಾದ ಆವರ್ತಕ ಕವಚ ಬೇಕಿಲ್ಲ. ನೀರಿನ ಗತಿ ನಿಯಂತ್ರಣಕ್ಕಾಗಿ ದೊಡ್ಡ ವಿದ್ಯುತ್ ಸ್ಥಾವರಗಳಿಗೆ ಬೇಕಾಗುವ ತಿರುಪಿನ ಇಲ್ಲವೆ ಇನ್ನಿತರ ವಕದಾರಿಗಳನ್ನು ಮಾಡಬೇಕಿಲ್ಲ. ಹೆಚ್ಚು ಕಟ್ಟಡ ಕಾಮಗಾರಿಗಳೂ ಬೇಕಿಲ್ಲ. ಇಂಥ ಸ್ಥಾವರಗಳ ಸ್ಥಾಪನೆ ಸುಲಭ. ಅಲ್ಲದೆ ವೆಚ್ಚದಲ್ಲಿ ಸುಮಾರು 25-30 ಪ್ರತಿಶತದ

ವರೆಗೆ ಉಳಿತಾಯ. ಕೊನೆಯದಾಗಿ ಭೂಸ್ವಾಧೀನ, ಬೆಳೆ ಪರಿಹಾರ ಅಥವ ಪುನರ್ವಸತಿಯ ತಲೆನೋವಿಲ್ಲ.

ಕರ್ನಾಟಕ ರಾಜ್ಯದ ಜಲ ವಿದ್ಯುಚ್ಛಕ್ತಿ ಉತ್ಪಾದನಾ ಕ್ಷಮತೆ 5,500 ಮೆಗಾವ್ಯಾಟುಗಳಷ್ಟು. ಇದರಲ್ಲಿ ನಮಗೆ ಈವರೆಗಿನ ಲಭ್ಯತೆ 1800 ಮೆಗಾವ್ಯಾಟುಗಳಷ್ಟು. ಈಗಾಗಲೇ ಆರ್ಥಿಕವಾಗಿ ಲಾಭದಾಯಕವಾದ ಜಲ ವಿದ್ಯುದ್ಯೋಜನೆಗಳನ್ನು ಕೈಗೆತ್ತಿಕೊಂಡು ಮುಗಿಸಲಾಗಿದೆ. ಇವುಗಳಲ್ಲಿ ಮುಖ್ಯವಾದುದೆಂದರೆ ಶರಾವತಿ, ಕಾಳಿ, ತುಂಗಭದ್ರ, ಭದ್ರ, ಶಿವನ ಸಮುದ್ರ, ಶಿಂಷ ಇತ್ಯಾದಿ. ವರಾಹಿ ಯೋಜನೆಯ ಕೆಲಸ ಪ್ರಗತಿಯಲ್ಲಿದೆ. ಬೇಡ್ತಿ ಯೋಜನೆಯನ್ನು ಇನ್ನೇನು ಕೈಗೆತ್ತಿಕೊಳ್ಳಬಹುದು. ಹಿಡಕಲ್, ಘಟಪ್ರಭಾ, ಕಬಿನಿ, ನೇತ್ರಾವತಿ, ಅಘನಾಶಿನಿ, ಕುಮಾರಧಾರ, ಕಾವೇರಿ, ಹಾಲಾಡಿ ಮತ್ತು ಬಲಪೊಳೆ ಅಲ್ಲದೆ ಇನ್ನುಳಿದ ಚಿಕ್ಕ ಪುಟ್ಟ ಯೋಜನೆಗಳನ್ನು ಮುಗಿಸಿದ ನಂತರ ನಮಗೆ ಉಳಿಯುವುದು ಮೈಕ್ರೋ ಜಲ ವಿದ್ಯುತ್ ಯೋಜನೆಗಳು ಮಾತ್ರ. ವಿದ್ಯುಚ್ಛಕ್ತಿಯ ಬೇಡಿಕೆಯು ಕ್ಷಣೇ ಕ್ಷಣೇ ಹೆಚ್ಚುತ್ತಿರುವ ನಮ್ಮ ರಾಜ್ಯದ ಈಗಿನ ಪರಿಸ್ಥಿತಿಯಲ್ಲಿ ಇಂಥ ಯೋಜನೆಗಳೇ ನಮಗೆ ತಾರಕವಾಗುವಲ್ಲಿ ಸಂದೇಹವಿಲ್ಲ. ಈ ದಿಶೆಯಲ್ಲಿ ನಮ್ಮ ರಾಜ್ಯದ ಹೊಸಪೇಟೆಯ ಹತ್ತಿರದ ಶಿವಾಪುರ ನೀರಾವರಿ ಕಾಲುವೆಯಲ್ಲಿ ಮೈಕ್ರೋ ಜಲ ವಿದ್ಯುತ್ ಯೋಜನೆಯ ಪೂರ್ವಭಾವಿ ಪರೀಕ್ಷೆಗಳು ನಡೆದಿದ್ದು ಫಲಿತಾಂಶಗಳು ಆಶಾದಾಯಕವಾಗಿದೆ.

ಮೈಕ್ರೋ ಜಲ ವಿದ್ಯುತ್ ಸ್ಥಾವರಗಳಿಗೆ ಇನ್ನೊಂದು ಅನುಕೂಲ ಸ್ಥಳ ಸಾಗರ ದಡದಲ್ಲಿ. ಇಲ್ಲಿನ ಭರತ ಹಾಗೂ ಇಳಿತಗಳ ಮಟ್ಟಗಳ ಅಂತರ ಸಾಕಷ್ಟಿದ್ದರೆ ಇಂಥ ಸ್ಥಾವರಗಳು ಆರ್ಥಿಕವಾಗಿ ಲಾಭದಾಯಕ. ಫ್ರಾನ್ಸ್ ದೇಶದ ರಾನ್ಸ್ ಎಂಬಲ್ಲಿ ಇಂಥ ಅಂತರ ಸುಮಾರು 20 ಮೀಟರುಗಳಿದ್ದು ಅಲ್ಲಿ 240 ಮೆಗವ್ಯಾಟುಗಳ ಒಂದು ಜಲ ವಿದ್ಯುತ್ ಸ್ಥಾವರ ಕಾರ್ಯ ಮಾಡುತ್ತಲಿದೆ. ಬೇರೆ ಬೇರೆ ದೇಶಗಳಲ್ಲಿ ಇನ್ನೂ ಇಂಥವೇ ವಿದ್ಯುತ್ ಸ್ಥಾವರಗಳುಂಟು. ಆದರೆ ಕರ್ನಾಟಕದ ಸಾಗರ ದಡದಲ್ಲಿ ಈ ಅಂತರ ಬರಿ 3-4 ಮೀಟರುಗಳು ಮಾತ್ರವಿದ್ದು ಇಂಥ ಸ್ಥಾವರಗಳು ಲಾಭದಾಯಕವಾಗಲಿಕ್ಕಿಲ್ಲ. ಆದರೂ ಈ ದಿಶೆಯಲ್ಲಿ ಪರೀಕ್ಷಣಾ ಪ್ರಯೋಗಗಳನ್ನು ಮಾಡಿದರೇನೂ ಅಡ್ಡಿಯಿಲ್ಲವಲ್ಲ.

ಸಮಾನಾರ್ಥ ಸೂಚಿ

ಭೂಗರ್ಭ ಶಾಖ	Geothermal Heat
ಸೌರಕೋಶ	Solar Cell
ವಿದ್ಯುತ್ಪ್ರವಾಹ ಜನಕ	Generator
ಭ್ರಮರ	Rotor
ಜಲಚಕ್ರಯಂತ್ರ	Turbine
ನೀರ್ಗಾಲಿ	Runner (of a turbine)
ಗತಿ ವೃದ್ಧಿಕ	Speed Increaser
ಸ್ವಯಂ ಚಾಲಿತ	Automatic
ಕ್ರಮಪಡಿಸಿದ	Adjusted
ಕವಾಟ ಯಂತ್ರರಚನೆ	Gate Mechanism
ಬೇಡಿಕೆಯ ಕೇಂದ್ರ	Load Centre
ವಿತರಣಾ ಜಾಲ	Distribution net work
ಆವರ್ತಕ ಕವಚ	Spiral Casing
ತಿರುಪಿನ ವಕ್ರದಾರಿ	Draft tube

ಕರ್ನಾಟಕ : ಜನಪದ ಆಕಾಂಕ್ಷೆ

ಸಿಂಪಿ ಲಿಂಗಣ್ಣ ಚಡಚಣ

ಮನುಷ್ಯನ ಪ್ರಕೃತಿಯೆನಿಸುವ ಶರೀರ-ಪ್ರಾಣ-ಮನಗಳಲ್ಲಿ ಕ್ರಮವಾಗಿ ಆಲಸ್ಯ-ಜಡತೆ, ಆಶೆ-ಆಕಾಂಕ್ಷೆ, ತರ್ಕ-ಕಲ್ಪನೆಗಳು ತಲೆದೋರುತ್ತವೆಂದು ಬಲ್ಲವರು ಹೇಳು ತ್ತಾರೆ. ಮನಸ್ಸಿನ ಒಂದು ಭಾಗವಾದ ಬುದ್ಧಿಯು ಹೇಳಿಕೊಟ್ಟಂತೆ ಪ್ರಾಣವ ಆಶೆ-ಆಕಾಂಕ್ಷೆಗಳನ್ನು ತಳೆಯುತ್ತದೆ. ಶಿಕ್ಷಣದಿಂದ ಹರಿತವಾದ ಬುದ್ಧಿಯುಳ್ಳವರ ಆಶೆ-ಆಕಾಂಕ್ಷೆಗಳು ಮುಗಿಲೆತ್ತರವಾಗಿರುತ್ತವೆ. ಅಶಿಕ್ಷಿತರೆನಿಸುವ ಜನಪದಕ್ಕೆ ಬುದ್ಧಿ ಸೀಮಿತವಾಗಿರುವುದರಿಂದ ಅವರ ಆಶೆ-ಆಕಾಂಕ್ಷೆಗಳು ಸಹಜವಾಗಿ ಸೀಮಿತವಾಗಿರುತ್ತವೆ. ಜನ ಪದವು ಬುದ್ಧಿಯ ಥಳಕಿಗೆ ಕಂಗೆಡದೆ, ಹೃದಯದ ಬೆಳಕಿನಲ್ಲಿ ಮುಂಗಾಣುತ್ತದೆ. ಬುದ್ಧಿವಂತರದು ಮಹತ್ವಾಕಾಂಕ್ಷೆಯೆನಿಸಿದರೆ ಜನಪದರದು ಮಹದಾಕಾಂಕ್ಷೆಯೆನಿ ಸುತ್ತದೆ.

ಜನಸಾಮಾನ್ಯರಲ್ಲಿ ಅರ್ಧಭಾಗವೆನಿಸುವ ನಮ್ಮ ಹೆಣ್ಣು ಮಕ್ಕಳ ಬುದ್ಧಿ ಮೊಳ ಕಾಲ ಕೆಳಗೆ ಎಂದು ಹೀಗಳೆಯಲಾಗುತ್ತದೆ. ಶಿಕ್ಷಣದ ಹದಗೊಂಡ ಬುದ್ಧಿ ನೆತ್ತಿಗೇರಿ ರುತ್ತದೆ; ಒಮ್ಮೊಮ್ಮೆ ನೆತ್ತಿಗೂ ಮೇಲೆ ಏರಿರುವುದೂ ಉಂಟು. ಸಾಮಾನ್ಯರ ಬುದ್ಧಿಯು ಸರ್ವಸಾಮಾನ್ಯವಾಗಿ ಮೊಳಕಾಲ ಕೆಳಗುಳಿಯದೆ ಹೃದಯವನ್ನು ಸಮೀ ಪಿಸಿರುತ್ತದೆ. ಆದ್ದರಿಂದ ಸಾಮಾನ್ಯರೆನಿಸುವ ಜನಪದದ ಬುದ್ಧಿಯು ಹೃದಯದ ಆಡಿಯಾಳಾಗಿ, ಕೆಲಸ ನಿರ್ವಹಿಸುತ್ತದೆಂದು ಹೇಳಬಹುದು.

ಬುದ್ಧಿಯ ಆವೇಗವು ಮನುಷ್ಯನನ್ನು ಚಂದ್ರ ಲೋಕಕ್ಕೋ ಮಂಗಳ ಲೋಕಕ್ಕೋ ಹಾರಿಸಿಕೊಂಡು ಹೋಗಬೇಕೆನ್ನುವ ಆಕಾಂಕ್ಷೆ ತಳೆದರೆ, ಹೃದಯದ ಆಯೋಗವು ಚಂದ್ರಲೋಕದ ಬೆಳದಿಂಗಳನ್ನೂ ಮಂಗಳ ಲೋಕದ ಮಾಂಗಲ್ಯವನ್ನೂ ತನ್ನೆಡೆಗೆ ಬರಮಾಡಿಕೊಂಡು ಹಿಗ್ಗಿ ನಲಿಯಬೇಕೆಂಬ ಆಕಾಂಕ್ಷೆ ಪಡುತ್ತದೆ. ಕೂಸು ಅಂಬೆಗಾಲಿಡುತ್ತ ತನ್ನ ತವನೆರಳ-ಕೂಸಿನ ತಲೆಹಿಡಿಯುವ ತವಕದಿಂದ ಮುಂದೆ ಸರಿ ಯುವಷ್ಟರಲ್ಲಿ ತವನೆರಳ ಕೂಸು ಮುಂದಕ್ಕೆ ಹೋಗಿರುತ್ತದೆ. ತವನೆರಳ ಕೂಸಿದ ತಲೆ ಸಿಗದೆ ಹೋಯಿತೆಂದು ಕೂಸು ಅತ್ತು ಅಡರಾಸುತ್ತದೆ. ಅದರ ಅಳುವಿನ ಕಾರಣ ವನ್ನು ತಿಳಕೊಂಡ ಹಿರಿಯರೊಬ್ಬರು ಕೂಸಿನ ಬಳಿಗೆ ಹೋಗಿ ಅದರ ಬಲಗೈಯೆತ್ತಿ ಅದರ ತಲೆಯ ಮೇಲಿಟ್ಟ ಕೂಡಲೆ ತವನೆರಳ ಕೂಸಿನ ತಲೆಯನ್ನು ಹಿಡಿದಂತಾದುದನ್ನು

ಕಂಡು ಕೂಸು ಅಳುನುಂಗಿ ನಕ್ಕಿತಂತೆ. ತನ್ನ ತಲೆಯ ಮೇಲೆ ಕೈಯಿಟ್ಟುಕೊಂಡು, ನೆರಳು ಮುಟ್ಟಿದ ಸಮಾಧಾನದ ರೀತಿ ಜನಪದದ್ದು. ಅದರ ಆಕಾಂಕ್ಷೆ ಸೀಮಿತ ವಾದದ್ದು, ತೋರುಂಭ ಲಾಭ.

ಕನ್ನಡ ಗರತಿಯ ಆಕಾಂಕ್ಷೆ ತೀರ ಸಾಮಾನ್ಯವಾದದ್ದು, ಸಹಜವಾದದ್ದು, ಸಣ್ಣ ಬಾಯಿ ದೊಡ್ಡ ತುತ್ತು ಬಯಸಿದಂತಲ್ಲ-ಆಕೆಯ ಆಕಾಂಕ್ಷೆಯೆಂದರೆ ಒಂದೇ"ಅಭಿಮಾನ ಕಡೆತನಕ ಉಳಿಯಲಿ" ಎಂಬುದು.

ಕರುಣ ಬಂದರೆ ಕಾಯೊ ಮರಣ ಬಂದರೆ ಒಯ್ಯೊ
ಕರುಣಿ ಕಲ್ಯಾಣ ಬಸವಣ್ಣ। ಕಾಸಿಲಿಂಗ।
ಕಡೆತಾನಕಾಯೊ ಅಭಿಮಾನ

ಈ ಆಕಾಂಕ್ಷೆಯೊಂದರಿಂದಲೇ ಆಕೆ ಹಡಬಡಿಸುವುದನ್ನು ಬಿಟ್ಟು, ಇಡಿಯ ಜೀವನವನ್ನು ಶಾಂತಿ-ಸಮಾಧಾನಗಳಿಂದ ಕಳೆಯಬಲ್ಲವಳಾಗುವಳು.

ಬಂಧನಾಳ ಶರಣಯ್ಯ ನಾನಿನ್ನ ಮಗಳಯ್ಯ
ಲೇಸಗಿತ್ತೆಯ್ಯ ಬಡವೆಯ್ಯ। ನನಮ್ಯಾಲ।
ಸಾಸೀವಿ ಕಾಳಷ್ಟು ದಯ ಇರಲಿ॥

ಮಹಾ ಮಹಿಮರ ದಯವು ಸಾಸಿವೆ ಕಾಳಷ್ಟು ದೊರಕೊಂಡರೂ ತನ್ನ ಆಕಾಂಕ್ಷೆ ಕೈಗೂಡಿ ಬರುವದೆಂದು ಆಕೆ ನಂಬಿದ್ದಾಳೆ. ಬಾಳಿನಲ್ಲಿ ಆಕೆ ಮೂರೇ ವಿಷಯಗಳಿಂದ ಆಕಾಂಕ್ಷೆಯನ್ನು ಸಾಧಿಸಬೇಕೆನ್ನುತ್ತಾಳೆ. "ಮುತ್ತೈದೆತನ ಕೊಡು, ಮಕ್ಕಳಕೊಡು, ಮಾರಾಯರ ಮುಂದೆ ಮರಣ ಕೊಡು" ಇದೇ ಆಕೆಯ ಆಕಾಂಕ್ಷೆಯ ಸಾರ ಸರ್ವಸ್ವ. ಅಷ್ಟರಿಂದ ಅವಳು ಬಡತನ, ನೋವು, ಅವಮಾನ, ವಿರೋಧ ಪರಿಸ್ಥಿತಿಗಳನ್ನೆಲ್ಲ ಸಹಿಸಿ ಕೊಳ್ಳಬಲ್ಲಳು. ಹುಟ್ಟಿದ ಮನೆಯಲ್ಲಿ ಮೊಳಗಿ, ಕೊಟ್ಟ ಮನೆಯಲ್ಲಿ ಬೆಳಗುವ ಹೆಣ್ಣು "ಅಂಜೀಕೆ ತೋರಿದರ ಅಂಜುವರ ಮಗಳಲ್ಲ. ಮುಂಜಾನದಾನ ಹುಲಿ ಕರಡಿ ತೋರಿ ದರ ಅಂಜಿ ತಿರುಗುವರ ಸೊಸೆಯಲ್ಲ". ಆದರೂ ಅಣ್ಣ ತಮ್ಮರ ಆಸರ ಬೇಕೆನ್ನು ತ್ತಾಳೆ.

ಹೆಣ್ಣಿನ ಜನ್ಮಕ ಅಣ್ಣ ತಮ್ಮರು ಬೇಕ
ಬೆನ್ನ ಕಟ್ಟವರು ಸಭೆಯೊಳಗ। ಸಾವೀರ।
ಹೊನ್ನ ಕಟ್ಟವರು ಉಡಿಯೊಳಗ॥

ಆತ್ಮಾಭಿಮಾನವನ್ನು ಕಾಪಾಡಿಕೊಳ್ಳುವ ಸಾಹಸದಲ್ಲಿ ಆಕೆ ಹುಟ್ಟಾ ನಿಪುಣಳು. ಆಕೆಯ ವದೆ ಹೂವಿಗಿಂತ ಮೃದು; ವಜ್ರಕ್ಕಿಂತ ಕಠಿಣವಾದದ್ದು. ಆಕೆಯ ವ್ಯಕ್ತಿತ್ವ ಎಂಥದೆಂಬುದನ್ನು ಆಕೆಯ ಬಾಯಿಂದಲೇ ಕೇಳಬೇಕು.

ಹೆಚ್ಚಿಕೊಂಡವಗ ಚೊಚ್ಚಿಲ ಮಗಳಾದೆ
ಬಿಟ್ಟಾಡಿಕೊಳುವ ವೈರಿಯು। ಮನಿಮುಂದ।
ಬಿಚ್ಚುಗತ್ತ್ಯಾಗಿ ಹೊಳೆದೆನ॥

ಬಾಳಿನಲ್ಲಿ ವಿರೋಧ, ಭಿನ್ನಮತ ಅನಿವಾರ್ಯ, ಅಂತೆಯೇ ಬಾಳು ಜೀವನ ಕಲಹ, ಸಂಸಾರ ಸಮರ ಅನಿಸಿದೆ. ಕಲಹ ಕೋಲಾಹಲವನ್ನು ಎದುರಿಸಲು ಕೆಚ್ಚು ಬೇಕು, ಆ ಕೆಚ್ಚಿಗೆ ದೈವೀ ಮೆಚ್ಚು ಬೇಕು. ಜೀವನವು ದಟ್ಟ ಕಟ್ಟಾರಣ್ಯವಾಗಿ ಪರಿಣಮಿಸಿದರೂ, ಸೊಲುವೆನೆಂಬ ಭಾಷೆ ನಿಯತಿಯಿಂದ ಕೇಳಿಬರುತ್ತಿದ್ದರೂ, ಗೆಲುವೇನೆಂಬ ಭಾಷೆಯನ್ನೇ ಉದ್ಗದಿಸುವ ಗರತಿಗೆ ಹೆಣ್ಣೆಂದು ಯಾರು ಕರೆದಾರು? ಶ್ರೀಕೃಷ್ಣನನ್ನು ಒಲಿಸಿಕೊಳ್ಳದಿದ್ದರೆ ನಾನು ಸತ್ರಾಜಿತ ರಾಜನ ಮಗಳೇ ಅಲ್ಲ-ಎಂದು ಶಪಥ ತೊಟ್ಟ ಸತ್ಯಭಾಮೆಯಂತೆ ಗರತಿಯೂ ಹೂಣಿಕೆ ತೊಡುತ್ತಾಳೆ. ಏನೆಂದು?

ಆರ್ಯಾಣದಹವ್ಯಾಗ ಮಾರಾಣಿ ತೊಡಲೆವ್ವ
ಸೂರ್ಯನಿನ್ನಾಣಿ ಶಿವನಾಣಿ। ಕೊಟ್ಟೇನು।
ಅರ್ಯಾಣಗೆದ್ದು ಬರುವೆನು॥

ಗಂಡನ ಅರ್ಧಾಂಗಿಯೆನಿಸಿದ ಹೆಂಡತಿಯ ಗಂಡುಗೆಜ್ಜೇ ಇಷ್ಟೊಂದು ಸಬಲವಾಗಿರುವಾಗ, ಗಂಡನ ಗಂಡುಗಾಡಿ ಇನ್ನಿಷ್ಟು ಪ್ರಬಲವಾಗಿರುವುದರಲ್ಲಿ ಸಂದೇಹವೇ ಇಲ್ಲ. ಭೂಮಿತಾಯಿಯ ತೊಡೆಯ ಮೇಲಾಡುವ ಮನುಷ್ಯನು, ಆಕಾಶ ತಂದೆಯ ಮುಖವನ್ನೇ ನೋಡುವನು. ಏತಕ್ಕಾಗಿ ? ತಂದೆ ಮಳೆಯ ರೂಪದಿಂದ ಕೃಪೆ ಸುರಿಯಲೆಂದು. ಆಕಾಶದಲ್ಲಿ ಮೋಡವೊಂದು ತೇಲಿಬಂದರೂ ಅದರಲ್ಲಿ ಭಾಗ್ಯದ ಲಕ್ಷ್ಮಿಯನ್ನು ಕಾಣುವನು. ಅವನ ಆಕಾಂಕ್ಷೆಯೆಂದರೆ ಮಳೆ ಇಳೆಗಿಳಿಯಲೆಂದು.

ಮಾಡೀನ ತೆರಿಯೊಳಗ ಮಾಲಕುಮಿ ಬರತಾಳ
ಭಾಗ್ಯದ ಲಕುಮಿ ಇದಿರಾಗಿ। ಬರುವಾಗ
ಮಾಲಕುಮಿ ಪೂಜಿ ಕಣದಾಗ॥

"ಕಾಲೂರಿತು ಮಳೆ, ಕತ್ತೆತ್ತಿತು ಬೆಳೆ, ದಯೆಗರೆಯಿತು ನೋಡಾ" ಮಳೆಯೊಂದು ದೈವೀ ಕೃಪೆ, ಕಾಲ ಕಾಲಕ್ಕೆ ಮಳೆ ಸುರಿಯಲೆನ್ನುವ ಆಕಾಂಕ್ಷೆ ಅವೆರಡೂ ಸಂಗಳಿಸಿದರೆ ಸಮಸ್ತ ಜೀವನವೇ ಪ್ರಭಾವಿತವಾಗುತ್ತದೆ. ಆ ತಾಯಿ ತಂದೆಗಳ ನಲುಮೆಯಲ್ಲಿಯೆ ಸಾಮಾನ್ಯನ ಬದುಕು ಉತ್ತಮಗೊಳ್ಳುವದು. ಸಾಮಾನ್ಯನು ಕೊಡುವ ದೇವರಿಗೇ ಬೇಡುವನಲ್ಲದೆ, ಬೇಡುವ ಭಿಕಾರಿಗೆ ಬೇಡುವದಿಲ್ಲ. ಬೇಡುವವನು ಅದೆಂಥ ಶ್ರೀಮಂತನಾಗಿದ್ದರೂ ಅವನು ಭಿಕಾರಿಯೇ. ಅಂಥ ಭಿಕಾರಿಗೆ ಕೇಳಿ ಪ್ರಯೋಜನವೇನು ? ಕೊಡಬಲ್ಲ ಒಬ್ಬನೇ ಒಬ್ಬನೆಂದರೆ, ಮಹಾ ಸಂಪನ್ನನಾದ

ದೇವನೇ. "ಸಿರಿಗೇನು ಕಡಿಮೆ, ಸಿಂಗರಕೇನು ಕಡಿಮೆ, ಸೌಂದರಕೇನು ಕಡಿಮೆ, ನೀನಿರಲು" ಅನ್ನುತ್ತದೆ ಜನಪದ.

ಮುಂದೇನು ಕೊಟ್ಟೀತ ಮನವೇನು ದಣದೀತ
ಮುಂಜಾನದಾನ ಗಿರಿಮಲ್ಲ। ಕೊಟ್ಟರ।
ಮನಿತುಂಬಿ ನಮ್ಮ ಮನತುಂಬಿ||

ಮನವು ಮಾಧವನೊಳು ಮರೆಯಾಗುವ ತನಕ ಅನುಗಾಲವೂ ಚಿಂತೆ ತಪ್ಪಿದ್ದಲ್ಲ. "ಪುರಂದರ ವಿಠಲನ ಬಿಡದೆ ಸ್ಮರಿಸಿದರೆ ಚಿಂತೆ ನಿಶ್ಚಿಂತೆ"ಯೆಂಬ ಮಾತು ನಮ್ಮ ಜನಪದಕ್ಕೆ ಸಹಜ ಮನವರಿಕೆಯಾಗಿದೆ. ನಮ್ಮ ಜನಪದವು ದಾಸರ ವೈರಾಗ್ಯವನ್ನೂ, ಶರಣರ ಭಕ್ತಿಯನ್ನೂ ಅಳವಡಿಸಿಕೊಂಡಿದೆ, ಅರ್ಥ ಮಾಡಿಕೊಂಡಿದೆ.

ಸಂಸಾರವು ದುಃಖಸಾಗರವೆಂದೂ, ಜೀವನವು ಅನಿತ್ಯವೆಂದೂ, ನಮ್ಮ ಜನಪದಕ್ಕೆ ತಿಳಿಯದೆ ಇಲ್ಲ. "ಇದು ಮೂರು ದಿನದ ಸಂತೆ"ಯೆಂದೂ ಹೇಳಬಲ್ಲರು. ಹಾಗೆಂದ ಮಾತ್ರಕ್ಕೆ ಅದನ್ನು ಅಲ್ಲಗಳೆಯುವದಿಲ್ಲ, ಒಲ್ಲಗಳೆಯುವದಿಲ್ಲ. ಸಂಸಾರವು ನೀರ ಮೇಲಿನ ಗುರುಳೆ, ಮಾಯದ ಜಾಲ ಅಹುದು. ಅಷ್ಟು ಹೇಳಿದರೆ ಅದು ತೊಲಗುವದೇ ? ಹಾಗಾದರೆ ಅದು ಏತರಿಂದ ತೊಲಗುವದು ?

ಪಿತ್ತ ವಿಕಾರಕ್ಕೆ ವೈದ್ಯರು ಶುಂಠಿಸಕ್ಕರೆ ತಿನ್ನ ಹೇಳುವರು, ಇಲ್ಲವೆ ಔಡಲೆಣ್ಣೆ ಕುಡಿಯ ಹೇಳುವರು. ಶುಂಠಿಸಕ್ಕರೆಯಿಂದ ಪಿತ್ತ ಒಡಲಲ್ಲಿಯೇ ಸುಟ್ಟು ಹೋಗುವದು. ಔಡಲೆಣ್ಣೆಯಿಂದ ಪಿತ್ತವು ಅಧೋದ್ವಾರದಿಂದ ಹೊರ ಬಿದ್ದು ಬಿಡುವದು. ಜನಪದಕ್ಕೆ ಶುಂಠಿಸಕ್ಕರೆ ತಿಂದು ಪಿತ್ತ ಸುಟ್ಟುಕೊಳ್ಳುವ ಉಪಾಯವೇ ಹಾಳತವಾಗಿದೆ. ಔಡಲೆಣ್ಣೆ ಕುಡಿಯುವುದು ಸನ್ಯಾಸಿಯ ದಾರಿಯಿದ್ದಂತೆ, ತುಸು ಎಡಚಿನದು.

ಸಂಸಾರವು ಮೂರು ದಿನದ ಸಂತೆ, ನೀರ ಮೇಲಿನ ಗುರುಳೆ ಆಗಿರುವುದರಿಂದಲೇ, ಅದರಲ್ಲಿ ಸಂತೋಷದಿಂದಲೇ ಭಾಗವಹಿಸಿ, ಸಂತೆ ಮುಗಿಸುವುದು ಒಳ್ಳೆಯದೆಂದು ಬಗೆದಿದೆ ಜನಪದ. ತೇಲಾಡುವ ನೀರ ಗುರುಳೆಯನ್ನು ಕಂಡು ಹರ್ಷಚಿತ್ತರಾಗುವುದು ಉತ್ತಮವಲ್ಲವೆ ? ಶಾಲೆಯಲ್ಲಿ ಗುರುಗಳು ಒಬ್ಬ ವಿದ್ಯಾರ್ಥಿಗೆ-"ಮಾವಿನ ಮರದಲ್ಲಿ ಯಾವಕಾಯಿ ಅಗುತ್ತವೆ"ಯೆಂದು ಕೇಳಿದ್ದಕ್ಕೆ ವಿದ್ಯಾರ್ಥಿಯು-"ಕಾರ್ಚೀಕಾಯಿ" ಎಂದು ಹೇಳಲು, ಗುರುಗಳಿಗೆ ತಿಳಿದುಬಿಟ್ಟಿತು—ಈತನ ಲಕ್ಷ್ಯ ಪಾಠದಲ್ಲಿಲ್ಲ-ಎಂದು ಅವನ ಮನಸ್ಸೆಲ್ಲ ಅಂದು ಮನೆಯಲ್ಲಿ ಮೂಡುತ್ತಿರುವ ಕಾರ್ಚೀಕಾಯಿಯಲ್ಲಿಯೇ ಇತ್ತು. ಅಂಥ ಸಂದರ್ಭದಲ್ಲಿ ಶಾಲೆ ತಪ್ಪಿಸುವುದೇ ಒಳ್ಳೆಯದಲ್ಲವೆ ? ಪಾಠ ತಪ್ಪಿಸುವುದೇ ಜಾಣತನವೆನಿಸಿತು,

ಮೂರು ದಿನದಸಂತಿ ಮುನ್ನೋಡಿ ಮಾಡಿಕೋ
ಗರದಿ ನಡೆವುದು ಮಧ್ಯಾಹ್ನ ಮೂಲ।
ಸಂಜಿ ಆದಂಗ ಒಂದುಗುಂಜಿ ಉಳಿಯಾಕಿಲ್ಲ
ಖಾಲೆ ಮಾರಿ ಆದಾವೊ ಚೀಲಾ॥

ಸಂಸಾರ ಸಂತೆಯನ್ನು ಸಂಜೆಯಾಗುವಷ್ಟರಲ್ಲಿ ಉತ್ಸಾಹದಿಂದ ಮಾಡಿಕೊಳ್ಳ ಬೇಕೆಂದು ಈ ಲಾವಣಿ ಹೇಳುತ್ತದೆ. ಜನಪದದ ಪ್ರತಿನಿಧಿಯಂತಿರುವ ಲಾವಣಿಕಾರನು ಸ್ಪಷ್ಟವಾಗಿ ಹೇಳುತ್ತಾನೆ—

ಈ ಹರ್ಯಾಹ್ವಾದ ಮ್ಯಾಲಸರದ। ಅಲ್ಲಿಂದ ಬರದ
ಈಗಿನ ಧಮಕ॥

ರಾಯರ ಕುದುರೆಯಂತೆ ವಿಲಾಸ ಭಾವವನ್ನು ತಡೆದಿಟ್ಟು, ಪುನರ್ಜನ್ಮಕ್ಕಾಗಿ ಕಾದಿಡುವುದು ಸರಿಯಲ್ಲ. "ಇಂದು ರೋಖ, ನಾಳೆ ಉದ್ದರಿ" ಎಂನು ಪಟಬರೆಸಿ ತೂಗು ಹಾಕಿದ ವ್ಯಾಪಾರಿಯಂತೆ, ಜೀವನ ವ್ಯವಹಾರ ಸಾಗಿಸುವ ಆಕಾಂಕ್ಷೆ ಜನ ಪದದ್ದು. ಒಬ್ಬ ಕಾದಲನು ತನ್ನ ಪ್ರೇಯಸ್ಸಿ ಹೇಳುತ್ತಾನೆ—

ಈ ಪ್ರಾಯದಾಗ ಕುಡುಕ್ಕೈಯು ಒಲ್ಲ ಅನಬ್ಯಾಡ। ಅನಬ್ಯಾಡ।
ನಡಿ ರಂಗಮೂಲದಾಗ ಬಂದು ಕೂಡ ನನ್ನ ಜೋಡ। ನನ್ನ ಜೋಡ॥
ಹೀಂಗ ಪೋರೀಗಿ ಹೇಳ್ಯಾನ ತಳಸಿ। ಒಳಿತಾಗಿ ಬೆಳಸಿ।
ತಾಯಿತಂದಿಗಳಸಿ ಇಟ್ಟಾರ ಮಸ್ತ।
ಮತ್ತ ದೌಲತ। ನಾವುಕುಂತ। ಉಣ್ಣೊನಂತ ಭಂಗಾರ ತುತ್ತ॥

ಅವರಿಂದಾದ ಪ್ರಯೋಜನವೇನೆಂದರೆ—

ಗೆಣೆನಗಲಾಗ ಹಾಲತುಪ್ಪ ಹಣಸಿ। ಮುಂದ ತುತ್ತ ಉಣಸಿ।
ಮ್ಯಾಲ ಎಣಸೆಣಸಿ ಕೊಟ್ಟಾಳ ಎಲಿ ಅಡಕಿ॥

ಇಂಥ ಘಟನೆ ಸರ್ವ ಸಾಧ್ಯವೂ ಅಲ್ಲ, ಸರ್ವ ಸಾಮಾನ್ಯವೂ ಅಲ್ಲ. ಹಸಿವೆ, ಜಡ್ಡು, ತಿಳಿಗೇಡಿತನ ಮುಚ್ಚಿಟ್ಟುಕೊಳ್ಳಬಾರದಂತೆ. ಕಾಮವನ್ನೂ ಅದರಲ್ಲಿ ಸಮಾವೇಶಗೊಳಿಸುವುದು ಕಲ್ಯಾಣಕರವೇ. ಕಾಮವೆಂದರೆ ಪ್ರೇಮದ ಕಚ್ಚಾವಸ್ತು ಅದನ್ನು ಉದಾತ್ತೀಕರಣದಿಂದ ಪರಿಶುದ್ಧಗೊಳಿಸುವುದು ಜನಪದದ ಆಕಾಂಕ್ಷೆಯಾಗಿದೆ. ಉಪಾಯಗಳೆಲ್ಲ ಒಮ್ಮೆಲೆ ಯಶಸ್ವಿಯಾದರೆ, ಮನುಷ್ಯನಿಗೆ ನೂರು ವರ್ಷಗಳ ಆಯುಷ್ಯವೇಕೆ? ಎಡವಿದ ಕಾಲನ್ನು ಎತ್ತಿಡುತ್ತ ಮಾಯಿಸಿಕೊಳ್ಳುವ ಆಕಾಂಕ್ಷೆ ಕರ್ನಾಟಕ ಜನಪದದಲ್ಲಿ ಕಂಡುಬರುತ್ತದೆ.

(ಕಾಣದ ಕೈಲಾಸ ಸಿಗಲೆಂದು ಹಂಬಲಿಸುವದಿಲ್ಲ, ತಾನಿದ್ದಲ್ಲಿಯೇ ಕೈಲಾಸ ಕಂಗೊಳಿಸುವಂತೆ ಮಾಡುವ ಉಪಾಯ ಆಕೆಗೆ ಗೊತ್ತಿದೆ. ಏನಂದರೆ—"ತನ್ನಂಗ ನೋಡಿದರೆ ಭಿನ್ನಿಲ್ಲ, ಭೇದಿಲ್ಲ. ತನ್ನಂಗ ತನ್ನ ಮಗಳ್ನಂಗ ನೋಡಿದರ ಕಣ್ಣು ಮುಂದಾದ ಕೈಲಾಸ". ಜನಪದಕ್ಕೆ ಅರಿಕೆಯಿದೆ—ಏನಂದರೆ—"ಕಲಬುರ್ಗಿ, ಕಲ್ಯಾಣ ಹುಲಜಂತಿ, ಉಮರ್ಜಿ, ಸೊಲ್ಲಾಪುರ ಮೊದಲಾದವು ದೇವಸ್ಥಾನಗಳ ಸಲುವಾಗಿ ಹೆಸರಾಗಿವೆ. ಆದರೆ ದೇವಸ್ಥಾನಗಳಲ್ಲಿ ಮೂರ್ತಗೊಂಡವರು ದೇವರುಗಳಲ್ಲ; ಶರಣರು! "ಮಾನೂಮನುಷ್ಯರು ದುಡಕೊಂಡು ದುಡಕೊಂಡು ಆಗ್ಯಾರ ದೊಡ್ಡ ದೊಡ್ಡ ಶರಣರು. ಆಕಾಂಕ್ಷೆ ಅಭೀಪ್ಸೆಯಾದರೆ, ಮರೆತ ಮಾನವನು ಅರಿತ ಶರಣನಾಗುತ್ತಾನೆ. ಆ ಶರಣನೇ ಮುಂದಿನವರಿಗೆ ದೇವರೆನಿಸುತ್ತಾನೆ).

ಭಕ್ತಿ ಸಾಹಿತ್ಯಕ್ಕೆ ಹರಪನಹಳ್ಳಿ ಭೀಮವ್ವನವರ ಕೊಡುಗೆ

ಸೌ. ಸರಿತಾ ಕುಸುಮಾಕರ ದೇಸಾಯಿ

ಶ್ರಾವಣ ಮಾಸದ ಶುಕ್ರವಾರ ಶನಿವಾರಗಳಲ್ಲಿ ಉತ್ತರ ಕರ್ನಾಟಕದ ಕೆಲ ಭಾಗಗಳಲ್ಲಿ ವಿಶೇಷವಾಗಿ ಬಳ್ಳಾರಿ ಜಿಲ್ಲೆಯ ಸಂಪ್ರದಾಯಸ್ಥರ ಮನೆಗಳಲ್ಲಿ ಸಾಯಂಕಾಲ ಶುಕ್ರವಾರದ ಗೌರಿ, ಶನಿವಾರದ ಗೌರಿಯ ಹಾಡುಗಳು ಕೇಳಿಬರುತ್ತವೆ. ಸಂಪೂರ್ಣ ಭಕ್ತಿಭಾವದಿಂದ ಪರಿಪೂರ್ಣ ಕಾವ್ಯ ಪ್ರತಿಭೆಯಿಂದ ತುಂಬಿ ತುಳುಕುವ ಈ ಹಾಡುಗಳ ರಚಯಿತ್ರಿ "ಹಲಗೆ-ಬಳಪ ಹಿಡಿಯದಗ್ಗಳಿಕೆಯ" ಕವಯಿತ್ರಿ ಬೊಕ್ಕಸದ ಭೀಮವ್ವನವರು. ಇವರು ನಿರಕ್ಷರ ಕುಕ್ಷಿಗಳಗಿದ್ದರೂ ತಮ್ಮ ಅಪೂರ್ವ ಕಾವ್ಯ ಪ್ರೌಢಿಮೆಯನ್ನು ಕೃತಿಗಳ ಮೂಲಕ ವ್ಯಕ್ತಗೊಳಿಸಿ ಎಲೆಗಳಡಿಯ ಫಲದಂತೆ ಕಣ್ಮರೆಯಾಗಿದ್ದಾರೆ.

ಭೀಮವ್ವನವರು ಶಾಲೆಗೆ ಹೋಗಿ ವಿದ್ಯಾಭ್ಯಾಸ ಕಲಿತಿರಲಿಕ್ಕಿಲ್ಲ. ಆದರೆ ಅನೇಕ ಅಮೂಲ್ಯ ಕೃತಿಗಳನ್ನು ರಚಿಸಲು ಪ್ರೇರಣೆ-ಪ್ರತಿಭೆಯನ್ನು ಕರಗತಗೊಳಿಸಿಕೊಂಡ ಅವರ ದೈವದತ್ತ ವಿದ್ಯೆ ಶ್ಲಾಘನೀಯವೇ.

ವೈಷ್ಣವ ಪಂಥದ ಕವಿಯಿತ್ರಿಯರಲ್ಲಿ ಅದರಲ್ಲೂ ಕೀರ್ತನಾಗಾರ್ತಿಯರಲ್ಲಿ ಹೆಸರಿಸಲೇ ಬೇಕಾದವರು ಹರಪನಹಳ್ಳಿ ಭೀಮವ್ವ "ಭೀಮೇಶ ಕೃಷ್ಣ" ಎಂಬ ಅಂಕಿತವಿಟ್ಟುಕೊಂಡು ಕೃತಿ ರಚನೆ ಮಾಡುವ ಇವರನ್ನು ಸಾಮಾನ್ಯವಾಗಿ ಹರಿದಾಸಪಂಥದಲ್ಲಿ ಗುರುತಿಸುವುದು ವಾಡಿಕೆ.

ಕವಯಿತ್ರಿ ಭೀಮವ್ವನವರು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ "ನಾರಾಯಣ ದೇವರ ಕೆರೆ" ಎಂಬ ಗ್ರಾಮದಲ್ಲಿ 1822ರ ಸ್ವಭಾನು ಸಂವತ್ಸರ ಜೇಷ್ಟ ಬಹುಳ 13ರಂದು ಜನ್ಮತಾಳಿದರು. ಮುಂದೆ ಹರಪನಹಳ್ಳಿಯ ಬೊಕ್ಕಸದ ಮನೆತನದವರೊಡನೆ ವಿವಾಹವಾಗಿ "ಹರಪನಹಳ್ಳಿ ಭೀಮವ್ವ" ಎಂದೇ ಹೆಸರು ಪಡೆದರು. ಇವರ ಮನೆತನದವರೂ ಬಂಧುಗಳೂ ಮೊಮ್ಮಕ್ಕಳು, ಮರಿಮೊಮ್ಮಕ್ಕಳೂ ಈಗಲೂ ಅಲ್ಲಲ್ಲಿ ಇದ್ದಾರೆ. ಅವರಲ್ಲಿ ಕವಯಿತ್ರಿಯವರ ಸಮಗ್ರ, ಕೃತಿಗಳ ಹಸ್ತಪ್ರತಿಗಳೂ, ಜೀವನ ಚರಿತ್ರೆಯೂ ವಂಶಾವಳಿ ವಿವರಗಳೂ ಇವೆ. ಭೀಮವ್ವನವರ ಹಾಡುಗಳನ್ನು ಕೇವಲ ಕೆಲವರೇ ಮಾತ್ರ ಹಾಡಬಲ್ಲವರಾಗಿದ್ದಾರೆ. ಎಲ್ಲ ಕೃತಿಗಳ ಸಂಕಲನ ಪ್ರಕಟವಾಗಿಲ್ಲವಾದ್ದರಿಂದ ಹಾಡುಗಳು ಬಾಯಿಯಿಂದ ಬಾಯಿಗೆ ಪ್ರಚಾರವಾಗಿವೆ. ದೀಪಾ

ವಳಿಯ ದಿನಗಳಲ್ಲಿ "ಬಸವನಾಟ" ಆಡುವ ಪರಿಪಾಠವಿದ್ದು ಒಂದು ಓಣಿಯ ಬಾಲಿಕೆಯರು ಮತ್ತೊಂದು ಓಣಿಯ ಬಾಲಿಕೆಯರಿಗೆ "ಮುಯ್ಯ ಒಯ್ಯುವ" ಪದ್ಧತಿ ಇದೆ. ಆಗ ಭೀಮವ್ವನವರ ಹಾಡುಗಳ ಸ್ಪರ್ಧೆ ಜರುಗುತ್ತದೆ. ಈ ಪದ್ಧತಿ ಇಂದಿಗೂ ಉತ್ಸಾಹದಿಂದ ಜರುಗುತ್ತದೆ. ಪ್ರಾಸಬದ್ಧವಾಗಿ, ಲಯಬದ್ಧವಾಗಿ, ಕರ್ಣಾನಂದ ಭರಿತವಾಗಿ ವಿದ್ವತ್ತಿನಿಂದಕೂಡಿದ ಮುಖ್ಯವಾಗಿ ಭಕ್ತಿರಸದಿಂದ ಓತಪ್ರೋತವಾಗಿರುವ ಈ ಹಾಡುಗಳನ್ನು ಕೇಳಿ ನಲಿಯುವಾಗ ಕೃತಿಗಾರ್ತಿ ಭೀಮವ್ವನವರ ಅಗಾಧ ಸಾಧನೆ ಬಗ್ಗೆ ಅಚ್ಚರಿ ಎನಿಸದಿರದು.

ಭೀಮವ್ವನವರು ಹುಟ್ಟಿದಾಗ ಅವರಿಗೆ ಮೈ ತುಂಬಾ ಚಕ್ರಗಳು ಕೆಲವು ದಿನಗಳ ವರೆಗೆ ಕಾಣುತ್ತಿದ್ದವಂತೆ. ಎರಡು ವರ್ಷದ ಮಗುವಾಗಿದ್ದಾಗ ತೊಟ್ಟಿಲ ಸರಪಳಿಯಿಂದ ಇಳಿದು ಬಂದ ನಾಗರ ಹಾವೊಂದು ಇವರ ತಲೆಯ ಮೇಲೆ ಹೆಡೆ ಎತ್ತಿ ಆಟವಾಡಿತೆಂದು ಪ್ರತೀತಿ. ಭೀಮವ್ವನವರ ಮಾತಾಮಹ ಜೋಯಿಸ ವೆಂಕಪ್ಪಾಚಾರ್ಯರು ಸದಾ ಭಗವನ್ನಾಮ ಸ್ಮರಣೆಯಲ್ಲಿ ನಿರತರಾಗುತ್ತಿದ್ದರಿಂದಲೇ ಭಗವಂತನಲ್ಲಿ ಅಚಲ ಭಕ್ತಿಭಾವ ಬಾಲ್ಯದಿಂದಲೇ ಭೀಮವ್ವನವರಲ್ಲಿ ಬೇರೂರಿತು.

ಭೀಮವ್ವನವರು ಹಾಡುಕಟ್ಟಿ ತಾವು ರಾಗ, ಧಾಟಿ, ಧ್ವನಿ ಹೇಳಿ ಬೇರೊಬ್ಬರಿಗೂ ಕಲಿಸುವ ಮಹತ್ಕಾರ್ಯಕ್ಕಿಂತ ಮೊದಲು ಅವರಿಗೆ ಈ ಕಲೆ ಕರಗತವಾದ ಪ್ರಸಂಗ ತುಂಬ ರೋಚಕವಿದೆ. ಒಮ್ಮೆ ಅವರು ತಮ್ಮ ಕನಸಿನಲ್ಲಿ ಅರಣ್ಯದಲ್ಲಿ ಒಂದು ಗಿಡದ ಕೆಳಗೆ ತಾವು ಮಲಗಿದ್ದರಂತೆ ಅಲ್ಲಿಗೆ ಒಬ್ಬ ಬ್ರಾಹ್ಮಣ ಕೈಯಲ್ಲಿ ತಂಬೂರಿ ಹಿಡಿದು, ಒಂದು ಕೃಷ್ಣಸರ್ಪಕ್ಕೆ ಆದೇಶ ನೀಡಿದನಂತೆ—"ಇವಳ ನಾಲಿಗೆಯ ಮೇಲೆ ಮೂರು ಅಕ್ಷರ ಬರೆ" ಎಂದು. ಆಗ ಆ ಸರ್ಪ ತನ್ನ ನಾಲಿಗೆಯಿಂದ ಇವರ ನಾಲಿಗೆಯ ಮೇಲೆ ಬರೆಯಿತು. ಈ ಕನಸು ಕಂಡ ನಂತರವೇ ಭೀಮವ್ವನವರಿಗೆ ಹಾಡುಗಳನ್ನು ರಚಿಸಲು ಬರತೊಡಗಿತು. ಹಾಡುಗಳ ನುಡಿ ಚರಣ ಹೊಳೆದಾಕ್ಷಣ ಅವರು ಯಾರಾದರೂ ಹುಡುಗರನ್ನು ಅಥವಾ ಓದುಬಲ್ಲವರನ್ನು ಕರೆದು ಅವರಿಂದ ಹಾಡುಗಳನ್ನು ಬರೆಯಿಸುತ್ತಿದ್ದರು. ಹಾಡುಗಳನ್ನು ರಚಿಸುವಾಗ ಅವರಿಗೆ ದೈವೀ ಕೃಪೆಯಿಂದಲೇ ಮುದ್ರಿಕೆ ಲಭಿಸಿತು. ಕನಸಿನಲ್ಲಿ ಶ್ರೀ ನಾರದರು ಬಂದು "ಯಾತಕವನಿಯೊಳ ಜನಿಸಿದೆ ನಾನು" ಎಂಬ ಹಾಡು ಹೇಳಿ ಕೊನೆಯಲ್ಲಿ ಭೀಮೇಶಕೃಷ್ಣ" ಎಂಬ ಮುದ್ರಿಕೆಯಿಂದ ಮುಗಿಸಿದಾಗ ಭೀಮವ್ವನವರು ಅದೇ ಅಂಕಿತದಿಂದ ಹಾಡುಗಳನ್ನು ರಚಿಸತೊಡಗಿದರು. ಭೀಮವ್ವನವರ ಅತ್ತೆಮನೆ ಹೆಸರು ಕೃಷ್ಣಾಬಾಯಿ.

ಸದಾ ದೇವರ ಸ್ಮರಣೆ ಮಾಡುತ್ತ ಪ್ರತಿನಿತ್ಯ ಒಂದು ಹೊಸ ದೇವರನಾಮವನ್ನು ಮಾಡಿ ಹಾಡಿ ನಲಿಯುತ್ತಿದ್ದರೆಂದ ಮೇಲೆ ಇವರ ಕೃತಿಗಳು ಅನೇಕಾನೇಕವಾಗಿರಬೇಕು. ಅವುಗಳಲ್ಲಿ ದೊರಕುವುದು 154 ಕೃತಿಗಳು ಮಾತ್ರ.

ಭೀಮವ್ವನವರ ಕೃತಿಗಳಲ್ಲಿ ಕಥನ ಕಾವ್ಯಗಳೇ ಹೆಚ್ಚಾಗಿವೆ. ಭಾರತ, ರಾಮಾಯಣ ಭಾಗವತದಿಂದ ಘಟನೆಗಳನ್ನು ಕಾವ್ಯವಸ್ತುವನ್ನಾಗಿ ಆಯ್ದುಕೊಂಡು ಕಲ್ಪನೆಯ ಮೆರಗು ಕೊಟ್ಟು ಬರೆದ ಕಾವ್ಯಗಳೇ ಇವು. ದ್ವಿಪದಿಯ ಛಂದಸ್ಸು, ದ್ವಿತೀಯಾಕ್ಷರ ಪ್ರಾಸ, ಸರಳ ಶೈಲಿ, ಭಕ್ತಿಯ ಆವೇಗ ಇವೇ ಅವರ ಹಾಡುಗಳ ವೈಶಿಷ್ಟ್ಯವೆಂದು ಡಾ. ಸರೋಜಿನಿಮಹಿಷಿಯವರ ಅಭಿಪ್ರಾಯ ಒಪ್ಪತಕ್ಕಂತಹುದು. ವೇದ ಉಪನಿಷತ್ತುಗಳನ್ನು ಓದಿ ಜ್ಞಾನ ಪಡೆಯಲು ಅಸಮರ್ಥರಾದ ಸ್ತ್ರೀಯರಿಗೆ ಈ ಹಾಡುಗಳನ್ನು ಕಲಿಯಲು, ಹೇಳಲು ತಿಳಿದುಕೊಳ್ಳಲು ಸುಲಭವಾಗುವಂತೆ ಭೀಮವ್ವನವರು ಕೃತಿಗಳನ್ನು ರಚಿಸಿದ್ದಾರೆ. ವೈಷ್ಣವ ಭಕ್ತಿ ಪಂಥದ ಸಾಹಿತ್ಯ ಇವರ ಕೃತಿಗಳಿಂದ ವಿಪುಲವಾಗಿದೆ. ಇಂದಿಗೂ ಮನೆ ಮನೆಗಳಲ್ಲಿ ಇವರ ಹಾಡುಗಳ ಪ್ರಚಾರವಿರುವುದೇ ಈ ಕೃತಿಗಳ ಲೋಕಪ್ರಿಯತೆಗೆ ಸಾಕ್ಷಿ. "ಕೃಷ್ಣದಾನವ್ರತ" ನಳ ಚರಿತ್ರೆ, ರತಿಕಲ್ಯಾಣ, ಶಕುಂತಲಾ ಚರಿತ್ರೆ, ಮುಯ್ಯದ ಹಾಡು, ಸಂಪತ್ ಶುಕ್ರವಾರದ ಹಾಡು, ಶನಿವಾರದ ಹಾಡು, ಜಲಕ್ರೀಡಾ (ಸೀರೆ ಹಾಡು) ಸುಧಾಮನ ಹಾಡು, ವೆಂಕಟೇಶ್ವರ ಮಹಾತ್ಮೆ ಮುಂತಾದ ಅನೇಕ ಕೃತಿಗಳು ವೈಷ್ಣವಭಕ್ತಿ ಕಣಜ ತುಂಬಿಬಿಟ್ಟಿವೆ. ಅನೇಕ ಧ್ವನಿಗಳು, ವಚನ ಸಾಹಿತ್ಯದಿಂದೊಡಗೂಡಿ ನವರಸಾಲಂಕಾರ ಭರಿತವಾಗಿ ಅಂತಃಕರಣದ ಒಳಹೊಕ್ಕು ಭಕ್ತ್ಯುದ್ರೇಕದಿಂದ ತಲ್ಲೀನವಾಗುವಂತೆ ಮಾಡುತ್ತವೆ.

ಇವರ ಎಲ್ಲ ಕೃತಿಗಳಲ್ಲಿ ಮುಖ್ಯವಾಗಿ ಕಾಣುವುದ ಭೀಮವ್ವನವರ ಅನನ್ಯಭಕ್ತಿ. ಇವರ ಕೃತಿಗಳು ಭಾವಪೂರ್ಣವಾಗಿ ಪಾಂಡಿತ್ಯ ಪ್ರಪೂರ್ಣವಾಗಿವೆ. ನಾಟಕಗಳಂತೆ ಸಜೀವವಾಗಿವೆ. ಪಾತ್ರಗಳು ಶಕ್ತಿಯುತವಾಗಿ ಕಣ್ಮನ ತಣಿಸುವಂತೆ ಅನುಭವವಾಗುತ್ತದೆ. ಹಾಡುಗಳಲ್ಲಿಯ ನಾಟಕೀಯ ಸಂಭಾಷಣೆಗಳೇ ಒಂದು ವೈಶಿಷ್ಟ್ಯ; ಪದ್ಧತಿಯಂತೆ ಗಣೇಶನನ್ನೂ, ಸರಸ್ವತಿಯನ್ನೂ, ಮತ್ತು ಎಲ್ಲ ದೇವತೆಗಳನ್ನೂ ಮೊದಲು ನೆನೆದು ನಮಿಸಿ—"ಎಲ್ಲ ದೇವತೆಗಳಿಗೆರಗಿ ಭಕ್ತಿಯಿಂದ ಲಕ್ಷ್ಮಿವಲ್ಲಭನ ಕಥೆಗಳನ್ನು ವರ್ಣಿಸುವೆನು" ಎಂದೇ ಹೇಳುತ್ತಾರೆ.

ಸ್ತ್ರೀ ಸೌಂದರ್ಯ ವರ್ಣನೆಯಲ್ಲಿ ಭೀಮವ್ವನವರು ಅದ್ವಿತೀಯರೆನಿಸಿದ್ದಾರೆ. 'ಸೀರೆ ಹಾಡು' ಅಥವಾ 'ಜಲಕ್ರೀಡೆ' ಹಾಡಿನಲ್ಲಿ ಸೀರೆಗಳನ್ನು ಕಳೆದುಕೊಂಡ ಗೋಪಿಕಾಸ್ತ್ರೀಯರ ಮನದ ಅಳಲು, ಅವರು ಪರಸ್ಪರದಲ್ಲಿ ತಮ್ಮ ತಮ್ಮ ಸೀರೆಗಳ ಬಗ್ಗೆ ನೆನಸಿಕೊಂಡು ಕೊರಗುವ ಬಗೆ ಕಣ್ಣೆದುರು ಕಾಣಿಸುವಂತೆ ಚಿತ್ರಿಸಿದ್ದಾರೆ. ಅವರ ಬಗ್ಗೆ ಮರುಕ ಹುಟ್ಟುವಂತೆ ರಚಿಸಿದ್ದಾರೆ. ಕರುಣಾರಸದ ಮಧ್ಯದಲ್ಲೂ ಕವಯಿತ್ರಿಗೆ ಅಲ್ಲಲ್ಲಿ ಹಾಸ್ಯರಸ ಹರಿಸುವ ರಸಿಕತೆ ಇದೆ. ಸೀರೆಯ ಹೆಸರುಗಳ ಕೋಶವೇ ಇದ್ದಂತಿದೆ ಹಾಡು ; ಒಂದೊಂದು ಸೀರೆಯ ಹಿನ್ನೆಲೆಯಾಗಿ ಭಾವನಾತ್ಮಕ ಬೆಲೆಯನ್ನೂ ಹೇಳಿದ್ದಾರೆ.

1. ಸಾರಾವಳಿ ಸೀರೆ ರಾಗಾವಳಿ ಸೀರೆ
ದ್ವಾರಮನಿ ಸೀರೆ ನಿಂದಲ್ಲನೇ
"ಅಕ್ಕ" ದ್ವಾರಮನಿ ಸೀರಿ ನಿಂದಲ್ಲನೇ
ಗೋದಿ ಮಗ್ಗಿ ಸೀರಿ ಗುಬ್ಬಿಕಣ್ಣಿನ ಸೀರಿ
ಸೋದರತ್ತೆಯರುಟ್ಟ ಸೀರೆಗಳೇ :

2. ಕಡ್ಡಿ ಪೈಠಣಿ ಸೀರಿ ಕಡ್ಡಾಯದಿಂದ
ನಾ ಬಡ್ಡಿ ಸಾಲವ ಮಾಡಿ ತಂದಿದ್ದನೆ
"ನಾನು" ಬಡ್ಡಿ ಸಾಲವ ಮಾಡಿ ತಂದಿದ್ದನೆ
ಅಡ್ಡಿ ಮಾಡಿದ ಭಾವ ನಾಉಟ್ಟು
ಬರುವಾಗ ಖುದ್ರಿಗೇಡಿ ನೆಗೆಣ್ಣಿ ಕುದಿಪ್ಪೋಳಲ್ಲೆ :

3. ಮಾವಿಗ್ಗೇರಿ ಸೀರಿ ಮಾರುದ್ದ ಸೆರಗಿತ್ತು
ಮಾವ ತಂದುಕೊಟ್ಟ ನನಗೆ ನಿನ್ನೆ
ಹ್ವಾವವಿಲ್ಲದೆ ಮನಿಗೋದರೆ ನಮ್ಮಾವ
ಕೋಲು ಕೊಲಿಲೆ ಹೊಡದ್ಹೊರ್ಡ್ಹಾಕುವ :

4. ಪಂಚ ಪೈಠಣಿನಂದು ಪಗಡಿಮನಿ ನಿಂದು
ಅಂಚೆಲ್ಲ ಜರತಾರಿಯ ಸರಗು
"ನೋಡೆ"
ಮಿಂಚುತಾ ನಾ ಉಟ್ಟುಕೊಂಡರೆ
ನನಗಂಡ ಮಂಚಯಿಳಿಯದೆ ಇಲ್ಲಿ ಕೂಡೆಂಬೊರೆ :

5. ಪಂಪ್ಯ ಪೈಠಣಿ ಸೀರೆ ಗೊಂಡ್ಯಾಮುತ್ತಿನ ಸೆರಗು
ಗಂಡನೊಲಿಸಿ ಕೊಂಬೋ ಸೀರಿ ಅದು
"ನೋಡೆ"
ಕಂಡ ಕಂಡಲ್ಲಿ ನಾ ತಿರು ತಿರುಗಿ ಬಂದರೆ
ಒಂದೂ ಮಾತಾಡುತ್ತಿದ್ದಲ್ಲವರು :

6. ಥಳಥಳ ಹೊಳೆವೂದು ತಬಕದೂವಿನಸೀರಿ
ಮಳಕ್ಕೊಂದು ನೂರ್ಹೊನ್ನು ಕೊಟ್ಟಿದ್ದೆನೆ
ಝುಳಕುತ ಬಾಗುತ ಬಾಳಿಯ ಸುಳಿಯಂತೆ
ಬಳುಕುತ ಬಂದಿಲ್ಲಿ ಕಳಕೊಂಡೆನೆ :

7. ಝುಗ ಝುಗ ಹೊಳೆವೋದು ಜಗನ್ಮೋಹಿನೀ ಸೀರಿ

ನಗೆ ಮುಖದಾಗೊಂಬಿ ಸೆರಗಾನೊದ್ದು
"ನಾನು"
ಪಗಲ್ ಪಗಲ್ ಮಾಡುತ ಧಿಗಿ ಧಿಗಿ ನಾ ಬಂದೆ, ಧಿಗಲ್ ದಿನಲ್ಯಾಗ್ಗ
ದಿನ್ನೆದಿಬಳಗೆ

ಭೀಮಪ್ಪನವರ ವರ್ಣನಾಶಕ್ತಿ, ಶಬ್ದಸಂಗ್ರಹ ವೈಚಿತ್ರ್ಯವಿತು ಬರುವ ರಸ ನಿರೂಪಣೆ ಮೆಚ್ಚತಕ್ಕಂತಹದು.

"ನಳ ಚರಿತ್ರೆ"ಯಲ್ಲಿ ದಮಯಂತಿಯ ರೂಪ ವರ್ಣನೆಯ ವೈಖರಿ ಹೀಗಿದೆ.

"ಎರಡು ಪಾದಗಳು ಎಳೆಯ ಮಾವಿನ ತಳಿರಂತೆ
ನಡೆದರ ಗಜನೋಡಿ ನನಗೆ ಮಿಗಿಲೆಂಬುವುದು
ನಡುವ ನೋಡುತ ಸಿಂಹ ನಾಚಿ ಬೆರಗಾಗುವುದು
ಕಡಗ ಬಳೆ ಕರಬಾಳೆ ದಿಂಡಿನಂತೋರುವುದು,
ಜಡೆಯ ನೋಡುತ ಸರ್ಪ ಮಡುವ ಸೇರ್ವುದು ಪೋಗಿ,
ಉಡುರಾಜ ನೋಡಿ ಮುಖ ಕಾಂತಿಗೆ ಕಪ್ಪಾದ
ಬಿಳಿಮುತ್ತು ಪುಟ್ಟ ಕರಡಗಿಯಂತೆ ಬಾಯಿಂದೆ
ನುಡಿದ ಮಾತಿಗೆ ಮರುಳುಗೊಂಡವಾ ಗಿಳಿಹಿಂಡು
ಒಡೆದ ದಾಳಿಂಬ್ರ ಬಾಯ್ಬಿಡಲು ದಂತಕೆಹವಳೆ,
ಕುಡಿಯಂತೆ ತುಟಿ ಕೆಂಪ್ರ ಕದಪ್ರ ಕನ್ನಡಿಯಂತೆ,
ಮುಡಿಯ ಸಂಪಿಗೆ ತೆನೆಯ ಮೂಗು ಮಾಟಕೆ ಬಾಡೆ
ಕಡೆಗಣ್ಣು ಕಮಲದೆಸಳಂತೆ ತಿದ್ದಿದ ಹುಬ್ಬು
ಕಡಲಂತೆ ಗುಣಕ್ಕೊಂದು ಕಡಿಮೆಯಿಲ್ಲವಾಗಿರಲು
ಬಿಡಿ ಮುದ್ದು ಕಾಮನ್ನಲ್ಲಭಗೆ ಸಮ ಚಲ್ವಿಕೆಯು
ಸಡಗರದ ಶುಭ ಲಕ್ಷಣವ ಕೇಳಿ ನಳರಾಯ
ಮಡದ್ಯಾಗಲೆನುತ ಮನಸ್ಸಿಟ್ಟು ದಮಯಂತಿಯಲಿ
ಬಿಡದ ಭೀಮೇಶ ಕೃಷ್ಣನನು ಬೇಡಿಕೊಳ್ಳುತ್ತಿದ್ದನು"

"ರತಿ ಕಲ್ಯಾಣ"ದಲ್ಲಿ ರತಿಯನ್ನು ಮದನನಿಗೆ ನಿಶ್ಚಯಮಾಡಿಕೊಂಡು ಬರಲು ಭೀಮೇಶಕೃಷ್ಣನು ತನ್ನ ತಂಗಿ ದ್ರೌಪತಿಯನ್ನು ರತಿಯ ತಂದೆ ಕಮಲರಾಜನಲ್ಲಿ ಕಳುಹಿದಾಗ ಆ ಮೋಹನಾಂಗಿ ಹೊರಟ ಸಂಭ್ರಮ, ಧರಿಸಿದ ಒಡವೆ ವೈಯ್ಯಾರಗಳ ನಿರೂಪಣೆಯನ್ನು ಭೀಮಪ್ಪ ಅಮೋಘವಾಗಿ ವರ್ಣಿಸಿದ್ದಾರೆ. "ರತಿ ಕಲ್ಯಾಣ"ದಲ್ಲಿ ದ್ರೌಪತಿಯ ಪತ್ರಕ್ಕೇ ಹೆಚ್ಚು ಮಹತ್ವಕೊಟ್ಟಿದ್ದಾರೆ. ದ್ರೌಪತಿಯು ಸರ್ವ ಸಮರ್ಪಣಾ

ಭಾವದ ಮೂಲಕ ಕವಯಿತ್ರಿ ತಮ್ಮ ಆತ್ಮ ಸಮರ್ಪಣಾಭಾವವನ್ನೂ ವ್ಯಕ್ತಪಡಿಸಿದ್ದಾರೆ.

"ನಳಿನಮುಖಿ ನಗುತ ಅಪ್ಪಣೆಗೊಂಡು ತಾಘಮ್ಮ,
ಘಳಿರೆನುತ ಆ ಬಾಳಿ ಸುಳಿಯಂತೆ ಹೊಳೆಯುತಲಿ
ತಳಿರು ಮಾವಿನ ಪತ್ರ ಪೋಲ್ವ ಕೋಮಲ ಚರಣ,
ಸುಳಿಯು ಕಾಲುಂಗರದ ಸೂಕ್ಷ್ಮದೆಜ್ಜೆಯ ನಿಡುತ,
ರುಳಿಗೆಜ್ಜೆ ಪೆಂಡಿ ಪೈಜಣ ಧ್ವನಿಗಳಾಗುತಿರೆ,
ಬಳಿ ಭಾರಿ ಕಂಕಣವು ಬೆರಳ ಹೊನ್ನುಂಗುರವು
ಗಿಳಿ ಕಮಲದ್ವಾರೆ ಮುಂದರಡಿ ಹಸ್ತ ಕಡಣ
ನಳಿ ತೋಳಿನಲ್ಲಂಕಿ ನಾಗಮುರಗಿ ಗೆಜ್ಜೆ
ವಿಳಿಯ ಕಠಾಣಿ ಮ್ಯಾಲ ಸರಿಗಿ ಅಡ್ಡಿಕಿ ಮುತ್ತು
ಕೊರಳ ಪುತ್ಥಳಿ ಚಂದ್ರ ಸರ ಏಕಾವಳಿ ಪದಕ
ಹರಳಿನ್ವಾಲೆಯು ಬುಗುಡಿ ಹೊಸಚಂದ್ರ ಬಾಳೆಗಳು
ಝುಳ ಝುಳ ಸ್ವಜೋತಿ ಮುತ್ತಿನ ದ್ರಾಕ್ಷಿ ಬಳ್ಳಿಗಳು
ಹೊಳೆವ ಕುಂದಣ ಕೆಂಪಿನಾಣೆ ಮುತ್ತಿನ ಮುಖರಾ
ಹವಳದಂತಾರಂಗು ತುಟಿಬಾಯಿ ತಾಂಬೂಲ
ಝುಳಪು ಮಿಂಚಿನ ಕಾಂತಿಯಂತೋಳಪ್ಪೊ ಮುಖ ಕಮಲ
ಕದಪು ಕನ್ನಡಿಯಂತೆ ಕಣ್ಣುಕಾಡಿಗೆ ಚಂದ
ಅದಕೆ ಮೇಲಾರತ್ನದಂತಲಿಗೆ ಯಂತಣೆಯಲ್ಲಿ
ಥಳುಕೆಂಬ ಸಣ್ಣ ಕುಂಕುಮ ಕೆಳಗೆ ಕುಡಿಹುಬ್ಬು
ಥಳಪುತಿದ್ದಿರುವ ಮುಂಗುರುಳು ಮುತ್ತಿನ ಬೊಟ್ಟು
ಅರಳು ಮಲ್ಲಿಗೆಯು ಅರೆಚಂದ್ರರಾಗುಟಿಗೊಂಡ್ಯಾ
ಹೆರಳು ಬಂಗಾರ ಹಿಂಗಾಲಿನಲ್ಲಲವುತಲಿ
ಬಿಳಿಯು ಹೂವಿನ ಕುಬುಸ ಬಿಗಿದು ನೆಟ್ಟರೆ ಮೈಗೆ
ಸೆಳೆ ನಡುವಿನೊಡ್ಯಾಣ ಸೀರೆ ಜರತಾರಂಚು
ನಿರಿಯು ಬುಟ್ಟಾದಾರಿ ನೀಲ ಮಾಣಿಕಪಟ್ಟಿ
ವರ ಮೋಹನಾಂಗಿ ವೈಯಾರಿ ಜರ ಸೆರಗೊದ್ದು
ಪರಿಮಳವು ಗಂಧ ಬುಕ್ಕಿಟ್ಟು ಘಮ ಘಮಿಸುತಲಿ
ಇಳಿಮ್ಯಾಲಿ ಇಳಿದು ಬಂದನು ಭಾನು ಎಂಬಂತೆ
ಅಳಿಯುಗಾ ಮಗಳ ಮಾಡುವೆನೆಂಬ ಸಂಭ್ರಮದಿ
ಭರದಿಂದ ಬರುವ ಭೀಮೇಶ ಕೃಷ್ಣನ ತಂಗಿಯನೆ
ನೋಡಿ ಬೆರಗಾದರಾ ಕಾವಲಿದ್ದಾ ಜನರು :

ಪೌಂಡ್ರಿಕನು ರತಿಯನ್ನು ಕದ್ದು ಒಯ್ದಾಗ ದ್ರೌಪತಿಯು ಪೌಂಡ್ರಿಕನೊಡನೆ ಯುದ್ಧಗೈಯಲು ಇಂತಹ ದಿವ್ಯ ಸೌಂದರ್ಯವನ್ನು ತ್ಯಜಿಸಿ ಭೀಕರ ರೂಪವನ್ನು ಧರಿಸಿದ ವರ್ಣನೆ ಕೇಳಿದರೆ ಭಯ ಹುಟ್ಟುವಂತೇ ಚಿತ್ರಿಸಿದ್ದಾರೆ.

ನೋಡೀರಿ ದ್ರೌಪತಿ ಚರಿಯಾ
ಕೊಂಡಾಡಿರೀಕೆಯ ಮಹಾ ಶೌರ್ಯ
ಅಡುತಾಡುತ ಮಾತುಗಳು ತಾನೋಡು
ತಲೆ ಪೌಂಡ್ರಿಕನಂಗನ ಮಾಡುತಲಿ
ಅವನ್ನ ತವ ಶಿರ
ಚೆಂಡಾಡಿದಾ ಗಂಭೀರ ಗುಣಗಳ ॥ಪಲ್ಲ॥

ಉಟ್ಟಳು ಬಿಳಿಯ ಪತ್ತಲವಾ ಮ್ಯಾಲೆ
ತೊಟ್ಟು ಕುತ್ತಣಿಯ ಕುಪ್ಪಸವಾ
ಪಟ್ಟಿ ಕುಂಕುಮ ಹಚ್ಚಿ ನೊಸಲೊಳಂಥ
ದ್ರುಷ್ಟನಾಮ್ಯಾಲೆ ಸಾಹಸವೂ :
ಅಷ್ಟಭುಜ ಅಷ್ಟಾಯುಧಂಗಳು
ಕತ್ತಿಖಡ್ಗವ ಪಿಡಿದು ತಿರುವುತ
ಕೆಟ್ಟ ಪೌಂಡ್ರೀಕನ್ನು ಎದೆಯಾ
ಮೆಟ್ಟಿ ಸೀಳುವೆನೆನುತಲಾಗೆ ॥2॥

ಆಲಯುದಂಥ ಕಿವಿಗಳು ಬಂಡಿ
ಘಾಲಿನಂಥೊರಳಿನ್ವಾಲೆಗಳೂ
ಜೋಲುಬಿದ್ದಂತ ತುಟಿಗಳು
ದೊಡ್ಡ ಭೇರಿಯಂತಿದ್ದ ಸ್ತನಗಳು:
ಕಾಮನಾ ಬಿಲ್ ಮೂಡಿದಂತೆ ನೀಲವೇಣಿ
ಹುಬ್ಬುಗಳು ವಿಶಾಲನೇತ್ರದಿ ಖಡಿಗಳು
ಹೂಬಾಣದಂಥಾರಾಡುತಿರಲು ॥3॥

ರಥಚಕ್ರದಂಥಾ ನೇತ್ರಗಳು ತಿರುಗುತಲಿದ್ದ
ಕುಣ್ಣುಗುಡ್ಡಿಗಳೂ ಉನ್ನತವಾದ ಮೂಗುಮಾಟಗಳು
ಪರ್ವತದಂತೆ ಹೊಟ್ಟೆ ಬೆನ್ನುಗಳು :
ಮಿತಿಯು ಇಲ್ಲದೆ ತೆರೆದು ಬಾಯಾರ್ಭಟದಿ
ಕೋರೆ ಹಲ್ಲು ನಾಲಿಗೆ ಶತಯೋಜನ

ಪರ್ಯಂತ ಚಾಚಿ ಅತಿ ಭಯಂಕರ
ವಾಗಿ ತೋರ್ಪಳು :........
ಭೀಮನೊಲ್ಲಭೆಯ ನೋಡುತಲಿ
ಕೃಷ್ಣ ತಾ ಮಹಾ ಹರುಷ ಪಡೂತಲಿ
ಕಾಮ್ಯಥಮಾರ್ಥ ನೀಡುತಲಿ ಎನ್ನ
ಪ್ರೇಮಕ್ಕೆ ಪಾತ್ರಳೆನ್ನುತಲಿ :
ಕಾಮಿನಿ ದ್ರೌಪತಿ ಮಹಿಮೆ ಕೇಳಿದ ಸಜ್ಜನರಿಗೆಲ್ಲ
ಭೂಮಿಪತಿ ಭೀಮೇಶಕೃಷ್ಣ ತಾ ಒಲಿದು
ಮನೋಭೀಷ್ಟ ಕೊಡುವನು ॥ನೋ॥

ಭೀಮವ್ವನವನರ ರಣರಂಗದ ವರ್ಣನೆ, ದ್ರೌಪತಿಯ ಶೌರ್ಯದಲ್ಲಿ ವೀರರಸ ತುಂಬಿಬಿಟ್ಟಿದೆ. ಯುದ್ಧಮಂಡಲದಲ್ಲಿ ಬಿದ್ದ ಯಾದವರೆಲ್ಲ ಪದ್ಮನಾಭನು ನೋಡೆ ಕರುಣ ಕಟಾಕ್ಷದಲ್ಲಿ ನಿದ್ರೆ ತಿಳಿದೆಚ್ಚರಾದಂತಾಗಿ ಜನರೆಲ್ಲ ಎದ್ದು ಕುಳಿತರು ಯದುಕುಲೇಶನ ಕೃಪೆಯಿಂದಲಿ ಆಗ ಇದು ಏನು ಅಣ್ಣಾ ಈಕೆಯು ದಾವ ಹೆಣ್ಣು ಎಂದು ಅರ್ಜುನ, ಭೀಮ ಧರ್ಮರಾಯ ಪರಸ್ಪರರ ಸೋದರರ ಸೋಜಿಗದ ಅವಸ್ಥೆ ಕೇಳಿದಾಗ ಮೋಜೆನಿಸದಿರದು.

ಬಲವಂತಳೀಕಿ ನಮ್ಮೈವರನು
ಬಾಳಿಫಲದಂತೆ ನುಂಗಿ ನೀರ
ಕುಡಿದಳಿನು ಈಕಿ ಬದಿಯಲೋಗಿ
ರುವೆದಸಾಧ್ಯವಿನು :

ಎಂಬ ಅರ್ಜುನನ ಅವಸ್ಥೆ ಬಗ್ಗೆ ಮರುಕ ಹುಟ್ಟಿಸುತ್ತಾರೆ ಕವಯಿತ್ರಿ. ಶೃಂಗಾರ, ವೀರ, ಹಾಸ್ಯ ಕರುಣ ಮೊದಲಾದ ನವರಸಗಳೂ ಕರತಲಾಮಲಕವಾಗಿವೆ. ಈ ನವರಸಗಳನ್ನು ತಮ್ಮ ಕವಿತಾ ಪ್ರೌಢಿಮೆಯಿಂದ ಪಾಂಡಿತ್ಯದಿಂದ ಪುಟಗೊಳಿಸಿದ್ದಾರೆ. ಅಲ್ಲಲ್ಲಿ ಬೆರಗುಗೊಳಿಸುವ ವರ್ಣನೆಗಳಿಂದ ತಮ್ಮ ಕಾವ್ಯಗಳ ಪಾತ್ರಗಳನ್ನು ಪ್ರಜ್ವಲಿಸುವಂತೆ ಮಾಡಿದ್ದಾರೆ. ಅಲ್ಲಲ್ಲಿ ಸಂಭಾಷಣೆ ರೂಪದಲ್ಲಿ ಕಾವ್ಯ ಸಾಗುವುದರಿಂದ ನಮ್ಮೆದುರು ನಾಟಕ ನೋಡುತ್ತಿರುವೆವೇನೋ ಎಂದು ಭಾಸವಾಗುವಂತೆ ರಚಿಸಿದ್ದಾರೆ. ನಾಟಕಗಳಲ್ಲಿ ದೃಶ್ಯ ಬದಲಾವಣೆ, ಪರದೆ ಸಲಕರಣೆಗಳಿರುವಂತೇ ಇವರ ಹಾಡುಗಳಲ್ಲಿ ಕಥಾಭಾಗ ಮುಗಿದು ಬೇರೆ ಕಥಾಭಾಗ ಪ್ರಾರಂಭವಾಗುವಾಗ ಬೇರೆ ಬೇರೆ ಧ್ವನಿಗಳು ವಚನಗಳು ಇರುವುದು ಒಂದು ವೈಶಿಷ್ಟ್ಯ. ಇವರ ಹಾಡುಗಳಲ್ಲಿಯ ಸಂಭಾಷಣೆ ತುಂಬ ರೋಚಕ. ಕೃಷ್ಣನ ಚಮತ್ಕಾರದ ಮಾತಿಗೆ ಅಷ್ಟೇ ಚುರುಕು

ಉತ್ತರ ಕೊಡುವ ಭಾಮೆಯ ತೀಕ್ಷ್ಣಮತಿಯ ಮಾರುತ್ತರ ಇವರ ಅಗಾಧ ಪಾಂಡಿತ್ಯದ ನಿದರ್ಶನ : "ಸುಭದ್ರಾ ಕಲ್ಯಾಣ"ದಲ್ಲಿ ಕೇತಕಿವನದಲ್ಲಿ ಯತಿವೇಷ ಧರಿಸಿದ ಪಾರ್ಥನ ಮನಸ್ಥಿತಿ, ಸುಭದ್ರ—ಯತಿಯ ಸಂಭಾಷಣೆ, ಕೇಳುವಾಗ ಕುತೂಹಲ ಕೆರಳುತ್ತದೆ. ಪಾರ್ಥನ ಅವಸ್ಥೆ ದಿವ್ಯದೃಷ್ಟಿಯಿಂದ ಕಂಡುಕೊಂಡ ಶ್ರೀಕೃಷ್ಣ ನಕ್ಕಾಗ ಪಾರ್ಥನ ಪರವಾಗಿ ವಾದಿಸುವ ಭಾಮೆಯ ಚತುರತೆಯ ಚಿತ್ರ ಕಣ್ಣೆದುರು ತೇಲಿ ಬರುವಂತೆ ಚಿತ್ರಿಸಿದ್ದಾರೆ.

ಶ್ರೀಕೃಷ್ಣ ಹೇಳುತ್ತಾನೆ—

"ನಾ ಕಂಡೆನೆ ಫಲ್ಗುಣ ಬಂದು ವನದೊಳು ಪೋಕಬುದ್ಧಿ
ತರವೇನೆ, ಇಂಥ ಪೋಕಬುದ್ಧಿ ತರುವೇನೆ ?"
ಭಾಮೆ—ಯಾತಕೆ ಬಂದನು ಕೇತಕಿ ವನದೊಳು ಮಾತು
ಪೇಳೋ ನನ ಮುಂದೆ, ಈ ಮಾತು ಪೇಳೋ ನನಮುಂದೆ ;
ಎಂದಾಗ ಶ್ರೀಕೃಷ್ಣ—
'ಕಳ್ಳತನದಿ ಕಾಮುಕ ಯತಿ ಆದನು ಚಲ್ವಭದ್ರೆ
ದೆಸೆಯಿಂದ ;
ಎಂದು ನುಡಿದಾಗ ಸತ್ಯಭಾಮೆ ತಟ್ಟನೆ ನುಡಿಯುತ್ತಾ—
ಕಳ್ಳತನವು ನಿಮ್ಮಲ್ಲುಪದೇಶಗಳ ಎಲ್ಲಿ ಕಲಿತನು ಪಾರ್ಥ
ನಿಮ್ಮಲ್ಲಿ ಕಲಿತನು ಪಾರ್ಥ....ಎಂದು ಹಿಯಾಳಿಸುತ್ತಾಳೆ—ಶ್ರೀ
ಕೃಷ್ಣ ಸೋಲುವವನೆ ? ಅವನೂ ಅಷ್ಟೇ ಚುರುಕಾಗಿ ಕೇಳುತ್ತಾನೆ
ಅರಸು ಮಕ್ಕಳಾದರು ಬಂದು ಕೇಳದೆ ಧರಿಸುವದೇನೆ
ಯತಿ ರೂಪ ತಾ ಧರಿಸುವರೇನೆ ಯತಿರೂಪ ;
ಸತ್ಯಭಾಮೆ ಸೋತರೆ ತಾನೆ ?—"ಕರೆಸಿಕೊಡು ಬುದ್ಧಿಯು ನಿಮ್ಮಲ್ಲಿಲ್ಲವು
ಮುರಿಸುವ ನಿಮ್ಮಂಕಾರ : ಪಾರ್ಥ ವರಿಸುವ ನಿಮ್ಮಂಕಾರ

"ಎಂದು ಹೇಳಿಕೊಳ್ಳುವುದು ಭದ್ರೆಯ ಭೀಮೇಶ ಕೃಷ್ಣ ನಿನ್ನದೀ ಕಾರ್ಯ ಶ್ರೀ ಕೃಷ್ಣ ನಿನ್ನದೀ ಕಾರ್ಯ"ಎಂದು ಆ ಕಾರ್ಯಕ್ಕೆ ಶ್ರೀಕೃಷ್ಣನನ್ನೇ ನೇಮಿಸುತ್ತಾಳೆ.

ತಂಗಿ ಸುಭದ್ರೆಯನ್ನು ಕರೆದು ಬಲರಾಮನು ಅವಳನ್ನು ಯತಿಗಳ ಸೇವೆಗೆಂದು ನಿಯಮಿಸಿದನು. ನಿಷ್ಠೆಯಿಂದ ಸೇವೆಗೈಯುತ್ತ ಸುಭದ್ರೆ ಒಂದು ದಿನ ಯತಿಗಳನ್ನು ಕೇಳಿದಳು.

ಕಂಡಿರಾ ಯತಿರಾಯ ಭೂಮಂಡಲವ ಚರಿಸುವ
ಗಾಂಡೀವಿ ಪಾರ್ಥನ?"

ಪಾರ್ಥನ ಮನಸ್ಥಿತಿ — ಅಷ್ಟದರಿದ್ರಗೈಶ್ವರ್ಯ ಬಂದಂತಾಯ್ತು. ಯತಿಯೇ ಅರ್ಜುನನೆಂದು ತಿಳಿದಾಗ ಸುಭದ್ರೆಯ ಸ್ಥಿತಿಯನ್ನು ಸೂಕ್ಷ್ಮವಾಗಿ ಭೀಮವ್ವನವರು ವರ್ಣಿಸಿದ್ದಾರೆ.

ಅರ್ಜುನ ಎಂಬ ವಾಕ್ಯವ ಕೇಳಿ ಆ ಬಾಲೆ; ವಜ್ರಾ್ರಕಂಬವ
ನಂಬಿ ನಿಂತಳು ಸುಕುಮಾರಿ;
ಲಜ್ಜೆಯಿಂದಲೆ ಶಿರಬಾಗಿ ಗೆಜ್ಜೆ ಪಾದಾಂಗುಷ್ಟದಿಂದುರ್ವಿಯ
ನು ಬರೆಯುತ;
ನಡುಗುತಿರೆ ಕಂಪ ಹುಟ್ಟಿತು ದೇಹದೊಳಗೆ: ಪಿಡಿದ
ಬೀಸಣಿಗೆ ಪೊಡವಿಯ
ಮೇಲೆ ಬೀಳತಲೆ
ಮುಡಿದ ಮಲ್ಲಿಗಿ ಜಾಜಿ ಅಡಿಗಡಿಗೆ ಉದುರುತಿರೆ
ಬಡನಡುವಿನ ಒಯ್ಯಾರಿಗೆ;
ಯಾಕೆ ಬಂದೆನು ಇಲ್ಲಿಗ್ಯಾಕೆ ಬಂದೆನು ಎನುತ;
ಶ್ರೀಕಾಂತ ಭೀಮೇಶ ಕೃಷ್ಣ ಎನಗ್ಯಾಕೆ ಇಂಥ
ಮನಸು ಪ್ರೇರಿಸಿದನೆಂದು ಬಹಳ ವ್ಯಾಕುಲವಾಗಿದ್ದಳು:

ಸುಭದ್ರೆಯ ಚಿತ್ರ ಕಣ್ಣಿಗೆ ಕಟ್ಟುವಂತೇ ವರ್ಣಿಸಿದ್ದಾರೆ. ಶೃಂಗಾರ ರಸವನ್ನು ಚಿತ್ರಿಸಿದಂತೆ ಕರುಣರಸವನ್ನೂ ಚಿತ್ರಿಸಬಲ್ಲರು. ನಳಚರಿತ್ರೆಯಲ್ಲಿ, ನಳನು ದಮಯಂತಿಯನ್ನು ಬಿಟ್ಟು ಹೋದಾಗಿನ ದೃಶ್ಯ ಕರುಣಾಪೂರಿತವಾಗಿದೆ.

"ಅಶೋಕ ವೃಕ್ಷ ನಿನ್ನ ಮುಂದೆ ಶೋಕದಿಂದ ಬಂದೆ ನಾನು।
ನಾ ಕೈ ಮುಗಿದು ಬೇಡಿಕೊಂಬೆ ಅಶೋಕಳನೆ ಮಾಡು ಬೇಗ॥

ಭೀಮವ್ವನವರ ಮುಖ್ಯದ ಹಾಡುಗಳಲ್ಲಿ ಸಂಭಾಷಣೆಗಳ ಮೂಲಕವೇ ಇಡೀ ಭಾರತ ಭಾಗವತದ ಘಟನಾವಳಿಗಳ ನಿರೂಪಣೆಯನ್ನೇ ಕಾಣಬಹುದು.

"ಶಕುಂತಲಾ ಚರಿತ್ರೆ" ಮಹಾಭಾರತದಲ್ಲಿ ಕಥಾವಸ್ತು ಜನಪ್ರಿಯವಾದ ಜನಜನಿತವಾದ ವಿಷಯು. ಧಾಟಿ ಸುಲಲಿತ. ಸರಳ.

ಹಾಡಿನ ಆರಂಭದ ಗಣಪತಿ, ಸರಸ್ವತಿಯ ಸ್ತೋತ್ರ ಮತ್ತು ಕಥೆಯ ಸಂಕ್ಷಿಪ್ತ ಪರಿಚಯವನ್ನು ಕೊಟ್ಟಿರುವುದು ಬಹುಶಃ ಸಂಧಿಯ ಆರಂಭಕ್ಕೆ ಆ ಸಂಧಿಯು ಒಳಗೊಂಡಿರುವ ವಿಷಯವನ್ನು ಸಂಕ್ಷಿಪ್ತವಾಗಿ ಭಾಮಿನಿ ಷಟ್ಪದಿಯ ಮೊದಲ ಪಾದದ ಮೂಲಕ ಹೇಳಲಾಗುತ್ತದೆ. ಇಲ್ಲಿಯೂ ಸಹಿತ ಇವರು ಆರಂಭಕ್ಕೆ ಹೇಳಿ

ರುವ ಪದ್ಯಗಳು ಭಾಮಿನೀ ಷಟ್ಪದಿಯ ಅರ್ಧ ಪಾದವೇ ಆಗಿದೆ. ಈ ಹಾಡಿನಲ್ಲಿರ ಬಹುದಾದ ವಚನ ಮತ್ತು ಸಾಹಿತ್ಯಗಳ ಸಮ್ಮಿಲನ ಹಾಡಿಗೆ ನವೀನ ಮೆರಗನ್ನು ನೀಡಿದೆ. ಇಲ್ಲಿ ಉಪಯೋಗಿಸಲಾಗಿರುವ ವಚನ ಹಾಡುವವರಿಗೆ ಅನುಕೂಲವಾಗಲಿ ಎಂದು ತಂದದ್ದಾಗಿರಬೇಕು.

"ಶಕುಂತಲಾ ಚರಿತ್ರೆ"ಯಲ್ಲಿ ನಿಸರ್ಗ ರಮಣೀಯತೆಯನ್ನು **ಭೀ**ಮವ್ವ ಅದ್ಭುತ ವಾಗಿ ಬಣ್ಣಿಸಿದ್ದಾರೆ.

ದುಷ್ಯಂತನ ರಥದ ವೇಗವನ್ನು ಕವಯಿತ್ರಿ ವರ್ಣಿಸುತ್ತಾರೆ,

ವಚನ-"ದೂರಿದ್ದ-ಮರಗಳ ಗುಂಪು ಒಂದಾಗಿ ಕಾಂಬುವದು ರಥ ಬರುವ
ರಬಸಕ್ಕೆ ಗುಂಡುಕಲ್ಲು ತಗ್ಗು ಬಿಟ್ಟೆ ಗಿಡ ಸಾಪಾಗಿ ಕುಂಬಾರನ ಚಕ್ರದಂತೆ
ತಿರುಗಲು ಭೂಮಿ ಮುಂದೆ ಗಿರಿ ದೊಡ್ಡ ಪರ್ವತ ಕೋಡೆಗಲ್ಲುಗಳು
ಅಂದಣವೂ ಬರುವ ರಥಸಕ್ಕೆ ಬೊಗರಿಯಂತೆ ತಿರುಗೆ....

ಉಪಮೆ ಎಷ್ಟು ಅಮೋಘವಾಗಿದೆ. ಇದೇ ಹಾಡಿನಲ್ಲಿ ಕಣ್ವಋಷಿಗಳು ಶಿಷ್ಯ ನನ್ನು ಕರೆದು ಕಾಲವುಎಷ್ಟಾಗಿದೆ ನೋಡಿ ಬಾ ಎಂದಾಗಿನ ಸಂದರ್ಭದಲ್ಲಿ ಕಾಲಮಹಿಮೆ ಹಾಗೂ (ಪ್ರಕೃತಿವರ್ಣನೆ) ಹೀಗೆ ಹೇಳಿದ್ದಾರೆ.

ಏನು ಪೇಳಲಿ ಮುನಿಯೆ ಕಾಲ ಮಹಾತ್ಮೆಯನ್ನು ಕಾಲಿಲ್ಲದಳವನ್ನು ಕೂಡಿ ಕೊಂಡು ರಥವೇರಿಹನು. ಮೇಲಕ್ಕೆ ಪೂರತಾಪಗಳಿಂದ ತಾರೆಗಳ ವಣಗಿಸುವ ತ್ರಣ ಜಲಧಿಗಳನೊಣಗಿಸುವ ಅರವಿಂದ ವೃಂದಕ್ಕೆ ಸಖ ಆವ ನೋಡಿ ಹಿಗ್ಗುವನು, ಕ್ರೂರ ತಪ ಮೇಲಕ್ಕೆ ಏರುವ ಕಾಲವಿದು ತಿರುಗಿ ನೋಡುತಿರೆ ಮತ್ತೊಬ್ಬ ಮಹಾ ಪುರುಷ ದನಗಳಿಗೆ ವನಗಳಿಗೆ ಮನಗಳಿಗೆ ತನುವು ಕೊಡುವಂಥ ತಾರಾಕಾಂತ ಗುಣವಂತ ಧನ ವಂತ ಬಹು ಪುಣ್ಯವಂತ ಪ್ರಭೂವಿರುವನೀ ಜಂಬು ದ್ವೀಪಕ್ಕೆ ದೀಪವಂತಿದೆ ಪರಮ ಧಾರ್ಮಿಕ ದೊರೆಗಳಿರುವಂಥ ಕಾಲವಿದು. ಅವನ ಸಖ ಕುಮುದನೆಂಬುವನು ಮುಖ ಮುಚ್ಚುವನು ಈ ಮಹಾ ಕಾಲಮಹಿಮೆಯ ಕಂಡು ನಾನೀಗ ಗಗನ ಕೆಂಪಾಗಿಹುದು ಖಗ ಪಕ್ಷಿ ಕುಕ್ಕುಟವು ಕೂಗುತಲಿ ವದರುವದ ಕಂಡು ಬಂದೆನೆನಲು ಸುಖ ಶಿಷ್ಯನ ಮಾತು ಕೇಳಿ ಮುಗುಳು? ನಗುತ ತಮ್ಮ ಮೊಮ್ಮಗನ, ಮಗಳ ಕರಿದೇಳುವಂಥ? ಮಾತು ಗಳು ಮತ್ತೇನೆಂದರೆ—

"ಶ್ರೀ ಕೃಷ್ಣ ದಾನವ್ರತ"ದಲ್ಲಿ ಅಲ್ಲಲ್ಲಿ ಹಾಸ್ಯ ಹೇಗೆ ಮೂಡಿ ಬಂದಿದೆ ಎಂಬು ದನ್ನು ಭೀಮವ್ವನವರ ನುಡಿಯಲ್ಲಿ ನವಿಯೋಣ.

"ಕೊಡುವೆ ನಾನು ಶ್ರೀ ಕೃಷ್ಣನ ದಾನವ ಒಡಿವರೆಲ್ಲ ಬನ್ನಿರಿ ನೀವು ॥ಪ॥ ಎಂದು ಜೆಡಗಿನ, ಜಿಂಕದ ವೈಯ್ಯಾರಿ ಭಾಮೆ ಬ್ರಾಹ್ಮಣರನ್ನೆಲ್ಲ ಕುಳ್ಳಿರಿಸಿ ಕೇಳಿದಾಗ

"ಒಲ್ಲೆ ಒಲ್ಲೆ ಒಲ್ಲೆವೆಂದರು। ನಿಮ್ಮ ಪತಿಯು ಗುಣಗಳೆಲ್ಲ ಕೇಳಿ ಒಲ್ಲೆವೆಂದರು ॥ ಪ ॥

ಮುಪ್ಪಿನವರು ನಾವಿರಲು ಪರಮ ಪ್ರಾಯದ ಸತಿ ಇರಲು।
ಮತ್ತೆ ನಿನ್ನ ಪತಿಯು ವೈದು ಭ್ರಷ್ಟರಾದೆವಲ್ಲೆ ನಾವು ॥ 1 ॥
ಅರವತ್ತಾರು ವರುಷ ನಮಗೆ: ಚಿಕ್ಕಪ್ರಾಯದ ಸತಿ ಇರಲು ।
ಪರಜೋಡು ಇವರ ಮಾಡಿ ತಿರುಗೋದೆ ನಾವಡವಿಪಾಲು ॥ 2 ॥
ಉದ್ದ ತರುಬ ಕಟ್ಟಿಕೊಂಡು: ತಿದ್ದಿ ಕಚ್ಚೆ ಹಾಕಿಕೊಂಡು,
ಮಧ್ಯಾನಕ್ಕೆ ಹದಿನಾರು ಮನೆಯ ಸಂದೆತೆರುಳವನಮ್ಮ ।
ಎಷ್ಟೊ ಮಾತ್ರಕ್ಕು ಭಿಮೇಶ ಕೃಷ್ಣನ್ನ ಹಿಡಿದವರಲ್ಲ ।
ದಕ್ಷಿಣೆ ಕೊಟ್ಟರೆ ದೊಡ್ಡ ಮೊಟೆನಾದರೆ ಹೊತ್ತೇವು ನಾವು ॥

ಎಂದು ಸತ್ಯಭಾಮೆಯು ಮತಿಗುತ್ತರವ ಕೊಡದಲೆ ತಟ್ಟನೆ ಬಂದ ಬ್ರಾಹ್ಮಣರು ತಿರುಗಿ ಪೋಗುತಿರೆ" ನಾರದ ಮುನಿಗೇ ಕೃಷ್ಣನ್ನ ದಾನ ಕೊಡಲು ನಿರ್ಧರಿಸಿದಾಗ.

ಬೇಡ ಬೇಡೆನ್ನನು ಮುನಿಗೆ ಕೊಡಬೇಡ ॥ ಪ ॥.
ಹಾಡಲಾರೆನು ಪಾಡಲಾರೆನು ಭರದಿರೇ ನೋಡಲಾರೆನು ಈತನ ಹಿಂದೆ।
ಕ್ಷಣಕೊಂದು ಲೋಕವ ತಿರುಗುತಲೀತನ ಹಿಂದೆ
ಮೊಣಕಾಲು ನೊಂದರೆ ಗತಿ ಏನು ॥ 2 ॥
ಈ ದೂರ ಬ್ರಾಹ್ಮಣನ ಕರೆಸಿಕೊಟ್ಟರೆ ನಿನ್ನ ಮುದ್ದು ಮುಖ
ವನ್ನಿನ್ನು ನೋಡುವುದೆಂತು ॥ 3 ॥

ಎಂದು ಕೃಷ್ಣನ ಪರಿತಾಪ ಚಿತ್ರಿಸುವಲ್ಲಿ ಭೀಮವ್ವನವರು ಯಶಸ್ವಿಯಾಗಿದ್ದಾರೆ. ಶ್ರೀ ತುಳಸಿಯ ಮಹಾತ್ಮೆ ರುಕ್ಮಿಣಿಯ ಗುಣಗಾನ ಈ ಕೃತಿಯ ವೈಶಿಷ್ಟ್ಯ.

ಶ್ರೀ ಕೃಷ್ಣನ ಕೊಳಲ ಗಾನಕ್ಕೆ ಮೈಮರೆತ ಗೋಪಿಕಾ ಸ್ತ್ರೀಯರು ಯಮುನಾ ನದೀ ತೀರಕ್ಕೆ ಧಾವಿಸಿ ಬಂದ ವೈಖರಿ ಭೀಮವ್ವನವರು ಸೊಗಸಾಗಿ ವರ್ಣಿಸಿದ್ದಾರೆ.

ಉಕ್ಕುವ ಹಾಲಿಗೆ ಉರಿಮಾಡಿ ಮತ್ತಿಷ್ಟು ಮಕ್ಕಳ ಕಣ್ಣಿಗೆ ಬಿಗಿದು
ಚಿಕ್ಕಿನ ಬಗಳೊಳಗೆತ್ತಿ ಮುದ್ದಾಡುತ ಕೃಷ್ಣನಿದ್ದಲ್ಲೆ ನಡೆದರು,
ಹಲ್ಲಿಗೆ ಕುಂಕುಮ ಗಲ್ಲಕ್ಕೆ ಕಾಣಿಗೆ ಚಲ್ವಹಣೆಗೆ ಅರಿಷಣವು ತೀಡಿ,
ಚಲ್ವ ಹಣೆಗೆ ಅರಿಷಿಣವು, ಪ್ರಲಾಕ್ಷದಲ್ಲಿ ಕಸ್ತೂರಿ ತಿಲಕ ನಿಟ್ಟು
ಗೊಲ್ಲ ಸತಿಯರು ನಡೆದರು.

ಈ ಹಾಡಿನಲ್ಲಿ ಗೋಪಿಕಾ ಸ್ತ್ರೀಯರ ಭಾವತನ್ಮಯತೆ ಚಿತ್ರಿಸುವಲ್ಲಿ ಭೀಮವ್ವನವರ ಭಕ್ತಿ ಭಾವ ಉಕ್ಕಿ ಹರಿದಿದೆ. ಸರ್ವ ಸಮರ್ಪಣ, ಸಂಪೂರ್ಣ ಆತ್ಮನಿವೇದನ

ನಿಷ್ಕಾಮ ಕರ್ಮದ ಪ್ರವೃತ್ತಿಪೂರ್ವಕ ನಿವೃತ್ತಿ ಸಾಧನ ಮಾರ್ಗ ಕಂಡು ಕೊಂಡಿದ್ದ ಭೀಮಪ್ಪನವರ ಜೀವನ ಹಾಗೂ ಸಾಧನೆ ಇತರರಿಗೂ ಮಾರ್ಗದರ್ಶಕವಾಗಿದೆ.

ಭೀಮಪ್ಪನವರ ಹಾಡುಗಳಲ್ಲಿ ಕಂಡು ಬರುವ ವೈವಿಧ್ಯವು ಅವರ ಕಲ್ಪನಾ ಅನುಭವದ ವಿಶಾಲತೆ ಮಂಜುಳ ಪದರಚನೆಯೂ ಅವರ ಕಾವ್ಯ ಪ್ರತಿಭೆಗೆ ನಿದರ್ಶನಗಳಾಗಿವೆ.

ಶ್ರೀ ಮಧ್ವಾಚಾರ್ಯರ ದ್ವೈತ ವೇದಾಂತವು ಅವರ ಕೀರ್ತನೆಗಳ ಮೂಲ ಸಂದೇಶವಾಗಿದೆ.

ಭೀಮಪ್ಪನವರಿಗೆ ಶ್ರೀ ಕೃಷ್ಣನಲ್ಲಿ ಅಚಲ ಭಕ್ತಿ. ಅವನ ಬಾಲಲೀಲೆಗಳನ್ನು ಎಷ್ಟು ಕೊಂಡಾಡಿದರೂ ಅವರಿಗೆ ಸಾಲದು.

"ದೇವರಂತೆ ಒಂದು ಠಾವಿಲಿ ಕೂಡುವೆ ಗುಮ್ಮನ ಕರೆಯದಿರೆ ಅಮ್ಮಾ ನೀನು" ಎಂಬ ಪುರಂದರದಾಸರ ಪದವನ್ನು ನೆನಪಿಗೆ ತರುವ—"ಯಾಕೆನ್ನ ದೂರುವರೆ ಗೋಪೆಮ್ಮ ಕೇಳಿ ಪೋಕ ಬುದ್ಧಿಯ ಗೊಲ್ಲತೀ" ಎಂಬ ಹಾಡಿನಲ್ಲಿ ಪರಮಾತ್ಮನ ಲೀಲೆ ಎಷ್ಟು ಮಾನುಷಮಯವಾಗಿ ಚಿತ್ರಿಸಿದ್ದಾರೆಂದರೆ. "ಎನ್ನ ಫಣೆಯ ಲಿಖಿತ ಮುನ್ನ ಮಾಡಲಿ ಏನೇ" ಎನ್ನುವ ಕೃಷ್ಣನ ಮುಗ್ಧ ಮಾತು ಮಾನವ ಕುಲಕ್ಕೆ ನಾಟಕೀಯ ಬಾಲಭಾಷೆಯ ಬಳಕೆಯೂ ಅತಿ ರಮ್ಯವಾಗಿ ಮೂಡಿ ಬಂದಿದೆ. ಹಾಡಿನಲ್ಲಿ ವಾತ್ಸಲ್ಯಭಾವ ಉಕ್ಕಿ ಹರಿಯುತ್ತಿದೆ ಈ ನಾಟ್ಯಗೀತ ಬಾಲಗೋಪಾಲನಂತೆ ಕಿರಿದರಲ್ಲಿ ಹಿರಿದರ್ಥ ತುಂಬಿಕೊಂಡಿದೆ.

ಕೇಳೇ ಗೋಪಮ್ಮ ಕೃಷ್ಣನ ಚಾಳಿಯ, ನೀ ಮಾಡಿಬಿಟ್ಟೀಯಾ ಇಂತಪ
ಪೋಳಿಯ,

ಎಂಬ ಗೊಲ್ಲತಿಯರ ಆರೋಪಗಳನ್ನೆಲ್ಲ ಮುಗ್ಧ ಗೋಪಾಲನ ಉತ್ತರ ಮುರಿದು ಹಾಕುತ್ತವೆ ಈ ಹಾಡಿನಲ್ಲಿ.

"ಯಾಕೆನ್ನ ದೂರುವರೇ, ಪೇಳಮ್ಮಯ್ಯ, ಪೋಕಬುದ್ಧಿಯ ಗೊಲ್ಲತಿ:
ಗೋಕುಲದೊಳಗಿಂಥಾ ಪೋಕ ಪೆಂಗಸಾರಾನೆ, ಲೋಕ ಲೋಕದಿ
ನೋಡೆ ನಾ ಕಾಣೆನೆಲ್ಲೆಲ್ಲು ॥ ಯಾ ॥

ಅಮ್ಮಯ್ಯ ನೀನಡುವೂ । ಪಾಲ್‌ಜೆಣ್ಣೆಯ । ಕಣ್ಣಿಂದ ನೋಡುವನೇ
ಅಣ್ಣಾರಾಮರೂ ಕೇಳೆ। ನಿನ್ನಾಣೆ ಹುಸಿಯಲ್ಲ। ಯನ್ನ ಫಣೆಯ ಲಿಖಿತ
ಮುನ್ನ ಮಾಡಲಿ ಏನೇ ॥1 ॥

ಪೃಷ್ಟ ಪೆಂಗಳರಾಡುವ್ರೊ ಮಾತೊಂದು ನೀ। ಗೊತ್ತು
ಓಡಿಯಬ್ಯಾಡಮ್ಮ। ಚೆಟ್ಟೀಗಿ ಬೆಣ್ಣೆಯ ಮೆಲುವ್ರೊದುಂಟಾದರೆ।
ಪ್ರಟ್ಟ ಕೂಸಿನ ಹೊಟ್ಟೆಗೆ। ದೃಷ್ಟಿತಾಕದು ಏನೇ ॥2॥

ಚೆಂಡನಾಡುವಾಗ। ಯಿವರುನುಸ್ನ। ಮುಂಗೈಯ ಪಿಡಿದುಕೊಂಡು।
ಗಂಡಾರಂಜಿಕಿ ಇಲ್ಲ। ಗಾಡಿಕರ್ತಿಯರೆಲ್ಲ। ಭಂಡು ಮಾತುಗಳಾಡಿ ಬಂದು
ದೂರಿದರೇನೆ ॥3॥

ಸಣ್ಣ ಮಕ್ಕಳರೊಡನೇ। ಅಂಗಳದೀ ನಾ ಬೆಣ್ಣೀಯನಾಡುವಾಗ।
ಬೆಂಣೆ ಕೊಡುತ್ತೇವೆಂದು। ಬಣ್ಣ ಬಣ್ಣದಿಯೆನ್ನ ಕಣ್ಣು ಸೊನ್ನಿಯ
ಮಾಡಿ। ಕರೆದಾರ್ಯಾತಕ ಕೇಳಿ ॥4॥

ಗೋಲಿ ಗುಂಡುಗಳಾಡುತ ನಿಂತಿರಲೆನ್ನ ಲೀಲೆಯಿಂದಲಿ ನೋಡುತಾ।
ಭೀಮೇಶ ಕೃಷ್ಣ ಬಾರೆಂದನ್ನ ಬಿಗಿದಪ್ಪಿ ಬಾಯತೊತೆಂಬುಲಗಳು
ಬೇಡಿ ಮಾತಾಡೋರು ॥ಯಾ॥

ಯಶೋದೆ—ಗೊಲ್ಲತಿಯರಿಗೇ ಬುದ್ದಿ ಹೇಳಿ ಮರಳಿಕಳಿಸುವ ಕಲ್ಪನೆ ಈ ಹಾಡಿನಲ್ಲಿ ಹೀಗಿದೆ.

ಕಂದ ಮಾಡುವ್ರುದೇನು ಕಂಡಿರಾ। ಗೋವಿಂದನ್ನ ದೂರ ಹೇಳ ಬಂದಿರಾ।
ಪುರುಷ ಮಕ್ಕಳನೆಲ್ಲ ತೊರದೀರೆ। ನಮ್ಮ ಸರಸೀಜಾಕ್ಷನ ಹಿಂದೆ।
ತಿರುಗುವಿರೆ ಸರಿ ಬಂದ ಕ್ರೀಡಾವಗರು ಹೀಗೆ। ಆರಘಳಿಗೆ ಯೆನ್ನ
ರಮನ್ಯಾಗಿರಾಗೊಡೀರೆ॥

ಕೃಷ್ಣನ ಲೀಲೆಗಳನ್ನು ಕುರಿತು ಭೀಮಪ್ಪನವರು ಹೀಗೆ ಅನೇಕ ಕೃತಿಗಳನ್ನು ರಚಿಸಿದ್ದಾರೆ.

“ಆಲದೆಲೆಯ ಮ್ಯಾಲೆ ಮಲಗಿದಾದಿ ಕೇಶವ ನೋಡ ಬನ್ನಿ” ಎಂಬ ಪ್ರಳಯ ಕಾಲದಲ್ಲಿ ದೇವರ ಲೀಲೆಯನ್ನು ತೋರಿದ ಹಾಡು ತುಂಬಾ ಅರ್ಥಗರ್ಭಿತವಾಗಿದೆ.

“ ವೆಂಕಟೇಶ ಮಹಾತ್ಮೆ ”ಯನ್ನು ಸಾರುವ

“ಅಪ್ಪ ವೆಂಕೋಬನಾ ನೇತ್ರದಲ್ಲಿ ನೋಡಿ ಪವಿತ್ರಳಾದೆನು ಇಂದಿಗೆ।
ತಪ್ಪುಗಳೆಲ್ಲ ನಿನಗರ್ಪಿಸುವೆ ನಾನೀಗ। ಒಪ್ಪಿಗೋ ತಿಮ್ಮಪ್ಪ ಕರುಣಾ
ನಿಧಿಯೆ। ಶೇಷರದೆ ಭೃಗುಋಷಿಯು ಒದಿಯೆ ಪಾದಗಳಿಂದ। ಎದೆಯ
ಮೇಲಿರುವ ಲಕ್ಷ್ಮೀ ಕದನ ಮಾಡುತಲೆ ಕೊಲಾಪುರಕೆ ನಡೆತರಲು।

ಒದಗಿ ವೈಕುಂಠ ಬಿಟ್ಟು ಯದುನಾಥನ್ಯಾರಿಲ್ಲ ಎನುತ ಗುಡ್ಡವ ಸೇರಿ।
ಇದು ನಿನಗೆ ಸದನಾದೀತೋ ದೇವಾ॥

ಎಂದು ಅರ್ಥಗರ್ಭಿತ ರೀತಿಯಲ್ಲಿ ಹೇಳುವ ಶಕ್ತಿ ಭೀಮವ್ವನವರಲ್ಲಿದೆ.

"ಸುಧಾಮಚರಿತ್ರೆ" ಸಹ ಕೃಷ್ಣ ಭಕ್ತನ ಚರಿತೆಯೆ। ಇದರಲ್ಲಿ "ಭಾಳ ಬಡವ ನೆಂದು ನನ್ನ ಕೀಳು ಮಾಡಿದ್ಯಾಕೋ ಸ್ವಾಮಿ ಕೇಳಿ ಬಲ್ಲೆ ನಿನ್ನ ಸಂಸಾರ ಸುಖವನು.." ಎಂದು ದಶಾವತಾರದ ನಿಂದಾಸ್ತುತಿ ರಸವತ್ತಾಗಿದೆ.

"ಶುಕ್ರವಾರದ ಗೌರಿ, ಶನಿವಾರದ ಗೌರಿ" ಹಾಡುಗಳಲ್ಲಿ ಲಕ್ಷ್ಮೀ ಮಹಿಮೆ ಸಾರುತ್ತವೆ. ಈ ಹಾಡುಗಳಲ್ಲಿ ಗೌರಿಯ ನೈವೇದ್ಯಕ್ಕೆ ಅಣಿಗೊಳಿಸಿದ್ದ ಪಂಚ ಭಕ್ಷ್ಯಗಳ ವರ್ಣನೆ ಮಾಡುತ್ತ ಭೀಮವ್ವನವರು ತಮ್ಮ ಪಾಕಶಾಸ್ತ್ರ ಪಾಂಡಿತ್ಯವನ್ನು ವ್ಯಕ್ತಗೊಳಿಸಿದ್ದಾರೆ.

"ಭಕ್ಷ್ಯ ಶಾವಿಗಿ ಪರಮಾನ್ನ ಚಿತ್ರನ್ನ"
ಭಕ್ಷ್ಯ ಶ್ಯಾವಿಗಿ ಪರಮಾನ್ನ ಚಿತ್ರನ್ನ,
ಸಣ್ಣಕ್ಕಿ ಶ್ಯಾಲ್ಯಾನ್ನ ಸೂಪಗಳು,
ಚಕ್ಕುಲಿ ಗಿಲಗಂಜಿ ಚಂದದ ಚಿರೋಟಿ,
ಹಪ್ಪಳ ಸಂಡಿಗೆ ಆಂಬೋಡೆಗಳು,
ಸಕ್ಕರೆ ಘೃತಕ್ಷೀರ ಸಕಲ ಪಕ್ವಾನ್ನ
ಮಂಡಿಗೆ ಬೀಸೋರಿಗೆ ಗುಳ್ಳೋರಿಗೆಯು,
ಚಂದ್ರನಂ ತೊಳೆದೂ ಶಾವಿಗೆಯ ಪೇಣಿಯು,
ದಿವ್ಯ ಬೂಂದ್ಯ ಬುರಬುರಿ ಅನ್ನ ರಸವು
ಬೇಕಾದ ಬೇಸನ್ನು ಬಿಳಿಯ ದಳದುಂಡಿ,
ಮೇಲೆಚೂರು ಚೂರ್ಮಲಾಡು,
ಸೇತು ಬಿಳುಪಿನ ಚಕ್ರದಂತಹ ಜಿಲೇಬಿ,
ಸುಖೇದುಂಡಿ ಮುಖ ವಿಲಾಸಗಳು,
ಹೋಳಿಗೆಹೋರಿಗ್ಹೋಗಡವು ಗೇಪೂರ,
ಕಾಯಿ ಹಾಲು ಕರದ್ಹೋರಣ ಕಡಬು,
ತೆನೆ ತೋಳಿತಿರುವಿ ಉದ್ದಿನಬ್ಯಾಳಿ,
ಮೆಣಸು ಜೀರಿಗಿ ಇಂಗಾಹಕಿ ಉಪ್ಪಿನ ಕಡಬು,
ಸಾರು ಸಾಂಬಾರ ಪಡವಲಕಾಯಿ ಪೊಳೆದಲ,
ಉಪ್ಸೇರಿ ಉಪ್ಪಿನಕಾಯಿ ರಸವು,

ಖೀರು ಮಾಲುತಿ ಗೌರಿ ಪರಡಿ ಪರಮಾನ್ನ.
ಮುಕ್ಸೋರಿ ಚಟ್ಟಣಿ ಕೋಸಂಬರಿಯೂ;
ಹಾಕಲದ್ದಿರಿ ಸೌತೆ ಹಂದರವದರಿ ಚವಳಿ,
ಬಾಳಿ ಬೆಂಡಿಯು ಕುಂಬಳವು,
ಮಾಗಿದ್ದ ಲಸಿನಕಾಯಿ ಕಲಸು ಮೇಲೋಗರ,
ಗೆಣಸು ಗುಳ್ಳದಕಾಯಿ ಕಲಸು ಮೇಲೋಗರ,
ಸಬಕಿಬಾತು ಸೌತೆ ಬಾತು ಕೇಸರಿಭಾತು,
ಕೆನೆ ಕೆನೆ ಮೊಸರು—ಒಗ್ಗರಣೆ.
ಹಸಿ ಅಲ್ಲ ಬಿಸಿ ಹಾಲು ಹೊಸ ಬೆಣ್ಣೆ,
ಇಂಗುಪ್ಪು ಕಲಿಸಿ ಬಕಾಳಿ ಭಾತುಗಳು,

ಮನುಷ್ಯನು ತನ್ನ ಇಷ್ಟ ದೈವವನ್ನು ನಂಬಿ ಜೀವನವನ್ನು ಉದ್ಧರಿಸಿಕೊಳ್ಳ ಬೇಕು ಎಂಬ ದಾಸರ ವಾಣಿಯಂತೆ ಭೀಮವ್ವನವರು ತಮ್ಮ ಇಷ್ಟ ದೈವ ಕುಲಸ್ವಾಮಿ ಯನ್ನು ಕೊಂಡಾದಿದ್ದಾರೆ.

ಶ್ರೀ ತಿಮಲಾಪುರದಯ್ಯ ತಮ್ಮ ಕುಲಸ್ವಾಮಿ ಎಂದು ಈ ಹಾಡಿನಲ್ಲಿ ತಿಳಿಸಿ ದ್ದಾರೆ.

ಕಂಡೂ ಧನ್ಯನಾದೆ ನಂದ ತನಯುನಾ, ಕಣ್ಣಾರೆ ಕಂಡು,
ಕಂಡು ಧನ್ಯನಾದೆ ದಣಿಯುವೆನ್ನ ಎರಡು ಕಂಗಳೀಗೆ,
ತಿರುಗಿ ಪೋಗಲಾರೆ ತಿಮಲಾಪುರೀಶ ದೊರೆಯ ಬಿಟ್ಟು, ಪ,
ಸಾಲು ದೀವಿಗಿ ಸಣ್ಣನಾಮು ಸರದ ಮಧ್ಯ ವೈಜಯಂತಿ,
ಸೂರ್ಯನಂತೆ ಹೊಳೆವೂ ಮುದ್ದು ಮುಖವು ಮಹಾದ್ವಾರದಲ್ಲೆ,
॥ಕಂಡು॥

ಶಂಖ ಚಕ್ರ ಶ್ಯಾಮವರುಣ ಅಂಕಿತವುಳ್ಳ ನಾಮುಗಳಿಂದ,
ಪಂಕಜಾಕ್ಷ ಪರಮ ಪುರುಷ ವೆಂಕಟವೆಂಬೊ,
ನಾಮಾಂಕಿತದವನಾ (ಕಂ)
ಆ ಮಹಾ ವೈಕುಂಠದಲ್ಲಿ ವಾಸವಾದ ನಮ್ಮ ಕುಲ
ಸ್ವಾಮಿ ಎನಿಸಿಕೊಂಡ ಭೀಮೇಶ ಕೃಷ್ಣನ
ದಂತುದಿಂದೀಗ (ಕಂ)

ಭೀಮವ್ವನವರು ಬೆಳಗಿನ ಜಾವ ಉದಯರಾಗದಿಂದ ಹಾಡಲು ಅನುಕೂಲ ವಾಗುವಂತೆ ಅನೇಕ ಸ್ತೋತ್ರಗಳನ್ನೂ ಸ್ತುತಿ ಮಣಿ ಮಾಲಿಕೆ, ಉಗಾಭೋಗ ಸುಳಾದಿ ಗಳನ್ನೂ ರಚಿಸಿದ್ದಾರೆ. ಭಕ್ತಿ ಸಂಪ್ರದಾಯದವರ ಮಾನ್ಯರು ಕರಿ, ದೈವ, ಬಲಿ

ಪಾಂಚಾಲಿ, ಅಹಲ್ಯೆ. ಪ್ರಹ್ಲಾದ, ನಾರದ, ಪರಾಶರ ಭೀಷ್ಮ, ರುಕ್ಮಾಂಗದ ಅಜಮಿಳ ಮುಂತಾದವರನ್ನು ಉಲ್ಲೇಖಿಸಿದ್ದಾರೆ. ತೀರ್ಥಕ್ಷೇತ್ರಗಳನ್ನೂ ಅವುಗಳ ಮಹಿಮೆಗಳನ್ನೂ ಸಾರಿದ್ದಾರೆ. ಪಂಢರಪುರದ ವಿಠಲನ ಮೇಲೆ ಈ ರೀತಿ ರಚಿಸಿದ್ದಾರೆ.

ಪಂಡರಿಪುರಿವಾಸ ಪಾಲಿಸೋ ಶ್ರೀಶ,
ಶ್ರೇಷ್ಠ ಭಕ್ತನು ಕೊಟ್ಟ ಇಟ್ಟಿಕಲ್ಲಿನ ಮ್ಯಾಲೆ ಗಟ್ಯಾಗಿ,
ನಿಂತಿದ್ದೋ ವಿಠೋಬದಯಮಾಡೋ,
ಎನ್ನುತ್ತ "ಸೃಷ್ಟಿ ಸ್ಥಿತಿಯು ಜನ ಸಂರಕ್ಷಣೆ ಮಾಡಿ ನಿನ್ನ,
ರಟ್ಟೆ ಸೋತಾವೇನೋ: ಟೊಂಕಾಕಿಟ್ಟು ಕೈಯನು ನಿಂತೀ"
ಭೀಮೇಶ ಕೃಷ್ಣನ ಧ್ಯಾನ, ಕೊಡೊಪ್ಪೊದ್ವೈಕುಂಠ ಸ್ಥಾನ (ಪಲ್ಲ)

ಅಲ್ಲದೇ ಮಂತ್ರಾಲಯದ ಶ್ರೀ ಗುರು ರಾಘವೇಂದ್ರರನ್ನೂ, ಮಳಖೇಡದ ಟೀಕಾರಾಯರನ್ನೂ ಸ್ತುತಿಸಿದ್ದಾರೆ.

ಭೀಮವ್ವನವರ ಶೈಲಿಯು ಜೀವಂತ ಪ್ರಜ್ಞೆಯುಳ್ಳ ಸತ್ತ್ವವುಳ್ಳ ಶೈಲಿ ತಾವು ಕಾಣುತ್ತಿರುವ ಸಮಾಜ, ಪರಿಸರದ ಭಾಷೆಯನ್ನೇ ಸಶಕ್ತವಾಗಿ ಸಮರ್ಪಕವಾಗಿ ಬಳಸಿಕೊಂಡಿದ್ದಾರೆ. ಪದಬಂಧಗಳ ಲಾಲಿತ್ಯ ಹಾಗೂ ಸರಳತೆಗಳು ಅವರ ಶೈಲಿಯ ವಿಶೇಷವೆನ್ನಬಹುದು.

ಕವಯಿತ್ರಿ ಭೀಮವ್ವನವರು 1903 ಜನವರಿ 11ನೇ ತಾ. ಶಾಲಿವಾಹನ ಶಕ 1824 ಶುಭ ಕೃತನಾಮ ಸಂವತ್ಸರ ಪುಷ್ಯ ಶುದ್ಧ 12 ಆದಿತ್ಯವಾರ ಮುಕ್ಕೋಟಿ ದ್ವಾದಶಿಯ ಮಧ್ಯಾಹ್ನ 2-20ಕ್ಕೆ ಸ್ವರ್ಗಸ್ಥರಾದರು. ಅವರು ಈಗ ನಮ್ಮೊಡನೆ ಇಲ್ಲ ಆದರೆ ಅವರ ಅನುಭವ ವಿಪುಲ ಸಾಹಿತ್ಯ ಅಮರವಾಗಿ ಅದರ ಕತೃತ್ವ ಶಕ್ತಿಯ ಅರಿವು ಉಂಟು ಮಾಡಿಕೊಡುತ್ತಿವೆ.

19ನೇ ಶತಮಾನದ ಮನೆಬಿಟ್ಟು ಹೊರಗೆ ಹೊರಡಲಾರದಂತಹ ಮಡಿವಂತಿಕೆಯ ಪರಿಸ್ಥಿತಿಯಲ್ಲೂ ತಾವು ಕಂಡುಂಡ ಅತ್ಯಂತ ಸೀಮಿತ ಅನುಭವಗಳಲ್ಲಿ ಶಾಸ್ತ್ರ ಪುರಾಣಗಳ ಹಿನ್ನೆಲೆಯಲ್ಲಿ ಕಾವ್ಯ ರಚಿಸಿದ್ದು ನಿಜಕ್ಕೂ ಶ್ಲಾಘನೀಯ ಸಾಹಸವೇ ಎನ್ನಬಹುದಾಗಿದೆ. ಅನಕ್ಷರಸ್ಥರಾದ ಭೀಮವ್ವನವರಲ್ಲಿ ಪಾಂಡಿತ್ಯವಿತ್ತು. ಸುಸಂಸ್ಕೃತಿ ಇತ್ತು. ಕವಿತಾ ಪ್ರತಿಭೆ ಇತ್ತು, ಮುಖ್ಯವಾಗಿ ದೈವಭಕ್ತಿಯೂ ಇತ್ತು. ಈ ಆರಾಧನಾ ಭಾವವೇ ಅವರ ಎಲ್ಲ ಹಾಡುಗಳ ಒಟ್ಟು ಧ್ವನಿಯಾಗಿದೆ.

"ಹರಿದಾಸರ ಕಥೆಗಳು" ಎಂಬ ಪುಸ್ತಕದಲ್ಲಿ ಕಮಲದಾನಿ ಗುರುರಾಯರು ಭೀಮವ್ವನವರ ಬಗ್ಗೆ ಎತ್ತಿರುವ ಉದ್ಗಾರ—

"ಕರ್ನಾಟಕ ಭಾಷೆಯಲ್ಲಿ ಇಷ್ಟು ಗ್ರಂಥ ಬರೆದ ಹೆಣ್ಣು ಮಕ್ಕಳು ಇನ್ನೆಲ್ಲಿಯೂ ದೊರೆಯಲಾರರು. ಆದರೆ ಅವೆಲ್ಲ ಹಾಡಿನ ರೂಪದಿಂದ ಇರುವುದರಿಂದ ಇವನ್ನು ಯಾರೂ ಲಕ್ಷ್ಯಕ್ಕೆ ತಂದುಕೊಂಡಂತೆ ಕಾಣುವುದಿಲ್ಲ" ಎಂಬುದು ಅಕ್ಷರಶಹ ಸತ್ಯ.

"ಭೀಮೇಶ ಕೃಷ್ಣಾಯ ನಮಃ"

————

ದಾಸಾಧ್ಯಯನದ ಕೆಲವು ಸಮಸ್ಯೆಗಳು ಮತ್ತು ಪರಿಹಾರ

ಡಾ. ಶ್ರೀನಿವಾಸ ಹಾವನೂರ

ತುಂಬಿ ಹರಿಯುವ ತುಂಗಭದ್ರೆ. ಅದರ ದಡದಲ್ಲಿ ನಿಂತು, ಹೇಗೆ ದಾಟಬೇಕು-ಎಂಬುದು ಸಮಸ್ಯೆ. ಇಂಥದೇ ಸಮಸ್ಯೆ ದಾಸ ಸಾಹಿತ್ಯದ ಅಧ್ಯಯನದ ವಿಚಾರದಲ್ಲಿ ನನಗಿದೆ. ಮೇಲಾಗಿ ದಾಸ ಸಾಹಿತ್ಯವಾಹಿನಿಗೆ ಹೊಸ ನೀರು ಸೇರಿಕೊಳ್ಳುತ್ತಲೇ ಇದೆ. ಅದರಿಂದ ಸಮಸ್ಯೆ ಜಟಿಲವಾಗುತ್ತ ಸಾಗಿದೆ.

ದಾಸ ಸಾಹಿತ್ಯದ ಉದಯ ಎಂದಿನಿಂದ-ಎಂಬುದರಿಂದ ಸಮಸ್ಯೆಯ ಪ್ರಾರಂಭ. ಮೊದಲ ಹಾಗೂ ದ್ವಿತೀಯ ಘಟ್ಟದ ನಡುವೆ ಇಷ್ಟೊಂದು ಅಂತರ ಏಕೆ? ಒಂದೇ ಹಾಡು-ಇಬ್ಬಿಬ್ಬರು ದಾಸರ ಅಂಕಿತದಲ್ಲಿದೆಯಲ್ಲ—ಇದು ಹೇಗೆ? "ಗುಂಡಕ್ರಿಯಾ"ದ ಮೂಲ ಯಾವುದು? "ಸರಕು ಒಪ್ಪಿಸಿದ ಮ್ಯಾಲೆ ಸುಂಕವುಂಟೆ ದೇವ"—ಈ ಸೊಗಸಾದ ಉಕ್ತಿ ಯಾರದ್ದೆಂದು ಥಟ್ಟನೆ ಹೇಗೆ ಗುರುತಿಸಬಹುದು? ಇಂಥ ಸಂದೇಹಗಳು ಅನೇಕವಿದ್ದು ಪ್ರತಿ ಘಟ್ಟದಲ್ಲಿಯೂ ತೋರಿ ಬರುತ್ತವೆ. ಯಾವದೊಂದು ವಾಙ್ಮಯ ಅಪಾರವಿದ್ದಾಗ ಮತ್ತು ಅದರ ಅಧ್ಯಯನಕ್ಕೆ ನೆರವಾಗುವಂಥ ಆಕರಗಳು ಇರದಿದ್ದಾಗ ಇಂತಹ ಸಂದೇಹ ಸಮಸ್ಯೆಗಳು ನನಗೊಬ್ಬನಿಗೇ ಏಕೆ, ಇತರರಿಗೂ ತೋರಿಬಂದಾವು.

ಅಭ್ಯಾಸವು ಸುಕರವಾಗಬೇಕಾದರೆ ಆ ವಿಷಯದ ಆಯಾಮಗಳೇನು ಎಂಬುದನ್ನು ಮೊದಲಿಗೆ ಗುರುತಿಸಿಕೊಳ್ಳಬೇಕು. ಆಗ ಸಮಸ್ಯೆಗಳನ್ನು ಆ ಆ ಚೌಕಟ್ಟಿನಲ್ಲಿ ಅಡಕಗೊಳಿಸಿದರೆ ಉತ್ತರವನ್ನು ಕಂಡುಕೊಳ್ಳುವುದು ಸುಲಭ. ನನ್ನ ದೃಷ್ಟಿಯಲ್ಲಿ ದಾಸಾಧ್ಯಯನದ ಆಯಾಮ ಅಥವಾ ಪ್ರಮೇಯಗಳು ಇಂತಿವೆ.

1) ಚಾರಿತ್ರಿಕ : ದಾಸ ಸಾಹಿತ್ಯದ ಇತಿಹಾಸ : ದಾಸರ ಇತಿ ವೃತ್ತ.
2) ತಾತ್ವಿಕ ನೆಲೆಗಟ್ಟು : ಮಧ್ವಮತದ ತತ್ವಗಳು.
3) ಅಭಿವ್ಯಕ್ತಿಯ ಮಾಧ್ಯಮ : ಸುಳಾದಿ, ಉಗಾಭೋಗ, ದಂಡಕ ಇತ್ಯಾದಿ.
4) ವಿಷಯ : ಆತ್ಮ ನಿವೇದನೆ, ಭಕ್ತಿ, ಲೋಕನೀತಿ, ಇ.
5) ಕಾವ್ಯಗುಣ : ದಾಸರ ಸ್ವೋಪಜ್ಞತೆ.[2]

ಒಂದೊಂದಾಗಿ ನೋಡೋಣ.

---

2. ಇದಕ್ಕೆ ಸಂಗೀತವನ್ನೂ ಸೇರಿಸಬಹುದು. ಅದರ ವಿವೇಚನೆಯನ್ನು ಇಲ್ಲಿ ಮಾಡಿಲ್ಲ.

1) ಚಾರಿತ್ರಿಕ ಹಿನ್ನೆಲೆ : ದಾಸ ಸಾಹಿತ್ಯಕ್ಕೆ ೭-೮ ನೂರು ವರ್ಷಗಳ ಹರಹು ಇರುವುದರಿಂದ ಅದರ ಚರಿತ್ರೆಯಲ್ಲಿ ಕಾಲ ಖಂಡಗಳನ್ನು ಮಾಡಿಕೊಳ್ಳುವುದು ಅವಶ್ಯ. ಸದ್ಯಕ್ಕೆ ಪ್ರಥಮ ಘಟ್ಟ (ಕ್ರಿ.ಶ. ೧೭೦೦ ರವರೆಗೆ), ದ್ವಿತೀಯ ಘಟ್ಟ (ವಿಜಯದಾಸರ ಕಾಲದಿಂದ) —ಎಂಬೆರಡು ಬಳಕೆಯಲ್ಲಿವೆ. ಸ್ಥೂಲವಾಗಿ ಇದು ಸರಿಯೇ. ಆದರೆ ಸುಮಾರು ಮುನ್ನೂರು ವರ್ಷಗಳ ದೀರ್ಘಕಾಲದ ಮೊದಲ ಘಟ್ಟದಲ್ಲಿ ಉದಯ, ಏರಿಕೆ ಹಾಗೂ ಇಳಿಗಾಲ—ಇರುವುದನ್ನು ನೆನೆದಿರಬೇಕು. ಈ 'ಉದಯ' ಕಾಲದ ಉಗಮ ಯಾವಾಗಿನಿಂದ ಅನ್ನುವುದೇ ಸಂದಿಗ್ಧವಾಗಿದೆ. ಅಚಲಾನಂದ ದಾಸರ ಆದ್ಯತನ ಈಗ ಹಿಂದೆ ಬಿದ್ದಂತಾಯಿತು. ನರಹರಿತೀರ್ಥರು? ಅವರು ಮೂಲತಃ ಉತ್ತರ ಹಿಂದುಸ್ಥಾನದವರು. ಅವರ ಹೆಸರಿನಲ್ಲಿರುವ ಎರಡೇ ಹಾಡುಗಳ ಶೈಲಿ ಇತ್ತೀಚಿನದೆನಿಸುವುದು. ಇನ್ನು ಇವರಿಬ್ಬರ ಅನಂತರ ಕೇಳಿಬರುವ ಹೆಸರು ಶ್ರೀಪಾದ ರಾಜರದು. (೧೫ನೇ ಶತ) ದಾಸ ಸಾಹಿತ್ಯ ಪರಂಪರೆಯನ್ನು ಹೇಳುವ ಶ್ಲೋಕ 'ನಮಸ್ತೇ ಶ್ರೀಪಾದರಾಜಾಯ' ಎಂದೇ ಆರಂಭವಾಗುತ್ತದೆ. ಆದರೆ ವಿಠಲಾಂಕಿತವಾದ ಅವರ ಹಾಡುಗಳನ್ನು ಗಮನಿಸಿದಾಗ, ದಾಸವಾಙ್ಮಯವು ಅವರ ಕಾಲಕ್ಕೆ ಪ್ರೌಢಸ್ಥಿತಿ ಯಲ್ಲಿ ಇತ್ತೆಂದೇ ಹೇಳಬೇಕಾಗುವುದು. ಅವರಿಗಿಂತ ನೂರು ವರ್ಷ ಮೊದಲೇ ದಾಸ ಸಾಹಿತ್ಯ ಆರಂಭವಾಗಿರಬೇಕು. ಯಾರಿಂದ?

ಹಾಗಿದ್ದರೆ ಶ್ರೀ ಮಧ್ವಾಚಾರ್ಯರಿಂದ ಆರಂಭವಾಯಿತೆನ್ನೋಣವೆ? ಅವರ 'ದ್ವಾದಶ ಸ್ತೋತ್ರ'ದಲ್ಲಿಯೆ ದಾಸ ಸಾಹಿತ್ಯದ ಉಗಮವಿದೆ—ಎಂದು ಹೇಳುವು ದುಂಟು, ಈ ಸ್ತೋತ್ರದ ಮೂಲಕ ಗೀತರೂಪದಲ್ಲಿ ಭಗವಂತನ ಸ್ತೋತ್ರ ಮಾಡು ವುದನ್ನು ಮಧ್ವಾಚಾರ್ಯರು ರೂಢಿಸಿದರೆಂಬುದು ನಿಜ. ದಾಸಪೀಳಿಗೆಗೆ ಭದ್ರವಾದ ತಾತ್ವಿಕ ನೆಲೆಗಟ್ಟನ್ನು ಒದಗಿಸಿದರೆಂಬುದೂ ಅಷ್ಟೇ ನಿಜ. ಆದರೆ ದಾಸರ ಹಾಡುಗಳ ಮುಖ್ಯ ಲಕ್ಷಣಗಳೆಂದರೆ ಅವು ಕನ್ನಡದಲ್ಲಿರಬೇಕು ಮತ್ತು ವಿಠಲಾಂಕಿತವಿರಬೇಕು. ಮಧ್ವಾಚಾರ್ಯರು ತುಳು ಅಥವಾ ಕನ್ನಡದಲ್ಲಿ ಭಗವಂತನ ಸ್ತೋತ್ರ ಮಾಡಿದರೆನ್ನು ವುದಕ್ಕೆ ದೂರದ ಪುರಾವೆಯೇ ಆಗಲಿ, ಇದೆಯೆ? 'ವಿಠ್ಠಲ' ಶಬ್ದವು ಅದರ 'ಸರ್ವ ಮೂಲ' ಗ್ರಂಥ ಸಮುದಾಯದಲ್ಲಿ ಕಂಡುಬರುತ್ತಿಲ್ಲ.[3]

ವ್ಯಾಸರಾಯರ ಕಾಲಕ್ಕೆ ಗುರು ಇಲ್ಲವೆ ಹಿರಿಯ ದಾಸರ ಮೂಲಕ ದೀಕ್ಷಾ-ಸ್ವೀಕಾರ, ವಿಠಲ ನಾಮಕ್ಕೆ ಅಂಕಿತ ಪ್ರದಾನ ಇವು ನೆಲೆಗೊಂಡಿದ್ದುವು. ಹಾಗೂ (ದಾಸಕೂಟ, ವ್ಯಾಸಕೂಟಗಳೇರ್ಪಟ್ಟು) ಜನಾಭಿಮುಖವಾದ ದಾಸವಾಙ್ಮಯಕ್ಕೆ ಪಾಂಡಿತ್ಯ ಪೀಠದ ಬದಿಯಲ್ಲಿಯೆ ಸ್ಥಾನ ದೊರೆಯಿತು. ಆದರೆ ಶ್ರೀಪಾದರಾಜರ

3. 'ವಿಠಲ' ಶಬ್ದವು 'ವಿಷ್ಣು' ಇದರ ಪ್ರಾಕೃತ ರೂಪವಾದ್ದರಿಂದ ಅವರು ಅದನ್ನು ಬಳಸಿರಲಿಕ್ಕಿಲ್ಲವೆ ?

ಕಾಲಕ್ಕೇನೆ ಆ ಮನ್ನಣೆ ತಕ್ಕಮಟ್ಟಿಗೆ ದೊರೆತೇ ಇತ್ತೆನ್ನಬೇಕಾಗುತ್ತದೆ. ಆದಕ್ಕೆ ಸ್ವಾಮಿಗಳಾದ ಅವರೇ ಕೀರ್ತನೆಗಳನ್ನು ವಿಪುಲವಾಗಿ ರಚಿಸಿದುದು ಸ್ಪಷ್ಟ ನಿದರ್ಶನ. ಇಂತು ದೀಕ್ಷಾಸ್ವೀಕಾರ, ವಿಠಲನಾಮಕ ಅಂಕಿತ ಪ್ರದಾನ ಇವಾದರೂ ಎಂದಿನಿಂದ ಮೊದಲಾದುವೆಂಬುದು ನಿಗೂಢವಾಗಿ ಉಳಿದಿದೆ.

ದ್ವಿತೀಯ ಘಟ್ಟದ ಪ್ರತಿನಿಧಿ ವಿಜಯದಾಸರೆಂಬುದು ನಿರ್ವಿವಾದದ ವಿಷಯ, ಶ್ರೀಪಾದರಾಜರು ಮತ್ತು ಪುರಂದರದಾಸರ ಮಕ್ಕಳ ಕಾಲ ಮುಗಿದ ಮೇಲೆ ೧೫೦ ವರ್ಷಗಳ ದೀರ್ಘ ಕತ್ತಲೆಯ ಅವಧಿ ಕಂಡುಬರುವದೆಂದು ಹೇಳುವೆವು. ಮೇಲು ನೋಟಕ್ಕೆ ಇದು ಸರಿ. ಆದರೆ ಈ ಮಧ್ಯ ಇದ್ದ ಪ್ರಸನ್ನ ವೆಂಕಟದಾಸರು ಹಾಗೂ ಮಹಿಪತಿ-ದಾಸರನ್ನು ಯಾವ ಘಟ್ಟದಲ್ಲಿ ಸೇರಿಸಬೇಕು ? ಇವರಿಬ್ಬರೂ ವಿಜಾಪುರ ಜಿಲ್ಲೆಯವರು ; ವಿಜಯದಾಸರು ಅದಕ್ಕೂ ಉತ್ತರದವರು. ಮಧ್ಯ ಕರ್ನಾಟಕದಲ್ಲಿ ಅಥವಾ ಉತ್ತರ ಭಾಗದಲ್ಲಿಯೇ ಆಗಲಿ ಇನ್ನೂ ಕೆಲವು ದಾಸರಿದ್ದಿರಲೂ ಸಾಕು, ನಮಗೆ ಮಾತ್ರ ಅವರ ಹೆಸರು-ಹಸ ಗೊತ್ತಿಲ್ಲ, ಅಷ್ಟೆ. ಅಂದಾಗ ಎರಡು ಘಟ್ಟಗಳ ಮಧ್ಯದಲ್ಲಿ ದೊಡ್ಡ ಕತ್ತಲೆ ಕವಿದಿಲ್ಲ. ಇಂಥ ಅಜ್ಞಾತರನ್ನು ಬೆಳಕಿಗೆ ತರುವ ಬಗ್ಗೆ ವಿಶೇಷ ಪ್ರಯತ್ನ ನಡೆಯಬೇಕು-ನಡೆಸುವುದು.

ಈ ಹಿನ್ನೆಲೆಯಲ್ಲಿ ಶ್ರೀ ರಾಘವೇಂದ್ರಸ್ವಾಮಿಗಳು ಎಷ್ಟರ ಮಟ್ಟಿಗೆ ದಾಸ ಸಾಹಿತ್ಯದ ಪೋಷಕರಾದರೆಂಬುದನ್ನೂ ಪರಿಶೀಲಿಸಬೇಕು.[4] ಪ್ರಸನ್ನ ವೆಂಕಟರಾಗಲೀ, ಮಹಿಪತಿ-ದಾಸರಾಗಲೀ, ಅವರನ್ನು ನೆನೆದಿಲ್ಲ. ಆ ಪ್ರಸಂಗ ಬರುವಂತೆಯೂ ಇರಲಿಲ್ಲವೇನೊ. ಅನಂತರ, ಶ್ರೀ ರಾಘವೇಂದ್ರರನ್ನು ಸ್ತುತಿಸಿದ ಮೊದಲಿಗರೆಂದರೆ, ವಿಜಯದಾಸರು. ಅವರ ಕಾಲ ಶ್ರೀ ರಾಘವೇಂದ್ರರು ವೃಂದಾವನಸ್ಥರಾದ ಅರ್ಧ ಶತಮಾನದ ಅನಂತರದವರು. ಶ್ರೀ ರಾಘವೇಂದ್ರರು ನಾಡಿನ ಉತ್ತರ ಭಾಗದಲ್ಲಿ ಆಚಾರ್ಯ ಮಧ್ವಪ್ರಣೀತ-ವಾದ ವೇದಾಂತ ಧರ್ಮವು ನೆಲೆಗೊಳ್ಳಲು ಕಾರಣರಾದದ್ದು ನಿರ್ವಿವಾದದ ಮಾತು. ಅವರು ರಚಿಸಿದ ಒಂದು ದೇವರ ನಾಮವೂ ಸುಪ್ರಸಿದ್ಧ. ಆದರೆ ದಾಸರಾದವರನ್ನು ಕರೆಯಿಸಿ, ಮಠದಲ್ಲಿ ಹಾಡು ಹೇಳಿಸುವ ಪರಂಪರೆಯಾಗಲೀ, ಶ್ರೀ ರಾಘವೇಂದ್ರರಿಂದ ಪ್ರೋತ್ಸಾಹವನ್ನು ಹೊಂದಿ, ಅವರನ್ನು ಸ್ತುತಿಸಿದ ಸಮಕಾಲೀನ ದಾಸರಾಗಲೀ ಇದುವರೆಗೆ ಕಂಡುಬಂದಿಲ್ಲ. ಅದು ಹೀಗಿದ್ದರೆ ಶ್ರೀ ರಾಘವೇಂದ್ರಸ್ವಾಮಿಗಳ ಪ್ರೋತ್ಸಾಹ, ಪ್ರೇರಣೆಯ ಅಂಶ ಇನ್ನಷ್ಟು ಖಚಿತವಾಗುವುದಿತ್ತು.

---

4. ಈ ಅಭಿಪ್ರಾಯವನ್ನು ರಾ. ಸ್ವಾ. ಪಂಚಮುಖಿಯವರು ತಮ್ಮ 'ಕರ್ನಾಟಕ ಹರಿದಾಸ ಸಾಹಿತ್ಯ' ಗ್ರಂಥದಲ್ಲಿ ವ್ಯಕ್ತಪಡಿಸಿದ್ದಾರೆ.

ಅನಂತರ ವಿಜಯದಾಸರ ಶಿಷ್ಯ-ಪ್ರಶಿಷ್ಯ ಪರಂಪರೆ ಮುಂದುವರಿದು, ಪ್ರಾಣೇಶ ದಾಸರವರೆಗೆ, ಎಂದರೆ ೧೯ ನೆಯ ಶತಮಾನದ ಕೊನೆಯವರೆಗೆ ನಮಗೆ ಸಾಕಷ್ಟು ದಾಸರ ಕೃತಿಗಳು ದೊರೆಯುತ್ತವೆ—ಗೊರಾಬಾಳ ಹನುಮಂತರಾಯರ ಅವಿಶ್ರಾಂತ ಕಾರ್ಯ ದಿಂದ. ಅವರು ಕಂಡು ಹಿಡಿದ ದಾಸರೆಲ್ಲ ಉತ್ತರದಲ್ಲಿದ್ದವರು. ಆದರೆ ನಾಡಿನ ದಕ್ಷಿಣದ ಕಡೆಗೆ ಇದ್ದವರು ? ಹಳೆಯ ಮೈಸೂರು ಮತ್ತು ಕನ್ನಡ ಜಿಲ್ಲೆಗಳಲ್ಲಿ ಅದಾ ಗಲೇ ದಾಸ ಪರಂಪರೆ ಆರಂಭವಾಗಿದ್ದಿತು. ದಕ್ಷಿಣ ಕನ್ನಡ ಜಿಲ್ಲೆಯ ಲಕ್ಷ್ಮೀ ನಾರಣಪ್ಪ ಎಂಬ ಹರಿದಾಸರ ಕೃತಿಗಳು ಈಚೆಗೆ ಪ್ರಕಟವಾಗಿವೆ. ಬೇಲೂರ ಕೇಶವ ದಾಸರು ಮೈಸೂರು ಕಡೆಯ ಕೆಲವು ದಾಸರನ್ನೂ ಹೆಸರಿಸಿದ್ದಾರೆ. ಹೀಗೆ ಬೆರಳೆಣಿ ಕೆಯ ಕೆಲವರ ಹೆಸರು ಕೇಳಬರುವುದಲ್ಲದೆ, ಅತ್ತ ಕಡೆ ಇದ್ದಿರಬಹುದಾದ ಅನೇಕ ಹರಿ ದಾಸರ ಪರಿಚಯ ನಮಗಿಲ್ಲ. ಕ್ರಿ. ಶ. ೧೮೭೪ ರಲ್ಲಿ ಪ್ರಕಟವಾದ, ಮಂಗಳೂರಿನ ತುಪಾಕಿ ವೆಂಕಟರಮಣಾಚಾರ್ಯ ಎಂಬವರ ಕೀರ್ತನೆಗಳ ಅಪೂರ್ವ ಗ್ರಂಥವೊಂದು ಈಚೆಗೆ ಲಂಡನ್ನಿನಲ್ಲಿ ನನಗೆ ನೋಡದೊರೆಯಿತು. ಅವರ ಹೆಸರಾಗಲೀ, ಮುದ್ರಿತ ಗ್ರಂಥವಾಗಲೀ, 'ಕವಿಚರಿತೆ', 'ಗ್ರಂಥಸೂಚಿ'—ಮುಂತಾದ ಯಾವ ಕೃತಿಯಲ್ಲಿಯೂ ಉಲ್ಲೇಖಗೊಂಡಿಲ್ಲ. ಈ ಇಪ್ಪತ್ತನೆಯ ಶತಮಾನದಲ್ಲಿಯೇ, ಇವತ್ತಿಗೂ ಹಾಡು ಗಳನ್ನು ರಚಿಸುವವರಿದ್ದಾರಲ್ಲ ? ಅವುಗಳನ್ನು ಇತರರು ತಿಳಿಯುವ ಬಗೆ ಏನಿದೆ ? ಎಲ್ಲಿಯೊ ಕಾಗದದ ಮೇಲೆ ಬರೆದು ಇಟ್ಟಿರಬಹುದು. ಹತ್ತಿಪ್ಪತ್ತು ವರ್ಷಗಳಾದ ಮೇಲೆ, ಇಲ್ಲವೆ ಅವರು ತೀರಿಹೋದ ಮೇಲೆ, ಅವೆಲ್ಲ ನಶಿಸಿಹೋಗುವವೇ. ಇಂದು ಜನಪದ ಹಾಡುಗಳು ಎಲ್ಲಿಯೇ ಇರಲಿ, ಎಂಥವೇ ಇರಲಿ, ಅವನ್ನು ಸಂಗ್ರಹಿಸುವ, ಪ್ರಕಟಿಸುವ ಇಲ್ಲವೆ ಟೇಪ್‌ರೆಕಾರ್ಡ್ ಮಾಡುವ ಕಾರ್ಯಕ್ಕೆ ಉತ್ಸಾಹ-ಪ್ರೋತ್ಸಾಹಗಳು ಕಂಡುಬರುತ್ತವೆ. ಇಂಥ ಅಭಿಜಾತ ಸಾಹಿತ್ಯಕ್ಕೆ ಮನ್ನಣೆಯೂ ಇದೆ. ದಾಸ ವಾಙ್ಮ ಯವೂ ಒಂದು ಬಗೆಯಲ್ಲಿ ಸಹಜ ಸ್ಫೂರ್ತಿಯಿಂದ ರಚಿತವಾದ ಜನಪದ ಸಾಹಿತ್ಯವೇ. ಅದರ ಪ್ರಕಟನೆಗೆ ಅವಕಾಶ ಸಿಕ್ಕಬೇಕು. ಆದರೆ ಆ ಪರಿಸ್ಥಿತಿ ಸದ್ಯಕ್ಕೆ ಇಲ್ಲ.

೨) ತಾತ್ತ್ವಿಕ ನೆಲೆಗಟ್ಟು : ದಾಸರೆಲ್ಲ ಮಧ್ವಮತವನ್ನು ನೆರೆನಂಬಿದವರು. ಕುರುಬ ಜನಾಂಗದ ಕನಕದಾಸರು, ಅದ್ವೈತಿ-ಇದ್ದಿರಬಹುದಾದ ಮಹಿಪತಿ-ದಾಸರು ಸಹ 'ಹರಿ : ಪರತರ'ವಾದ ದ್ವೈತಸಿದ್ಧಾಂತವನ್ನೇ ನೆಚ್ಚಿಕೊಂಡವರು. ದಾಸರು ದೇವರ ಹೆಸರಿನ ಹಾಡುಗಳೆಂದು, ಸುಮ್ಮನೆ ರಚಿಸಿದವರಲ್ಲ. ಮಧ್ವಮತದ ನೆಲೆಗಟ್ಟಿನ ಮೇಲೆ ನಿಂತು, ಆ ಚೌಕಟ್ಟಿನಲ್ಲಿ ಕೃತಿ ರಚನೆ ಮಾಡಿದವರು. ಆದ್ದರಿಂದ ಅವರ ಕೃತಿಗಳಲ್ಲಿ ಈ ಮತದ ತತ್ತ್ವಗಳು ಅಯಾಚಿತವಾಗಿ, ಓತಪ್ರೋತವಾಗಿ ಬಂದಿವೆ. ಅವು ದಾಸ ವಾಙ್ಮಯದಲ್ಲಿ ಯಾವ ರೀತಿಯಲ್ಲಿ ಪ್ರತಿಬಿಂಬಿತವಾಗಿವೆ, ವಿಶದಗೊಂಡಿವೆ—ಎನ್ನುವು ದನ್ನು ತಿಳಿಯದಲ್ಲದೆ ದಾಸಾಧ್ಯಯನ ಎಂದಿಗೂ ಪರಿಪೂರ್ಣವಾಗಲಾರದು. ಸಂಸ್ಕೃತ ಭಾಷೆಯಲ್ಲಿ ಮಾಧ್ವ ಟೀಕಾನುಟೀಕೆಗಳು ಅಸಂಖ್ಯವಾಗಿ ರಚಿತವಾಗಿದ್ದರೆ, ದಾಸರು ಆ

ಕೆಲಸವನ್ನು ಕನ್ನಡದಲ್ಲಿ ಮಾಡಿದ್ದಾರೆ. ಆ ಅಭಿವ್ಯಕ್ತಿಯರೀತಿ-ಅಧ್ಯಯನ ಯೋಗ್ಯ ವಾದುದು. ಆದರೆ ಇದುವರೆಗೆ ಪ್ರಕಟವಾದ ವಿಮರ್ಶಾತ್ಮಕ ಲೇಖ, ಪುಸ್ತಕಗಳಲ್ಲಿ ಈ ಅಂಶವು ತುಂಡು ಬರಹವಾಗಿ, ತೇಲು ಮೇಲಿನ ವಿವರಣೆಯಾಗಿ ಬಂದಿದೆ. ಇದನ್ನು ವಿಸ್ತರಿಸಿ ಹೇಳಲು ಅನೇಕರಿಗೆ ಏನೊ ಒಂದು ಬಗೆಯ ಅಳುಕು-ಮತೀಯ ಸಂಕುಚಿ ತೆಯ ಆರೋಪ ಬಂದೀತೆಂದು! ಇಲ್ಲಿ ನಮಗೆ ತತ್ವಪ್ರಣಾಲಿ ಮುಖ್ಯವಲ್ಲದೆ, ಬೇ ಉದ್ದೇಶವಿಲ್ಲ. ಕನ್ನಡ ಜೈನ ಸಾಹಿತ್ಯ ಅಥವಾ ವೀರಶೈವ ಸಾಹಿತ್ಯದ ವಿಶೇಷ ಅಭ್ಯಾ ಸವು ಕಾಲೇಜ/ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳಿಗೆ ನೇಮಿತವಾಗಿದ್ದರೆ, ಆ ಮತ ಪಂಥಗಳ ತಾತ್ವಿಕ ವಿವರಣೆಯ ಪುಸ್ತಕಗಳನ್ನು ವಾಚನೀಯ ಪಠ್ಯವಾಗಿ ಹಚ್ಚುತ್ತಾರೆ. ದಾಸ ಸಾಹಿತ್ಯವೂ ಉಚ್ಚ ಮಟ್ಟದ ವ್ಯಾಸಂಗದಲ್ಲಿ ಅಭ್ಯಾಸ ವಿಷಯ—ಎಂದು ಗೊತ್ತಾ ದರೆ, ಮಧ್ವಮತವನ್ನು ವಿವರಿಸುವ ಕೃತಿಯನ್ನೂ ಸೂಚಿಸಬೇಕು. ಅದನ್ನು ವಿದ್ಯಾರ್ಥಿ ಗಳಿಗೆ ವಿವರಿಸಬೇಕು. ಇದೊಂದು ಉದಾಹರಣೆ: ಹಿರಣ್ಯ ಕಶಿಪುವಿನ ವಧೆಯಾದ ಮೇಲೆ ಉಗ್ರನರಸಿಂಹನ ಉಗ್ರತೆಯನ್ನು ಉಪಶಮನಗೊಳಿಸಲು ಪ್ರಹ್ಲಾದನು ತಂತ್ರ ಸಾರೋಕ್ತ ರೀತಿಯಲ್ಲಿ ಪೂಜಿಸಿದನೆಂಬ ಅಂಶ ಶ್ರೀಪಾದರಾಯರ ಒಂದು ಹಾಡಿನಲ್ಲಿ ಬರುತ್ತದೆ. 'ತಂತ್ರಸಾರ'ಕ್ಕೆ ಮಧ್ವಮತ ಪ್ರಣಾಲಿಯಲ್ಲಿ ವಿಶಿಷ್ಟ ಸ್ಥಾನವಿದ್ದು ಅದು ತಿಳಿಯದೆ ಹೋದರೆ ಆ ಹಾಡಿನ ಅರ್ಥವಿಸುವಿಕೆ ಪೂರ್ಣವೆನಿಸದು. ಈ ಬಗೆಯ ತಿಳಿ ವಳಿಕೆಯು ವಿಜಯದಾಸರ ಕಾಲದ ದಾಸ ಕೃತಿಗಳ ಅಧ್ಯಯನದಲ್ಲಿ ಇನ್ನಷ್ಟು ಅಗತ್ಯ ವಾದುದು.

3) ಮಾಧ್ಯಮ: ದಾಸರು ಹೆಚ್ಚಾಗಿ ಆಯ್ದುಕೊಂಡ ಮಾಧ್ಯಮವು ಪಲ್ಲ, ಅನುಪಲ್ಲವಿರುವ ಕೀರ್ತನೆಗಳದ್ದು. ಅದನ್ನುಳಿದು ಉಗಾಭೋಗ, ಸುಳಾದಿ, ದಂಡಕ ವೃತ್ತನಾಮ ಮುಂತಾದವು. ಗಣನೀಯ ಸಂಖ್ಯೆಯಲ್ಲಿವೆ. ತಮ್ಮ ಕೃತಿ ರಚನೆಯಲ್ಲಿ ದಾಸರು ಇಂಥದೊಂದು ಮಾಧ್ಯಮವನ್ನೇ ಏಕೆ ಆಯ್ದುಕೊಂಡರು ? ಆ ಮಾಧ್ಯಮ ದಿಂದಾಗಿ ಅಭಿವ್ಯಕ್ತಿ ಹೆಚ್ಚು ಸಶಕ್ತವಾಗಿದೆಯೆ ?—ಎಂಬೀ ಬಗೆಯ ಪರಿಶೀಲನೆ ಪ್ರಯೋಜನಕಾರಿ. ಈ ಸಂದರ್ಭದಲ್ಲಿ ವಚನ-ಉಗಾಭೋಗಗಳ ಸಂಬಂಧವನ್ನು ಪ್ರಸ್ತಾಪಿಸಬೇಕು. ಅವುಗಳಲ್ಲಿ ಪರಸ್ಪರ ಹೋಲಿಕೆ ಇದೆ ಆದರೆ ವಚನ ಸಾಹಿತ್ಯ ವನ್ನು ಕೇಳಿ/ಓದಿದವರಾಗಿ ಅವುಗಳಂತೆಯೇ ತಾವೂ ಬರೆಯಬೇಕೆಂಬ ಅನುಕರಣ ಪ್ರವೃತ್ತಿ ದಾಸರಲ್ಲಿ ಇದ್ದಿತೆ ? ಅದರಂತೆ ವಚನಗಳಲ್ಲಿಯ ವಿಚಾರಗಳನ್ನು, ಉಕ್ತಿ ಕ್ರಮಗಳನ್ನು ಎಷ್ಟರ ಮಟ್ಟಿಗೆ ದಾಸರು ಸ್ವೀಕರಿಸಿದ್ದಾರೆ ? ಇಲ್ಲವೆ, ಕಾವ್ಯಪ್ರಕಾರ ವೆಂಬ ಮಟ್ಟಿಗೆ ವಚನ-ಉಗಾಭೋಗಗಳ ಸಂಬಂಧವಿದ್ದೀತೆ ? ಈ ಕುರಿತ ವಿವರವಾದ ಅಧ್ಯಯನ ನಡೆಯಬೇಕಾಗಿದೆ. ಈ ಬಗೆಯ ವಿಚಾರ ಸರಣಿಯನ್ನು ಮುಂದುವರಿ ಸಿದರೆ, ನಿಜಗುಣ ಶಿವಯೋಗಿ, ಸಪ್ಪಣ್ಣಸ್ವಾಮಿಗಳು—ಮುಂತಾದ ಶಿವಶರಣರು ರಚಿ ಸಿದ ಕೀರ್ತನೆಗಳಿಗೆ, ಅವರಿಗಿಂತ ಹಿಂದಿನ ದಾಸರ ಹಾಡಗಳಿಗೆ ಅದೆಷ್ಟು ಋಣಿಯಾಗಿರ

ಬೇಕು—ಎಂಬುದನ್ನೂ ವಿವವಾರಗಿ ಪರಿಶೀಲಿಸಬೇಕು. ಈ ಬಗೆಯ ಆಳವಾದ ಸಮಾಲೋಚನೆ ವಚನ-ದಾಸಸಾಹಿತ್ಯದ ವಿಚಾರದಲ್ಲಿ ಆಗಿಲ್ಲ. ಆದದ್ದು, ಅಲ್ಲಿ ಇಲ್ಲಿ ಕಂಡು ಬಂದ ಅಂಶಗಳ, ಮೇಲು ಮೇಲಿನ ಹೋಲಿಕೆ ಮಾತ್ರ.

೪) ವಿಷಯ : ಇದುವರೆಗೆ ಒಬ್ಬೊಬ್ಬ ದಾಸರ ಹೆಸರಿನಲ್ಲಿಯ ಸಂಗ್ರಹಗಳು ಪ್ರಕಟವಾಗಿವೆಯಲ್ಲದೆ, ವಿಷಯವಾರ ಅಲ್ಲ. ದಾಸರ ಹಾಡುಗಳು ಅಪಾರವಾಗಿರುವದ ರಿಂದ ಅವರು ಪ್ರತಿ-ಪಾದಿಸಿದ ವಿಚಾರಗಳನ್ನು ಪರಿಗ್ರಹಿಸಲು, ವಿವಿಧ ವಿಷಯಗಳ ನ್ವಯ ಹಾಡುಗಳನ್ನು ವಿಂಗಡಿಸಿಕೊಳ್ಳಬೇಕಾಗುವುದು. ಅಂಥ ವಿಷಯಗಳು (Topics) ಯಾವವು ? ದಿವಾಕರರು ತಮ್ಮ 'ಹರಿ ಭಕ್ತಸುಧೆ'ಯಲ್ಲಿ ಭಕ್ತಿಭಾವ ಮುಂತಾದ ೨೬ ವಿಷಯಗಳನ್ನು ಕಲ್ಪಿಸಿಕೊಂಡಿದ್ದಾರೆ. ಬೆಟಗೇರಿ ಕೃಷ್ಣಶರ್ಮರು ಆತ್ಮಭಾವ, ಕೃಷ್ಣಲೀಲೆ, ಲೋಕನೀತಿ, ಪೂಜಾತತ್ವ, ಮಾಹಾತ್ಮ್ಯ ಜ್ಞಾನ ಮತ್ತು ಸಂಕೀರ್ಣ—ಹೀಗೆ ಆರು ವಿಷಯಗಳನ್ನು, ಪುರಂದರದಾಸರ ಕೀರ್ತನೆಗಳಿಗೆ ಅನ್ವಯಿಸಿ ರೂಪಿಸಿಕೊಂಡಿದ್ದಾರೆ. ಮೈಸೂರು ವಿಶ್ವವಿದ್ಯಾನಿಲಯದ ದಾಸ ಸಾಹಿತ್ಯದ ಪ್ರಕಟನೆ ಗಳಲ್ಲಿ ಆತ್ಮ ಶೋಧನೆ, ಭಗವಂತನ ಆರಾಧನೆ, ತತ್ವಪ್ರತಿಪಾದನೆ ಮತ್ತು ಉಪದೇಶ-ಎಂಬ ನಾಲ್ಕು ವಿಷಯ/ವಿಭಾಗಗಳಿವೆ. ಇದು ಒಟ್ಟಿನಲ್ಲಿ ಸರಿಯೆಂದು ತೋರುತ್ತದೆ. ಇವು ಒಂದೊಂದರಲ್ಲಿ ಮತ್ತೆ ಉಪ ವಿಭಾಗಗಳನ್ನು ಮಾಡಿಕೊಳ್ಳಬೇಕಾಗುವುದು.

ಇದು ಮೊದಲ ಹೆಜ್ಜೆ. ಮುಂದೆ ದಾಸರ ಸಮಸ್ತ ಕೃತಿ-ಸಮುದಾಯವನ್ನು ಈ ವಿಭಾಗಗಳಲ್ಲಿ ಅಡಕಗೊಳಿಸಿ ಪ್ರಕಟಿಸಿದಾಗ, ನೀತಿಬೋಧೆ, ಕೃಷ್ಣಲೀಲೆ ಮುಂತಾದ ಅಂಶಗಳನ್ನು ವಿವಿಧ ದಾಸರು ಹೇಗೆ ತಂದಿದ್ದಾರೆಂಬುದು ತಿಳಿದು, ಅಭ್ಯಾಸವು ಸುಕರ ವಾಗುತ್ತದೆ. ಹೀಗೆ ವಿಷಯಕ್ಕೆ ಅನುಗುಣವಾದ ಸಂಗ್ರಹಗಳು ಟೀಕೆ ಟಿಪ್ಪಣಿಗಳೊಡನೆ ಪ್ರಕಟವಾಗುವುದು ಅವಶ್ಯವಿದೆ.

೫) ಕಾವ್ಯಗುಣ : ದಾಸರ ಹಾಡುಗಳನ್ನು ಓದುತ್ತಿರುವಾಗ ನಮಗೆ, ಒಂದು ಹಾಡಿನ ಹಾಗೆಯೇ ಇನ್ನೊಂದು ಹಾಡು ಇದೆಯಲ್ಲ–ಎನಿಸುತ್ತದೆ. ಒಂದರಲ್ಲಿ ಬಂದ ವಿಚಾರವೇ ಹಿಂದೆ ಓದಿದ್ದ ಇನ್ನೊಂದರಲ್ಲಿ ಬಂದಂತೆ-ಭಾಸವಾಗುವುದು. ಒಬ್ಬ ದಾಸರ ಪಲ್ಲವಿಯ ಮೊದಲ ಸಾಲು ಇನ್ನೊಬ್ಬರಲ್ಲಿಯೂ ಕಂಡು ಬರುವ ಪ್ರಸಂಗಗಳು ಬೇಕಾದಷ್ಟು ಇವೆ. ಹಾಗೆಂದು, ಪುರಂದರದಾಸ, ವಿಜಯದಾಸ ಮುಂತಾದ ಬೆರಳೆಣಿಕೆ ಯುವರನ್ನು ಬಿಟ್ಟರೆ, ಇತರ ನೂರಾರು ದಾಸರ ಕೃತಿಗಳಲ್ಲಿ ಸ್ವೋಪಜ್ಞತೆಯ ಅಂಶ ಗಳು ಇರಲೇ ಇಲ್ಲವೆ ? ಅವರ ಕೀರ್ತನೆಗಳೆಲ್ಲ ಅನುಕರಣ ಪ್ರೇರಿತವೆ ?

ಒಬ್ಬ ಕವಿಯ ವಿಚಾರ ಅಥವಾ ಉಕ್ತಿಯನ್ನು ಇನ್ನೊಬ್ಬನು ಹೇಳದೆಯೇ ಅನಾಮತ್ತಾಗಿ ಸ್ವೀಕರಿಸುವುದು ಭಾರತೀಯ ಕಾವ್ಯ ಪರಂಪರೆಯ ಲಕ್ಷಣವೇ ಎನ್ನ ಬಹುದು. ಪಂಪ-ರನ್ನರದು ಈ ವಿಷಯದಲ್ಲಿ ಎದ್ದು ತೋರುವ ಉದಾಹರಣೆ. 'ತಿಣೆ

ಕಿದನು ರಾಮಾಯಣದ ಭಾರವರಿ ಘೋರಾಯು' ಎನ್ನುವಷ್ಟು. ವಾಲ್ಮೀಕಿ ರಾಮಾಯಣದ ಅದರಂತೆ ಮಹಾಭಾರತದ ಅವೇ ಕಥಾನಕಗಳು ನೂರಾರು ರೂಪದಲ್ಲಿ ಕಾಣಿಸಿಕೊಂಡೇ ಇವೆ. ಆದರೂ ಒಂದೊಂದರಲ್ಲಿ ಅಷ್ಟಷ್ಟು ಸ್ವೋಪಜ್ಞತೆ ಇಲ್ಲದಿಲ್ಲ.[6] ಅದಕಾರಣ, ಪ್ರತಿಯೊಬ್ಬ ದಾಸರಲ್ಲಿ ಕಂಡುಬರುವ ಕಾವ್ಯ ಸೌಂದರ್ಯ, ಉಕ್ತಿಚಾತುರ್ಯಗಳನ್ನು ಗುರುತಿಸುವ ಕೆಲಸ ನಡೆಯಬೇಕಾಗಿದೆ.

ಪರಿಹಾರ

ದಾಸಾಧ್ಯಯನವು ಸುಕರವಾಗಬೇಕಾದರೆ, ದಾಸ ಸಾಹಿತ್ಯದ ಮೌಲ್ಯಮಾಪನವು ಖಚಿತ ಹಾಗೂ ನಿಷ್ಪಕ್ಷಪಾತವಾಗಿ ನಡೆಯಬೇಕಾದರೆ, ಎರಡು ಪರಿಹಾರ ಮಾರ್ಗಗಳಿವೆ. ಒಂದನೆಯದು, ಕೆಲವು ಸಹಾಯಕ ಗ್ರಂಥಗಳ ಪ್ರಕಟನೆ. ಇನ್ನೊಂದು ಗಣಕಯಂತ್ರ (ಕಂಪ್ಯೂಟರ)ದ ಬಳಕೆ.

ಮೊದಲಿಗೆ 'ದಾಸ ಸಾಹಿತ್ಯ ಚರಿತ್ರೆ'ಯನ್ನು ಸಮಗ್ರವಾಗಿ ವಿಶದಗೊಳಿಸುವ ಬೃಹತ್ ಸಂಪುಟ ಸಿದ್ಧವಾಗಿ ಪ್ರಕಟವಾಗಬೇಕು. (ಮೈಸೂರು, ಬೆಂಗಳೂರು ವಿಶ್ವವಿದ್ಯಾಲಯಗಳು ಹಾಕಿಕೊಂಡು ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ ಯೋಜನೆ ಇದಕ್ಕೆ ಮಾದರಿಯಾಗಬಲ್ಲದು) ಅದರಿಂದ ಅಭ್ಯಾಸಗಳಿಗೆ ದಾಸವಾಙ್ಮಯದ ವಿಶ್ವಕೋಶವೇ ದೊರೆತಂತಾಗುವುದು.

ಇನ್ನೊಂದು ಪ್ರಕಟನೆ—'ದಾಸವಾಙ್ಮಯ ದರ್ಶಿಕೆ'. ಇದರಲ್ಲಿ ಎಲ್ಲ ದಾಸರ ಚರಿತ್ರೆ, ಮುದ್ರಿಕೆ, ಪ್ರತಿಪಾದಿತ ವಿಷಯ, ಇವೆಲ್ಲ ಅಕಾರಾದಿಯಾಗಿ, ಸಂಕ್ಷಿಪ್ತವಾಗಿ ಮತ್ತು ಅಧಿಕೃತವಾಗಿ ನಿರೂಪಗೊಳ್ಳಬೇಕು.[6] ಮೇಲಿನ ಬೃಹತ್ ಸಂಪುಟಕ್ಕೆ ಇದು ಸಹಾಯಕ ಸಾಮಗ್ರಿಯಾಗುವುದು. (Companian Volume) ಮೂರನೆಯದಾಗಿ, ಮಧ್ವಮತದ ತತ್ವಗಳನ್ನು, ಅದರ ವಿಶಿಷ್ಟ ಪ್ರಮೇಯಗಳನ್ನು ತಿಳಿಯಪಡಿಸುವ ಒಂದು ಗ್ರಂಥ, ಸಾಮಾನ್ಯ ವಾಚಕರನ್ನು ಗಮನದಲ್ಲಿರಿಸಿಕೊಂಡು ರಚಿತವಾಗಬೇಕು. ಕೊನೆಯದಾಗಿ, ದಾಸ ಸಾಹಿತ್ಯದ ಕೆಲ ದುರ್ಮಿಳ ಗ್ರಂಥಗಳ ಪುನರ್‌ಮುದ್ರಣವಾಗಬೇಕು.

ಕಂಪ್ಯೂಟರ್ ಬಳಕೆ : ದಾಸ ಸಾಹಿತ್ಯಕ್ಕೆ ಗಣಕ ಯಂತ್ರದ ಬಳಕೆ ಎಂದರೆ, ದಾಸರ ಎಲ್ಲ ಕೃತಿಗಳ ಪ್ರತಿ-ಸಾಲನ್ನು ಕಂಪ್ಯೂಟರಿನಲ್ಲಿ ಹಿಡಿದು ಇಡುವುದು ಸಂಗ್-

---

5. ಜಗತ್ತಿನ ಎಲ್ಲ ರಾಮಾಯಣಗಳನ್ನು ತಮ್ಮ 'ರಾಮಾಯಣದರ್ಶನ'ವು ಮೀರಿಸಿದೆ ಎಂದು ಕುವೆಂಪು ನುಡಿದು, ಅದೆಂತೆಂಬುದನ್ನು ವಿವರಿಸಿದ್ದಾರೆ. ಒಬ್ಬ ಮೊಮ್ಮಗ ತನ್ನ ಅಜ್ಜನ ಹೆಗಲ ಮೇಲೆ ನಿಂತು, 'ಅಜ್ಜಾ, ನಾನು ನಿನಗಿಂತ ಎತ್ತರವಾಗಿದ್ದೇನೆ. ನಿನಗಿಂತ ಹೆಚ್ಚು ದೂರ ನನಗೆ ಕಾಣಿಸುತ್ತದೆ' ಎಂದು ನುಡಿದ ಸಾದೃಶ್ಯ ಕೊಟ್ಟಿದ್ದಾರೆ.

6. ಈ ಬಗೆಯ ಸಂದರ್ಭ ಗ್ರಂಥವನ್ನು ಕ್ರೈಸ್ತರು ೧೯೨೬ ರಲ್ಲಿ ಹೊರತಂದಿದ್ದಾರೆ. ಹೆಸರು : 'ವೇದಕೋಶ-ಹೊಸ ಒಡಂಬಡಿಕೆ' ಅದರಲ್ಲಿ ಬೈಬಲಿನ New Testament ಗೆ ಸಂಬಂಧಿಸಿದ ಎಲ್ಲ ಅಂಶಗಳನ್ನು ವಿಶ್ವಕೋಶದ ಸ್ವರೂಪದಲ್ಲಿ ಕೊಟ್ಟಿದ್ದಾರೆ.

ಸಮಾಸ-ಪ್ರತ್ಯಯಗಳನ್ನು ಬಿಡಿಸಿ. ಜೊತೆಗೆ ಅವನ್ನು ಬರೆದ ದಾಸರ ಹೆಸರು, ಪದ್ಯದ ಹಾಗೂ ಆ ಆ ಸಾಲುಗಳ ಸಂಖ್ಯೆ—ಇವನ್ನು ಸೇರಿಸಬೇಕು. ಸದ್ಯಕ್ಕೆ ಕಂಪ್ಯೂಟರಿಗೆ ರೋಮನ್ ಲಿಪಿ ಮಾತ್ರ ತಿಳಿಯುವುದರಿಂದ ಆ ಲಿಪಿಯಲ್ಲಿ ಅಕ್ಷರೀಕರಣ ಮಾಡಿಕೊಳ್ಳಬೇಕಾಗುವುದು.[7] ಉದಾ. ಗೆ ಇವು ಕೆಲವು ಸಾಲುಗಳು :

—ಕ್ಷೀರ [ಸಾಗರ ಬಿಟ್ಟು ಲವಣ [ಸಾಗರದಲ್ಲಿ ಮನೆಯ ಕಟ್ಟುವರೇನೊ.

(ಗೋಪಾಲದಾಸರು : ೮೩ನೆಯ ಪದ್ಯ : ೨ನೇ ಸಾಲು)

KXSIIRA [SAAGARA BIXTXTU LAVAXNA [SAAGARA DALLI

MANEYA KAXTXRUVAREEN GP083002

—ಕಣ್ಣೀರು ಬಿಡಲಿಲ್ಲ ಕಾಯ/ಸುಖ [ಪಡಲಿಲ್ಲ. (ವಾದಿರಾಜರು : ೭೮ನೆಯ ಪದ್ಯದ 3ನೇ ಸಾಲು)

KAXNXNIIRU BIXDALILLA KAAYA/SUKHA [PAXDALI LLA VD 078003

ಹೀಗೆ ಹಿಡಿದಿಟ್ಟ ಮೇಲೆ ನಮಗೆ ಬೇಕಾದ ದಾಸರ, ಅಥವಾ ಯಾವೊಂದು ವಿಷಯದ ಮೇಲಿನ ಶಬ್ದ/ಸಾಲು/ಹಾಡುಗಳನ್ನು ಕ್ಷಣಾರ್ಧದಲ್ಲಿ ತಪ್ಪಿಲ್ಲದೆ ಹಾಗೂ ಬೇಕಾದಷ್ಟನ್ನ ಕಂಪ್ಯೂಟರಿನಿಂದ ಮರಳಿ ಪಡೆಯಬಹುದು.

ಇದೊಂದು ಬೃಹತ್ ಯೋಜನೆ. ಎಲ್ಲ ಹಾಡುಗಳನ್ನು ಹಾಗೆ ಗಣಕಯಂತ್ರಕ್ಕೆ ಪೂರೈಸುವುದು ಶ್ರಮದ, ಬಹಳಷ್ಟು ಕಾಲಾವಧಿಯನ್ನು ಬೇಡುವ, ಜೊತೆಗೆ ದುಬಾರಿ ವೆಚ್ಚದ ಕೆಲಸ, ಈ ಯೋಜನೆ ಪೂರೈಸಿದ್ದೇ ಆದರೆ. ದಾಸ ಸಾಹಿತ್ಯದ ಅಧ್ಯಯನದ ಯಾವುದೇ ಸಣ್ಣ-ದೊಡ್ಡ ಅಂಶವಿರಲಿ, ಯಾವ ಕಾಲಕ್ಕೇ ಆಗಲಿ, ಅಭ್ಯಾಸಗಳು ಪ್ರಯೋಜನ ಪಡೆಯಬಹುದು—ಬೇಕಾದ ಸಾಮಗ್ರಿ 'ರೆಡಿಮೇಡ್' ಸ್ವರೂಪದಲ್ಲಿ ದೊರೆಯುವುದಾದ್ದರಿಂದ.

ಕಂಪ್ಯೂಟರ್ ವಿಧಾನವೇ ನಮ್ಮ ಜನಕ್ಕೆ ಅಪರಿಚಿತ. ಈ ಕೆಲಸಕ್ಕೆ ಉತ್ಸಾಹೀ ಜನ ಸಿಕ್ಕರೂ, ಧನ ಒದಗುವುದು ಕಷ್ಟದ್ದಾಗಬಹುದು. ಆದರೆ ಅಂಶತಃ ದಾಸರ ಹಾಡುಗಳನ್ನು ಇಲ್ಲವೆ ಶಬ್ದಗಳನ್ನು ಗಣಕ ಯಂತ್ರಕ್ಕೆ ಪೂರೈಸಿಕೊಂಡು ಅಭ್ಯಾಸ

---

7. ದೇವನಾಗರಿ, ಕನ್ನಡ, ಬಂಗಾಲಿ ಮುಂತಾದ ಲಿಪಿಗಳನ್ನು ಸಹ ಕಂಪ್ಯೂಟರಿಗೆ ಅಳವಡಿಸುವ ಯತ್ನ ನಡೆದಿದ್ದು, ಕೆಲವೇ ವರ್ಷಗಳಲ್ಲಿ ಎಲ್ಲ ಭಾರತೀಯ ಲಿಪಿಗಳು ಅದರಲ್ಲಿ ದೊರೆಯಲಿವೆ.

ಕೈಕೊಳ್ಳಬಹುದು. ಉದಾ. ಗೆ ಯಾರೊಬ್ಬ ದಾಸರ ಬಗ್ಗೆ ಪಿ. ಎಚ್. ಡಿ. ಮಾಡ ಬೇಕೆಂದಿದ್ದರೆ, ಅವರ್ಷ್ಟೇ ಹಾಡುಗಳನ್ನು, ಬೇಕಿದ್ದರೆ ತುಲನೆಗೆಂದು ಇನ್ನೊಬ್ಬ ದಾಸರ ಹಾಡುಗಳನ್ನು, ಈ ಯಂತ್ರಕ್ಕೆ ಒದಗಿಸಿ ಇಟ್ಟುಕೊಳ್ಳಬಹುದು. ಮತ್ತು ಆ ದಾಸರು ಉಪಯೋಗಿಸಿದ ಶಬ್ದಗಳ ಅಕಾರಾದಿ ಪಟ್ಟಿಯನ್ನು, ಅವು ಬಂದ ಸಾಲುಗಳೊಡನೆ ಕೊಡಲು ಹೇಳಬಹುದು.

ಹಾಗಿದ್ದರೆ ಇದರ ನಿಶ್ಚಿತ ಪ್ರಯೋಜನ ಏನೆಂದು ಕೇಳಬಹುದು. ಇದೊಂದು ಬಹೂಪಯೋಗಿ ಸಾಧನ ಸೌಲಭ್ಯ. ಕೆಲವು ಉದಾಹರಣೆಗಳಿವು.

(ಅ) ವಾದಿರಾಜರ ಹಾಡೊಂದು ನಿಮಗೆ ಬೇಕಾಗಿದೆ; ಅದರ ಮೊದಲ ಸಾಲು ನಿಮಗೆ ಗೊತ್ತಿದೆ—ಎನ್ನುವ. ಕಂಪ್ಯೂಟರಿಗೆ ನೀವು ಆ ಸಾಲನ್ನು ಮತ್ತು VD (= ವಾದಿರಾಜ) ಎಂಬ ಪದ ಹೇಳಿದರೆ ಸಾಕು. ಅದಷ್ಟನ್ನೇ ತನ್ನ ಟೆಲಿ ಪ್ರಿಂಟರ್ ಮೂಲಕ ತಕ್ಷಣ :

(ಆ) 'ನೀನ್ಯಾಕೋ ನಿನ್ನ ಹಂಗ್ಯಾಕೊ....' ಎಂಬ ಮಾತನ್ನು ಯಾವ ದಾಸರು ಹೇಳಿದ್ದಾರೆ—ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ—ನಿಮಗೆ. ದಾಸರ ಹಾಡುಗಳ ಹತ್ತಾರು ಸಂಗ್ರಹಗಳು ನಿಮ್ಮಲ್ಲಿರಬಹುದು. ಎಲ್ಲವನ್ನೂ ನೀವು ಕೆದಕಬೇಕು. ಅದೇ ಗಣಕ ಯಂತ್ರಕ್ಕೆ ಹೇಳಿದ್ದಾದರೆ, ಕ್ಷಣದಲ್ಲಿ ತಿಳಿಸಿಕೊಡುವುದು—ದಾಸರ ಹೆಸರಿನ ಜೊತೆಗೆ ಆಕರವನ್ನೂ ಹೇಳಬಲ್ಲುದು.

(ಇ) ಭಾಗವತದಲ್ಲಿ ಇಲ್ಲದ, ಈಚೆಗೆ ಮಾತ್ರ ಕಂಡುಬರುವ 'ರಾಧೆ'ಯ ಪ್ರಸ್ತಾಪ ದಾಸರಲ್ಲಿ ಹೇಗೆ ಬಂದಿದೆ? ಇದೊಂದು ಸಮಸ್ಯೆ. 'ರಾಧೆ' ಶಬ್ದವೊಂದನ್ನೆ ಕಂಪ್ಯೂಟರಿಗೆ ಹೇಳಿದರೆ ಸಾಕು. ಅದು ಪದ್ಯ ಸಾಲಿನ ಒಳಗಡೆ ಇದ್ದರೂ ಸರಿಯೇ, ಅದಷ್ಟೇ ಸಾಲುಗಳನ್ನು ಹೆಕ್ಕಿ ತೆಗೆದು, ದಾಸರ ಹೆಸರು ಇತ್ಯಾದಿಯೊಡನೆ ಪ್ರತ್ಯೇಕ ವಾಗಿ ಪಟ್ಟಿಮಾಡಿಕೊಡುತ್ತದೆ.

(ಈ) ದಾಸವಾಙ್ಮಯದ ಭಾಷಾಸ್ವರೂಪವನ್ನು ಅಭ್ಯಸಿಸಬೇಕಾಗಿದೆಯೆ? ಸರಿ, ಅವರು ಬಳಸಿದ ತದ್ಧಿತ, ಕೃದಂತ ಪ್ರತ್ಯಯಗಳ ಮೂಲಕ, ಅಂಥ ಶಬ್ದಗಳನ್ನು ಸಂದರ್ಭ ಸಹಿತವಾಗಿ ಪಡೆಯಬಹುದು.

(ಉ) ವಚನ-ಉಗಾಭೋಗಗಳ ಸಂಬಂಧವನ್ನು ಕಂಡುಹಿಡಿಯುವುದಿದ್ದರೆ, ಎಲ್ಲ ಉಗಾಭೋಗಗಳನ್ನೂ ಪ್ರಾತಿನಿಧಿಕವೆನಿಸುವ ಹತ್ತಾರು ವಚನಗಳನ್ನೂ ಗಣಕ ಯಂತ್ರಕ್ಕೆ ಒದಗಿಸಿರಿ. ಆಮೇಲೆ ಅವೆರಡೂ ಪ್ರಕಾರಗಳಲ್ಲಿ ಬರುವ ಶಬ್ದ ಅಥವಾ ಕೂಡುನುಡಿಗಳನ್ನು (Phrases) ಒಟ್ಟೊಟ್ಟಿಗೆ ಅಕಾರಾದಿಯಾಗಿ ಅದು ಕೊಡಲು ಸಾಧ್ಯ. ಅದರಿಂದ ತುಲನಾತ್ಮಕವಾಗಿ ಅಭ್ಯಾಸ ಮಾಡಲು ಸುಲಭವಾಗುವುದು.

ಇದೇ ವಿಧಾನವನ್ನು, ಒಬ್ಬ ದಾಸರ ಕೃತಿಗಳನ್ನು ಇನ್ನೊಬ್ಬ ದಾಸರ ಕೃತಿಗಳೊಡನೆ ಹೋಲಿಸುವಲ್ಲಿ, ಇಲ್ಲವೆ ಯಾವದೊಂದು ಹಾಡಿನ ಸಂದೇಹಾಸ್ಪದ ಕರ್ತೃತ್ವನ್ನು ಗೊತ್ತುಪಡಿಸುವಲ್ಲಿ ಅನುಸರಿಸಬಹುದು.

ಗಣಕ ಯಂತ್ರವು ಸ್ವಯಂ ಸಂಶೋಧನೆ ಫಲಿತಾಂಶವನ್ನು ಕೊಡುವುದಿಲ್ಲ. ಆದರೆ ಅಂಥ ನಿರ್ಣಯಕ್ಕೆ ಬರಲು ಸಹಾಯಕವಾಗುತ್ತದೆ—ಕಂಪ್ಯೂಟರಿಗೆ ಅಷ್ಟಿಷ್ಟು ಮಾಹಿತಿಯನ್ನು ಪೂರೈಸಿ, ಈಗಾಗಲೇ ಪ್ರಯೋಜನ ಪಡೆದದ್ದಾಗಿದೆ. ಆದ್ದರಿಂದ ಇನ್ನುಮುಂದೆ ದಾಸಾಧ್ಯಯನ ಮಾಡಬಯಸುವವರು, ತಮ್ಮ ವ್ಯಾಸಂಗಕ್ಕೆ ಬೇಕಾದ ಹಾಡುಗಳನ್ನು ಕಂಪ್ಯೂಟರಿಗೆ ಹಾಕಿ ಬಹುರೀತಿಯ ಪ್ರಯೋಜನ ಪಡೆಯಬಹುದು. ಸಂಶೋಧನೆಗೆ ಆಳವನ್ನೂ, ಖಚಿತತೆಯನ್ನೂ ತಂದುಕೊಳ್ಳಬಹುದು.[8]

---

8. ಈ ಕುರಿತ ಹೆಚ್ಚಿನ ಮಾಹಿತಿಗಾಗಿ, 'ಮುದ್ರಣ ಕಂಡ ಶಿವ' ಹಾಗೂ 'ಶಾಸ್ತ್ರಾಭ್ಯಾಸಕ್ಕೆ ಕಂಪ್ಯೂಟರ್ ಸಹಾಯ' ಎಂಬ ಲೇಖನಗಳನ್ನು ನೋಡಬಹುದು.

ಮುಂಬಯಿಯಲ್ಲಿ ಕನ್ನಡ ಶಿಕ್ಷಣ-ಸಾಧನೆ ಹಾಗೂ ಸಮಸ್ಯೆಗಳು

ರಾ. ವೆಂಕಟೇಶಮೂರ್ತಿ
ಮುಂಬೈ

ಮಹಾರಾಷ್ಟ್ರ ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ಅದರಲ್ಲೂ ಮುಂಬಯಿ ನಗರಕ್ಕೆ ಸಂಬಂಧಿಸಿದಂತೆ, ಕನ್ನಡಕ್ಕೆ ಹಕ್ಕುಬದ್ಧ ಗಣ್ಯಸ್ಥಾನವು ದೊರೆತು ಕನ್ನಡಿಗರಿಗೆ ಕನ್ನಡ ಮಾಧ್ಯಮದಲ್ಲಿಯೇ ಶಿಕ್ಷಣ ದೊರೆಯಬೇಕಲ್ಲದೇ ಗತ್ಯಂತರವಿಲ್ಲ. ವಿಭಜನ ಪೂರ್ವದ ಬೊಂಬಾಯಿ ಪ್ರಾಂತದಲ್ಲಿ ಕನ್ನಡ ಭಾಷಾ ಪ್ರಾಧಾನ್ಯ ಜಿಲ್ಲೆಗಳಾದ ಧಾರವಾಡ, ಬೆಳಗಾವಿ, ಬಿಜಾಪುರ ಮತ್ತು ಉತ್ತರ ಕನ್ನಡ ಜಿಲ್ಲೆಗಳು ಸಮಾವೇಶವಿದ್ದು ಮರಾಠಿ-ಗುಜರಾತಿ ಭಾಷೆಗಳೊಂದಿಗೆ ಸರಿಸಮಾನವಾಗಿ ಕನ್ನಡ ಭಾಷೆಗೂ ಮಾನ್ಯತೆಯಿದ್ದ ವಿಷಯವು ಎಲ್ಲರಿಗೂ ತಿಳಿದಿರಬೇಕು. ಈ ಜಿಲ್ಲೆಗಳ ಜನಸಂಖ್ಯೆ...........ಮಾತೃಭಾಷೆಯಾದ ಕನ್ನಡದಲ್ಲೇ ಶಿಕ್ಷಣ ಪಡೆಯುವ ಸೌಲಭ್ಯಗಳಿದ್ದವು. ದಿ॥ ನಾರಾಯಣ ಚಂದಾವರಕರರಂತಹ ಮಹನೀಯರ ಸತತ ಪ್ರಯತ್ನದ ಫಲವಾಗಿ ಸರ್ಕಾರಿ ಗೆಜೆಟ್ಟುಗಳಲ್ಲಿ ಬರುವ ಯಾವುದೇ ಪ್ರಕಟಣೆಗಳು ಬರೀ ಮರಾಠಿ-ಗುಜರಾತಿ ಭಾಷೆಗಳಲ್ಲಿ ಮಾತ್ರವಲ್ಲದೇ ಕನ್ನಡದಲ್ಲೂ ಇರುವಂತಾಗಿತ್ತು. ಕ್ರಮೇಣ ಯಾವ ಕಾರಣದಿಂದಲೋ ಏನೋ (ಇದನ್ನು ತಜ್ಞರು ವಿಚಾರಿಸಬೇಕೆಂದು ನನ್ನ ಅಭಿಪ್ರಾಯ) ಕನ್ನಡ ಭಾಷೆ ಕುಂಠಿತವಾಗ ತೊಡಗಿದ್ದು ಕಂಡು ಬರುತ್ತದೆ. ಏಕೆಂದರೆ ಮುಂಬಯಿ ನಗರ ಸಭೆಯು 1935ರಷ್ಟು ಹಿಂದೆಯೇ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಅಪ್ಪಣೆಯನ್ನು ಮಂಜೂರು ಮಾಡಿದ್ದರೂ ಸಹ ಪ್ರಥಮ ಪುರಸಭಾ ಪ್ರಾಥಮಿಕ ಕನ್ನಡ ಶಾಲೆಯು ಸ್ಥಾಪಿತಗೊಂಡಿದ್ದು 1945ರಲ್ಲಿಯೇ ಎಂಬುದನ್ನು ಗಮನಿಸಿದರೆ ಗೊತ್ತಾಗುತ್ತದೆ.

ಇಂತಹ ಅತೃಪ್ತಿಕರ ಪರಿಸ್ಥಿತಿಯಿದ್ದಾಗಲೇ ಅಂದಿನ ಮುಂಬಯಿ ನಿವಾಸಿ ಕನ್ನಡಿಗರ ಪೈಕಿ ಕೆಲವು ಮಹನೀಯರು ಶಿಕ್ಷಣ ಪದ್ಧತಿಯ ಈ ನೂನ್ಯತೆಯನ್ನು ಗಮನಿಸಿ ಕನ್ನಡಿಗರಿಗೆ ಕನ್ನಡ ಮಾಧ್ಯಮದಲ್ಲಿಯೇ ಶಿಕ್ಷಣವು ದೊರಕಲು ಮಾಡಿದ ಪ್ರಯತ್ನಗಳು ಸ್ತುತ್ಯಾರ್ಹವೇ ಸರಿ. ಈ ದಿಶೆಯಲ್ಲಿ ಕರಾವಳಿ ಜಿಲ್ಲೆಗಳಿಂದ ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡ (ಈ ಜಿಲ್ಲೆಯು ಆಗ ಮದರಾಸು ಪ್ರಾಂತದಲ್ಲಿ ಸೇರಿ

ಹೋಗಿತ್ತು) ಗಳಿಂದ ವಲಸೆ ಬಂದ ಜನರೇ ದಿಟ್ಟ ಹೆಜ್ಜೆಯನ್ನಿಟ್ಟವರು. ಮೂಲತಃ ಬಂದ ಬೆಸ್ತ ಜನಾಂಗದವರ ಪೀಳಿಗೆಯವರೆಂದೇ ತಿಳಿಯಲಾದ ಮೊಗವೀರ ಜನಾಂಗದವರೇ ಮುಂಬಯಿಗೆ ಪ್ರಥಮವಾಗಿ ವಲಸೆ ಬಂದವರೆನ್ನುವುದು ನಿರ್ವಿವಾದ ಸಂಗತಿ. ನಿಸ್ಪೃಹತೆ, ಕಾರ್ಯನಿರತ ದುಡಿಮೆ ಮತ್ತು ಶಿಸ್ತುಬದ್ಧ ಜೀವನಕ್ರಮ ಈ ಕಾರಣಗಳಿಂದ ಈ ಜನರೇ ಬ್ಯಾಂಕು, ವಿಮಾ ಕಂಪನಿ ಮತ್ತು ಖ್ಯಾತ ಖಾಸಗಿ ಸಂಸ್ಥೆಗಳಾದ ಟಾಟಾ ಮುಂತಾದವುಗಳಲ್ಲಿ ನೌಕರಿಯನ್ನು ಪಡೆಯುವುದರಲ್ಲಿ ಮೊದಲಿಗರು. ಬಹುತೇಕವಾಗಿ ನಿರಕ್ಷರಸ್ಥರೇ ಆಗಿದ್ದ ಈ ನೌಕರರಿಗೆ ಆಫೀಸು ಕಚೇರಿಗಳಿಗೆ ಇಲ್ಲವೇ ವ್ಯಕ್ತಿಗಳಿಗೆ ಕಾಗದಪತ್ರಗಳನ್ನು ತಲುಪಿಸುವ ಟಪ್ಪಾಲು ಕೊಡುವ ಕೆಲಸವೇ ಮುಖ್ಯವಾಗಿತ್ತು. ಅನೇಕ ಕಂಪನಿಗಳ, ವಾಣಿಜ್ಯ-ಉದ್ಯಮ ಸಂಸ್ಥೆಗಳ ಮುಖ್ಯ ಕಚೇರಿಗಳಿದ್ದುದ್ದು ಫೋರ್ಟ್ ವಿಭಾಗದಲ್ಲಿಯೇ.

ಮುಂಬಯಿಯಲ್ಲಿ ಕನ್ನಡಕ್ಕಾಗಿ ನಿರಂತರ ದುಡಿದ ಕಾರ್ಯಕರ್ತ ದಿ|| ಕೆ. ಎನ್. ಗಾಯತೊಂಡೆಯವರು ಈ ಲೇಖಕರಿಗೆ ಒಮ್ಮೆ ಹೇಳಿದ್ದ ಮಾತು ನೆನಪಿಗೆ ಬರುತ್ತದೆ. ವಿಳಾಸಗಳನ್ನು ಸರಿಯಾಗಿ ಓದಲು ಗೊತ್ತಾಗಿ ಕಾಗದ ಪತ್ರಗಳನ್ನು ಸರಿಯಾಗಿ ತಲಪಿಸಲು ಸಾಧ್ಯವಾಗಲೆಂದೋ ಏನೋ ಈ ಜನರು ಓದು ಬರಹವನ್ನು ಕಲಿಯಲು ಆಸೆಪಟ್ಟಿದ್ದೇ ಮುಂಬಯಿಯಲ್ಲಿ ಕನ್ನಡ ರಾತ್ರಿ ಶಾಲೆಗಳು ಆರಂಭವಾಗಲು ಕಾರಣವಾಯಿತಂತೆ.

ಈ ಆವಶ್ಯಕತೆಯನ್ನು ಪೂರೈಸಲು 1905ರಷ್ಟು ಹಿಂದೆಯೇ ಮುಂಬಯಿಯಲ್ಲಿ ಪ್ರಥಮವಾಗಿ ಕನ್ನಡ ರಾತ್ರಿ ಶಾಲೆಯೊಂದು ಮೊಗವೀರರಿಂದ ಸ್ಥಾಪಿಸಲ್ಪಟ್ಟಿತು. ಈ ಶಾಲೆಗಳಲ್ಲಿ ಓದು ಬರಹವನ್ನು ಕಲಿತು ಉಚ್ಚ ಶೈಕ್ಷಣಿಕ ಪದವಿಗಳನ್ನು ಗಳಿಸಿ ಉನ್ನತ ನೌಕರಿಗಳನ್ನು ಪಡೆಯುತ್ತಾರೆಂದು ಯಾರು ತಾನೇ ಆಗ ಯೋಚಿಸಿದ್ದರು?

1908 ರಿಂದ 1945ವರೆಗೆ ಅನೇಕ ರಾತ್ರಿ ಶಾಲೆಗಳ ಸ್ಥಾಪನೆಯಾಯಿತು. ಕನ್ನಡಿಗರ ಶಿಕ್ಷಣ ವಿಷಯದಲ್ಲಿ ಆಳವಾಗಿ ಅಭ್ಯಸಿಸಿರುವ ಶ್ರೀ ಜಿ. ವಿ. ಶೆಟ್ಟಿಗಾರರ ಪ್ರಕಾರ ನಗರದಲ್ಲಿರುವ 122 ರಾತ್ರಿ ಶಾಲೆಗಳಿಲ್ಲಿ ಸುಮಾರು 25 ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆಂದೂ ಅವುಗಳ ಪೈಕಿ 11 ಕನ್ನಡ ರಾತ್ರಿ ಶಾಲೆಗಳಿವೆಯೆಂದೂ ಗೊತ್ತಾಗುತ್ತದೆ. ಈ 11 ಕನ್ನಡ ರಾತ್ರಿ ಶಾಲೆಗಳಲ್ಲಿ 4 ಸಾವಿರ ಕನ್ನಡ ಮಕ್ಕಳೂ ಮತ್ತು 180 ಶಿಕ್ಷಕರೂ ಇದ್ದು ವರ್ಷಂಪ್ರತಿ ಶಿಕ್ಷಣ ಖರ್ಚು ಸುಮಾರು 5 ಲಕ್ಷ ರೂಪಾಯಿಗಳೆಂದು ತಿಳಿದು ಬಂದಿದೆ.

1930ರ ಸಮಯದಲ್ಲಿಯೇ ಸಾಕಷ್ಟು ಯಶಸ್ವಿಯಾಗದಿದ್ದರೂ ಸಹ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡುವ ಹಗಲು ಶಾಲೆಗಳನ್ನು ತೆರೆಯುವ ಪ್ರಯತ್ನಗಳು ನಡೆದೇ ಇದ್ದವು. 1930ರಲ್ಲಿ ಸ್ಥಾಪಿತವಾದ ಮೈಸೂರು ಅಸೋಸಿಯೇಷನ್ ಈ

ವಿಚಾರದಲ್ಲಿ ಆಸಕ್ತಿ ವಹಿಸಿತ್ತು. ಇದೇ ವಿಷಯದಲ್ಲಿ ಮುಂದುವರಿದ ಮತ್ತೊಂದ ಕನ್ನಡಿಗರ ಸಂಸ್ಥೆಯೆಂದರ ಮೊಗವೀರ ವ್ಯವಸ್ಥಾಪಕ ಮಂಡಳಿ. 1930ರಲ್ಲಿ ಕೇವಲ ಹುಡುಗಿಯರಿಗಾಗಿಯೇ ಒಂದು ಹಗಲು ಶಾಲೆಯನ್ನು ಈ ಮಂಡಳಿಯು ಸ್ಥಾಪಿಸಿ ತೆಂದು ಹೇಳಲಾಗಿದೆ. ಮುಂಬಯಿ ಕನ್ನಡ ಸಂಘದ ವತಿಯಿಂದ 1937ರಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡುವ ಪ್ರಪ್ರಥಮ ಕನ್ನಡ ಹಗಲು ಶಾಲೆಯು ಸ್ಥಾಪಿತವಾಗಿ ರಾಷ್ಟ್ರೀಯ ಕನ್ನಡ ಶಿಕ್ಷಣ ಸಮಿತಿಯು (N.K.E.S.) ಉದಯವಾಯಿತು. ಈ ಶಾಲೆಯು ಬೆಳೆದು ಸದ್ಯ ಕೆ.ಜಿ.ಯಿಂದ ಹಿಡಿದು ಜೂನಿಯರ್ ಕಾಲೇಜುವರೆಗೆ ಇಲ್ಲಿ ಶಿಕ್ಷಣ ಸೌಲಭ್ಯಗಳಿರುತ್ತವೆ. ಉತ್ತರ ಮುಂಬಯಿಯ ವಡಾಳ ಬಡಾವಣೆಯಲ್ಲಿ ತನ್ನದೇ ಸ್ವಂತ ಭವ್ಯಕಟ್ಟಡವಿರುವ ಈ ಶಾಲೆಯಲ್ಲಿ ಕೆ.ಜಿ. ವರ್ಗವನ್ನೂ ಸೇರಿಸಿ ಸುಮಾರು 2500 ವಿದ್ಯಾರ್ಥಿಗಳಿರುತ್ತಾರೆ.

1930ರ ಸುಮಾರಿನಲ್ಲಿ 20 ಲಕ್ಷಕ್ಕೆ ಕಡಿಮೆಯಿದ್ದ ಮುಂಬಯಿ ನಗರದ ಜನ ಸಂಖ್ಯೆಯು ಅಗಾಧವಾಗಿ ವೃದ್ಧಿ ಹೊಂದಿ ಸದ್ಯ 80 ಲಕ್ಷಕ್ಕೂ ಹೆಚ್ಚಿಹೋಗಿದೆ. ಜನಸಂಖ್ಯೆ ಹೆಚ್ಚಾಗತೊಡಗಿದಂತೆ ಉಪನಗರ ಬಡಾವಣೆಗಳು ಅಸ್ತಿತ್ವಕ್ಕೆ ಬಂದು ಜನಸ್ತೋಮ ಹರಡಿದಂತೆಲ್ಲ ಹೊಸ ಹೊಸ ಕನ್ನಡ ಶಾಲಾ ಸಂಸ್ಥೆಗಳು ಸ್ಥಾಪನೆ ಯಾಯಿತು. 6 ವರ್ಷಗಳ ನಂತರ ಜನಾನುರಾಗಿ ಶಾಸಕ ಶ್ರೀ ಬೋಮನ್ ಬೆಹ ರಾಮ್ ಇವರ ಪ್ರಭಾವದಿಂದ ಫೋರ್ಟಿನಲ್ಲಿ ಅವರಿಂದಲೇ ಕಾಣಿಕೆಯಾಗಿ ದೊರೆತ ಕಟ್ಟಡದಲ್ಲಿ ಕನ್ನಡ ಭವನ ಸಂಸ್ಥೆಯು ತನ್ನ ಹಗಲು ಕನ್ನಡ ಪ್ರೌಢಶಾಲೆಯನ್ನು ಸ್ಥಾಪಿಸಿತು. ನಂತರ ಚೆಂಬೂರಿನಲ್ಲಿ ಚೆಂಬೂರು ಕರ್ನಾಟಕ ಸಂಘದವರಿಂದ ಮತ್ತು ಡೊಂಬಿವಲಿ ಉಪನಗರದಲ್ಲಿ ಅಲ್ಲಿಯ ಕರ್ನಾಟಕ ಸಂಘದ ವತಿಯಿಂದ ಮತ್ತೆರಡು ಹಗಲು ಕನ್ನಡ ಪ್ರೌಢಶಾಲೆಗಳು ಸ್ಥಾಪನೆಗೊಂಡವು ಇಷ್ಟೆಲ್ಲ ಕನ್ನಡ ಸಂಘ-ಸಂಸ್ಥೆಗಳ ಮೂಲಕ ಕೆ.ಜಿ.ಯಿಂದ ಹಿಡಿದು ಸ್ನಾತಕೋತ್ತರ ಪಾತಳಿಯವರೆಗೆ ಕನ್ನಡ ಮಾಧ್ಯಮ ದಲ್ಲಿಯೇ ಶಿಕ್ಷಣವನ್ನು ಪಡೆಯುವ ಸೌಲಭ್ಯಗಳಿದ್ದರೂ ಸಹ ಈ ಸದವಕಾಶಗಳನ್ನು ಉಪಯೋಗಿಸಿಕೊಳ್ಳುವುದರಲ್ಲಿ ಕನ್ನಡಿಗರಲ್ಲನೇಕರಿಗೆ ಸಾಕಷ್ಟು ಆಸಕ್ತಿ-ಆಸೆಗಳು ಇಲ್ಲ ದಿರುವುದು ವಿಷಾದನೀಯವೇ ಸರಿ. ನಿಜಕ್ಕೂ ಹೇಳುವುದಾದರೆ ಯಾರಿಗಾಗಿ ಈ ಅನುಕೂಲತೆಗಳನ್ನು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಒದಗಿಸಲಾಯಿತೋ ಅವರಿಂದಲೇ ಇವುಗಳಿಂದ ಪ್ರಯೋಜನ ಪಡೆಯುವ ಹುಮ್ಮಸ್ಸು ಕಳಮುಖವಾಗುತ್ತಿರುವುದು ವಿರೋಧಾಭಾಸವೇ ಸರಿ. ಈ ಪರಿಸ್ಥಿತಿಗೆ ಎರಡು ಮುಖ್ಯ ಕಾರಣಗಳನ್ನು ಕೊಡ ಬಹುದು.

1) ಇಂಗ್ಲೀಷ್ ಮಾಧ್ಯಮದ ಶಾಲೆಗಳಿಗಾಗಿ ಹೆಚ್ಚುತ್ತಿರುವ ವ್ಯಾಮೋಹ.

2) ಶಿಕ್ಷಣ ಮುಗಿದ ಮೇಲೆ ನೌಕರಿ ಸಿಗುವ ಸಮಸ್ಯೆ.

ಇವುಗಳೊಂದಿಗೆ ನಾನು ಸೇರಿಸುವ ಮತ್ತೊಂದು ಕಾರಣವೆಂದರೆ ಭಾಷಾವಾರು ತತ್ವದ ಮೇಲೆ ಪ್ರಾಂತಗಳ ನಿರ್ಮಾಣ. ಈ ತತ್ವದ ಮೇಲೆ ರಾಜ್ಯಗಳ ಪುನರ್ರಚನೆಯಾಗಲು ಹೋರಾಡಿದ ಮುಖಂಡರುಗಳ ಧ್ಯೇಯೋದ್ದೇಶಗಳು ಎಷ್ಟೇ ಘನವಾಗಿದ್ದಿರಲಿ ಕೆಲವು ವರ್ಷಗಳಿಂದೀಚೆಗಿನ ಆಗುಹೋಗುಗಳನ್ನು ಅವಲೋಕಿಸಿದಾಗ ವಿಚಾರಶೀಲ ಕನ್ನಡಿಗರನೇಕರಿಗೆ ಕಳವಳವನ್ನುಂಟುಮಾಡುವ ಸ್ಥಿತಿಗತಿಗಳೇ ನಿರ್ಮಾಣವಾಗಿವೆ ಎನ್ನಬಹುದು.

1971ರ ಜನಗಣತಿಯ ಪ್ರಕಾರ ದೇಶದ ಒಟ್ಟು 548.2 ಮಿಲಿಯನ್ ಜನಸಂಖ್ಯೆಯಲ್ಲಿ ಕನ್ನಡ ಭಾಷೆಯನ್ನು ಮಾತನಾಡುವವರು 21.7 ಮಿಲಿಯನ್ ಎಂದು ಗೊತ್ತಾಗಿದೆ. (1981ರ ಜನಗಣತಿಯ ಭಾಷಾವಾರು ವಿವರಗಳು ಇನ್ನೂ ದೊರೆತಿಲ್ಲ) ನನ್ನ ಅಭಿಪ್ರಾಯದಲ್ಲಿ ಈ ಕನ್ನಡ ಜನಾಂಗದ ಸಂಖ್ಯೆಯು ಅತಿ ಕಡಿಮೆಯೇ. ಆದರೆ ಅಧಿಕೃತವಾಗಿ ದೊರೆಯುವ ಅಂಕಿ ಅಂಶಗಳು ಇದೊಂದೇ ಆಗಿರುವುದರಿಂದ ಇದನ್ನೇ ಒಪ್ಪಿಕೊಳ್ಳಬೇಕಾಗುತ್ತದೆ. 1981ರ ವರದಿಯಂತೆ ಅಕ್ಷರಸ್ಥರ ಸಂಖ್ಯೆಯು ಶೇಕಡಾ 36.2 ಎಂದು ಗೊತ್ತಾಗಿದೆ. ಪರಿಸ್ಥಿತಿ ಹೀಗಿರುವಾಗ ಕರ್ನಾಟಕ ಸರ್ಕಾರವೇ ಆಗಲಿ ಇತರ ರಾಜ್ಯ ಸರ್ಕಾರಗಳೇ ಆಗಲಿ ಕನ್ನಡಿಗರಿಗೆ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯಲು ಪೂರ್ಣ ಸೌಲಭ್ಯಗಳನ್ನು ಒದಗಿಸುವುದರಲ್ಲಿ ವಿಫಲವಾಗಿವೆಯೆಂದೇ ಸ್ಪಷ್ಟವಾಗುತ್ತದೆ. ಇದಕ್ಕೆ ಕಾರಣ ಸ್ವಲ್ಪಮಟ್ಟಿಗೆ ಕನ್ನಡಿಗರ ಔದಾಸೀನ್ಯ ಪ್ರವೃತ್ತಿಯೇ ಆಗಿರಲು ಸಾಕು. ಘಟನಾತ್ಮಕ ರಕ್ಷಣೆ-ಬೆಂಬಲಗಳಿದ್ದರೂ ಅಲ್ಪಸಂಖ್ಯಾತರಿಗೆ ಅದರಲ್ಲೂ ಕನ್ನಡೇತರ ರಾಜ್ಯಗಳಲ್ಲಿರುವ ಕನ್ನಡ ಅಲ್ಪಸಂಖ್ಯಾತರಿಗೆ ಮಾತೃಭಾಷೆಯಲ್ಲಿ ಶಿಕ್ಷಣ ಪಡೆಯುವ ವಿಷಯದಲ್ಲಿ ಸಾಕಷ್ಟು ನ್ಯಾಯ ದೊರೆತಿಲ್ಲವೆಂದೇ ಹೇಳಬಹುದು.

ತಮಗೆ ಸಾಕಷ್ಟು ಶೈಕ್ಷಣಿಕ ಸೌಲಭ್ಯಗಳಿವೆ ಎಂದು ಎದೆ ತಟ್ಟಿಕೊಂಡು ಭಾರತೀಯರು ಹೇಳಿಕೊಳ್ಳುವ ಕಾಲವು ಇನ್ನೂ ಬಹಳ ದೂರದಲ್ಲಿದೆ. 1981ರಲ್ಲಿ ವಿದ್ಯಾಭ್ಯಾಸಕ್ಕೆ ಮಾಡಿದ ತಲಾವಾರು (per capita) ಖರ್ಚು ಸುಮಾರು 54 ರೂ.ಗಳು ಮಾತ್ರ ಎಂಬುದನ್ನು ಗಮನಿಸಬೇಕು. ಕರ್ನಾಟಕ ರಾಜ್ಯದ ಮಟ್ಟಿಗೆ ಪರಿಶೀಲಿಸಿದರೆ ಈ ಸಂಖ್ಯೆ ಇನ್ನೂ ಕಡಿಮೆ-ಕೇವಲ 46 ರೂ.ಗಳು ಮಾತ್ರ. ಅನೇಕ ಕ್ಷೇತ್ರಗಳಲ್ಲಿ ಭಾರತೀಯರಿಗಿನ್ನೂ ಸಾಕಷ್ಟು ಅವಕಾಶಗಳು ದೊರೆತೇ ಇಲ್ಲವೆಂದು ಹೇಳಬಹುದು. ಜನಸಂಖ್ಯೆಯ ಅತಿ ಹೆಚ್ಚು ಪ್ರತಿ ಶತಾಭಾಗದ ಜನರು ಇನ್ನೂ ದಾರಿದ್ರ್ಯ ರೇಖೆಯ ಕೆಳಗೇ ಇದ್ದಾರೆ. ಸ್ವಾವಲಂಬನೆ-ಸ್ವಪರಿಪೂರ್ಣತೆಯೂ ಸಾಧ್ಯವಾಗಿಲ್ಲ. ಪೂರ್ಣ ಉದ್ಯೋಗಾವಕಾಶಗಳೂ ಕೈಗೆ ಎಟುಕುವಂತಿಲ್ಲ. ಸಂಪತ್ತು ವರಮಾನಗಳಲ್ಲಿ ಎದ್ದು ಕಾಣುವ ತಾರತಮ್ಯ ತೊಲಗಿ ಎಲ್ಲರಿಗೂ ಸಮಾನಾವಕಾಶಗಳು ದೊರೆಯುವಂತಾಗುವುದು ಇನ್ನೂ ಕನಸಾಗಿಯೇ ಉಳಿದಿದೆ. ಈ ಕಾರಣದಿಂದಲಾಗಲೀ ನಮ

ದೇಶದಲ್ಲಿ ಶೈಕ್ಷಣಿಕ ಸೌಲಭ್ಯಗಳು ಹೆಚ್ಚಬೇಕೆಂಬುದೇ ಎಲ್ಲರ ಅಪೇಕ್ಷೆ.

ಮುಂಬಯಿ ಕನ್ನಡಿಗರಿಗೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆಯುವ ಸೌಲಭ್ಯಗಳು ಎಲ್ಲೆಲ್ಲಿ ಹೇಗೆ ಇವೆ ಎಂಬುದರ ಮಾಹಿತಿಯನ್ನು ಕೊಟ್ಟರೆ ಸ್ವಲ್ಪ ಅನುಕೂಲವಾದೀತು.

ನಗರದ 20 ಮುನಿಸಿಪಲ್ ವಾರ್ಡುಗಳಲ್ಲಿ 54 ಮುನಿಸಿಪಲ್ ಕನ್ನಡ ಪ್ರಾಥಮಿಕ ಶಾಲೆಗಳಿವೆ, ಅವುಗಳಲ್ಲಿ ಕೆಲವು ಶಾಲೆಗಳು 8ನೇ ವರ್ಗದವರೆಗೆ ಶಿಕ್ಷಣವನ್ನು ಒದಗಿಸುತ್ತವೆ. 13 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಲ್ಲಿ ವಿದ್ಯೆಯನ್ನು ಕಲಿಯುತ್ತಿದ್ದಾರೆ. 398 ಶಿಕ್ಷಕರಿದ್ದು ಟ್ರೈನಿಂಗ್ ಪಡೆದಂತಹವರಿಗೆ ಮಾಸಿಕ ವೇತನವು ಸುಮಾರು 750 ರೂ. ಇದೆ. ತರಬೇತಿ ಅರ್ಹತೆ ಇಲ್ಲದ ಶಿಕ್ಷಕರಿಗೆ ಸುಮಾರು 125 ರೂ. ದಿಂದ 150 ರಷ್ಟು ಕಡಿಮೆ ವೇತನ ದೊರೆಯುತ್ತದೆ. (ಈಗಂತೂ ಟ್ರೈನಿಂಗ್ ಅರ್ಹತೆ ಇಲ್ಲದಿದ್ದರೆ ನೌಕರಿಯು ಸಿಗುವಂತೆಯೇ ಇಲ್ಲ.)

ಗಣನೀಯ ಸಂಖ್ಯೆಯ ಕನ್ನಡಿಗರು ವಾಸಿಸುವ ಉಪನಗರಗಳಲ್ಲಿ (ಕುರ್ಲಾ, ಬಾಂಡುಪ, ಅಂಧೇರಿ, ಗೋರೆಗಾವ, ಬೋರಿವಲಿ, ಘಾಟಕೋಪರ) ಮುನಿಸಿಪಲ್ ಕನ್ನಡ ಪ್ರಾಥಮಿಕ ಶಾಲೆಗಳನ್ನು ಹೆಚ್ಚಿಸುವ ತುರ್ತು ಅವಶ್ಯಕತೆಯಿದೆ. ಕನ್ನಡ ಫ್ರೌಢಶಾಲೆಗಳಿಗೆ ಮೇಲಿನ ವರ್ಗಗಳಿಗೆ ವಿದ್ಯಾರ್ಥಿಗಳನ್ನು ಒದಗಿಸುವುದೊಂದು ಅಗತ್ಯವಾಗಿರುತ್ತದೆಯಷ್ಟೇ ಅಲ್ಲದೆ ಕನ್ನಡಿಗರಿಗೆ ಸದ್ಯಕ್ಕಿರುವ ಸೌಲಭ್ಯಗಳನ್ನು ದಕ್ಕಿಸಿಕೊಳ್ಳಬೇಕಾದ ಅತಿಶಯ ಸಂದರ್ಭವೂ ಈಗ ಒದಗಿ ಬಂದಿದೆ. ಇರುವ ಸೌಲಭ್ಯಗಳನ್ನು ಮೊಟಕು ಮಾಡುವ ಇಲ್ಲವೇ ಹಿಂದೆಗುದುಕೊಳ್ಳುವ ಪೇಚಿನ ಪರಿಸ್ಥಿತಿಯು ಬರಬಾರದಂತೆ ನೋಡಿಕೊಳ್ಳುವುದರ ಅಗತ್ಯವಿದೆ. ಇದನ್ನು ಎಲ್ಲಾ ಕನ್ನಡಿಗರೂ ಗಮನಿಸಬೇಕಾದ ವಿಷಯ.

ಮುಂಬಯಿ ಕನ್ನಡಿಗರು ಶಾಸನದತ್ತ ಹಾಗೂ ಖಾಸಗಿಯಾಗಿ ಬಂದ ಸಂದರ್ಭ-ಅವಕಾಶಗಳನ್ನು ಸರಿಯಾಗಿ ಉಪಯೋಗಿಸಿಕೊಳ್ಳಲಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಪ್ರಾಯಶ: ಜನರ ಅಸಡ್ಡೆ-ನಿರ್ಲಕ್ಷ್ಯ ಮನೋಭಾವವೇ ಇವಕ್ಕೆ ಕಾರಣವಿರಬಹುದು. ಸ್ವಲ್ಪ ಮಟ್ಟಿಗೆ ಹಣಕಾಸಿನ ಕೊರತೆಯೂ ಕಾರಣವಾಗಿರುತ್ತದೆ. ಇದರ ಪರಿಣಾಮವಾಗಿ ಅನೇಕ ಕಾಲೇಜುಗಳಲ್ಲಿ ಕನ್ನಡವನ್ನು ಕಲಿಯುವ ವಿಷಯವನ್ನಾಗಿ ಆಯ್ದುಕೊಳ್ಳುವವರ ಸಂಖ್ಯೆಯು ಕಡಿಮೆಯಾಗುತ್ತಲಿದೆ. ಕೇವಲ ಒಂದೆರಡು ಶಾಲೆಗಳಲ್ಲಿ ಮಾತ್ರ ಕನ್ನಡವನ್ನು ಕಡ್ಡಾಯವಾಗಿ ಕಲಿಸಲಾಗುತ್ತಿದೆ (ಇಲ್ಲೂ ಸಹ ಮುಂದಿನ ಪರಿಸ್ಥಿತಿ ಏನಾಗಬಹುದೋ ತಿಳಿಯದು!) ಫ್ರೌಢ ಶಾಲೆಗಳಿಗೆ ಹೊಂದಿಸಿದ ಕೆಲವು ಜೂನಿಯರ್ ಕಾಲೇಜುಗಳಲ್ಲೂ ಕನ್ನಡವನ್ನು ಒಂದು ಭಾಷೆಯನ್ನಾಗಿ ಆರಿಸಿಕೊಂಡು ಅಧ್ಯಯನ ಮಾಡುವ ಸೌಕರ್ಯಗಳಿರುತ್ತವೆ. ಒಂದು

ಕಾಲಕ್ಕೆ ಸುಮಾರೂ 25 ಕಾಲೇಜುಗಳಲ್ಲಿ (ಆರ್ಟ್ಸ್-ಸೈನ್ಸ್-ಕಾಮರ್ಸ್) ಈ ಸೌಕರ್ಯಗಳಿದ್ದುವು ಸದ್ಯ ಮುಂಬಯಿಯಲ್ಲಿರುವ ಎಲ್ಲ ಕಾಲೇಜುಗಳಲ್ಲಿ ಕಲಿಯುತ್ತಿರುವ ಕನ್ನಡಿಗರ ಸಂಖ್ಯೆ ಸುಮಾರು 5 ಸಾವಿರವೆಂದು ಅಂದಾಜು ಮಾಡಲಾಗಿದೆ.

ವಿಶ್ವವಿದ್ಯಾಲಯದ ಪಾತಳಿಯಲ್ಲಿ ಕನ್ನಡದ ಅವಸ್ಥೆಯಾದರೂ ಯಾವುದು? ಶತಕದ ಆರಂಭದಲ್ಲಿ (1902ರ ಸುಮಾರು) ಮುಂಬಯಿ ವಿಶ್ವವಿದ್ಯಾನಿಲಯದಲ್ಲಿ M.A. ವಿದ್ಯಾರ್ಥಿಗಳಿಗೆ ಕನ್ನಡವನ್ನು ವಿಷಯವನ್ನಾಗಿ ಆರಿಸಿಕೊಳ್ಳುವ ಅವಕಾಶ ಸೌಲಭ್ಯವಿತ್ತೆಂದರೆ ಆಶ್ಚರ್ಯವೇ ಆಗುತ್ತದೆ. ಆಮರಕವಿ ಡಾ॥ ದ.ರಾ. ಬೇಂದ್ರೆಯವರು ಕನ್ನಡವನ್ನು ತೆಗೆದುಕೊಂಡು M. A. ಪರೀಕ್ಷೆಯನ್ನು ಪಾಸುಮಾಡಿದ ಪ್ರಪ್ರಥಮ ವಿದ್ಯಾರ್ಥಿಯೆಂಬುದನ್ನು ನಾವು ಈ ಸಂದರ್ಭದಲ್ಲಿ ನೆನಪು ಮಾಡಿಕೊಳ್ಳಬೇಕು. ಆದರೆ ಈಚೀಚೆಗೆ ಕನ್ನಡವನ್ನು ತೆಗೆದುಕೊಂಡು M. A. ಮಾಡುವವರಿಗೆ ಅಷ್ಟೊಂದು ಪ್ರೋತ್ಸಾಹ ಸಿಗುತ್ತಿರುವಂತೆ ಕಂಡು ಬರುತ್ತಿಲ್ಲ. 1979 ರವರೆಗೆ ಪ್ರಾ. ಚಿದಂಬರ ದೀಕ್ಷಿತರು ವಿಶ್ವವಿದ್ಯಾನಿಲಯ ಮಟ್ಟದ ಕನ್ನಡ ಚಟುವಟಿಕೆಗಳ ಮೇಲ್ವಿಚಾರಣೆಯನ್ನು ವಹಿಸಿದ್ದರು. ನಂತರ ಮಹಾರಾಷ್ಟ್ರ-ಕರ್ನಾಟಕ ಸರ್ಕಾರಗಳ ಜಂಟೀ ಬೆಂಬಲ-ಸಹಾಯದಿಂದ ಮತ್ತು ಇತರ ಹಿತೈಷಿಗಳ ಪ್ರಯತ್ನದಿಂದ ಮುಂಬಯಿ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ಪೀಠವೊಂದನ್ನು ಸ್ಥಾಪಿಸಲು ಸಾಧ್ಯವಾಯಿತು. ಸಂಶೋಧನೆಗೂ ಅಧ್ಯಯನಕ್ಕೂ ಅವಕಾಶವಿರುವ ಈ ವಿಭಾಗಕ್ಕೆ ಡಾ॥ ಚಿದಂಬರ ದೀಕ್ಷಿತರೇ ಪ್ರಥಮ ಪ್ರಾಚಾರ್ಯರಾಗಿ ನೇಮಕಗೊಂಡರು. ಈ ವಿಭಾಗದಲ್ಲಿ ವಿವಿಧ ಕಾಲೇಜುಗಳ ಅಧ್ಯಾಪಕರುಗಳಿಗೆ ಡಾಕ್ಟರೇಟನ್ನು ಪಡೆಯುವ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕನ್ನಡದಲ್ಲಿ M. A. ಮಾಡುವ ಅವಕಾಶಗಳು ಲಭಿಸಿದಂತಾಯಿತು. ಆದರೆ ಡಾ॥ ದೀಕ್ಷಿತರು ಸೇವೆಯಿಂದ ನಿವೃತ್ತರಾದ ಮೇಲೆ ಇದುವರೆವಿಗೂ ಈ ವಿಭಾಗಕ್ಕೆ ಹೊಸ ನೇಮಕವೇ ಆಗಿಲ್ಲ.

ಕಳೆದ ಐದು ದಶಕಗಳಿಂದ ಕನ್ನಡಕ್ಕೆ ಪ್ರೋತ್ಸಾಹವನ್ನು ಕೊಡುತ್ತ ಬಂದಿರುವ ವಿಶ್ವವಿದ್ಯಾನಿಲಯವು ಕನ್ನಡ ವಿಭಾಗದ ಏಳಿಗೆಗಾಗಿ ಮಾರ್ಗದರ್ಶಿಯೊಬ್ಬರ ಸೇವೆಯನ್ನು ಕೊಡಲಾಗಿಲ್ಲವೆಂದರೆ ನಂಬುವುದೇ ಕಠಿಣವಾಗಿದೆ. ಇಂತಹ ಪರಿಸ್ಥಿತಿಯಲ್ಲಿಯೂ ಕೆಲವು ಗಣನೀಯ ಸಾಧನೆಗಳಾಗಿರುವುದು ಸಮಾಧಾನವನ್ನು ತರುತ್ತದೆ. ಕನ್ನಡದಲ್ಲಿ **P.H.D.** ಗೆ ವ್ಯಾಖ್ಯಾನವನ್ನು ಬರೆದು ಡಾಕ್ಟರೇಟನ್ನು ಪಡೆಯುವವರಲ್ಲಿ ಮೊದಲಿಗರಾದ ಕೀರ್ತಿಯು ಶ್ರೀ ಡಾ॥ ಕಾಡದೇವರಮಠ ಇವರಿಗೆ ಸಂದಿದೆ. ಇದಲ್ಲದೆ ಎಳೆಂಟು ಮಂದಿ ಕನ್ನಡ M.A. ಪರೀಕ್ಷೆಯನ್ನು ಪಾಸು ಮಾಡಿರುತ್ತಾರೆ. ಡಾ॥ ದೀಕ್ಷಿತರು ಮತ್ತು ಡಾ॥ ಬ್ಯಾತನಾಳರು ಕನ್ನಡ ಅಧ್ಯಯನ-ಸಂಶೋಧನೆ ಕಾರ್ಯದಲ್ಲಿ ಉತ್ತಮ ನೆರವು ಮಾರ್ಗದರ್ಶನಗಳನ್ನು ನೀಡುತ್ತಿದ್ದಾರೆ.

ಹಕ್ಕುಗಳ ಅರಿವು ಉಂಟಾಗಿ ಅವುಗಳನ್ನು ಪಡದೇ ಪಡೆಯಲು ಹೋರಾಡುವ ಕಾಲ ಈ ದಿವಸಗಳದ್ದು. ಸರ್ಕಾರೀ ಖರ್ಚು ಅಂಕೆ ಶಂಕೆಯಿಲ್ಲದೆ ಲಂಗುಲಗಾಮಿಲ್ಲದೆ ಗಗನಕ್ಕೇರುತ್ತಿರುವಾಗ ರಾಷ್ಟ್ರ ನಿರ್ಮಾಣ ಕಾರ್ಯದ ದ್ಯೋತಕವಾದ ವಿದ್ಯಾಭ್ಯಾಸಕ್ಕೆ ಮೀಸಲಾಗಿರುವ ಹಣಕಾಸು ವರ್ಷವರ್ಷಕ್ಕೆ ಕಡಿಮೆಯಾಗುತ್ತಿದೆ. ಗಣನೀಯ ಸಂಖ್ಯೆಯ ಅನಕ್ಷರಸ್ಥರೊಂದಿಗೆ ಸಹಬಾಳ್ವೆ ಅನಿವಾರ್ಯವೇ ಆಗಿದ್ದರೂ ಈ ಅನಕ್ಷರಸ್ಥ ಗುಂಪೇ ತಪ್ಪು ಹಾದಿಗೆ ನೂಕಲ್ಪಟ್ಟು ಅಪಾಯ-ಅಶಾಂತಿಯ ಮೂಲವಾಗುವ ಭಯದ ಮುನ್ಸೂಚನೆಯನ್ನು ಇತರರು ಗುರುತಿಸಬೇಕು. ಹಾಯಾಗಿದ್ದು ಬಿಡೋಣ ನಮಗೇನಾಗಬೇಕು ಎಂಬ ಸಂತೃಪ್ತ ಪ್ರವೃತ್ತಿಯನ್ನು ಕನ್ನಡದ ಜನ ತ್ಯಜಿಸಬೇಕು. ಹೊರನಾಡಿನ ಕನ್ನಡಿಗರು ತಮಗಿರುವ ಭಾಷಾ ಅಲ್ಪಸಂಖ್ಯಾತರ ಹಕ್ಕನ್ನು ಹದಗೊಳಿಸಿಕೊಂಡು ತಮಗೂ ಹಾಗೂ ತಮ್ಮಿಂದ ಇಡೀ ರಾಷ್ಟ್ರಕ್ಕೂ ಒಳಿತಾಗುವಂತಹ ಧೋರಣೆಯನ್ನು ಪ್ರಕಟಿಸಬೇಕಾದ ಕಾಲ ಈಗ ಬಂದಿದೆ. ರಾಷ್ಟ್ರಹಿತಕ್ಕೂ ದಕ್ಕೆ ಬರದಂತೆ ಅಲ್ಪ ಸಂಖ್ಯಾತರು ತಮ್ಮ ತಮ್ಮ ಭಾಷಾ ಸಾಹಿತ್ಯಗಳ ಪುರೋಭಿವೃದ್ಧಿಗೆ ಹೆಣಗಾಡಿದರೆ ತಪ್ಪೇನಿಲ್ಲ ಮತ್ತು ಇದರಲ್ಲಿ ಯಾವ ಶಂಕೆ ಸಂಕೋಚಗಳೂ ಇರಬೇಕಾಗಿಲ್ಲ. ಈ ತರಹದ ಸಾಧನೆಯೇನೂ ಕಷ್ಟಕರವಲ್ಲ. ಮುಖ್ಯವಾಗಿ ಕನ್ನಡ ಜನಗಳಲ್ಲಿ ಈ ಮನೋಧಾರ್ಢ್ಯ ಮತ್ತು ಹುಮ್ಮಸ್ಸು ಇದ್ದರೆ ಸಾಕು.

ಹಿಂದಕ್ಕೊಮ್ಮೆ ಮುಂಬಯಿಗೆ ಬಂದಿದ್ದಾಗ ದಿ॥ ಪೂಜ್ಯ ಮುದವೀಡು ಕೃಷ್ಣರಾಯರು ಹೇಳಿದ ಮಾತೊಂದು ನೆನಪಿಗೆ ಬರುತ್ತದೆ. "ಕನ್ನಡಿಗರಲ್ಲಿ ಲಕ್ಷಾಧೀಶ್ವರರು ಬಹಳ ಜನ ಇಲ್ಲದೇ ಇರಬಹುದು. ಅಲಕ್ಷ್ಯಾಧೀಶ್ವರರಿಗೇನು ಕಡಿಮೆಯೇ ?" ಎಂಬುದಾಗಿ.

ಇದೇ ಪ್ರಶ್ನೆಯನ್ನು ಹೊರನಾಡಿನ ಕನ್ನಡಿಗರು ತಮಗೆ ತಾವೇ ಹಾಕಿಕೊಂಡು ವಿಚಾರಮಗ್ನರಾಗಬೇಕಾದ ಕಾಲ ಈಗ ಒದಗಿ ಬಂದಿದೆ, ಅಲಕ್ಷ್ಯಾಧೀಶ್ವರರಾಗಿಯೇ ಉಳಿಯುವುದು ಉಚಿತವೇ ಹಿತಕರವೇ ಎಂಬುದಕ್ಕೆ ಇಂದು ಅವರು ಉತ್ತರಿಸಬೇಕಾಗಿದೆ.

ಗಮಕಿಯ ಮೇಲ್ಮೆ

ಕೆ. ಟಿ. ರಾಮಸ್ವಾಮ್ಯಯ್ಯಂಗಾರ್
ಗಮಕಿ, ನಿವೃತ್ತ ವಿದ್ಯಾ ಜಿಲ್ಲಾಧಿಕಾರಿ
ಮೈಸೂರು-೧

ಬಹು ಹಿಂದಿನಿಂದಲೂ ಕವಿ ಗಮಕಿ ವಾದಿ ವಾಂಕ್ತಿ ಎಂಬ ನಾಲ್ಕು ಹೆಸರುಗಳು ರಾಜರ ಆಸ್ಥಾನಗಳಲ್ಲಿ ಇದ್ದುವೆಂದು ಕೇಳಿಬರುತ್ತದೆ. ನಮ್ಮ ಮೈಸೂರು ದೇಶದಲ್ಲಿ ಆ ಪದ್ಧತಿಯು ಇತ್ತು. ಚಿಕ್ಕ ದೇವರಾಯರ ಕಾಲದಲ್ಲಿ ಆಸ್ಥಾನದಲ್ಲಿ ಕವಿ ಗಮಕಿಗಳಿದ್ದರು. ಚಾಮರಾಜಒಡೆಯರ ಕಾಲದಲ್ಲಿ ಬಸವಪ್ಪ ಶಾಸ್ತ್ರಿಗಳು ಕವಿಯೂ ಗಮಕಿಯೂ ಆಗಿದ್ದರು. ಕವಿಯು ಸ್ವತಃ ಗಮಕಿಯಲ್ಲದಿದ್ದರೆ ಆತನಿಗೆ ಗಮಕಿಯ ಸಹಾಯ ಅಗತ್ಯವಾಗಿ ಬೇಕು. ಇಲ್ಲದಿದ್ದರೆ ತನ್ನ ಕಾವ್ಯವು ಪ್ರಕಾಶಕ್ಕೆ ಬರುವುದಿಲ್ಲ. ಗಮಕಿಯಾದವನು ಕವಿಯನ್ನು ಪ್ರಕಾಶಕ್ಕೆ ತರಬೇಕಾದರೆ ಅವನ ತಿಳುವಳಿಕೆ (Equipment) ಎಷ್ಟು ಇರಬೇಕೆಂಬುದು ಒಂದು ಪ್ರಶ್ನೆ. ಅದನ್ನು ಸ್ವಲ್ಪ ಇಣಿಕಿ ನೋಡೋಣ.

ಕಾವ್ಯ ಪರಿಚಯ :–

ಕವಿ ಬರೆದುದನ್ನು ಓದಬೇಕಾದರೆ ಕಾವ್ಯವನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಬೇಕು. ಕವಿ ಹೃದಯವೇನು? ಎಂಬುದನ್ನು ಆಳಕ್ಕಿಳಿದು ನೋಡಬೇಕು. ಒಳಗಿನ ಅಸ್ಥಿಗೆ ರಕ್ತ ಮಾಂಸಗಳನ್ನು ತುಂಬಿ, ಅದಕ್ಕೆ ಜೀವವನ್ನಿಟ್ಟು ಅದರ ಹೊರಮೈಯನ್ನು ಆಕರ್ಷಕವಾಗಿ ಮಾಡಿ ಅದು ಬೆಡಗು ಬಿನ್ನಾಣಗಳಿಂದ ಮೆರೆಯುವಂತೆ ಮಾಡಿರುವುದನ್ನು ಅರ್ಥಮಾಡಿಕೊಳ್ಳಬೇಕು. ಉದಾಹರಣೆಗೆ ಕವಿ-ಕಾವ್ಯ, ಕುಮಾರವ್ಯಾಸನ ಭಾರತವನ್ನು ನೋಡಿ. ಅದು ಒಳಗೆ ನೋಡಿದರೆ ಕೃಷ್ಣ ಕಥೆ, ಧರ್ಮವಿಚಾರ, ಹೊರಗೆ ನೋಡಿದರೆ ಪಾಂಡವರ ಕೌರವರ ಕಥೆ. ಕೌರವನ ಹೊಟ್ಟೆಕಿಚ್ಚು, ಈ ಕಿಚ್ಚಿನಿಂದ ಕೌರವ ಕುಲದ ನಾಶ, ಇದಕ್ಕಾಗಿ ಪಾತ್ರ ಸೃಷ್ಟನೆ, ಅವುಗಳು ಮಾತಿನಿಂದ ಪೋಷಿತವಾಗಿ ಜೀವವನ್ನು ಹೊಂದಬೇಕು, ಹಾಗೂ ಆ ಮಾತುಗಳು ಅಭಿಪ್ರಾಯಗಳನ್ನು ಸೊಗಸಾಗಿ ತಿಳಿಸಬೇಕು, ಇವೆಲ್ಲವೂ ಚಾತುರ್ಯದಿಂದ, ಅಲಂಕಾರಗಳಿಂದ ಕೂಡಿರಬೇಕು, ರಸಯುತವಾಗಿರಬೇಕು, ಇವೆಲ್ಲವನ್ನೂ ತಿಳಿದರಲ್ಲವೆ ಗಮಕಿ, ಕವಿ ಹೃದಯವನ್ನು ಬಿಚ್ಚಿ ತೋರಿಸಬಹುದು.

ಓದುಗಾರಿಕೆ :-

ಓದುವುದೇತಕ್ಕೆ ? ಕವಿ ಬರೆದಿರುವುದನ್ನು ಜನರಿಗೆ ತಿಳಿಸಲಿಕ್ಕೆ. ಕವಿ ಹೃದಯ
ವನ್ನು ಸಹೃದಯನಾಗಿ ಪ್ರವೇಶಿಸಿ ಅರ್ಥ ಮಾಡಿಕೊಂಡು, ಕವಿ ಕಲ್ಪನೆಯ ರಸದ
ಕಡಲಲಿ ಮುಳುಗಿ, ಆ ರಸವನ್ನು ಓದಿನ ರೂಪ, ಪ್ರತಿಪಾದಿಸುವಂತೆ ಹಾಡಲಿಕ್ಕೆ, ಕೇಳು
ವವರು ನಲಿಯಲಿಕ್ಕೆ ಹಾಗೂ ಓದುಗಾರಿಕೆಯಲ್ಲಿ ಸಿಲ್ಲುಗಡೆ ಸ್ವರವ್ಯಂಜನಗಳ ಪರಿಶಿ
ಸ್ಪಷ್ಟ ಉಚ್ಚಾರಣೆ, ಮಾತಿನ ಚಾತುರ್ಯ, ಅಲಂಕಾರಗಳು ಇತ್ಯಾದಿಗಳನ್ನು ತಿಳಿದು
ಓದಿ ಕೇಳುವವರ ಮನ ಮೆಚ್ಚಿಸಲಿಕೆ.

ರಾಗದ ಹೊದಿಕೆ :-

ಸಾಹಿತ್ಯವು ಮನವನ್ನು ಮುಟ್ಟಬೇಕಾದರೆ ಸಾಹಿತ್ಯದ ರಸವನ್ನು ತಿಳಿದು ಅದಕ್ಕೆ
ತಕ್ಕ ರಾಗವನ್ನು ಜೋಡಿಸಿ ಹಾಡಬೇಕು. ಇದನ್ನು ಅಡಿಗೆಗೆ ಹೋಲಿಸಬಹುದು.
ಈ ಜೋಡಿಸುವ ಕ್ರಮ ಮಜ್ಜಿಗೆ ಹುಳಿಗೆ ಉಪ್ಪು ಸೇರಿಸುವಂತೆ, ಪಾಯಸಕ್ಕೆ ಸಕ್ಕರೆ
ಸೇರಿಸುವಂತೆ, ಒಬ್ಬಟ್ಟಿಗೆ ಬೆಲ್ಲ ಸೇರಿಸುವಂತೆ. ಸೇರಿಸುವ ಹದ ಕರಗತವಾದರೆ
ರುಚಿ ಪರಮಾನಂದವನ್ನುಂಟು ಮಾಡುತ್ತದೆ. ಸಾಹಿತ್ಯಕ್ಕೆ ಈ ರೀತಿ ರಾಗವನ್ನು
ಬೆರಸುವುದಕ್ಕೆ ಸಂಗೀತದ ತಿಳುವಳಿಕೆ ಚೆನ್ನಾಗಿಯೇ ಇರಬೇಕು. ಇಲ್ಲದಿದ್ದರೆ ಓದು
ಗಾರಿಕೆ ಶೋಭಿಸುವುದಿಲ್ಲ. ಸಾಹಿತ್ಯದ ಸೌಖ್ಯವು ಸಂಗೀತದಿಂದ ಹೆಚ್ಚುತ್ತದೆಂಬು
ದನ್ನು ವಾಗ್ಗೇಯಕಾರರ ರಚನೆಗಳನ್ನು ಘನ ವಿದ್ವಾಂಸರು ಹಾಡುವಾಗ ತಿಳಿದುಕೊಳ್ಳ
ಬಹುದು. ಮತ್ತೂ ಸಾಹಿತ್ಯವನ್ನೂ ಸಂಗೀತವನ್ನೂ ಉತ್ತಮವಾಗಿ ಬೆರಸಿ ಹಾಡುವ
ಗಮಕಿಗಳ ವಾಚನದಿಂದ ಗೊತ್ತುಮಾಡಿಕೊಳ್ಳಬಹುದು. ಎಂದರೆ ಎರಡರ ತಿಳು
ವಳಿಕೆಯೂ ಪೂರ್ಣವಾಗಿ ಆದರೇನೇ ಗಮಕದ ಮಹತ್ತು. ಸಾಹಿತ್ಯವನ್ನು ಸಂಗೀತ
ವಿಲ್ಲದೆ ಚೆನ್ನಾಗಿ ಓದುವವರಿದ್ದಾರೆ ಅವರು ಈ ಓದುಗಾರಿಕೆ ಗಮಕವಲ್ಲವೆ ಎನ್ನು
ತ್ತಾರೆ. ಅರ್ಥವಾಗುವ ಸಾಹಿತ್ಯ ಪರಿಣಾಮವನ್ನುಂಟುಮಾಡುತ್ತೆ. ಈ ಪರಿಣಾಮ
ಅರ್ಥಮಾತ್ರಕ್ಕೆ ಸೇರಿದ್ದು. ಸಾಹಿತ್ಯಕ್ಕೆ ರಾಗ ಬೆರೆತರೆ ಮಾತಿಗೆ ಚೈತನ್ಯವುಂಟಾಗಿ
ಇನ್ನೂ ಪ್ರಭಾವ ಹೆಚ್ಚುತ್ತದೆ. ಇದಕ್ಕೆ ಗತಿಯೂ ಸೇರಿಕೊಂಡರೆ ಪ್ರಭಾವ
ಮುಪ್ಪುರಿ. ಇಂಗ್ಲೀಷಿನಲ್ಲಿ Sound, Sense, and Rhythan ಎನ್ನು
ತ್ತಾರ ಹಾಗೆ ಇದು. ಇದಕ್ಕೆ ತ್ಯಾಗರಾಜರ ಶ್ರೀರಂಜನಿ ರಾಗದ 'ಸೊಗಸುಗಾ
ಮೃದಂಗ ತಾಳಯು' ಆಧಾರವಾ ಎಂಬಂತಿದೆ, ಮಾತು ಮಾತಿನ ಉದಾತ್ತತೆ,
ಮೃದಂಗ ತಾಳ ಸಂಗೀತ, ಜತಿ, ಭಕ್ತಿ ಹಾಡುವಾಗ ರಸಕ್ಕೆ ಪ್ರವೇಶ, ಕಲಾಕುಶಲತೆ
ಇವೆಲ್ಲಾ ಸಂಗೀತಗಾರನಿಗ ಬೇಕಾದಷ್ಟೇ ಗಮಕಿಗೂ ಬೇಕು. ಸಂಗೀತವೆಂದರೆ ಸ್ವರದ
ಗಲಾಟೆಯಲ್ಲ. ಆತುರಾತುರವಾಗಿ ಹಾಡುವುದೂ ಅಲ್ಲ. ಪ್ರತಿಯೊಂದು ಕೀರ್ತನೆ

ಯನ್ನೂ ಅದರ ಗತಿಯನ್ನೂ ಅರಿತು, ಸಾಹಿತ್ಯ ಶುದ್ಧವಾಗಿ, ಭಾವ ಶುದ್ಧವಾಗಿ ಹಾಡುವುದು. ಇದು ಗಮಕದ ಸೀಮೆಗೂ ಸೇರಿದುದು.

ಸಾಹಿತ್ಯ ಅಧ್ಯಯನ :-

ಗಮಕಿಯಾದವನಿಗೆ ಸಂಗೀತ ಸಾಹಿತ್ಯಗಳ ಅಧ್ಯಯನ ಅವಶ್ಯಕ. ಗಮಕಿ ಕಾವ್ಯವನ್ನು ಓದಬೇಕಲ್ಲವೆ ? ಯಾವುದಾದರೂ ಒಂದು ಕಾವ್ಯವನ್ನು ಅವನು ಪೂರ್ತಿಯಾಗಿ ಅಧ್ಯಯನ ಮಾಡಿದರೇನೆ ಅವನಿಗೆ ಧೈರ್ಯವುಂಟಾಗುವುದು. ರಾಜಶೇಖರ ವಿಲಾಸವನ್ನು ಕರಗತ ಮಾಡಿಕೊಂಡರೆ ಸಾಕು. ಬಿಂದೂ ರಾಯರು ಕುಮಾರವ್ಯಾಸ ಭಾರತವನ್ನು ಕರತಲಾಮಕ ಮಾಡಿಕೊಂಡಿದ್ದರು. ಲಕ್ಷ್ಮೀಶನನ್ನು ಹಾಗೆ ಸಿದ್ಧಿಸಿಕೊಂಡವರಿಲ್ಲವಲ್ಲಾ ಎಂದು ಸಾಹಿತ್ಯ ಅಧ್ಯಯನ ಬೇಂದ್ರೆಯವರ ಕೊರಗಾಗಿತ್ತು. ಪಂಪ ಭಾರತ, ರಾಜಶೇಖರ ವಿಲಾಸ, ರನ್ನ ಗದಾಯುದ್ಧ, ರಾಘವಾಂಕನ ಹರಿಶ್ಚಂದ್ರ ಕಾವ್ಯ, ಲಕ್ಷ್ಮೀಶನ ಭಾರತ ಇವೆಲ್ಲವೂ ಅಧ್ಯಯನಕ್ಕೆ ಬೇಕಾದ ಕಾವ್ಯಗಳೇ. ಗಮಕಿಗೆ ಇವೆಲ್ಲವೂ ಬೇಕು. ಒಂದು ಕಾವ್ಯವನ್ನಾದರೂ ಅಮೂಲಾಗ್ರವಾಗಿ ನೋಡಿ ಪೂರ್ತಿಯಾದ ಯಾಜಮಾನ್ಯವನ್ನು ಅದರ ಮೇಲೆ ಸ್ಥಾಪಿಸಿಕೊಳ್ಳಬೇಕು. ಇಲ್ಲದಿದ್ದರೆ ಗಮಕಿಗೆ ಅಭ್ಯಾಸ ಪೂರ್ಣವಾದೀತೆ ?

ಸಂಗೀತ ಅಧ್ಯಯನ

ಹಾಗೆಯೇ ಸಂಗೀತವನ್ನು ಸಹ ಅಧ್ಯಯನ ಮಾಡಬೇಕು. ಸಾಹಿತ್ಯಕ್ಕೂ ಸಂಗೀತಕ್ಕೂ ಎಲ್ಲಿಯುಂಟೇ ! ಇವುಗಳಲ್ಲಿ ಪರಿಣತನಾದೆ ಎನ್ನಲಾಗುತ್ತದೆಯೆ ? ಈ ಅಧ್ಯಯನ ನಿರಂತರ. ಗಮಕಕ್ಕೆ ಸಾಮಾನ್ಯವಾಗಿ ಬೇಕಾದ 15-20 ರಾಗಗಳನ್ನು ಚೆನ್ನಾಗಿ ಪರಿಚಯ ಮಾಡಿಕೊಳ್ಳಬೇಕು. ಸಂಗೀತ ಅಭ್ಯಾಸವಿರುವವರು ರಾಗ ಸಂಚಾರ, ರಾಗದ ಸುಖಸ್ಥಾನಗಳು, ಮೂರ್ಛನೆಗಳು ಇವುಗಳನ್ನೆಲ್ಲಾ ಸಂಗೀತ ಅಧ್ಯಯನ ರೂಢಿಮಾಡಿಕೊಂಡು, ಸಾಹಿತ್ಯಕ್ಕೆ ಇವರಲ್ಲಿ ಒಪ್ಪುವ ಒಂದು ರಾಗವನ್ನು ಹಚ್ಚಿ ಹಾಡುವುದು ಕ್ರಮವಾದೀತು. ಸಪ್ತಸ್ವರಗಳ ತಿಳುವಳಿಕೆಯಿಲ್ಲದೆಯೇ ರಾಗವನ್ನು ಹಾಡಿ ಹಾಡಿ ರೂಢಿಮಾಡಿಕೊಂಡು ಗಮಕಿಯಾಗಬಹುದು. ಏನಿದ್ದರೂ ಈ ಕ್ರಮದಲ್ಲಿ ರಾಗದ ಛಾಯೆ ಒಂದರಿಂದ ಇನ್ನೊಂದಕ್ಕೆ ಹೋಗಬಹುದು : ಧೈರ್ಯವಾಗಿ ಎಲ್ಲಾ ಕಡೆಯಲ್ಲೂ ರಾಗದಲ್ಲಿ ಸಂಚರಿಸಲಾಗುವುದಿಲ್ಲ: ರಾಗದ ತಿಳುವಳಿಕೆಯೂ ಸಂಕುಚಿತವಾಗಿರುತ್ತದೆ. ಹಾಗೆಯೇ ಸಾಹಿತ್ಯವೂ ಸಹ. ಸಾಹಿತ್ಯವನ್ನು ಅಧ್ಯಯನ ಮಾಡಿ ಪಾಂಡಿತ್ಯವನ್ನು ಪಡೆದವನು ಭಯವಿಲ್ಲದೆ ಪದಚ್ಛೇದ ಮಾಡಬಹುದು. ಯತಿಯನ್ನು ತಿಳಿದು ಹಾಡಬಹುದು. ಪ್ರಾಸಾನು ಪ್ರಾಸಗಳನ್ನು ತೋರಿಸಿಕೊಡಬಹುದು. ಅಲಂಕಾರಗಳನ್ನು ತಿಳಿದು ಆ ಭಾಗಗಳಗ್ಗು ಸಾಕಷ್ಟು ಒತ್ತಿ ಹೇಳಬಹುದು. ತತ್ಕಾರಣ ಸಂಗೀತವನ್ನೂ ಸಾಹಿತ್ಯವನ್ನೂ ಅಧ್ಯಯನ ಮಾಡಿದಷ್ಟೂ ಗಮಕವು ಪರಿಮಳಿಸುತ್ತದೆ. ಇವಕ್ಕೂ ಅಧಿಕವಾಗಿ ಕವಿ ಹೃದಯಕ್ಕೆ ಪ್ರವೇಶಿಸಿದರೆ,

ಪ್ರಥಮ ಪ್ರೌಢಿಯಕಡೆ ಗಮನಕೊಟ್ಟರೆ ಗಮಕವು ಉತ್ಕೃಷ್ಟತರವಾಗುವುದರಲ್ಲಿ ಸಂದೇಹ ವಿಲ್ಲ.

ಗಮಕ ಮತ್ತು ಭಾಷೆ :-

ಗಮಕಕ್ಕೆ ಸಾಹಿತ್ಯ ಅಗತ್ಯ. ಸಾಹಿತ್ಯವಿಲ್ಲದೆ ಗಮಕವಿಲ್ಲ. ಗಮಕವೆಂದರೆ ಸಾಹಿತ್ಯದ ಸೊಬಗುಗಳನ್ನು ಪ್ರಕಾಶಕ್ಕೆ ಬರುವಂತೆ ಓದುವುದು. ಸಾಹಿತ್ಯದಲ್ಲಿ ಗದ್ಯಕ್ಕಿಂತ ಪದ್ಯ ಓದಲು ಇಂಪು. ಪದ್ಯ ಸಂಗ್ರಹವಾಗಿರುತ್ತದೆ. ಮತ್ತು ಛಂದಸ್ಸಿನಿಂದಲೂ ಪ್ರಾಸದಿಂದಲೂ ಅಲಂಕಾರಗಳಿಂದಲೂ ಕೂಡಿರುತ್ತದೆ. ಅದಕ್ಕೆ ನಾದದ ಇಂಪು ಸೊಂಪುಗಳು ಸೇರಿ ಮನೋಹರವಾಗಿರುತ್ತದೆ. ಒಂದೆರಡು ಉದಾಹರಣೆಗಳು ಸಾಕು ಇದನ್ನು ತಿಳಿಸಲು

ಹೆಜ್ಜೆಯ ಮೇಲೆ ಹೆಜ್ಜೆಯ ನಿಕ್ಕುತ
ಗೆಜ್ಜೆಯ ಕಾಲ್ಸಳ ದನಿಯಾ ಮಾಡುತ
ಸಜ್ಜನ ಸಾಧು ಪೂಜೆಯ ವೇಳೆಗೆ
ಮಜ್ಜಿಗೆಯೊಳಗಿನ ಬೆಣ್ಣೆಯಂದದಿ

ಎಲ್ಲಾ ಸಾಲಿನಲ್ಲಿಯೂ ಎರಡನೆಯ ಅಕ್ಷರ "ಜ"ಕಾರ. ಹೆಜ್ಜೆಯ, ಗೆಜ್ಜೆಯ, ಸಜ್ಜನ, ಮಜ್ಜಿಗೆ. ಇವು ನಾದದ ಇಂಪನ್ನು ಹೊಂದಿವೆ, ಶಬ್ದಾಲಂಕಾರವಾಗಿದೆ. ಲಕ್ಷ್ಮಿ ಮಜ್ಜಿಗೆಯೊಳಗೆ ಬೆಣ್ಣೆಬರುವಂತೆ ಬರಬೇಕಂತೆ. ಗೆಜ್ಜೆ ಕಾಲ್ಸಳ ದನಿಮಾಡುತ್ತ ಬರಬೇಕಂತೆ. ಸುಂದರವಾದ ಅಭಿಪ್ರಾಯ ಮನೋಹರವಾಗಿ ಹೇಳಲ್ಪಟ್ಟಿದೆ.

ದೊರೆಯ ತನದಲಿ ನೋಡೆ ಧರಣಿ ದೇವಿಗೆ ರಮಣ
ಸಿರಿಯ ತನದಲಿ ನೋಡೆ ಶ್ರೀಕಾಂತನೂ
ಹಿರಿಯ ತನದಲಿ ನೋಡೆ ಸರಸಿಜೋದ್ಭವನಯ್ಯ
ಗುರುವು ತನದಲಿ ನೋಡೆ ಜಗದಾದಿ ಗುರುವೂ,

ಇದರಲ್ಲಿ ಪ್ರಾಸವಷ್ಟಲ್ಲದೆ ಅಭಿಪ್ರಾಯದ ಸೊಗಸನ್ನೂ ನೋಡಬಹುದು, ಹಾಗೆ ಎಷ್ಟು ಸರಳ ಅಭಿಪ್ರಾಯ. ತನದಲಿ, ತನದಲಿ, ನೋಡೆ. ನೋಡೆ ಎಂಬುವು ಮತ್ತೆ ಮತ್ತೆ ಕಿವಿಗೆ ಬಂದು ಸೌಖ್ಯವನ್ನು ಕೊಡುತ್ತದೆ. ಯಾವುದರಲ್ಲಿ ನೋಡುತ್ತೀರಿ ಅದರಲ್ಲೆಲ್ಲಾ, ಗೋಪಿ ಜನಪ್ರಿಯನು ದೊಡ್ಡವನು ಎಂಬುದು ಪಾದಕ್ಕೂ ಚೆನ್ನವಾಗಿ ಯಾದವನಿಗೂ ಮೇಲ್ಪಂಕ್ತಿ.

ಸುಲಿದ ಬಾಳೆಯ ಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ

ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ಪ
ಲಲಿತವಹ ಕನ್ನಡದ ನುಡಿಯುಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೆ ಸಂಸ್ಕೃತದಲಿನ್ನೇನು.

ಇದು ಭಾಮಿನಿ ಷಟ್ಪದಿಯಲ್ಲಿದೆ—ಅಂದದಿ, ಚಂದದಿ ಎಂಬುವು ಕಿವಿಗಿಂಪು. ಒಂದೇ ಶಬ್ದವು ಮತ್ತೆ ಮತ್ತೆ ಬರುವುದರಿಂದ ಓದುವುದು ಸ್ವಾರಸ್ಯವಾಗಿ ಕಾಣುತ್ತದೆ. ಅಭಿಪ್ರಾಯದ ಪ್ರತಿಪಾದನೆಗೆ ಇವಕ್ಕೂ ಬೇರೆ ಉಪಮಾನಗಳು ಬೇಕೆ? ಹಾಗೂ ಕನ್ನಡ ಎಷ್ಟು ಸುಲಭವೆನ್ನುವುದನ್ನು ಸುಲಭವಾಗಿಯೇ ಹೇಳಲ್ಪಟ್ಟಿದೆ.

ಅಲ್ಲಿಗಲ್ಲಿಗೆ ಬೆಳೆದ ಬೆಳೆಗಳಿಂ ಮೆಳೆಗಳಿಂ
ದಲ್ಲಿಗಲ್ಲಿಗೆ ವನಸ್ಥಳಗಳಿಂ ಕೊಳಗಳಿಂ
ದಲ್ಲಿಗಲ್ಲಿಗೆ ರನ್ನದರೆಗಳಿಂ ಕೆರೆಗಳಿಂ ಪರಿವ ಪರಿಕಾಲ್ಗಳಿಂದೆ
ಅಲ್ಲಿಗಲ್ಲಿಗೆ ತೋರ್ಪ ಗಿರಿಗಳಿಂ ಕರಿಗಳಿಂ
ಅಲ್ಲಿಗಲ್ಲಿಗೆ ನೆರೆದ ಶುಕಗಳಿಂ ಪಿಕಗಳಿಂ
ದಲ್ಲಿಗಲ್ಲಿಗೆ ಗವಾಸ್ಪದಗಳಿಂ ನದಗಳಿಂ ಆದೇಶಮೊಪ್ಪಿರ್ದುದು.

"ಅಲ್ಲಿಗಲ್ಲಿಗೆ" ಎಷ್ಟು ಸಲ ಹೇಳಲ್ಪಟ್ಟಿದೆ. ಬೆಳೆಗಳಿಂ, ಮೆಳೆಗಳಿಂ, ಸ್ಥಳಗಳಿಂ, ಕೊಳಗಳಿಂ, ಅರೆಗಳಿಂ, ಕೆರೆಗಳಿಂ, ಹೀಗೆ ಜೋಡ ಪದಗಳು ಏಕನಾದವನ್ನು ಹೊಂದಿ ಇಂಪಾಗಿ ಕಾಣುವುವು. ಇವು ವರ್ಣನೆಗೆ ಸೊಗಸನ್ನು ಕೊಡುವುದಲ್ಲದೆ ಶಬ್ದದ ಇಂಪನ್ನೂ ಕವಿಚಾತುರ್ಯವನ್ನೂ ತೋರುವುದಿಲ್ಲವೆ, ಪದಸಂಧಾನ ಮೆಚ್ಚುವಂತಿಲ್ಲವೆ ?

ಮಲ್ಲಿಗೆಯಲ್ಲದೆ ಸಂಪಿಗೆಯಲ್ಲಿದೆ
ದಾಳಿಂಬಿ ಮಲ್ಲದೊಪ್ಪು ಚೆಂದೆಂ
ಗಲ್ಲದೆ ಮಾವಲ್ಲದೆ ಕಾಂ
ಗಲ್ಲದೆ ಗಿಡಮರಗಳಿಲ್ಲಾ ನಾಡೋಳ್.
ಇವು ಪಳ್ಳಿಗಳಿವು ಪಟ್ಟಣ
ಮಿವು ಕೆರೆಗಳಿವೆರಗಿನಿಂದ ಮುಗಿಲೋಳಿಗಳಿಂ
ತಿವು ಕಾಡಿವು ಪೆಸರ್ವಡೆದೊ
ಪ್ಪುವ ಬನಮೆಂದರಿದು ಪೇಳ್ಪುದರಿದಾ ನಾಡೋಳ್

ಇವು ಕಂದಗಳು, ಆಂಡೈಯ್ಯನವು, ನಮ್ಮ ದೇಶವನ್ನು ಮಮತೆಯಿಂದ ವರ್ಣಿಸುವ ವೈಖರಿಯನ್ನು ನೋಡಿ. ನಮ್ಮ ರಾಷ್ಟ್ರಗೀತೆಯಾದ "ಸುಭಲಾಂ ಸುಫಲಾಂ ಮಲ

ಯಜ ಶೀತಲಾಂ" ಎಂಬ ಅಭಿಪ್ರಾಯಗಳೇ, ರಾಷ್ಟ್ರಗೀತೆ ಹುಟ್ಟಿಸಿದುವು. ಆಂಡಯ್ಯನ ಕಂದಗಳು ಹಿಂದಿನವು.

ಗಮಕಿಯಾದವನು ಇಂಥಾ ಸಾಹಿತ್ಯವನ್ನೆಲ್ಲಾ ಓದಿ ಭಾಷಾಲಾವಣ್ಯದ ನೋಟವನ್ನು ಕೊಟ್ಟು ಭಾಷೆಯ ಮೇಲೆ ಮಮತೆಯನ್ನು ಹುಟ್ಟಿಸಬಹುದು. ಈ ರೀತಿ ನಾಡು ನುಡಿಗಳ ಮೇಲೆ ಪ್ರೇಮವನ್ನು ಮೂಡಿಸುವವನು ನಿಜಕ್ಕೂ ಅಧಿಕನೇ. ನಮ್ಮ ನಾಡು ನಮ್ಮ ನುಡಿ ನಮ್ಮ ಜನ ಎಂಬ ಮಮತೆ ಇಲ್ಲದ ಜೀವನ ಜೀವನವೇ !

ಮನೋರಂಜನೆ ಮತ್ತು ಧರ್ಮ :-

ಕಾವ್ಯಗಳು ಹುಟ್ಟಿರುವುದು ಮನೋರಂಜನೆಗಾಗಿ, ಧರ್ಮಾಧರ್ಮಗಳನ್ನು ತಿಳಿಸುವುದಕ್ಕಾಗಿ, ಕಾವ್ಯಗಳು ಕಥೆಗಳು-ಉತ್ತಮವಾದ ಭಾಷೆಯಲ್ಲಿವೆ. ಓದಿ ಆನಂದ ಪಡುವವರು ಕೆಲವರು. ಕೇಳಿ ಆನಂದ ಪಡುವವರು ಹೆಚ್ಚು. ಕಾರಣ ಓದುಬರದ ಬರದವರು ಅಧಿಕ. ಹಿಂದೆಯಂತೂ ಅಕ್ಷರಸ್ಥರ ಸಂಖ್ಯೆ ಇನ್ನೂ ಕಡಿಮೆ. ಆದಕ್ಕಾಗಿ ಗಮಕಿಯ ಸಹಾಯ ಬೇಕೇ ಬೇಕು. "ಕುರಿತೋದದೆಯುಂ ಕಾವ್ಯ ಪ್ರಯೋಗ ಮತಿಗಳ್" ಎನ್ನಬೇಕಾದರೆ ನಮ್ಮ ಜನಗಳಿಗೆ ವಿವೇಕವಿತ್ತೆ ಎಂದು ಹೇಳಬೇಕಾದುದೇ ಇಲ್ಲ. ಕಾವ್ಯವನ್ನು ಕೇಳಿ ಕೇಳಿ ತಿಳಿದೇ ಅದರ ಚರ್ಚೆಗೆ ಅನುವಾಗುತ್ತಿದ್ದರು. ಕಾವ್ಯದ ಕೆಲಸವೂ ಸಹ ಹೀಗೆ ಎಂದು ನೃಪತುಂಗನು ಹೇಳಿದ್ದಾನೆ :-

ಪಾಪಮಿದು ಪುಣ್ಯಮಿದು ಹಿತ
ರೂಪಮಿದು ಅಹಿತಪ್ರಕಾರಮಿದು ಸುಖ ಮಿದು ದುಃಕಿ
ಖೋಪಾತ್ತಮಿಹೆಂದರಿ ಪುಗು
ಮಾ ಪರಮ ಕವಿ ಪ್ರಧಾನರಾ ಕಾವ್ಯಂಗಳ್

ಇದಕ್ಕೆ ನಿದರ್ಶನ ವ್ಯಾಸಭಾರತ. ವಿದುರನ ಮಾತು ಭೀಷ್ಮರ ಮಾತು ಇವೆಲ್ಲಕ್ಕೂ ಮಿಗಿಲಾಗಿ ಕೃಷ್ಣಪರಮಾತ್ಮನು ಬೋಧಿಸಿದ ಗೀತೆ ಧರ್ಮಾಧರ್ಮಗಳ ಗಣಿಯಾಗಿವೆ. ರಾಮಾಯಣ ಮಹಾಭಾರತ ಭಾಗವತಗಳು ಸತ್ಕಾಲಕ್ಷೇಪಕ್ಕೆ ಮನೋರಂಜನೆಗೆ ಬೇಕಾದ ಕಾವ್ಯಗಳು. ಇವೆಲ್ಲವನ್ನೂ ಓದುವ ಗಮಕಿ ನಿಜಕ್ಕೂ ಸಮಾಜಕ್ಕೆ ಉಪಕಾರಿ. ಜನ ಬದುಕಲೆಂದು ಕಾವ್ಯ ಬರೆಯುವ ಕವಿ, ಅದನ್ನು ಕೇಳಿಸಿ ಆನಂದ ಪಡಿಸುವ ಗಮಕಿ ವಂದ್ಯರುಗಳು.

ರಾಮಾಯಣವೋ ಅದ್ಭುತವಾದುದು. ಸೀತಾಮಾತೆಯ ಪಾತಿವ್ರತ್ಯ, ರಾಮ ಲಕ್ಷ್ಮಣ ಭರತ ಶತ್ರುಘ್ನರ ಭ್ರಾತೃ ಪ್ರೇಮ ಆಂಜನೇಯನ ನಿಷ್ಠೆ ಮತ್ತು ಸಾಹಸ ರೋಮಾಂಚವನ್ನುಂಟುಮಾಡುತ್ತವೆ. ಭಾಗವತವು ಕೃಷ್ಣಕಥೆ. ಕೃಷ್ಣನ ಬಾಲ್ಯ,

ಆತನಿಂದ ರಾಕ್ಷಸರ ಸಂಹಾರ, ನಂಬಿದವರನ್ನು ಕಾಪಾಡುವ ಅವನ ಉತ್ಸಾಹ, ಇವೆಲ್ಲವೂ ಪರಮಾತ್ಮನ ಲೀಲೆ. ಇವು ಎಷ್ಟು ಮನೋಹರ-ಇವು ಧರ್ಮಾ ಧರ್ಮಗಳನ್ನು ತಿಳಿಸುತ್ತಿದ್ದುದರಿಂದ ಜನರ ರೀತಿ ನೀತಿಗಳು ಉತ್ತಮಗೊಳ್ಳುತ್ತಿದ್ದುವು. ಈಗಲೂ ನಮ್ಮ ಸಂಸ್ಕೃತಿಯು ಅರಿವು ನಮಗಿಲ್ಲ. ನಮ್ಮ ಮಕ್ಕಳಿಗೆ ರಾಮಾಯಣ ಮಹಾಭಾರತ ಕತೆಗಳು ಬೇಕಿಲ್ಲ. ಪರದೇಶಗಳ ಸಂಸ್ಕೃತಿ ನಮ್ಮಲ್ಲಿ ಬೇರೂರಿ ನಮ್ಮಲ್ಲಿ ನೀತಿಗಳಿಗೆ ಅಲಕ್ಷತೆ ಏರ್ಪಡುತ್ತಾ ಇದೆ. ಇಂದ್ರಿಯ ಚಾಪಲ್ಯಕ್ಕೆ ಒಳಗಾಗುವುದು ಸುಲಭ. ಇಂದ್ರಿಯಗಳನ್ನು ನಿಗ್ರಹಿಸುವುದು ಕಷ್ಟ. ಆರ್‌ನಾಲ್ಡ್ ಟೋಯಂಬಿ, ಅನೇಕ ನಾಗರಿಕತೆಗಳು ಹಾಳಾದದ್ದು ಇಂದ್ರಿಯ ಚಾಪಲ್ಯಕ್ಕೆ ಒಳಗಾದುದರಿಂದ ದೇಶದ ಉನ್ನತಿಗೆ ನೀತಿಯೇ ಕಾರಣ ಎಂದಿದ್ದಾರೆ. ಅವರು ದೇಶ ವಿದೇಶಗಳ ನಾಗರಿಕತೆಯನ್ನು ಅಧ್ಯಯನ ಮಾಡಿದವರು. ಈ ಮಾತುಗಳು ಸತ್ಯವೆಂದು ಗೀತೆಯು ತಿಳಿಸುತ್ತದೆ, ನಮ್ಮ ಹಿರಿಯರೆಲ್ಲರೂ ಹೇಳಿದ್ದಾರೆ, ನೀತಿ ಪತನ ತಡೆಗಟ್ಟಲು ನಮ್ಮ ಪುರಾಣಗಳು ಪುಣ್ಯ ಕಥೆಗಳು ಆವಶ್ಯಕ, ಅವನ್ನು ಸ್ವಾರಸ್ಯವಾಗಿ ಓದಲು ಗಮಕಿಯೇ ಬೇಕು. ಆ ಕಾರಣ ಗಮಕಿಯ ಸ್ಥಾನ ಹೆಚ್ಚಿನದೇ.

ಭಾಷೆಯ ಕಲಿಕೆ

ಗಮಕಿಯು ಓದುವುದು ಸಾಮಾನ್ಯವಾಗಿ ಪದ್ಯಗಳನ್ನು. ಪದ್ಯಗಳಲ್ಲಿ ಇಂಪು ಸೊಂಪು, ಪದಲಾಲಿತ್ಯ, ಅಲಂಕಾರಗಳು, ಅಭಿಪ್ರಾಯಗಳನ್ನು ಚಮತ್ಕಾರವಾಗಿ ಹೇಳುವ ರೀತಿಗಳು, ಪ್ರಾಸ, ನಾದದ ಓಟ, ಎಲ್ಲವೂ ಉಂಟು. ಭಾಷೆಯಲ್ಲಿ ಇನ್ನೇನು ವಿಶೇಷ ? ಇಷ್ಟೇ ಅಲ್ಲವೆ ? ಹಿಂದೆ ಪದ್ಯಸಾರವೆಂಬ ಪುಸ್ತಕ ಪಠ್ಯ ಪುಸ್ತಕವಾಗಿತ್ತು ಅದರಲ್ಲಿದ್ದ ಪದ್ಯಗಳನ್ನು ಬಾಯಿಗೆ ಗಟ್ಟುಮಾಡುತ್ತಿದ್ದೆವು. ಭಾಷೆ ಈ ರೀತಿಯಲ್ಲಿ ಮನಸ್ಸಿಗೆ ಬೇರೂರುತ್ತಿತ್ತು. ಹಾಗೂ ಚಿಕ್ಕ ವಯಸ್ಸಿನಲ್ಲಿ ಕಲಿತದ್ದು ಎಂದಿಗೂ ಮರೆಯುವುದಿಲ್ಲ. ಉಪಾಧ್ಯಾಯರು ಗಮಕಿಗಳಾದರೆ ಪದ್ಯ ಕಲಿಯುವ ಹುಚ್ಚು ಭಾಷೆಯ ಕಲಿಕೆ ಮಕ್ಕಳಿಗಾಗದೆ ? ಆಗ ಕನ್ನಡವನ್ನು ಕೇಳಿ ಎದೆ ಕುಣಿದಾಡದೆ ? ಕನ್ನಡ ಕಸ್ತೂರಿಯೆಂದು ಹೇಳದೆ, ಇದಕ್ಕೂ ಹೆಚ್ಚು ಭಾಷಾ ಜ್ಞಾನವನ್ನು ನೀಡಲು ಏನಿದೆ ಮಾರ್ಗ ? ಪದ್ಯಗಳನ್ನು ಪದೇ ಪದೇ ಓದುವುದು ಜ್ಞಾಪಕದಲ್ಲಿಡುವುದು, ಪದ ಸಮೂಹವನ್ನು ನಮ್ಮದಾಗಿ ಮಾಡಿಕೊಂಡು ಬರೆಯುವಾಗ ಬಳಸುವುದು, ಕವಿ ಹೃದಯವೇನೆಂದು ತಿಳಿದು ಆನಂದ ಪಡುವುದು, ವಾಕ್ಯಗಳ ವೈವಿಧ್ಯತೆ, ಅಭಿಪ್ರಾಯಗಳನ್ನು ಹೇಳುವ ಸೊಗಸುಗಾರಿಕೆ, ಪ್ರಭಾವಯುತವಾದ ಕವಿ ಪದಪ್ರಯೋಗ, ಅವನ್ನು ನೋಡಿ ಅದರ ಅನುಕರಣ ಮಾಡುವುದು ಇತ್ಯಾದಿ, ಹೀಗಲ್ಲವೆ ಭಾಷೆ ಕಲಿಯುವ ಮಾರ್ಗ ?

ಸಂಗೀತ ಮತ್ತು ಗಮಕ :–

ಗಮಕಕ್ಕೆ ಸಂಗೀತ ಹೆಚ್ಚಾಗಿಯೇ ಬೇಕು. ಈಚೆಗೆ ರೇಡಿಯೋ, ಸಂಗೀತವನ್ನು ಸಾಕಷ್ಟು ಹರಡಿದೆ. ಸಾಮಾನ್ಯ ಜನರ ಸಂಗೀತದ ತಿಳುವಳಿಕೆ ಹಿಂದಿನ ಕಾಲಕ್ಕಿಂತ

ಹೆಚ್ಚಾಗಿಯೇ ಇದೆ. ಕಾವ್ಯ ವಾಚನವನ್ನೂ ರೇಡಿಯೋ ಪ್ರಚಾರ ಮಾಡುತ್ತಿದೆ. ಈ ಕಾರಣದಿಂದ ಗಮಕವನ್ನು ಜನಸಂದಣಿಯಲ್ಲಿ ಹಾಡುವವರು ಹೆಚ್ಚಿನ ಸಂಗೀತ ತಿಳಿದು ಕೊಳ್ಳಬೇಕು, ಜನರ ರುಚಿ ಏರುತ್ತಾ ಹೋಗುತ್ತದೆ. ಇವರು ಗಮಕ, ಲಾವಣಿ ಜನಪದ ಸಾಹಿತ್ಯ ಭಾವಗೀತೆ ಮುಂತಾದುವುಗಳನ್ನು ಕೇಳಿ ಹೆಚ್ಚು ಮಟ್ಟವನ್ನು ಆಶಿ ಸುತ್ತಾರೆ. ಸಂಗೀತ ಹೆಚ್ಚಾಗಿ ತಿಳಿಯದಿದ್ದರೆ, ಭಾಷೆಯ ವೈವಿಧ್ಯವನ್ನು ಪ್ರದರ್ಶಿ ಸಲು ಸಾಧ್ಯವಿಲ್ಲ. ಭಾಷೆಯು ಬಂಡಿ, ಸಂಗೀತವು ಎತ್ತು, ಗಮಕಿ ಬಂಡಿ ಹೊಡೆಯುವವ. ಬಂಡಿಯನ್ನು ಹೊಡೆಯುವನಲ್ಲವೆ ಅದನ್ನು ಎಲ್ಲಿಗೆ ಬೇಕಾದರೂ ತಲಪಿಸಬಹುದು. ಭಾಷೆಗೆ ಸಂಗೀತವು ಚಲನವನ್ನು ಕೊಡುತ್ತದೆ, ಬಂಡಿಯನ್ನು ಎಳೆಯುವ ಎತ್ತಿನಂತೆ, ರಸವೆಂಬ ಊರಿಗೆ ಗಮಕಿ ಬಂಡಿಯನ್ನು ಹೊಡೆಯಬೇಕು. ಈ ಕಾರ್ಯಕ್ಕೆ ಎತ್ತು ಚೆನ್ನಾಗಿದ್ದಷ್ಟೂ ಪಳಗಿದಷ್ಟೂ ಗಮಕಿಗೆ ಸೌಖ್ಯ. ಸುಲಭವಾಗಿ ಗುರಿಮುಟ್ಟಬಹುದು. ಎಂದಮೇಲೆ ಸಂಗೀತದ ಕೆಲಸ ಹೆಚ್ಚೇ. ಸಂಗೀತವನ್ನು ತಿಳಿದವನು ಭಾಷೆಯನ್ನು ಅದರ ಮೇಲೆ ಕೂರಿಸಿ ಮನಮುಟ್ಟುವಂತೆ ತೀವಿಯಿಂದ ತಕ್ಕ ವೇಗದಿಂದ ಓಡಿಸಬಲ್ಲ. ಉತ್ತಮ ಗಮಕಿಗಳ ಕೆಲಸ ಅದು. ಸಂಗೀತಾಭ್ಯಾಸವು ಆ ಕಾರಣ ಚೆನ್ನಾಗಿಯೇ ಆಗಬೇಕು. ಆದರೂ ಗಮಕದ ಗುರಿ ಸಂಗೀತ ಹಾಡುವುದಲ್ಲ. ಸಾಹಿತ್ಯವನ್ನು ಸಂಗೀತದ ಕುಂದಣದಲ್ಲಿಟ್ಟು ಪ್ರಕಾಶಿಸುವಂತೆ ಮಾಡುವುದು, ಇದರ ಹದವನ್ನು ತಿಳಿಯಲು ಉತ್ತಮ ಗಮಕಿಗಳನ್ನು ಕೇಳಬೇಕು. ಹಾಗೂ ಸಾಹಿತ್ಯವನ್ನು ಹೊಸರಾಗಗಳಿಗೆ ಜೋಡಿಸಿ ಮುದ್ದುಮುದ್ದಾಗಿ ವಿನ್ಯಾಸಮಾಡಿ, ಯಾವುದೊಂದು ಸಂಗತಿ ಅಧಿಕ ಪರಿಣಾಮವನ್ನುಂಟುಮಾಡುತ್ತದೆಂದು ನೋಡಿ, ಅದನ್ನು ಖಚಿತ ಮಾಡಿಕೊಳ್ಳುವ ಪ್ರಯೋಗ ರೀತಿಯನ್ನು ಅನುಸರಿಸಬೇಕು.

ಗಮಕಕ್ಕೂ ಸಂಗೀತಕ್ಕೂ ವ್ಯತ್ಯಾಸ:-

ಸಂಗೀತಕ್ಕೂ ಗಮಕಕ್ಕೂ ಸ್ವಲ್ಪ ವ್ಯತ್ಯಾಸವಿದೆ. ಸಂಗೀತದಲ್ಲಿ ಸಾಹಿತ್ಯ ಕಡಿಮೆ. ಗಮಕದಲ್ಲಿ ಸಾಹಿತ್ಯ ಹೆಚ್ಚು. ಸಂಗೀತವನ್ನು ಕೇಳುವಾಗ ನಾದಕ್ಕೆ ಪ್ರಾಧಾನ್ಯತೆ. ಆ ಕಾರಣ ಸಾಹಿತ್ಯವನ್ನು ಉದಾಸೀನ ಮಾಡಬೇಕಾದ್ದಿಲ್ಲ. ಪ್ರಹ್ಲಾದ+ನಾಪಿತ ಎಂದರೆ ಎಲ್ಲರಿಗೂ ಅಸಹ್ಯವಾಗುತ್ತದೆ. ಇದು ಇರಬೇಕಾದುದು ಪ್ರಹ್ಲಾದನಾ+ಪಿತ ಎಂದು. ದಶ+ರಾಮ+ಶರ ಎನ್ನುವುದನ್ನು ದಶರಾ+ಮಶರ ಮಾಡಿದರೆ ಅಭಾಸವೆ. ಇದು ಗಮಕಿಗೂ ಅನ್ವಯಿಸುತ್ತದೆ. ಗಮಕಿಯಾದವನು ಕಾಂಬೋಧಿಯಲ್ಲಿ ಆರಂಭಿಸಿ ಶಂಕರಾಭರಣಕ್ಕೆ ಎಡವಿದರೆ ತಪ್ಪಲ್ಲವೆ. ಸಂಗೀತಗಾರರೇ ಆಗಲಿ ಆರಭಿಗೂ ದೇವ ಗಾಂಧಾರಿಗೂ, ದರ್ಬಾರಿಗೂ ನಾಯಕಿಗೂ, ರೀತಿಗೌಳಕ್ಕೂ ಆನಂದಭೈರವಿಗೂ, ಸೂಕ್ಷ್ಮ ವ್ಯತ್ಯಾಸಗಳನ್ನು ತಿಳಿದು ಬೆರಸದೆ ಹಾಡುತ್ತಾರೆಯೆ ? ಸ್ವಲ್ಪ ಎಚ್ಚರಿಕೆ ತಪ್ಪಿದರೆ ಒಂದು ಇನ್ನೊಂದಕ್ಕೆ ಎಳೆದುಕೊಂಡು ಹೋಗುತ್ತದೆ ಎಂದಮೇಲೆ ಸಂಗೀತ ದವರಾಗಲಿ. ಗಮಕಿಗಳಾಗಲಿ, ಸಾಹಿತ್ಯದಲ್ಲಿ ಎಡವಬಾರದು. ಸಂಗೀತದಲ್ಲಿ ನಾದದ

ಅಂಶ ಹೆಚ್ಚು. ಅದರ ಸೂಕ್ಷ್ಮ ವ್ಯತ್ಯಾಸಗಳ ವಿನಿಕೆ ಹೆಚ್ಚು, ಸಾಹಿತ್ಯ ಕಡಿಮೆ. ಆದರೆ ರಾಗ ಸ್ವರಗಳು ಶುದ್ಧವಾಗಿರಬೇಕು. ಗಮಕದಲ್ಲಿ ಕಥೆ ಹೆಚ್ಚು. ಆ ಕಾರಣ ಸಾಹಿತ್ಯದ ಓಟ ಹೆಚ್ಚು. ಸಾಹಿತ್ಯವನ್ನು ರಸವುಳ್ಳದ್ದಾಗಿ ಮನೋಹರವಾಗಿ ಮಾಡುವ ಪ್ರಯತ್ನ ಇಲ್ಲಿ, ಆಕಾರಣ ಸಂಗೀತದ ಹಿನ್ನೆಲೆಯೆಂದರೆ, ರಾಗ ಸಾಹಿತ್ಯದ ಹಿಂಬದಿಯಲ್ಲಿದ್ದು, ಇಂಪಾಗಿ ಭಾವಪೂರಿತವಾಗಿ ಸಾಹಿತ್ಯ ಓಡುತ್ತಿರಬೇಕು. ಒಂದು ಭಾಮಿನಿ ಷಟ್ಪದಿಯ ಪದ್ಯಕ್ಕೆ 45 ಸೆಕೆಂಡುಗಳಾದರೆ ಸಾಕು ಅಥವಾ ಅಧಿಕವೆಂದರೆ 1 ನಿಮಿಷ, ಒಂದು ವಾರ್ಧಕ ಷಟ್ಪದಿಗೆ 1 ನಿಮಿಷದಿಂದ 1½ ನಿಮಿಷ ಸಾಕು, ಇಷ್ಟೇ ಸಾಹಿತ್ಯವಿರುವ ಕೃತಿಗೆ 3-4 ನಿಮಿಷಗಳು ಬೇಕಾಗುತ್ತೆ. ಇಲ್ಲಿ ಸಂಗತಿಗೆ ರಾಗದ ಎಳತಕ್ಕೆ ಅವಕಾಶ ವಿದೆ. ಧಾತು ಕೂಡ ನಿರ್ಣಯಿಸಲ್ಪಟ್ಟಿರುತ್ತದೆ, ಗಮಕದಲ್ಲಿ ಧಾತು, ಸಂಪ್ರದಾಯ ದಲ್ಲಿಲ್ಲ. ಆ ಕಾರಣ ಪೂರ್ಣ ಮನೋಧರ್ಮವುಂಟು. ಸಂಗೀತದಲ್ಲಿ ನೆರವಲಿದ್ದ ಕಡೆ ಮನೋಧರ್ಮವುಂಟು. ಸಂಗೀತ ತಿಳಿದವನು ಸಾಹಿತ್ಯಕ್ಕೆ ಗಮನ ಕೊಡಬೇಕು, ಗಮಕ ತಿಳಿದವನು ಸಂಗೀತದ ಕಡೆಗೆ ಗಮನ ಕೊಡಬೇಕು, ಇಬ್ಬರಿಗೂ ಎರಡೂ ಬೇಕು ಆದರೆ ಪ್ರಮಾಣ ಎಷ್ಟೆಂಷ್ಟೆಂದು ನಿರ್ಣಯಿಸಿ ಹಾಡಿಕೊಳ್ಳುವುದು ಅವರವರ ಜಾಣತನಕ್ಕೆ ಸೇರಿದುದು. ಸಂಗೀತಗಾರ ಸಂಗೀತದ ಎಲ್ಲೆಯಲ್ಲಿರಬೇಕು, ಅಂತೂ ಗಮಕವೂ ಸಂಗೀತವೂ ಇಬ್ಬರಿಗೂ ಬೇಕು. ಗಮಕವೆಂದರೆ ಸಾಹಿತ್ಯವನ್ನು ಚೆನ್ನಾಗಿ ಹೇಳುವ ರೀತಿ. ಸಂಗೀತದ ದಶವಿಧ ಗಮಕಗಳು ಇಲ್ಲಿ ಸಾಹಿತ್ಯ ಹೇಳುವಾಗ ಆಗಾಗ ಕಾಣಿಸಿಕೊಳ್ಳಬೇಕು. ಅದು ಸ್ವರ ಉಚ್ಚಾರಣೆಯಲ್ಲ; ಹಾಗೂ ಅಕಾರ ಉಚ್ಚಾರಣೆ ಯಲ್ಲ. ಸಾಹಿತ್ಯವನ್ನು ಈ ಅಭ್ಯಾಸಗಳಿಗೆ ಅಳವಡಿಸಿ ಹಿತಮಿತವಾಗಿ ಉಪಯೋಗಿ ಸುವುದು, ಸಾಹಿತ್ಯದ ವೈವಿಧ್ಯತೆಗಳ ನಡೆಯ ವ್ಯತ್ಯಾಸಗಳ ಮೋಹನಾಕಾರವನ್ನು ತೋರುವುದಕ್ಕೆ.

ಗಮಕದ ಉಪಯೋಗ

ಗಮಕವು ಅಷ್ಟೇನೂ ಸುಲಭವಲ್ಲ. ಅದಕ್ಕೆ ಸಾಹಿತ್ಯದ ಅಧ್ಯಯನ, ಸಂಗೀತದ ಅಧ್ಯಯನ, ಉತ್ತಮ ಕಂಠ (Diction) ಹೇಳುವ ರೀತಿಯಲ್ಲಿ ಆಕರ್ಷಕತೆ, ಧ್ವನಿಯ ಏರು ಪೇರು, ಗಮಕದ ರೀತಿಯನ್ನು ತಿಳಿದು ಹಾಡುವ ಅಭ್ಯಾಸ ಎಲ್ಲವೂ ಬೇಕು. ನಿಜ, ಯಾವುದು ಸುಲಭ ಎಲ್ಲಕ್ಕೂ ಶ್ರದ್ಧೆಯ ವ್ಯವಸಾಯ ಬೇಕು. ಆ ರೀತಿ ಪ್ರಯತ್ನ ಪಟ್ಟರೆ ಕಾಲನುಕಾಲಕ್ಕೆ ಎಳೆಗರುಂ ಎತ್ತಾಗದೆ? ಉತ್ತಮ ಗಮಕಿಯಾದ ವನು ಸಮಾಜಕ್ಕೆ ಬಹು ಉಪಕಾರಿ. ಭಾಷೆ, ಧರ್ಮಾಧರ್ಮ ನಮ್ಮ ಸಂಸ್ಕೃತಿಯ ತಿಳಿವು ಉತ್ತಮ ದರ್ಜೆಯ ಆನಂದ ಎಲ್ಲವೂ ಅದನಿಂದ ಸಿಕ್ಕುತ್ತವೆ. ಕಾರಣ ನಮ್ಮ ಕಾವ್ಯಗಳು ಇವುಗಳ ಭಂಡಾರ. ಅವುಗಳನ್ನು ವಾಚಿಸುವುದರಿಂದ ಜನಕ್ಕೆ ಅಪರಿಮಿತ ವಾದ ಲಾಭ. ನಮ್ಮ ಸಂಸ್ಕೃತಿಯು ಕುಂದುತ್ತಿರುವ ಈ ಕಾಲದಲ್ಲಿ ಕಾವ್ಯ ವಾಚನ

ದಿಂದ ಆಗಬಹುದಾದ ಮುಖ್ಯ ಅನುಕೂಲಗಳು ಮೂರು. 1) ಆನಂದ 2) ಧರ್ಮಾಧರ್ಮಗಳ ಅರಿವು 3) ಭಾಷಾ ಜ್ಞಾನ. ಮನುಷ್ಯನನ್ನು ನೆಮ್ಮದಿಯಾಗಿಡುವುದಕ್ಕೆ ಇವು ಸಾಲದೆ ?

ಕಡೆ ಮಾತು. ಕವಿ ಗಮಕಿ ವಾದಿ ವಾಗ್ಮಿ ಎಂಬ ಚತುಷ್ಟಯವನ್ನು ಕಾವ್ಯಗಳು ಹಿಂದಿನಿಂದಲೂ ಹಾಡಿವೆ, ಆಸ್ಥಾನಗಳು ಪ್ರೋತ್ಸಾಹಿಸಿವೆ. ಯಾವುದೇ ಕಲೆಯಾಗಲಿ ಪ್ರೋತ್ಸಾಹವಿಲ್ಲದಿದ್ದರೆ ಕೊರಗಬೇಕು, ಸೊರಗಬೇಕು. ಹಿಂದಿನಿಂದಲೂ ಭಾಷೆಯನ್ನು ಮೇಲೆತ್ತಿ ಕವಿ ಕೋಗಿಲೆಗಳನ್ನು ಸ್ಮರಿಸುವಂತೆ ಮಾಡಿ ಧರ್ಮಾಧರ್ಮಗಳನ್ನು ಬಿತ್ತಿ ದೇಶಪ್ರೇಮವನ್ನು ಉಜ್ವಲಗೊಳಿಸಿ ನಾಡಿಗೆ ಆನಂದವನ್ನೆರೆದು ಸಹಾಯ ಮಾಡುತ್ತಿರುವ ಗಮಕ ಅಕಾಡಮಿಯೂ ಇಲ್ಲದ್ದು, ಸಹಾಯವೂ ಇಲ್ಲದ್ದು ಆಲೋಚಿಸಬೇಕಾದುದು. ಜಾನಪದ, ಯಕ್ಷಗಾನ ಮುಂತಾದವೂ, ಸೋದರಿಯಾದ ಸಂಗೀತವೂ ತಲೆಯೆತ್ತಿ ಬಾಳುತ್ತಿರುವಾಗ ಗಮಕವು ಕಣ್ಣೀರ್ ಕರೆಯಬೇಕೇ. ಇದು ಸಂಗೀತದವರಿಗೆ ನಿರ್ಲಕ್ಷ್ಯ. ಸಾಹಿತ್ಯದವರಿಗೆ ಉಪೇಕ್ಷೆ. ಆದರೆ ಗಮಕದ ಸ್ಥಾನ ಹೆಚ್ಚು. ಭಾಷೆಯನ್ನು ಬೆಳೆಸುವ ಕಲೆ, ಧರ್ಮಾಧರ್ಮವನ್ನು ಬಿತ್ತುವ ಕಲೆ, ಆನಂದಕ್ಕೆ ಎಡೆಯಾದ ಕಲೆ, ಹಿಂದಿನಿಂದಲೂ ಇದ್ದ ಕಲೆ, ಇದಕ್ಕೆ ಇನ್ನೂ ಗಮಕಕ್ಕೆ ಪ್ರೋತ್ಸಾಹ ಅಗತ್ಯ, ಅದಕ್ಕಿರಬೇಕಾದ ಸ್ಥಾನ ದೊರಕಿಲ್ಲ, ಅದನ್ನು ಕಲಿತವರಿಗೆ ಸರಿಯಾದ ಮನ್ನಣೆಯೂ ಇಲ್ಲ. ಗಮಕಿಗಳಿಗೆ ಸಂಸ್ಕೃತಿ ಇಲಾಖೆ ಕೊಡುತ್ತಿದ್ದ ಸ್ವಲ್ಪ ಪ್ರೋತ್ಸಾಹವೂ ಈಗಿಲ್ಲ. ಆಕಾಶವಾಣಿಯ ಉತ್ತೇಜನ ಸ್ವಲ್ಪವಿರುವುದರಿಂದ ಗಮಕವು ಸ್ವಲ್ಪ ಕೇಳಿಬರುತ್ತದೆ. ದೇಶಕ್ಕೆ ಗಮಕಿಗಳಿಂದ ಆದ, ಆಗುತ್ತಿರುವ, ಆಗಬೇಕಾದ ಸೇವೆ ಅಧಿಕ. ನಮ್ಮ ಸಂಸ್ಕೃತಿಯನ್ನೂ ಭಾಷೆಯನ್ನೂ ಕಾಪಾಡುವವರು ಅವರು. ಆದರೆ ಸರ್ಕಾರದ ಅನುಕೂಲಗಳಿಗೆ ಅವರು ಇನ್ನೂ ಹೊರಗು. ಈ ಕೊರತೆ ನಿವಾರಣೆಯಾಗಿ ಕವಿಕೋಗಿಲೆ ಇಂಚರವು ಗಮಕಿಗಳಿಂದ ನಾಡ ಮೂಲೆ ಮೂಲೆಗಳಲ್ಲಿಯೂ ಮೊಳಗುವ ಕಾಲ ಬಂದೀತೇ.

ಮಹಿಳಾ ಮಂಡಲದ ತಪಸ್ವಿನೀ ತಾರಕಾ

ಆದರ್ಶ ಸತಿ ಅರುಂಧತಿ

ಪಂ. ಪಂಢರಿನಾಥಾಚಾರ್ಯ ಗಲಗಲಿ
ಸಂಪಾದಕ—ಪಂಚಾಮೃತ ತತ್ವವಾದ, ಹುಬ್ಬಳ್ಳಿ

"ಧರಾಂ ಧರಿತ್ರೀಂ ವಸುಧಾಂ ।
ಭರ್ತುಸ್ತ್ರಿಷ್ಠಾ ಮ್ಯನಂತರಂ ।
ಮನೋಽ ನುರುಂಧತಿ ಭರ್ತುಃ
ಇತಿ ಮಾಂ ವಿದ್ಧಿ ।
ಅರುಂಧತೀಮ್ ॥

ಬ್ರಹ್ಮರ್ಷಿ ವಸಿಷ್ಠರ ಪತ್ನಿಯಾದ ಅರುಂಧತಿಯು ಪ್ರಾತಃಸ್ಮರಣೀಯರಾದ ಪತಿವ್ರತಾ ಪ್ರಮದೆಯರ ಪಾವನ ಪಂಕ್ತಿಯಲ್ಲಿ ಪ್ರಥಮ ಸ್ಥಾನವನ್ನು ಹೊಂದಲು ಅರ್ಹಳಾಗಿದ್ದಾಳೆ. ವೈವಾಹಿಕ ಶುಭ ಸಂದರ್ಭದಲ್ಲಿ ಇವಳ ನಾಕ್ಷತ್ರಿಕ ದರ್ಶನವೂ ಕೂಡ ವಧೂವರರಿಗೆ ಸೌಭಾಗ್ಯಪ್ರದವೆಂದು ಆರ್ಷವಿವಾಹ ಸಂಸ್ಕಾರದಲ್ಲಿ ಹೇಳಲಾಗಿದೆ.

ಬ್ರಹ್ಮರ್ಷಿ ಭಾರ್ಯೆಯಾದ ಈ ಮಹಾಸತಿಯ ಒಂದೊಂದು ಗುಣಗಳೂ ಲೋಕೋತ್ತರ. ಅವಳ ಸತೀತ್ವ ಜಗತ್ತಿನ ಮಹಿಳಾ ಮಣಿಯರಿಗೆಲ್ಲ ಆದರ್ಶ-ಅನುಕರಣೀಯ, ಅವಳ ವ್ಯಕ್ತಿತ್ವ ಯಾರಿಗೂ ಅನುಕರಣ ಮಾಡಲಿಕ್ಕೆ ಬಾರದಷ್ಟು ಉಚ್ಚ ಮಟ್ಟದ್ದು.

ಒಂದಕ್ಕೆ ವಸಿಷ್ಠ ಮೊದಲಾದ ಮಹರ್ಷಿಗಳು ದೊಡ್ಡ ಯಜ್ಞವೊಂದನ್ನು ಮಾಡಿದಾಗ ಇಂದ್ರಾದಿ ದೇವತೆಗಳು ಸೋಮಪಿಪಾಸುಗಳಾಗಿ ಸ್ವಯಂ ಆಗಮಿಸಿದ್ದರು. ಸೂರ್ಯ ಮಂಡಲದಿಂದ ಎದ್ದು ಬಂದ ಆಹವನೀಯ ಅಗ್ನಿಯು ಮಹರ್ಷಿಗಳ ಮಂತ್ರ ಪೂತವಾದ ಆಜ್ಯಾಹುತಿಯಿಂದ ಸಮೃದ್ಧನಾದಾಗ ಅವನ ಕಣ್ಣಿಗೆ ಯಜ್ಞಕುಂಡದ ಸುತ್ತಲೂ ಋಷಿಗಳ ಪಕ್ಕದಲ್ಲಿಯೇ ಕುಳಿತ ಅರುಂಧತಿ ಮೊದಲಾದ ಮುನಿ ಮಹಿಳೆಯರು ತೋರಿ ಬಂದರು. ತೇಜಸ್ವಿನಿಯಾದ ಆ ತರುಣ ತಪಸ್ವಿನಿಯರ ಅನಿಂದ್ಯ ಸೌಂದರ್ಯವನ್ನು ಕಂಡ ಅಗ್ನಿಯ ಕಾಮಾಗ್ನಿಯು ಪುಟಿದೇಳುವುದು. "ತಪಸ್ವೀಷ್ಣರಾದ ಕಾಮ ರಾಗ ವರ್ಜಿತರಾದ ಈ ಋಷಿ ರಮಣಿಯರನ್ನು ಮುಟ್ಟಿದರೂ ನಾನು

ಬಿಟ್ಟು ಹೋಗಬಹುದು" ಎಂದು ಬಗೆದು ಅಗ್ನಿಯು ಆಹವನೀಯ ರೂಪದಿಂದ ಅವರನ್ನು ಕಣ್ಣೆತ್ತಿ ನೋಡಲು ಕೂಡ ಧೈರ್ಯ ಸಾಲದೆ ಗಾರ್ಹಪತ್ಯಾಗ್ನಿಯ ರೂಪವನ್ನು ತಳೆದು ತನ್ನ ಕಣ್ಣಿನ ಬಯಕೆಯನ್ನು ತಣಿಸಲು ಹವಣಿಸಿದ. ಋಷಿಗಳೊಂದಿಗೆ ಅವರ ಪತ್ನಿಯರು ಆಹುತಿಗಳನ್ನು ಹಾಕಬಂದಾಗ ಬಂಗಾರಬಣ್ಣದ ಆ ಸುದತಿಯರ ಚಿಗುರು-ಬೆರಳುಗಳಿಗೆ ಕಿಡಿ ಕುಡಿಗಳನ್ನು ಚಾಚಿದಂತೆ ಮಾಡಿ ಆನಂದಪಡುತ್ತಿದ್ದ.

ಹೀಗೆ ಗಾರ್ಹಪತ್ಯರೂಪದಿಂದ ಗುಪ್ತವಾಗಿ ಆ ತಪಸ್ವಿ ಗೃಹಿಣಿಯನ್ನು ಹಗಲಿರುಳು ನೋಡುತ್ತ ಆಗಾಗ ಅವರ ಬೆರಳ ತುದಿ ಸ್ಪರ್ಶಮಾಡುತ್ತಲಿದ್ದ. ಅಗ್ನಿಯ ಮನಸ್ಸು ಉದ್ದೀಪಿತವಾಗಿ ವಿರಹಾಗ್ನಿಯಲ್ಲಿ ಅವನು ಬೆಂದು ಹೋಗುವ ಪ್ರಸಂಗ ಬಂದಿತು. ಈ ಕಾಮಬಾಧೆಯನ್ನು ತಾಳಲಾರದೆ ಅವನು ಆತ್ಮಹತ್ಯ ಮಾಡಿಕೊಳ್ಳಬೇಕೆಂದು ಅಡವಿಗೆ ಹೋದ. ಹೀಗೆ ಹಾದಿ ತಪ್ಪಿ ಅಡವೀಪಾಲಾದ ಪತಿ ಅಗ್ನಿದೇವನ ದಯನೀಯ ದುರವಸ್ಥೆಯನ್ನು ಎಂದಿನಿಂದಲೂ ಅವನನ್ನು ಮೆಚ್ಚಿ ಮಡದಿಯಾಗಿ ಬಂದ ದಕ್ಷ ಕುಮಾರಿಯಾದ ಸ್ವಾಹಾದೇವಿಯು ರಹಸ್ಯವಾಗಿ ಅರಿತಕೊಂಡಳು. ಏನು ಮಾಡಿದರೂ ತನ್ನ ಚಾರಿಮೆ ಚೆಲುವಿಕೆಯತ್ತ ತಿರುಗಿ ನೋಡದ ಅಗ್ನಿಯನ್ನು ಹೇಗಾದರೂ ಬದುಕಿ ಉಳಿಯುವಂತೆ ಮಾಡಿ ತನ್ನ ಇಚ್ಛೆಯನ್ನು ಪೂರೈಸಿಕೊಳ್ಳಬೇಕೆಂದು ಹವಣಿಕೆ ಹಾಕಿದಳು, ತನ್ನ ಪಾತಿವ್ರತ್ಯ ಪ್ರಭಾವದಿಂದ ಕಾಮ ರೂಪಿಣಿಯಾಗಬಲ್ಲ ಆ ವಿಚಕ್ಷಣಳಾದ ದಾಕ್ಷಾಯಣೀ ಸ್ವಾಹೆಯು ಮೊದಲು ಅಂಗಿರಸರ ಅಂಗನೆಯಾದ ಶಿವೆಯ ರೂಪವನ್ನು ತೆಗೆದುಕೊಂಡು ಅನಿಲದೇವನ ಶಯ್ಯಾಗಾರಕ್ಕೆ ಬಂದಳು. ಆ ಋಷಿ ರಮಣಿಯ ರಮಣೀಯವಾದ ದಿವ್ಯ ರೂಪವನ್ನು ಕಂಡ ಅಗ್ನಿಯು ಅವಳನ್ನು ಋಷಿ ಪತ್ನಿಯೆಂದೇ ಭ್ರಮಿಸಿ ರಮಿಸಿ ಆನಂದ ಪಟ್ಟ. ಹೀಗೆ ಆರು ಋಷಿ ಪತ್ನಿಯರ ರೂಪಗಳನ್ನು ಒಂದೊಂದು ದಿನ ಧರಿಸಿ ದೇಹಾಂತರ ದಕ್ಷಳಾದ ಆ ದಕ್ಷಕುಮಾರಿಯು ಅಗ್ನಿದೇವನ ವಾಸನಾತೃಪ್ತಿಯನ್ನು ಮಾಡಿ ಆತ್ಮತೃಪ್ತಿಯನ್ನು ಪಡೆದಳು. ಆದರೆ ಏಳನೆಯ ದಿನ ವಸಿಷ್ಠ ಪತ್ನಿಯಾದ ಅರುಂಧತಿಯ ರೂಪವನ್ನು ತಾನು ಸ್ವೀಕರಿಸಬೇಕೆಂದು ಎಷ್ಟು ಪ್ರಯತ್ನ ಪಟ್ಟರೂ ಅವಳ ರೂಪ, ಪ್ರತಿರೂಪ ಛಾಯೆಯ ಚೂರನ್ನೂ ಕೂಡ ತನ್ನಲ್ಲಿ ತರಲು ಅವಳಿಗೆ ಸಾಧ್ಯವೇ ಆಗಲಿಲ್ಲ.

> "ಸಪ್ತಾನಾಮಪಿ ಸಾ ದೇವೀ ಸಪ್ತರ್ಷೀಣಾಂ ಮಹಾತ್ಮ
> ನಾಮ್ । ಪತ್ನೀ ಸ್ವರೂಪತಾಂ ಕೃತ್ವಾ ಕಾಮಯಾ
> ಮಾಸ ಪಾವಕಂ॥ ದಿವ್ಯರೂಪಮರುಂಧತ್ಯಾಃ ಕರ್ತುಂ
> ನ ಶಕಿತಂ ತಯಾ। ತಸ್ಯಾಃ ತಪಃ ಪ್ರಭಾವೇಣ ಭರ್ತೃ
> ಶುಶ್ರೂಷಣೇನ ಚ॥

ಅಗ್ನಿಯನ್ನು ಕಾಮಿಸಿದ ಸ್ವಾಹೆಯು ಸಪ್ತರ್ಷಿಗಳಲ್ಲಿ ಆರು ಋಷಿ ಪತ್ನಿಯರ ರೂಪ ತೆಗೆದುಕೊಂಡು ತನ್ನ ನಲ್ಲನೊಡನೆ ಭೋಗವಿಲಾಸಗೈಯಲು ಸಮರ್ಥಳಾದಳು.

ಆದರೆ ಮಹಾಸತಿ ಅರುಂಧತಿಯ ಪರಮ ಪಾತಿವ್ರತ್ಯದಿಂದಲೂ ಅಸ್ಖಲಿತವಾದ ತಪಃ ಪ್ರಭಾವದಿಂದಲೂ ಅವಳ ರೂಪವನ್ನು ಮಾತ್ರ ಧರಿಸಲಿಕ್ಕೆ ಆಗಲಿಲ್ಲ ಆ ಸ್ವಾಹಾದೇವಿಗೆ ಮುಂದೆ ಈ ಸಮಾಚಾರವು ಉಳಿದ ಋಷಿಗಳಿಗೆ ತಿಳಿದಿದ್ದರಿಂದ ಅವರೆಲ್ಲರೂ ಅರುಂಧತಿ ದೇವಿಯ ಪಾತಿವ್ರತ್ಯದ ಉಚ್ಚಮಟ್ಟದ ಮಹಿಮೆ ಮೇಲ್ಮೆಗಳನ್ನು ಮುಟ್ಟದಿರುವ ತಮ್ಮ ಪತ್ನಿಯರನ್ನೂ ಬಿಟ್ಟು ಬಿಟ್ಟರು. ಆದುದರಿಂದ ಇಂದು ಮುಗಿಲಿನಲ್ಲಿ ನಾವು ಕಾಣುವ ಸಪ್ತರ್ಷಿಗಳ ನಕ್ಷತ್ರ ಪುಂಜದಲ್ಲಿ ಬೇರಾವ ಋಷಿ ಪತ್ನಿಯರೂ ಕಾಣದೇ ಅರುಂಧತಿ ಮಾತ್ರ ತನ್ನ ದಿವ್ಯ ದೀಧಿತಿಯಿಂದ ವಸಿಷ್ಠರ ಪಕ್ಕದಲ್ಲಿ ಮುತ್ತೈದೆಯರಿಗೆ ಮಾರ್ಗದರ್ಶಕಳಾಗಿ ಮಿನುಗುತ್ತಲಿದ್ದಾಳೆ.

ದಾಂಪತ್ಯ ಜೀವನದ ದಿವ್ಯಪಥವನ್ನು ಪ್ರದರ್ಶಿಸುವ ಧ್ರುವ ತಾರೆಯಾದ ಈ ಅರುಂಧತಿಯು ಕರ್ದಮ ಮತ್ತು ದೇವಹೂತಿಯರ ಮಗಳು. ಸಾಂಖ್ಯಶಾಸ್ತ್ರದ ತಾತ್ವಿಕ ತಿರುಳನ್ನೆಲ್ಲ ತಾಯಿಯಾದ ದೇವಹೂತಿಗೆ ಉಪದೇಶಿಸಿದ ಕಪಿಲನಾಮಕನಾದ ಸಾಕ್ಷಾತ್ ಜಗದೀಶ್ವರನ ಸೋದರಿಯಾಗಿದ್ದಳೆಂದು ಭಾಗವತದಲ್ಲಿ ಶುಕಮುನಿಗಳು ಹೇಳಿದ್ದಾರೆ.

ವಾಯು ಪುರಾಣದಲ್ಲಿ ಇವಳು ಕಶ್ಯಪ ಋಷಿಗಳ ಮಗಳೆಂದೂ ಅವಳಿಗೆ ನಾರದ ಮತ್ತು ಪರ್ವತ ಎಂಬ ಸೋದರರು ಇದ್ದರೆಂದೂ ಕತೆ ಬರುತ್ತದೆ. ಕೂರ್ಮ ಮತ್ತು ಬ್ರಹ್ಮಾಂಡ ಪುರಾಣಗಳಲ್ಲಿಯಾದರೂ ಕಶ್ಯಪ ಕುಮಾರಿಯೆಂದೆ ಇವಳ ಉಲ್ಲೇಖ ಬರುತ್ತಲಿದ್ದು ಇವಳನ್ನು ಇವಳ ಹಿರಿಯಣ್ಣನಾದ ನಾರದರು ವಸಿಷ್ಠರಿಗೆ ಧಾರೆಯೆರೆದು ಕೊಟ್ಟಿದ್ದರೆಂದು ಹೇಳಲಾಗಿದೆ. ಲಿಂಗಪುರಾಣ ಮತ್ತು ವಿಷ್ಣುಧರ್ಮಗಳಲ್ಲಿಯೂ ಏತತ್ಸಂವಾದಿಯಾದ ವೃತ್ತಾಂತ ವಿಶೇಷಗಳನ್ನು ಬಿತ್ತರಿಸುವ ಹಲವಾರು ಪದ್ಯಗಳು ಬರುತ್ತವೆ. ಹೀಗೆ ಅನೇಕ ಪುರಾಣಗಳಲ್ಲಿ ಅರುಂಧತಿಯ ಪ್ರತ್ಯೇಕ ಉಲ್ಲೇಖಗಳು ಬೇರೆ ಬೇರೆಯಾಗಿ ಬಂದರೂ ಅವಳ ಬಾಲ್ಯ ವೈವಾಹಿಕ ವಿಷಯ ವೃತ್ತಾಂತಗಳ ಬಗ್ಗೆ ಪ್ರಾಯಃ ಎಲ್ಲ ಪುರಾಣಗಳೂ ಮೌನ ತಾಳಿದಂತಿವೆ.

ಆದರೆ ಪದ್ಮಪುರಾಣ ಮತ್ತು ಭವಿಷ್ಯ ಪುರಾಣಗಳಲ್ಲಿ ಮಾತ್ರ ಇವಳು ಗೌರೀ ವ್ರತವನ್ನು ಮಾಡಿ ಅದರ ಪ್ರಭಾವದಿಂದ ವಸಿಷ್ಠರಂಥ ಬ್ರಹ್ಮರ್ಷಿಗಳನ್ನು ಪತಿಗಳನ್ನಾಗಿ ಪಡೆದಳು ಮತ್ತು ಅವಳ ದಾಂಪತ್ಯ ಜೀವನದಲ್ಲಿ ಗೌರಿಯ ಅನುಗ್ರಹದಿಂದ ವಿರಸ ವಿಯೋಗಗಳ ಪ್ರಸಂಗ ಬಾರದೆ ಬಾಳಿನುದ್ದಕ್ಕೂ ಸುಖ ಶಾಂತಿ ತುಂಬಿ ತುಳುಕುತ್ತಿದ್ದವೆಂದು ವರ್ಣಿತವಾಗಿದೆ.

ಕಾಲಿಕಾ ಪುರಾಣದಲ್ಲಿ ಮಾತ್ರ ಇವಳ ಜೀವನ ಚರಿತ್ರೆ ಬೇರೆ ಬಗೆಯಾಗಿ ಬಂದಿದೆ.

ಮಹಿಳಾ ಕುಲದ ಮಣಿಯಂತಿರುವ ಈ ಅರುಂಧತಿಯು ಪೂರ್ವಕಲ್ಪ ದಲ್ಲಿ ಬ್ರಹ್ಮದೇವರ ಮಾನಸ ಕುಮಾರಿಯಾದ ಸಂಧ್ಯೆಯಾಗಿದ್ದಳು. ಒಂದು ದಿನ ಸಂಧ್ಯಾಕಾಲದಲ್ಲಿ ಬ್ರಹ್ಮರ್ಷಿ ವಸಿಷ್ಠರು ಮಂದಾಕಿನೀ ತಟಾಕದಲ್ಲಿ ಸಂಧ್ಯಾವಂದನೆ ಮಾಡುತ್ತ ಕುಳಿತಿದ್ದರು. ತಟಸ್ಥೇಜೋಭಾಸುರವಾದ ಅವರ ಮುಖ ಮಂಡಲವು ಸಂಧ್ಯಾರಾಗದ ಸ್ವರ್ಣಕಾಂತಿಯಿಂದ ಮತ್ತಿಷ್ಟು ಸುಂದರವಾಗಿ ಬೆಳಗುತ್ತಿತ್ತು.

ಕ್ಷಿತಿಜದಂಚಿನಲ್ಲಿ ಕಿರಣದ ಕುಂಚಿನಿಂದ ಬಂಗಾರದ ರಂಗವಲ್ಲಿ ಬರೆಯುತ್ತಿರುವ ಆ ಸೊಗಸಿನ ಸಂಧ್ಯೆಗೆ ತಾನೂ ಮಾನವಿಯಾಗಿ ಈ ಮಹರ್ಷಿಯ ಮಡದಿಯಾಗ ಬೇಕೆಂದು ಮನಸ್ಸಾಯಿತು.

ಪಾಂಡುರಂಗ ಕ್ಷೇತ್ರದ ಸಮೀಪದಲ್ಲಿ ಚಂದ್ರಭಾಗಾ ಕುಟೀರದ ಪುಣ್ಯಾರಣ್ಯದ ಏಕಾಂತ ಆಶ್ರಮದಲ್ಲಿ ಮಹರ್ಷಿ ಮೇಧಾತಿಥಿಗಳು ತಪಸ್ಸನ್ನಾಚರಿಸುತ್ತಿದ್ದರು. ಅವರು ಒಮ್ಮೆ ಸಂತಾನಕ್ಕಾಗಿ ಜ್ಯೋತಿಷ್ಟೋಮ ಯಾಗವನ್ನು ಮಾಡಿದರು. ಆಗ ವಸಿಷ್ಠ ರನ್ನು ಕಾಮಿಸಿ ಮಾನವಿಯಾಗಬೇಕೆಂದು ಬಯಸಿದ ಬ್ರಹ್ಮಕುಮಾರಿ ಸಂಧ್ಯಾದೇವಿಯೇ ಮೇಧಾತಿಥಿಗಳ ಯಜ್ಞಕುಂಡದಿಂದ ಜನಿಸಿ ಅರುಂಧತಿಯಾಗಿ ಅವತರಿಸಿ ಬಂದಳು. ಮಿಂಚಿನ ಮೂರುತಿಯಂತಿರುವ ಮಗಳ ನಕ್ಷತ್ರಕಾಂತಿಯನ್ನು ಕಂಡು ಮೇಧಾತಿಥಿಗಳಿಗೆ ಸಂತೋಷವಾಯಿತು. ಅವಳು ಐದು ವರುಷದವಳಾದ ಕೂಡಲೇ ಒಂದು ದಿನ ಬ್ರಹ್ಮ ದೇವರು ಮೇಧಾತಿಥಿಗಳ ಹತ್ತಿರ ಬಂದು ಅವಳನ್ನು ಯಾವದಾದರೊಬ್ಬ ಪ್ರತಿವ್ರತಾ ಸ್ತ್ರೀಯ ಹತ್ತಿರ ಶಿಕ್ಷಣಕ್ಕಾಗಿ ಇಡಬೇಕೆಂದು ಆಜ್ಞೆಯಿತ್ತರು. ಅದರಂತೆ ಮೇಧಾತಿಥಿ ಗಳು ಚಿಕ್ಕ ವಯಸ್ಸಿನ ಆ ಅರುಂಧತಿಯನ್ನು ಸತ್ಯಲೋಕಕ್ಕೆ ಕರೆದೊಯ್ದು ಬ್ರಹ್ಮಪತ್ನಿ ಸಾವಿತ್ರಿಯ ಹತ್ತಿರವೇ ಇಟ್ಟುಬಂದರು. ಆ ಮಹಾತಾಯಿಯ ದಿವ್ಯ ಸನ್ನಿಧಾನ ದಲ್ಲಿದ್ದು ಮೇಧಾವಿಯಾದ ಮೇಧಾತಿಥಿಯ ಮಗಳು ಜ್ಞಾನ, ವಿಜ್ಞಾನ, ಶೀಲ, ಸದಾ ಚಾರ, ನಯ, ವಿನಯ, ಸಾಧು ಸ್ವಭಾವಗಳಿಂದ ಸಂಪನ್ನಳಾಗಿದ್ದಳು. ಏಳು ವರುಷ ಅಲ್ಲಿ ವಿದ್ಯಾಧ್ಯಯನ ಮಾಡಿ ಅವಳು ಹನ್ನೆರಡು ವರುಷದವಳಾದಾಗ ಹದಿನಾಲ್ಕು ವಿದ್ಯೆಗಳಲ್ಲಿಯೂ ಪಾರಂಗತಳಾಗಿ ಶಾರದೆಯ ಅಪರಾವತಾರ ಎಂದು ಹದಿನಾಲ್ಕು ಲೋಕಗಳಲ್ಲಿಯೂ ಸುಪ್ರಸಿದ್ಧಳಾದಳು.

ಒಂದು ದಿನ ಇವಳು ಹಿಮವತ್ಪರ್ವತದ ಪುಣ್ಯ ಶಿಖರದಲ್ಲಿರುವ ಮಾನಸ ಸರೋವರದ ದಂಡೆಯ ಮೇಲಿರುವ ಪುಷ್ಪೋದ್ಯಾನದಲ್ಲಿ ವನದೇವಿಯಂತೆ ಸಂಚರಿಸು ತ್ತಿದ್ದಳು. ಪುಷ್ಪಾವಚಯಕ್ಕಾಗಿ ಬಂದ ಅವಳೊಡನೆ ಬಹುಲಾ ಎಂಬ ಅವಳ ಸಖಿಯೂ ಮತ್ತು ಅವಳ ಗುರು ಮಾತೃಸ್ಥಾನದಲ್ಲಿದ್ದ ಸಾವಿತ್ರಿಯೂ ಇದ್ದರು. ಅದೇ ಮಾನಸ ಸರಸ್ತೀರದ ಪಾಷಾಣ ಪೀಠ ಒಂದರ ಮೇಲೆ ಕುಳಿತು ಬ್ರಹ್ಮರ್ಷಿಗಳಾದ ವಸಿಷ್ಠರು ಉನ್ಮೀಲಿತಲೋಚನರಾಗಿ ತಪಸ್ಸನ್ನಾಚರಿಸುತ್ತಿದ್ದರು. ಅವರ ಏಕಾಂಗ

ವರ್ಣದ ಜಟಾಮಂಡಲ, ತೇಜಃಪುಂಜವಾದ ಮುಖ ಮಂಡಲ, ದಿವ್ಯ ದೀಪ್ತಿಯುಳ್ಳ ದೇಹಯುಷ್ಟಿ ಇವೆಲ್ಲ ಅರುಂಧತಿಗೆ ಒಳ್ಳೆ ಆಕರ್ಷಕವಾಗಿ ಸಮ್ಮೋಹಕವಾಗಿಯೂ ತೋರಿದವು. ಜಪಾನಂತರದಲ್ಲಿ ವಸಿಷ್ಠರು ಕಣ್ಣು ತೆರೆದಾಗ ಅರುಂಧತಿಯು ತಪಸ್ಸುಂದರವಾದ ಶಾಂತ ಕಾಂತ ಶರೀರವು ಕಣ್ಣಿಗೆ ಬಿದ್ದಿತು. ಅದೇಕೋ ಚಿತ್ತವು ಚಾಂಚಲ್ಯ ಚುಂಬಿಯಾಗಿ ಆ ವಸ್ತುವು ಸ್ಪೃಹಣೀಯವೆನಿಸಿತು. ಆದರೂ ಜಿತೇಂದ್ರಿಯರಾದ ಅವರಾಗಲಿ ವಶ್ಯೇಂದ್ರಿಯಳಾದ ಅವಳಾಗಲೀ ತಮ್ಮ ಮನೋವಿಕಾರವನ್ನು ಕಿಂಚಿತ್ತಾದರೂ ತೋರಗೊಡದೆ ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು.

ಅವರಿಬ್ಬರ ಮನೋನಿಗ್ರಹವೂ ಸಂಯಮಶಕ್ತಿಯೂ ಚಿತ್ತಸ್ಥೈರ್ಯವೂ ಅಸಾಧಾರಣವಿದ್ದುದರಿಂದ ಕಾಮ ಅವರ ಕೈಂಕರ್ಯ ಎಸಗಿ ಇದ್ದಲ್ಲಿಯೇ ಕಮರಿ ಹೋಗಿದ್ದು ಅವಳ ಸಂಯಮ ವಿಷಯ ವಾಸನೆಗೆ ನಿಯಮವಾಗಿ ಪರಿಣಮಿಸಿತ್ತು. ಅವರ ನಿತ್ಯದ ಆಹ್ನೀಕದಲ್ಲಿ ಏನೂ ವ್ಯತ್ಯಾಸವಾಗಲಿಲ್ಲ. ಇವಳ ನಿತ್ಯಾನುಷ್ಠಾನದಲ್ಲಿ ಯಾವುದಕ್ಕೂ ಲೋಪವಾಗಲಿಲ್ಲ.

ಹೀಗೆ ವಿಲಕ್ಷಣವಾದ ಪಠಿತ್ವದಿಂದ ಇವರಿಬ್ಬರೂ ಪಠಿಷ್ಠರಾಗಿ ತಮ್ಮ ಹೃದಯದ ಅಂತರಾಳದ ಆಳದಲ್ಲಿ ಕಾಮ ಪ್ರೇಮಗಳನ್ನು ಅದುಮಿಟ್ಟರೂ ಈ ವಿಷಯವು ಚಾಣಾಕ್ಷಳಾದ ಸಾವಿತ್ರಿಯ ಸೂಕ್ಷ್ಮ ದೃಷ್ಟಿಗೆ ಬಾರದೇ ಹೋಗಲಿಲ್ಲ. ಇವರಿಬ್ಬರ ಗೂಢ ಮೂಢವಾದ ಅನುರಾಗಾಂಕುರವನ್ನು ಗುರುತಿಸಿ ಸಾವಿತ್ರಿಯು ಮೇಧಾತಿಥಿಗಳಿಗೆ ಈ ವಿಷಯವನ್ನು ಅರುಹಿದಳು. ಅವರು ಬ್ರಹ್ಮದೇವರ ಮುಖಾಂತರ ಈ ವಿಷಯವನ್ನು ಇತ್ಯರ್ಥಗೊಳಿಸಿ ವೇದೋಕ್ತ ವಿಧಿ ವಿಧಾನ ಪೂರ್ವಕವಾಗಿ ವಸಿಷ್ಠ ಅರುಂಧತಿಯರ ವಿವಾಹವನ್ನು ನೆರವೇರಿಸಿದರು.

ಈ ಪೂತಾತ್ಮರಿಬ್ಬರ ಪವಿತ್ರ ವಿವಾಹದಿಂದ ಪರಿಣಯ ಪದ್ಧತಿಗೆ ಒಂದು ಪಾವಿತ್ರ್ಯ ಪ್ರಾಪ್ತವಾದರೆ ದಾಂಪತ್ಯ ಧರ್ಮವು ಇವರ ಆದರ್ಶ ಜೀವನದಿಂದ ಧನ್ಯತೆ ಪಡೆಯಿತು.

ಇವಳ ಪಾಂಡಿತ್ಯ, ಪಾತಿವ್ರತ್ಯ, ಔದಾರ್ಯ, ಅತಿಥಿ ಸೇವಾ ದಕ್ಷತೆ, ಧರ್ಮದೃಷ್ಟಿ, ಶಾಸ್ತ್ರಜ್ಞಾನ, ಉಪದೇಶ ನೈಪುಣ್ಯ, ಸ್ತ್ರೀಧರ್ಮ ಮರ್ಮಜ್ಞತೆ, ಶೀಲ, ಸೌಜನ್ಯ ಮೊದಲಾದ ಅನೇಕ ಸದ್ಗುಣಗಳಿಗೆ ಪುರಾಣ ಉಪಪುರಾಣಗಳಲ್ಲಿ ವಿಪುಲವಾದ ದೃಷ್ಟಾಂತ ಸಿಕ್ಕುತ್ತವೆ. ಒಮ್ಮೆಯಂತೂ ಒಂದು ಸಭೆಯಲ್ಲಿ ಎಲ್ಲ ದೇವಾಧಿದೇವತೆಗಳೂ ಮಹರ್ಷಿ, ಬ್ರಹ್ಮರ್ಷಿಗಳೂ ಪಿತೃ ಪಿತಾಮಹ ಪ್ರಭೃತಿಗಳು ಕೂಡಿ ನಿಜವಾದ ಧರ್ಮರಹಸ್ಯವನ್ನು ಅರಿತುಕೊಳ್ಳಬೇಕಾದರೆ ನಾವು ಯಾರ ಹತ್ತಿರ ಹೋಗಬೇಕೆಂದು ವಿಚಾರಿಸಿ ಬುದ್ಧಿಶಕ್ತಿಯಿಂದ ವಸಿಷ್ಠರಿಗೆ ಸರಿ ಸಮಾನವಾಗಬಲ್ಲ ಪರಮ ಪತಿವ್ರತೆ ಅರುಂಧತಿ ದೇವಿಯೇ ನಮಗೆ ಧೈರ್ಯದರ್ಶನ ಮಾಡಲು ಸಮರ್ಥಳು ಎಂದು ಅವಳ ಹತ್ತಿರ ಬಂದು ಧರ್ಮ ಜಿಜ್ಞಾಸೆ ಮಾಡಿದರಂತೆ.

"ತತಸ್ತು ಋಷಯಃ ಸರ್ವೇ ಪಿತರಶ್ಚ ಸದೇವತಾಃ ।
ಅರುಂಧತೀಂ ತಪೋವೃದ್ಧಾಂ ಅಪೃಚ್ಛಂತ ಸಮಾಹಿತಾಃ ॥
ಸಮಾನಶೀಲಾಂ ವೀರ್ಯೇಣ ವಸಿಷ್ಠಸ್ಯ ಮಹಾತ್ಮನಃ ।
ತ್ವತ್ತೋ ಧರ್ಮರಹಸ್ಯಾನಿ ಶ್ರೋತುಮಿಚ್ಛಾಮ ಹೇವಯಂ ॥

ಹೀಗೆ ಮಹಾ ಮಹಾ ಮೇಧಾವಿಗಳಾದ ದೇವತೆಗಳೂ ಋಷಿಗಳೂ ಬಂದು ತನ್ನನ್ನು ಧರ್ಮ ರಹಸ್ಯವನ್ನು ಕೇಳುತ್ತಾರೆಂದು ಅವಳು ಸ್ವಲ್ಪವೂ ಗರ್ವ ತಾಳದೆ ಆ ಋಷಿ ದೇವತೆಗಳಿಗೆ ವಿನಯದಿಂದಲೇ ಬಾಗಿ ವಂದಿಸಿ, "ಮಹನೀಯರೇ! ನಿಮ್ಮಂಥ ದೊಡ್ಡವರ, ಗುರು ಹಿರಿಯರ, ದೇವ ಋಷಿಗಳ ಸ್ಮರಣದಿಂದಲೇ ನನಗೆ ಜ್ಞಾನವಾಗಲೀ ತಪಸ್ಸಾಗಲೀ ಪ್ರಾಪ್ತವಾಗಿರುತ್ತದೆ." ಎಂದು ತನ್ನ ಯೋಗ್ಯತಾ ತಾರತಮ್ಯ ಜ್ಞಾನ ವನ್ನು ವ್ಯಕ್ತಪಡಿಸಿ ನಿಮ್ಮ ಪ್ರಸಾದದಿಂದಲೇ ನಿಮ್ಮ ಆಜ್ಞೆಯಂತೆ ಧರ್ಮದ ಬಗ್ಗೆ ಎರಡು ಮಾತು ಹೇಳುತ್ತೇನೆ ಎಂದು ಅವರನ್ನೆಲ್ಲ ವಿನಯದಿಂದ ನಮಿಸಿಯೇ ಧರ್ಮ ರಹಸ್ಯವನ್ನು ಆ ಎಲ್ಲ ಸುರಮುನಿ ಮಹರ್ಷಿಗಳಿಗೆ ವಿಶದವಾಗಿ ವಿವರಿಸುತ್ತಾಳೆ.

"ತಪೋವೃದ್ಧಿರ್ಮಯಾ ಪ್ರಾಪ್ತಾ ಭಾವತಾಂ ಸ್ಮರಣೇನವೈ ।
ಭವತಾಂಚ ಪ್ರಸಾದೇನ ಧರ್ಮಾನ್ ವಕ್ಷ್ಯಾಮಿ ಶಾಶ್ವತಾನ್ ॥

ಈ ಸಂದರ್ಭದಲ್ಲಿ ಅವಳು ಹೇಳುವ ಪ್ರತಿಯೊಂದು ವಿಷಯವೂ ಅತ್ಯಂತ ಧಾರ್ಮಿಕವಾಗಿವೆ. ಒಂದೊಂದು ಮಾತೂ ಮಾರ್ಮಿಕವಾಗಿವೆ.

ಅರುಂಧತಿಯು ಬರಿ ಬಾಯಿಂದ ಅತಿಥಿಗಳ ಗುಣಗಾಯನ ಮಾಡಿಕೊಡಲಿಲ್ಲ. ಭಯಂಕರ ಬರಗಾಲ ಬಿದ್ದಾಗ ಸ್ವಯಂ ತಾನು ತನ್ನ ಮನೆಗೆ ಬಂದ ಅತಿಥಿಗಳನ್ನು ಆದರದಿಂದ ಬರಮಾಡಿಕೊಂಡು ಅವಳು ಅತಿಥಿ ಸತ್ಕಾರ ರೂಪವಾದ ಗೃಹಿಣೀ ಧರ್ಮ ವನ್ನು ಅನೂಚಾನವಾಗಿ ಪರಿಪಾಲಿಸಿದ್ದಕ್ಕೆ ಮಹಾ ಭಾರತದ ಬದರಪಾಚನ ತೀರ್ಥವು ಉಜ್ವಲ ಸಾಕ್ಷಿಯಾಗಿ ನಿಂತಿದೆ.

ಹಿಂದೆ ಒಮ್ಮೆ ಅಯಾಚಿತ ವೃತ್ತಿಯ ಸಪ್ತರ್ಷಿಗಳು ಈ ಅರುಂಧತೀ ದೇವಿಯನ್ನು ಆಶ್ರಮದಲ್ಲಿಟ್ಟು ತಾವು ತಂದ ಮೂಲಫಲಗಳನ್ನು ತರಲು ಹಿಮಾಲಯದ ಸುದೂರ ವನಾಂತರದಲ್ಲಿ ಪ್ರವೇಶ ಮಾಡಿದರು. ತಮ್ಮ ಉಪಜೀವನ ಸಾಧನವಾದ ಗಡ್ಡೆ ಗೆಣಸುಗಳನ್ನು ವಿಪುಲವಾಗಿ ಸಂಗ್ರಹಿಸಿಕೊಂಡು ಬರಬೇಕೆಂದು ಆ ಕಾನನದ ಕಾಂತಾರ ದಲ್ಲಿ ಅತ್ತಿತ್ತ ಅಲೆಯುತ್ತಿರುವಾಗ ಘೋರವಾದ ಬರಗಾಲ ಒಮ್ಮೆಲೆ ತಲೆದೋರಿತು. ೧೨ ವರ್ಷವಾದರೂ ಸುಕಾಲ ಪ್ರಾಪ್ತವಾಗಲಿಲ್ಲ. ಆಗ ಅವರು ಅಲ್ಲಿಯೇ ಆಶ್ರಮ ಕಟ್ಟಿಕೊಂಡು ತಪಸ್ಸು ಮಾಡುತ್ತ ಇದ್ದು ಬಿಟ್ಟರು.

ಇತ್ತ ಏಕಾಕಿನಿಯಾದ ಅರುಂಧತಿಯಾದರೂ ಸಪ್ತರ್ಷಿಗಳು ಬಾರದ್ದಕ್ಕೆ ಬೇಜಾರು ಪಟ್ಟುಕೊಳ್ಳದೇ ತಪಸ್ಸು, ಧ್ಯಾನ, ಭಗವಂತನ ಗುಣಗಾನಗೈಯುತ್ತ ಆಶ್ರಮದಲ್ಲಿಯೇ

ವಾಸಿಸಿದಳು. ಒಂದು ದಿನ ಒಬ್ಬ ತೇಜಸ್ವಿಯಾದ ಬ್ರಾಹ್ಮಣನು ಆ ಆಶ್ರಮದ ಅಂಗಳದಲ್ಲಿ ಉಪಸ್ಥಿತನಾಗಿ "ಓಂ ಭವತಿ ಭಿಕ್ಷಾಂ ದೇಹಿ" ಎಂದು ಯಾಚಿಸಿದನು. ಪರ್ಣಕುಟೀರದಲ್ಲಿಯ ಉಗ್ರಾಣವಂತೂ ಎಂದೋ ಬರಿದಾಗಿತ್ತು. ಆದರೂ ಅತಿಥಿ ಸತ್ಕಾರ ಪರಾಯಣಳಾದ ಆ ಸಾಧ್ವೀ ಮಣಿಯು ಬಂದ ಬ್ರಾಹ್ಮಣನೆದುರು ಕೆಲವು ಬೋರೆ ಹಣ್ಣುಗಳನ್ನಿಟ್ಟು ಇವುಗಳನ್ನು ತಾವು ಪರಿಗ್ರಹಿಸಿ ಸಂತುಷ್ಟರಾಗಬೇಕೆಂದು ಬೇಡಿಕೊಂಡಳು. ಆಗ ಆ ಅತಿಥಿಯು ಇವುಗಳನ್ನೇ ಬೇಯಿಸಿಕೊಡು ಎಂದು ಕೇಳಿದನು. ಅದಕ್ಕೆ ಅವಳು ಹಾಗೆಯೇ ಆಗಲಿ ಎಂದು ಅವುಗಳನ್ನು ಒಲೆಯ ಮೇಲೆ ಉರಿ ಹಚ್ಚಿ ಕುದಿಯಲಿಟ್ಟಳು. ಆದರೆ ಆ ಕಬ್ಬಿಣದ ಬೋರೆಹಣ್ಣುಗಳು ಎಂಥ ವಿಜಾತೀಯ ಅಗ್ನಿ ಸಂಯೋಗಕ್ಕೂ ಹಣಿಯುವ ಲಕ್ಷಣವಾಗಲೀ ಬೇಯುವ ಚಿನ್ಹವಾಗಲೀ ಕಾಣಲಿಲ್ಲ. ಆಗ ಅವಳು ಹೊರಗೆ ಕುಳಿತ ಅತಿಥಿಗಳು ಏನೆಂದುಕೊಳ್ಳುವರೋ ಎಂದು ಭಯದಿಂದ ಹೊರಗೆ ಬಂದು ಆ ಬ್ರಾಹ್ಮಣರಿಗೆ ನಮಸ್ಕರಿಸಿ "ಸ್ವಾಮಿ! ಆ ಫಲ ಬೇಯುವವರೆಗೆ ತಾವು ನನಗೆ ಸತ್ಕಥಾ ಶ್ರವಣ ಮಾಡಿಸಬೇಕು" ಎಂದು ಕೇಳಿಕೊಂಡಳು. ಆಗ ಆ ಅತಿಥಿದೇವ ಶ್ರದ್ಧೆಯಿಂದ ಕೇಳುವ ಆ ಋಷಿಪತ್ನಿಯ ಎದುರಿಗೆ ವೇದ ವೇದಾಂತ ಪುರಾಣ ಇತಿಹಾಸಗಳ ತತ್ತ್ವ ರಹಸ್ಯಗಳನ್ನೂ ಅನೇಕ ಸತ್ಕಥಾ ಚರಿತ್ರೆಗಳನ್ನೂ ಹೇಳಹತ್ತಿದನು. ಉತ್ಸಾಹದಿಂದ ಅವನು ಹೇಳಿದ್ದನ್ನೆಲ್ಲ ಇವಳು ಶ್ರದ್ಧೆಯಿಂದ ಕೇಳಹತ್ತಿದಳು. ಈ ಸತ್ಕಥಾಸತ್ರ ಅವಿಚ್ಛಿನ್ನವಾಗಿ ನಡೆಯಿತು. ಹೊರಗೆ ಅನಾವೃಷ್ಟಿಯಿಂದ ಜನರು ನೀರು ನೀರೆಂದು ಜನ ಪ್ರಾಣ ಬಿಡುತ್ತಿದ್ದರು. ಆ ಆಶ್ರಮದ ಅಂಗಳದಲ್ಲಿ ಮಾತ್ರ ಸತ್ಕಥೆಯ ಭಾಗಿರಥಿಯ ಪ್ರವಾಹವು ನಿತ್ಯವೂ ಹರಿಯುತ್ತಿತ್ತು. ಹೇಳುವ ಅತಿಥಿಯನ್ನೂ ಕೇಳುವ ಒಡತಿಯನ್ನೂ ಈ ಕಥಾಮೃತ ತಣಿಸುತ್ತಿತ್ತು. ಹೀಗೆ ತಿಂಗಳೆಷ್ಟೋ ಹೊರಳಿದರೂ ಅವರಿಬ್ಬರಿಗೂ ಹಸಿವೆ ನೀರಡಿಕೆಗಳ ಪರಿವೆಯಿರಲಿಲ್ಲ. ಹೀಗೆ ೧೨ ವರ್ಷಗಳು ಕಳೆದವು. ಪ್ರತಿದಿನವೂ ಬೋರೆಹಣ್ಣು ಬೇಯಿಸುವುದು ಬಂದ ಅತಿಥಿಯಿಂದ ಸತ್ಕಥಾ ಶ್ರವಣ ಮಾಡುವುದು ಅರುಂಧತಿಯ ನಿತ್ಯ ಕರ್ಮವಾಗಿತ್ತು. ಹೀಗೆ ಹನ್ನೆರಡು ವರ್ಷಗಳಾಗಿ ಬರಗಾಲ ಕಳೆದ ಬಳಿಕ ಜಗತ್ತಿನಲ್ಲಿ ಸುವೃಷ್ಟಿ ಸುಕಾಲತಲೆದೋರಿತು. ಆಗ ವಸಿಷ್ಠರೇ ಮೊದಲಾದಸಪ್ತರ್ಷಿಗಳು ವಿಪುಲವಾಗಿ ಹಣ್ಣುಕಾಯಿ, ಗೆಡ್ಡೆ ಗೆಣಸುಗಳನ್ನು ಸಂಗ್ರಹಿಸಿಕೊಂಡು ತಮ್ಮ ಆಶ್ರಮಕ್ಕೆ ಮರಳಿದರು. ಆಗ ಅರುಂಧತಿಗೆ ಋಷಿಗಳ ಕೈಯಲ್ಲಿಯ ಹಣ್ಣು ಹಂಪಲುಗಳನ್ನು ಕಂಡು ಆದ ಆನಂದ ಅಷ್ಟಿಷ್ಟಲ್ಲ. ಕೂಡಲೇ ಅವಳು ಋಷಿಗಳು ತಂದ ಹಣ್ಣುಗಳಲ್ಲಿಯ ಉತ್ತಮೋತ್ತಮವಾದ ರಸತವಳವನ್ನು ಎತ್ತಿ ಅತಿಥಿಗಳೆದುರು ಇಟ್ಟು "ಸ್ವಾಮಿ! ತಮ್ಮನ್ನು ಇಷ್ಟು ದಿನ ಕಾಯಿಸಿದ ಅಪರಾಧವನ್ನು ಕ್ಷಮಿಸಬೇಕು. ಹಾಗೂ ಈ ಅಲ್ಪಸೇವೆಯನ್ನು ಸ್ವೀಕರಿಸಬೇಕು" ಎಂದು ಹೇಳಿ ಬಿನ್ನವಿಸಿ ಸಾಷ್ಟಾಂಗ ನಮಸ್ಕಾರ ಮಾಡಿದಳು. ನಮಸ್ಕಾರ ಹಾಕಿ ಅವಳು ಎದ್ದಾಗ ಕಂಡ ದೃಶ್ಯ ಚಮತ್ಕಾರಕವಾಗಿತ್ತು. ೧೨ ವರ್ಷ ತನ್ನ ಮನೆಗೆ ಬಂದು ಸತ್ಕಥಾ ಶ್ರವಣ ಮಾಡಿಸಿದ ಆ ಅತಿಥಿಯ ತಲೆಯ

ಮೇಲೆ ಗಂಗೋದಕ, ಜಡೆಯ ಮೇಲೆ ಚಂದ್ರಚೂಡ, ಮೈ ಮೇಲೆ ಕೃತ್ತಿವಾಸ, ಡಮರು, ಶೂಲಗಳು ಬೆಳಗುತ್ತಲಿದ್ದವು. ಸಾಕ್ಷಾತ್ ಮಹಾದೇವರೇ ಮೂರ್ತಿಮಂತಾಗಿ ನಿಂತು ಕೊಂಡಿದ್ದರು. ಆಗ ಸಪ್ತರ್ಷಿಗಳು ಆಶ್ಚರ್ಯಚಕಿತರಾಗಿ ಮಹಾದೇವರಿಗೆ ನಮಸ್ಕರಿಸಿದರು. ಈಗ ಪರಮೇಶ್ವರನು ಅರುಂಧತಿಯ ಶೀಲ ಸದ್ಗುಣಗಳನ್ನು ಬಣ್ಣಿಸುತ್ತ "ಋಷಿಗಳೇ ನೀವು ಈ ೧೨ ವರುಷ ಹಿಮಶಿಖರದಲ್ಲಿ ನಿಂತುಕೊಂಡು ಮಾಡಿದ ತಪಸ್ಸು" ಈ ಮುರುಕು ಗುಡಿಸಲಲ್ಲಿ ಉಪವಾಸ ಕುಳಿತು ಅರುಂಧತಿಯು ಮಾಡಿದ ತಪಸ್ಸಿಗೆ ಎಂದಿಗೂ ಸಮಾನವಾಗಲಾರದು.

"ಭವದ್ಭಿಃ ಹಿಮವತ್ ಪ್ರಷ್ಠೇಯತ್ ತಪಃ ಸಮುಪಾರ್ಜಿತಂ ।
ಅಸ್ಯಾಸ್ತು ಯತ್ ತಪೋ ವಿಪ್ರಾಃನ ಸಮಂತನ್ಮತಂ ಮಮ ॥
ಅನಯಾ ಹಿ ತಪಸ್ವಿನ್ಯಾ ತಪಸ್ತಪ್ತಂ ಸುದುಶ್ಚರಂ ।
ಅನಶ್ನಂತ್ಯಾಪಚಂತ್ಯಾ ಚ ಸಮಾದ್ವಾದಶ ಪಾರಿತಾಃ ॥

ಸರ್ವರ ಮನೋನಿಯಾಮಕರಾದ ಸಾಕ್ಷಾತ್ ರುದ್ರದೇವರೇ ಹನ್ನೆರಡು ವರ್ಷ ಇವಳ ಪರೀಕ್ಷೆ ಮಾಡಿ ಇವಳ ಅತಿಥಿ ಸತ್ಕಾರ, ಸತ್ಕಥಾ ಶ್ರವಣ, ಶ್ರದ್ಧೆ, ಧರ್ಮಜಿಜ್ಞಾಸೆ, ತಪಶ್ಶಕ್ತಿ, ಪಾತಿವ್ರತ್ಯ ಮೊದಲಾದ ಸದ್ಗುಣಗಳ ಮೇಲ್ಮೆಯನ್ನು ಮೆಚ್ಚಿ ತಿಳಿದುಕೊಂಡು ಸಪ್ತರ್ಷಿಗಳಿಗಿಂತ ಅವಳ ತಾತ್ಕಾಲಿಕವಾದ ತಪಸ್ಸಿದ್ಧಿ ಹೆಚ್ಚಿನದೆಂದು ಬಣ್ಣಿಸಬೇಕಾದರೆ ಅರುಂಧತಿಯ ಯೋಗ್ಯತೆ ಎಷ್ಟಿರಬಹುದೆಂಬುದನ್ನು ಯಾರಾದರೂ ಊಹಿಸಬಹುದು. ಯಾರೇ ಎಷ್ಟೇ, ಏನಂದೇ ಹೊಗಳಿದರೂ ಅರುಂಧತಿ ಮಾತ್ರ ತನ್ನ ತಪಸ್ಸು, ಜ್ಞಾನ, ಪಾತಿವ್ರತ್ಯಗಳು ವಸಿಷ್ಠರ ಸೇವೆಯಿಂದಲೇ ಬಂದವು ಎಂದು ಧೃಢವಾಗಿ ನಂಬಿದ್ದಳು.

ಹೀಗೆ ಸ್ವಯಂ ಮಹಾದೇವರಿಂದ ಮುಕ್ತ ಕಂಠದಿಂದ ಪ್ರಶಂಸಿತಳಾದ ಅರುಂಧತಿಯು ದೇವ ಮಾನವ ಕುಲಕ್ಕೆಲ್ಲ ಪೂಜ್ಯಳೂ ವಂದನೀಯಳೂ ಆಗಿ ಆದರ್ಶ ಮಹಿಳಾಮಣಿ ಎನಿಸಿದ್ದಾಳೆ.

ಮುಂಬಯಿಯಲ್ಲಿ ಕನ್ನಡ ಸಂಸ್ಕೃತಿ

ಅ. ಸು. ಕೃಷ್ಣರಾವ
ಮುಂಬಯಿ

'ಎಲ್ಲಾದರು ಇರು, ಎಂತಾದರು ಇರು, ನೀ ಕನ್ನಡವಾಗಿರು' ಎನ್ನುವದು ಕವಿ ವಾಣಿ. ಮುಂಬಯಿ ಕನ್ನಡಿಗರು ಈ ಮಾತನ್ನು ಅಕ್ಷರಶಃ ಪಾಲಿಸಿಕೊಂಡು ಬರುತ್ತಿದ್ದಾರೆ, ಎನ್ನುವ ಧೈರ್ಯ ನನಗಿಲ್ಲ. ಆದರೆ ಕನ್ನಡ ಸಂಸ್ಕೃತಿ ಅವರನ್ನು ಬಿಟ್ಟು ಹೋಗದಷ್ಟು ಬೇರು ಬಿಟ್ಟಿದೆ ಎನ್ನುವದರಲ್ಲಿ ಮಾತ್ರ ಸಂಶಯವಿಲ್ಲ. ವ್ಯಾವಹಾರಿಕ ಜ್ಞಾನದಿಂದಾಗಿ ಸ್ವತಃ ಇಂಗ್ಲೀಷು, ಹಿಂದಿ, ಮರಾಠಿ ಮಾತನಾಡುತ್ತಾರೆ. ತಮ್ಮ ಮಕ್ಕಳನ್ನು ಇಂಗ್ಲೀಷ್ ಮಾಧ್ಯಮ ಶಾಲೆಗೆ ಕಳುಹಿಸುತ್ತಾರೆ. ಆದರೆ ತಮ್ಮ ಹುಟ್ಟೂರಿನ ಸಂಪರ್ಕವನ್ನು ಮಾತ್ರ ಈಜನ ಬಿಟ್ಟಿಲ್ಲ. ಸಮೀಪದ ಧಾರವಾಡದಿಂದ ಹಿಡಿದು, ಬೆಂಗಳೂರು, ಮಂಗಳೂರುವರೆಗೆ ಯಾವುದೇ ಭಾಗದ ಮುಂಬಯಿ ಕನ್ನಡಿಗನಿರಲಿ, ಇಲ್ಲಿ ವರ್ಷಗಳಿಂದ ನೆಲೆಸಿರುವನಾದರೂ, ವರ್ಷಕ್ಕೊ, ಎರಡು ವರ್ಷಕ್ಕೊ ಒಮ್ಮೆ ತಮ್ಮ ತಮ್ಮ ಉಳಿತಾಯದಲ್ಲಿ ಬಹುಪಾಲನ್ನು ಊರಿನ ಪ್ರವಾಸಕ್ಕೆ ವ್ಯಯಿಸದೆ ಇಲ್ಲ. ಅಂದರೆ ಮುಂಬಯಿ ಕನ್ನಡಿಗನ ಹುಟ್ಟೂರಿನ ಆಕರ್ಷಣೆಯಲ್ಲಿ ಮಾತ್ರ ಕನ್ನಡ ಸಂಸ್ಕೃತಿಯನ್ನು ಗುರುತಿಸುವ ಪ್ರಯತ್ನವೆ ?

ಹುಟ್ಟೂರು ಮತ್ತು ಅಲ್ಲಿನ ಸಂಸ್ಕೃತಿಯನ್ನು ಬೇರೆ ಬೇರೆ ಮಾಡುವದು ಹೇಗೆ? ಊರಿಗೆ ಹೋಗುವ ಮುಂಬಯಿ ಕನ್ನಡಿಗನಿಗೆ ಅಲ್ಲಿರುವ ಬಂಧುಗಳನ್ನು ನೋಡಲಿರುವ ಕುತೂಹಲದಷ್ಟು, ಅಲ್ಲಿನ ಸಾಂಸ್ಕೃತಿಕ ಜೀವನದಲ್ಲಿ ಭಾಗಿಗಳಾಗುವ ಬಯಕೆಯೂ ಸಾಕಷ್ಟಿದೆ. ಕನ್ನಡ ಜಿಲ್ಲೆಗೆ ಹೋದಾತನಿಗೆ ಕಂಬಳ, ಯಕ್ಷಗಾನ, ಕೋಳಿ ಕಟ್ಟೆ ನೋಡಲಿರುವ ಕುತೂಹಲದಷ್ಟೆ, ಮೈಸೂರಿನವರಿಗೆ, ತಮ್ಮ ಪ್ರವಾಸ ದಸರಾವೇಳೆ ಇರಬೇಕು, ಕರಗ ನೋಡಬೇಕು ಎಂಬ ಪೂರ್ವಾಲೋಚನೆ ಇರುತ್ತದೆ. ಧಾರವಾಡ, ಹುಬ್ಬಳ್ಳಿಯವರೂ ಇದಕ್ಕೆ ಹೊರತಾಗಿಲ್ಲ. ಇದೆಲ್ಲಾ ಸಂಸ್ಕೃತಿಯ ಆಕರ್ಷಣೆಯು ಮಾತಾಯಿತು. ಅನಿವಾರ್ಯವಾಗಿ ಹೊರನಾಡಿನಲ್ಲಿ ನೆಲೆಸಿರುವ ಕನ್ನಡಿಗ, ಕನ್ನಡ ಸಂಸ್ಕೃತಿಗಾಗಿ ಪರಿತಪಿಸುವ ಮಾತಾಯಿತು.

ಆದರೆ ಕನ್ನಡಿಗನ ಜೊತೆಯಲ್ಲಿ ಮುಂಬಯಿಗೂ ಕನ್ನಡ ಸಂಸ್ಕೃತಿ ಬಂದಿದೆ, ಅದರ ಅಸ್ತಿತ್ವ ಇಲ್ಲಿಯೂ ಅರಿವಿಗೆ ಬರುತ್ತದೆಯೆಂದರೆ ನಿಮಗೆ ಆಶ್ಚರ್ಯವಾಗಬಹುದು.

ಮುಂಬಯಿ ಭೂಭಾಗವೆ ಒಂದು ಕಾಲದಲ್ಲಿ ಕರ್ನಾಟಕದ ಅಧೀನದಲ್ಲಿತ್ತು ಎಂದು ಇತಿಹಾಸಜ್ಞರು ಸಾಧಿಸುತ್ತಿದ್ದಾರೆ. ಸಾತವಾಹನ, ತ್ರೈಕೂಟಕ ಆ ಬಳಿಕ ಚಾಲುಕ್ಯ ಸಾಮ್ರಾಟರು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿ ಉತ್ತರಕ್ಕೆ ಬಂದು, ಮುಂಬಯಿ ಪ್ರದೇಶವನ್ನು ಗೆದ್ದುಕೊಂಡರೆಂದು ಇತಿಹಾಸದ ಪುಟಗಳು ಹೇಳುತ್ತವೆ. ಅಂದಿನ ಅಧಿಪತಿಗಳು ಸಾಂಸ್ಕೃತಿಕ ಕುರುಹುಗಳನ್ನು ಇಲ್ಲಿ ಬಿಟ್ಟು ಹೋಗಿದ್ದಾರೆ. ಎಲಿಫೆಂಟಾದ ಪ್ರಸಿದ್ಧ 'ತ್ರಿಮೂರ್ತಿ' ಪ್ರತಿಮೆ ಚಾಲುಕ್ಯರ ಕಾಲದ್ದು ಎಂದು ಸಿದ್ಧವಾಗಿದೆ. ಜೋಗೇಶ್ವರಿಯ ಗುಹೆಯ ಒಳಗೆ ಕನ್ನಡ ಲಿಪಿಯಲ್ಲಿ ಒಕ್ಕಣಿಕೆ ಇದೆ ಎಂದು ಪ್ರೊ. ಪರಮೇಶ್ವರ ಭಟ್ಟರು, ಮುಂಬಯಿಗೆ ಬಂದಾಗ ಸಾಧಿಸಿದ್ದರು. ಮುಂಬಯಿ ಮಹಾನಗರದ ಕೆಲ ಉಪನಗರಗಳ ಹೆಸರು ಕೂಡಾ ಮೂಲತಃ ಕನ್ನಡದ್ದೇ ಎಂದು ಡಾ॥ ಸಾಲತ್ತೊರೆ ಮತ್ತಿತರರ ಅಂಬೋಣ. ಅವರ ಅಭಿಪ್ರಾಯದಂತೆ, ಬೋರಿವಲಿ,-ಬೋರಿವಳ್ಳಿ, ಡೊಂಬಿವಲಿ-ಡೊಂಬಿನ ಹಳ್ಳಿ ಹೀಗೆ.

ಇದು ಇತಿಹಾಸದಿಂದ ಕನ್ನಡ ಸಂಸ್ಕೃತಿ ಮುಂಬಯಿಯಲ್ಲಿತ್ತು ಎಂದು ಸಾಧಿಸುವ ಪ್ರಯತ್ನ, ಆದರೆ ಈಗ ಮುಂಬಯಿಯಲ್ಲಿ ಕನ್ನಡ ಸಂಸ್ಕೃತಿ ಇದೆಯೆ ? ಮುಂಬಯಿಯ ಹತ್ತು ಲಕ್ಷ ಕನ್ನಡಿಗರಿಗೆ ತಮ್ಮ ಮೂಲ ಸಂಸ್ಕೃತಿಯ ಅರಿವಿದೆಯೆ ? ಮುಂಬಯಿಯಲ್ಲಿರುವ ಸುಮಾರು 150 ಕನ್ನಡ ಸಂಘ ಸಂಸ್ಥೆಗಳು, ಅವುಗಳ ಮುಖ್ಯ ಉದ್ದೇಶ ಸಾಂಸ್ಕೃತಿಕ ಚಟುವಟಿಕೆಗಳೆ. ಕನ್ನಡ ಸಾಹಿತ್ಯ, ಕನ್ನಡ ಸಂಗೀತ, ಕನ್ನಡ ರಂಗಭೂಮಿ, ಮಾತ್ರವಲ್ಲ ಕನ್ನಡ ಜಾನಪದ ಕಲೆಗಳೂ ಈ ಮಹಾನಗರದಲ್ಲಿ ಉಸಿರಾಡುವಂತೆ ಮಾಡುವಲ್ಲಿ ಈ ಸಂಘ ಸಂಸ್ಥೆಗಳು ಕಾಲ ಕಾಲಕ್ಕೆ ದೊಡ್ಡ ಕೆಲಸ ಮಾಡಿವೆ ; ಮಾಡುತ್ತಿವೆ.

ಮೊದಲನೆಯದಾಗಿ ಶಿಕ್ಷಣ ರಂಗದಲ್ಲಿ ಸಾಧನೆ. ಯಾವುದೇ ಸಂಸ್ಕೃತಿಯ ಅಡಿಪಾಯ ಶೈಕ್ಷಣಿಕ ಪ್ರಗತಿಯಲ್ಲಿದೆ. ಮುಂಬಯಿಯ ಕನ್ನಡ ಸಂಸ್ಥೆಗಳು ಇದನ್ನು ಚೆನ್ನಾಗಿ ಮನಗಂಡಂತಿದೆ. ಮುಂಬಯಿಗೆ ಆರಂಭದಲ್ಲಿ ಬಂದ ಕನ್ನಡಿಗರೆಲ್ಲಾ ವಿದ್ಯಾವಂತರಲ್ಲ. ಎಷ್ಟೋ ಮಂದಿ ಪ್ರಾಥಮಿಕ ಶಿಕ್ಷಣವನ್ನೂ ಪಡೆಯಲಾಗದ ದುರ್ದೈವಿಗಳು. ಇವರ ನೆರವಿಗೆ ಬಂದದ್ದು ರಾತ್ರಿ ಶಾಲೆಗಳು. 1905 ರಲ್ಲಿ ಮೊಗವೀರರ ರಾತ್ರಿ ಶಾಲೆ ಆರಂಭವಾಗಿ, ಕ್ರಮೇಣ 15-20 ರಾತ್ರಿ ಶಾಲೆಗಳು ಅಸ್ತಿತ್ವಕ್ಕೆ ಬಂದು, ವರ್ಷಂಪ್ರತಿ, ಸಹಸ್ರಾರು ವಿದ್ಯಾರ್ಥಿಗಳಿಗೆ ವಿದ್ಯಾದಾನ ಮಾಡಿವೆಯೆಂಬುದು, ಮುಂಬಯಿ ಕನ್ನಡಿಗರೆಲ್ಲರಿಗೂ, ಹಾಗೂ, ಈ ವಿಷಯದಲ್ಲಿ ಆಸಕ್ತಿ ವಹಿಸಿದ ಒಳನಾಡ ಕನ್ನಡಿಗರಿಗೂ ತಿಳಿದ ವಿಷಯ. ಇಂದು ಬಹುಶಃ ರಾತ್ರಿ ಶಾಲೆಯ ಅವಶ್ಯಕತೆ ಹೆಚ್ಚಾಗಿ ಕಾಣಿಸಲಾರದು. ಆದರೆ ಅವು ಆರಂಭದ ದೆಸೆಯಲ್ಲಿ ನಡೆಸಿದ ಚಟುವಟಿಕೆಗಳು, ಮಾಡಿದ ಉಪಯುಕ್ತ ಸೇವೆ ಮಾತ್ರ, ಎಂದಿಗೂ ಮರೆಯುವಂತಿಲ್ಲ.

ರಾತ್ರಿ ಶಾಲೆಗಳೊಂದಿಗೆ ಹಗಲು ಶಾಲೆಗಳೂ ಬಂದವು. ಮುನಿಸಿಪಲ್ ಕಾರ್ಪೊರೇಶನ್ ನಡೆಸುತ್ತಿರುವ ಸುಮಾರು 60 ಶಾಲೆಗಳಲ್ಲದೆ (ಕನ್ನಡ) ಮುಂಬಯಿಯಲ್ಲಿ ಈಗ, ಸರ್ಕಾರದ ಧನ ಸಹಾಯ ಪಡೆದು, ಪಡೆಯದೆ ನಡೆಸುತ್ತಿರುವ ಆರು ಹಗಲು ಕನ್ನಡ ಮಾಧ್ಯಮದ ಪ್ರೌಢ-ಶಾಲೆಗಳುಂಟು. ಇವುಗಳಲ್ಲಿ ಸರಾಸರಿ 600-800 ವಿದ್ಯಾರ್ಥಿಗಳು ಅಂದರೆ ಒಟ್ಟು 5000 ವಿದ್ಯಾರ್ಥಿಗಳು ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಈ ಎಲ್ಲ ಶಾಲೆಗಳೂ ಕನ್ನಡ ಸಂಸ್ಕೃತಿಯ ಪರಿಚಯವನ್ನು ಹೊಸ ಪೀಳಿಗೆಗೆ ಮಾಡುತ್ತಿವೆ.

ಮುಂಬಯಿಯಲ್ಲಿ ಕನ್ನಡ ರಂಗಭೂಮಿ ಅಭಿಮಾನ ಪೂರ್ವಕ ಬೆಳೆದುಬಂದಿದೆ. ಆರಂಭ ದೆಸೆಯಲ್ಲಿ ಕನ್ನಡ ರಂಗಭೂಮಿ ಇಲ್ಲಿ ಬೆಳೆಯಲು ಮರಾಠಿ ನಾಟಕಗಳೆ ಕಾರಣವಾದರೂ, ಮೊದಲಿಗೆ ಮೂಲ ಕನ್ನಡ ನಾಟಕ ಪ್ರದರ್ಶನಗಳಿಂದಲೇ ಮುಂಬಯಿ ಕನ್ನಡ ರಂಗಭೂಮಿ ಬೆಳೆದು ಬಂದಿತು. ತೀರ ಇತ್ತೀಚೆಗೆ ಮತ್ತೆ ಇಲ್ಲಿ ಮೂಲ ಕನ್ನಡ ನಾಟಕಗಳತ್ತ ಒಲವು ಹೆಚ್ಚುತ್ತಿದೆ.

ಆದರೆ ನಿಜವಾಗಿ ಕನ್ನಡ ಸಂಸ್ಕೃತಿಯ ಪರಿಚಯವಾಗುವುದು ಜಾನಪದ ರಂಗಭೂಮಿಯಲ್ಲಿ. ಕನ್ನಡ ಜಿಲ್ಲೆಯ ಯಕ್ಷಗಾನಕ್ಕೆ ಮುಂಬಯಿಯಲ್ಲಿ ಬಹಳ ಬೇಡಿಕೆ. ಮಳೆಗಾಲ ಆರಂಭವಾಯಿತೆಂದರೆ ದಕ್ಷಿಣ, ಉತ್ತರ, ಎರಡೂ ಕನ್ನಡ ಜಿಲ್ಲೆಗಳಿಂದ ಪ್ರಸಿದ್ಧ ವೇಷಧಾರಿಗಳು, ಭಾಗವತರು, ಚಂಡೆವಾದಕರು, ಮುಂಬಯಿಯಲ್ಲಿ ಬಂದಿಳಿಯುತ್ತಾರೆ. ಸಾಮಾನ್ಯವಾಗಿ ಬಯಲಿನಲ್ಲಿ ಆಡಲಾಗುತ್ತಿರುವ ಯಕ್ಷಗಾನ ಮುಂಬಯಿಯಲ್ಲಿ, ಮಳೆಗಾಲದುದ್ದಕ್ಕೂ ರಂಗಮಂದಿರಗಳಲ್ಲಿ ನಡೆಯುತ್ತಿವೆ. ಮುಂಬಯಿ ನಗರದ ಈ ಪುರಸ್ಕಾರ ಮಳೆಗಾಲದಲ್ಲಿ ನಿರುದ್ಯೋಗಿಗಳಾಗಿದ್ದ, ಯಕ್ಷಗಾನ ಕಲಾವಿದರಿಗೆ ಹೊಸ ಜೀವನವನ್ನು ಕೊಟ್ಟಿದೆ. ಮುಂಬಯಿ ಜನರ ಈ ಯಕ್ಷಗಾನ 'ಹುಚ್ಚು' ಎಷ್ಟು ವಿಪರೀತಕ್ಕಿಟ್ಟಿದೆಯೆಂದರೆ, ಸಿನೀಮಾ ಟಿಕೆಟ್‌ಗಳಂತೆ ಯಕ್ಷಗಾನದ ಟಿಕೇಟಿಗೂ ಕಾಳಸಂತೆಯ ಪ್ರವೇಶ !

ದಕ್ಷಿಣ ಕನ್ನಡಿಗರ ಯಕ್ಷಗಾನ ಪ್ರೇಮದಷ್ಟು ಸರಿಮಿಗಿಲಾದದ್ದು, ಹಳೆ ಮೈಸೂರಿನವರ ಸಂಗೀತ ಪ್ರೇಮ, ಹಿಂದೂಸ್ತಾನಿ ಸಂಗೀತಕ್ಕೆ ಹೋಲಿಸಿದರೆ, ದಕ್ಷಿಣಾದಿ ಸಂಪ್ರದಾಯ ಸಂಗೀತ ಮುಂಬಯಿಯಲ್ಲಿ ಅಷ್ಟು ಜನಪ್ರಿಯವಲ್ಲವಾದರೂ, ತಮಿಳರ ಜತೆಗೆ ಹಳೆಯ ಮೈಸೂರಿನವರು ಅದನ್ನು ಪ್ರೋತ್ಸಾಹಿಸುತ್ತಿದ್ದಾರೆ. ಭರತನಾಟ್ಯವೂ ಇಲ್ಲಿ ಜನಪ್ರಿಯ.

ಮುಂಬಯಿಯಲ್ಲಿ ಕನ್ನಡ ಸಾಹಿತ್ಯ ಚಟುವಟಿಕೆಗಳ ಬಗೆಗೆ ಪುಟಗಟ್ಟಲೆ ಬರೆಯಬಹುದು. ಅಖಿಲ ಕರ್ನಾಟಕದ ಮಟ್ಟದಲ್ಲಿ ಹೆಸರಾಂತ ಕಾದಂಬರಿಕಾರರು, ಕವಿಗಳು,

ಲೇಖಕರು, ಮುಂಬಯಿಯಲ್ಲಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಶಾಖೆ ಮುಂಬಯಿಯಲ್ಲಿ ಅಸ್ತಿತ್ವದಲ್ಲಿದ್ದು, ಈಗಾಗಲೇ ಮೂರು ಸಾಹಿತ್ಯ ಸಮ್ಮೇಳನಗಳನ್ನು ಇಲ್ಲಿ ನಡೆಸಿವೆ. 1935 ರಲ್ಲಿ ದಿ. ಎನ್ ಎಸ್. ಸುಬ್ಬರಾಯರ ಅಧ್ಯಕ್ಷತೆಯಲ್ಲಿ, ಹಾಗೂ 1951 ರಲ್ಲಿ ದಿ. ಮಂಜೇಶ್ವರ ಗೋವಿಂದಪೈಗಳ ಅಧ್ಯಕ್ಷತೆಯಲ್ಲಿ, ಅಖಿಲ ಕರ್ನಾಟಕ ಮಟ್ಟದ ಸಾಹಿತ್ಯ ಸಮ್ಮೇಳನಗಳು ಬಹಳ ಯಶಸ್ವಿಯಾಗಿ ಜರಗಿವೆ. ಡಾ॥ ಶಿವರಾಮ ಕಾರಂತ, ದಿ. ಡಾ. ಬೇಂದ್ರೆ, ಮೊದಲಾದ ಹಿರಿಯ ಕನ್ನಡ ಸಾಹಿತಿಗಳಿಗೆ ಮುಂಬಯಿ, ಎರಡನೆ ನಿವಾಸವಿದ್ದಂತೆಯೆ. ಕನ್ನಡ ಪುಸ್ತಕಗಳು, ಪತ್ರಿಕೆಗಳು ಇಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಮಾರಾಟವಾಗುತ್ತಿವೆ.

ಮುಂಬಯಿಯ ಎಲ್ಲ ಕನ್ನಡ ಸಂಘ, ಸಂಸ್ಥೆಗಳೂ ವರ್ಷಕ್ಕೊಂದಾದರೂ ಸಾಂಸ್ಕೃತಿಕ ಕಾರ್ಯಕ್ರಮ ನಡೆಸುತ್ತವೆ. ಈ ಕಾರ್ಯಕ್ರಮಗಳಲ್ಲಿ ಸಾಮಾನ್ಯವಾಗಿ ಕನ್ನಡ ಲಲಿತ ಕಲೆಗಳಿಗೆ ಅವಕಾಶವಿರುವುದು. ಆದರೆ ಮಹಾ ನಗರದ ಹಲವೆಡೆಗಳಲ್ಲಿ ನಡೆಯುತ್ತಿರುವ 'ನಾಡಹಬ್ಬ'ವೆ ಮುಂಬಯಿ ಕನ್ನಡಿಗರ ದೊಡ್ಡ ಸಾಂಸ್ಕೃತಿಕ ಹಬ್ಬ. ಕನ್ನಡಿಗರು ಯಾವುದೇ ಭಾಗದಿಂದ ಬಂದಿರಲಿ ಈ ಉತ್ಸವಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದಾರೆ. ಈ ಹಬ್ಬಗಳು ಮುಂಬಯಿಯಲ್ಲಿ ಕನ್ನಡ ಸಂಸ್ಕೃತಿಗೆ ಬೆಳಕಿಂಡಿಯಿದ್ದಂತೆ.

ವಾರದ ಆರು ದಿನಗಳಷ್ಟು, ದಿನಗಳ ಬಹುಕಾಲ ಯಾಂತ್ರಿಕ ಜೀವನ ನಡೆಸುತ್ತಿರುವ ಮುಂಬಯಿ ಕನ್ನಡಿಗ ಮನೆಯೊಳಗೆ ತೀರಾ ಸಂಪ್ರದಾಯವಾದಿ. ಧಾರ್ಮಿಕ ಶ್ರದ್ಧೆ, ಗುರು ಹಿರಿಯರಲ್ಲಿ ಭಕ್ತಿ ಹಾಗೂ ಗೌರವ, ತನ್ನ ಸಂಸ್ಕೃತಿಯ ಬಗ್ಗೆ ಅಭಿಮಾನ, ಸಾಮಾನ್ಯವಾಗಿ ಮುಂಬಯಿ ಕನ್ನಡಿಗನಲ್ಲಿ ಕಂಡುಬರುತ್ತದೆ. ಈ ಅಭಿಮಾನ ಕುಂದದೆ ಪ್ರವೃದ್ಧಮಾನವಾಗುವಂತೆ ನೋಡಿಕೊಳ್ಳುವುದು, ಕನ್ನಡಿಗರ ಜವಾಬ್ದಾರಿ.

ಪ್ರಾಚ್ಯ ಅವಶೇಷಗಳ ರಕ್ಷಣೆ !

ದ. ಕೃ. ಹೆಬಸೂರ,

ಪ್ರಾಚ್ಯವಸ್ತು ಸಂಗ್ರಾಹಕ, ಹಾಗೂ ಸಂಶೋಧಕ

ಪ್ರಾಚೀನ ಐತಿಹಾಸಿಕ ನಗರ-ಲಕ್ಕುಂಡಿ. ತಾಲೂಕು ಗದಗ, ಜಿಲ್ಹಾ-ಧಾರವಾಡ.

ಸಮಗ್ರ ಭಾರತದಲ್ಲಿ-ಎಲ್ಲ ಕಡೆಗೆ ಪ್ರಾಚೀನತೆಯ ಅವಶೇಷ-ಗುಡಿ-ಬಾವಿ-ಬಸ್ತಿ-ಶಾಸನಗಳು-ಮಾಸ್ತಿಕಲ್ಲು-ವೀರಗಲ್ಲು ಮುಂತಾದವುಗಳು ದೊರೆಯುವವು. ಮಹೆಂಜೋದಾರೋ ಹರಪ್ಪ ಸಂಸ್ಕೃತಿ ದೊರೆಕಿದ,—ಕಾಲ. ಅದಕ್ಕೂ ಹಿಂದಿನ ಕಾಲದವುಗಳೂ ದೊರೆಯುವವು. ಹೀಗೆ ನಮ್ಮ ಭಾರತದ ಪ್ರಾಚೀನತೆಗೆ ಮಹತ್ವವುಂಟು. ಇಂಥ ಇತಿಹಾಸವಿಲ್ಲದ ಉತ್ತರ ಅಮೇರಿಕಾ ದೇಶದವರು—ಅಬ್ರಾಹಂ ಲಿಂಕನ್ ನಂತರದ ಕಾಲವನ್ನೇ ಪ್ರಾಚೀನತೆಯ ಕಾಲವೆಂದು ಎಣಿಸಿದ್ದಾರೆ. ಅಂಥದರಲ್ಲಿ ಏನಾದರೊಂದು ದೊರಕಿದರೆ—ಆಕರ್ಷಕ ರೀತಿಯಲ್ಲಿ ಪ್ರಸಾರ ಮಾಡುತ್ತಾರೆ. ನಮ್ಮ ದೇಶದಲ್ಲಿ ಹಾಗಲ್ಲ, ಈ ಪ್ರಾಚೀನ ಅವಶೇಷ ಒಂದು ಕಡೆ ಸರಿಸಿ ಇಟ್ಟರೂ, ಮಹಾಭಾರತ-ರಾಮಾಯಣ ಕಾಲದ ಕಥೆ ಕಾವ್ಯ ನಾಟಕ ಮುಂತಾದ ಸಾಹಿತ್ಯಗಳು ಕಾಲ ಕಾಲಕ್ಕೆ-ಜೈನ, ಹಿಂದೂ ಸಂಸ್ಕೃತಿಗಳು ಬೇರೆ ಬೇರೆ ತರಹ ರೂಪಗೊಂಡು ಪ್ರಾಚ್ಯ ಸಾಹಿತ್ಯ ರೂಪವಾಗಿ ಉಳಿದಿವೆ. ಜೈನರು ಬರೆದ "ಗಂಧ ಹಸ್ತಿ ಭಾರತ" ವ್ಯಾಸ ಭಾರತದಷ್ಟೇ ತೂಕದ್ದು, ಹಾಗೂ ಪ್ರಾಚೀನತೆಯುಳ್ಳದ್ದು, ಹಾಗೂ ಪ್ರಾಚೀನತೆಯನ್ನು ಕಾಲ ಕಾಲಕ್ಕೆ ಕಾಯ್ದುಕೊಂಡು ಬಂದುದರಿಂಂದಲೇ ಇಂದು ಅಳಿದುಳಿದ ಅಸ್ತಿತ್ವಕ್ಕೆ ನಾವು ಪ್ರಾಚ್ಯ ಸಂಸ್ಕೃತಿ ಎಂದು ನೋಡಿ ಆಶ್ಚರ್ಯ ಹಾಗೂಆನಂದ ಪಡುತ್ತೇವೆ. ಇವುಗಳ ನಿರ್ಮಾಪಕರು ನಾಶ ಮಾಡದಂತೆ—ಧಾರ್ಮಿಕ ಮೌಲ್ಯಗಳನ್ನು ಸಾಹಿತ್ಯಾತ್ಮಕವಾಗಿ ಶಾಸನಗಳಲ್ಲಿ ಅನೇಕ ಕಡೆಗೆ ಬರೆದದ್ದುಂಟು ಅಂತಹ ಉದಾಹರಣೆ—

1) ಸ್ವದತ್ತಾಂ ಪರದತ್ತಾಂ ಯೋರೇತ್ ।
ವಸುಂಧರಾಂ ಷಷ್ಟಿವರ್ಷ ಸಹಸ್ರಾಣಿ ।
ವಿಷ್ಟಾಯಾಂ ಜಾಯತೇ ಕ್ರಿಮಿಃ ॥

2) ನವಿಷಂ ವಿಷಮಿತ್ಯಾಹುಃ । ದೇವಸ್ವಂ ವಿಷಮುಚ್ಯತೆ ।
ವಿಷಂ ಏಕಾಕಿನಂಹಂತಿ । ದೇವಸ್ವಂ ಪುತ್ರ ಪೌತ್ರಿಕಂ ॥

3) ಸಾಮಾನ್ಯೋಯಂ ಧರ್ಮಸೇತು ನೃಪಾಣಾಂ ।
ಕಾಲೇ ಕಾಲೇ ಪಾಲನಿಯೋ ಭವದ್ಭಿಃ ।

ಸರ್ವಾನ್ ಏತಾನ್ ಭಾವಿನಃ ಪಾರ್ಥಿವೇಂದ್ರಾನ್ ।
ಭೂಯೋ ಭೂಯೋ ಯಾಚತೆ ರಾಮಚಂದ್ರಃ ॥

(ಶಾಸನ ಸಂಪತ್ತಿನಿಂದ)

4) ವಾಪೀ ಕೂಪ ತಟಾಕಾನಾಂ । ಭಿನ್ನಾನಾಂ ದೈವವೇಶ್ಮನಾಂ ।
ಪುನಸ್ಕಾರಸ್ಯ ಕರ್ತುರ್ಶ್ಚ । ಲಭತೇ ಮೌಲಿಕಂ ಪದಂ ॥

(ಶಾಸನ ಸಂಪತ್ತಿನಿಂದ)

5) ಬೀಳಗಿ ವಿಜಾಪುರ ಜಿಲ್ಲೆ. ಇಬ್ರಾಹಿಂ ಆದಿಲ್‍ಶಹನ ಕಾಲ ಕ್ರಿ. ಶ. 1605. [ರಾಯರಭಾವಿ]

[ಕನ್ನಡ ಅಕ್ಷರ ಸಂಸ್ಕೃತ ಶ್ಲೋಕ]

19) ಶ್ರೀಯಾವ ತಿಷ್ಠತಿ ಚಂದ್ರಾರ್ಕೌ ಯಾವ ತಿಷ್ಠತಿ ಮೇದಿನೀ ।
20) ತಾವೆದ್ರಕ್ಷಂತು ಕೂಪಂಚ ವಿಶ್ವೇಷಾಮರ ವಲ್ಲಭಾ ॥ಶ್ರೀ॥
21) ಸ್ವದತ್ತಾ ದ್ವಿಗುಣಂ ಪುಣ್ಯಂ ಪರದತ್ತಾನು ಪಾಲನಂ । ಪರದ
22) ತ್ತಾ ಅಪಹರೇಣ ಸದತ್ತಂ ನಿಷ್ಫಲಂಭವೇತು ॥೧॥ ಮಂಗಳ

ಶುಭಂಭವತು ॥

ಧರ್ಮದ ನೆಲೆವೀಡಾದ ದೇಶದಲ್ಲಿ—"ತಮ್ಮದಲ್ಲದ ವಸ್ತು ಪಡೆದುಕೊಳ್ಳುವುದು,—ನಾಶಪಡಿಸುವುದು ಪಾಪದ ಕೆಲಸವೆಂದು" ಸಾರಿ ಸಾರಿ ಹೇಳಿದ್ದಾರೆ. ಇಂತಹ ಸಂಸ್ಕೃತಿ ಬೇರೆ ದೇಶದಲ್ಲಿ ವಿರಳ ! "ಭಾರತ ದೇಶವು ಪ್ರಪಂಚದ ಪ್ರದರ್ಶನಾಲಯವು" ಎಂದು ಆಂಗ್ಲ ವಿಮರ್ಶಕಾರರು ಹೇಳಿದ್ದಾರೆ. ನಮ್ಮ ಹಿಂದಿನವರ ಜೀವನ, ಪಾವಿತ್ರ್ಯ-ಆದರ್ಶವಾಗಿಟ್ಟುಕೊಂಡು ಸಾಗಿದ್ದೇವೆ, ಹೆಮ್ಮೆ ಪಡುವ ಭಾರತ! ವಿಶ್ವವೇ ಅಚ್ಚರಿಯಿಂದ ನೋಡುವ ಭಾರತ ! ಈ ನಮ್ಮ ಸಂಸ್ಕೃತಿ ಪರದೇಶದವರಿಗೆ-ಹಸಿವು ಹುಟ್ಟಿಸುವ ಭಾರತ !

ಹೀಗಿದ್ದ ನಮ್ಮ ಸಂಸ್ಕೃತಿಗೆ ಆಗಾಗ ಹಾನಿ ತಗುಲಿದ್ದುಂಟು,—ಗಝನಿ ಮಹಮ್ಮದನ ದಾಳಿ,—ಘೋರಿಮುಹಮ್ಮದನ ದಾಳಿ, ಇವು ಬಂದ ಆಪತ್ತುಗಳು, ಇವೆಲ್ಲ ಕೊಂಚ ! ನಮ್ಮ ಸಂಸ್ಕೃತಿ ಬಗೆಗೆ ಅಲಕ್ಷ ಮಾಡಿ—ನಮ್ಮ ಸಂಸ್ಕೃತಿ ನಾಶ, ನಾವೇ ಮಾಡಿದ ಉದಾಹರಣೆ ಬಹಳವಾಗಿವೆ. ಹಾಗೂ ನಮ್ಮ ಸಂಸ್ಕೃತಿ—ಪರಂಪರೆಯ ರಕ್ಷಣೆಗೆ ಬ್ರಿಟಿಶರು ಬಹಳಷ್ಟು ನೆರವಾದರು. ಈ ಉಪಕಾರ ಮರೆಯಲಾರದಷ್ಟು ಆಗಿದೆ. ಅವರು ಮಾಡಿದ ಕೆಲಸ ನೋಡಲು ಸಾಧ್ಯವಿದೆ. ಇನ್ನು ನಾಶದ ವಿವರ-ಬಹಳ ಭಾರವಾದ ಮನಸ್ಸಿನಿಂದ ಹೇಳುವ ಕಥೆ ಕೇಳಿ !—

ಜೈಪುರದ ಜಗಮೋಹನ ಪ್ಯಾಲೇಸ್, ಇದು ರಜಪೂತ ಅರಸರು ಕಟ್ಟಿಸಿದ್ದು, ಸುಮಾರು ನೂರಾರು ಎಕರೆ ಸರೋವರದ ಮಧ್ಯದಲ್ಲಿ ಕಲ್ಲುಬಂಡೆ, ಅದರಲ್ಲಿ ನೂರಾರ ಕಂಬಗಳಿಂದ ನಿರ್ಮಿತವಾದ—ವಿಲಾಸದ ಅರಮನೆ, ಈ ವಿಲಾಸದ ಅರಮನೆಗೆ ಹೋಗ ಬೇಕಾದರೆ—ಡೋಣಿಯಲ್ಲಿ ಕುಳಿತು ಹೋಗಿ-ರಾಜ ರಾಣಿಯರು ವಿಲಾಸ ಜೀವನ ಕಳೆದು ಪುನಃ ಡೋಣಿಯಲ್ಲಿ ಕುಳಿತು ಬರುವಂತಹದು. ಸುತ್ತಲೂ ಸುಗಂಧ ಬೀರುವ-ಸುಂದರ ಉದ್ಯಾವನ, ಇಂತಹ ಅರಮನೆ-ರಜಪೂತ ಅರಸರು-ಮೊಗಲ ಬಾದ ಶಹರು-ಮರಾಠರು-ಬ್ರಿಟಿಶರು ಕಾಪಾಡಿಕೊಂಡುಬಂದಂತಹದು. ಆದರೆ ಇತ್ತೀಚೆಗೆ 80 ಕಂಬಗಳನ್ನು ಕೆಡವಿ "ಪಂಚತಾರಾ" ಹೋಟೆಲ್ ಮಾಡಿದ್ದಾರೆ. ಎಂದರೆ ನಮ್ಮ ಸಂಸ್ಕೃತಿಗೆ ನಾವೆಷ್ಟು ಮಹತ್ವ ಕೊಟ್ಟಿದ್ದೇವೆ ?

ಈಗಿದ್ದ ಪ್ರಾಚ್ಯ ರಕ್ಷಣಾ ಶಾಖೆ-ಸಿಬ್ಬಂದಿ ಹಾಗೂ ಅವರ ಕೆಲಸ ಎಷ್ಟೋ-ಸಾಲದಾಗಿದೆ. ಉದಾಹರಣೆಯಾಗಿ—ಮೊನ್ನೆ ಕುತಬ ಮೀನಾರ ನೋಡಲು ಬಂದ ವಿದ್ಯಾರ್ಥಿ-ವಿದ್ಯಾರ್ಥಿನಿಯರು, ಅಲ್ಲಿ ಲೈಟು ಹೋಗಲು ಹುಡುಗಿಯರ ಮೇಲೆ ಅತ್ಯಾಚಾರವೆಸಗಿದರು. ಇದು ದೇಶದ ತುಂಬ ನಾಚಿಕೆ ಪಡಬೇಕಾದ ವಿಷಯ ! ಈ ಪ್ರಕರಣಕ್ಕೆ ಮಹತ್ವ ನೀಡಿ-ಭಾರತ ಪ್ರಧಾನಿಯವರೇ ಆಸ್ಥೆ ವಹಿಸಿ, ದಿಲ್ಲಿ ಸುತ್ತಾಡಿದರು. "60" ಐತಿಹಾಸಿಕ ಮಹತ್ವದ ಸ್ಥಳ ಕಂಡರು. ಇವುಗಳ ರಕ್ಷಣೆಗೆ ದಿಲ್ಲಿಯಂಥ ಪಟ್ಟಣಕ್ಕೆ ಕೇವಲ ಇಬ್ಬರು ಪ್ರಾಚ್ಯ ರಕ್ಷಣಾಧಿಕಾರಿಗಳು. 10-12 ಜನ ಅವರ ಕೈ ಕೆಳಗಿನವರು, ಆಯಿತು ! ಇದು ಅವರಿಂದ ಸಾಧ್ಯವೇ ? ಇದರ ಬಗ್ಗೆ ಲಕ್ಷ್ಯ ವಹಿಸಲು ಹೇಳಿದರು. ಸಮಗ್ರ ಭಾರತದಲ್ಲಿ- ರೆವ್ಹಿನ್ಯೂ-ಪೋಲೀಸ ಖಾತೆಯಿಂದ ಆಡಳಿತ ಸಾಗುವಂತೆ ಈ ಖಾತೆಗೂ ಸಿಬ್ಬಂದಿ ವ್ಯವಸ್ಥೆ ಅವಶ್ಯವಾಗಿದೆ. ತಾಲೂಕಿನ ಅಧಿಕಾರಿ, ಜಿಲ್ಲಾಧಿಕಾರಿ, ವಿಭಾಗಾಧಿಕಾರಿ, ಹಾಗೂ ಸಿಬ್ಬಂದಿಗೆ—ವೆಚ್ಚವೆಷ್ಟು ? ಹಾಗೂ ಲಾಭದಾಯಕವಲ್ಲದ ಖಾತೆಯು ! ಈ ಖಾತೆಯಲ್ಲಿ ಇಡೀ ದೇಶದಲ್ಲಿ ಕೇವಲ ಬೆರಳೆಣಿಕೆಯಲ್ಲಿ ಅಧಿಕಾರಿಗಳಿದ್ದಾರೆ. ಸಂರಕ್ಷಿಸುವ ಭಾಗವನ್ನು ಸರಿಯಾಗಿ ನೋಡಲೂ ಶಕ್ಯವಿಲ್ಲದಂತಾಗಿದೆ. ಹೀಗಾಗಿ ಸರಕಾರಕ್ಕೆ ಒಂದು ಭಾರವಾಗಿದೆ. ನಮ್ಮ ಸಂಸ್ಕೃತಿ ಪ್ರತೀಕಗಳ ಮೇಲೆ-ಪರದೇಶದವರ ಆಸ್ಥೆ ಬಹಳ ! ಹಾಗೂ ಹಣದ ಚೀಲವೇ ಅವರಾಗಿದ್ದಾರೆ. ನಮ್ಮ ದೇಶದಲ್ಲಿ-ಬಡತನಕ್ಕಿಂತ,—ಅಜ್ಞಾನ, ಅಸಂಸ್ಕೃತಿ, ಹಣದ ದಾಹ, ಇವುಗಳೇ ಹೆಚ್ಚಾಗಿ, ಎಷ್ಟೋ ಮೂರ್ತಿಗಳು, ಅವಶೇಷಗಳು, ಕಳ್ಳತನದಿಂದ ಪರದೇಶಕ್ಕೆ ಸಾಗಿವೆ. ಇದನ್ನು ಆಗಾಗ ತಡೆಗಟ್ಟುವ ಪ್ರಯತ್ನಗಳೂ ನಡೆದದ್ದುಂಟು. ನಮ್ಮ ಸ್ವಾತಂತ್ರ್ಯ ಪೂರ್ವದಲ್ಲಿ ಜನರಿಗೆ-ಭಯದಿಂದಲಾದರೂ ಈ ಪ್ರಾಚ್ಯ ಅವಶೇಷಗಳಿಗೆ ಕೈ ಹಚ್ಚುತ್ತಿರಲಿಲ್ಲ ! ಈಗ ಏನಾದರೂ ಮಾಡುವ ಪುಢಾರಿಗಳು ಆಗಿದ್ದಾರೆ. ಅವರಿಗೆ ಸಹಾಯಕರೂ-ಸುಸಂಸ್ಕೃತ ಜನ ಹಿಂದೆ ಇದ್ದಾರೆ.

ಕಂಚಿ, ಪಲ್ಲವರ ರಾಜಧಾನಿ, ಕೇಂದ್ರ ಸರಕಾರದ ಪ್ರಾಚ್ಯ ಇಲಾಖೆಯುವರ 24 ಎಕರೆ ಭೂಮಿಯನ್ನು ಪ್ರಾಚ್ಯ ರಕ್ಷಣಾ ಇಲಾಖೆಗೆ ತೆಗೆದುಕೊಂಡಿದ್ದುಂಟು. ಈಗ ಅಲ್ಲಿ ಅನಧಿಕೃತ ಆರ್. ಸಿ. ಸಿ, ಬಿಲ್ಡಿಂಗ್‌ಗಳು ಎದ್ದಿವೆ. ಇವುಗಳಿಗೆ ಹೊಣೆಗಾರರು ಯಾರು? ಸಮಾಜಕ್ಕೆ ಸಂಸ್ಕೃತಿ ಅಭಿಮಾನವಿಲ್ಲ! ಈ ಖಾತೆಯ ಕೈಯಲ್ಲಿ ಅಧಿಕಾರ ವಿಲ್ಲ! ಎಂಬಂತಾಗಿದೆ. ರಾಜಕೀಯ ಕೈವಾಡವೂ ಹಿನ್ನೆಲೆ ಆಗಿವೆ. "ಇದು ನಮ ದೇಶ" ಎಂಬ ರಾಷ್ಟ್ರಾಭಿಮಾನವಿಲ್ಲ! ಸುಸಂಸ್ಕೃತರಿಂದಲೂ-ಅಸಂಸ್ಕೃತರಿಂದಲೂ ಎಷ್ಟೋ ಹಾನಿ ಆಗಿದೆ· ಗುಡಿ-ಬಸ್ತಿ-ಬಾವಿಗಳ ಶಿಲ್ಪ ಕಲಾ ಕೃತಿಗಳನ್ನು-ಶಿಲಾ ಶಾಸ ನಗಳನ್ನು ತಮ್ಮ ಹೊಲ-ಮನೆಗಳಿಗೆ ಉಪಯೋಗಿಸಿಕೊಂಡಿದ್ದಾರೆ! ನಮ್ಮ ಸಂಸ್ಕೃತಿ ಕಾಪಾಡಿಕೊಳ್ಳುವ ಭಾರ ನಮ್ಮ ಮೇಲಿದೆ. ಇದು ಸರಕಾರದ ಹೊಣೆ ಎಂದು ಕೈ ಬೀಸಿದರೆ ಆಗದು! ಈ ವಿವೇಕ ನಮ್ಮಲ್ಲಿ ಬಹಳಷ್ಟು ಜನರಿಗಿಲ್ಲ! ಇದೇ ದುರ್ದೈವದ ಕಥೆ! ಅವುಗಳ ವಿವರಗಳನ್ನು ನೀಡಿದರೆ-ಸುಸಂಸ್ಕೃತ ಮನಸ್ಸು ಛಿದ್ರ ಛಿದ್ರವಾದೀತು! ನಮ್ಮ ಭಾರತದಲ್ಲಿ ಪ್ರಾಚ್ಯ ಸಂಸ್ಕೃತಿ ಇದೆ ಎಂದೇ-ದೇಶವಿದೇಶದ ಸಂದರ್ಶಕರು ಬರು ತ್ತಾರೆ. ನಮ್ಮ ದೇಶಕ್ಕೆ ಪ್ರವಾಸಿಕರಿಂದ ೪-೫ ಕೋಟಿ ರೂಪಾಯಿ ಪರ್ಯಾಯ (ವಿಮಾನ-ಕಾರು-ರೈಲ್ವೆ-ಪ್ರವಾಸಮಂದಿರ-ಹೋಟೆಲು ಮುಂತಾದವುಗಳಿಂದ) ಧನ ಬರುತ್ತದೆ. ಇದೂ ಒಂದು ಲಾಭದಾಯಕ ಅಂಶವೇ! ನಾವೇ ನಮ್ಮ ಪ್ರಾಚ್ಯ ಸಂಸ್ಕೃತಿ ಕಳೆದುಕೊಂಡರೆ-ಯಾರೂ ಬರಲಾರರು! ಅಶೋಕನ ಶಾಸನದಿಂದ ಪ್ರಾರಂಭ ವಾಗಿ-ಭಾರತದ ತುಂಬ ಶಾಸನಗಳುಂಟು. ಉತ್ತರದಲ್ಲಿ ಸಂಸ್ಕೃತ-ಬ್ರಾಹ್ಮಿ ಲಿಪಿಯ ಶಾಸನಗಳಿದ್ದರೆ-ದಕ್ಷಿಣಕ್ಕೆ ದ್ರಾವಿಡ ಭಾಷೆ ಹಾಗೂ ಸಂಸ್ಕೃತ ಭಾಷೆಯ ಶಾಸನ ಗಳುಂಟು! ಹಾಗೂ ವಿಪುಲವಾಗಿವೆ. ಅವುಗಳಲ್ಲಿ ಇಲ್ಲಿಯವರೆಗೆ ಕಂಡುಹಿಡಿದ ಶಾಸ ನಗಳ ಸಂಖ್ಯೆ ಎರಡು ಮೂರು ಲಕ್ಷಗಳಾಗಬಹುದು. ಇವುಗಳಲ್ಲಿ ಪ್ರಕಟಗೊಂಡ ಶಾಸನಗಳು ಒಂದು ಲಕ್ಷ ಮಾತ್ರ! ಇನ್ನುಳಿದವುಗಳು ಪ್ರಕಟವಾಗದೆ ಸರಕಾರದ ಖಜಾನೆ ಯಲ್ಲಿ ಭದ್ರವಾಗಿವೆ. ಅಧ್ಯಯನಕ್ಕಾಗಿ ಆಗಾಗ ವಿಶ್ವವಿದ್ಯಾಲಯದ ವಿದ್ಯಾರ್ಥಿ ಗಳು ಬರುವದುಂಟು, ಇಷ್ಟಲ್ಲದೇ—ಸಾರ್ವಜನಿಕರಾರೂ ಈ ಆಫೀಸಿಗೆ ಬಂದು, ನಮ್ಮ ಊರು-ನಮ್ಮ ತಾಲೂಕಿನ ಇತಿಹಾಸದ ಬಗೆಗೆ ಶಾಸನಗಳಿವೆಯೋ? ಎಂದು ಕೇಳಿದ ಉದಾಹರಣೆಯಿಲ್ಲ? ಇನ್ನುಳಿದ ಶಾಸನ ಪ್ರಕಟಣೆಗೆ ಸರಕಾರ ವ್ಯವಸ್ಥೆ ಮಾಡಿಲ್ಲ! ತಮಿಳು ನಾಡಿನ ಸರಕಾರ ಈ ಅಪ್ರಕಾಶಿತ ಶಾಸನ ಪ್ರಕಟಿಸುವ ಹೊಣೆ ಹೊತ್ತಿದ್ದಾರೆ. ಹಾಗೆ ಆ ಆ ರಾಜ್ಯ ಸರಕಾರಗಳು ಮುಂದೆ ಬಂದು ಪ್ರಕಟಣೆಗೆ ನೆರ ವಾದರೆ ನಮ್ಮ ಪ್ರಾಚ್ಯ ಸಂಸ್ಕೃತಿ ಜೀವಂತವಾಗಿ ಉಳಿದೀತು!

ಈ ಶಾಸನಗಳ ಅಧ್ಯಯನ ಮಾಡಿದ ಪಂಡಿತೋತ್ತಮರ ಸಂಖ್ಯೆಯೇ ಭಾರತ ದಲ್ಲಿ ಬೆರಳೆಣಿಕೆಯಲ್ಲಿದ್ದಾರೆ. ಅವರು ಕಷ್ಟ ಪಟ್ಟು, ಅನೇಕ ತೊಂದರೆಗಳನ್ನು ಅನು ಭವಿಸಿ, ಸಂಗ್ರಹಿಸಿದ ಸ್ಥಿತಿಯೇ ಹೀಗಾಗಿದೆ. ಮತ್ತೊಂದು ಕಡೆಗೆ ಹಾಳಾಗಿ ಬಿದ್ದಿವೆ.

ಇನ್ನೂ ನೋಡಬೇಕೆಂದರೆ ಕೆಲಸ ಮಾಡಬೇಕೆಂದರೆ ಆ ಪ್ರಕಾಶಿತ ಶಾಸನಗಳು ದೊರೆಯುವಲ್ಲಿ ಆಶ್ಚರ್ಯವಿಲ್ಲ! ಶಾಸನಗಳು ನಮ್ಮ ಹಿಂದಿನ ಜನ ಜೀವನ, ಧರ್ಮ, ಸಂಸ್ಕೃತಿಗಳನ್ನು ಸಾಹಿತ್ಯಾತ್ಮಕವಾಗಿ ಕಾವ್ಯಮಯವಾಗಿ ರಚಿಸಿದವುಗಳಾಗಿವೆ. ಈ ಶಾಸನಗಳನ್ನು ಉಳಿಸಿಕೊಳ್ಳುವ ಹೊಣೆ ಸರಕಾರ, ಸಮಾಜದ ಮೇಲಿದೆ! ಅಲ್ಲಲ್ಲಿ ದೊರೆಯುವ ಭೂಗತ ದ್ರವ್ಯ, ಶಸ್ತ್ರಾಸ್ತ್ರ, ಆಭರಣಗಳು, ಇನ್ನುಳಿದ ಪ್ರಾಚೀನತೆ ಹೇಳುವ ಅವಶೇಷಗಳನ್ನು ಆ ಆ ಭಾಗದ ಜನರು ಕೂಡಿ ಆಸ್ಥೆ ಪ್ರಾಮಾಣಿಕ ರೀತಿಯಿಂದ ಸಂಗ್ರಹಿಸಿ, ನಾಡಿನ ಹಿಂದಿನ ಪರಂಪರೆ ಉಳಿಸಿಕೊಂಡು-ಬೆಳೆಸಿಕೊಂಡು ಮುಂದಿನ ಪೀಳಿಗೆಗೆ ಸಂಸ್ಕೃತಿಯ ಪಾಠಕೊಡಬೇಕಾದವರು ಈಗ ಜೀವಂತವಿದ್ದವರು, ನಾವೇ ಸತ್ತಂತ್ತಾದರೆ ಮುಂದಿನ ಪೀಳಿಗೆ ಶಾಪ ಕೊಡುವುದರಲ್ಲಿ ಸಂಶಯವಿಲ್ಲ !

ಇನ್ನು ಅಲ್ಲಲ್ಲಿ ಸರಕಾರ ತುಂಬ ವೆಚ್ಚದಿಂದ ಸಂಶೋಧನೆಗೆ ರಕ್ಷಣೆಗೆ ಲಕ್ಷ್ಯವಹಿಸಿದ್ದಾರೆ. ಕೊಂಡಾಡುವಂತಹದು ! ಉದಾಹರಣೆ ನೀಡದಿದ್ದರೆ ಅಪಚಾರವಾದೀತು! ಅದಕ್ಕಾಗಿ ಎಷ್ಟೋ ಒಳ್ಳೆಯ ಕೆಲಸಗಳಲ್ಲಿ ನಾನುಕಂಡ ಒಂದೆರಡು ಉದಾಹರಣೆ ನೀಡುವೆ. ಮದ್ರಾಸಿನ ಹತ್ತಿರ, ಪಲ್ಲವರ ಸಮುದ್ರ ತೀರದ ದೊಡ್ಡ ಪಟ್ಟಣ,— "ಮಹಾಬಲಿಪುರಂ" ಇಲ್ಲಿಯ ಪ್ರಾಚ್ಯ ಅವಶೇಷಗಳಿಗೆ ಸಮುದ್ರದ ಉಪ್ಪು ನೀರಿನಿಂದ ಹಾನಿ ಆಗಬಾರದೆಂದು ಕೇಂದ್ರ ಸರಕಾರದವರು ಕೋಟಿ ಕೋಟಿ ಹಣ ವೆಚ್ಚದಿಂದ ಸಮುದ್ರ ರಾಜನನ್ನು ಒಂದು ಫರ್ಲಾಂಗ ದೂರ ಸರಿಸುವ ಯೋಜನೆ ಕೈ ಕೊಂಡಿದ್ದಾರೆ ! ಕರ್ನಾಟಕದ ಗತ ವೈಭವದ ಸ್ಥಳವಾದ ಹಂಪೆಯಲ್ಲಿ ಉತ್ಖನನ ಕಾರ್ಯ ನಡೆದದ್ದು ಶ್ಲಾಘನೀಯ ! ಇದೊಂದು ಅಲ್ಲಿ ಕೆಲಸ ಮಾಡುವ ಅಧಿಕಾರಿಗಳ ತಾಳ್ಮೆ ಜಿಗುಟುತನ, ಸರಕಾರದ ಉದಾಹರಣೆಗೆ ಆಹ್ವಾಹನ ನೀಡಿದಂತಾಗಿದೆ. ವಿಪುಲವಾದ ಹಾಗೂ ಮಹತ್ವ ಪೂರ್ಣವಾದ ಆಧಾರಗಳು ದೊರೆತಿವೆ. ಕರ್ನಾಟಕ ಸರಕಾರಕ್ಕೆ ಅಲ್ಲಿ ಕೆಲಸದ ಹೊಣೆ ಹೊತ್ತವರಿಗೆ ಮುಂದಿನ ಪೀಳಿಗೆ ಋಣಿಯಾಗುತ್ತಾರೆ, ಸಂಶಯವಿಲ್ಲ !

ಹೀಗೆ ಅನಂತರ ದುಃಖಗಳ ಮಧ್ಯ ಆಹ್ಲಾದಕರ ಘಟನೆಗಳೂ ನಡೆದಿವೆ. ಮತ್ತು ಅಲ್ಲಲ್ಲಿ ರಾಷ್ಟ್ರೀಯ ಭಾವನೆಯಿಂದ ವೈಯುಕ್ತಿಕವಾಗಿ ಸಂಘ-ಸಂಸ್ಥೆಯಾಗಿ ಪ್ರಾಮಾಣಿಕ ಕೆಲಸ ನಡೆದಿವೆ. ಸರಕಾರ ಪ್ರಾಚ್ಯ ಅವಶೇಷಗಳ ರಕ್ಷಣೆಯು ಕೂಡ ಪ್ರದರ್ಶನಾಲಯಕ್ಕೆ ಪರಿಚಯ ಪ್ರಸಾರಕ್ಕೆ ವಿಪುಲ ಹಣ ವೆಚ್ಚ ಮಾಡುತ್ತಿದೆ. ಪ್ರಾಚೀನ ಬಣ್ಣದ ರಕ್ಷಣೆ, ತಾಳೆಗರಿ-ಹಸ್ತ ಪ್ರತಿಗಳ ರಕ್ಷಣೆ, ಆಕರ್ಷಕರೀತಿಯಲ್ಲಿ ಪ್ರದರ್ಶನಾಲಯ ಸೌಕರ್ಯ ಒದಗಿಸಿದ್ದಾರೆ. ನಾಡಿನ ದೇಶ ವಿದೇಶ ಸಂದರ್ಶಕರು ಸಂದರ್ಶಿಸಿ ನಮ್ಮ ಹಿಂದಿನ ಸಂಸ್ಕೃತಿಯ ಬಗೆಗೆ ಒಂದು ನಿಮಿಷವಾದರೂ ಚಿಂತನ ಮಾಡುವ ಸುಯೋಗ ಒದಗಿದೆ !

ಕರ್ನಾಟಕ ರಾಜ್ಯ ರಾಜೇಶ್ವರಿಯು ಸನ್ಮಂಗಲವನ್ನೀಯಲಿ

———————

ಕರ್ನಾಟಕ ಪ್ರಾಚೀನ ಚಿತ್ರಕಲೆ

ಪಿ. ಆರ್. ತಿಪ್ಪೇಸ್ವಾಮಿ

ಕರ್ನಾಟಕ ಚಿತ್ರಕಲೆಯ ಇತಿಹಾಸದ ಪ್ರಾರಂಭ ಶಿಲಾಯುಗದಿಂದಲೇ ಎಂದು ತಿಳಿದು ಬರುತ್ತದೆ. ಕರ್ನಾಟಕದ ಚಿತ್ರಕಲೆಯು ಈಗ ಉಳಿದು ಬಂದಿರುವ ಬಗ್ಗೆ ಕರ್ನಾಟಕದ ಉತ್ತರ ಭಾಗದ ಹಲವು ಕಡೆ ನೋಡಲು ಸಿಗುವ ಗವಿ ಚಿತ್ರಗಳು ಬಹು ಪ್ರಾಚೀನವಾದವುಗಳು. ಈ ಶಿಲಾಯುಗದ (ಕ್ರಿ. ಪೂ. 25100-1000) ಜನ ಗುಡ್ಡಗಳಲ್ಲೋ ಗವಿಗಳಲ್ಲೋ ಇಳಿಜಾರು ಬಂಡೆಗಳ ಬುಡದಲ್ಲೋ ನೆಲಸಲಾರಂಭಿಸಿದರು. ಹಾಗೆ ನೆಲೆಸಿದ ಪ್ರಾಗೈತಿಹಾಸಿಕ ಮಾನವ ಚಿತ್ರಗಳನ್ನು ರಚಿಸುವ ಪ್ರವೃತ್ತಿಯುಳ್ಳವನಾಗಿದ್ದನೆಂಬುದು ಅವನು ಚಿತ್ರಿಸಿ ಬಿಟ್ಟುಹೋದವುಗಳಿಂದ ವ್ಯಕ್ತವಾಗುತ್ತದೆ. ನಮ್ಮ ಪ್ರಾಚ್ಯ ಶೋಧಕರ ಶ್ರಮದಿಂದಾಗಿ ಪ್ರತ್ಯಕ್ಷ ಪ್ರಮಾಣದ ಚಿತ್ರಗಳನ್ನು ಇಂದಿಗೂ ಅನೇಕ ಗುಹೆಗಳ ಭಿತ್ತಿಗಳಲ್ಲಿ ಕಾಣಬಹುದು.

ಬಾಗಿದ ಬಂಡೆಗಳ ಕೆಳಗೆ ಕೆಮ್ಮಣ್ಣಿನ ರೇಖಾಚಿತ್ರಗಳನ್ನು ಕಾಣಬಹುದು, ಜಿಂಕೆ, ಗೂಳಿ, ಮಾನವರ ಚಿತ್ರಗಳನ್ನು ಹೆಚ್ಚಾಗಿ ಅಲ್ಲಿ ಗಮನಿಸಬಹುದು. ಈ ಚಿತ್ರಗಳಲ್ಲಿ ಸಮತೋಲನ ಶಕ್ತಿಇಲ್ಲದುದು ಸ್ಪಷ್ಟವಿದ್ದರೂ ಅವು ಅಸುಂದರವಾದರೂ (CRUDE) ಚರಿತ್ರೆಯ ಬೆಳವಣಿಗೆಯಲ್ಲಿ ಅವು ಮುಖ್ಯವಾದವುಗಳು, ಈ ಬಗೆಯ ಚಿತ್ರಗಳು ಬಳ್ಳಾರಿ, ಬಿಜಾಪುರ, ಗುಲ್ಬರ್ಗಾ, ರಾಯಚೂರು ಜಿಲ್ಲೆಗಳಲ್ಲಿ ಹೇರಳವಾಗಿ ಕಂಡುಬಂದಿವೆ. ಇಲ್ಲಿರುವ ಚಿತ್ರಗಳೆಲ್ಲ ಗೀರುಚಿತ್ರಗಳು. ಮಾನವರ ಇಲ್ಲವೆ ಪ್ರಾಣಿಗಳ ಆಕಾರಗಳನ್ನು ಮಾತ್ರ ಸಾಂಕೇತಿಕವಾಗಿ ಬಣ್ಣದ ರೇಖೆಗಳಲ್ಲಿ ತೋರಿಸಿ—ಕಣ್ಣು ಮೂಗುಗಳನ್ನು ಬಿಡಿಸದೆ ಉಳಿದೆಲ್ಲಾ ಚಪ್ಪಟೆಯಾಗಿ ವರ್ಣ ತುಂಬಿರುವುದೇ ಇವುಗಳ ವೈಖರಿ. ಬೆಳಕಣೆ, ತೆಕ್ಕಲಕೋಟೆ, ಸಂಗನಕಲ್ಲು, ತಾವರೆಗೇರಿ, ಗೊಂಬಿಗುಡ್ಡ, ವಾಲಿದಿಬ್ಬ, ಸಿಡಿಲುಗುಂಡಿ—ಮುಂತಾದ ಕಡೆ ಈಗಲೂ ಅಳಿದುಳಿದು ಬಂದಿರುವ ಚಿತ್ರಗಳು ಆದಿಮಾನವನ ಕಲಾಸಕ್ತಿಯನ್ನು ಸೂಚಿಸುತ್ತವೆ. ಇಲ್ಲಿ ಬಹುಮಟ್ಟಿಗೆ ಕೈ ಕೈ ಹಿಡಿದು ನೃತ್ಯದಲ್ಲಿರುವ ಇಲ್ಲವೆ ಬೇಟೆಯಲ್ಲಿ ತೊಡಗಿರುವ ಮಾನವಾಕೃತಿಗಳನ್ನು ಗಮನಿಸಬಹುದು.

ಈ ಬಗೆಯ ಚಿತ್ರಕಲೆ ನೂತನ ಶಿಲಾಯುಗದಿಂದ ಮುಂದುವರೆದು ಬೃಹತ್ ಶಿಲಾಯುಗದವರೆಗೂ ಬೆಳೆದುಬಂದಿದೆ. ಬೃಹತ್ ಶಿಲಾ ಸಮಾಧಿಗಳ ಬಳಿ ಇರುವ

ಭಿತ್ತಿಚಿತ್ರಗಳಲ್ಲಿ ಕುದುರೆ ಸವಾರಿಯಲ್ಲಿರುವ ಬೇಟೆಗಾರರು ಕತ್ತಿ, ಈಟಿ, ಬಿಲ್ಲು—ಬಾಣಗಳನ್ನು ಹೊಂದಿರುತ್ತಾರೆ. ಕುದುರೆಯ ಮೇಲೆ ಕುಳಿತು ಹುಲಿ ಬೇಟೆಯಾಡುವುದು, ಕೈ ಕೈ ಹಿಡಿದು ಬೇಟೆಯಲ್ಲಿ ತೊಡಗಿರುವುದು ಮುಂತಾದ ಚಿತ್ರಗಳು ಒರೇ ಬನಕಲ್ಲಿನ ಚಾಚುಬಂಡೆಗಳಲ್ಲಿವೆ. ಬಲಿಚಕ್ರ ಎಂಬಲ್ಲಿ ಕುದುರೆ ಸವಾರನ ಚಿತ್ರವಿದೆ. ಇದು ಸೊಗಸಾದ ಚಿತ್ರ. ಈ ಎಲ್ಲ ಚಿತ್ರಗಳೂ ಸುಂದರವೂ ಸತ್ವಪೂರ್ಣವೂ ಆಗಿವೆ.

ಆದಿಮಾನವ ಗವಿಗಳಲ್ಲಿ ವಾಸಿಸಲಾರಂಭಿಸಿ ಗುಡಿಸಲು ಕಟ್ಟಿಕೊಂಡು ಮಡಕೆ ಕುಡಿಕೆಗಳನ್ನು ರಚಿಸುವಂತಾಗಿ ಒಂದೆಡೆ ನಿಲ್ಲುವಂತಾದಾಗ ಕಲೆಯ ಕಡೆ ಗಮನ ಹರಿಸಿರಬಹುದು. ಈ ಆದಿ ಮಾನವರಿಗೆ ಚಿತ್ರಕಲೆಯಲ್ಲಿ ಅಭಿರುಚಿ ಇತ್ತು ಎಂಬುದನ್ನು ಅವರು ರೂಪಿಸಿ ಬಿಟ್ಟುಹೋದ ಮಣ್ಣಿನ ಪಾತ್ರೆಗಳಿಂದ ವ್ಯಕ್ತವಾಗುತ್ತದೆ. ಮಾಸಲು ಕೆಂಪು ವರ್ಣದ ಪಾತ್ರೆಗಳ ಮೇಲೆ ನೇರಳೆ ಇಲ್ಲವೆ ಕಪ್ಪನೆ ಬಣ್ಣದ ದಪ್ಪಗೆರೆಯ ಚಿತ್ರಗಳಿವೆ. ಇಂಥ ಸಚಿತ್ರ ಮಡಕೆಗಳು ಉತ್ತರ ಕರ್ನಾಟಕದ ಭಾಗಗಳಲ್ಲಿ ಹೆಚ್ಚಾಗಿ ದೊರೆತಿವೆ. ಹೊಳಪಿನ ಮಡಕೆಗಳ ಮೇಲೆ ಬಿಳಿಬಣ್ಣದ ರೇಖೆಗಳನ್ನು ಅಡ್ಡಾದಿಡ್ಡಿಯಾಗಿ ಅಲೆಅಲೆಯಾಗಿ ಚಿಕ್ಕ ಹಾಗೂ ದಪ್ಪ ಚುಕ್ಕಿಗಳಿಂದ ಪುಷ್ಪಗಳ ವಿವಿಧ ಆಕಾರಗಳನ್ನು ಚಿತ್ರಿಸಿ ಕೆಂಪಿನ ಲೇಪನ ಬಳಿದಿರುವುದು ಕಂಡುಬರುತ್ತದೆ. ಇಂಥವು ಚಂದ್ರವಳ್ಳಿ, ಮಸ್ಕಿ, ಹೆಮ್ಮಿಗೆ ಹೆರಕಲ್ಲು, ಬ್ರಹ್ಮಗಿರಿ, ಮಾಧವಪುರ, ಬೆಂಗಳೂರು, ಗಡವಾಂವ ಮುಂತಾದ ಕಡೆ ದೊರೆಯುತ್ತವೆ. ಇವುಗಳಲ್ಲಿನ ರೇಖೆಗಳು ಗವಿಗಳಲ್ಲಿ ಕಾಣುವ ಕೆಮ್ಮಣ್ಣಿನ ಬಣ್ಣದ ಚಿತ್ರಗಳೂ ಉಳಿದು ಬೆಳೆದು ಬಂದು ಮುಂದಿನ ಜನಾಂಗದವರು ತಮ್ಮ ಮನೆಗೆಳ ಗೋಡೆಗಳ ಮೇಲೆ ಕೆಮ್ಮಣ್ಣಿನಲ್ಲಿ ಇಲ್ಲವೆ ಸುಣ್ಣದಲ್ಲಿ ಚಿತ್ರಗಳನ್ನು ಬಿಡಿಸುವುದು ನಂತರ ರಂಗವಲ್ಲಿಗಳನ್ನು ಹಾಕುವುದು ಇವುಗಳಲ್ಲಿ ರೂಢಿಯಾದಂತೆ ತೋರುತ್ತದೆ.

ಇನ್ನು ಯುಗಯುಗಗಳಲ್ಲಿ ಚಿತ್ರಕಲೆ ಬೆಳೆದು ಬಂದುದಕ್ಕೆ ನಮ್ಮಲ್ಲಿ ಸಾಕಷ್ಟು ಸಾಹಿತ್ಯಿಕ ಆಧಾರಗಳೂ ಇವೆ. ನಮ್ಮ ಚಿತ್ರಕಲೆ ಬಹು ಪ್ರಾಚೀನವಾದುದು. ಈ ಬಗ್ಗೆ ಪುರಾಣ, ಕಾವ್ಯ ಶಾಸ್ತ್ರಗಳಲ್ಲಿ ಅನೇಕ ಉಲ್ಲೇಖಗಳಿವೆ. "ಚಿತ್ರಶಾಲೆ" "ಚಿತ್ರಗೃಹಗಳು" ಬಹಳ ಹಿಂದೆಯೇ ಇದ್ದವೆಂಬುದು ರಾಮಾಯಣ ಮಹಾಭಾರತ ಕಾವ್ಯಗಳಲ್ಲಿ ವ್ಯಕ್ತವಾಗಿದೆ. ಭಾಸನ ನಾಟಕಗಳಲ್ಲಿ "ಚಿತ್ರಕರ್ಮ"ದ ಪ್ರಸ್ತಾಪ ಅನೇಕ ಬಾರಿ ಬಂದಿದೆ. ಹಿಂದಿನಿಂದಲೂ ಕಲಾ ಕೋವಿದರಿಗೆ ರಾಜಾಶ್ರಯವಿದ್ದಿತು. ಅವರು ಅಂದಿನ ಪ್ರಮುಖ ಘಟನೆಗಳನ್ನು ಚಿತ್ರಗಳಲ್ಲಿ ರೂಪಿಸುತ್ತಾ ಬಂದರು. ಅರಮನೆ, ಗುರುಮನೆ, ದೇವಾಲಯುಗಳ ಭಿತ್ತಿಗಳು ಚಿತ್ರಮಯವಾದವು. ಭಾಸನ ಕಾಲದಲ್ಲಿ ವರ್ಣಶಿಲ್ಪಿಗಳಿಗೆ ಒಳ್ಳೆಯ ಪ್ರೋತ್ಸಾಹ ಇದ್ದಿರಬೇಕು ಎಂಬುದು ಅವನ ಕೃತಿಗಳಿಂದಲೇ ವ್ಯಕ್ತವಾಗುತ್ತದೆ.

ಭಾಸನಂತೆ ಕಾಳಿದಾಸನ ಕೃತಿಗಳಲ್ಲೂ ಅವನ ಕಾಲದಲ್ಲಿ ಚಿತ್ರಕಲೆಗೆ ಒಳ್ಳೆಯ ಪ್ರಾಶಸ್ತ್ಯವಿದ್ದಿತ್ತು ಎಂಬುದು ತಿಳಿದು ಬಂದಿದೆ. ಕಾಳಿದಾಸನ ಕಾವ್ಯಗಳಲ್ಲಿ ಅರಮನೆ ಗಳ—ಮನೆಗಳ ಒಳಾಂಗಣಗಳಲ್ಲಿನ ಭಿತ್ತಿ ಚಿತ್ರಗಳ ಬಗ್ಗೆ ಮತ್ತು ರಾಜಾಶ್ರಯದ ಚಿತ್ರಶಾಲೆಗಳಲ್ಲಿ ಸೊಗಸಾದ ನಿಸರ್ಗ ಚಿತ್ರಗಳ ವಿವಿಧ ವರ್ಣಗಳ ಬಗ್ಗೆ ಸೂಚಿತವಾದ ವಿವರಗಳ ವರ್ಣನೆಗಳಿವೆ. ಅಲ್ಲದೆ ತೂಲಿಕಾ, ವರ್ತಿಕಾ, ಶಲಾಕಾ, ಲಂಬಕೂರ್ಚ, ಚಿತ್ರಫಲಕ, ವರ್ಣ, ರಾಗ, ವರ್ತಿಕಾ ಕರಂಡ—ಮುಂತಾದ ಚಿತ್ರರಚನಾ ಸಾಮಗ್ರಿಗಳ ಉಲ್ಲೇಖವೂ ಇದೆ.

ಕನ್ನಡದ ಆದಿಕವಿ ಪಂಪನ (ಕ್ರಿ. ಶ. 941) ಕೃತಿಗಳಲ್ಲೂ ಚಿತ್ರಕಲೆಯ ಪ್ರಸ್ತಾಪದ ಒಂದೆರಡು ಸಂದರ್ಭಗಳಿವೆ. ರಾಮಚಂದ್ರ ಪುರಾಣದಲ್ಲಿ ನಾರದನು ಸೀತೆಯ ರೂಪ ಚಿತ್ರವನ್ನು ಚಿತ್ರಿಸಿದ ವರ್ಣನೆಯೂ ಬರುತ್ತದೆ. ಆ ಕಾಲದಲ್ಲಿ "ಭಿತ್ತಿ" ಹಾಗೂ "ಫಲಕ"ಗಳ ಮೇಲೆ ಅಲ್ಲದೆ "ದುಕುಳ ಪದ"ದ (ಬಟ್ಟೆ) ಮೇಲೂ ಅಪೂರ್ವ ಚಿತ್ರ ರಚಿಸಲಾಗುತ್ತಿತ್ತು. "ಭರತೇಶ ವೈಭವ"ದಲ್ಲಿ ರತ್ನಾಕರವರ್ಣಿಯು (ಕ್ರಿ. ಶ. 1557) ನಾಟ್ಯ ಶಾಲೆಯ ಭಿತ್ತಿಚಿತ್ರಗಳನ್ನು ವರ್ಣಿಸಿದ್ದಾರೆ. ನಗರ ನಿರ್ಮಾಣದ ಬಗ್ಗೆ ಕೌಟಿಲ್ಯನ "ಅರ್ಥಶಾಸ್ತ್ರ"ದಲ್ಲೂ ಚೈತ್ರ ಹಾಗೂ ಚಿತ್ರಶಾಲೆಗಳ ಬಗ್ಗೆ ಬೌದ್ಧ "ತ್ರಿಪೀಟಿಕಾ" ಗ್ರಂಥಗಳಲ್ಲೂ, ವಾತ್ಸಾಯನನ "ಕಾಮಸೂತ್ರ"ದಲ್ಲೂ ಚಿತ್ರಕಲೆಯ ಆರು ಅಂಗಗಳ ಪ್ರಸ್ತಾಪ ಬರುತ್ತದೆ.

ಭೋಜನ 'ಸಮರಾಂಗಣ ಸೂತ್ರಧಾರಿ', 'ಶುಕ್ರನೀತ', ರತ್ನಾಕರನ 'ಹರಿ ವಿಜಯ', ವಿದ್ಯಾರಣ್ಯರ 'ಪಂಚದಶೀ', ಮುಂತಾದ ಗ್ರಂಥಗಳಲ್ಲಿ ಚಿತ್ರ ಲೇಖನ ಪ್ರಕಾರದ ವರ್ಣನೆಗಳಿವೆ. ವೇದಯುಗದಲ್ಲಿ ಯಜ್ಞೋಪಕರಣಗಳಾದ ಕುಂಭ, ವೇದಿ, ಯೂಪ ಮುಂತಾದುವುಗಳ ಲೇಪನದಿಂದಲೂ, ಮಾತೃಕಾ ಪೂಜೆಯಿಂದಲೂ ಚಿತ್ರ ಕಲೆಯು ಬೆಳೆದು ಬಂದಿತೆನ್ನಬಹುದು. ವಿಷ್ಣುಧರ್ಮೋತ್ತರ ಪುರಾಣ (ಭಾಗ-1) ಚಿತ್ರ ಕಲೆಯ ಲಕ್ಷಣಗಳನ್ನು ತಿಳಿಸುತ್ತದೆ. ದೇವತೆಗಳ ಮಾನವರ ರೂಪಚಿತ್ರಣದ ಬಗ್ಗೆ ಅನೇಕ ವಿಷಯಗಳ ವಿವರಗಳಿವೆ. ಅಲ್ಲದೆ ಈ ಗ್ರಂಥ ವರ್ಣಗಳ, ತೂಲಿಕೆ ಗಳ ತಯಾರಿಕೆಯನ್ನೂ ಭಿತ್ತಿಸಿದ್ಧತೆಯನ್ನೂ ಚಿತ್ರರಚಿಸುವ ವಿಧಾನವನ್ನೂ ತಿಳಿಸುವ ಉತ್ತಮ ಗ್ರಂಥ.

ಮೈಸೂರು ಪ್ರಭುಗಳು ಕಲಾಪ್ರೇಮದಿಂದ ಉಳಿದಿರುವ ಕನ್ನಡದ ಅಪೂರ್ವ ಕಲಾ ಕೃತಿಗಳಲ್ಲಿ 'ಶ್ರೀತತ್ವನಿಧಿ' ಎಂಬ ಬೃಹತ್ ಗ್ರಂಥವೂ ಒಂದು. ಇದರಲ್ಲಿ ಸಾವಿರಾರು ವರ್ಣರಂಜಿತ ಚಿತ್ರಗಳಿವೆ. ಇದು ಮುಮ್ಮಡಿ ಕೃಷ್ಣರಾಜ ಒಡೆಯರ ಧ್ಯಾನ ಶ್ಲೋಕಗಳಿಗೆ ಅನುಸಾರವಾಗಿ ಸುಂದರ ಚಿತ್ರಗಳನ್ನು ಒಡೆದು 'ಶ್ರೀತತ್ವನಿಧಿ' ಎಂದು ಸಚಿತ್ರಗೊಳಿಸಿದ ಕಲಾಕೋವಿದರು ಮುಮ್ಮಡಿಯವರೇ ಎಂದಿದೆ. ಇಂಥ ಪ್ರತಿಗಳು

ಎರಡಿವೆ. ಚಿತ್ರ ಕಾರರು ಮುಮ್ಮಡಿಯವರಾಗಿರಕ್ಕಲ್ಲವೆಂದು ಅನಿಸುತ್ತದೆ. ಆದರೆ ಆ ಸಚಿತ್ರ ಅಪೂರ್ವ ಗ್ರಂಥ ರಚನಾಪ್ರೋತ್ಸಾಹಕ್ಕಾಗಿ ಆ ಪ್ರಭುಗಳು ಕಲಾಭಿರುಚಿಗೆ ಕನ್ನಡಿಗರು ಋಣಿಯಾಗಿರಬೇಕು.

'ಶ್ರೀತತ್ವನಿಧಿ' ಗ್ರಂಥದಲ್ಲಿ ಸಾಹಿತ್ಯದ ಜೊತೆಗೆ ಚಿತ್ರಗಳನ್ನು ಬಹು ಜಾಗ್ರತೆಯಿಂದ ಚಿತ್ರಿಸಲಾಗಿದೆ. ಒಂದು ಸಾವಿರದ ನೂರರವತ್ತು ಪುಟಗಳ ಹೆಬ್ಬೊತ್ತಿಗೆ ಇದು. ಇಲ್ಲಿ ಶಕ್ತಿನಿಧಿ, ವಿಷ್ಣುನಿಧಿ, ಶಿವನಿಧಿ, ಬ್ರಹನಿಧಿ, ವೈಷ್ಣವನಿಧಿ, ಶೈವನಿಧಿ, ಆಗಮನಿಧಿ, ಕೌತುಕನಿಧಿ, ಎಂದು ಒಂಬತ್ತು ದಳಗಳಿವೆ. ಶಕ್ತಿ ನಿಧಿಯಲ್ಲಿ ಶ್ರೀ ಚಾಮುಂಡೇಶ್ವರಿಯ ಸುರ್ಣರಂಜಿತ ಚಿತ್ರ ಸೊಗಸಾಗಿದೆ. ವಿಷ್ಣುನಿಧಿಯಲ್ಲಿ ವಿರಾಟ ಪುರುಷನ ಧ್ಯಾನ ಮತ್ತು ಸ್ವರೂಪಕ್ಕೆ ಪ್ರಥಮಸ್ಥಾನ ವಿಷ್ಣುದೇವರಿಗೆ ಸಂಬಂಧಪಟ್ಟ ಚಿತ್ರಗಳೇ ಇಲ್ಲಿ ಹೆಚ್ಚು. ಅಷ್ಟಮುಖ ಗಂಡಭೇರುಂಡ, ಗೃಹಸಿಂಹ, ಶೇಷಶಾಯಿ, ತಾರಕರಾಮ, ಪಟ್ಟಾಭಿರಾಮ, ದಶಾವತಾರ ಅಲ್ಲದೆ ಮುದ್ದುಬಾಲಕೃಷ್ಣ, ವೇಣು ಗೋಪಾಲ, ವಟಪತ್ರಶಾಯಿ, ಮುಕುಂದ ಎಲ್ಲರನ್ನು ಸಹಜವಾದ ರೂಪ, ವೇಷ ಭೂಷಣ, ಮುಖ ಮುದ್ರೆಯಿಂದ ಚಿತ್ರಿಸಲಾಗಿದೆ. 122 ಸುವರ್ಣರಂಜಿತ ಚಿತ್ರಗಳಿವೆ—ಈ ವಿಷ್ಣುನಿಧಿಯಲ್ಲಿ. ಶಿವನಿಧಿಯು ಕೈಲಾಸಮೂರ್ತಿಯ ಸೌಂದರ್ಯವನ್ನು ವಿವಿಧ ಭಂಗಿಗಳು, ಗಣೇಶ್ವರನ ಕೆಲವು ನಾಮರೂಪಗಳು, ಕುಮಾರಸ್ವಾಮಿ ವೀರಭದ್ರ, ಅಘೋರ ವೀರಭದ್ರ—ಇವೇ ಮೊದಲಾದ ಶಿವಸಂಬಂಧ ಚಿತ್ರಗಳೂ ಇವೆ. ಕೊನೆಯಲ್ಲಿ ವಿಶ್ವೇಶ್ವರ ಚಿತ್ರವೂ ಇದೆ. ಒಟ್ಟು 195 ಚಿತ್ರಗಳು ಶಿವನಿಧಿಯಲ್ಲಿವೆ. ಬ್ರಹ್ಮನಿಧಿಯಲ್ಲಿ ಬ್ರಹ್ಮಲೋಕದ ಚಿತ್ರಗಳೇ ಹೆಚ್ಚಾಗಿದೆ. ಚತುರ್ಮುಖ ಬ್ರಹ್ಮನ ಸ್ವರೂಪದ ಚಿತ್ರ, ಸರಸ್ವತಿಯ ಬ್ರಹ್ಮನು, ಸಪ್ತಋಷಿಗಳು, ಅಷ್ಟವಸುಗಳು, ಅಷ್ಟ ನದಿಗಳು, ಚತುರ್ದಶ ಲೋಕಗಳು ಮತ್ತು ಇಂದ್ರರು, ಸಪ್ತಮಾರುತಗಳು ಅಷ್ಟದಿಕ್ಕುಗಳು ಅವರ ಒಡೆಯರು, ಗಜನಾಗಗಳು, ವೇದಗಳ ಸ್ವರೂಪ ಮತ್ತು ಅಭಿಮಾನಿ ಮತ್ತು ಅಭಿಮಾನಿ ದೇವತೆಗಳು, ವೇದವೇದಾಂಗ ಶಾಸ್ತ್ರ, ಧರ್ಮ, ಪೌರಾಣಗಳ ಸ್ವರೂಪ ಮತ್ತು ದೇವತೆಗಳ ಬಗೆಬಗೆಯ ಆಯುಧೋಪಕರಣಗಳ ಹೆಸರು ಮತ್ತು ಚಿತ್ರ. ಇಷ್ಟೇ ಅಲ್ಲದೆ ಸಂಗೀತದ ಸಪ್ತಸ್ವರಗಳು ಮತ್ತು ಮೂವತ್ತಾರು ರಾಗಗಳ ಲಕ್ಷಣ ಮತ್ತು ಬಣ್ಣನೆಯೂ ಧ್ರುವಾದಿ ಸಪ್ತ ತಾಳಗಳ ಸ್ವರೂಪದ ಚಿತ್ರಗಳು ಅಪೋಘವಾದುವು. 'ಗ್ರಹನಿಧಿ'ಯು ಜ್ಯೋತಿಷ್ಯ ಶ್ಯಾಸ್ತ್ರದ ನಿಘಂಟುವಿದ್ದಂತೆ ಇದೆ. ಕಾಲಪುರುಷ, ಯುಗಗಳೂ, ಮನ್ವಂತರಗಳು ಅರವತ್ತು ವರುಷಗಳು, ಅಯನ, ಋತು ಮಾಸ, ಪಕ್ಷ, ತಿಥಿ ವಾರ ಗ್ರಹ, ರಾಶಿ, ನಕ್ಷತ್ರ ಪ್ರತಿಯೊಂದಕ್ಕೂ ಸ್ವರೂಪ ಚಿತ್ರ ಮತ್ತು ಅಭಿಮಾನದೇವತೆಯ ಚಿತ್ರಗಳು ಜೊತೆಗೆ ಮೃಗ ಪಕ್ಷಿ, ಜಲತಂತು, ಕ್ರಿಮಿ ಕೀಟಾದಿ ಜೀವಗಳು ಮತ್ತು ಹೆಸರುಗಳಿವೆ. ಈ ಭಾಗದಲ್ಲಿ ಒಟ್ಟು 950 ಚಿತ್ರಗಳಿವೆ. ಬರೀ ರೇಖಾ ಚಿತ್ರಗಳ 'ವೈಷ್ಣವನಿಧಿ'ಯಲ್ಲಿ 26 ಭಾಷ್ಯಕಾರ ಮತ್ತು ಆಳ್ವಾರುಗಳು

ಇದ್ದಾರೆ. 'ಶೈವನಿಧಿ'ಯಲ್ಲಿ ಲಿಂಗಗಳೂ, ಯೋಗಾಸನಗಳ 289 ಚಿತ್ರಗಳಿವೆ. 'ಆಗಮನಿಧಿ'ಯಲ್ಲಿ 59 ಚಿತ್ರಗಳೂ 'ಕೌತಕನಿಧಿ'ಯಲ್ಲಿ 83 ಚತುರಂಗವೂ ಇವೆ.

ಒಟ್ಟು 1888 ವರ್ಣರಂಜಿತ ಚಿತ್ರಗಳೂ 458 ರೇಖಾಚಿತ್ರಗಳೂ ಅಪೂರ್ವವೆನಿಸಿವೆ. ಇಲ್ಲಿನ ಚಿತ್ರಗಳ ಒನ್ನೈಲಿಯಲ್ಲಿ ಬಳಸಿರುವ ಹಾಳತ ಬಣ್ಣ, ವರ್ಣಗಳ ಸಮ್ಮಿಳನ, ತೆಳುವರ್ಣ, ದಪ್ಪವರ್ಣಗಳ ಬಳಕೆ ರೇಖಾವಿನ್ಯಾಸ ಮೆಚ್ಚುವಂತಹದು. ಇಂಥ ಚಿತ್ರಗಳ ನಿಧಿ ಗ್ರಂಥಗಳು ಎರಡಿವೆ. ಒಂದು ಅರಮನೆಯಲ್ಲೂ ಮತ್ತೊಂದು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯ ವಿದ್ಯಾನ್ವೇಷಣ ಮಂದಿರದಲ್ಲೂ ಇದೆ. ಈ ಕೃತಿಗಳು ಕನ್ನಡಿಗರ ಕಲಾರತ್ನಗಳಾಗಿ ಉಳಿದು ಕಲಾವಿದರ ಜಾಣ್ಮೆಯನ್ನು ರಾಜರ ಕಲಾದೃಷ್ಟಿಯನ್ನು ಸಾರುತ್ತಿವೆ.

ಚಾಮರಾಜಒಡೆಯರ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿಯೂ ಪ್ರಾಚೀನ ಸಂಪ್ರದಾಯದ ವರ್ಣಚಿತ್ರಕಲೆಗೆ ಸಾಕಷ್ಟು ಪ್ರೋತ್ಸಾಹ ದೊರೆತಿದೆ. ಈ ಅರಸರ ಕಾಲದಲ್ಲಿ ಬೆಳೆದ ಮೈಸೂರು ದೇಶೀಯ ಶೈಲಿಯ ಅನೇಕ ಅಪೂರ್ವ ಚಿತ್ರಪಟಗಳು ಮನೆ ಮನೆಗಳಲ್ಲೂ ರಾಮಮಂದಿರಗಳಲ್ಲೂ ಅರಮನೆ ಗುರುಮನೆಗಳಲ್ಲೂ ದೊರೆಯುತ್ತವೆ. ಈ ಕಲಾ ಸಂಪ್ರದಾಯವನ್ನು ಇನ್ನೂ ಉಳಿಸಿಕೊಂಡು ಬಂದಿರುವ ಕಲಾವಿದರು ಎಲ್ಲೋ ಅಪರೂಪವಾಗಿ ದೊರೆಯುತ್ತಾರೆ. ಕಾಗದದ ಮೇಲೆ ಬಟ್ಟೆಯ ಮೇಲೆ ಇಲ್ಲವೆ ಗಾಜಿನ ಮೇಲೆ ಜಲವರ್ಣ ಅಥವಾ ತೈಲವರ್ಣಗಳಲ್ಲಿ ರಾಜಮಹಾರಾಜರ ರೂಪ ಚಿತ್ರಗಳನ್ನೂ ದೇವದೇವತೆಗಳ ಹಾಗೂ ಅನೇಕ ಪೌರಾಣಿಕ ಸನ್ನಿವೇಶಗಳ ಸಂಯೋಜನಾ ಚಿತ್ರಗಳನ್ನು ರಚಿಸುವುದು ಈ ಸಂಪ್ರದಾಯದಲ್ಲಿ ವಿಶೇಷ. ಸುವರ್ಣ ಲೇಪನದ ಹಾಗೂ ದೇಶೀಯ ಮೂಲವರ್ಣಗಳ ಉಪಯೋಗ ಕಾಣುತ್ತದೆ. ಮೊದಲು ಸೀಸದ ಕಡ್ಡಿಯಲ್ಲಿ ಆಕೃತಿಯನ್ನು ರೂಪಿಸಿಕೊಂಡು ಅನಂತರ ವರ್ಣಗಳನ್ನು ಹಾಕಿ ಅಲಂಕಾರ ವೈಖರಿ ತರುವೆಡೆಗಳಲೆಲ್ಲಾ ಬಿಳಿಯ ಸೀಸದಲ್ಲಿ ರೇಖೆಗಳನ್ನು ಎಳೆದು ಅದರ ಮೇಲೆ ವಜ್ರದ ಅಂಟನ್ನು ಸವರಿ ಅದರ ಮೇಲೆ ಚಿನ್ನದ ರೇಖೆಯನ್ನು ಲೇಪಿಸುವುದು ಬೂಟ ಕುಸುರಿಸ ಕೆಲಸ ಮಾಡುವಾಗ ವಿವಿಧ ಬಣ್ಣಗಳನ್ನು ಬಳಸಿ ಆಯಾ ಭಾಗಗಳಿಗೆ ಸುವರ್ಣ ರೇಖುಪಿನ ಲೇಪನ ಮಾಡುವುದು ಇಲ್ಲಿಯ ತಂತ್ರ. ಕೃತಿಗಳು ಪೂಜಾಚಿತ್ರಗಳಾದುದರಿಂದ ಚಿತ್ರಕಾರರ ಹೆಸರು ಇವುಗಳಲ್ಲಿ ಸಾಮಾನ್ಯವಾಗಿ ಕಂಡುಬರುವುದಿಲ್ಲ.

ಭಾರತ ಪಾಶ್ಚಿಮಾತ್ಯರ ಆಳ್ವಿಕೆಗೆ ವಶವಾದ ಮೇಲೆ ಭಾರತೀಯ ಪದ್ಧತಿಯ ಚಿತ್ರಕಲೆಗೆ ಅಪಾರ ಪೆಟ್ಟುಬಿದ್ದಿತು. ಅವರ ದೃಷ್ಟಿಕೋನದ ನೆಳಲಲ್ಲಿ ಮುಂಬಯಿ, ಕಲ್ಕತ್ತಾ, ಮದರಾಸು, ಮೈಸೂರು ಮುಂತಾದ ಕಡೆ ಕಲಾ ಶಾಲೆಗಳು ತಲೆ ಎತ್ತಿಕೊಂಡವು. ಭಾರತೀಯ ಹಾಗೂ ಪಾಶ್ಚಾತ್ಯ ಮಿಶ್ರ ಕಲಾ ಸಂಪ್ರದಾಯದ ಚಿತ್ರ

ಕಾರರೂ ಬೆಳೆದುಬಂದರು. ಮುಂಬಯಿಯ ಜೆ. ಜೆ. ಸ್ಕೂಲ್ ಆಫ್ ಆರ್ಟ್ಸ್ ಕಲಾ ಶಾಲೆ ಸಾವಿರಾರು ಚಿತ್ರಕಾರರನ್ನು ಬೆಳಕಿಗೆ ತಂದಿತು. ಇದರಲ್ಲಿ ಕನ್ನಡಿಗರದು ಸಿಂಹ ಪಾಲು. ಪಾಶ್ಚಾತ್ಯ ಚಿತ್ರಕಲೆಯ ಪ್ರಭಾವ ಕರ್ನಾಟಕದಲ್ಲೂ ಕಾಳಿಸಿಕೊಳ್ಳಲಾರಂಭಿಸಿತು.

10-20 ನೆಯ ಶತಮಾನದಲ್ಲಿ ಪಾಶ್ಚಾತ್ಯ ದೇಶಗಳಲ್ಲಿ ಚಿತ್ರಕಲಾರಂಗದಲ್ಲಿ ಬೆಳೆದ ಅನೇಕ ಸಂಪ್ರದಾಯಗಳನ್ನು ಅನುಸರಿಸುವ ಅವೇ ತಂತ್ರಗಳನ್ನು ಉಪಯೋಗಿಸಿ ದೇಶೀ ವಸ್ತುಗಳನ್ನು ಪ್ರತಿಪಾದಿಸುವ ಪಂಥಗಳೂ ಕರ್ನಾಟಕದಲ್ಲಿ ಕಾಣಿಸಿಕೊಂಡಿವೆ. ಕರ್ನಾಟಕದ ಚಿತ್ರಕಲಾ ಇತಿಹಾಸದಲ್ಲಿ ಈ ಆಧುನಿಕ ಯುವ ಸಂಕೀರ್ಣತೆಯ ಕಾಲ. ಪಾಶ್ಚಾತ್ಯದಲ್ಲಿ ಬೆಳೆದ ವೈವಿಧ್ಯಮಯದ ಚಿತ್ರರಚನಾ ತಂತ್ರಗಳು, ತತ್ಸಂಬಧದ ಅನೇಕ ರೀತಿಯ ಹಿನ್ನೆಲೆಯ ವಸ್ತುಗಳು ಮತ್ತು ಕೃತಕ ವರ್ಣಗಳು ಇವುಗಳನ್ನು ಬಳಸುವುದು ಈ ಕಾಲದಲ್ಲಿ ಕಂಡುಬಂದ ಮುಖ್ಯ ಬದಲಾವಣೆ. ಪ್ರಾಚೀನ ಚಿತ್ರಕಲೆ ಹೆಚ್ಚಿನ ಮಟ್ಟಿಗೆ ಧಾರ್ಮಿಕ ವಸ್ತುಗಳನ್ನು ಅಭಿವ್ಯಕ್ತಗೊಳಿಸುತ್ತಿದ್ದರೆ ಈ ಕಾಲದಲ್ಲಿ ಅನೇಕ ಲೌಕಿಕ ಸನ್ನಿವೇಶಗಳನ್ನು ಮತ್ತು ಭಾವನೆಗಳನ್ನು ರೂಪಿಸುವುದು ಮತ್ತೊಂದು ಪ್ರಮುಖ ವ್ಯತ್ಯಾಸ. 18ನೇ ಶತಮಾನದಿಂದ ಸುಮಾರು ನಾಲ್ಕು ಶತಮಾನ ಕಾಲ ಚಿತ್ರಕಲೆಯ ಪ್ರಗತಿ ನಿಂತುಹೋಯಿತು. 1844ರಲ್ಲಿ ಮೇಜರ್‌ಗಿಲ್, 1875ರಲ್ಲಿ ಗ್ರಿಫಿತ್ಸ್, 1906ರಲ್ಲಿ ಲೇಡಿ ಹೆರಿಂಗ್ಯಮ್ ಅವರು ಚಿತ್ರಕಾರರ ತಂಡದೊಂದಿಗೆ ಅಜಂತಾಗೆ ಹೋಗಿ ಕೃತಿಗಳ ನಕಲು ಮಾಡುವುದರಿಂದ ಮತ್ತೆ ಕರ್ನಾಟಕ ಚಿತ್ರಕಲೆ ತಲೆ ಎತ್ತುವಂತಾಯಿತು. ನಿವೇದಿತ ಭಾರತೀಯ ಚಿತ್ರಕಲೆಗೆ ಹೊಸ ದೃಷ್ಟಿಕೋನ ಕೊಟ್ಟವರಲ್ಲಿ ಪ್ರಥಮರು. 1896ರಲ್ಲಿ ಕಲ್ಕತ್ತೆಯ ಕಲಾಶಾಲೆ ಪ್ರಾರಂಭವಾಗಿ ಇ. ಬಿ. ಹ್ಯಾವೆಲರು ನಮ್ಮ ಚಿತ್ರಗಾರರ ಅನುಕರಣ ಮನೋವೃತ್ತಿಯನ್ನು ಖಂಡಿಸಿ ಇವರಿಗೆ ನಮ್ಮ ಪರಂಪರೆಗೆ ದರ್ಶನ ಮಾಡಿಕೊಟ್ಟರು. ಅವರ ನೆರವಿನಿಂದ ಅವನೀಂದ್ರನಾಥ ಠಾಕೂರರು ನೂತನ ಸಂಪ್ರದಾಯವನ್ನು ಪ್ರಾರಂಭಿಸಿದರು. ಇವರ ಶಿಷ್ಯ ನಂದಲಾಲ ಬಸು ಮುಂತಾದವರು ನಮ್ಮ ಚಿತ್ರಕಲೆಗೆ ನಾವೀನ್ಯತೆಯನ್ನು ಬೆಳೆಸಿ ಕೊಟ್ಟರು. ನಂತರ ಜನಪದ ಕಲೆಯನ್ನು ಮೈಗೂಡಿಸಿಕೊಂಡು ಬೆಳೆಯಿತು. ಈ ಅನುಕರಣಗಳ ಜೊತೆಗೆ ಬಂಗಾಳದಲ್ಲಿ ಅವನೀಂದ್ರನಾಥ ಠಾಕೂರ ಮೊದಲಾದವರಿಂದ ನಿರ್ಮಿತವಾದ ದೇಶೀಪ್ರತಿಕ್ರಿಯೆಯ ಧಾಟಿಯು ಕರ್ನಾಟಕದಲ್ಲೂ ಕಾಣಿಸಿಕೊಂಡಿತು. ಈ ವಿವಿಧ ಧಾಟಿಗಳಲ್ಲಿ ಚಿತ್ರರಚನೆ ಮಾಡಿರುವ ಮತ್ತು ಮಾಡುತ್ತಿರುವ ಕಲಾವಿದ ಕಾರರು ಕರ್ನಾಟಕದ ಕಲಾಸಂಪತ್ತನ್ನು ಸುಪುಷ್ಟಗೊಳಿಸಿದ್ದಾರೆ. ದಿ॥ ಕೆ. ವೆಂಕಟಪ್ಪ ನವರು ಕರ್ನಾಟಕದಲ್ಲಿ ಏಕೆ ಭಾರತದಲ್ಲಿ ಅಗ್ರಗಣ್ಯಸ್ಥಾನ ಪಡೆದವರು. ಕೆ. ಕೆ. ಹೆಬ್ಬಾರರು ಕ್ರಮಬದ್ಧವಾದ ಸಂಪ್ರದಾಯ ಕಲೆಯಲ್ಲಿ ಅಭ್ಯಾಸ ಮಾಡಿದವರಾದರೂ ಕ್ರಮೇಣ ತಮ್ಮ ಕಲೆಯಲ್ಲಿ ತಮ್ಮದೇ ಆದ ವೈಶಿಷ್ಟ್ಯವನ್ನು ಮೆರೆಯುತ್ತಾ ಬಂದಿದ್ದು

ಹೊಸ ಸಂಪ್ರದಾಯದ ಪ್ರಮುಖರಲ್ಲಿ ಒಬ್ಬರೆಂದು ಖ್ಯಾತಿ ಗಳಿಸಿದ್ದಾರೆ. ಭಾರತೀಯ ವಸ್ತುನಿಷ್ಠೆ ಇವರ ಕೃತಿಗಳಲ್ಲಿ ಎದ್ದು ತೋರುತ್ತದೆ.

ನಾಲ್ವಡಿ ಕೃಷ್ಣರಾಜ ಒಡೆಯರ ಪ್ರೋತ್ಸಾಹದಿಂದ ಚಿತ್ರಕಲೆ ಮತ್ತಷ್ಟು ಬೆಳೆಯಿತು. ಇವರ ಕಾಲದಲ್ಲಿ ಕೇರಳದ ಪ್ರಖ್ಯಾತ ಕಲಾವಿದ ರಾಜಾ ರವಿವರ್ಮರು ಮೈಸೂರು ಅರಮನೆಯ ಆಶ್ರಯದಲ್ಲಿದ್ದು ಕೆಲವು ತೈಲಚಿತ್ರಗಳನ್ನು ರಚಿಸಿಕೊಟ್ಟಿದ್ದಾರೆ. ಇವು ಜಗನ್ಮೋಹನ ಚಿತ್ರಶಾಲೆ (ಈಗ ಜಯಚಾಮರಾಜೇಂದ್ರ ಚಿತ್ರಶಾಲೆ) ಯಲ್ಲಿವೆ. ಈ ಎಲ್ಲ ಕೃತಿಗಳೂ ಶುದ್ಧ ಪಾಶ್ಚಾತ್ಯ ತಂತ್ರದಲ್ಲಿವೆ. ವೆಂಕಟಪ್ಪ, ಕೇಶವಯ್ಯ, ಅಜೀಜ್, ಎಸ್. ನಂಜುಂಡಸ್ವಾಮಿ, ಸಿದ್ಧಲಿಂಗಸ್ವಾಮಿ ಮೊದಲಾದವರಿಂದ ಅನೇಕ ಚಿತ್ರಗಳನ್ನು ನಾಲ್ವಡಿಯವರು ಬರೆಸಿ ಪ್ರೋತ್ಸಾಹಿಸಿದರು. ಅರಮನೆಯ ಕಲ್ಯಾಣಮಂಟಪದಲ್ಲಿರುವ ರಾಜರ ದಸರಾ ಮೆರವಣಿಗೆಯ ಬೃಹದಾಕಾರದ ತೈಲವರ್ಣ ಚಿತ್ರಗಳನ್ನು ಪಾಶ್ಚಿಮಾತ್ಯ ಶೈಲಿಯಲ್ಲಿ ನಂಜುಂಡಸ್ವಾಮಿ, ನಾಗರಾಜು, ಸುಬ್ರಮಣ್ಯ ರಾಜು, ಎಸ್. ಆರ್. ಅಯ್ಯಂಗಾರ್ ಮತ್ತು ಶಂಕರರಾಜು ಮುಂತಾದ ಕಲಾವಿದರಿಂದ ರಚಿಸಲು ಪ್ರೋತ್ಸಾಹವಿತ್ತರು. ಇವರ ಕಾಲದಲ್ಲಿ ಮೈಸೂರು ದಸರಾ ಕಲಾ ಪ್ರದರ್ಶನಕ್ಕೆ ಬರುವ ಕಲಾಕೃತಿಗಳಲ್ಲಿ ಉತ್ತಮವೆಂದು ತೋರುವ ಚಿತ್ರಗಳನ್ನು ಕೊಂಡು ಜಗನ್ಮೋಹನ ಚಿತ್ರಶಾಲೆಗೆ ಸೇರಿಸುತ್ತಾ ಬಂದರು. ಈ ಪ್ರಭುಗಳ ಕಾಲದಲ್ಲಿ ಕನ್ನಡ ನಾಡಿನ ಕಲಾ ಪ್ರೋತ್ಸಾಹದ ಸಲುವಾಗಿ ಮೈಸೂರಿನಲ್ಲಿ 1913ರಲ್ಲಿ ಶ್ರೀಚಾಮರಾಜ ಒಡೆಯರ ಸವಿನೆನಪಿನಲ್ಲಿ ಒಂದು ಕಲಾ ಶಾಲೆಯನ್ನು ತೆರೆಯಲಾಯಿತು. ಈ ಕಲಾಶಾಲೆಯ ಕಟ್ಟಡದ ಶಂಕುಸ್ಥಾಪನೆಯು ಜಾರ್ಜ್ ಚಕ್ರವರ್ತಿಗಳು ನೆರವೇರಿಸಿದರು. ಈ ಕಲಾಶಾಲೆ ಕೆ. ವೆಂಕಟಪ್ಪ, ಕೆ. ಕೆ. ಹೆಬ್ಬಾರ್ ಹೀಗೆ ಅನೇಕಾನೇಕ ವರ್ಣಶಿಲ್ಪಿಗಳನ್ನು ನೀಡಿದೆ. ಕನ್ನಡನಾಡಿನ ಅನೇಕ ಖಾಸಗಿ ಕಲಾಶಾಲೆಗಳಲ್ಲಿ ಮತ್ತು ಸರ್ಕಾರಿ ವಿದ್ಯಾಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಕಲಾಶಿಕ್ಷಣ ನೀಡಲಾಗುತ್ತಿದೆ.

ಪಾಶ್ಚಾತ್ಯ ಸಂಪ್ರದಾಯ ಸಂಪರ್ಕದಿಂದ ಹೊಸ ಹೊಸ ಪ್ರಯೋಗಗಳು ನಡೆಯುತ್ತಿದೆ. ಆದರೆ ಕರ್ನಾಟಕದ ಶೈಲಿಯ ಪ್ರಗತಿ ಮಾತ್ರ ನಿಂತಂತೆ ಕಾಣುತ್ತಿರುವುದು ಶೋಚನೀಯ ಸಂಗತಿ. ಇತ್ತ ಕಲಾವಿದರು ಸಾರ್ವಜನಿಕರು ಹಾಗೂ ಸರ್ಕಾರ ಗಮನ ನೀಡುವುದು ಅಗತ್ಯವಿದೆ.

ನಮಗಿಂದು ಬೇಕಾದ ಸಾಹಿತ್ಯ

ಶಂ. ಗು. ಬಿರಾದಾರ
ನಿವೃತ್ತ ಶಿಕ್ಷಕರು, ಬಿಜಾಪುರ

ಧರ್ಮ ಮತ ತತ್ವಗಳ ಪ್ರಚಾರಕ್ಕಾಗಿ, ಸಂಸ್ಕೃತಿ-ಸಂಸ್ಕಾರಗಳ ಪ್ರಸಾರಕ್ಕಾಗಿ ಮಹಾವ್ಯಕ್ತಿಗಳ ಜೀವನ ದರ್ಶನಕ್ಕಾಗಿ, ವಿಜ್ಞಾನ-ಕಲೆಗಳ ಪ್ರದರ್ಶನಕ್ಕಾಗಿ, ಮನೋಲ್ಲಾಸಕ್ಕಾಗಿ ಹಾಗು ಬೌದ್ಧಿಕ ಸಂಘರ್ಷಕ್ಕಾಗಿ ಸಾಹಿತ್ಯ ಕಾರ್ಯ ನಿರಂತರ ನಡದೇ ಇದೆ. ಇದೂ ಒಂದು ಆರಾಧನೆ ಎನ್ನುವವರಿದ್ದಾರೆ. ಆರಣ್ಯರೋದನೆ ಎನ್ನುವವರೂ ಸಿಕ್ಕುತ್ತಾರೆ. ಇದು ಅವರವರ ದೃಷ್ಟಿಕೋನ. ಈ ಬಗೆಗೆ ಚರ್ಚಿಸುವುದರಲ್ಲಿ ಅರ್ಥವಿಲ್ಲ. ಸಾಹಿತ್ಯ ಕಾರ್ಯವೂ ಒಂದು ತಪಸ್ಸು ನಿರಂತರ ಸಾಧನೆಯಿಂದ ಸಿದ್ಧಿಯ ಶ್ರೀಗಿರಿಯನ್ನೇರಲು ಸಾಧ್ಯ. ಚಿರಂತನ ಚಿಂತನೆಯಿಂದ ಪರಿಪಕ್ವಗೊಂಡ ಹೃದಯದ ಹೂನುಡಿಗಳೇ ಸಾಹಿತ್ಯ ಸೌಗಂಧವನ್ನು ಪಸರಿಸುತ್ತವೆ. ಆ ಸುವಾಸನೆಯ ಸುಖವನ್ನು ಅನುಭವಿಸಬಲ್ಲ ರಸಿಕರೇ ಧನ್ಯರು.

ಕನ್ನಡ ಸಂಸ್ಕೃತಿಗೆ-ಕಲೆಗೆ-ಸಾಹಿತ್ಯಕ್ಕೆ ಪುರಾತನ ಇತಿಹಾಸವಿದೆ. ಭವ್ಯ ಪರಂಪರೆಯಿದೆ. ಈ ಅಗ್ಗಳಿಕೆಯೊಂದನ್ನೇ ನೆಚ್ಚಿ ಹೊಗಳುವ ಹಂಬಲವೂ ಅಧಿಕವಾಗಿದೆ. ನಮ್ಮ ಪುರಾತನ ಕೃತಿಗಳ ಬಿಗುವು, ವರ್ಣನಾ ವೈಖರಿ, ಪ್ರೌಢಿಮೆ, ಛಂದೋಗತಿ, ಕಥಾದೃಷ್ಟಿ, ಸೌಂದರ್ಯದೃಷ್ಟಿ, ರಸದೃಷ್ಟಿ ಇಂದಿನ ಕವಿತೆಗಳಲ್ಲಿದೆಯೇ? ಎಂದು ಜಂಭ ಕೊಚ್ಚಿಕೊಳ್ಳುವವರಿಗೇನು ಕಡಿಮೆಯಿಲ್ಲ. ಈ ಅಗ್ಗಳಿಕೆಯೊಂದಿಗೆ ಕಾವ್ಯಗಳ ಗೊತ್ತುಗುರಿ, ಪ್ರಯೋಜನ, ಗುಣ ದೋಷಗಳನ್ನು ಚೆನ್ನಾಗಿ ಅರಿತುಕೊಳ್ಳುವವರೆಷ್ಟು ಜನ ? ಸಾಹಿತ್ಯ ಯಾರಿಗಾಗಿ ? ಏತಕ್ಕಾಗಿ ? ಎಂಬುದನ್ನು ಅರಿತುಕೊಂಡಾಗ ಮಾತ್ರ ನಮಗೆ ಅವುಗಳ ಬೆಲೆ ಕಟ್ಟಲು ಸಾಧ್ಯವಾಗುವದು. ಕವಿ ತನ್ನ ಪ್ರೌಢಿಮೆಯನ್ನು ಮೆರಿಸುವುದಕ್ಕಾಗಿಯೆ? ದೊರೆಗಳನ್ನು ಇಲ್ಲವೆ ತನಗೆ ಪ್ರಿಯರಾದವರನ್ನು ಒಲಿಸುವುದಕ್ಕಾಗಿಯೆ ? ಸ್ವಸಂತೋಷಕ್ಕಾಗಿಯೇ ? ಇಲ್ಲವೆ ರೂಢಿಗತವಾದ ಧರ್ಮ ದೇವರುಗಳಲ್ಲಿ ನಂಬುಗೆಯನ್ನು ವೃದ್ಧಿಪಡಿಸುವುದಕ್ಕಾಗಿಯೆ ? ಇಂಥ ಗುರಿಗಳನ್ನಿರಿಸಿಕೊಂಡು ರಚಿಸಿದ ಸಾಹಿತ್ಯ ಅದು ಎಷ್ಟೇ ಸತ್ವಶಾಲಿಯಾಗಿದ್ದರೂ ಸರ್ವರ ಮನ್ನಣೆಯನ್ನು ಪಡೆಯದು. ಸಾಹಿತ್ಯ ಜನೋಪಯೋಗಿಯಾಗಬೇಕು. ಜನರ ಹೃದಯವನ್ನು ತಟ್ಟಬೇಕು—ಶ್ರೀಸಾಮಾನ್ಯನ ಬದುಕಿಗೆ ಕೈಗನ್ನಡಿಯಾಗಬೇಕು. ಸಮಾಜದ ರೋಗ ರುಜಿನಗಳನ್ನೂ, ಅಂಧ ಶ್ರದ್ಧೆಗಳನ್ನೂ ಹಾಗೂ ಮೂಢನಂಬಿಕೆಗಳನ್ನು ತೊಡೆದು ಹಾಕಲು ಪ್ರೇರೇಪಿಸಬೇಕು. ಅನ್ಯಾಯ, ಅಸತ್ಯ, ಮೋಸ, ವಂಚನೆ,

ಸ್ವಾರ್ಥ ಮೊದಲಾದ ಬದುಕಿನ ವಿಷಕ್ರಿಮಿಗಳನ್ನು ಸಮೂಲ ನಾಶಮಾಡುವ ಶಕ್ತಿಯನ್ನು ಪಡೆದಿರಬೇಕು. ಸಮತೆ ಸಮಾನತೆಗಳನ್ನು ಎತ್ತಿ ಹಿಡಿಯುವ, ದುಡಿಮೆ ಗೌರವವನ್ನೂ ಹೆಚ್ಚಿಸುವ, ಮಾನವೀಯ ಗುಣಗಳನ್ನು ಪ್ರಚೋದಿಸುವ ಸಾಹಿತ್ಯ ಬೆಳೆದು ಬರಬೇಕು. ಇದುವೆ ಮನುಕುಲದ ಪಗ್ರತಿಗೆ ನಾಂದಿ.

ಸಾಹಿತ್ಯ ಜೀವನದ ಪ್ರತಿಬಿಂಬ ಎಂಬ ಮಾತು ಸತ್ಯ. ಅದು ಬದುಕಿನ ಗತಿ ಬಿಂಬವೂ ಹೌದು. ಕೆಲವರ ಮತಿಬಿಂಬ ಎನ್ನಿಸಿಕೊಳ್ಳುವುದೂ ಉಂಟು. ಏನೇ ಆದರೂ ಸಾಹಿತ್ಯ ಅಂದಂದಿನ ಬದುಕಿನ ಮೇಲೆ ಬೆಳಕು ಬೀರಬಲ್ಲದು. ಜೀವನಾನುಭವವನ್ನು ಸೌಂದರ್ಯದ ಸುಡಿಗಟ್ಟುಗಳಲ್ಲಿ ಹಿಡಿದಿಡಬಲ್ಲ ಪ್ರತಿಭಾವಂತ ಸಾಹಿತಿಯೆನ್ನಿಸಿಕೊಳ್ಳುತ್ತಾನೆ. ಸಾಹಿತಿ ಕೇವಲ ಹೊರ ಬದುಕಿನ ಮೇಲೆ ಬೆಳಕು ಚೆಲ್ಲುವವನಲ್ಲ. ಜೀವನದ ಆಳಕ್ಕೂ ಇಳಿದು ಅಣಿಮುತ್ತುಗಳನ್ನು ಎತ್ತಿ ತರುತ್ತಾನೆ. ಅಂತಹ ಚಿಂತನಶೀಲ ಕೃತಿಗಳು ಚಿರಂತನ ಉಳಿಯುತ್ತವೆ.

ಪುರಾತನ ಸಾಹಿತ್ಯ ಪಾಂಡಿತ್ಯ ಪೂರ್ಣವಾದುದು. ನವರಸಗಳಿಂದೊಡಗೂಡಿದ ಮಹಾಕಾವ್ಯಗಳು ಹೆಚ್ಚಾಗಿ ದೇವರು ದೊರೆಗಳ ಪ್ರೀತಿಗಾಗಿ ಧರ್ಮ ತತ್ವಗಳ ಪ್ರಚಾರಕ್ಕಾಗಿ ರಚನೆಯಾದವುಗಳೆಂದು ಕಂಡಬಂದರೂ ಆ ಕಾಲದ ಜನರ ಆಶೋತ್ತರಗಳನ್ನು ಪ್ರತಿಬಿಂಬಿಸುತ್ತವೆ. ಸತ್ವಯುತವಾದ ಈ ಸಾಹಿತ್ಯ ಚಿರಂತನ ಉಳಿಯಬಲ್ಲದು. ಈ ಕಾಲದ ಸಾಹಿತ್ಯವನ್ನು ಜೈನ ಸಾಹಿತ್ಯ, ವೀರಶೈವ ಸಾಹಿತ್ಯ, ಹಾಗು ಬ್ರಾಹ್ಮಣ ಸಾಹಿತ್ಯವೆಂದು ಧಾರ್ಮಿಕವಾಗಿ ವಿಂಗಡಿಸಲು ಸಾಧ್ಯವೆಂದು ಹೇಳಬಹುದಾದರೂ ಈ ಬಗೆಯ ಮತ ತತ್ವಗಳ ದೃಷ್ಟಿಯಿಂದ ನೋಡದೆ ಕನ್ನಡ ಸಾಹಿತ್ಯವೆಂಬ ಸಮಗ್ರ ದೃಷ್ಟಿಯಿರಿಸಿಕೊಂಡು ಅಭ್ಯಸಿಸಬೇಕು. ಹಾಗಾದಾಗ ಆ ಸಾಹಿತ್ಯದ ತತ್ವವನ್ನು ಗ್ರಹಿಸಲು ಸಾಧ್ಯವಾಗುವದು. ಇತ್ತೀಚಿನ ಕೃತಿಗಳು ಅಂಥ ಭಾವನೆಗಳಿಗೆ ಎಡೆಗೊಡದಿದ್ದರೂ ವರ್ಗೀಕರಣಕ್ಕೆ ಅವಕಾಶವನ್ನುಂಟುಮಾಡುತ್ತಿವೆ. ಇದು ನವೋದಯ ಸಾಹಿತ್ಯ, ಇದು ನವ್ಯ, ಪ್ರಗತಿಪಂಥ, ದಲಿತಪಂಥ, ಬಂಡಾಯ ದಿಗಂಬರ ಪಂಥ ಹೀಗೆ ಪಂಥಾನು ಪಂಥಗಳಾಗಿ ವಿಂಗಡಿಸಬಹುದು. ಪಂಥ ಪಂಥ ಬೇರೆಯಾದರೂ ಗುರಿಮಾತ್ರ ಒಂದೇಯಾಗಿರಬೇಕು. ಮಾನವೀಯ ಭಾವನೆಗಳ ವಿಕಾಸ, ಬದುಕಿನ ಸರ್ವತೋಮುಖ ಅಭಿವೃದ್ಧಿ ಈ ದಾರಿಯಲ್ಲಿ ಎದುರಾಗುವ ಪಾಶವೀಶಕ್ತಿಗಳ ದಮನ, ಅನಕ್ಷರತೆ, ಬಡತನ, ಶೋಷಣೆಗಳ ನಿವಾರಣೆ, ನ್ಯಾಯಕ್ಕಾಗಿ, ನೀತಿಗಾಗಿ ಹೋರಾಡುವ ಛಲ ಈ ಬಗೆಯ ಆತ್ಮ ಬಲವನ್ನು ತರಬಲ್ಲ ಸಾಹಿತ್ಯ ಮೂಡಿ ಬರಬೇಕು.

ಸಾಹಿತ್ಯ ಪ್ರಗತಿ ಪರವಾದುದಾಗಿರಬೇಕು ಎಂಬ ಮಾತನ್ನು ಒಪ್ಪಿಕೊಳ್ಳಬಹುದಾದರೂ ಪ್ರಗತಿ ಪರವಾದುದಾವುದು ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಪ್ರಗತಿಯ ವ್ಯಾಖ್ಯೆ ಒಬ್ಬೊಬ್ಬರದು ಒಂದೊಂದು ತೆರನಾಗಬಹುದು. ಧರ್ಮಮಾರ್ಗ

ದಲ್ಲಿ ನಡೆದು ದೇವರಿಗೆ ಪ್ರಿಯರಾಗುವದು ಕೆಲವರ ದೃಷ್ಟಿಯಲ್ಲಿ ಪ್ರಗತಿ ಎನಿಸಿದರೆ ಸಕಲ ಜೀವಗಳಿಗೆ ಜೀವನ ಬಯಸಿ ಸಾಮಾಜಿಕ ಜೀವನವನ್ನು ಮೇಲೆತ್ತುವದು ಇನ್ನೊಬ್ಬರ ದೃಷ್ಟಿಯಲ್ಲಿ ಪ್ರಗತಿಯೆನ್ನಿಸಬಲ್ಲದು. ನೂರಾರು ಜನರ ತಲೆಗಳುರುಳಿದರೂ ಚಿಂತೆಯಿಲ್ಲ ಕೋಟ್ಯಾನು ಕೋಟಿ ಜನರ ಕಲ್ಯಾಣವೇ ಮುಖ್ಯವೆಂದು ಮಾರ್ಗ ಕ್ರಮಿಸುವವರದೂ ಪ್ರಗತಿಪರ ವಿಚಾರವೇ. ಪ್ರಗತಿಯ ವಿಧಾನ ಬೇರೆ ಬೇರೆಯಾದರೂ ಗುರಿಮಾತ್ರ ಮಾನವ ಹಿತ ಸಾಧನೆಯೆ. ಆದರೆ ಎಲ್ಲೆಡೆಗೂ ಅದೇ ಶೋಷಕರು, ಡಂಭಾಚಾರಿಗಳು, ಸ್ವಾರ್ಥಿಗಳು, ಪರೋಪದೇಶ ಪಂಡಿತರು, ಧರ್ಮಾಂಧರು, ಕುಹಕ ಚತುರರು, ಸ್ವಜನ ಪಕ್ಷಪಾತಿಗಳು, ನಯವಂಚಕರು ತುಂಬಿಕೊಂಡು ತಮ್ಮದೇ ಆದ ಪ್ರಗತಿಯನ್ನು ಸಾಧಿಸುತ್ತಿದ್ದಾರೆ. ನಿತ್ಯ ಲಂಚ ವಂಚನೆಗಳಿಂದ ಅಪರಿಮಿತ ಹಣಗಳಿಸಿ ಅದರಲ್ಲಿ ಅಲ್ಪಾಂಶ ಹಣವನ್ನು ತಿರುಪತಿ ತಿಮ್ಮಪ್ಪನಿಗೋ, ಮಂತ್ರಾಲಯದ ಮಠಕ್ಕೋ, ಜಗದ್ಗುರುಗಳವರ ಸನ್ನಿಧಿಗೋ ಅರ್ಪಿಸಿ ಹೆಸರುವಾಸಿಯಾಗ ಬಯಸುವವರೆಷ್ಟು ಜನರಿಲ್ಲ ? ರಾಜಕೀಯದಲ್ಲಿ ಇಂದು ಈ ಪಕ್ಷದಲ್ಲಿದ್ದವನು ನಾಳೆ ಆ ಪಕ್ಷಕ್ಕೆ ಹಾರುವುದು ಯಾವ ಕಾರಣಕ್ಕಾಗಿ ? ಪವಾಡಗಳ ಹೆಸರಿನಲ್ಲಿ ಪ್ರತ್ಯಕ್ಷ ದೇವರುಗಳಾಗಿ ಭಾವುಕರನ್ನು ನಿತ್ಯ ಸುಲಿಯುವುದು ಯಾರ ಕಲ್ಯಾಣಕ್ಕಾಗಿ ? ಶ್ರಮಜೀವಿಗಳ ರಕ್ತ ಹೀರಿ ಭವ್ಯ ಬಂಗ್ಲೆಗಳಲ್ಲಿ ಸುಖಿಸುವ ಸಿರಿವಂತರ ಅಟ್ಟಹಾಸ ಯಾರ ಹಿತಕ್ಕಾಗಿ ? ಯಾರ ಕಾಯಕವೋ, ಯಾರಿಗೆ ಕೈಲಾಸವೋ ! ನೂರಾರು ಇರುವೆಗಳು ಸೇರಿ ಕಟ್ಟಿದ ಹುತ್ತದಲ್ಲಿ ಹಾವು ಸೇರುವಂತೆ ನಮ್ಮ ಜೀವನದ ಗತಿಯಾಗಿದೆ. ಇಂಥ ಪರಿಸರದಲ್ಲಿ ಪ್ರಗತಿಗೆ ದಾರಿಯಾವದು ? ಪ್ರಗತಿಯ ಬಾವುಟದಡಿಯಲ್ಲಿಯೇ ಅಧೋಗತಿಯ ಅಟ್ಟಹಾಸ ನಡದೇಇದೆ. ಈ ಬಗೆಯ ಅಣ ಕವಾಟದಿಂದ ಮುಕ್ತಿಯೆಂತು ? ಪ್ರಗತಿ ಪರರು ಇದನ್ನು ಯೋಚಿಸಬೇಕಾಗಿದೆ. ನಮ್ಮದು ಬರೀ ಕೂಗಾಗಬಾರದು. ಆಕ್ರೋಶವಾಗಬಾರದು. ಕೃತಿಯಲ್ಲಿಳಿಯಬೇಕು. ಮುಖಯಾವುದು ? ಮುಖವಾಡಯಾವುದೆಂಬುದನ್ನು ತೋರಿಸಿಕೊಡಬೇಕು ನಮ್ಮ ಬದುಕಿನಲ್ಲಿ ನಿತ್ಯ ಸತ್ಯಗಳು, ಜೀವನ ವೈತ್ಯಾಸಗಳು ಸಾಕಷ್ಟಿವೆ. ಅಂದಂದಿನ ಸಮಸ್ಯೆಗಳಿಗೇ ನಾವು ಸೀಮಿತರಾಗದೆ ಚಿರಕಾಲ ಸತ್ಯವನ್ನರಿತು ಅವರ ಮೇಲೆ ಬೆಳಕು ಚಲ್ಲಬೇಕು.

ಜನ ನಮ್ಮ ಸಾಹಿತ್ಯವನ್ನು ಮೆಚ್ಚಬೇಕಾದರೆ, ನಮ್ಮೊಡನೆ ಧ್ವನಿಗೂಡಿಸಬೇಕಾದರೆ ನಾವು ಅವರ ಬದುಕಿಗೆ ತೀರ ಪತ್ತಿರವಾಗಬೇಕು, ಪತ್ತಿರ ಹೋಗಬೇಕು. ಜನ ಮನಕ್ಕೆ ಮುಟ್ಟುವ ಭಾಷೆಯಲ್ಲಿ ಶೈಲಿಯಲ್ಲಿ ಸಾಹಿತ್ಯ ರಚಿಸಬೇಕು. ಅವರ ಕುಂದು ಕೊರತೆಗಳನ್ನು ಕಷ್ಟ ಕಾರ್ಪಣ್ಯಗಳನ್ನು ಲೇಖನಿಯ ಮುಖಾಂತರ ಬಿಂಬಿಸಿ ಪರಿಹಾರಕ್ಕೆ ದಾರಿ ಮಾಡಿಕೊಡಬೇಕು. ಸಾಹಿತಿ ಕೇವಲ ಜನರಿಗೆ ಉಪದೇಶ ನೀಡುವು

ದೊಂದೇ ತನ್ನ ಕರ್ತವ್ಯವೆಂದು ಭಾವಿಸಲಾಗದು. ಆ ರೀತಿ ತನ್ನ ನಡೆಯನ್ನು ರೂಪಿಸಿ ಕೊಳ್ಳಬೇಕು.

ನಮ್ಮ ಪುರಾತನ ಸಾಹಿತ್ಯದಲ್ಲಿ, ಸಂಪ್ರದಾಯದಲ್ಲಿ, ಧರ್ಮದಲ್ಲಿ ಇರುವ ಒಳ್ಳೆಯ ಅಂಶಗಳನ್ನು ಎತ್ತಿ ಹಿಡಿಯೋಣ. ಕಂದಾಚಾರ, ಕುರುಡು ಭಕ್ತಿ, ಮೂಢ ನಂಬಿಕೆ, ಗೊಡ್ಡು ಸಂಪ್ರದಾಯ ಮೇಲು ಕೀಳು ಮೊದಲಾದ ಅಸಗತ್ಯವಾದವುಗಳನ್ನು ತೊಡೆದು ಹಾಕೋಣ. ನಾವು ಮಾನವತಾ ವಾದಿಗಳಾಗಿ ಮಾನವೀಯತೆಗೆ ಪೋಷಕ ವಾಗುವ ವೈಜ್ಞಾನಿಕ ಮನೋ ಧರ್ಮವುಳ್ಳ ಸಾಹಿತ್ಯವನ್ನು ವೃದ್ಧಿಪಡಿಸೋಣ.

ಸಾಹಿತ್ಯ ನಿಂತ ನೀರಲ್ಲ ಸತತ ಹರಿವ ಹೆದ್ದೊರೆ. ಕಾಲಕ್ಕೆ ತಕ್ಕಂತೆ ಸಾಹಿತ್ಯ ನಿರ್ಮಾಣವಾಗಬೇಕೆಂಬುದನ್ನು ಒಪ್ಪಬಹುದಾದರೂ ಅವನತಿಯತ್ತ ಹೆಜ್ಜೆ ಹಾಕುತ್ತಿರುವ ಜನ ಜೀವನಕ್ಕೆ ಉದಾತ್ತ ಮಾರ್ಗದರ್ಶನ ಮಾಡಬಲ್ಲ ಶಕ್ತಿ ಪಡೆದಿರಬೇಕು. ಕಲುಷಿತ ವಾತಾವರಣವನ್ನೇ ಉಸಿರಾಡಿಸದೆ ಹೊಸ ಅಲೆಗಳನ್ನು ಸೃಷ್ಟಿಸಬೇಕು. ಮಲಿತು ನಿಂತುದನ್ನು ಹೊಡೆದೋಡಿಸಬೇಕು. ಈ ಹೊಸತನದ ಹಂಬಲದಲ್ಲಿ ಹಳೆಯದೆಲ್ಲವನ್ನೂ ಕೊಚ್ಚಿ ಹಾಕುವ ಹುಚ್ಚುತನ ತರವಲ್ಲ. ಸಂಪ್ರದಾಯದಲ್ಲಿ ನಿರ್ಮಲವಾದುದನ್ನು ಉಳಿಸಿ ನಿರುಪಯುಕ್ತವಾದುದನ್ನು ಅಳಿಸಿಹಾಕುವ, ಬದುಕಿಗೆ ಪೋಷಕವಾದುದನ್ನು ಪೋಷಿಸಿ, ಶೋಷಣೆಗೆಡೆಮಾಡುವ ಗೊಡ್ಡು ಕಂದಾಚಾರಗಳನ್ನು ನಶಿಸಿ ಹಾಕುವ ಸಾಹಿತ್ಯ ಸೃಷ್ಟಿಯಾಗಬೇಕು. ಹಳೆಯದೆಲ್ಲವೂ ಜೊಳ್ಳು ನಿರುಪಯುಕ್ತ ಎನ್ನುವ ಭಾವನೆ ಯುವಕರಿಗೆ ಹೊಸದೆಲ್ಲವೂ ಅಪಕ್ವ ಅಶ್ಲೀಲ ಎನ್ನುವ ವಿಚಾರ ಹಳಬರಿಗೆ ಈ ಇಬ್ಬಗೆಯ ದೃಷ್ಟಿಕೋನದಿಂದ ಹಳತು ಹೊಸದರ ನಡುವೆ ಆಳವಾದ ಕಂದಕ ನಿರ್ಮಾಣವಾಗುತ್ತಲಿದೆ. ಇದನ್ನು ತೊಡೆದು ಹಾಕಿ ಹಳಬರ ಅನುಭವದ ತಳಹದಿಯ ಮೇಲೆಯೆ ಹೊಸಬರ ಆದರ್ಶದ ಸೌಧ ಕಟ್ಟಲ್ಪಡಬೇಕು.

————

ಅನೇಕ ಹೋರಾಟಗಳ ಹುಲಿ ಗುಬ್ಬಿ ಶಂಕರರಾಯರು

ಪಾಟೀಲ ಪುಟ್ಟಪ್ಪ
ಸಂಪಾದಕರು, ಪ್ರಪಂಚ ಪತ್ರಿಕೆ

ಮರದ ದಿಮ್ಮೆಗಳ ಮನೆಯಿಂದ ಶ್ವೇತಭವನಕ್ಕೆ ಎನ್ನುವ ಮಾತನ್ನು ಅಮೇರಿಕೆಯಲ್ಲಿ ಏಬ್ರಹಾಂ ಲಿಂಕನ್‌ರ ಬಗೆಗೆ ಹೇಳುತ್ತಾರೆ. ಹಿಡಿ ಬೆಳೆಯುವ ಬಡತನ ವಿದ್ದರೂ ಅದರೊಳಗಿಂದ ಕೊಸರಿಕೊಂಡು, ಮೇಲಕ್ಕೆದ್ದು ಮುಂದೆ ಹೋದ ಅದ್ಭುತ ಚೇತನ ಅವರದಾಗಿದ್ದಿತು. ಯಾವುದೂ ಅವರನ್ನು ತಡೆದು ನಿಲ್ಲಿಸಲಿಲ್ಲ ; ಅವರು ಯಾವುದಕ್ಕೂ ತಡೆದು ನಿಲ್ಲಲಿಲ್ಲ.

ಈ ಉದಾಹರಣೆಯಲ್ಲಿ ಗುಬ್ಬಿ ಶಂಕರರಾಯರ ಜೀವನಕ್ಕೆ ಸರಿಹೋಗುವ ಸೂಕ್ತವಾದ ಹೋಲಿಕೆ ಇದೆ. ಉಣ್ಣುವುದಕ್ಕೆ ಅಭಾವ ಇರುವ ಮನೆಯಲ್ಲಿ, ಓದುವುದಕ್ಕೆ ಅವಕಾಶ ಇಲ್ಲದ ಊರಿನಲ್ಲಿ ಅವರು ಬೆಳೆದು ಬಂದರು. ದೊಡ್ಡದಾದರೇನು, ಸಣ್ಣದಾದರೇನು ? ಪೆಸರೇ ಗುಬ್ಬಿ-ಗುಬ್ಬಿಗೇ ಇಲ್ಲದಿರುವ ಚೈತನ್ಯ ಅಲ್ಲಿಯವರಿಗೆ ಹೇಗೆ ಬಂದೀತು ? ನಿರಾಸೆಗೊಳಿಸುವ ಹಿನ್ನೆಲೆಯಲ್ಲಿ ಬೆಳೆದು ಬಂದ ಶಂಕರರಾಯರಿಗೆ ಓದಬೇಕೆಂದರೆ ಆ ಗ್ರಾಮದಲ್ಲಿ ಅನುಕೂಲವೂ ಇರಲಿಲ್ಲ, ಅವಕಾಶವೂ ಇರಲಿಲ್ಲ. ಪ್ರಾಥಮಿಕ ಶಾಲೆಗೆ ಹೋಗಬೇಕೆಂದರೆ ತಡವರಿಸುತ್ತ ಯಡಗೋಡಿಗೆ ಹೋಗಬೇಕು. ಮಗ ಓದುವುದಕ್ಕೆ ಅನುಕೂಲ ಇಲ್ಲದಿದ್ದರೂ, ಅವನು ಓದಿ ಅಮಲ್ದಾರನಾಗ ಬೇಕೆನ್ನುವ ಆಸೆ, ಅವರ ತಾಯಿಯಲ್ಲಿದ್ದಿತು.

ಯಡಗೋಡಿಗೆ ಎಡತಾಕುವುದು ಬೇಡವೆಂದು ಶಂಕರರಾಯರನ್ನು ಕುಡುಪಲಿಗೆ ಕಳಿಸಿದರು. ಅದು ಅವರ ತಾಯಿಯ ತವರುಮನೆ ಇದ್ದ ಗ್ರಾಮ. ಅಲ್ಲಿ ಇದ್ದುಕೊಂಡ ಅವರು ಓದಿದುದು ಎಷ್ಟೋ ಏನೋ, ಹೊಲಮನೆಯ ಕೆಲಸದಲ್ಲಿ ಅವರು ಬಹಳಷ್ಟು ಪಳಗಿದರು.

ಓದುವ ಹಂಬಲ ಹಚ್ಚಿಕೊಂಡಿದ್ದ ಅವರಿಗೆ ರಾಣೆಬೆನ್ನೂರಿನ ಆಕರ್ಷಣೆ ಕಾಣಿಸಿತು. ಅವರ ಜೀವನವನ್ನು ರೂಪಿಸಿ, ಅದಕ್ಕೆ ದಿಕ್ಕು ದಿಶೆ ತೋರಿಸಿದ ಶಿಕ್ಷಕರು ಅಲ್ಲಿ ಸಿಕ್ಕರು. ತಮಗೆ ಕಲಿಸಿದ ಪವಾರ ಹಾಗೂ ಮಠಪತಿ ಗುರುಗಳನ್ನು ಅವರು ಕೃತಜ್ಞತೆಯಿಂದ ನೆನೆಯುತ್ತಾರೆ. ಮುಲಕಿ ಪರೀಕ್ಷೆ ಓದಲು ರಾಣೆಬೆನ್ನೂರಿಗೆ ಹೋದರೆ ಅಲ್ಲೇನು ಅವರಿಗೆ ತಿನ್ನಲು ಉಣ್ಣಲು ಇದ್ದಿತೇ? ಒಂದು ಹೊತ್ತು ಉಂಡರೆ, ಒಂದು

ಹೊತ್ತು ಉಪವಾಸ. ಪವಾರ ಮಾಸ್ತರರಂತೂ ಅವರ ಬಗೆಗೆ ಪಿತೃಸದೃಶ ಮಮತೆಯನ್ನು ಇರಿಸಿಕೊಂಡಿದ್ದರು. ಓದುವುದಕ್ಕೆ ಅವರೇ ತಮ್ಮ ಕಯ್ಯಾರೆ ದೀಪ ಹಚ್ಚಿಕೊಡುತ್ತಿದ್ದರು. ಚಳಿಯಲ್ಲಿ ನಡುಗುತ್ತ ಮಲಗುತ್ತಿದ್ದ ಅವರ ಮೇಲೆ ಹೊಚ್ಚಿ ಹೋಗುತ್ತಿದ್ದರು. ಉಪವಾಸವಿದ್ದ ದಿನ ಒಳಗೆ ಕರೆದುಕೊಂಡು ಹೋಗಿ ತಿನ್ನಲು ಏನಾದರೂ ಕೊಡುತ್ತಿದ್ದರು. ಅವರಿಗೆ ಕುಲ ಗೋತ್ರ ಒಂದೂ ಕಾಣಿಸುತ್ತಿರಲಿಲ್ಲ, ಮನುಷ್ಯ ಜಾತಿ ಒಂದೇ ಕಾಣಿಸುತ್ತಿತ್ತು. ಪವಾರ ಮಾಸ್ತರರ ಈ ಪ್ರಭಾವ ಅವರ ಜೀವನದ ಮೇಲೆ ಅಚ್ಚಳಿಯದ ಪರಿಣಾಮವನ್ನು ಬೀರಿದೆ. ತಮ್ಮ ಜೀವನ ಜಾತ್ಯತೀತ ದಾಖಲೆಗೆ ಭದ್ರ ಬುನಾದಿಯನ್ನು ಅವರು ರಾಣೆಬೆನ್ನೂರಿನಲ್ಲಿಯೇ ಹುಡುಕಿಕೊಂಡರು.

ಅವರ ಜೀವನದ ಮೇಲೆ ಪ್ರಭಾವ ಬೀರಿದ ಇನ್ನೊಬ್ಬ ವ್ಯಕ್ತಿಯೆಂದರೆ ಮಠಪತಿ ಮಾಸ್ತರರು. ಉಗ್ರ ಶಿಸ್ತಿಗೆ ಅವರು ಹೆಸರಾಗಿದ್ದರು. ವಿದ್ಯಾರ್ಥಿಗಳು ಚಟವಿದೂರವಾದ ವ್ಯಕ್ತಿತ್ವವನ್ನು ಕಟ್ಟಿಕೊಳ್ಳಬೇಕೆಂದು ಅವರು ಸದಾ ಹೇಳುತ್ತಿದ್ದರು.

ಶಂಕರರಾಯರ ತಂದೆಗೆ ದೂರದ ಕ್ಷಿತಿಜ ಕಾಣದು. ಗ್ರಾಮದಲ್ಲಿ ಗೌಡ ಇರುತ್ತಿದರೂ ಪರಬಾರೆಲ್ಲವೂ ಕುಲಕರ್ಣಿಯದೇ ಆಗಿರುತ್ತಿತ್ತು. ಮಗ ಶಾನುಭೋಗನಾದರೆ ಸಾಕೆಂದು ತಂದೆಯ ಆಲೋಚನೆ. ಮಠಪತಿ ಮಾಸ್ತರರು ಮಾತ್ರ "ಹುಡುಗರು ಇಂಗ್ಲೀಷು ಕಲಿಯಬೇಕು" ಎಂದು ಹೇಳುತ್ತಿದ್ದರು. ಶ್ರೀಮಂತರ ಹುಡುಗರೆಲ್ಲರೂ ಸ್ಥಿತಿವಂತರಾದುದರಿಂದ ಇಂಗ್ಲೀಷು ಕಲಿಯಲು ಹೋಗುತ್ತಿದ್ದರು. ಆದರೆ ಬಡವರ ಮಕ್ಕಳಿಗೆಲ್ಲಿ ಅಭ್ಯಾಸ ? ತಮ್ಮನ್ನು ಬಡತನ ತುಳಿದು ಹಾಕಿದ್ದರೂ, ಶಂಕರರಾಯರ ಮನಸ್ಸು ಇಂಗ್ಲೀಷನ್ನು ಓದಲಿಕ್ಕಾಗದ ಸೋಲನ್ನು ಒಪ್ಪಿಕೊಳ್ಳಲು ಸಿದ್ಧವಿರಲಿಲ್ಲ.

ಮುಲಕೀ ಪರೀಕ್ಷೆ ಪಾಸಾಗಿದ್ದ ಅವರು ಕುಳಿತಲ್ಲಿ ನಿಂತಲ್ಲಿ ಓದಿ, ಇಂಗ್ಲೀಷ್ ಮೂರನೆಯ ತರಗತಿಯ ಪರೀಕ್ಷೆಗೆ ಕಟ್ಟಿ ಬರಲು ಹನ್ನೆರಡು ಮೈಲು ದೂರದಲ್ಲಿದ್ದ ಬ್ಯಾಡಗಿಗೆ ನಡೆದುಕೊಂಡೇ ಹೋದರು. ನಾಲ್ಕನೆಯ ತರಗತಿಗೆ ರಾಣೆಬೆನ್ನೂರಿನಲ್ಲಿಯೇ ಹೆಸರು ಹಚ್ಚಿದರು. ಅವರು ಅರ್ಧ ಶುಲ್ಕ ಮಾತ್ರ ಕೊಡಬೇಕಾಗಿದ್ದಿತು. ಆದರೆ ಅವನ್ನಾದರೂ ಅವರು ಎಲ್ಲಿಂದ ಕೊಡಬೇಕು ? ಫೀ ಕೊಡಲು ಆಗಲಿಲ್ಲವೆಂದು ಶಾಲೆ ಬಿಟ್ಟರು. ಆದರೆ, ಅವರು ಅಭ್ಯುದಯದಲ್ಲಿ ಆಸ್ಥೆ ವಹಿಸಿದ್ದ ಬಡ್ನಿಗೌಡರು ಅವರನ್ನೆಲ್ಲಿ ಬಿಡುತ್ತಾರೆ ? ಅವರನ್ನು ಹಿಡಿದು ತರಿಸಿ ಮತ್ತೆ ಶಾಲೆಗೆ ಸೇರಿಸಿದರು.

ಮ್ಯಾಟ್ರಿಕ್ ಪರೀಕ್ಷೆಯನ್ನು ಅವರು ಚೆನ್ನಾಗಿಯೇ ಪಾಸಾಗಿದ್ದರು. ಗಣಿತದಲ್ಲಿ ಅವರನ್ನು ಹಿಡಿದವರೇ ಇಲ್ಲ. ಆದರೆ, ಅವರು ಎಷ್ಟು ಗುಣಾಕಾರ ಮಾಡಿದರೂ ಕಾಲೇಜಿಗೆ ಸೇರಬೇಕೆನ್ನುವ ಬೀಜವು ಬಾಯಿಗೂಡಲೇ ಇಲ್ಲ. ಒಂದು ವರ್ಷ ತಿರು

ಗಾಟದಲ್ಲಿಯೇ ಕಳೆಯಿತು. ಹುಡುಗರಿಗೆ ಗಣಿತಹೇಳಿಕೊಡುತ್ತ ಹಿಂದೀ ಪರೀಕ್ಷೆಗೆ ಕಟ್ಟಿದರು. ಅವರ ಪರಿಣತಿಯನ್ನು ಕಂಡಿದ್ದ ರುದ್ರಯ್ಯ, ಸಾಲಿ ಎಂಬ ಮಾಸ್ತರರು ಅವರಿಗೆ ಭಾರಿ ಭವಿಷ್ಯವಿದೆಯೆಂದು ಹೇಳುತ್ತಿದ್ದರು. ಆರೇಮಲ್ಲಾಪುರದ ಬಣಕಾರ ನೊಬ್ಬ, ಈ ಹುಡುಗ ಬುದ್ಧಿವಂತನಿದ್ದಾನೆ. ಒಂದು ದಿನ ಮಂತ್ರಿ ಆಗುತ್ತಾನೆ ಎಂದು ನುಡಿದಿದ್ದ ಮಾತನ್ನು ಆಗ ಯಾರೂ ಗಂಭೀರವಾಗಿ ಪರಿಗಣಿಸಿರಲಿಲ್ಲ. ಮಂತ್ರಿ ಆಗುವುದೆಂದರೆ ಮುಗಿಲ ಮಲ್ಲಿಗೆಯನ್ನು ಕಿತ್ತು ತಂದಷ್ಟೇ ಅಸಾಧ್ಯವೆನಿಸಿದ್ದಿತು,

ಆಗಿನ ಕಾಲದಲ್ಲಿ ಶಂಕರರಾಯರ ಜೀವನದ ಮೇಲೆ, ಸ್ವಾಮಿ ವಿವೇಕಾನಂದರ ಜೀವನ ಹಾಗೂ ಬೋಧೆಗಳು ಭಾರಿ ಪ್ರಭಾವ ಹಾಗೂ ಪರಿಣಾಮಗಳನ್ನು ಬೀರಿದ್ದವು. ಅವರು ತಮ್ಮ ಜೀವನದಲ್ಲಿ ಭಾರೀ ನಿಷ್ಠುರ ಹಾಗೂ ನಿಗ್ರಹಗಳನ್ನು ತಂದುಕೊಂಡಿದ್ದರು. ಬ್ರಹ್ಮಚರ್ಯ ಪರಿಪಾಲನೆ, ಗರಡೀ ಸಾಧನೆ ಹಾಗೂ ತಣ್ಣೀರು ಸ್ನಾನ ಇವುಗಳಿಂದ ಅವರು ತಮ್ಮ ದೇಹ ಹಾಗೂ ಮನಸ್ಸುಗಳನ್ನು ಶಿಸ್ತಿಗೆ ಒಳಪಡಿಸಿದ್ದರು.

ಗಣಿತ ಕಲಿಸಿಕೊಡುತ್ತ ಶಂಕರರಾಯರು ೫೬ ರೂಪಾಯಿ ಕಲೆಹಾಕಿದ್ದರು. ಸಾಲೀ ಮಾಸ್ತರರು ೬೦-೭೦ ರೂಪಾಯಿಗಳನ್ನು ಪಟ್ಟೀ ಕೂಡಿಸಿದ್ದರು. ಒಟ್ಟು ೧೩೦ ರೂಪಾಯಿ ತೆಗೆದುಕೊಂಡು ಅವರು ಕಾಲೇಜು ಓದುವುದಕ್ಕೆಂದು ಕೊಲ್ಹಾಪುರಕ್ಕೆ ಹೋದರು. ಕಾಲಿಗೆ ಕುರು ಆಗಿ, ಕಾಲೇಜು ಬಿಡಬೇಕೆನ್ನುವಷ್ಟು ತೊಂದರೆಯನ್ನು ಅವರು ಅನುಭವಿಸಿದರು. ಆದರೆ ಅವರ ಅಂತರಾತ್ಮ ಅವರಿಗೆ ಗಟ್ಟಿಯಾಗಿ ನಿಲ್ಲಬೇಕೆಂದು ಹೇಳಿತು. ಅವರು ಧೃಡವಾಗಿ ನಿಂತು ಓದಿದರು. ಪರೀಕ್ಷೆಯಲ್ಲಿ ಅವರು ಕ್ಲಾಸು ಗಿಟ್ಟಿಸಿದರು. ಎಂದೂ ಹಣದ ಅಡಚಣೆ ತಪ್ಪದಿದ್ದ ಅವರನ್ನು ಹಣ ಹುಡುಕಿಕೊಂಡು ಬಂದಿತು ಅವರಿಗೆ ಫ್ರೀಶಿಪ್ ಲಭಿಸಿತು. ಆಲ್‌ಫ್ರೆಡ್ ಸ್ಕಾಲರ್ ಶಿಪ್ ಸಿಕ್ಕಿತು. ಲಿಂಗಾಯತ ಶಿಷ್ಯವೇತನ ತೊರೆಯಿತು. ಉಚಿತ ಪ್ರಸಾದದ ಅವಕಾಶವನ್ನು ಅವರು ಪಡೆದುಕೊಂಡರು.

ಬಿ. ಎ. ಓದುವಾಗ ಅವರಿಗೆ ಭಾರೀ ತೊಂದರೆ ಎನಿಸಿತು. ಆದರೂ ಆನರ್ಸ್ ಪಡೆದುಕೊಂಡರು. ಆಗ ಮುಂದೇನು ಎನ್ನುವ ಪ್ರಶ್ನೆ ಅವರೆದುರು ಥುತ್ತನೆ ಬಂದು ನಿಂತಿತು. ಕೆಲಸಕ್ಕೆ ಸೇರಬೇಕೆಂದು ಎಲ್ಲರೂ ಸಲಹೆ ಮಾಡುವವರೇ ಸ್ಥಳೀಯ ಅಭ್ಯರ್ಥಿ ಎಂದು ಕೆಲಸಕ್ಕೆ ಸೇರಿದರು. ಆದರೆ, ಎತ್ತಿಕೊಳ್ಳುವವರು ಇರಲಿಲ್ಲವೆಂದು ಅವರ ಆಯ್ಕೆ ಆಗಲಿಲ್ಲ. ಸೇಲ್ಸ್ ಟ್ಯಾಕ್ಸ್ ಇಲಾಖೆಯಲ್ಲಿ ಆಯ್ಕೆಮಾಡಿಕೊಂಡ ಇಬ್ಬರು ಅಭ್ಯರ್ಥಿಗಳಲ್ಲಿ ಶಂಕರರಾಯರೂ ಒಬ್ಬರಾಗಿದ್ದರು. ಆದರೆ ಅವರಿಗೇಕೋ ಅದರ ಬಗೆಗೆ ಮನಸ್ಸಿರಲಿಲ್ಲ, ಸಾಲ್ದಾನಾ ಎಂಬ ಅಧಿಕಾರಿ ಮಾತ್ರ ಅವರಿಗೆ ಬಿಡಬೇಡಿ ಎಂದು ದುಂಬಾಲು ಬಿದ್ದು ಹೇಳಿದ: "ನೀವು ಕಮಿಷನರ್ ಆಗಿ ರಿಟೈರ್

ಆಗುತ್ತೀರಿ." ಸರಕಾರೀ ಸೇವೆಯ ಬಗೆಗೆ ಅವರು ಮನಸ್ಸನ್ನು ಮುರಿದುಕೊಂಡಿದ್ದರು.

ಕೈಗೆ ಬಂದ ನಿಶ್ಚಿತ ನೌಕರಿಯನ್ನು ಬಿಟ್ಟು ಅವರು ಅನಿಶ್ಚಿತ ಹಾದಿಯನ್ನು ಆರಿಸಿಕೊಂಡು ಎಂ. ಎ. ಓದಲು ಕೊಲ್ಹಾಪುರಕ್ಕೆ ತೆರಳಿದರು. ಶಂಕರರಾಯರು ಸುಲಭವಾದುದನ್ನು ಬಿಟ್ಟು ಕಠಿಣವಾದುದನ್ನೇ ಆರಿಸಿಕೊಳ್ಳುತ್ತಾರೆ. ಅದು ಅವರ ಸ್ವಭಾವ ಎಲ್ಲರೂ ಅರ್ಧಮಾಗಧಿ ತೆಗೆದುಕೊಂಡರೆ, ಅವರು ಸಂಸ್ಕೃತ ಜರ್ಮನ್‌ಗಳನ್ನು ತೆಗೆದುಕೊಂಡಿದ್ದರು. ಅನೇಕರಿಗೆ ಸುಲಭವಾದುದು ಕಠಿಣವೆನಿಸುತ್ತಿತ್ತು. ಶಂಕರರಾಯರಿಗೆ ಕಠಿಣವಾದುದು ಸುಲಭವೆನಿಸುತ್ತಿತ್ತು.

ಎಂ. ಎ. ಜತೆಗೆ ಅವರು ಕಾನೂನನ್ನೂ ಓದುತ್ತಿದ್ದರು. ಆದರೆ ಮನೆಯ ಪರಮಾನವೇನೂ ಇಲ್ಲದಿದ್ದ ಅವರಿಗೆ ಕೊಲ್ಹಾಪುರದಲ್ಲಿದ್ದುಕೊಂಡು ಓದುವುದಕ್ಕೆ ತುಂಬ ಕಷ್ಟವೆನಿಸಿತು. ಓದನ್ನು ಅರ್ಧಕ್ಕೇ ನಿಲ್ಲಿಸುವ ಸ್ಥಿತಿ ಅವರಿಗೆ ಬಂದೊದಗಿತ್ತು. ಟರ್ಮ್ ಫೀ ಕಟ್ಟುವುದಕ್ಕೆ ಆಗದೆ ಅವರು ತೊಳಲಾಡುತ್ತಿದ್ದರು. ಆಗ ರಾಣೆಬೆನ್ನೂರಿನಲ್ಲಿ ದೇಸಾಯಿ ಎಂಬ ಒಬ್ಬ ಮುಸ್ಲಿಂ ಸಬ್ ರಿಜಿಸ್ಟ್ರಾರ್ ಇದ್ದರು. ಅವರಿಗೆ ಶಂಕರರಾಯರ ಬಗೆಗೆ ವಿಶೇಷವಾದ ಮಮತೆ. ತಮ್ಮ ಮಗಳಿಗೆ ಅವರು ಶಂಕರರಾಯರಿಂದ ಟ್ಯೂಶನ್ ಕೊಡಿಸುತ್ತಿದ್ದರು. ಆ ಮುಸ್ಲಿಂ ಮಹನೀಯರೇ ಶಂಕರರಾಯರಲ್ಲಿ ಉತ್ಸಾಹ ತುಂಬಿ, ಟರ್ಮ್ ಫೀ ಕಟ್ಟಿ ಮುಂದಕ್ಕೆ ಓದಲು ಕಳಿಸಿದರು.

ಅಲ್ಲಿಂದ ಶಂಕರರಾಯರು ಹಿಂದಕ್ಕೆ ಹೊರಳಿ ನೋಡಿದವರೇ ಅಲ್ಲ. ಅವರ ರಥ ಮುಂದಕ್ಕೆ ಉರುಳಿಕೊಂಡು ನಡೆದಿದೆ. ಅಡೆತಡೆ ಯಾವುದೂ ಅವರನ್ನು ತಡೆದು ನಿಲ್ಲಿಸಿಲ್ಲ. ಪ್ರತಿಕೂಲ ಪ್ರಸಂಗ ಎದುರಾದಾಗಲೆಲ್ಲ ಅವರಲ್ಲಿರುವ ಶ್ರೇಷ್ಠತೆಯು ಹೊರಗೆ ಬರುತ್ತದೆ.

ಕಾನೂನು ಓದಿ ಬಂದ ಅವರಿಗೆ ವಕಾಲತ್ತು ಬಹು ಸುಲಭವಾಗಿ ಹತ್ತಿತು. ಅವರು ಜನರನ್ನು ಹಚ್ಚಿಕೊಂಡಂತೆ ಜನರೂ ಅವರನ್ನು ಹಚ್ಚಿಕೊಂಡರು. ಕೆಲಸ ಸಣ್ಣದಿರಲಿ, ದೊಡ್ಡದಿರಲಿ, ಅವರಿಗೆ ಶಂಕರರಾಯರೇ ಬೇಕು. ಶಂಕರರಾಯರು ಕೂಡ ಪ್ರತಿಷ್ಠೆಗೆ ಆತು ನಿಲ್ಲದೆ, ಹೇಳುವುದೇ ಇರಲಿ, ಕೇಳುವುದೇ ಇರಲಿ, ಜನಸಾಮಾನ್ಯರನ್ನು ಕಟ್ಟಿಕೊಂಡು, ಅವರಿಗೋಸುಗ ಬೇಕಾದಲ್ಲಿಗೆ ಹೋಗುತ್ತಿದ್ದರು. 'ಶಂಕರರಾಯರಂತೆ ನಾನು ಸಣ್ಣ ಮಂದಿ ಜತೆಗೆ ಹೋಗಲೇನು ? ಎಂದು ಅವರ ಪ್ರತಿಸ್ಪರ್ಧಿ ಜನರ ಮುಖದ ಮೇಲೆ ಹೊಡೆದಂತೆ ಮಾತನಾಡುತ್ತಿದ್ದರು. ಶಂಕರರಾಯರು ಊಟ ಇಲ್ಲದೆ, ಸೇಂಗಾ ಚುರುಮುರಿ ತಿಂದು ಇರಲೂ ಬಲ್ಲರು, ಬಸ್ಸಿನಲ್ಲಿ ಹೋಗಿ ಬರಲೂ ಬಲ್ಲರು.

ಶಂಕರರಾಯರ ವಿಶೇಷ ಗುಣ ಏನೆಂದರೆ ಅವರು ಯಾವಾಗಲೂ ಹಿಂದುಳಿದ, ಬಡ್ಡ, ದೀನ ದಲಿತ ಜನರ ಪಕ್ಷಪಾತಿ. ಹಳ್ಳಿಯಲ್ಲಿ ನಿಕೃಷ್ಟರೆನಿಸಿದ ಜನರೆಲ್ಲರೂ ಅವರಿಗೆ ಬೇಕು. ಪರಿಜನರಿಗೋಸುಗ, ಹಿಂದುಳಿದವರಿಗೋಸುಗ ಅವರ ಹೃದಯ ಮರಿಗಿದಂತೆ, ತಮ್ಮ ಹೃದಯ ಮರಿಗಿಸಿಕೊಂಡವರು ಹೆಚ್ಚು ಜನರಿಲ್ಲ.

ನೇಶ್ವಿ ತಂಬಾಕದರ ಪ್ರಾಬಲ್ಯ ಮೆರಿಯುತ್ತಿದ್ದ ಕಾಲ ಅದು. ಅವರಿ ಹೊರ ತಾಗಿ ಬೇರೆಯವರು ಯಾರೂ ಹಿರೇಕೆರೂರು ತಾಲ್ಲೂಕಿನಲ್ಲಿ ಮುಂದೆ ಬರುವುದು ಸಾಧ್ಯವೇ ಇಲ್ಲ ಎಂದು ರಾಜಕೀಯ ಕ್ಷೇತ್ರದಲ್ಲಿದ್ದವರ ಗ್ರಹಿಕೆ ಆಗಿದ್ದಿತು. ಅಂಥ ವೇಳೆಯಲ್ಲಿ ಸರದಾರವೀರನ ಗೌಡರು ಒಬ್ಬ ವ್ಯಕ್ತಿಯ ವಿಚಾರ ಎತ್ತಿಕೊಂಡು, 'ಆ ಹುಡುಗನನ್ನು ನಾವು ಹಿಡಿದುಕೊಳ್ಳಬೇಕು. ಅವನು ಜನರನ್ನು ಹಿಡಿದುಕೊಂಡಿದ್ದಾನೆ ಅವನನ್ನು ಹಿಡಿದುಕೊಳ್ಳದಿದ್ದರೆ ತಾಲ್ಲೂಕು ನಮ್ಮ ಕೈ ತಪ್ಪಿಹೋಗುತ್ತದೆ,' ಎಂದು ಹೇಳಿದ್ದರು. ಅವರ ಮಾತು ಅನೇಕರಿಗೆ ಅಚ್ಚರಿಯನ್ನು ಉಂಟುಮಾಡಿತು. ನೆಲ ವನ್ನು ಮೂಸಿ ನೋಡಿ ಅದರ ವಾಸನೆಯಿಂದ ಮಳೆ ಬರುವುದನ್ನು ಹೇಳುವವರು ಇರು ವಂತೆ ಸರದಾರವೀರನ ಗೌಡರು, ತಮ್ಮ ತಾಲೂಕಿನ ಮುಂದಾಳುತನದ ಬಗೆಗೆ ಅಭಿ ವ್ಯಕ್ತಿ ಒದಗಿಸಿಕೊಟ್ಟರು.

ಸರದಾರ ವೀರನಗೌಡರು ಬೆರಳುಮಾಡಿ ತೋರಿಸಿದ ಆ ಹುಡುಗ ಬೇರೆ ಯಾರೂ ಅಲ್ಲ. ಅವರೇ ಮಂತ್ರಿಯಾಗಿದ್ದ ಗುಬ್ಬಿ ಶಂಕರರಾಯರು. ೧೯೫೭ ರಲ್ಲಿ ಅವರು ವಿಧಾನ ಸಭಾ ಸದಸ್ಯರಾದರು. ಅವರ ಆಗಮನವು ಹಿರೇಕೆರೂರು ತಾಲೂ ಕಿಗೆ ಬಹು ದೊಡ್ಡ ವರದಾನವಾಗಿ ಪರಿಣಮಿಸಿತು. ಒಬ್ಬ ಮನುಷ್ಯನು ತನ್ನ ಜನ ಪದಕ್ಕೆ ಏನೆಲ್ಲ ಮಾಡಬಹುದು ಎನ್ನುವುದನ್ನು ನೋಡಬೇಕೆನ್ನುವವರು ಹಿರೇಕೆರೂರು ತಾಲೂಕಿಗೇ ಹೋಗಬೇಕು. ಸಂಗತಿಗಳನ್ನು ಪರಿಶೀಲಿಸಿದರೆ ಸತ್ಯ ತಿಳಿಯುತ್ತದೆ. ಸಂಗತಿಗಳೇ ಸತ್ಯವನ್ನು ತಿಳಿಸಿಕೊಡಲಿ ಎನ್ನುವ ಮಾತು ಗ್ರೀಕರಲ್ಲಿ ಪ್ರಚಲಿತವಿದೆ.

ಅವರು ಮಾಡಿದ ಕೆಲಸದ ಪಾಟಿಲೆಯನ್ನು ನೋಡಿದರೆ ಅವರ ಬಗೆಗೆ ಯಾರಿ ಗಾದರೂ ಅಸೂಯೆ ಎನಿಸುತ್ತದೆ. ಅವರ ಪ್ರತಿಸ್ಪರ್ಧಿಗಳೊಬ್ಬರು ಮಂತ್ರಿ ಆಗಿದ್ದಾಗ, ತಾಲೂಕಿಗೆ ಬೇಕಾದ ಕೆಲಸಗಳನ್ನು ಮಾಡಿಸಬೇಕೆಂದು ಜನರು ಅವರನ್ನು ಕೇಳಲು ಹೋದರೆ, ಅವರಿಂದ ಬಂದ ಪ್ರತಿಕ್ರಿಯೆಯು ಶಂಕರರಾಯರ ವ್ಯಕ್ತಿತ್ವದ ಮೇಲೆ, ಕರ್ತೃತ್ವ ಶಕ್ತಿಯ ಮೇಲೆ ಬಹು ದೊಡ್ಡ ಬೆಳಕನ್ನು ಚೆಲ್ಲುತ್ತದೆ. "ನಾನು ಏನಾದರೂ ಮಾಡಬೇಕೆಂದರೆ, ಆ ಶಂಕರರಾಯ ನನಗೆ ಮಾಡಲು ಇಲ್ಲೇನು ಉಳಿಸಿ ದ್ದಾನೆ ? ತಮ್ಮ ಪ್ರತಿಸ್ಪರ್ಧಿಯಿಂದ ಬಂದ ಈ ಉದ್ಗಾರವು ಶಂಕರರಾಯರಿಗೆ ಬಹು ದೊಡ್ಡ ಶಿಫಾರಸು ಎನಿಸಿದೆ. ವೀರನಾದರೆ ವೈರಿಯು ಮೆಚ್ಚಿ ಅಹುದೆನ್ನಬೇಕು

ಎಂದು ಬಸವೇಶ್ವರರು ತಮ್ಮ ಒಂದು ವಚನದಲ್ಲಿ ಹೇಳಿದ ಮಾತು ಇಲ್ಲಿ ನೆನಪಿಗೆ ಬರುತ್ತದೆ.

ಮಾಡಬಾರದೆನ್ನುವವನಿಗೆ ಮಾಡದೇ ಇರುವುದಕ್ಕೆ ಕಾರಣಗಳು ಇದ್ದೇ ಇರುತ್ತವೆ ಆದರೆ, ಮಾಡಬೇಕೆನ್ನುವವರಿಗೆ ಮಾಡಬೇಕೆನ್ನುವ ದಾರಿಗಳು ಕಂಡೇ ಕಾಣುತ್ತವೆ. ಶಂಕರರಾಯರಿಗೆ ತಮ್ಮ ತಾಲೂಕಿಗೆ ಬೇಕಾದ ಕೆಲಸಗಳನ್ನು ಮಾಡಿಸುವ ಯಾವುದೋ ಒಂದು ಸೂತ್ರ ಸಿಕ್ಕಿದೆ. ತಾಲೂಕಿಗೆ ಆಗಬೇಕಾದ ಕೆಲಸಗಳು ಆಗಲೇಬೇಕು. ಇಲ್ಲದಿದ್ದರೆ ಅವರು ಮಲಗಲು ಕೂಡ ಅವಕಾಶ ಒದಗಿಸಿ ಕೊಡುವವರಲ್ಲ.

ಕೃತಜ್ಞ ಜನರು ಶಂಕರರಾಯರ ಸೇವೆಯನ್ನು ಸ್ಮರಿಸದೇ ಇರುವುದಿಲ್ಲ. ತಾವು ಅಧಿಕಾರದಲ್ಲಿ ಇರಲಿ, ಇಲ್ಲದಿರಲಿ, ಅವರಿಗೆ ಜನರ ಸೇವೆ ಮುಖ್ಯ. ತಮ್ಮ ತಾಲೂಕಿಗೆ ಅವರು ಮಾಡಿರುವ ಕೆಲಸದ ಗಾತ್ರವನ್ನು ನೆನೆದರೆ ಕೌತುಕವೆನಿಸುತ್ತದೆ. ರಾಜ್ಯದ ೧೭೫ ತಾಲ್ಲೂಕುಗಳಲ್ಲಿ ಎಲ್ಲಿಯೂ ಆಗದಿರುವಷ್ಟು ರಸ್ತೆಗಳನ್ನು ಅವರು ಹಿರೇಕೆರೂರಿನಲ್ಲಿ ಮಾಡಿಸಿದ್ದಾರೆ. ೫೭೫ ಕಿಲೋಮಿಟರ್ ರಸ್ತೆ ಮಾಡಿಸಿದ್ದಾರೆಂದರೆ ಶಂಕರರಾಯರ ಕರ್ತೃತ್ವ ಶಕ್ತಿಯ ಕಲ್ಪನೆ ಬರಬಹುದು. ಎರಡು ವರ್ಷಗಳಲ್ಲಿ ಅವರು ಐದು ಹೈಸ್ಕೂಲು ಐದು ಜ್ಯೂನಿಯರ್ ಕಾಲೇಜ ಒಂದು ವಿದ್ಯಾಪೀಠ, ಒಂದು ಪದವಿ ಕಾಲೇಜು ಒಂದು ಪೋಲಿಟೆಕ್ನಿಕ್ ಮಾಡಿಸಿರುವದರಲ್ಲದೆ, ತಾಲ್ಲೂಕಿಗೆ ೩೦ ಹಾಸುಗೆಗಳ ಆಸ್ಪತ್ರೆ ಸ್ಯಾಂಕ್ಷನ್ ಮಾಡಿಸಿದ್ದಾರೆ. ೧೦೦ ಅಂಗನವಾಡಿಗಳನ್ನು ತೆರೆಸಿದ್ದಾರೆ. ಮೂವತ್ತೇಳು ಗ್ರಾಮಗಳಿಗೆ ಗ್ರಾಮ ಕೇಂದ್ರಗಳನ್ನು ಕಟ್ಟಿಸಿದ್ದಾರೆ. ಐದಾರು ಕೋಟಿ ರೂಪಾಯಿ ವೆಚ್ಚದ ಐದಾರು ಚಿಕ್ಕ ನೀರಾವರಿ ಯೋಜನೆಗಳನ್ನು ತಂದಿದ್ದಾರೆ.

ಜತ್ತಿಯವರು ರಾಷ್ಟ್ರಪತಿ ಪದದವರೆಗೆ ಮುಟ್ಟಿ ಬಂದರು. ರಾಜ್ಯದ ಮುಖ್ಯಮಂತ್ರಿ ಆಗಿದ್ದರು. ೧೯೪೭ ರಿಂದ ಅವರು ರಂಗಸ್ಥಳದ ಮೇಲೆ ಇದ್ದೆ ಇದ್ದಾರೆ. ಶಂಕರರಾಯರು ಹಿರೇಕೆರೂರಿಗೆ ಮಾಡಿದ ಶೇಕಡಾ ಐದು, ಹತ್ತು ಕೆಲಸವನ್ನು ಕೂಡ ಅವರು ತಮ್ಮ ಜಮಖಂಡಿಗೆ ಮಾಡಿಲ್ಲ ಈ ತುಲನಾತ್ಮಕ ಚಿತ್ರ ನೋಡಿದರೆ ಹಿರೇಕೆರೂರು ತಾಲ್ಲೂಕಿಗೆ ಶಂಕರರಾಯರು ಎಷ್ಟೊಂದು ಭಾಗ್ಯ ಒದಗಿಸಿಕೊಟ್ಟಿದ್ದಾರೆನ್ನುವುದು ಮನದಟ್ಟಾಗುತ್ತದೆ. ಸಾರ್ವಜನಿಕಕ್ಕೆ ತಮ್ಮನ್ನು ಸಂಪೂರ್ಣ ಸಮರ್ಪಿಸಿಕೊಂಡು ಶಂಕರರಾಯರು, ಜನರಿಗೋಸುಗ ಮಾಡುವ ಕೆಲಸ ತಮಗೆ ಸಾಕಾಯಿತು ಹೀಗೆ ಎಂದೂ ಹೇಳತಕ್ಕವರಲ್ಲ.

ಮಹಿಳಾ ಶಿಕ್ಷಣ ಸಮಸ್ಯೆಗಳು

ಕುಮಾರಿ. ಗೀತಾ ನಿಲೋಗಲ್

ಪ್ರಥಮ ದರ್ಜೆಯ ಗುಮಾಸ್ತರು,

ಗುಲಬರ್ಗಾ ವಿಶ್ವವಿದ್ಯಾಲಯ,

ಪ್ರಬಂಧದ ವಿಷಯ ಮಹಿಳೆಯ ಶಿಕ್ಷಣ ಸಮಸ್ಯೆಗಳು, ಮೊದಲು ಶಿಕ್ಷಣ ಸಮಸ್ಯೆಗಳೇನು ಎನ್ನುವಲ್ಲಿ ವಿಚಾರಮಾಡಿ, ತದನಂತರ ಮಹಿಳೆಯ ಸಮಸ್ಯೆ, ಹಾಗೂ ಮಹಿಳಾ ಶಿಕ್ಷಣ ಸಮಸ್ಯೆಗಳ ಬಗ್ಗೆ ಗಮನಹರಿಸೋಣ. ಈಗ ಜ್ವಲಂತವಾಗಿ ಉರಿಯುತ್ತಿರುವ ಸಮಸ್ಯೆ ಶಿಕ್ಷಣ ಸಮಸ್ಯೆ, 13 ಸಾವಿರ ಅಧಿಕೃತ ಪದವೀಧರರು ಧರಣಿ ಮುಷ್ಕರ ಹೂಡಿದ್ದಾರೆ, ಅನಧಿಕೃತ ದೂರದೃಷ್ಟಿ ಪದವೀಧರರ ಸಂಖ್ಯೆ ಇದನ್ನೂ ಮೀರಿ ಬೆಳೆದಿದೆ. ಸ್ಥಿತಿಯನ್ನು ಪರಿಶೀಲಿಸಿದಾಗ ಸಮಸ್ಯೆ ಶಿಕ್ಷಣದ್ದೇ ಕಾರಣವೆಂದು ಸ್ಪಷ್ಟವಾಗಿದ್ದರೂ ಪರಿಹಾರ ಸುಲಭವಾಗಿಲ್ಲ. 'ಏಕೆ? ಭೂತಕಾಲದಲ್ಲಿ ಇದ್ದ ಅಶಿಕ್ಷಿತ ಜನತೆಗಿಂತ ವರ್ತಮಾನದಲ್ಲಿಯ ಶಿಕ್ಷಿತವರ್ಗ ಭೂತವಾಗಿದ್ದಾರೆ. ಭವಿಷ್ಯತ್ತೇ ಇಲ್ಲದ ಈ ಶಿಕ್ಷಿತ ಜನಾಂಗವೇ ನಮ್ಮೆದುರು ನಿಂತಿರುವ ಬೃಹತ್ ಸಮಸ್ಯೆಯೇ ಸರಿ. ಶಿಕ್ಷಣ ಏಕೆ ತನ್ನ ಮೌಲ್ಯ ಕಳೆದುಕೊಂಡಿತು. ಜ್ಞಾನ ಭಂಡಾರವಾಗಿ ಹೆಮ್ಮೆಯಿಂದ ಬೀಗಿ ಮೆರೆಯುತ್ತಿದ್ದ ಶಿಕ್ಷಣ ಅರ್ಥಹೀನವಾಗಿ ಸಮಸ್ಯೆ ರೂಪ ತಳೆದಿದ್ದು ಯಾವಾಗ? ಶಿಕ್ಷಣ ಜ್ಞಾನ ನೀಡುವ ಸಾಧನವಾಗಿದ್ದಾಗ ಅದಕ್ಕಿದ್ದ ಘನತೆ ಶಿಕ್ಷಣವು ವೃತ್ತಿಗಿಳಿಸಿದಾಗ ಅದು ಸ್ವಲ್ಪ ಸ್ವಲ್ಪವಾಗಿ ತನ್ನಅಸ್ತಿತ್ವ ಬಿಚ್ಚಿಕೊಳ್ಳುತ್ತ ಈಗ ಸಂಪೂರ್ಣ ನಗ್ನ ಸ್ವರೂಪ ತಾಳಿ ಸಮಸ್ಯೆಯಾಗಿದೆ.

ಭಾರತ, ಪ್ರಸಿದ್ಧ ಸಂಸ್ಕೃತಿ, ವೇದ ಪರಂಪರೆಗಳ ನಾಡು. **ಪೌ**ರಾಣಿಕ ಕಾಲದಿಂದಲೂ ವಿದ್ಯೆ ಜ್ಞಾನಕ್ಕೆ ಮೂಲ ಮಹಿಳೆಯ ನುಡಿಯೇ ವಿದ್ಯೆಯಾಯಿತು. ಹೀಗಾಗಿ ವಿದ್ಯಾಧಿದೇವತೆ ಸರಸ್ವತಿಯಾದಳು. ಪುರಾಣಕಾಲದ ಸೀತೆ, ಸಾವಿತ್ರಿಯರಂತೆ ಸಿಗುವ ಎಲ್ಲ ನಾರೀಮಣಿಯರು ಸುಶಿಕ್ಷಿತೆಯರು, ಸಾಧನೆ, ಸಿದ್ಧಿಗೆ, ಪ್ರಸಿದ್ಧಿ ಹೊಂದಿ, **ಯತ್ರ ನಾರ್ಯಸ್ತು ಪೂಜ್ಯಂತೇರಮಂತೆ ತತ್ರದೇವತಾ**" ಎಂದು 'ಮನುವಿನ'ನ ಸ್ತ್ರೀ ಸ್ವಾತಂತ್ರ್ಯ ಮಹರ್ಷಿ ಎನ್ನುವದನ್ನು ಅಲ್ಲಗಳೆದು ಸಮಾನತೆಯನ್ನು ಮೆರೆದ ಭವ್ಯಭಾರತ. ಭರತಕುಮಾರನಿಗೆ ವಿದ್ಯೆ ಕಲಿಸಿ 'ಭಾರತ'ವನ್ನು ನಿರ್ಮಿಸಿದವಳು 'ಶಕುಂತಲಾ' 'ಸುಶಿಕ್ಷಿತ ಸನ್ನಡತೆಯಿಂದ ಪಂಚಕನ್ಯಾಸ್ಮರೇ ನಿತ್ಯಂ' ಎಂದು ಹೆಣ್ಣನ್ನು ಪೂಜ್ಯತೆಗೇರಿಸಿದವರು ಭಾರತದ ಮಹಿಳೆಯರು.

ಪೌರಾಣಿಕ ಕಾಲ, ಕೇವಲ ಕಟ್ಟುಕತೆ ಕಾಲ್ಪನಿಕ ಜಗತ್ತು ಅಲ್ಲಿನ ಶಿಕ್ಷಿತ, ಸುಶಿಕ್ಷಿತ ಪ್ರಶ್ನೆ ಕೇವಲ ಉದಾಹರಣೆಗೆ ಎನ್ನುವದಾದರೇ ಐತಿಹಾಸಿಕವಾಗಿಯೂ ಮಹಿಳೆ ಸುಶಿಕ್ಷಿತೆಯರೂ ಅಪ್ರತಿಮವಾಗಿ ಬಾಳಿ ಬೆಳಗಿ ಜೀವಂತವಾಗಿದ್ದಾರೆ. ಇದೇ ನೆಲ, ಇದೇ ಜಲ, ಇದೇ ಗಾಳಿಯಲ್ಲಿ ಬದುಕಿ ಬಾಳಿದ ಇತಿಹಾಸದಲ್ಲಿ ಶಿಕ್ಷಣ ಸಮಸ್ಯೆಯಾಗಿದ್ದಿಲ್ಲ, ಅದರಲ್ಲೂ ಮಹಿಳಾ ಶಿಕ್ಷಣ ಕೂಡ ಸಮಸ್ಯೆ ಎನಿಸದೆ ಸರಳ ಸಹಜ ರೀತಿಯಲ್ಲಿ ಶಿಕ್ಷಣ ಮೈಗೂಡಿತ್ತು. 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿಗಳ್' ಎಂದು ಕರೆಯಿಸಿಕೊಂಡಿದ್ದ ಮಹಿಳಾ ವರ್ಗದ ವೈಶಿಷ್ಟ್ಯ. ಜನಪದವಾಗಿದ್ದು ಈಗ ಜಾನಪದ ಶಿಕ್ಷಣವಾಗಿ ಕುರಿತು ಓದಿದರೂ ಪರಿಣತಿ ಶೂನ್ಯ ನಮ್ಮಲ್ಲಿ.

ಗಣಿತ ಶಾಸ್ತ್ರದಲ್ಲಿ ಅನುಪಮ ಪ್ರವೀಣೆಯಾಗಿ ನಿಂತವಳು ಲೀಲಾವತಿ. ಸಾಹಿತ್ಯ ಸೃಷ್ಟಿಯಲ್ಲಿ ಸ್ಥಾನ ಗಳಿಸಿದವರು ಮೈತ್ರೇಯಿ, ಗಾರ್ಗೇಯಿ. ಇತಿಹಾಸದ ಪುಟ ಪುಟಗಳಲ್ಲಿ ಮಹಿಳೆ ಸುಶಿಕ್ಷಿತಳು, ಸಕಲಕ್ಕೂ ನಿಷ್ಣಾತಳು. ನಾಟ್ಯರಾಣಿ ಶಾಂತಲಾ ವಾಸ್ತು ಶಿಲ್ಪದಲ್ಲಿ ನೃತ್ಯಕಲೆಯಲ್ಲಿ ಒಂದು ಬೃಹತ್ ವಿಶ್ವವಿದ್ಯಾಲಯದಂತೆ ಬೇಲೂರು ಹಳೇಬೀಡುಗಳ ಸೌಂದರ್ಯಕ್ಕೆ ಕಾರಣೀಭೂತಳು. ಮಹಿಳೆ ಕೇವಲ ನಯ ನಾಜೂಕಿನ ಕಲಿಕೆಗೆ ಮೀಸಲಾಗದೇ ಗಂಡಸಿನ ಸರಿಸಮ ನಿಂತು ಹೋರಾಡುವಲ್ಲಿ ಎತ್ತಿದ ಕೈ ಎಂದು ತೋರಿಸಿದವರು ಕಿತ್ತೂರಿನ ಚೆನ್ನಮ್ಮ, ಝಾನ್ಸಿಯರಾಣಿ ಲಕ್ಷ್ಮಿಬಾಯಿ ಅನೇಕ ಹೆಸರಾನ್ವಿತ ಮಹಿಳೆಯರು. ಅಧ್ಯಾತ್ಮಿಕ ರಂಗದಲ್ಲಿಯೂ ನಾವಿದ್ದೇವೆ ಎಂದು ಮೆರೆದವರು ಅಕ್ಕಮಹಾದೇವಿ ಹೆಳವನ ಕಟ್ಟೆ ಗಿರಿಯಮ್ಮ, ಮೀರಾ, ಕಾರಿಕಾಲಮ್ಮ ಇತ್ಯಾದಿ.

ಈ ರೀತಿಯ ಇತಿಹಾಸವನ್ನು ಓದಿದ ನಮಗೆ ಶಿಕ್ಷಣ ಸಮಸ್ಯೆಯಾಗಿತ್ತೆ, ಮಹಿಳಾ ಶಿಕ್ಷಣ ಕೂಡ ಸಮಸ್ಯೆಯಾಗಿತ್ತೇ, ಎನ್ನುವ ಪ್ರಶ್ನೆ ಉದ್ಭವಿಸದೆ, ಮುಂದುವರಿದ ಯುಗ ಎಂದು ಕರೆಯಿಸಿಕೊಳ್ಳುವ ಈ ದಿನದಲ್ಲಿ ಶಿಕ್ಷಣ ಮಹಿಳಾ ಶಿಕ್ಷಣ ಸಮಸ್ಯೆ ತಾಳಿ ನಿಂತಿರುವದು ಯಾವ ಕಾರಣಕ್ಕೆ....?

ಪುರಾಣವಾಗಲಿ, ಇತಿಹಾಸವಾಗಲಿ ಒಂದು ವಿಷಯದಲ್ಲಿ ಸ್ಪಷ್ಟಗೊಳ್ಳುವದು. ಆರ್ಥಿಕ ಭದ್ರತೆಯಲ್ಲಿ ವರ್ಣ, ವರ್ಗ ಯಾವುದೇ ಭೇದವಿಲ್ಲದೆ ಪರಂಪರಾಗತವಾಗಿ 'ವೃತ್ತಿಶಿಕ್ಷಣ' ಸಹಜ ಪ್ರವೃತ್ತಿಯಾದದ್ದೇ. ಒಬ್ಬ ವೇಶ್ಯೆ ಎಷ್ಟು ಪ್ರಮಾಣಿಕವಾಗಿ ತನ್ನ ವೃತ್ತಿ ಶಿಕ್ಷಣ ಮುಂದುವರೆಸುತ್ತಾಳೊ ಅಷ್ಟೆ ನಾಟ್ಯವೃತ್ತಿ, ಸಂಗೀತ ವೃತ್ತಿ ಸಂಸ್ಕೃತಿಕ ರಂಗದಲ್ಲಿಯಾದರೆ, ಕೃಷಿ, ವ್ಯಾಪಾರ, ಹಾಗೂ ಇತರ ಗೃಹ ಕೈಗಾರಿಕೆ, ಹೂವೇ ಮಾರುವದು ಕೂಡ ವೃತ್ತಿ ಶಿಕ್ಷಣ ಪರಂಪರಾಗತವಾಗಿ ಅಡೆತಡೆಹೊಂದದೆ ಅವ್ಯಾಹತವಾಗಿ ಸಾಗಿ ಆರ್ಥಿಕ ಸುಭದ್ರತೆಯನ್ನು ಕಲ್ಪಿಸಿ, ಅಕ್ಷರಾಭ್ಯಾಸದ ಶಿಕ್ಷಣ ಜ್ಞಾನ ನಿಧಿಯಾಗಿತ್ತು. ಹೀಗಾಗಿ ಶಿಕ್ಷಣ ಘನಗಾಂಭೀರ್ಯದಿಂದ ಮೆರೆಯುತ್ತಿತ್ತು.

ಶಿಕ್ಷಣ ಕೇವಲ ಆಸ್ಥಾನಕ್ಕೆ ಮೀಸಲಾಗಿ ಜನಸಾಮಾನ್ಯರಲ್ಲಿ ಅಕ್ಷರಾಭ್ಯಾಸದ ಕೊರತೆಯಿದ್ದು ಅನೇಕ ಸಮಸ್ಯೆಗಳನ್ನು ತಂದೊಡ್ಡುತ್ತಿದ್ದುದನ್ನು ಗಮನಿಸಿ ಅಕ್ಷರಾಭ್ಯಾಸಕ್ಕೆ ಹೆಚ್ಚಿನ ಒಲವು ತೋರಿ, 'ಅಬಲೆ'ಯರೆಂದು ಕರೆದು ನಾರಿ ಜನಾಂಗದಲ್ಲಿ ಜಾಗೃತಿ ಉಂಟುಮಾಡಿ ಮೂಢ ಸಂಪ್ರದಾಯಗಳನ್ನು ಧಿಕ್ಕರಿಸಿ ಬಾಳುವಂತೆ ಮಾಡಿದರು. ರಾಜಾರಾಮ ಮೋಹನರಾಯ, ಕರ್ವೆ, ಕಾಕಾ ಕಾರ್ಖಾನಿಸ್ ಮಹತ್ಮಾಗಾಂಧಿಯಂಥವರು.

ಅಕ್ಷರಾಭ್ಯಾಸದ ಒಲವು ಬೆಳೆದಂತೆ ಜನತೆಯಲ್ಲಿ ವೃತ್ತಿ ಶಿಕ್ಷಣದಲ್ಲಿ ಇದ್ದ ಆಸಕ್ತಿ ಮಾಯವಾಗುತ್ತ ಕೇವಲ ಪುಸ್ತಕದ ಹುಳುಗಳಾಗಿ ಮಾರ್ಪಾಡಾದರು. ಅಕ್ಷರಾಭ್ಯಾಸ ಜ್ಞಾನ ನೀಡಿ ಬೆಳಗುವಲ್ಲಿ ಅಸಮರ್ಥವಾದದ್ದು ಇಂತಹ ಪುಸ್ತಕದ ಹುಳುಗಳಿಂದ.

ಬರುಬರುತ್ತಾ ಶಿಕ್ಷಣವು ಎಲ್ಲ ಜನತೆಯಲ್ಲೂ ಬಾಹ್ಯರೂಪದಲ್ಲಿ ಹಂಚಿ ಹೋಗಿ ಜನರಲ್ಲಿ ಅಹಂಕಾರಕ್ಕೆ ನಾಂದಿಯಾಯಿತು. ಅ. ನ. ಕೃ, ತ. ರಾ. ಸು, ಮುಂತಾದವರ ಸಾಹಿತ್ಯದಲ್ಲಿ ಸಿಗುವ 'ಕಲಿತಹೆಣ್ಣೆ'ನ ಪಾತ್ರಗಳು ಶಿಕ್ಷಣದ ಬದಲಾದ ರೂಪದ ಮಾದರಿಗಳಾಗಿವೆ. ವೃತ್ತಿ ಶಿಕ್ಷಣ ದೂರವಾಗಿ, ಪುಸ್ತಕ ಶಿಕ್ಷಣ ಹೆಚ್ಚಿ ಆರ್ಥಿಕವಾದ ಭದ್ರತೆಯಲ್ಲದೆ, ಎಲ್ಲರೂ ವೃತ್ತಿಗಾಗಿ ಪರದಾಡುವಂತಾದ್ದು ಶಿಕ್ಷಣವನ್ನು ನಾವು ಬಳಸಿಕೊಂಡ ರೀತಿಯಿಂದ.

ಹೆಚ್ಚು ಹೆಚ್ಚು 'ಪದವಿ' ಪಡೆದವರನ್ನು ಸುಶಿಕ್ಷಿತರು ಎಂದು ನಂಬಿದ ಜನಾಂಗ ತಮ್ಮ ಮೂಲಭೂತ ವೃತ್ತಿಗಳನ್ನು ಮರೆತು ಬಿಟ್ಟಿದ್ದು, ಹೀಗಾಗಿ ಆರ್ಥಿಕ ಅಸಮಾನತೆ ತಲೆದೋರಿ ಮಹಿಳೆ ಮುಂಕಾಗಿ ಸಮಾನತೆಗಾಗಿ ಹೋರಾಟವನ್ನು ನಡೆಸಬೇಕಾದ ಪ್ರಸಂಗವನ್ನು ತಂದಿದೆ.

ಶಿಕ್ಷಣ ಸಮಸ್ಯೆ, ಮಹಿಳಾ ಶಿಕ್ಷಣ ಸಮಸ್ಯೆಗೆ ಮೂಲಭೂತ ಕಾರಣ ಆರ್ಥಿಕತೊಂದರೆ ಹಾಗೂ ಮಹಿಳೆ ಎನ್ನುವ ವಿಭಿನ್ನ ದೃಷ್ಟಿಕೋನ—ನಿವಾರಣಾ ಮಾರ್ಗವಾಗಿ, ಗಂಡು ಮತ್ತು ಹೆಣ್ಣು ಸರಿಸಮವಾಗಿ ಅವರವರ ರಂಗದಲ್ಲಿ ವೃತ್ತಿ ಶಿಕ್ಷಣ ಪರಿಪೂರ್ಣದೊರೆಯುವಂತೆ ಅವಕಾಶ ಕಲ್ಪಿಸಿ ಅಲ್ಲಿ ಅಕ್ಷರಾಭ್ಯಾಸದ ಅವಶ್ಯಕತೆ ಪೂರೈಸುವುದು. ಇದರಿಂದ ಆರ್ಥಿಕ ನೆಲೆಗಟ್ಟು ತೋರಿ ಹೆಚ್ಚಿನ ಅರ್ಹತೆ ಉಳ್ಳವರು ವಿವಿಧ ಶಿಕ್ಷಣ ರಂಗದಲ್ಲಿ ಗಂಡಾಗಲಿ, ಹೆಣ್ಣಾಗಲಿ ಹೆಚ್ಚಿನ ಮುನ್ನಡೆ ಪಡೆಯಲು ಸಾಧ್ಯವಾಗುವ ಸಾಧ್ಯಗಳು ಹೆಚ್ಚಾಗಿ ಕಾಣುತ್ತವೆ.

ವಿದ್ಯಾವಂತರ ಸಂಖ್ಯೆಯಲ್ಲಿ ಮಹಿಳಾ ವಿದ್ಯಾವಂತರ ಸಂಖ್ಯೆಯೂ ಸರಿಸಮನಾಗಿದೆ. ವಿದ್ಯೆಯ ಉಪಯೋಗವನ್ನು ಅರಿಯದ ಅವಿದ್ಯಾವಂತರ ಸಂಖ್ಯೆ ಗುಪ್ತ

ವಾಗಿ ಬೆಳೆಯುತ್ತ ನಡೆದಿದೆ 'ವೃತ್ತಿ'ಯೇ ಮಹತ್ವ, ಆ, ವೃತ್ತಿಗೂ ಅವರದೇ ಆದ ಗೌರವ, ಮಾನ್ಯತೆ ದೊರೆಯುವಂತೆ ಸರಕಾರ ಹಾಗೂ ಜನರ ಸಹಕಾರ ಒಟ್ಟಾಗಿ ಪರಿಶ್ರಮಿಸಬೇಕಾಗಿದೆ. ಗಂಡಿನಂತೆ ಹೆಣ್ಣಿಗೂ ಅವಳದೇ ಆದ ವೃತ್ತಿ ಶಿಕ್ಷಣದ ಬೆಳವಣಿಗೆಗೆ ಮಹತ್ವ ಕೊಡಬೇಕು. 'ಸಮಾನತೆ' ಎನ್ನುವದನ್ನು ಸರಿಯಾದ ಅರ್ಥದಲ್ಲಿ ಮಹಿಳೆಯರು ಅರ್ಥ ಮಾಡಿಕೊಳ್ಳಬೇಕು, ಗಂಡಸಿನ ಅನುಕರಣೆ 'ಸಮಾನತೆ' ಎನಿಸಲಾರದು. ಈಗಿನ ಸಮಾಜದಲ್ಲಿ ಬಡಿದಾಡುತ್ತಿರುವ ಹೆಣ್ಣು ಸಮಾನತೆಯೇ ಮುಖವಾಡವನ್ನು ಧರಿಸಿ, ತೊಡುವ ಬಟ್ಟೆಯಿಂದ ಆರಂಭಿಸಿ, ನಡೆಯುವ ರೀತಿ, ಗಂಡಸಿನಂತೆ ಅನುಕರಣೆ-ಅಂಧಾನುಕರಣೆ.

ಹಿಂದೆ ಮೂಲ ದ್ರಾವಿಡರಲ್ಲಿ ಗುಹೆಗಳಲ್ಲಿ ವಾಸಿಸಬೇಕಾದಲ್ಲಿ ನೈಸರ್ಗಿಕವಾಗಿ 'ಮಗು'ವಿನ ಲಾಲನೆಪಾಲನೆಯಲ್ಲಿ ನಿರತ ಹೆಣ್ಣು ಹೇ ಗಂಡೇ ನೀನು ಆಹಾರ ಹುಡುಕಿಕೊಂಡು ಬಾ, ನಾನು ನಿನ್ನ ಮಗುವನ್ನು ರಮಿಸುತ್ತಾ ನಿನಗೆ ಆಹಾರ ತಯಾರಿಸುತ್ತೇನೆ. ಎಂದಾಗ ಗಂಡಸು 'ಆಗಲಿ ಹೆಣ್ಣೇ ಇಬ್ಬರದೂ ಅಷ್ಟೇ ಜವಾಬ್ದಾರಿ ಕೆಲಸ, ಸರಿಸಮವಾಗಿ ಹಂಚಿಕೊಂಡು ಮಾಡೋಣ' ಎಂದು ದುಡಿಯಲು ಹೊರಟಿರಬಹುದು. ಮೃದು ಮನಸ್ಸಿನ ಹೆಣ್ಣು ತನ್ನ ಕಾರ್ಯಗಳನ್ನೂ ಚೆಕ್ಕನೆ ಗುಹೆಯಲ್ಲಿ ಕುಳಿತು ನೆರವೇರಿಸಿ ಹೊರಗೆ ಮಳೆಗಾಳಿಗೆ ಮೈಯೊಡ್ಡಿ ಬರುವ ಗಂಡಸಿಗೆ ಸ್ವಲ್ಪ ಆರೈಕೆ ಶುಶ್ರೂಷೆಯಲ್ಲಿ ಕೃತಜ್ಞತೆ ತೋರಿಸಿರಬಹುದು. ಹೀಗಾಗಿ ಗಂಡಸು ಹೊರಗೆ ದುಡಿಯುವ ಹೆಣ್ಣು ಒಳಗೆ ದುಡಿಯುವ ರೀತಿ ಸಂಪ್ರದಾಯವಾಗಿ ಮುಂದುವರಿಯಿತು. ಈ ಸಂಪ್ರದಾಯದಲ್ಲಿ ಅಪವಾದ ಎನ್ನುವಂತೆ ಅಲ್ಲೊಂದು ಇಲ್ಲೊಂದು ಉದಾಹರಣೆ ಮಹಿಳೆಯರ ದುಡಿತಕ್ಕೆ ಸಿಗದೇ ಪರಿಸ್ಥಿತಿ ಅನುಗುಣವಾಗಿ ಗಂಡು ಮತ್ತು ಹೆಣ್ಣಿನ ಒಮ್ಮತದ ದುಡಿಮೆ ನಮಗೆ ಪೌರಾಣಿಕ, ಚಾರಿತ್ರಿಕ ಹಿನ್ನೆಲೆಗಳಲ್ಲಿ ದೊರೆಯುತ್ತವೆ. ಹೀಗಾಗಿ ಅಲ್ಲಿ ಸುಭದ್ರ ಜೀವನ ಮಟ್ಟ ಕಾಣಸಿಗುತ್ತವೆ. ಬರುಬರುತ್ತಾ ಜೀವನದಲ್ಲಿ ರೀತಿ ಬದಲಾಗುತ್ತ ಮನುಷ್ಯನ ಮಾನಸಿಕ ವೈಪರಿತ್ಯದ ಕಾರಣ, 'ಹೆಣ್ಣನ್ನು' ನೋಡುವ ದೃಷ್ಟಿ ಬದಲಾಯಿತು. ನಮ್ಮ ಭಾರತ ಪರಂಪರೆಯಲ್ಲಿ ಹೆಣ್ಣಿಗೆ ಇರಬೇಕಾದ ಹಾಗೂ ಹೆಣ್ಣನ್ನೇ ನೋಡಬೇಕಾದ ಮುಖ್ಯ ಗುಣಗಳನ್ನು ಪ್ರಚುರಪಡಿಸಲಾಗಿತ್ತು. 'ಕಾರ್ಯೇಷು ದಾಸಿ, ಕರುಣೇಷು ಮಂತ್ರಿ, ರೂಪೇಷು ಲಕ್ಷ್ಮಿ, ಕ್ಷಮಯಾಧರಿತ್ರಿ....' ಈ ಗುಣಗಳನ್ನು ಹೊಂದಿದ ಹೆಣ್ಣು ಕಾಣುವ ಹೆಣ್ಣಿಗೆ ಪೂಜ್ಯಳಾಗುತ್ತಿದ್ದಳು. ಸಮಾಜದ ಬದಲಾವಣೆಯೊಂದಿಗೆ ತನ್ನ ಗುಣಗಳನ್ನೇ ಮರೆತು ಹೆಣ್ಣು ಕೇವಲ 'ಆಕರ್ಷಣೆ'ಯತ್ತ ತನ್ನ ಒಲವು ಹೆಚ್ಚಿಸಿ ಅದನ್ನೇ ಮುಖ್ಯ ಗುಣವನ್ನಾಗಿ ಮಾರ್ಪಡಿಸಿಕೊಂಡಳು. ಪರದೇಶದಿಂದ ಬಂದವರು ಎಂದು ದೂರುವ ಬ್ರಿಟಿಷರನ್ನು ಮೀರಿಸುವಂತೆ ಹೆಣ್ಣನ್ನು ನೋಡುವ ದೃಷ್ಟಿ ನಮ್ಮ ಗಂಡಸರಲ್ಲಿ ಬದಲಾಯಿಸಿ, ಹೆಣ್ಣು ಕೇವಲ ಆಕರ್ಷಕ ವಸ್ತು, ಕಾಮದ ಗೊಂಬೆ ಎಂದು ಅವಳ ಮೇಲೆ ಅತ್ಯಾಚಾರಕ್ಕಿಳಿ

ಯಿತು. ಹೀಗಾಗಿ ಹೆಣ್ಣು ನಾನು 'ಹೆಣ್ಣು' 'ಅಬಲೆ' ಎಂದು ಒತ್ತಿ ಒತ್ತಿ ಹೇಳುತ್ತಾ, ಹಿಂದಿನ ಕಿತ್ತೂರುಚೆನ್ನಮ್ಮ, ಝಾನ್ಸಿರಾಣಿ, ಹಾಗೂ ಸಮಸ್ತ ಮಹಿಳಾ ವರ್ಗ ಎಷ್ಟು ಕೆಚ್ಚೆದೆಯಿಂದ ಬದುಕಿದ್ದು ಕೇವಲ ಕಥೆಯನ್ನಾಗಿ ಓದಿ ತಿಳಿದು, ಹೊರಬರಲು ಸಮಾಜದ ಬದಲಾದ ಪರಿಸರದಲ್ಲಿ ಹೆಣ್ಣು ಗಂಡೆಂಬ ಬೇರೆವರ್ಗಕ್ಕೆ ನಾಂದಿಯಾಯಿತು.

ವೃತ್ತಿ ಪರಿತು ವಿದ್ಯಾವಂತರು ಎಂಬ ಹಣಪಟ್ಟಿಯೊಡನೆ ಹೊರಬರುವ ಗಂಡಸೇ ಅರ್ಥಿಕ ತೊಂದರೆ ಎದುರಿಸ ತೊಡಗಿದಂತೆ ಹೆಣ್ಣು ಹೊರಗೆ ದುಡಿಯುವ ಸ್ಥಿತಿ ಅನಿವಾರ್ಯವಾಗುತ್ತ ನಡೆದಿದೆ. ಹೀಗಾಗಿ ಒಳಗೂ ದುಡಿನೂ ಹೊರಗೂ ದುಡಿಯಲು ಬರುವ ಹೆಣ್ಣು ತನ್ನ ಬಗ್ಗೆ ಹೆಚ್ಚಿನ ಸಹಾನುಭೂತಿ ಕಳಕಳಿಯನ್ನು ಬಯಸುತ್ತಾ ತನ್ನ ದೃಢತೆ ಹಾಗೂ ಆತ್ಮ ವಿಶ್ವಾಸವನ್ನು ಕಳೆದುಕೊಳ್ಳುತ್ತಿದ್ದಾಳೆ. ಗಂಡಸಿನ ಕಾಮದೃಷ್ಟಿಗೆ ಹೆದರಿ ನಾನು 'ಹೆಣ್ಣು' ಎಂದು ಅಳಕುತ್ತಿದ್ದಾಳೆ. ಹೀಗೆ ಸಮಾಜ ಅನಾರೋಗ್ಯದಿಂದ ಬಳಲುತ್ತಿದೆ. ಆರ್ಥಿಕ ಭದ್ರತೆಯಿಲ್ಲದ ಗಂಡು ಕೀಳರಿಮೆ ಬೆಳೆಯಿಸಿಕೊಳ್ಳುತ್ತ, ಹೆಣ್ಣಿನ ಹಿರಿಮೆಯನ್ನು ಹೇಗಾದರೂ ಕುಗ್ಗಿಸಬೇಕು ಎನ್ನುವ ಸುಪ್ತ ಬಯಕೆಗಳು ವಿಕೃತ ರೂಪತಾಳಿ ಅನಾಚಾರಕ್ಕೆ ತೊಡಗುತ್ತಿರುವದರಿಂದ 'ಶಿಕ್ಷಣ ರಂಗವಾಗಲಿ, ಎಲ್ಲ ಸ್ತರಗಳಲ್ಲಿಯೂ ಮೂಡಿನಿಂತ ಈ ಭಾವಾತಿರೇಕದಿಂದ ಸಮಾಜದಲ್ಲಿ ಸಮಾನತೆಯ ಕೂಗು ಹುಯಿಲೆಬ್ಬಿಸುತ್ತಿದೆ.

ಮಹಿಳಾ ಶಿಕ್ಷಣಕ್ಕೆ, ಇರುವ ಮೂಲ ಸಮಸ್ಯೆ ದೃಷ್ಟಿಕೋನ ಎಂದಾಯಿತು. ಎಲ್ಲ ರಂಗದಲ್ಲೂ ಮೂಸಿನೋಡುವ ಹುಚ್ಚು ಬಯಕೆಯಿಂದ ಎಲ್ಲ ರಂಗದಲ್ಲಿ ಮಹಿಳಾ ಪ್ರವೇಶ ಕಾಣುತ್ತೇವೆಯೇ ಹೊರತು ಪ್ರಗತಿ ಕಾಣುತ್ತಿಲ್ಲ.

ಸಾಹಿತ್ಯ ಕ್ಷೇತ್ರದಲ್ಲಿ ಈವರೆವಿಗೂ ಉನ್ನತ ಮಟ್ಟದ ವೈಚಾರಿಕವಾದ, ಭದ್ರ ಸಾಹಿತ್ಯ ಸೃಷ್ಟಿಕರ್ತ ಮಹಿಳೆ ದೊರೆತಿಲ್ಲ. ಕೇವಲ ಮನೆ, ಗಂಡು ಮತ್ತು ಹೆಣ್ಣು, ಪ್ರೇಮ-ಕಾಮಕ್ಕೆ ಅವಳ ಸಾಹಿತ್ಯ ಮೀಸಲಾಗಿದೆ. ಮುಂದುವರಿದ ಜನಾಂಗ ಎಂದು 'ಚಂದ್ರ'ನ ಮೇಲೆ ಪಾದಾರ್ಪಣೆ ಮಾಡಿದರೂ ವಿಜ್ಞಾನ ಜಗತ್ತಿನಲ್ಲಿ ಮಹಿಳಾ ಹೆಸರು ಅಲ್ಲೊಂದು ಇಲ್ಲೊಂದು ಗಂಡಸಿನ ಜೊತೆ 'ಕೂಲಿ' ಕೆಲಸದಲ್ಲಿ ಸರಿಸಮವಾಗಿ ಮನೆ ಕಟ್ಟುವಲ್ಲಿ ಹೊಲದ ಕಾರ್ಯದಲ್ಲಿ ದುಡಿಯುವ ಸ್ತ್ರೀ-ಜನಾಂಗದಲ್ಲಿ ಸಮಾನತೆಗಾಗಿ ಬಡಿದಾಟವಿಲ್ಲ. ಅಲ್ಲಿ ಕಾಯಕದ ವೈಶಿಷ್ಟ್ಯ ಅರಿತು ಒಮ್ಮತ ಭಾವವಿದೆ. ಅದೇ ಸುಶಿಕ್ಷಿತ ಜನಾಂಗದಲ್ಲಿ ಇಲ್ಲ. ಕಾರ್ಯ, ಕಾರಣಗಳ ವೈಶಿಷ್ಟ್ಯ ಮೈಗೂಡಿಸಿಕೊಂಡೇ 'ಸಮಸ್ಯೆ'ಯನ್ನು ಸರಳಗೊಳಿಸುವಲ್ಲಿ ಗಂಡು ಮತ್ತು ಹೆಣ್ಣು ಸಮಾಜ, ಸರಕಾರಗಳು ಸಂಪೂರ್ಣ ಜವಾಬ್ದಾರಿಯಿಂದ ಕಾರ್ಯ ನಿರ್ವಹಿಸಬೇಕು.

ಮಕ್ಕಳ ಸಾಹಿತ್ಯದಲ್ಲಿ ವೈವಿಧ್ಯತೆ

ಶಂ. ಗು. ಬಿರಾದಾರ

೧) ನಮಗಿಂದು ಬೇಕಾದ ಸಾಹಿತ್ಯ :

ಧರ್ಮ ಮತ ತತ್ವಗಳ ಪ್ರಚಾರಕ್ಕಾಗಿ, ಸಂಸ್ಕೃತಿ-ಸಂಸ್ಕಾರಗಳ ಪ್ರಸಾರಕ್ಕಾಗಿ, ಮಹಾ ವ್ಯಕ್ತಿಗಳ ಜೀವನ ದರ್ಶನಕ್ಕಾಗಿ, ವಿಜ್ಞಾನ-ಕಲೆಗಳ ಪ್ರದರ್ಶನಕ್ಕಾಗಿ, ಮನೋಲ್ಲಾಸಕ್ಕಾಗಿ ಹಾಗೂ ಬೌದ್ಧಿಕ ಸಂಘರ್ಷಕ್ಕಾಗಿ ಸಾಹಿತ್ಯ ಕಾರ್ಯ ನಿರಂತರ ನಡೆದೇ ಇದೆ. ಇದೂ ಒಂದು ಆರಾಧನೆ ಎನ್ನುವವರಿದ್ದಾರೆ. ಅರಣ್ಯರೋದನೆ ಎನ್ನುವವರು ಸಿಕ್ಕುತ್ತಾರೆ. ಇದು ಅವರವರ ದೃಷ್ಟಿಕೋನ. ಈ ಬಗೆಗೆ ಚರ್ಚಿಸುವುದರಲ್ಲಿ ಅರ್ಥವಿಲ್ಲ. ಸಾಹಿತ್ಯ ಕಾರ್ಯವೂ ಒಂದು ತಪಸ್ಸು. ನಿರಂತರ ಸಾಧನೆಯಿಂದ ಸಿದ್ಧಿಯ ಶ್ರೀಗಿರಿಯನ್ನು ತಲುಪಲು ಸಾಧ್ಯ. ಚಿರಂತನ ಚಿಂತನೆಯಿಂದ ಪರಿಪಕ್ವಗೊಂಡ ಹೃದಯದ ಹೂನುಡಿಗಳೇ ಸಾಹಿತ್ಯ ಸೌಗಂಧವನ್ನು ಪಸರಿಸುತ್ತವೆ. ಆ ಸುವಾಸನೆಯ ಸುಖವನ್ನು ಅನುಭವಿಸಬಲ್ಲ ರಸಿಕರೇ ಧನ್ಯರು.

ಸಾಹಿತ್ಯ ನಿಂತ ನೀರಲ್ಲ. ಹರಿವ ಹೆದ್ದೊರೆ. ಕಾಲಕ್ಕೆ ತಕ್ಕಂತೆ ಸಾಹಿತ್ಯ ನಿರ್ಮಾಣವಾಗಬೇಕೆಂಬುದನ್ನು ಒಪ್ಪಬಹುದಾದರೂ ಅವನತಿಯತ್ತ ಹೆಜ್ಜೆ ಹಾಕುತ್ತಿರುವ ಜನಜೀವನಕ್ಕೆ ಉದ್ದಾತ್ತ ಮಾರ್ಗದರ್ಶನ ಮಾಡಬಲ್ಲ ಶಕ್ತಿಪಡೆದಿರಬೇಕು. ಕಲುಷಿತ ವಾತಾವರಣವನ್ನೇ ಉಸಿರಾಡಿಸದೇ ಹೊಸ ಅಲೆಗಳನ್ನು ಸೃಷ್ಟಿಸಬೇಕು. ಮಲೆತು ನಿಂತುದನ್ನು ಹೊಡೆದೊಡಿಸಬೇಕು. ಈ ಹೊಸತನದ ಹಂಬಲದಲ್ಲಿ ಹಳೆಯದೆಲ್ಲವನ್ನೂ ಕೊಚ್ಚಿ ಹಾಕುವ ಹುಚ್ಚುತನ ತರವಲ್ಲ. ಸಂಪ್ರದಾಯದಲ್ಲಿ ನಿರ್ಮಲವಾದುದನ್ನು ಅಳಿಸಿಹಾಕುವ, ಬದುಕಿಗೆ ಪೋಷಕವಾದುದನ್ನು ಪೋಷಿಸಿ, ಶೋಷಣೆಗೆಡೆ ಮಾಡುವ ಗೊಡ್ಡು ಕಂದಾಚಾರಗಳನ್ನು ನಶಿಸಿ ಹಾಕುವ ದೃಷ್ಟಿ ಬೆಳೆಯಬೇಕು. ಇಂದು ಹೀಗಾಗದೆ, ಹಳೆಯದೆಲ್ಲವೂ ಜೊಳ್ಳು ನಿರುಪಯುಕ್ತ ಎನ್ನುವ ಭಾವನೆ ಯುವಕರಿಗೆ, ಹೊಸದೆಲ್ಲವು ಅಶ್ಲೀಲ, ಅಪಕ್ವ ಎನ್ನುವ ವಿಚಾರ ಹಳಬರಿಗೆ. ಈ ಇಬ್ಬಗೆಯ ದೃಷ್ಟಿಕೋನದಿಂದ ಹಳತು-ಹೊಸದರ ನಡುವೆ ಆಳವಾದ ಕಂದಕವು ನಿರ್ಮಾಣವಾಗುತ್ತಲಿದೆ. ಇದು ನಮ್ಮ ಭವಿಷ್ಯ ಜೀವನಕ್ಕೆ ಮಾರಕ. ಈ ಸೋಂಕು ಎಳೆಯರಿಗೆ ತಟ್ಟದಂತೆ ನೋಡಿಕೊಳ್ಳಬೇಕು. ಹಳೆ-ಹೊಸದರ ಮಧುರಬಾಂಧವ್ಯಕ್ಕೆ ಸಾಹಿತಿಗಳು ಸಿದ್ಧರಾಗಬೇಕು. ಮಕ್ಕಳಿಗೆ ಎಳೆತನದಲ್ಲಿಯೇ ಒಳ್ಳೆಯ ಸಾಹಿತ್ಯವನ್ನು ಒದಗಿಸಿದರೆ ಭವಿಷ್ಯ ಜೀವನ ಉಜ್ವಲವಾದೀತು. ಸಾಹಿತ್ಯ ಎಳೆಯರ ಮೇಲೆ ಬೀರು

ವಷ್ಟು ಪ್ರಭಾವ ಹಿರಿಯರ ಮೇಲೆ ಬೀರಲಾರದು. ಅವರ ಹೃದಯವನ್ನು ಅರಳಿಸಿ, ವೈಚಾರಿಕ ಪ್ರಜ್ಞೆಯನ್ನು ಜಾಗೃತಗೊಳಿಸಿ, ಮಾನವೀಯ ಸದ್ಭಾವನೆಯನ್ನು ಉದ್ದೀಪನಗೊಳಿಸಲು ಸಾಹಿತ್ಯದಿಂದ ಸಾಧ್ಯ.

೨) ವಯೋಮಾನಕ್ಕೆ ತಕ್ಕ ಸಾಹಿತ್ಯ :

ಮಕ್ಕಳಿಗೆ ಬೇಕಾದ ಸಾಹಿತ್ಯ ರಚನೆ ತಿಳಿದುಕೊಂಡಷ್ಟು ಸುಲಭದ ಮಾತೇನಲ್ಲ. ಅದು ಕಣ್ಣಿಗೆ ಎಷ್ಟು ಹಗುರೋ ರಚನೆ ಅಷ್ಟೇ ಕಷ್ಟಕರವಾದುದು. ಅಂದವಾದ ಮುದ್ರಣ, ಹಾಲು ಹಾಳೆ, ದಪ್ಪ ಅಕ್ಷರಗಳು, ಆಕರ್ಷಿತ ಚಿತ್ರ, ಇಷ್ಟಿದ್ದರೆ ಸಾಲದು. ಆಯ್ದ ವಿಷಯ ಬಳಸುವ ಭಾಷೆ, ವಿವರಿಸುವ ರೀತಿ, ಇವು ಕೂಡ ಮಹತ್ವದವು. ಭಾಷೆ ಪ್ರೌಢವಾಗಿದ್ದು ಅದನ್ನು ದಪ್ಪ ಅಕ್ಷರಗಳಲ್ಲಿ ಮುದ್ರಿಸಿದರೆ ಅದು ಮಕ್ಕಳ ಸಾಹಿತ್ಯವೆನಿಸಿಕೊಳ್ಳಲಾರದು. ಅಂತೆಯೇ ಬಾಲಭಾಷೆ ಬಳಸಿಯೂ ಆಕರ್ಷಕವಲ್ಲದ ಚಿಕ್ಕ ಅಕ್ಷರಗಳ ಮುದ್ರಣವಿದ್ದರೆ, ಅದು ಫಲಕಾರಿಯಾಗದು. ಸುಲಭಭಾಷೆ ಯೋಗ್ಯ ಚಿತ್ರಗಳು, ದಪ್ಪ ಅಕ್ಷರಗಳ ಮುದ್ರಣ ಇವೆಲ್ಲವುಗಳನ್ನೊಳಗೊಂಡಿದ್ದರೂ ವಿಷಯ ಮಕ್ಕಳ ಮಟ್ಟಕ್ಕೆ ನಿಲುಕದಂತಿದ್ದರೆ, ಅದೂ ಕೂಡ ನಿರುಪಯುಕ್ತ, ಇವುಗಳನ್ನೆಲ್ಲಾ ಲಕ್ಷದಲ್ಲಿರಿಸಿ ಮಕ್ಕಳ ವಯೋಮಾನ, ಬುದ್ಧಿಗಳಿಗೆ ತಕ್ಕ ಸಾಹಿತ್ಯ ಕೃತಿಗಳನ್ನು ನಿರ್ಮಿಸಬೇಕು.

ಯಾವ ಮಕ್ಕಳಿಗೆ ಎಂಥ ಸಾಹಿತ್ಯ ಬೇಕು? ಎಂಬ ಬಗೆಗೆ ಇಲ್ಲ ವಿವರಿಸಬೇಕಾಗಿಲ್ಲವಾದರೂ ಸಾಮಾನ್ಯ ನೋಟವನ್ನು ಕಣ್ಮುಂದೆ ಇರಿಸಬೇಕಾದುದು ಸೂಕ್ತ.

ಮೂರರಿಂದ ಐದು ವಯೋಮಿತಿಯ ಶಿಶುಗಳಿಗೆ ಆಕರ್ಷಿತ ಚಿತ್ರಗಳೇ ಸಾಹಿತ್ಯವನ್ನು ಒದಗಿಸಬಲ್ಲವು. ಬಣ್ಣ-ಬಣ್ಣದ ಚಿತ್ರಪಟಗಳ ಮೂಲಕ ಕಥೆ ಹಾಡು ಹೇಳಿಕೊಡಬೇಕು. ಪರಿಸರದಲ್ಲಿರುವ ಪಶುಪಕ್ಷಿಗಳ ಚಿತ್ರಗಳು, ವಾಹನಗಳ ಪುಟ್ಟ ಪುಟ್ಟ ಪದಗಳ ಚಿಕ್ಕ ಸಾಲಿನ ಪ್ರಾಸಬದ್ಧ ಹಾಡುಗಳನ್ನು ಹೇಳಿಕೊಡಬೇಕು, "ಅಪ್ಪಾ ಬಂದಾ, ಕಾಯಿ ತಂದಾ"—ಎಂಬ ಹಾಡುಗಳು ಅವರಿಗೆ ತುಂಬ ಹಿಡಿಸುತ್ತವೆ. ಗುಬ್ಬಿ, ನಾಯಿ, ಬೆಕ್ಕು ಮುಂತಾದವುಗಳ ಬಗೆಗೆ ಪುಟ್ಟ ಕಥೆ ಕಟ್ಟಿಹೇಳಬೇಕು. ಇಲ್ಲಿ ಅದು ಮುಖ್ಯವಲ್ಲ. ಮಕ್ಕಳ ಅಭಿರುಚಿ ಆಸಕ್ತಿಯನ್ನು ಕೆರಳಿಸಿ ಅವರಿಗೆ ಕೇಳುವ ತಿಳಿಯುವ ಹಂಬಲವನ್ನು ಹೆಚ್ಚಿಸುವಲ್ಲಿ ಗಮನಕೊಡಬೇಕು.

ಐದರಿಂದ ಒಂಭತ್ತು ವರ್ಷದ ಎಳೆಯರು ಅಕ್ಷರಜ್ಞಾನವನ್ನೂ ಪಡೆಯಲು ಸಮರ್ಥರಾಗಿರುತ್ತಾರೆ. ಹಲವಾರು ಪದಗಳನ್ನು ಬಳಸಲು ಕಲಿತಿರುತ್ತಾರೆ. ಇವರಿಗೆ ಮನೋರಂಜಕ, ನೀತಿಬೋಧಕ ಕಥೆಗಳು ಸಾಭಿನಯ ಗೀತಗಳು ಅವಶ್ಯಕ.

ಬಣ್ಣದ ತಗಡಿನ ತುತ್ತೂರಿ
ಕಾಸಿಗೆ ಕೊಂಡನು ಕಸ್ತೂರಿ

ಎಂದು ಮಕ್ಕಳು ಹಾಡಿ ಕುಣಿಯುವದಲ್ಲದೆ "ಜಂಭದ ಕೋಳಿಗೆ ಗೋಳಾಯ್ತು" ಎಂಬ ನೀತಿಯನ್ನು ಪರ್ಯಾಯವಾಗಿ ಕಲಿಸಿಕೊಡಬೇಕು.

ಒಂಬತ್ತರಿಂದ ಹನ್ನೆರಡು ವರ್ಷದ ಮಕ್ಕಳು ಸುತ್ತಲಿನ ಜನರೊಡನೆ ಸಂಬಂಧ ಹೊಂದಿದವರಾಗಿರುತ್ತಾರೆ. ಇವರು ಸಾಮಾಜಿಕ ಜೀವನದಲ್ಲಿ ನಡೆದುಕೊಳ್ಳಬೇಕಾದ ರೀತಿ ನೀತಿಗಳನ್ನು ಸ್ಥೂಲವಾಗಿ ಅರಿತುಕೊಳ್ಳಬೇಕಾಗುತ್ತದೆ. ಈ ಕಾಲಾವಧಿಯಲ್ಲಿ ಮಕ್ಕಳಿಗೆ ಮನೋರಂಜನೆಯ ಜೊತೆಗೆ ಕಥೆ, ಕವಿತೆಗಳಲ್ಲಿ ಅಡಕವಾದ ತತ್ವಗಳನ್ನು ಸ್ಥೂಲವಾಗಿ ತಿಳಿಸಿಕೊಡಬೇಕು. ಶಿಸ್ತು, ಸಹಕಾರ ಸಹಜೀವನಗಳ ಕಲ್ಪನೆ ಬರುವಂತಹ ದಯೆ, ಪ್ರೀತಿ, ಕರುಣೆಗಳುದಿಸುವಂತಹ ಕಥೆ, ಕವನ, ಏಕಾಂಕಗಳ ಸಾಹಿತ್ಯ ಕೃತಿಗಳನ್ನು ಒದಗಿಸಬೇಕು. ಮನೆ, ತಾಯಿ-ತಂದೆಗಳ ಮೇಲಣ ವಾತ್ಸಲ್ಯವನ್ನು ಅಧಿಕಗೊಳಿಸಬೇಕು.

ತಾಯಿಯು ಅಪ್ಪುಗೆಯೆಂದರೆ ನನಗೆ
ತಾವರೆ ತೊಟ್ಟಿಲೊಳಿಟ್ಟಂತೆ
ಪ್ರೀತಿಯ ನೋಟವ ಬೀರುತ ಹಾಡಲು
ಬಾನಲಿ ತೇಲಿಸಿ ಬಿಟ್ಟಂತೆ

ಹೀಗೆ ಅವರದೇ ಆದ ಭಾವನೆಗಳನ್ನು ಉದ್ರೇಕಿಸಿ-ಬಯಕೆಗಳ ಬಾಯ್ದೆರೆದು ಒಲವನ್ನು ಚೆಲವನ್ನು ಒಡಮೂಡಿಸಬೇಕು. ಲವ-ಕುಶ, ಅಭಿಮನ್ಯು ಹನುಮ ಭೀಮನಂತಹ ವೀರ-ಧೀರರ ಸಾಹಸ ಪ್ರಸಂಗಗಳು, ಧ್ರುವ-ಏಕಲವ್ಯರಂತಹ ಬಾಲಕರ ಭಕ್ತಿ-ನಿಷ್ಠೆಗಳನ್ನು ಪ್ರತಿಪಾದಿಸುವ ಕಥೆಗಳು ಮಕ್ಕಳ ಮನಸ್ಸನ್ನು ಸೆರೆಹಿಡಿಯುತ್ತವೆ. ಈ ಬಗೆಯ ಕಥೆಗಳಿಂದ ಮಕ್ಕಳಲ್ಲಿ ದುಷ್ಟವ್ಯಕ್ತಿಗಳ ಬಗೆಗೆ ತಿರಸ್ಕಾರ, ಸತ್ಯಶೀಲರ ಬಗೆಗೆ ಅಭಿಮಾನ ತಾನಾಗಿಯೇ ಮೂಡುವುದು.

ಹನ್ನೆರಡರಿಂದ ಹದಿನಾಲ್ಕು ವಯಸ್ಸಿನ ಬಾಲಕರು ಸ್ಪಷ್ಟ ವಿಚಾರ, ಅರ್ಥಪೂರ್ಣ, ಭಾವಪೂರ್ಣ ಬರವಣಿಗೆಗೆ ಸಮರ್ಥರಾಗಿರುತ್ತಾರೆ. ಉದಾತ್ತ ಧ್ಯೇಯ, ಆದರ್ಶಗಳು ಒಡಮೂಡುವಂತೆ ನಾಡು-ನುಡಿ ದೇಶದ ಬಗೆಗೆ ಅಭಿಮಾನ ಹೆಚ್ಚುವಂತಹ ಕೆಚ್ಚು ಮೂಡುವಂತಹ ಸಾಹಿತ್ಯ ಒದಗಿಸಬೇಕು. "ಭಾರತವನುಳಿಯುವ ನನಗೆ ಜೀವನವೆತ್ತು" ಎಂಬ ದೇಶಾಭಿಮಾನದ ಕಿಡಿಯನ್ನು ಪ್ರಜ್ವಲಿಸುವ "ಗಂಡುಸಾದರೆ ನಿನ್ನ ಬಲಿಕೊಡುವೆಯೇನು ?" ಎಂದು ತ್ಯಾಗದ ಪಾಠವನ್ನು ಬಿಂಬಿಸುವ ಕವಿತೆಗಳು ಅವಶ್ಯಕ.

ನಾವು ಎಳೆಯರು ನಾವು ಗೆಳೆಯರು ಹೃದಯ ಹೂವಿನ ಹಂದರ
ನಾಳೆ ನಾವೇ ನಾಡ ಹಿರಿಯರು ನಮ್ಮ ಕನಸದೇ ಸುಂದರ

ಎಂಬ ಸುಂದರ ಕನಸುಕಾಣುವ ಹಂಬಲವನ್ನು ಒಡಮೂಡಿಸುವ ಕವಿತೆಗಳು ಬೇಕು. ಜಾತಿ-ಮತ-ಪಂಥಗಳ ಬಗೆಗಿದ್ದ ಮೇಲು-ಕೀಳು ಭಾವನೆಯನ್ನು ಬಡವ ಬಲ್ಲಿದರೆಂಬ ತಾರತಮ್ಯ ಭಾವವನ್ನು ಹೊಡೆದು ಹಾಕುವ ಸಮತೆ ಸಮಾನತೆಗಳನ್ನು ಎತ್ತಿ ಹಿಡಿಯುವ ಕಾರ್ಯ ಗೌರವವನ್ನು ಹೆಚ್ಚಿಸುವ ಸ್ನೇಹ ಸಹಕಾರಗಳನ್ನು ವರ್ಧಿಸುವ ಸಾಹಿತ್ಯ ನಿರ್ಮಾಣವಾಗಬೇಕು.

ಪರಕೀಯರ ಸ್ವೇಚ್ಛಾ ಜೀವನವನ್ನು ಬಿಂಬಿಸುವ ಚಲನಚಿತ್ರಗಳು, ಅಶ್ಲೀಲ ಕತೆ-ಕಾದಂಬರಿಗಳು, ಅವಾಸ್ತವ ಘಟನೆಗಳನ್ನು ನಿರೂಪಿಸುವ ಪತ್ರಿಕೆಗಳು ಮಕ್ಕಳನ್ನು ಅಡ್ಡದಾರಿಗೆಳೆಯುತ್ತವೆ. ನಮ್ಮ ಮಕ್ಕಳು ಇವುಗಳಿಂದ ಮುಕ್ತರಾಗಬೇಕು. ಒಳ್ಳೆಯ ಸಂಸ್ಕೃತಿ, ಉತ್ತಮ ಅಭಿರುಚಿಗಳನ್ನು ಬೆಳೆಯಿಸುವ, ಉದಾತ್ತ ಭಾವನೆಯನ್ನು ಉದ್ರೇಕಿಸುವ, ದೇಶಾಭಿಮಾನದ ಕಿಡಿಯನ್ನು ಹೊತ್ತಿಸುವ ಚಲನಚಿತ್ರಗಳು, ಸಾಹಿತ್ಯ ಕೃತಿಗಳು ನಿರ್ಮಾಣವಾಗಬೇಕು.

೩) ಸ್ವಾತಂತ್ರ್ಯದ ಒಳ-ಹೊರಗೆ

ಸ್ವಾತಂತ್ರ್ಯ ಪೂರ್ವದಲ್ಲಿ ಮಕ್ಕಳಿಗಾಗಿಯೇ ಸೃಷ್ಟಿಸಿದ ಸಾಹಿತ್ಯ ತೀರ ವಿರಳ. ಅಜ್ಜ-ಅಜ್ಜಿಯರಿಂದ ಕಥೆ-ಹಾಡು ಕೇಳಿ ಮಕ್ಕಳು ಹರ್ಷಪಡಬೇಕಿತ್ತು. ರಾಜ-ರಾಣಿಯರ ಕಥೆ, ಯಕ್ಷ-ಕಿನ್ನರರ ಕಥೆ, ರಾಮಾಯಣ-ಮಹಾಭಾರತದ ಕಥೆಗಳೊಂದಿಗೆ ಅರೇಬಿಯನ್ ನೈಟ್ಸ್, ಪಂಚತಂತ್ರ, ಇಸೋಪನ ನೀತಿ ಕಥೆಗಳನ್ನು ಹಿರಿಯರೊಂದಿಗೆ ಮಕ್ಕಳೂ ಓದಬೇಕಿತ್ತು. ಮಕ್ಕಳ ಆಸೆ-ಆಕಾಂಕ್ಷೆಗಳಿಗನುಗುಣವಾದ ಸಾಹಿತ್ಯ ರಚನೆಯಾಗುತ್ತಿರಲಿಲ್ಲ. "ಕಂದ"ದಂತಹ ಕೆಲವು ಪತ್ರಿಕೆಗಳು ಪ್ರಾರಂಭದ ಪ್ರಯತ್ನ ಮಾಡಿವೆ. ಸ್ವಾತಂತ್ರ್ಯ ಪೂರ್ವದಲ್ಲಿ ಹಾಗೂ ಸ್ವಾತಂತ್ರ್ಯಾನಂತರ ಮಕ್ಕಳ ಸಾಹಿತ್ಯವನ್ನು ಸೃಷ್ಟಿಸಿದವರಲ್ಲಿ "ಪುಸ್ತಕದಂಗಡಿ" ತೋರಿದ ಹೊಯ್ಸಳರು "ನಾಗರ ಹಾವೆ, ಹಾವೊಳು ಹೂವೆ" ಮೂಲಕ ಜೀವನ ಚಿರಿತ್ರೆಗಳನ್ನು ನೀಡಿದ ಸುಬೋಧ ರಾಮರಾಯರು—"ನೀತಿ ಚಿಂತಾಮಣಿ"ಯ ಎಂ. ಎಸ್. ಪುಟ್ಟಣ್ಣನವರು "ನಮ್ಮ ಪುಸ್ತಕ ಭಂಡಾರ" ಮೂಲಕ ಮಕ್ಕಳಿಗೆ ಶುಚಿಯಾದ ಸಾಹಿತ್ಯ ನೀಡಿದ ದೇವಡು ನರಸಿಂಹ ಶಾಸ್ತ್ರಿಗಳು "ಕನ್ನಡ ಪ್ರಪಂಚ ಪ್ರಕಾಶನ"ವನ್ನು ಕಟ್ಟಿ ವಿಪುಲ ಸಾಹಿತ್ಯ ರಾಶಿಯನ್ನು ನಿರ್ಮಿಸಿದ ಬಿ. ಶಂಕರಭಟ್ಟ ಸಹೋದರರು ಮುಖ್ಯರು. ಮಕ್ಕಳ ಸಾಹಿತ್ಯದ ಕೊರತೆಯನ್ನು ನೀಗಿಸಲು ಭಗೀರಥ ಪ್ರಯತ್ನ ನಡೆಸಿದವರಲ್ಲಿ ಎಂ. ಆರ್. ಸ್ವಾಮಿ, ಮೇಯಂಡಿ ಮಲ್ಲಾರಿ, ಜಿ. ಪಿ. ರಾಜರತ್ನಂ ಅವರನ್ನು ಸ್ಮರಿಸಬಹುದಾಗಿದೆ. "ಬೊಮ್ಮನ ಹಳ್ಳಿಯ ಕಿನ್ನರ ಜೋಗಿ"ಯಂತ ಜೀವಂತ ಕಥನ ಕವನವನ್ನು ನೀಡಿದ

ಕುವೆಂಪು ಅವರ ಕೊಡುಗೆ ಗಮನಾರ್ಹ "ಬಾಲ ಪ್ರಪಂಚ"ವೆಂಬ ಜ್ಞಾನ ಕೋಶವನ್ನು ನೀಡಿ ಮಹೋನ್ನತ ಕಾರ್ಯ ಮಾಡಿದ ಶಿವರಾಮ ಕಾರಂತರ ಸೇವೆ ಅನುಪಮ. ಹೀಗೆ ಹಿರಿಯರು ಅನೇಕ ರೀತಿಯಲ್ಲಿ ಕಾರ್ಯ ಮಾಡಿದ್ದರೂ ಮಕ್ಕಳ ವಯೋಮಾನ ಬುದ್ಧಿಗಳಿಗೆ ತಕ್ಕಂತೆ ಪರಿಣಾಮಕಾರಿಯಾದ ರೀತಿಯಲ್ಲಿ ಸಾಹಿತ್ಯ ರಚನೆಯಾಗಲಿಲ್ಲ. ಈ ಕಾಲದ ಕೃತಿಗಳು ಹೆಚ್ಚಾಗಿ ಬೆಳವಣಿಗೆ ಹೊಂದಿದ ಮಕ್ಕಳಿಗಾಗಿಯೇ ರಚಿತವಾದ ವಲ್ಲದೆ ಕಿರ ಎಳೆಯರಿಗೆ ನಿಲಕದಂತಾದದು. ಸರಳ ಭಾಷೆ, ಪುಟ್ಟ-ಪುಟ್ಟ ವಾಕ್ಯ, ಬಳಕೆಯ ಪದಗಳು, ಪರಿಸರದ ವಸ್ತು ಅಂದ ಮುದ್ರಣ, ಯೋಗ್ಯ ಚಿತ್ರಗಳುಳ್ಳ ಕೃತಿ ಗಳ ರಚನೆಗೆ ಸ್ವಾತಂತ್ರ್ಯಾನಂತರವೇ ಹೆಚ್ಚಿನ ಚಾಲನೆ ದೊರೆಯಿತು.

೪) ಸ್ವಾತಂತ್ರ್ಯಾನಂತರದ ಸಾಧನೆ

ಮಕ್ಕಳ ಸಾಹಿತ್ಯದಲ್ಲಿಯೂ ಕಥೆ, ಕವನ, ನಾಟಕ, ಜೀವನ ಚರಿತ್ರೆ ಪ್ರಬಂಧ ಮೊದಲಾದ ಪ್ರಕಾರಗಳು ಬಳಕೆಯಲ್ಲಿವೆ. ಕಥೆಗಳಲ್ಲಿ ಜಾನಪದದ ರಾಜ-ರಾಣಿಯರ ಕಥೆ, ಬೇತಾಳ-ರಾಕ್ಷಸರ ಕಥೆ, ಯಕ್ಷ-ಕಿನ್ನರರ ಕಥೆ, ಮಂತ್ರವಾದಿಗಳ ಕಥೆ, ಹೀಗೆ ಹಲವಾರು ವಿಧಗಳಿವೆ. ಪೌರಾಣಿಕ ಕಥೆಗಳು, ಪ್ರಾಣಿ-ಪಕ್ಷಿಗಳ ಕಥೆ, ಸಾಹಸ ಕಥೆ, ರಂಜನೀಯ ಕಥೆ, ಪ್ರವಾಸ ಕಥೆ, ನೀತಿಕಥೆ, ವೈಜ್ಞಾನಿಕ ಕಥೆ, ಮುಂತಾದ ಪ್ರಬೇಧ ಗಳನ್ನು ಕಾಣಬಹುದು. ಕವನಗಳಲ್ಲಿ ಜಾನಪದ ಗೀತೆಗಳು, ಭಾವಗೀತೆಗಳು, ಕಥನ ಕವನ, ಚುಟಕು ಇತ್ಯಾದಿ ವಿಭಾಗಗಳನ್ನು ಮಾಡಬಹುದಾಗಿದೆ. ಇದೇ ರೀತಿ ಜೀವನ ಚರಿತ್ರೆ ಪ್ರಬಂಧಗಳಲ್ಲಿಯೂ ವೈವಿಧ್ಯಮಯವನ್ನು ಕಾಣಬಹುದು.

ಜೀವನ ಚರಿತ್ರೆ

ಸ್ವಾತಂತ್ರ್ಯಾನಂತರ ಪ್ರಕಟವಾದ ಕೃತಿಗಳಲ್ಲಿ ಜೀವನ ಚರಿತ್ರೆಗಳೇ ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತಿವೆ. ಜೀವನ ಚರಿತ್ರೆಗಳನ್ನು ಸಾಕಷ್ಟು ಬರೆಯಿಸಿ ಪ್ರಕಟ ಪಡಿಸಿದ ಶ್ರೇಯಸ್ಸು ಐ. ಬಿ. ಎಚ್. ಪ್ರಕಾಶನ ಸಂಸ್ಥೆ ಹಾಗೂ ಭಾರತ-ಭಾರತಿ ಪ್ರಕಾಶನ ಸಂಸ್ಥೆಗಳಿಗೆ ಮುಖ್ಯವಾಗಿ ಸಲ್ಲುತ್ತದೆ. ಆದರೆ ಈ ಎಲ್ಲ ಪೊತ್ತಗೆಗಳ ವಿಷಯಗಳು ಮಕ್ಕಳಿಗೆ ನಿಲುಕುತ್ತವೆ ಎಂದು ಹೇಳಲಿಕ್ಕಾಗದು. ದಪ್ಪ ಅಕ್ಷರಗಳಲ್ಲಿ ಚಿತ್ರ ಹಾಕಿಸಿ ಮುದ್ರಿಸಿದ ಮಾತ್ರಕ್ಕೆ ಮಕ್ಕಳ ಸಾಹಿತ್ಯವಾಗಲಾರದು. ಅವರ ಬುದ್ಧಿಶಕ್ತಿಗೆ ಅಳವಡುವ ವಿಷಯಗಳನ್ನು ರಂಜನೀಯವಾಗಿ ಕಥೆಯ ರೂಪದಲ್ಲಿ ವಿವರಿ ಸಬೇಕಾಗುವದು. ಆದರೂ ಈ ಸಂಸ್ಥೆಗಳ ಸಾಹಸ ಮೆಚ್ಚುವಂತಹದು. ಬೆಳೆದ ಮಕ್ಕಳಿಗೆ ಇಲ್ಲವೆ ಪ್ರೌಢರಿಗಾದರೂ ಈ ಪೊತ್ತಗೆಗಳು ಉಪಯುಕ್ತವಾಗಬಲ್ಲವು. ಮಹಾತ್ಮರು, ರಾಷ್ಟ್ರ ನಾಯಕರು, ಧಾರ್ಮಿಕ ಪುರುಷರು, ಸಮಾಜ ಕಾರ್ಯಕರ್ತರು, ಐತಿಹಾಸಿಕ ವೀರಪುರುಷರು, ಬೆಳಗಿದ ಮಹಿಳಾ ಮಣಿಗಳು, ಸ್ವಾತಂತ್ರ್ಯ ವೀರರು

ತ್ಯಾಗ ಬಲಿದಾನಗಳು, ಕವಿ-ಕಲಾವಿದರು ಮೊದಲಾದವರ ಬಗೆಗೆ ಹಾಗು ತೀರ್ಥಕ್ಷೇತ್ರ, ಕಲಾಕ್ಷೇತ್ರಗಳ ವಿಷಯವಾಗಿ ಸಾವಿರಾರು ಸಂಖ್ಯೆಯಲ್ಲಿ ಮಕ್ಕಳ ಪುಸ್ತಕಗಳು ಪ್ರಕಟವಾಗಿವೆ. ಈ ಹಿಂದೆ ಸುಭೋಧ ರಾಮರಾಯರು ಪುರಾಣ ಪುರುಷರು, ಚಾರಿತ್ರಿಕ ಮಹಾಪುರುಷರು, ಆಧುನಿಕ ಪುರುಷರು, ವಿದೇಶಿಯ ಮಹಾಪುರುಷರು ಹೀಗೆ ೧೩೬ ಪುಟ್ಟ ಪುಟ್ಟ ಜೀವನ ಚರಿತ್ರೆ ಪುಸ್ತಕಗಳನ್ನು ಕೊಟ್ಟಿರುವುದು ಗಮನಾರ್ಹ.

ಕಥೆಗಳು

ಜೀವನ ಚರಿತ್ರೆಗಳ ತರುವಾಯ ಸಂಖ್ಯಾಮಾನದಿಂದ ಕಥೆಗಳು ಸ್ಥಾನವನ್ನು ಪಡೆಯುತ್ತಿವೆ. ಎಂ. ಎಸ್. ಪುಟ್ಟಣ್ಣನವರು "ನೀತಿ ಚಿಂತಾಮಣಿ" ಜಿ. ಪಿ. ರಾಜರತ್ನಂ ಅವರ "ಕಥಾಕೋಶ" ಮೊದಲಾದ ಪುಸ್ತಕಗಳೊಂದಿಗೆ ಮಕ್ಕಳ ಸಾಹಿತ್ಯ ಹುಲುಸಾಗಿ ಬೆಳೆಯಿತು. ಎಸ್. ಆರ್. ಕೃಷ್ಣಮೂರ್ತಿಯವರು ಕನ್ನಡಿಸಿದ ನಂದಗೋಪಾಲ ಭಾಗ ೧ ಭಾಗ ೨ ಹಂ ಪ. ನಾಗರಾಜಯ್ಯನವರು ಅನುವಾದಿಸಿದ "ಕೃಷ್ಣ ಮತ್ತು ಪಾಂಡವರು", ಕೆ. ಎಸ್. ಮೂರ್ತಿಯವರು ಕನ್ನಡಿಸಿದ "ಪುರಾಣದ ದಂತ ಕಥೆಗಳು" ಲಕ್ಷ್ಮೀಕೃಷ್ಣನವರ "ಚಿತ್ರ ಭಾರತ" ಎಚ್. ವೈ. ಸರಸ್ವತಮ್ಮನವರ "ಮಕ್ಕಳ ಭಾರತ" ವನಮಾಲಾ ಆಚಾರ ಅವರ ರಾಮಾಯಣ ಕಥೆ, ಬಿ. ಶ್ರೀ. ಪಾಂಡುರಂಗರಾಯರ "ಎಳೆಯರ ಭಾರತ" ಮೊದಲಾದ ಪೌರಾಣಿಕ ಕಥೆಗಳು ಸಂದರ್ಭೋಚಿತ ಬಣ್ಣದ ಚಿತ್ರಗಳಿಂದ ಆಕರ್ಷಕವಾಗಿವೆ. ಸೂ. ಸುಬ್ರಮಣ್ಯಂ ಅವರು ಕನ್ನಡಿಸಿದ "ದೇವತೆಗಳು ಮತ್ತು ರಾಕ್ಷಸರು" ರಾಜೇಂದ್ರ ಅವಸ್ಥಿಯವರ "ಸ್ವರ್ಣಹಂಸಗಳು, ಇತರ ಕಥೆಗಳು" ಕೆ. ಎಸ್. ನರಸಿಂಹಸ್ವಾಮಿಯವರು ಕನ್ನಡಿಸಿದ "ರಾಣಿಯ ಗಿಳಿ ಮತ್ತು ರಾಜನ ಮಗ" ಹಾಗು "ಮಾಯಾ ಶಂಖ ಮತ್ತು ಇತರ ಕಥೆಗಳು" ಮೊದಲಾದ ಜಾನಪದ ಅದ್ಭುತರಮ್ಯ ಕಥೆಗಳು ಮಕ್ಕಳ ಮನವನ್ನು ರಂಜಿಸುತ್ತವೆ. ಈ ದಿಸೆಯಲ್ಲಿ ಇಂಡಿಯಾ ಬುಕ್‌ಹೌಸ್ ದವರ ಸಾಧನೆ ಹಿರಿದು. ಕೆ. ಸಂಪದ್ಗಿರಿರಾವ್ ಅವರ "ಸ್ವರಾಜ್ಯ" ಕೃತಿಗಳಂತಹ ಸ್ವಾತಂತ್ರ್ಯ ಹೋರಾಟದ ಚಿತ್ರಣವನ್ನು ಚಿತ್ರಿಸುವ ಕೃತಿಗಳು ತೀರ ಕಡಿಮೆ. ಮಾದೇವ ಮಿತ್ರರ "ಮಾಡಿ ಮಡಿದವರು" ಕೃತಿಯಲ್ಲಿ ಸ್ವಾತಂತ್ರ್ಯಕ್ಕಾಗಿ ತ್ಯಾಗ ಬಲಿದಾನಮಾಡಿದವರ ಕಥೆಗಳಿವೆ. ಅನುಪಮಾ ನಿರಂಜನರ "ದಿನಕ್ಕೊಂದು ಕಥೆ" ನಮ್ಮ ದೇಶದ ಪುರಾಣ ಇತಿಹಾಸದ ಹಾಗು ಪಂಚತಂತ್ರದೊಳಗಿನ ಆಯ್ದ ಕಥೆಗಳು ಪೂರ್ವ-ಪಶ್ಚಿಮ ರಾಷ್ಟ್ರಗಳ ಕಥೆಗಳನ್ನೊಳಗೊಂಡಿದೆ. ಜಿ. ಪಿ. ರಾಜರತ್ನಂ ಅವರ ಕೈಲಾಸನ ಕಥೆಗಳು, ಜಯಲಕ್ಷ್ಮಿ ಶ್ರೀನಿವಾಸ್‌ರವರ "ಮಿಠಾಯಿ" ನೀತಿ, ಶಿಸ್ತು, ಸದ್ವರ್ತನೆಯನ್ನು ಬಿಂಬಿಸಲು ಸಮರ್ಥವಾಗಿವೆ. ಪ್ರಾಣಿ ಪಕ್ಷಿಗಳ ಕಥೆಗಳಿಂದ ರೀತಿ, ನೀತಿಗಳನ್ನು ಕಲಿಸಲು ಸಹಾಯಕವಾದ ಸಿಸು ಸಂಗಮೇಶರ "ನರಿಯ ಫಜೀತಿ" "ಯಾರು ಜಾಣರು" ಮೊದಲಾದ ಕೃತಿಗಳು ಉಪಯುಕ್ತವಾಗಿವೆ. ವೈಜ್ಞಾ

ನಿಕ ಕಥೆಗಳಲ್ಲಿ ಶಶಿಕುಮಾರರ "ಚಂದ್ರನ ಮೇಲೆ ಇಳಿದರು" ಮಾದೇವ ಮಿತ್ರರ "ಅ ಹೆಜ್ಜೆಗಳು" ಹಾಗು "ಮಂಗಳ ಲೋಕದ ಅಂಗಳಕೆ" ಪ. ವಿ. ಚಂದ್ರಶೇಖರ ಅವರ "ಇರುವೆ ಕಥೆ" ಶಿಸು ಸಂಗಮೇಶರ "ನನ್ನ ಮನೆ" ಎನ್. ಪ್ರಹ್ಲಾದರಾವ್ ಅವರ "ಮಿಂಚುಳ್ಳಿ" ಮೊದಲಾದವುಗಳನ್ನು ಹೆಸರಿಸಬಹುದಾಗಿದೆ. ಕಾದಂಬರಿ ಮತ್ತು ನೀಳ್ಗತೆಗಳಲ್ಲಿ ನಿರುಪಮಾ ಅವರ "ಅಮೃತ ಕಲಶ" ದು. ನಿಂ. ಬೆಳಗಲಿ ಅವರ "ಬದುಕುವ ಬಯಕೆ" ಕೃತಿಗಳನ್ನು ಹೆಸರಿಸಬಹುದಾಗಿದೆ.

ಕವಿತೆಗಳು

ಮಕ್ಕಳು ಹಾಡಿ ತಣಿಯಲು ಯೋಗ್ಯ ಕವನ ಸಂಕಲನಗಳು ಬಂದಿಲ್ಲವೆಂದು ಕೆಲವರು ಹೇಳಿದ್ದಾರೆ. ಆದರೆ ಉತ್ತರ ಕರ್ನಾಟಕದಲ್ಲಿ ಈ ಬಗೆಗೆ ವಿಶೇಷ ಕಾರ್ಯವಾದುದನ್ನು ಅವರು ಗಮನಿಸಿದ ಹಾಗಿಲ್ಲ. ಗುರುಪಾದಸ್ವಾಮಿ ಅವರ "ಹೂದೋಟ" "ಹಾಲಿನ ಗಿಂಡಿ" ಶಶಿಕುಮಾರ ಅವರ "ನಾವು ಗೆಳೆಯರು" ಮತ್ತು "ಮಿನುಗುತಾರೆ" ಶಂ. ಗು. ಬಿರಾದಾರ ಅವರ "ನನ್ನ ಹಾಡು," "ಕಾರಂಜಿ" ಹಾಗು "ಮಂಗ್ಯಾ ಮಂಗ್ಯಾ ಕಿಸ್ ಕಿಸ್" ಉಳುವೀಶರ "ದೊಂಬವ್ವ ಹಾಗು ಮಕ್ಕಳ ಮಂದಿರ" ಪರಶುರಾಮ ಚಿತ್ರಗಾರರ "ನಾವು ಭಾರತೀಯರು" "ಪತಂಗ" "ಬಂಬೈ ಮಿಠಾಯಿ ಹೊಸಮನಿ ಸಂಗಮೇಶ ಅವರ "ಜೋಲಬಗರಿ" ಗಾಂಧಿಗೀತೆಗಳು, ಎ. ಕೆ. ರಾಮೇಶ್ವರ ಅವರ "ನಂಧಿ ಕೋಲು", "ವಸಂತಬಂದ" ಸತ್ಯಾರ್ಥಿಯವರ "ಮಕ್ಕಳ ಮಂದಿರ", ಪಾ. ಭೀ. ಪಾಟೀಲ ಅವರ "ಅಮ್ಮ ಹಾಡು ಹೇಳು" ಮತ್ತು "ಹಾದಿಯ ಹೂವು", ಗಿರಿರಾಜ ಹೊಸಮಾಯವರ "ನನ್ನದು ಕನ್ನಡನಾಡು" ಸಿದ್ದಯ್ಯ ಪುರಾಣಿಕರ "ತುಪ್ಪಾರೊಟ್ಟಿ, ಗೇ, ಗೇ" "ಗಿಲ್‌ಗಿಲ್ ಗಿಲಗಚ್ಚಿ" ಗುರುರಾಜ ಬೆಣಕಲ್ ಅವರ 'ಪುಟ್ಟನ ಕನಸು" ಬಿ.ಶೇಖರಪ್ಪನವರ ಪುಗ್ಗಾ, ಯು.ಬಿ.ಫಕೀರಗೌಡರು ಸಂಪಾದಿಸಿದ "ಮಕ್ಕಳ ಮಲ್ಲಿಗೆ" ಹಾಗು ಟಿ.ಚಂದ್ರರಾಜಂಶೆಟ್ಟಿಯವರ "ಮಕ್ಕಳ ಮಲ್ಲಿಗೆ", ನಾರಾಯಣ ಕಠಾರೆ ಅವರು ಸಂಪಾದಿಸಿದ "ಶಿಶುಭಾರತಿ" ಹೀಗೆ ನೂರಾರು ಕವನ ಸಂಕಲನಗಳು ಸಂದರ್ಭೋಚಿತ ಚಿತ್ರಗಳೊಂದಿಗೆ ಪ್ರಕಟವಾಗಿವೆ. ಸರೋಜಿನಿ ಮಹಿಷಿಯವರ "ನವಿಲು ಇಂಚರ" "ಸ್ವಾತಂತ್ರ್ಯ ಕಹಳೆ" ಹಾಗು ಮುಳ್ಳುಗುಲಾಬಿ"ಗಳು ಕೂಡ ಚೆನ್ನಾಗಿವೆ. ಪ. ಸೀತಾರಾಮಭಟ್ಟ, ಬಿ. ಎ. ಸನದಿ, ಈಶ್ವರ ಕಮ್ಮಾರ, ಅಣ್ಣಾರಾವ ಸಾಲಿಮನಿ ಅವರು ಮಕ್ಕಳಿಗೆ ಶುಚಿ ರುಚಿಯಾದ ಪುಸ್ತಕಗಳನ್ನು ನೀಡಿವಾರೆ. ಆದರೆ ಮಕ್ಕಳಿಗಾಗಿ ಕಥನ ಕವನಗಳ ಕೊರತೆ ಎದ್ದು ಕಾಣುತ್ತದೆ.

ಪ್ರವಾಸ ಕಥನ ನಾಟಕ ಮುಂತಾದವು:

ಪ್ರವಾಸ ಕಥನ ಹಾಗು ಪ್ರಪಂಚ ಪರಿಚಯ ಸಾಹಿತ್ಯ ಕೃತಿಗಳ ಬಗೆಗೆ ಹೇಳಿಕೊಳ್ಳುವಂತಹ ಕಾರ್ಯವಾಗಿರದಿದ್ದರೂ ಪ್ರಕಟವಾದ ಹಲವಾರು ಕೃತಿಗಳು ತೃಪ್ತಿ

ಯನ್ನು ನೀಡುತ್ತಿವೆ. ರಾಜ್ಯ ಶಿಕ್ಷಣ ಸಂಶೋಧನ ಇಲಾಖೆಯ ಆಶ್ರಯದಲ್ಲಿ "ನನ್ನ ಮನೆ" ಮಾಲೆಯ ಪ್ರಕಟನೆಗಳು ದೇಶದ ಹಲವಾರು ರಾಜ್ಯಗಳ ಪರಿಚಯ ಮಾಡಿ ಕೊಡಲು ಸಮರ್ಥವಾಗಿವೆ. ಸಿಸುಸಂಗಮೇಶ ಅವರ "ಜಪಾನದ ಗೆಳೆಯ ಟಾರೊ" "ಎಸ್ಕಿಮೊ ಇಗ್ಲೂ" ಕೃತಿಗಳು ಹೊರದೇಶಗಳ ಪರಿಚಯಮಾಡಿಕೊಟ್ಟಿವೆ. ಡಾ॥ಶಿವರಾಮಕಾರಂತರ ಅದ್ಭುತ ಜಗತ್ತು ಮಾಲೆಯಿಂದ "ವಿಚಿತ್ರ ಖಗೋಳ" "ನಮ್ಮ ಭೂಖಂಡ ಹೊತ್ತಗೆಗಳು ಹೊರಬಂದಿವೆ. ನಿರಂಜನರ "ಕಿರಿಯರ ವಿಶ್ವಕೋಶ" ಉಪ ಯುಕ್ತವಾಗಿದೆ.

ಮಕ್ಕಳಿಗೆ ಅತಿ ಮುಖ್ಯವಾದ ನಾಟಕಗಳು ಅಧಿಕ ಸಂಖ್ಯೆಯಲ್ಲಿ ಬಾರದೆ ಇರು ವುದು ವಿಷಾದನೀಯ. ಎಂ.ಎಸ್. ಕಾಮತರು ಈ ವಿಭಾಗಕ್ಕೆ ತಮ್ಮ ಪಾಲಿನ ಸೇವೆ ಸಲ್ಲಿಸಿದ್ದಾರೆ. ಬಿ. ಶ್ರೀ ಪಾಂಡುರಂಗರಾಯರ "ಪುಟ್ಟುಗಳ ನಾಟಕ ಚಕ್ರ" ಚಂದ್ರ ಶೇಖರ ಕಂಬಾರರ "ಕಿಟ್ಟೀಕಥೆ' ಕೆ. ಬಿ. ಸುಬ್ಬಣ್ಣನವರ "ಅಂಚೆಮನೆ" ಗಮನಾರ್ಹ ವಾದವುಗಳು. ಚಿ. ಉದಯಶಂಕರ, ವರದರಾಜ, ಹುಯಿಲಗೋಳ ಅವರ ಪ್ರಯ ತ್ನವೂ ಫಲಕಾರಿ. ಇತ್ತೀಚಿನ ಕೆಲ ಹೊಸ ನಾಟಕಗಳು. ಕುತೂಹಲಕಾರಿಯೆನಿಸಿದರೂ ಕ್ಲಿಷ್ಟತಂತ್ರಗಳಿಂದ ಸ್ಪಷ್ಟ ಚಿತ್ರಗಳಿಲ್ಲದೆ ಪರಿಣಾಮ ಬೀರದೆ ಹೋಗುತ್ತಿವೆ. ಚಂದ್ರ ಶೇಖರ ಪಾಟೀಲರ "ಅಪ್ಪ ನಾಟಕ ತಂತ್ರದಲ್ಲಿ ಮಿಗಿಲಾದರೂ ಮಕ್ಕಳಿಗೆ ಕಬ್ಬಿಣದ ಕಡಲೆಯಾಗಿ ಬಿಡುತ್ತದೆ. ಹೊಸತದ ಹೆಸರಿನಲ್ಲಿ ದೊಡ್ಡವರು ತಮ್ಮ ಜಾಣ್ಮೆಯನ್ನು ತೋರುವಲ್ಲಿ ಮಕ್ಕಳ ಆಶೆ-ಆಕಾಂಕ್ಷೆಗಳನ್ನು ಅಲಕ್ಷಿಸಕೂಡದು.

ಮಕ್ಕಳಿಗೆ ಜಾನಪದ ಸಾಹಿತ್ಯದ ಪರಿಚಯ ಮಾಡಿಕೊಡುವ ಕೃತಿಗಳು ತೀರ ಕಡಿಮೆ. ಶ್ರೀ ಈಶ್ವರ ಚಂದ್ರ ಚಿಂತಾಮಣಿ ಅವರು ಈ ಕೊರತೆಯನ್ನು ತುಂಬಲು ಪ್ರಯತ್ನ ಮಾಡಿದ್ದಾರೆ. ಅವರ "ಒಗಟುಗಳು" ಹಾಗೂ "ಜ್ಯೋತಿಯಾಗು ಜಗ ಕ್ಕೆಲ್ಲ" ಕೃತಿಗಳು ಬಹಳ ಉಪಯುಕ್ತವಾಗಿವೆ. "ಇದು ನಮ್ಮ ಜಾನಪದ ವಸ್ತು ಸಂಗ್ರಹಾಲಯ" ಎಂಬ ಶೀರ್ಷಿಕೆಯ ಕೆಳಗೆ ಪಿ. ಆರ್. ತಿಪ್ಪೇಸ್ವಾಮಿಯವರು 'ಬಾಲ ಭಾರತಿ'ಯಲ್ಲಿ ಬರೆಯುತ್ತಿರುವ ಲೇಖನ ಮಾಲೆಯನ್ನು ಗಮನಿಸಬಹುದಾಗಿದೆ.

ಪ್ರಕಾಶನ ಸಂಸ್ಥೆ ಹಾಗೂ ಪತ್ರಿಕೆಗಳು :

ಮಕ್ಕಳಿಗೆ ಬೇಕಾದ ಸಾಹಿತ್ಯ ರಚನೆಯಲ್ಲಿ ಶಿಕ್ಷಕ ಸಾಹಿತಿಗಳ ಪಾತ್ರಹಿರಿದಾಗಿದೆ. ಮಕ್ಕಳೊಡನೆ ಬೆರೆತು ಅವರ ಒಲವು ನಿಲವುಗಳನ್ನರಿತ ಶಿಕ್ಷಕ ಅವರಿಗೆ ಬೇಕಾದ ಸಾಹಿತ್ಯ ರಚಿಸುವಲ್ಲಿ ಯಶಸ್ವಿಯಗುತ್ತಾನೆ. ಈ ಹಿಂದೆ ೧೯೫೫-೬೨ರಲ್ಲಿ ಕೇಂದ್ರ ಹಾಗು ರಾಜ್ಯ ಸರಕಾರಗಳ ಸಂಯುಕ್ತ ಹೊಣೆಗಾರಿಕೆಯಿಂದ ಬೆಂಗಳೂರಿನಲ್ಲಿ "ಮಕ್ಕಳ ಸಾಹಿತ್ಯ ರಚನಾಲಯ" ಎಂಬ ಹೆಸರಿನಲ್ಲಿ ತರಬೇತಿ ಕೇಂದ್ರವೊಂದನ್ನು ಸ್ಥಾಪಿಸಿದರು. ಆರುವಾರಗಳ ಕಾಲ ಮಕ್ಕಳಿಗೆ ಬೇಕಾದ ಸಾಹಿತ್ಯದ ಬಗೆಗೆ ವಿಚಾರ-ಚರ್ಚೆ-ಕೃತಿ ರಚನೆ

ಕಾರ್ಯ ನಡೆದುದು ಅತ್ಯಂತ ಮಹತ್ವದ ಸಂಗತಿಯಾಗಿದೆ. ವಿ. ಮಿರ್ಜಿ ಅಣ್ಣಾರಾಯ ವಿ. ಭಾರತೀಸುತ, ಶಾಂತರಸ, ಶಿದ್ದಣ್ಣ, ಮಸಳಿ, ಪಂಚಾಕ್ಷರಿ, ಹಿರೇಮಠ, ವೈ. ಕೆ. ತಿಮ್ಮರಸಯ್ಯ, ಕೆ. ಶಾಂತಯ್ಯ. ವ್ಹಿ.ಸಿ. ಮಾಲಗತ್ತಿ, ಸಿಸು ಸಂಗಮೇಶ ಮೊದಲಾದ ಸಾಹಿತಿ ಮಿತ್ರರೊಡನೆ ನಾನೂ ಈ ತರಬೇತಿಯಲ್ಲಿ ಪಾಲ್ಗೊಂಡಿದ್ದೆ. ಅದರ ಫಲ ವಾಗಿ ಮಕ್ಕಳ ಸಾಹಿತ್ಯ ರಚನೆಯಲ್ಲಿ ಹೊಸ ದೃಷ್ಟಿ ಗೋಚರಿಸಿತು. ಆ ಕೇಂದ್ರದಿಂದ "ಮಕ್ಕಳ ಮುತ್ತು" "ಮಕ್ಕಳ ಮಲ್ಲಿಗೆ" ಮಾದರಿ ಕೃತಿಗಳು ಹೊರಬಂದವು.

ಐ.ಬಿ.ಎಚ್. ಭಾರತ-ಭಾರತಿ ಪುಸ್ತಕ ಪ್ರಕಾಶನ ಸಂಸ್ಥೆಗಳು ಸಂಖ್ಯಾಮಾನ ದಿಂದ ಮಕ್ಕಳ ಸಾಹಿತ್ಯ ರಚನೆಯಲ್ಲಿ ಅಧಿಕ ಕಾರ್ಯ ಮಾಡಿದ್ದರೂ ವೈವಿಧ್ಯತೆ ದೃಷ್ಟಿ ಯಿಂದ ಹಿಂದೆ ಬಿದ್ದಿವೆ ಎಂದೇ ಹೇಳಬೇಕು. ರಾಜರು, ರಾಜ ಮನೆತನ, ಕವಿಗಳು, ಕಾವ್ಯಪರಿಚಯ, ಸ್ಥಳಪರಿಚಯ, ಧಾರ್ಮಿಕ ಪುರುಷರು, ಕಲಾವಿದರು ಮೊದಲಾದ ವರ ಕುರಿತು ಬರೆದ ಕೃತಿಗಳೇ ಅಧಿಕ. ಹಾಗೂ ಇವೆಲ್ಲ ಕೃತಿಗಳು ಬೆಳೆದ ಮಕ್ಕಳಿಗೆ ಮೀಸಲು. ಎಳೆಯರಿಗಾಗಿ ವಿಶೇಷ ಗಮನ ನೀಡಿಲ್ಲವೆಂದೇ ಹೇಳಬಹುದು. ಅವರಿ ಗಾಗಿ ಹಾಡಿ ತಣಿವ ಸಸ್ಯಗಳಾಗಲಿ, ಕುತೂಹಲಕಾರಿಯಾದ ವಿಜ್ಞಾನದ ಕಥೆಗಳಾಗಲಿ, ಹೆಚ್ಚಾಗಿ ಬರಬೇಕಿದೆ. ಈ ಮಾರ್ಗದಲ್ಲಿ ತಕ್ಕಮಟ್ಟಿಗೆ ಕಾರ್ಯ ಮಾಡಿದ ಶ್ರೇಯಸ್ಸು ವಿಜಾಪುರದ ಭಾರತೀ ಸಾಹಿತ್ಯ ಭಾಂಡಾರಕ್ಕೆ ಸಲ್ಲುತ್ತದೆ. ಈ ಮಾಲೆಯಲ್ಲಿ ಪ್ರಕಟ ವಾದ ಪುಸ್ತಕಗಳಲ್ಲಿ ವೈವಿಧ್ಯತೆಯಿದೆ. ಕಥೆ, ಕವನ, ಚರಿತ್ರೆ. ನಾಟಕ ವಿಜ್ಞಾನ ಹಲ ವಾರು ವಿಷಯಗಳ ಕುರಿತು ಕೃತಿ ರಚನೆಯಾಗಿದೆ. ಈ ಕೃತಿಗಳಲ್ಲಿ ಮುಕ್ಕಾಲುಪಾಲು ಕೇಂದ್ರ ಹಾಗೂ ರಾಜ್ಯ ಸರಕಾರಗಳಿಂದ ಬಹುಮಾನ ಪಡೆದುದನ್ನು ಹೆಮ್ಮೆಯಿಂದ ಸ್ಮರಿಸಬಹುದಾಗಿದೆ. ಮಕ್ಕಳ ವರ್ಷದಲ್ಲಿ ಹಲವಾರು ಸಂಘ-ಸಂಸ್ಥೆ ಗಳಿಂದ ಮಕ್ಕಳ ಸಾಹಿತ್ಯ ಕೃತಿಗಳು ಹೊರಬಂದಿವೆ. ಕನ್ನಡ ಸಾಹಿತ್ಯ ಪರಿಷತ್ತು ಎಳೆ ಯರಿಗಾಗಿಯೇ ವೈವಿಧ್ಯಮಯ ನೂರಾರು ಕೃತಿಗಳನ್ನು ಹೊರತಂದಿದೆ. ಆದರೆ ಕೃತಿ ಗಳು ತೀರ ಚಿಕ್ಕವಾಗಿದ್ದು, ಅಷ್ಟೊಂದು ಆಕರ್ಷಕವಾಗಿಲ್ಲ. ಒಂದು ಹಿರಿಯ ಸಂಸ್ಥೆ ಈ ದಿಸೆಯಲ್ಲಿ ಮಾದರಿಯ ಕಾರ್ಯ ಮಾಡಿ ತೋರಿಸಬೇಕಿತ್ತು. ಕಳೆದ ವರ್ಷವೇ ಪ್ರಾರಂಭವಾದ ಇಲಕಲ್ಲಿನ ಮಹಾಂತೇಶ ಅವರ ಕಿಶೋರ ಸಾಹಿತ್ಯ ಮಾಲೆಯಿಂದ ಎಳೆ ಯರಿಗಾಗಿ ಕವನ ಸಂಕಲನಗಳೆರಡು ಹೊರಬಂದಿವೆ. ಮಕ್ಕಳ ಸಾಹಿತ್ಯ ಸೃಷ್ಟಿಗಾಗಿಯೇ ಸಂಸ್ಥೆಗಳನ್ನು ಕಟ್ಟಿ, ಪರಿಶ್ರಮಪಟ್ಟವರಲ್ಲಿ ದೇವುಡು ನರಸಿಂಹಶಾಸ್ತ್ರಿಗಳು, ಬಿ. ಶಂಕರ ಭಟ್ಟರು, ಮೇವುಂಡಿ ಮಲ್ಲಾರಿ ಅವರು, ಟಿ. ಚಂದ್ರರಾಜ ಶೆಟ್ಟಿಯರು, ಸುಬೋಧ ರಾಮರಾಯರು, ಶಿವರಾಮಕಾರಂತರು, ಬಿ. ಶ್ರೀ ಪಾಂಡುರಂಗರಾಯರು ಮುಖ್ಯರು. ಇವರ ಈ ಹೋರಾಟದಲ್ಲಿ ಜನತೆಯು ಬೆಂಬಲ ದೊರೆಯದೆ ಹೋದರೂ ತಮ್ಮ ಪಾಲಿನ ಕರ್ತವ್ಯವನ್ನು ಮಾಡಿದ್ದಾರೆ.

ಮಕ್ಕಳಿಗಾಗಿಯೇ ಮೀಸಲಾದ ಪತ್ರಿಕೆಗಳು ತೀರ ವಿರಳ. "ಚಂದಮಾಮಾ" ಬಾಲಮಿತ್ರ, ಬಾಲಬಂಧು, ಪುಟಾಣಿ ಮೊದಲಾದ ಪತ್ರಿಕೆಗಳನ್ನು ಹೆಸರಿಸಬಹುದಾದರೂ ಮಕ್ಕಳ ಮಾನಸಿಕ ನೆಮ್ಮದಿಗೆ, ಬೌದ್ಧಿಕ ವಿಕಾಸಕ್ಕೆ ಹೆಚ್ಚಿನ ಪ್ರೇರಣೆ ಕೊಡಲು ಸಮರ್ಥವಾಗದಾದವು. ಕೇವಲ ಅದ್ಭುತ ಭಯಾನಕ ಕಥೆಗಳು ಎಳೆಯ ಮನಸಿನ ಮೇಲೆ ವಿಪರೀತ ಪರಿಣಾಮ ಬೀರುತ್ತವೆ. ಇದ್ದುದರಲ್ಲಿಯೇ ವಿಜಾಪುರದ "ಬಾಲಭಾರತಿ" ತನ್ನ ಕರ್ತವ್ಯವನ್ನು ಮಾಡಲು ಹೊರಟಿದೆ, ಇನ್ನು ದೈನಿಕ ಸಾಪ್ತಾಹಿಕ ಸಂಚಿಕೆಗಳು, ವಾರ್ಷಿಕ ವಿಶೇಷಾಂಕಗಳು ಮಕ್ಕಳ ಸಾಹಿತ್ಯಕ್ಕೆ ಕೆಲ ಪುಟಗಳನ್ನು ಮೀಸಲಿರಿಸಿ ಪ್ರೋತ್ಸಾಹಿಸುತ್ತಿವೆ.

ಮೇಲೆ ವಿವರಿಸಿದ ಸಾಹಿತ್ಯ ಪ್ರಕಾರಗಳಲ್ಲಿ ಕೆಲವೊಂದು ಕೃತಿಗಳನ್ನು ಮಾತ್ರ ಎತ್ತಿ ತೋರಿಸಿದ್ದೇನೆ. ಹಲವಾರು ಕೃತಿಗಳು ಹಾಗೂ ಪ್ರಕಾಶನ ಸಂಸ್ಥೆಗಳು ಉಳಿದುಕೊಂಡಿವೆ. ಪ್ರತಿ ಹತ್ತು ವರ್ಷಗಳಿಗೊಮ್ಮೆಯಾದರೂ ಸಮಗ್ರ ಕೃತಿಗಳ ವಿವೇಚನೆ ಮಾಡಿದ ಹೊತ್ತಗೆ ಹೊರಬಂದರೆ ಒಳ್ಳೆಯದು.

೫) ಆಗಬೇಕಾದ ಕಾರ್ಯ :

ಸ್ವಾತಂತ್ರ್ಯಾನಂತರ ಮಕ್ಕಳ ಸಾಹಿತ್ಯದಲ್ಲಿ ವೈವಿಧ್ಯತೆ ಕಂಡು ಬಂದರೂ ಮಕ್ಕಳಿಗೆ ಆಕರ್ಷಕವಾಗುವಂತೆ, ಉತ್ತಮ ಕಾಗದ. ಅಂದವಾದ ಮುದ್ರಣ, ಯೋಗ್ಯ ಚಿತ್ರಗಳು, ಸಮರ್ಪಕ ವಿಷಯುಗಳನೊಳಗೊಂಡ ಕೃತಿಗಳು ತೀರ ವಿರಳ. ಇತ್ತಿತ್ತವಾಗಿ ಈ ವಿಷಯುವಾಗಿ ತೊಂದರೆಗಳು ಹೆಚ್ಚುತ್ತಲೇ ಇವೆ. ಮುದ್ರಣ ಸಾಮಗ್ರಿಗಳ ಬೆಲೆ ವಿಪರೀತ ಏರಿರುವ ಈ ಕಾಲದಲ್ಲಿ ಯೋಗ್ಯ ಪುಸ್ತಕಗಳನ್ನು ಅಚ್ಚು ಹಾಕಿಸಿ ಕಡಿಮೆ ಬೆಲೆಗೆ ಕೊಡಲು ಸಾಧ್ಯವಿಲ್ಲದಾಗಿದೆ. ನಮ್ಮ ಜನ ಮಕ್ಕಳ ತಿಂಡಿ ಬಟ್ಟೆಗಳಿಗಾಗಿ ವೆಚ್ಚ ಮಾಡುವಲ್ಲಿ ಆಸಕ್ತಿ ವಹಿಸುವಂತೆ ಅವರಿಗೆ ಒಳ್ಳೆಯ ಸಾಹಿತ್ಯ ಕೃತಿಗಳನ್ನು ಒದಗಿಸುವಲ್ಲಿ ಒಲವು ತೋರುವುದಿಲ್ಲ. ಸರಕಾರ ಮಕ್ಕಳ ಉತ್ತಮ ಕೃತಿಗಳಿಗೆ ಬಹುಮಾನ ನೀಡಿ ಅ್ಯಗಳ ಕೆಲ ಪ್ರತಿಗಳನ್ನು ಕೊಂಡುಕೊಳ್ಳುವ ತನ್ನ ನಿಯಮವನ್ನು ಈಗ ಕೈಬಿಟ್ಟಂತಿದೆ. ವಾಚನಾಲಯಕ್ಕೆ ಕೊಳ್ಳುವ ಪುಸ್ತಕಗಳಲ್ಲಿಯೂ ವಿಲಂಬ ನೀತಿ ತಲೆದೋರಿದೆ. ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಎಳೆಯರಿಗಾಗಿ ಶಿಕ್ಷಣ ಇಲಾಖೆಯವರು ಪ್ರತಿವರ್ಷ ಕೊಳ್ಳಬೇಕಾಗಿದ್ದ ನಿಯಮಾವಳಿಗಳಿಗೆ ಈಗ ಕತ್ತರಿ ಬಿದ್ದಿದೆ. ಇಂಥ ಸಮಯದಲ್ಲಿ ಮಕ್ಕಳ ಒಳ್ಳೆಯ ಪುಸ್ತಕಗಳನ್ನು ಪ್ರಕಟಿಸಿ ಕೈ ಸುಟ್ಟುಕೊಳ್ಳಬೇಕಾದ ಪ್ರಸಂಗ ಬಂದೊದಗಿರುವುದರಿಂದ ಮಕ್ಕಳ ಸಾಹಿತ್ಯಸೃಷ್ಟಿ ಕುಂಠಿತವಾಗತೊಡಗಿದೆ.

ಸಂಖ್ಯಾಮಾನದಿಂದ ಪುಸ್ತಕಗಳ ಸಂಖ್ಯೆ ಬೆಳೆದಿದ್ದರೂ ಆರೋಗ್ಯಕರವಾದ ವಿಷಯ, ಸುಸಂಬದ್ಧ ನಿರೂಪಣೆ, ಸರಳ ಶೈಲಿ, ಯೋಗ್ಯ ಚಿತ್ರಗಳು, ಸುಂದರ

ಮುದ್ರಣಗಳಿಂದೊಡಗೂಡಿದ ಪುಸ್ತಕಗಳು ಅಪರೂಪ. ಹಿರಿಯರು ದಪ್ಪ ಅಕ್ಷರಗಳಲ್ಲಿ ಮುದ್ರಿಸಿ ಹೊರತಂದ ಪುಸ್ತಕಗಳೆಲ್ಲಾ ಮಕ್ಕಳ ಪುಸ್ತಕಗಳಾಗಲಾರವು. ಕೆಲವು ಚಾರಿತ್ರಿಕ ಪುಸ್ತಕಗಳಲ್ಲಿ ಪ್ರೇಮ-ಕಾಮದ ಸರಸಸಲ್ಲಾಪಗಳು, ಧಾರ್ಮಿಕ ತತ್ವ ಬೋಧೆಗಳು, ನೀರಸವರ್ಣನೆಗಳು, ಮಕ್ಕಳನ್ನು ಗೊಂದಲಕ್ಕೀಡುಮಾಡುತ್ತಿವೆ. ಈ ಬಗೆಯ ಸಾವಿರಾರು ಪುಸ್ತಕಗಳನ್ನು ಪ್ರಕಟಿಸುವುದಕ್ಕಿಂತ ಹತ್ತಾರು ಉತ್ತಮ ಕೃತಿಗಳನ್ನು ಹೊರತರುವುದು ಶ್ರೇಯಸ್ಕರ. ಈಗ ಪ್ರಕಟವಾದ ಪುಸ್ತಕಗಳ ಉಪಯೋಗ ಎಷ್ಟು ಮಕ್ಕಳಿಗೆ ಆಗುತ್ತಿದೆ? ಹಣಕೊಟ್ಟು ಕೊಳ್ಳುವುದಿರಲಿ, ಗ್ರಂಥಾಲಯದಿಂದಾದರೂ ತಂದು ಓದುವ ಹಂಬಲ ಎಷ್ಟು ಜನರಿಗಿದೆ? ಪ್ರತಿ ಶಾಲೆಯಲ್ಲಿ ಪುಟ್ಟ ಗ್ರಂಥಾಲಯ ವಿದ್ದರೂ ಅಲ್ಲಿಯ ಪುಸ್ತಕಗಳು ಧೂಳುಮೆತ್ತಿ, ಹುಳುತಿಂದು ಹಾಳಾಗಿ ಹೋಗುತ್ತಿವೆಯಲ್ಲದೆ, ಮಕ್ಕಳ ಕೈಗೆ ಸಿಕ್ಕುವುದಿಲ್ಲ. ಇದ್ದ ಪುಸ್ತಕಗಳ ಉಪಯೋಗ ಸರಿಯಾದ ರೀತಿಯಲ್ಲಿ ಮಾಡಿಕೊಳ್ಳುವ ಯೋಜನೆ ಸಿದ್ಧಪಡಿಸಬೇಕು. ಈ ಬಗೆಯ ಕಾರ್ಯ ಮಾಡುವ ಸಂಘ-ಸಂಸ್ಥೆಗಳು ಹುಟ್ಟಬೇಕು. ಸರಕಾರ ಇಂಥ ಸಂಸ್ಥೆಗಳಿಗೆ ಧನ ಸಹಾಯ ನೀಡಿ ಪ್ರೋತ್ಸಾಹಿಸಬೇಕು. ಪ್ರತಿ ವರ್ಷಕ್ಕೊಮ್ಮೆಯಾದರೂ, ಬೇರೆಬೇರೆ ಮಟ್ಟಗಳಲ್ಲಿ ಮಕ್ಕಳಿಗೆ ಸಾಹಿತಿಕ ಸ್ಪರ್ಧೆಗಳನ್ನು ಏರ್ಪಡಿಸಿ ವಾಚನಾಭಿರುಚಿಯನ್ನು ಹೆಚ್ಚಿಸಬೇಕು. ಮಕ್ಕಳ ಒಳ್ಳೆಯ ಕೃತಿಗಳನ್ನು ಸರಕಾರ ಕೊಂಡು ಸಮಸ್ಯೆಗಳನ್ನು ಹಗುರಗೊಳಿಸಬೇಕು. ಪ್ರತಿವರ್ಷವೂ ಸಾಹಿತ್ಯ ಸಮ್ಮೇಳನಗಳಲ್ಲಿ ಮಕ್ಕಳ ಪುಸ್ತಕಗಳ ಪ್ರದರ್ಶನ ಹಾಗೂ ಮಕ್ಕಳ ಗೋಷ್ಠಿಗಳನ್ನು ಏರ್ಪಡಿಸಬೇಕು. ಸಾಹಿತ್ಯ ಪರಿಷತ್ತಿನಂತಹ ಸಂಘ-ಸಂಸ್ಥೆಗಳು ಪ್ರತಿ ವರ್ಷ ಮಕ್ಕಳ ಪುಸ್ತಕಗಳನ್ನು ಬರೆಯಿಸಿ ಪ್ರೋತ್ಸಾಹಿಸಬೇಕು. ಹೀಗಾದಲ್ಲಿ ಇನ್ನೂ ವೈವಿಧ್ಯಪೂರ್ಣ ಮಕ್ಕಳ ಸಾಹಿತ್ಯ ಕೃತಿಗಳು ಹೊರಬರುವುದರಲ್ಲಿ ಸಂದೇಹವಿಲ್ಲ.

ಸರ್ವಜ್ಞ ನೀಡಿದ ಲೋಕ ಶಿಕ್ಷಣ

ವ. ಶಿ. ರಾಮಕೃಷ್ಣಯ್ಯ 'ರಾಕಿ'
ಗುಲಬರ್ಗಾ ವಿಶ್ವವಿದ್ಯಾಲಯ

ಜ್ಞಾನದಿಂದಲಿ ಇಹವು: ಜ್ಞಾನದಿಂದಲಿ ಪರವು:
ಜ್ಞಾನವಿಲದಿರೆ ಸಕಲವೂ ತನಗಿದ್ದು
ಹಾನಿ ಕಾಣಯ್ಯ ಸರ್ವಜ್ಞ॥

ಎಂಬಂತಹ ತ್ರಿಪದಿ ವಚನಗಳನ್ನಾಡಿ, ತ್ರಿಕಾಲಜ್ಞಾನಿಯಾಗಿ ಮೆರೆದ ಮಹಾ ಪುರುಷರತ್ನ, ಸಾಹಿತ್ಯ ಚಿಂತಾಮಣಿಯಾಗಿ, ಎಲ್ಲರ ತನುಮನಗೆದ್ದ ರಸಋಷಿ ಸರ್ವಜ್ಞ. ಸರ್ವಜ್ಞನೆಂದರೆ ಸರ್ವವನ್ನು ಅರಿತವನು. ಸಕಲ ಚರಾಚರಗಳಲ್ಲಿಯೂ ಸರ್ವವ್ಯಾಪಿಯಾಗಿ ಸಮಯೋಚಿತ ಸ್ಫೂರ್ತಿದಾಯಕ ಶಕ್ತಿಯಾಗಿದ್ದವನು ಎಂದರ್ಥ. ಅಂತಹ ಒಂದು ಪವಿತ್ರ ಸ್ಥಾನವನ್ನು ಪಡೆದವನು ಸಾಕ್ಷಾತ್ ಪರಮಾತ್ಮನಿಗೆ ಸಮ. ಅಂದಲ್ಲಿ ಸರ್ವಜ್ಞನೆಂದರೆ ಯಾರು....? ಆತ ಪರಮಾತ್ಮನೇ? ಅಥವಾ ಸರ್ವಜ್ಞನೆಂಬುವುದು ಆತನ ನಾಮಧೇಯವೇ....? ಇತ್ಯಾದಿ ಪ್ರಶ್ನೆಗಳು ತಲೆಯಲ್ಲಿ ಸುಳಿಯುತ್ತವೆ. ಇದು ಸ್ವಾಭಾವಿಕ. ಸರ್ವಜ್ಞನ ನಿಜನಾಮದ ಬಗ್ಗೆ ಹಲವಾರು ಸಂಶಯಗಳಿವೆ. ಸರ್ವಜ್ಞನೆಂಬುದು ಆತನ ಹೆಸರು ಎಂದು ಕೆಲವರು ವಾದಿಸಿದರೆ, ಇಲ್ಲಾ ಅದು ಆತನ ಅಂಕಿತ ನಾಮ ಸರ್ವಾಂತರ್ಯಾಮಿಯಾದ ಪರಮಾತ್ಮನಿಗೆ ಆತ ಸರ್ವ ಎಂದು ಕರೆದಿದ್ದಾನೆಂದು ಮತ್ತೆ ಕೆಲವರು ತರ್ಕಿಸುತ್ತಾರೆ. ಹೀಗಾಗಿ ಆತನ ನಿಜವಾದ ಹೆಸರಿನ ಬಗ್ಗೆ ಖಚಿತವಾದ ಅಭಿಪ್ರಾಯಗಳು ವ್ಯಕ್ತಪಟ್ಟಿಲ್ಲ.

ಅದೇನೇ ಇರಲಿ, ಸರ್ವಜ್ಞನೆಂದಾಕ್ಷಣ ನಮ್ಮ ಕಣ್ಣೆದುರು ಕಟ್ಟಿಬರುವ ಚಿತ್ರ ಒಬ್ಬ ಬಡ ಬಿಕ್ಷುಕನದು. ಕೈಯಲ್ಲಿ ಬಿಕ್ಷಾಪಾತ್ರೆ ಹಿಡಿದು ಮೈಮೇಲೆ ಹರಕಲು ಕಂಬಳಿಯನ್ನು ಹೊದ್ದು, ಬಡಗಿಯನ್ನು ಹಿಡಿದು ಅನ್ನಕ್ಕಾಗಿ ಮನೆ ಮನೆಗೆ ತಿರುಗುವ ತಿರುಕನ ಚಿತ್ರದಂತೆ ಆತನ ಭಾವ ನಮ್ಮೆದುರು ತೇಲಿ ಬರುತ್ತದೆ. ಆತ ಯಾರೇ ಇರಲಿ, ಹೇಗೋ ಇದ್ದು ಹೋಗಿರಲಿ ಅದು ಮುಖ್ಯವಲ್ಲ. ದೊಡ್ಡವರ ಹುಟ್ಟು, ಗಳಿಕೆ, ಹೆಣ್ಣು ಮಕ್ಕಳ ವಯಸ್ಸು ಕೇಳಬಾರದೆನ್ನುತ್ತಾರೆ. ಆತನ ನಡೆನುಡಿ ಮತ್ತು ಆತ ನಮ್ಮ ಸಾಹಿತ್ಯಕ್ಕೆ ನೀಡಿದ ಸೇವೆ, ಸಾಕ್ಷೀಭೂತವಾಗಿ ಕೈಗನ್ನಡಿಯಾಗಿ ಕಂಗೊಳಿಸುತ್ತಿವೆ. ಮಾಸದೇ ಥಳಥಳಿಸುತ್ತಿವೆ. ಹೀಗೆ ಆತನ ಬದುಕೊಂದು ನಮಗೆಲ್ಲಾ ದಿವ್ಯ ಮಾರ್ಗದರ್ಶನ.

ಧಾರವಾಡ ಜಿಲ್ಲೆಯ 'ಮಾಸೂರು' ಎಂಬಲ್ಲಿ ಬಸವರಸನೆಂಬ ಸಾತ್ವಿಕನಿಗೆ ಸತ್ಪುರುಷನಾಗಿ ಹುಟ್ಟಿದವನು. ಆತ ಮನೆಯನ್ನು ಬಿಟ್ಟ ಕಾರಣವಾಗಲೀ....ತನ್ನ ಜೀವಿತವನ್ನು ಕೊನೆಗೆಲ್ಲಿ ಮುಗಿಸಿದನೆಂಬ ನೆಲೆಯಾಗಲೀ ತಿಳಿಯದೇ ಇರುವ ಅಂಶಗಳಾಗಿವೆ. ಆತನ ವಿವೇಕ ಚಿಂತಾಮಣಿಯನ್ನು ಕೆದಕಿ ನೋಡಿದಾಗ, ಆಳಕ್ಕೆ ಇಳಿದಂತೆಲ್ಲಾ ಸಮುದ್ರದ ತಳದಲ್ಲಿ ಚಲ್ಲಿರುವ ಮುತ್ತುರತ್ನಗಳಂತೆ ಅಮೋಘವಾದ ಜ್ಞಾನದ ರಾಶಿಯೇ ಕಾಣಿಸುತ್ತದೆ. ತಾನೊಬ್ಬ ನಾಮಮಾತ್ರದಿಂದ ಸರ್ವಜ್ಞನೆಂಬ ನಾಮಾಂಕಿತವನ್ನಿಟ್ಟುಕೊಂಡು ಆ ಪರಶಿವನನ್ನು ಉದ್ದೇಶಿಸಿ ಪರಮಾತ್ಮನೇ ಹೇಳಿದ್ದಾನೆ—ಹೇಳುತ್ತಿದ್ದಾನೆನ್ನುವಂತೆ ವಚನಗಳನ್ನಾಡಿ ವರಋಷಿಯಾಗಿ ಮೆರೆದಿದ್ದಾನೆ.

ಹನುಮನುದಯಿಸಿದ ಹೊನ್ನಾಡಾದ ನಮ್ಮ ಈ ಕರ್ನಾಟಕದ ಮಣ್ಣಿನಲ್ಲಿ ಹುಟ್ಟಿಬೆಳೆದು ಆತ ನಮ್ಮ ನಾಡಿಗಾಗಿ ಸಲ್ಲಿಸಿರುವ ಸೇವೆ ಅಪಾರವಾದುದು-ಅಮೋಘವಾದುದು. ಅದಕ್ಕಾಗಿಯೇ ಕನ್ನಡ ಸಾಹಿತ್ಯ ವರಚಿಂತಾಮಣಿಯಾಗಿ ಇಂದಿಗೂ ಮೆರೆಯುತ್ತಿದ್ಧಾನೆ, ತಾನು ಕಂಡರಿತ ಯಾವುದೇ ವಿಷಯವನ್ನಾಗಲೀ ತಾನು ತನ್ನ ಒಳಗಣ್ಣಿನಿಂದ ನೋಡಿ ಮೂಡಿಬಂದ ಪ್ರತಿಕ್ರಿಯೆಯ, ಭಾವನೆಯನ್ನು ತನಗರಿತ ಸರಳ ಶುದ್ಧ ಕನ್ನಡದಲ್ಲಿ ಸಾಮಾನ್ಯನಿಗೂ ಅರ್ಥವಾಗುವ ರೀತಿಯಲ್ಲಿ ತ್ರಿಪದಿ ವಾಕ್ಯಗಳಲ್ಲಿ ಹಾಡಿದ್ದಾನೆ. ಜೀವನದ ಏರುಪೇರುಗಳಲ್ಲಿ ಅಂದಿಗೂ ಎಂದೆಂದಿಗೂ ವ್ಯತ್ಯಾಸ ಕಾಣದಂತೆ ಹಾಡಿದ ಆತನ ಮಾತಿನ ಮಾಣಿಕ್ಯಗಳು ಇಂದು ಮನೆಯಮಾತಾಗಿವೆ. ಆತ್ಮದ ದಿವ್ಯ ಜ್ಞಾನ ಜ್ಯೋತಿಯಾಗಿ ಬೆಳಗುತ್ತಿವೆ. ಊರೂರು ಸುತ್ತಿ ಜೀವನದಲ್ಲಿ ವಾಸ್ತವವಾಗಿ ಮೂಡಿಬರುವ ಭಕ್ತಿ, ಭಾವನೆ, ಪ್ರೀತಿ, ವ್ಯಂಗ್ಯ, ವ್ಯವಹಾರಿಕ ಮತ್ತು ಜನತೆಯ ನಡವಳಿಕೆಗಳನ್ನು ಕಣ್ಣಾರೆಕಂಡು ಸಂತಸೌರಭವನ್ನೂ ಮುಃಖದ ಯಾವುದೇ ಪ್ರಸ್ತುತ ಸನ್ನಿವೇಶವನ್ನು ಸಮತೂಕವಾಗಿ ತನಗೆನಿಸಿದ ರೀತಿಯಲ್ಲಿ ಹೇಳಿಬಿಡುತ್ತಾನೆ. ಹಾಗೆಂದರೆ ತಪ್ಪಾದೀತು; ಹೀಗಂದರೆ ಸರಿಯಾದೀತೇ ಎಂಬ ವಿಚಾರದ ಗೊಡವೆಗೂ ಹೋಗದೆ ಮನದಿಂದ ಹುಟ್ಟಿಬಂದ ಸ್ಫೂರ್ತಿಯನ್ನು ಸೃಷ್ಟಿಗೆ ತಕ್ಕಂತೆ ಜೀವನಾಯಣವಾಗಿ ಜೋಡಿಸಿ ಹೇಳುತ್ತಿದ್ದುದು ಅವನ ಒಂದು ವೈಶಿಷ್ಟ್ಯ.

ಅವನು ಹಾಡಿರುವ ಪ್ರತಿ ಪದ್ಯಗಳಲ್ಲಿಯೂ ರಸವತ್ತಾದ ಅರ್ಥವಿದೆ. ಯಾರ ಮುಲಾಜಿಗೂ ತಲೆಬಾಗದೇ, ಯಾವುದೇ ಹಂಗಿಗೂ ಬಗ್ಗದ, ಯಾವ ವಲಯಕ್ಕೂ ಸೀಮಿತವಾಗದೇ ಆತ ಎಲ್ಲದರಲ್ಲಿಯೂ ಎಲ್ಲವಾಗಿ ಬೆರೆತು ಮಿಳಿತವಾಗಿದ್ದಾನೆ. ಆತನ ದೃಷ್ಟಿಕೋನ ಸರ್ವವ್ಯಾಪಿಯಾದುದು. ಅಂತಲೇ ಸಮಾಜ ಶಿಕ್ಷಣ, ಧಾರ್ಮಿಕಶಿಕ್ಷಣ ಅಧ್ಯಾತ್ಮಿಕ ಶಿಕ್ಷಣ, ವೈದ್ಯಕೀಯ ಶಿಕ್ಷಣ, ವ್ಯವಹಾರಿಕ ಶಿಕ್ಷಣ, ಮಹಿಳಾ ಶಿಕ್ಷಣ—ಹೀಗೆ ಆತನ ಚಾಣಾಕ್ಷತನದ ಚಮತ್ಕಾರ ದೃಷ್ಟಿಕೋನ ಎಲ್ಲೆಡೆಯಲ್ಲಿಯೂ ಹರಿದು ಅಂಧ ಶ್ರದ್ಧೆಯಿಂದ ಕೂಡಿದ ಮಂದಮತಿಗಳ ಕಣ್ತೆರಿಸಿ ಜ್ಞಾನದ ಹಾದಿಯತ್ತ ಅಡಿಯಿಡಲು ಪ್ರೋತ್ಸಾಹಿಸಿದ್ದಾನೆ, ಆತನ ವಚನ ಭಂಡಾರದ ಮೊನಚುಮಾತುಗಳಿಂದ.

ಆತನ ವಚನ ಭಂಡಾರ ನಮಗೊಂದು ವರಪ್ರದಾನ. ಆತನು ಅಪ್ರತಿಮ ಲೋಕಾನುಭವಿ. ಆತ ನೀಡಿದ ಲೋಕಶಿಕ್ಷಣ ಅನಂತವಾದದ್ದು. ಅದ್ಭುತವಾದದ್ದು, ಅಂತಲೇ.

ವಿದ್ಯೆಯುಳ್ಳವನ ಮುಖವು : ಮುದ್ದು
ಬರುವಂತಿಕ್ಕು ವಿದ್ಯೆಯಿಲ್ಲದವನ ಬರಿ
ಮುಖವು : ಹಾಳೂರ ಹದ್ದಿನಂತಿಕ್ಕು ಸರ್ವಜ್ಞ ॥

ಎಂದಿದ್ದಾನೆ. ಎಂದಾಗ ಆತ ವಿದ್ಯೆಗೆ ಎಂತಹ ಒಂದು ಗೌರವದ ಸ್ಥಾನವನ್ನು ಮಹತ್ತರ ಘಟ್ಟವನ್ನು ನೀಡಿದ್ದಾನೆಂಬುದು ತಿಳಿಯುತ್ತದೆ. ವಿದ್ಯೆ ಸಕಲಐಶ್ವರ್ಯಗಳ ಸಾಧನೆ. ಸನ್ಮಾರ್ಗದ ಜೀವನಾಡಿ. ಸತ್ಪುರುಷರ ಸುಲಕ್ಷಣವೆಂದು ಹೇಳುತ್ತಾರೆ ಮಹಾತ್ಮರು. ಇಂದಿಗೆ ಎಂದೆಂದಿಗೂ ಚಿರನೂತನವಾಗಿ, ಚಿರಂಜೀವಿಯಾಗಿ ಬಾಳಿ ಬೆಳಗುವುದು ವಿದ್ಯೆಯಿಂದೆನ್ನುತ್ತ, ವಿದ್ಯೆಯಿಂದ ಸಿಗುತ್ತದೇನು? ಎಂಬುದಕ್ಕಿಂತ ವಿದ್ಯೆಯಿಂದ ಸಿಗಲಾರದ್ದೇನೆಂಬುದನ್ನು ಅರಿತುಕೊಳ್ಳಬೇಕು. ವಿದ್ಯೆಯಿಂದ ಒದಗಿಬರುವ ವಾಕ್ಚಾತುರ್ಯವನ್ನು ಸರ್ವಜ್ಞಕವಿ ಹೀಗೆ ಬಣ್ಣಿಸುತ್ತಾನೆ.

ಮಾತಿನಿಂ ನಗೆನುಡಿಯು : ಮಾತಿನಿಂ ಹಗೆ
ಹೊಲೆಯು : ಮಾತಿನಿಂ ಸರ್ವಸಂಪದವು :
ಲೋಕಕ್ಕೆ ಮಾತೇ ಮಾಣಿಕ್ಯ ಸರ್ವಜ್ಞ ॥

ಎಂಬಂತಹ ಹಿತೋಕ್ತಿಯನ್ನು ಮೆಚ್ಚಿನುಡಿದಿದ್ದಾನೆ. ಅಂತೆಯೇ ಆತನ ಅಂತರ್ಯವೂ ಸಾರುವಂತೆ ವಿದ್ಯೆಯನ್ನು ಕುರಿತು ಹಾಡಿ ಹೊಗಳಿದ್ದಾನೆ. ಆತನ ಚಾತುರ್ಯದ ಚಾಕಚಕ್ಯತೆಯೂ ಎಲ್ಲೆಡೆಯಲ್ಲಿಯೂ ಹಬ್ಬಿ ಹರಿದಿದೆ.

ಲೋಭಿಯನ್ನು ಕಂಡು ಮತ್ತೊಂದು ಕಡೆ ಸುಂದರವಾಗಿ ಹೇಳಿದ್ದಾನೆ. ಲೋಕದಲ್ಲಿ ಎಲ್ಲರೊಡನೆ ಒಂದಾಗಿ ಬಾಳಿ ಬದುಕುವುದು ಸ್ವರ್ಗ ಸುಖಕ್ಕಿಂತ ಮಿಗಿಲಾದುದೆಂಬ ಮಹಾ ಶರಣರ ವಚನದಂತೆ ಈತನು ಲೋಭಿಗಳಿಗೆ ಲೋಕಯುಕ್ತಿಯನ್ನು ನೀಡಿ ಕಣ್ತೆರೆಸಿದ್ದಾನೆ.

ಉಣ್ಣದೊಡವೆಯುಗಳಿಸಿ : ಮಣ್ಣಿನೊಳು ತಾನಿರಿಸಿ
ಸಣ್ಣಿಸಿ ನೆಲನ ಸಾರಿದನ ಬಾಯೊಳಗೆ :
ಮಣ್ಣು ಕಾಣಯ್ಯ ಸರ್ವಜ್ಞ ॥

ಎಂದು ಬಲು ಮಾರ್ಮಿಕವಾಗಿ ನುಡಿದು ಶಿಕ್ಷಣದ ಸುಧೆಯ ಸಾರಸತ್ತ್ವವನ್ನೇ ಬೀರಿದ್ದಾನೆ.

ಧಾರ್ಮಿಕ ಕ್ಷೇತ್ರದತ್ತ ದೃಷ್ಟಿಹಾಯಿಸಿ ಸರ್ವಜ್ಞ ಕಣ್ಣು ತೆರೆಸಿದ್ದಾನೆ. ಬ್ರಹ್ಮ ಚರ್ಯೆಯನ್ನು ಯಾವ ರೀತಿಯಲ್ಲಿ ಸಾಗಿಸಬೇಕು, ಸತಿಪತಿಗಳಾಗಲೀ, ಗಂಡುಹೆಣ್ಣಾಗಲೀ ಅವರ ನಡೆ-ನುಡಿಯ ಜೊತೆಗೆ ಅವರ ಒಂದು ಬಾಳ್ವೆ ಹೇಗಿದ್ದರೆ ಒಳಿತು; ಅದು ಪರಮಾತ್ಮನಿಗೆ ಸಲ್ಲುತ್ತದೆಯೇ ಎಂಬುದನ್ನು ಬಿಚ್ಚುಮಾತಿನಿಂದ ಬಡಿದೆಬ್ಬಿಸಿದ್ದಾನೆ.

> ಮುಟ್ಟಿದಂತಿರಬೇಕು : ಮುಟ್ಟದಲೇ ಇರಬೇಕು
> ಮುಟ್ಟಿಯೂ ಮುಟ್ಟದಿರಬೇಕು ಪರಸ್ತ್ರೀಯ
> ಮುಟ್ಟಿದವ ಕೆಟ್ಟ ಸರ್ವಜ್ಞ ॥

ಎಂದು ಹೇಳುತ್ತಾನೆ. ಸತಿಪತಿಗಳಾದರು ಹೇಗಿರಬೇಕು, ಪರಸ್ತ್ರೀಯಾಗಲೀ ಪರಪುರುಷನಾಗಲೀ ಹೇಗೆ ಇರಬೇಕು ಎಂಬುದರ ಎಲ್ಲೆಯನ್ನು ಎದುರಿಗಿಟ್ಟಿದ್ದಾನೆ. ಸತಿಪತಿಯೂ ಕೂಡ, ಪತಿ ಸತಿಯನ್ನಾಗಲೀ, ಸತಿ ಪತಿಯನ್ನಾಗಲೀ ಆಳುವ ಒಡೆತನದ ಆಸೆಗೆ ಬಯಸುವ ಕ್ಷುಲ್ಲಕ ಗುಣಗಳಿರಬಾರದು. ಸೀಮಿತದ ನೇಮದಲ್ಲಿ ನಿಲ್ಲಬೇಕು, ಎಂದರೆ ಮುಟ್ಟಿದಂತಿರಬೇಕು ಆದರೂ ಮುಟ್ಟದಲೇ ಇರುವುದು ಉಚಿತ. ಮುಟ್ಟಿಯೂ ಮುಟ್ಟದವನಂತೆ ಇರುವುದು ಮಹೋನ್ನತವಾದದ್ದು. ಅಲ್ಲದೇ ಪರಸ್ತ್ರೀಯ ಮುಟ್ಟಿದವ ಕೆಟ್ಟ ಸರ್ವಜ್ಞ ಎಂದು ಎಚ್ಚರಿಸಿದ್ದಾನೆ. ಇದು ಕಾಮಾತುರನಾದವನಿಗೆ ದಿವ್ಯ ಔಷಧಿ.

ಇಂತಹ ಈ ಒಂದು ಕ್ಷೇತ್ರವು ಈತನ ದೃಷ್ಟಿಕೋನಕ್ಕೆ ಬದ್ದಿಲ್ಲವೆನ್ನಲಾಗದು. ಎಲ್ಲ ವಲಯಗಳಲ್ಲೂ ಜ್ಞಾನದ ಕಣ್ಣಿನಿಂದ ಎಲ್ಲವನ್ನೂ ನೋಡಿ ಅರಿತು ನುಡಿದ ಮೇಧಾವಿ. ಅಂತಲೇ ಆತನ ವಚನಗಳು ವೃತ್ತಿಶಿಕ್ಷಣದ ವರ್ತುಲದಲ್ಲಿಯೂ ಇವೆ. ಪ್ರಾಪಂಚಿಕ ಶಿಕ್ಷಣದ ವಿಶಾಲ ಅರ್ಥದಲ್ಲಿಯೂ ಅಡಗಿವೆ. ಹೀಗೆಂದೇ ಆತ ಹೇಳಿದ್ದಾನೆ—

> ಎಲ್ಲ ಬಲ್ಲವರಿಲ್ಲ : ಬಲ್ಲವರು ಬಹಳಿಲ್ಲ
> ಬಲ್ಲಿದರಿದ್ದು ಬಲವಿಲ್ಲ : ಸಾಹಿತ್ಯ
> ವೆಲ್ಲರಿಗಿಲ್ಲ : ಸರ್ವಜ್ಞ ॥

ಎಂದು. ಅಂದಾಗ ಆತ ಸಾಹಿತ್ಯಸಾರಸ್ವತ ಜ್ಞಾನಸಂಪನ್ನತೆ ಎಂತಹ ಪವಿತ್ರವಾದದ್ದು ಎಂಬ ಅಂಶವನ್ನು ವರ್ಣಿಸಿರುವ ಆವನ ಜಾಣ್ಮೆಯ ನುಡಿಮುತ್ತುಗಳು ಅರ್ಥಪೂರ್ಣವಾದವುಗಳು. ಎಲ್ಲವನ್ನೂ ಬಲ್ಲವರಿಲ್ಲ. ಸಂಪೂರ್ಣವಾಗಿ ತಿಳಿದವರು ಸಿಕ್ಕುವುದು ದುರ್ಲಭ, ಅಂದಾಗ ಎಲ್ಲವನ್ನೂ ಬಲ್ಲವರು ಬಹಳ ಇಲ್ಲ ಎಂದಿದ್ದಾನೆ.

ಒಂದು ವೇಳೆ ಬಲ್ಲವರಿದ್ದರೂ ಕೂಡ ಸಾಹಿತ್ಯಕ್ಕೆ ಬಲವಿಲ್ಲ ಎಂದಿರುವ ಆತನ ವಿಮರ್ಶಾತ್ಮಕ ದೃಷ್ಟಿ ಮಹತ್ತರವಾದದ್ದು. ಹೀಗಿರುವಾಗ ಅಂದಿನ ಇಂದಿನ ಸಾಹಿತ್ಯಕ ಸ್ಥಿತಿಗತಿಗಳಲ್ಲಿ ಯಾವ ವ್ಯತ್ಯಾಸವನ್ನು ಕಾಣಬಹುದೆಂಬುವದರ ಬಗ್ಗೆ ಇಂದು ಕ್ಷಕಿರಣವನ್ನು ಹಾಕಬಹುದಾಗಿದೆ. ಅಷ್ಟೇ ಅಲ್ಲದೆ ಶಿಕ್ಷಣಕ್ಕೂ ಸಾಹಿತ್ಯಕ್ಕೂ ಇರುವ ಸಂಬಂಧವನ್ನು ತೋರಿಸಿ ಅವುಗಳಲ್ಲಿರುವ ವ್ಯತ್ಯಾಸವನ್ನು ಎತ್ತಿಹಿಡಿದಿದ್ದಾನೆ. ಎಲ್ಲ ಬಲ್ಲವನು, ಶಿಕ್ಷಣವನ್ನು ಅರಿತವನು, ಅದನ್ನು ಸಾಹಿತ್ಯರೂಪದಲ್ಲಿ, ಬರೆದಿಡಬೇಕು. ಶಿಕ್ಷಣದಿಂದ ತನ್ನಲ್ಲಿ ಉದ್ಭವಿಸುವ ಪ್ರಚೋದನೆಯನ್ನು ವ್ಯಕ್ತಪಡಿಸಿ ಅದನ್ನು ಕೃತಿಯಲ್ಲಿ ಬರೆದಿಟ್ಟಲ್ಲಿ, ಅದು ಶಾಶ್ವತವಾಗಿ ಉಳಿದು ಯುವಪೀಳಿಗೆಯ ದಾರಿದೀಪವಾಗುತ್ತದೆ. ಅಂತಹದನ್ನು ಮಾಡುವುದು ಎಲ್ಲರಿಂದ ಸಾಧ್ಯವಿಲ್ಲ. ಸಾಹಿತ್ಯವು ಎಲ್ಲರಿಗೂ ಬರಲಾರದು ಎಂಬ ಮಾತನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾನೆ.

ಎಲ್ಲರಲ್ಲಿಯೂ ತಾನೊಬ್ಬ ಜ್ಞಾನಿ ತಿಳಿದವನು ಬಲ್ಲವನು ಎಂದು ಕೊಚ್ಚಿಕೊಳ್ಳದಿರು ಎಂಬಂತೆ ತಿಳಿದು ತಲೆಗೇರಿದ ಬಲ್ಲವರಿಗೆ ಸೂಕ್ತವಾಗಿ ಎಚ್ಚರಿಸುತ್ತಾನೆ ಸರ್ವಜ್ಞಮೂರ್ತಿ.

ಬಲ್ಲೆನೆಂಬುವ ಮಾತು : ಎಲ್ಲವೂ ಹುಸಿಕಾಣೋ ।
ಬಲ್ಲರೆ ಬಲ್ಲೆನೆನಬೇಡ, ಸುಮ್ಮನಿರ—
ಬಲ್ಲವನೆಬಲ್ಲ ಸರ್ವಜ್ಞ ॥

ಎಂದು ಹೇಳುತ್ತಾ, ಮಾನವನಲ್ಲಿ ಅಡಗಿದ ಬಲ್ಲೆನೆಂಬುದು ಅಹಂಭಾವ ಲಕ್ಷಣವೆಂದು ತಿಳಿಸುತ್ತಾನೆ. ತಿಳಿದರೂ ತಿಳಿಯದಂತೆ ತುಂಬಿದ ಕೊಡವಿದ್ದಂತೆ ತೂಕಬದ್ಧವಾಗಿರುವುದು, ಹೆಚ್ಚಿನಲಿ ಹೆಚ್ಚೆಂದು, ಎತ್ತರದಲ್ಲಿ ಎತ್ತರವೆಂದು, ಸಾರಿ ಜನತೆಯ ಕಣ್ಣು ತೆರೆಸಿ ಲೋಕ ಶಿಕ್ಷಣವನ್ನು ನೀಡಿ ಜ್ಞಾನಿಗಳನ್ನಾಗಿ ಮಾಡಿ ಉದ್ಧರಿಸಿದ ಮಹಾತ್ಮನಿವನು. ಸರ್ವಸಂಪನ್ನ ಸನ್ಮಾರ್ಗಿ ಸರ್ವಜ್ಞ.

ಆತನೊಬ್ಬ ವಿರಾಗಿ ಪುರುಷ. ಜಾತಿ-ಮತಗಳ ಗೊಂದಲದ ಸಿಲುಕಿಗೆ ಸಿಕ್ಕಿದವನಲ್ಲ. ಪ್ರಪಂಚದಲ್ಲಿ ಮಾನವರಾಗಿ ಹುಟ್ಟಿ ಬಂದ ಮೇಲೆ ಎಲ್ಲರೂ ಒಂದೇ. ಆ ಜಾತಿ ಈ ಜಾತಿ ಎನ್ನದೇ ಎಲ್ಲರೂ ನನ್ನವರು ಎಂದು ಬಾಳಿ ಬದುಕಿ, ಕೂಡಿ ಜೀವಿಸಿ, ಜೀವನದ ಸುಖವನ್ನರಿಯಬೇಕೆಂದು ಸಾರಿದವನು. ಅದುವೇ ನಿಜ ಜೀವನದ ಸಾಕ್ಷಾತ್ಕಾರವೆಂದು ಅನೇಕ ಸಲ ನುಡಿಯುತ್ತಾನೆ. ಇಂತಹ ಭಾವವನ್ನೊಳಗೊಂಡ—

ನಡೆವುದೊಂದೇ ಭೂಮಿ। ಕುಡಿವುದೊಂದೇ ನೀರು।
ಸುಡುವಗ್ನಿಯೆಂದೆ ಇರುತಿರಲು ಕುಲಗೋತ್ರ।
ನಡುವೆ ಎತ್ತಣದು? ಸರ್ವಜ್ಞ॥

ಎಂಬ ವಚನವೇ ಸಾಕ್ಷಿಯಾಗಿದೆ.

ವಿದ್ಯೆ ಜ್ಞಾನಾರ್ಜನೆಗೆ ಮೂಲ ಸಾಧನ. ಅದು ಮಾನವನ ಮೂರನೆಯ ಕಣ್ಣು. ಮನುಷ್ಯ ತನ್ನ ನಡತೆ-ಶೀಲ ಸದ್ಗುಣಗಳನ್ನು ಬೆಳೆಸಿಕೊಳ್ಳುತ್ತಾನೆಂದರೆ ಅದು ವಿದ್ಯೆಯಿಂದಲೇ ಸಾಧ್ಯವೆನ್ನುತ್ತಾ ಮಾನವನ ನಿಜವಾದ ಅರ್ಥವನ್ನು ಎತ್ತಿ ತೋರಿಸುವ ಶಕ್ತಿ ವಿದ್ಯೆ ಎಂದಿದ್ದಾನೆ. ಮಾನವನಿಗೂ ಪಶುಪಕ್ಷಿಗಳಿಗೂ ವ್ಯತ್ಯಾಸವನ್ನು ತೋರಿಸುವ ಸರಳ ಶುದ್ಧ ಸಾಧನೆಯೇ ವಿದ್ಯೆ. ಮನುಷ್ಯ ಏನೆಲ್ಲ ಗಳಿಸಬಹುದು. ಅದನ್ನು ಕೊನೆಯತನಕ ತನ್ನದಾಗಿಸಿಕೊಳ್ಳುವುದು ಸಾಧ್ಯವಿಲ್ಲದ ಮಾತು. ತಾನು ಗಳಿಸಿದ ಧನ ಕನಕ ಭೂಮಿ ಸರ್ವಸಂಪತ್ತನ್ನು ತಾನಿರುವ ತನಕ ಅನುಭವಿಸಿ ಸುಖದ ಸೋಪಾನದಲ್ಲಿ ತೇಲಿ ಅಂತೆಯೇ ಕೊನೆಗೊಂದು ದಿನ ಇಹಲೋಕ ತ್ಯಜಿಸಿದಾಗ ಅದು ಉಳಿಯುತ್ತದೆಯಲ್ಲಿ? ಅವನೊಡನೆ ಅದು ಹೋಗಲಾರದು. ಧನ ಕನಕ ಸಂಪತ್ತನ್ನು ಒಬ್ಬನಿಂದ ಮತ್ತೊಬ್ಬನಿಗೆ ವರ್ಗಾಯಿಸಿ, ಕಸಿದುಕೊಳ್ಳುವ ಸಂದರ್ಭಗಳುಂಟಾದರೂ, ಕಲಿತ ವಿದ್ಯೆ ಕೊನೆಗೆ ಬರುವುದು ಜೊತೆಯಲ್ಲಿ ಮಾತ್ರ. ಅದನ್ನು ಯಾರೂ ಕಸಿದುಕೊಳ್ಳಲಾರರು. ಅಷ್ಟೇ ಅಲ್ಲ ಆ ವ್ಯಕ್ತಿ ಮಸಣ ಸೇರಿ ಮಣ್ಣಾದರೂ ವಿದ್ಯೆ ಮಣ್ಣಾಗದು. ಮತ್ತಷ್ಟು ಪ್ರಕಾಶವಾಗಿ ಅದು ಬೆಳಗುತ್ತದೆ. ಆವನಲ್ಲಿ ಅಡಗಿದ ಒಳ್ಳೆಯ ಗುಣವನ್ನು ಮೆರಸುತ್ತದೆ. ಕೊಂಡಾಡಿಸಿ ಉನ್ನತ ಶಿಖರಕ್ಕೇರಿಸಿ ಆತನೊಬ್ಬ ಗಣ್ಯನೆಂದೆನಿಸಿ ಇತಿಹಾಸ ಪುಟಗಳಲ್ಲಿ ಶಾಶ್ವತ ಕಹಳೆಯನ್ನು ಮೊಳಗಿಸುತ್ತದೆ, ಕಲಿತ ವಿದ್ಯೆ ಆತನ ಜೊತೆಯಲ್ಲಿಯೂ ಹೋಗುತ್ತದೆ, ಇಹದಲ್ಲಿಯೂ ಉಳಿಯುತ್ತದೆ. ಇದು ವಿದ್ಯೆಯ ಉನ್ನತ ವೈಶಿಷ್ಟ್ಯ. ಅಂತೆಯೇ ಈ ಸರ್ವಜ್ಞಮಹಾಮೂರ್ತಿಯ ಚಿತ್ತ ಇತ್ತ ಹರಿದಿರಬೇಕು. ಹಾಗೆಂದೇ ಹೇಳಿರಬೇಕು.

ಒಡಲೊಳಡಗಿದ ವಿದ್ಯೆ। ಒಡಗೂಡಿ ಬರುತಿರಲು।
ಒಡಹುಟ್ಟಿದವರು, ಕಳ್ಳರು, ನೃಪರದನು।
ಪಡೆಯರೆಂತೆಂದ ಸರ್ವಜ್ಞ॥

ಎಂದು ಸಾರವತ್ತಾಗಿ ಅಂದಿದ್ದಾನೆ.

ಹೆಣ್ಣಿಗಾಗಿ ಸತ್ತವರು ಕೋಟಿ, ಮಣ್ಣಿಗಾಗಿ ಸತ್ತವರು ಕೋಟಿ ಹೊನ್ನಿಗಾಗಿ ಸತ್ತವರು ಕೋಟಿಕೋಟಿ. ಆದರೆ ವಿದ್ಯೆಗಾಗಿ ಸತ್ತವನೊಬ್ಬನಿಲ್ಲ ಎಂದೂ ಹೇಳುತಾನೆ. ಅಂದಾಗ ಆತ ವಿದ್ಯೆಗೆ ನೀಡಿದ ಸ್ಥಾನ ಅತಿ ಎತ್ತರ ಮಟ್ಟದ್ದೆಂದು ನಿಚ್ಚಳವಾಗಿ ತಿಳಿಯಬಹುದಾಗಿದೆ. ಅದನ್ನು ಆತನು ಭಕ್ತಿಭಾವದಿಂದ ಪೂಜಿತಸ್ಥಾನದಲ್ಲಿಟ್ಟು ಗೌರವಿಸಿದ್ದಾನೆಂಬುದು ಸ್ಪಷ್ಟ.

ವೇದ ಶಾಸ್ತ್ರಗಳನ್ನು ಜನ ಸಾಮಾನ್ಯರು ಓದಿ ಅರ್ಥೈಸಿಕೊಳ್ಳಲಸಾಧ್ಯವಾಗುತ್ತದೆ. ಅವುಗಳನ್ನು ಪಂಡಿತರು ಮಾತ್ರ ಓದುತ್ತಿದ್ದರು. ಜನತೆಗೆ ಅದರ ಅರ್ಥವನ್ನು ಬಿಡಿಸಿ ಹೇಳಿ ಜನತೆಯ ಮನದ ಜ್ಞಾನದ ಕಣ್ಣನ್ನು ತೆರೆಸುತ್ತಿದ್ದರು. ಆದರೂ

ನಿರಕ್ಷರಸ್ಥ ಜನ ಎಷ್ಟು ಕೇಳಿ ಹೊಗಳಿದರೂ ವೇದೋಪನಿಷತ್ತುಗಳನ್ನು ಪಠಣಮಾಡಲಾಗುತ್ತಿರಲಿಲ್ಲ. ಆದರೆ ಸರ್ವಜ್ಞನ ವಚನಗಳು ಎಲ್ಲರ ಮನೆ ಮಾತಾಗಿವೆ. ಮನದಲ್ಲಿ ನೆಲೆಯೂರಿ ರಸದೂಟ ನೀಡುತ್ತವೆ. ಬದುಕಿನಲ್ಲಿ ಬೆರೆತು ಹೋಗಿವೆ. ಒಂದೆರಡು ಸಾರಿ ಕೇಳಿ ಮನಸ್ಸಿನಲ್ಲಿ ಮೆಲುಕುಹಾಕಿದನೆಂದರೆ ಸರ್ವಜ್ಞನ ವಚನಗಳು ಸಮರಸವಾಗಿ ಅವನೆದೆಯಲ್ಲಿ ಬೇರೂರುತ್ತವೆ. ಹೀಗೆ ಅನಕ್ಷರಸ್ಥನಲ್ಲಿಯೂ ಅಕ್ಷರತೆಯ ಅರಿವನ್ನು ಮೂಡಿಸಿ ಅಂತರ್ಯವನ್ನು ಬೆಳಗಿಸುವ ಜ್ಞಾನದ ಕಣ್ಣನ್ನು ತೆರಸಿ ಸುಸಂಸ್ಕೃತನನ್ನಾಗಿ ಮಾಡುವ ವಿದ್ಯೆಗೆ ಸಮನಾಗಿ ಶಿಕ್ಷಣಕ್ಕೆ ಸಾಟಿಯಾಗಿ ನಿಲ್ಲುತ್ತವೆ ಸರ್ವಸಾಮಾನ್ಯವಾದ ಸರ್ವಜ್ಞನ ವಚನಗಳು. ಅಂದ ಮೇಲೆ ಆತ ನಿಜಕ್ಕೂ ನಮ್ಮ ಕನ್ನಡ ನಾಡಿನ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರವಾದುದು, ಅನಂತವಾದುದೆಂದು ನಿಚ್ಚಳವಾಗಿ ಮೆಚ್ಚಿ ಕೆಯಿಂದ ಹೇಳಲೇಬೇಕು. ಇಂತಹ ಒಬ್ಬ ಧೀಮಂತ ಕವಿಪುಂಗನು ನಮ್ಮ ನಾಡಿನ ನೆಲದಲ್ಲಿ ಹುಟ್ಟಿ ಬೆಳೆದು ಬಾಳಿದನೆಂದರೆ ನಮ್ಮ ಪುಣ್ಯಕ್ಕೆ ಸರಿಸಾಟಿಯಿಲ್ಲವೆಂದು ಕನ್ನಡಿಗರು ಎದೆಯುಬ್ಬಿಸಿ ಹೇಳಬೇಕು. ಆತನ ವಚನ ಸಂಪತ್ತಿನಲ್ಲಿ ಅಡಗಿರತಕ್ಕ ಅಮೃತತ್ತ್ವವನ್ನು ಅರಿತು, ಜೀವಿತದಲ್ಲಿ ಅಳವಡಿಸಿಕೆದೊಂಡು ಬಾಳಿ ಬದುಕಿದಾಗ ಮಾತ್ರ ಸರ್ವಜ್ಞನ ಸೇವಾ ಮನೋಭಾವಕ್ಕೆ ಕೃತಜ್ಞತಾಪೂರ್ವಕವಾಗಿ ಸ್ಮರಿಸಿದಂತಾಗುತ್ತದೆ. ಆತ ನೀಡಿದ ಲೋಕ ಶಿಕ್ಷಣ ಸಾರ್ಥಕವಾಗುತ್ತದೆ.

ವೇದಗಳು ಹೇಗೆ ಅಪೌರುಷೇಯವೋ ಹಾಗೆಯೇ ಸರ್ವಜ್ಞನ ವಚನಗಳು ಅಪೌರುಷೇಯ. ಲೋಕ ಶಿಕ್ಷಣಕ್ಕಾಗಿ ಮೀಸಲಿಟ್ಟ ಜಂಗಮ ವಿಶ್ವವಿದ್ಯಾಲಯ ಆತನ ವಚನ ಸಂಪತ್ತು.

ಶ್ರೀಮಾನ್ ಜಿ. ಬಿ. ಶಂಕರರಾಯರು

ಕರ್ನಾಟಕ ರಾಜ್ಯ ಶಿಕ್ಷಣ ಸಚಿವರಾಗಿ ಮಾಡಿದ ಭಾಷಣಗಳು

ಸೆಪ್ಟೆಂಬರ್ 11, 1981 ರಂದು ಕರ್ನಾಟಕ ಸರ್ಕಾರದ ಮಾನ್ಯ ಶಿಕ್ಷಣ ಸಚಿವ ಶ್ರೀ ಜಿ. ಬಿ. ಶಂಕರರಾವ್, ಎಂ. ಎ., ಎಲ್.ಎಲ್.ಬಿ. ಅವರು 1980ರ ರಾಷ್ಟ್ರೀಯ ಪ್ರಮಾಣ ಪತ್ರ ಪರೀಕ್ಷೆಯ ಘಟಿಕೋತ್ಸವ ಸಂದರ್ಭದಲ್ಲಿ ಮಾಡಿದ ಭಾಷಣ.

ಈ ಘಟಿಕೋತ್ಸವದಲ್ಲಿ ಭಾಗವಹಿಸಲು ಮತ್ತು ರಾಷ್ಟ್ರೀಯ ಉತ್ಪಾದನಾ ಪರಿಷತ್ತಿನವರು ನಡೆಸಿದ ಮೇಲ್ವಿಚಾರಣೆ ಕುರಿತ ರಾಷ್ಟ್ರೀಯ ಪ್ರಮಾಣ ಪತ್ರ ಪರೀಕ್ಷೆಯಲ್ಲಿ ತೇರ್ಗಡೆಯಾದ ನಿಮ್ಮನ್ನು ಉದ್ದೇಶಿಸಿ ಮಾತನಾಡಲು ನನಗೆ ತುಂಬ ಸಂತೋಷವಾಗುತ್ತಿದೆ. ಭಾರತದಲ್ಲಿ ಮೇಲ್ವಿಚಾರಣಾ ತರಬೇತಿಗೆ ಸಂಬಂಧಿಸಿದ ಸಮಸ್ಯೆಯು ಬೃಹದಾಕಾರದ್ದಾಗಿದೆ ಎಂಬ ವಿಷಯದಲ್ಲಿ ಅನುಮಾನವೇ ಇಲ್ಲ. ಭಾರತೀಯ ಉದ್ಯಮಗಳಲ್ಲಿ ಸದ್ಯ ಸುಮಾರು 3.5 ಲಕ್ಷ ಮೇಲ್ವಿಚಾರಕರಿದ್ದರೆಂದೂ, ಈಗಿರುವ 160 ಲಕ್ಷ ಕಾರ್ಮಿಕರ ಸಂಖ್ಯೆಯು ದಿನೇ ದಿನೇ ಬೆಳೆಯುತ್ತಿದ್ದು ರಾಷ್ಟ್ರಕ್ಕೆ ಪ್ರತಿ ವರ್ಷ 16,000 ಮೇಲ್ವಿಚಾರಕರ ಅಗತ್ಯವುಂಟಾಗಬಹುದೆಂದು ಅಂದಾಜು ಮಾಡಲಾಗಿದೆ. ಖಾಸಗಿ ಮತ್ತು ಸರ್ಕಾರೀ ಉದ್ಯಮಗಳಲ್ಲಿನ ಮೇಲ್ವಿಚಾರಕರಿಗೆ ಕ್ರಮಬದ್ಧ ರೀತಿಯಲ್ಲಿ ತರಬೇತಿಯ ಅಗತ್ಯವಿದೆಯೆಂದು ಕಂಡು ಬಂದಿದೆ. ಕೆಲವು ಕೈಗಾರಿಕೆಗಳಲ್ಲಿ ಸೇವಾನಿರತರಿಗೆ ತರಬೇತಿ ನೀಡುವ ಕಾರ್ಯಕ್ರಮಗಳು ಲಭ್ಯವಿರುವುದಾದರೂ ಭಾರತದಲ್ಲಿ ಈ ಉದ್ದೇಶಕ್ಕಾಗಿ ಸಾಕಷ್ಟು ಸಂಖ್ಯೆಯ ತರಬೇತಿ ಕೇಂದ್ರಗಳು ಸ್ಥಾಪಿತವಾಗಿಲ್ಲ. ಮೇಲ್ವಿಚಾರಕರಿಗೆ ತರಬೇತಿ ನೀಡುವ ಮೂಲಕ ನಮ್ಮ ಉದ್ಯಮರಂಗದ ಅಗತ್ಯತೆಗಳನ್ನು ಪೂರೈಸಲು ಯತ್ನಿಸುತ್ತಿರುವ ರಾಷ್ಟ್ರೀಯ ಉತ್ಪಾದನಾ ಪರಿಷತ್ತು ನಿಜವಾಗಿಯೂ ಸರ್ವವಿಧದಲ್ಲೂ ಪ್ರಶಂಸೆಗೆ ಅರ್ಹವಾಗಿದೆ.

ರಾಷ್ಟ್ರವು ಹೊಂದಿರುವ ಮೇಲ್ವಿಚಾರಣಾ ಕುಶಲತೆಯ ಅಭಿವೃದ್ಧಿಯ ಮಟ್ಟ ಮತ್ತು ಅದರ ವ್ಯಾಪ್ತಿಯು ಔದ್ಯಮಿಕ ಉತ್ಪಾದನೆಯ ಬೆಳವಣಿಗೆಯನ್ನು ನಿರ್ಧರಿಸುತ್ತದೆ ಹಾಗೂ ಅದನ್ನು ಕಾಪಾಡಿಕೊಂಡು ಬರುತ್ತದೆ ಎಂಬುದು ಎಲ್ಲ ಪ್ರಗತಿಪರ ರಾಷ್ಟ್ರಗಳ ಅನುಭವ. ಯಾವುದೇ ಒಂದು ಸಂಸ್ಥೆಯಲ್ಲಿ ಉತ್ಪಾದನೆಗೆ ಸಂಬಂಧಿಸಿದ ವಿಷಯಗಳನ್ನು ಆಡಳಿತ ವರ್ಗದ ಉನ್ನತ ಮಟ್ಟದಿಂದ ಕೆಲಸಗಾರನಿಗೆ ಮುಟ್ಟಿಸುವ ನೇರ ಮಾಧ್ಯಮವಾಗಿರುವ ಮೇಲ್ವಿಚಾರಕನು ಆ ಸಂಸ್ಥೆಯಲ್ಲಿ ಅತ್ಯಂತ ಪ್ರಮುಖ ಸ್ಥಾನವನ್ನು ಹೊಂದಿರುತ್ತಾನೆ ಎಂಬುದು ನಿಮಗೆಲ್ಲ ತಿಳಿದೇ ಇದೆ. ನಿರ್ಮಾಣ ಹಂತದಲ್ಲಾಗಲೀ ಉತ್ಪಾದನೆಗೆ ಸಂಬಂಧಿಸಿದ ವಿಚಾರಗಳನ್ನು ಕಾರ್ಯಗತಗೊಳಿಸುವುದು ಬಹಳ ಮುಖ್ಯ. ಮೇಲ್ವಿಚಾರಕನು ತನ್ನ ಮುಂದಿರುವ ಗುರಿಗಳನ್ನು ಸಾಧಿಸುವ

ಉದ್ದೇಶಕ್ಕಾಗಿ ವ್ಯವಸ್ಥಿತ ಸಮೂಹದ ಕಾರ್ಯವನ್ನು ಸರಿಯಾಗಿ ನೆರವೇರಿಸುವಂತಾಗಲು ಅವಶ್ಯಕ ಕೌಶಲ್ಯವನ್ನು ಪಡೆದವನಾಗಿರಬೇಕು. ಈ ಕಾರ್ಯದಲ್ಲಿ ಅವನು ತನ್ನ ಅಧಿಕಾರಗಳನ್ನು ಹಾಗೂ ತನ್ನ ಜವಾಬ್ದಾರಿಗಳನ್ನು ಚೆನ್ನಾಗಿ ತಿಳಿದುಕೊಂಡಿರಬೇಕು. ಶಿಸ್ತು ನಿರ್ವಹಣೆಯ ಬಗ್ಗೆ ತಿಳಿದು ಕೊಂಡಿರಬೇಕು. ಹಾಗೆಯೇ ಒಂದು ಸಂಸ್ಥೆಯು ಸದಾ ಬೆಳೆಯುತ್ತಿರುವ ಮತ್ತು ಬದಲಾಗುತ್ತಿರುವ ಬೇಡಿಕೆಗಳಿಂದಾಗಿ ಎದುರಾಗುವ ಸವಾಲುಗಳಗಳನ್ನು ಎದುರಿಸಲು ಸರಿಯಾದ ಮಾರ್ಗದರ್ಶನ, ನಿರೂಪಣೆ ಮತ್ತು ತರಬೇತಿಯ ಮೂಲಕ ಕೆಲಸಗಾರರನ್ನು ಹುರಿದುಂಬಿಸಬೇಕು. ಹೀಗಾಗಿ ಆಧುನಿಕ ಮೇಲ್ವಿಚಾರಕನು ಹೆಚ್ಚು ಮತು ಗುಣಮಟ್ಟದ ವಿಚಾರದಲ್ಲಿ ಸದಾ ಜಾಗ್ರತನಾಗಿರಬೇಕು. ಹಾಗೂ ತಾಂತ್ರಿಕ ಕುಶಲತೆಗಳಲ್ಲಿಯೂ ತನ್ನ ಅಧೀನದಲ್ಲಿ ಕೆಲಸ ಮಾಡುತ್ತಿರುವ ಕೆಲಸ ಗಾರರ ಸಮೂಹದ ಮುಂದಿರುವ ಗುರಿಗಳನ್ನು ಸಾಧಿಸಲು ಅಗತ್ಯವಿರುವ ಸಾಮಾಜಿಕ ಕುಶಲತೆಯೂ ಸೇರಿದಂತೆ ಆಡಳಿತ ವ್ಯವಸ್ಥೆಗೆ ಸಂಬಂಧಿಸಿದ ಕುಶಲತೆಗಳ ವಿಚಾರ ದಲ್ಲಿಯೂ ಪರಿಣತಿಯನ್ನು ಪಡೆದಿರಬೇಕು.

ಪಶ್ಚಿಮ ಜರ್ಮನಿ, ರಷ್ಯಾ ಮತ್ತು ಜಪಾನುಗಳಂಥ ಮುಂದುವರಿದ ರಾಷ್ಟ್ರಗಳ ಔದ್ಯಮಿಕ ಪ್ರಗತಿ ಮತ್ತು ಬೆಳವಣಿಗೆಯ ಹಿನ್ನೆಲೆಯನ್ನು ಗಮನಿಸಿದಾಗ, ಈ ರಾಷ್ಟ್ರ ಗಳು ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ವಿಪರೀತ ತೊಂದರೆಯನ್ನು ಅನು ಭವಿಸಿದುದನ್ನು ಹಾಗೂ ಹೆಚ್ಚು ಸಂಖ್ಯೆಯ ಮೇಲ್ವಿಚಾರಕರನ್ನು ಕಳೆದುಕೊಂಡಿದ್ದು ದನ್ನೂ ಕಾಣಬಹುದು. ತಮ್ಮ ಉದ್ಯಮಗಳ ಅಭಿವೃದ್ಧಿ ಹಾಗೂ ತಮ್ಮ ಆರ್ಥಿಕ ಮಟ್ಟವನ್ನು ಹೆಚ್ಚಿಸಲು ಈ ರಾಷ್ಟ್ರಗಳು ತಮ್ಮ ಮೇಲ್ವಿಚಾರಕರಿಗೆ ಅತ್ಯಾಧುನಿಕ ರೀತಿ ಯಲ್ಲಿ ತರಬೇತಿ ನೀಡುವುದಕ್ಕಾಗಿ ಈ ರಾಷ್ಟ್ರಗಳು ವ್ಯಾಪಕವಾಗಿ ಹೆಚ್ಚು ಸೌಲಭ್ಯ ಗಳನ್ನು ಒದಗಿಸಿದವು. ಈ ಮೇಲ್ವಿಚಾರಕರು ಪರಿಣಾಮಕಾರಿ ರೀತಿಯಲ್ಲಿ ಕಾರ್ಯ ನಿರ್ವಹಿಸಿದ್ದರಿಂದಾಗಿಯೇ ಆ ದೇಶಗಳ ಔದ್ಯಮಿಕ ಉತ್ಪಾದನೆಯು ಶೀಘ್ರಗತಿಯಲ್ಲಿ ಏರುತ್ತಾ ಹೋಗಲು ಸಾಧ್ಯವಾಯಿತು. ಈಗ ನಮ್ಮ ದೇಶದಲ್ಲೂ ಉದ್ಯಮಗಳನ್ನು ವಿಸ್ತರಿಸುವ ಮತ್ತು ಅವುಗಳನ್ನು ಬೆಳೆಸುವ ಪರ್ವಕಾಲ ಬಂದೊದಗಿದೆ. ಉದ್ಯಮ ಬೆಳವಣಿಗೆಯಿಂದ ಮಾತ್ರ ನಿರುದ್ಯೋಗ ಸಮಸ್ಯೆಯ ನಿವಾರಣೆ ಸಾಧ್ಯ ಎಂಬ ತೀರ್ಮಾ ನಕ್ಕೆ ನಾವು ಬಂದಿದ್ದೇವೆ. ಈ ಮೂಲಕ ದೇಶದಲ್ಲಿರುವ ಮಾನವ ಶಕ್ತಿಯನ್ನು ಪರಿ ಣಾಮಕಾರಿಯಾಗಿ ಹಾಗೂ ಉಪಯುಕ್ತ ರೀತಿಯಲ್ಲಿ ನಮ್ಮ ಉದ್ಯಮಗಳಲ್ಲಿ ಬಳಸಿ ಕೊಳ್ಳಲಾಗುವುದು. ಆದ್ದರಿಂದ ಮೇಲ್ವಿಚಾರಕರಿಗೆ ತರಬೇತಿ ನೀಡಿ ಆ ಮೂಲಕ ಹೆಚ್ಚಿನ ಬೆಳವಣಿಗೆಯನ್ನು ಸಾಧಿಸುವುದು ಇನ್ನಷ್ಟು ಅವಶ್ಯಕವಾಗಿದೆ. ರಾಷ್ಟ್ರೀಯ ಉತ್ಪಾದನಾ ಪರಿಷತ್ತು ಮೇಲ್ವಿಚಾರಕರಿಗೆ ತರಬೇತಿ ನೀಡುವ ಕಾರ್ಯವನ್ನು ಕೈ ಗೊಳ್ಳಲು ಮುಂದೆ ಬಂದು, ಆ ಮೂಲಕ ಹೆಚ್ಚಿನ ಉತ್ಪಾದನೆಯನ್ನು ಸಾಧಿಸಲು ರಾಷ್ಟ್ರಕ್ಕೆ ನೆರವು ನೀಡುತ್ತಿರುವ ವಿಚಾರ ನನಗೆ ಸಂತೋಷವನ್ನುಂಟು ಮಾಡಿದೆ.

ರಾಷ್ಟ್ರೀಯ ಉತ್ಪಾದನಾ ಪರಿಷತ್ತು ವೈವಿಧ್ಯ ಪೂರ್ಣ ಚಟುವಟಿಕೆಗಳಿಗೆ ಹೆಸರುವಾಸಿಯಾಗಿದೆ. ಅದು ಕೇವಲ ಸಿಬ್ಬಂದಿ ಕ್ಷೇತ್ರದಲ್ಲಿ ಮಾತ್ರವೇ ಅಲ್ಲದೆ ಉನ್ನತ ಆಡಳಿತ ವರ್ಗ ಮತ್ತು ಕೆಲಸಗಾರರ ಅಭಿವೃದ್ಧಿ ಕ್ಷೇತ್ರಗಳಲ್ಲಿಯೂ ತರಬೇತಿ ಕಾರ್ಯಕ್ರಮಗಳನ್ನು ಕೈಗೊಂಡಿದೆ ಎಂದು ನನಗೆ ತಿಳಿದು ಬಂದಿದೆ. ಇಷ್ಟೇ ಅಲ್ಲದೆ ಹಣಕಾಸು, ಉತ್ಪಾದನೆ, ಕ್ರಯವಿಕ್ರಯ, ಶಕ್ತಿ ಮೂಲಗಳ ವ್ಯವಸ್ಥೆ, ಪ್ಲಾಂಟ್ ಇಂಜಿನಿಯರಿಂಗ್, ಉತ್ಪಾದನಾ ಇಂಜಿನಿಯರಿಂಗ್ ಮತ್ತು ಕೃಷಿ ಉತ್ಪಾದಕತೆ ಮುಂತಾದ ಸಂಬಂಧಪಟ್ಟ ವಿಷಯಗಳಲ್ಲಿಯೂ ಸಂಶೋಧನೆ ನಡೆಸುತ್ತಿದೆ ಹಾಗೂ ದೇಶದಲ್ಲಿನ ಬಹಳಷ್ಟು ಉದ್ಯಮಗಳಿಗೆ ಮತ್ತು ಸಂಸ್ಥೆಗಳಿಗೆ ಉಪಯುಕ್ತ ಮಾರ್ಗದರ್ಶನ ನೀಡುತ್ತಿವೆ.

ಖಾಸಗಿ ಹಾಗೂ ಸರ್ಕಾರೀ ವಲಯಗಳಲ್ಲಿನ ಕೈಗಾರಿಕೆಗಳಿಗೆ ಮತ್ತು ಸಂಸ್ಥೆಗಳಿಗೆ ಮಾರ್ಗದರ್ಶನ ನೀಡುವುದರಲ್ಲಿ ಹಾಗೂ ಕುಶಲತೆಯ ಅಭಿವೃದ್ಧಿ ಕಾರ್ಯದಲ್ಲಿ ರಾಷ್ಟ್ರೀಯ ಉತ್ಪಾದನಾ ಪರಿಷತ್ತು ಇಂದು ದೇಶದಲ್ಲಿ ಪ್ರಖ್ಯಾತಿ ಪಡೆದಿರುವುದನ್ನು ತಿಳಿದು ನನಗೆ ಬಹಳ ಆನಂದವಾಗಿದೆ. ಇಂಥ ಖ್ಯಾತ ಸಂಸ್ಥೆಯಲ್ಲಿ ನೀವು ಪಡೆದ ತರಬೇತಿಯು ನಿಮ್ಮ ದೈನಂದಿನ ಕೆಲಸ ಕಾರ್ಯಗಳಲ್ಲಿ ಬಹಳ ಪ್ರಯೋಜನಕಾರಿಯಾಗುವುದೆಂದೂ, ಈ ತರಬೇತಿಯಿಂದಾಗಿ ಯುವ ಉದ್ಯೋಗ ಕ್ಷೇತ್ರದಲ್ಲಿರುವಿರೋ ಅಲ್ಲಿ ನೀವು ಉನ್ನತಿಯ ಸೋಪಾನವನ್ನು ಏರುತ್ತಾ ಹೋಗಲು ಅನುಕೂಲವಾಗುವುದೆಂದೂ ನಾನು ದೃಢವಾಗಿ ನಂಬಿದ್ದೇನೆ. ಈ ದೇಶದಲ್ಲಿರುವ ಹಲವಾರು ಕೈಗಾರಿಕೆಗಳು ಮತ್ತು ಸಂಸ್ಥೆಗಳು ಈ ತರಬೇತಿಯ ಲಾಭವನ್ನು ಪಡೆದುಕೊಂಡು ತಮ್ಮ ಘಟಕಗಳ ಪ್ರಗತಿ ಮತ್ತು ಅಭಿವೃದ್ಧಿ ದೃಷ್ಟಿಯಿಂದಲೂ ಹಾಗೂ ದೇಶದ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದಲೂ ಈ ಸಂಸ್ಥೆಯ ಸೇವೆಗಳನ್ನು ಕಾಲಕಾಲಕ್ಕೆ ಬಳಸಿಕೊಳ್ಳುವಂತಾಗಲಿ ಎಂದು ನಾನು ಹಾರೈಸುತ್ತೇನೆ.

ನಿಮ್ಮೆಲ್ಲರಿಗೂ, ನಿಮ್ಮ ವೃತ್ತಿಯಲ್ಲಿ ಉಜ್ವಲ ಯಶಸ್ಸು ಮತ್ತು ಪ್ರಗತಿಯು ಲಭಿಸಲಿ ಎಂದು ನನ್ನ ಹಾರೈಕೆ. ಈ ಘಟಿಕೋತ್ಸವ ಭಾಷಣ ಮಾಡಲು ನನ್ನನ್ನು ಆಹ್ವಾನಿಸಿದ್ದಕ್ಕಾಗಿ ಈ ಘಟಿಕೋತ್ಸವದ ವ್ಯವಸ್ಥಾಪಕರನ್ನು ವಂದಿಸುತ್ತೇನೆ.

———

ವಯಸ್ಕರ ಶಿಕ್ಷಣ ಸಮಿತಿಯ ಗೋಷ್ಠಿಯಲ್ಲಿ ಕರ್ನಾಟಕ ಸರ್ಕಾರದ ಶಿಕ್ಷಣ ಮಂತ್ರಿಯವರಾದ ಮಾನ್ಯ ಶ್ರೀ ಜಿ. ಬಿ. ಶಂಕರರಾವ್ ಅವರ ಉದ್ಘಾಟನಾ ಭಾಷಣ.

ದೇಶದ ಬೇರೆ ಬೇರೆ ಭಾಗಗಳಿಂದ ಬಂದಿರುವ ಪ್ರಖ್ಯಾತ ಶಿಕ್ಷಣ ತಜ್ಞರ ಜೊತೆಯಲ್ಲಿ ಇರುವಂಥ ಸದವಕಾಶ ಸಿಕ್ಕಿರುವುದು ನನ್ನ ಸುಯೋಗ. "ವಯಸ್ಕ ಶಿಕ್ಷಣ ಮತ್ತು ರಾಷ್ಟ್ರೀಯ ಸಮಗ್ರತೆ" ಬಗ್ಗೆ ಚರ್ಚೆ ನಡೆಸುವ ಸಲುವಾಗಿ, ಮೈಸೂರಿನಲ್ಲಿ ನಡೆಯುತ್ತಿರುವ ಈ ರಾಷ್ಟ್ರೀಯ ವಿಚಾರ ಸಂಕಿರಣದ ಉದ್ಘಾಟನೆಯನ್ನು ನೆರವೇರಿಸಲು ನನಗೆ ಅವಕಾಶ ಕಲ್ಪಿಸಿದ್ದಕ್ಕಾಗಿ ಭಾರತ ವಯಸ್ಕ ಶಿಕ್ಷಣ ಸಂಸ್ಥೆಗೆ ನಾನು ಅಭಾರಿಯಾಗಿದ್ದೇನೆ. ರಾಜಕೀಯ ಸ್ವಾತಂತ್ರ್ಯ ನಮ್ಮ ದೇಶಕ್ಕೆ ಗಣನೀಯವಾದ ಬದಲಾವಣೆಗಳನ್ನು ತಂದು ಕೊಟ್ಟಿದ್ದರೂ, ಭಾವನಾತ್ಮಕ ಸಮಗ್ರತೆಯನ್ನು ನಾವು ಇನ್ನೂ ಸಾಧಿಸಬೇಕಾಗಿದೆ. ಈ ರೀತಿಯ ಸಮಗ್ರತೆಯನ್ನು ನಾವು ಸಾಧಿಸಬೇಕಾದರೆ ಅನಕ್ಷರಸ್ತ ವಯಸ್ಕರನ್ನು ಅಕ್ಷರಸ್ಥರನ್ನಾಗಿ ಮಾಡಬೇಕು. ಈಗಿರುವ ಸಾಮಾಜಿಕ ಮತ್ತು ರಾಷ್ಟ್ರೀಯ ಸ್ವರೂಪದ ಅನೇಕ ಜ್ವಲಂತ ಸಮಸ್ಯೆಗಳನ್ನು ಪರಿಹರಿಸಲು ಸಹಾಯಕವಾಗುವಂಥ ರಾಷ್ಟ್ರೀಯ ಜಾಗೃತಿಯನ್ನು ಅನಕ್ಷರಸ್ಥರ ಮುಗ್ಧ ಹೃದಯದಲ್ಲಿ ಮೂಡಿಸಬೇಕು. ಪ್ರಾದೇಶಿಕ ಅಂತರವನ್ನು, ಆರ್ಥಿಕ ಮತ್ತು ಅಸಮತೆಯನ್ನು ಮತ್ತು ಸಾಮಾಜಿಕ ವಿಲಕ್ಷಣವನ್ನು ವಯಸ್ಕ ಶಿಕ್ಷಣ ಪರಿಹರಿಸುವಂತಾಗಬೇಕು. ವಯಸ್ಕ ಶಿಕ್ಷಣ, ಜಾತಿ ಮತ್ತು ಮತದ ವ್ಯತ್ಯಾಸಗಳು ಮತ್ತು ಪ್ರಾದೇಶಿಕ ಮತ್ತು ಸಾಂಸ್ಕೃತಿಕ ಭಿನ್ನಾಭಿಪ್ರಾಯಗಳನ್ನು ತೊಲಗಿಸಿ ನಮ್ಮ ದೇಶದ ಜನತೆಯಲ್ಲಿ ಏಕತಾಭಾವನೆಯನ್ನು ಮೂಡಿಸಬೇಕು ಮತ್ತು ಇತರರ ಜೀವನ ದೃಷ್ಟಿ, ನಂಬಿಕೆ ಮತ್ತು ಜೀವನ ರೀತಿಯ ಬಗ್ಗೆ ಗೌರವ ಮೂಡಿಸುವಂತಿರಬೇಕು. ರಾಷ್ಟ್ರೀಯ ಸಮಗ್ರತೆಯನ್ನು ಸಾಧಿಸುವ ಗುರಿ ವಯಸ್ಕ ಶಿಕ್ಷಣದ ಒಂದು ಅವಿಭಾಜ್ಯ ಅಂಗವಾಗಿರಬೇಕು. ಸಮಗ್ರತೆಯ ಭಾವನೆಗೆ ವಿರುದ್ಧವಾದ ಎಲ್ಲ ಪ್ರತಿಕೂಲ ವಿಷಯಗಳನ್ನು ಶಿಕ್ಷಣದಿಂದ ತೆಗೆದುಹಾಕಬೇಕು. ಈ ಗುರಿಸಾಧನೆಗಾಗಿ ಅವಶ್ಯವಾದರೆ, ವಯಸ್ಕರ ಮತ್ತು ಮಕ್ಕಳ ಪಠ್ಯಪುಸ್ತಕಗಳನ್ನು ಪರಿಷ್ಕರಿಸಬೇಕು ಮತ್ತು ಬದಲಾಯಿಸಬೇಕು. ಈ ವಿಷಯಗಳನ್ನು ಪರಾಮರ್ಶಿಸಿದರೆ, ರಾಷ್ಟ್ರೀಯ ಸಮಗ್ರತೆಯನ್ನು ಸಾಧಿಸುವಲ್ಲಿ ವಯಸ್ಕ ಶಿಕ್ಷಣ ಬಹು ಮಹತ್ವ ಪಾತ್ರವನ್ನು ವಹಿಸಲೇಬೇಕು. ಅಂದ ಮೇಲೆ, ವಯಸ್ಕ ಶಿಕ್ಷಣ ಎಂದರೇನು ? ಕೇವಲ ಅನಕ್ಷರತೆಯನ್ನು ನಿವಾರಿಸುವುದಷ್ಟೇ ಅದರ ಉದ್ದೇಶವೇ ? ವಿಜ್ಞಾನ ಮತ್ತು ತಂತ್ರಜ್ಞಾನಗಳಿಂದ ಹೊಸ ಸಾಮಾಜಿಕ ಸ್ಥರಗಳ ಅವಿಷ್ಕಾರವಾಗುತ್ತಿರುವ ಈ ಬಾಹ್ಯಾ

ವಾಹಕರೂ ಹೌದು. ಅನಕ್ಷರತೆಯನ್ನು ಕಡಿಮೆ ಮಾಡಲು ಹಾಗೂ ಶಿಕ್ಷಣ ನೀಡಲು ನೆರವಾಗುವ ನಿಮ್ಮ ಪ್ರಯತ್ನ ಶಾಲಾ ತರಗತಿಯಲ್ಲಿನ ಉಪಾಧ್ಯಾಯನ ಪ್ರಯತ್ನದಷ್ಟೇ ಮಹತ್ವಪೂರ್ಣವಾದುದು. ನಿಮಗೆ ವಹಿಸಲಾಗಿರುವ ಗ್ರಂಥಪಾಲರ ಕರ್ತವ್ಯಗಳನ್ನು ನಿರ್ವಹಿಸಲು, ಸೂಕ್ತ ರೀತಿಯಲ್ಲಿ ವ್ಯವಸ್ಥೆಗೊಳಿಸಿದ ಗ್ರಂಥ ವಿವರಣ ಪಟ್ಟಿಯನ್ನು ಅಳವಡಿಸಿಕೊಳ್ಳುವುದರ ಮೂಲಕ ವ್ಯವಸ್ಥಿತವಲ್ಲದ ಹಾಗೂ ವಿವಿಧ ಪ್ರಕಾರದ ಗ್ರಂಥಗಳ ಮೇಲೆ ದಕ್ಷ ನಿಯಂತ್ರಣ ಇರಿಸಬೇಕಾದುದು ಅಗತ್ಯ ಇದರಿಂದಾಗಿ ಉಪಯೋಗಿಸುವವರಿಗೆ ಮಾಹಿತಿಯನ್ನು ಹುಡುಕುವುದು ಸುಲಭವಾಗುತ್ತದೆ. ಆಧುನಿಕ ಸಮಾಜದಲ್ಲಿ, ಕಾರ್ಯಸಾಧ್ಯವಾದ ಹಾಗೂ ಶೀಘ್ರ ಸಂಪರ್ಕದ ಸೌಲಭ್ಯಗಳನ್ನು ಹೊಂದಿರುವಂಥ ಆಧುನಿಕ ತಂತ್ರಜ್ಞಾನದ ಲಾಭವನ್ನು ಗ್ರಂಥಾಲಯ ಅಧಿಕಾರಿ ಅವಶ್ಯವಾಗಿ ಪಡೆದಿರಬೇಕಾಗಿರುತ್ತದೆ, ಅಲ್ಲದೆ ಜನರು ಸ್ವಾವಲಂಬಿಗಳಾಗುವುದಕ್ಕೆ ನೀವು ಸಹಾಯ ನೀಡುತ್ತೀರಿ. ಮಾನವ ಚಟುವಟಿಕೆಯ ಎಲ್ಲ ಕ್ಷೇತ್ರಗಳೂ ನಿಮ್ಮ ವ್ಯಾಪ್ತಿಗೆ ಸೇರುತ್ತದೆ.

ಗ್ರಂಥಗಳನ್ನು ಬಳಸಿ ಜ್ಞಾನಾರ್ಜನೆ ಮಾಡುವವರೇ ಇಲ್ಲಿ ಪ್ರಮುಖ ವ್ಯಕ್ತಿಗಳು. ಅವರಿಗೆ ಅವಶ್ಯವಾದ ವಸ್ತುವಿಷಯವನ್ನು ಗ್ರಂಥಾಲಯಗಳಲ್ಲಿ ಅವರಿಗೆ ಒದಗಿಸಬೇಕಾಗುತ್ತದೆ. ಆದ್ದರಿಂದ ಗ್ರಂಥಾಲಯ ಅಧಿಕಾರಿಗಳು ಸಂಘಟನೆಯ ಚಟುವಟಿಕೆಗಳನ್ನು ಹೇಗೆ ಯೋಜಿಸಬೇಕೆಂಬುದನ್ನು ಕೂಲಂಕುಷವಾಗಿ ಪರಿಶೀಲಿಸಿ ಅದನ್ನು ವಿಷಯವಾರು ವಿಂಗಡಿಸಿ ಬಳಸುವವರಿಗೆ ಆ ವಿಷಯಗಳ ಪುಸ್ತಕ ಪಟ್ಟಿಯನ್ನು ಒದಗಿಸಬೇಕು. ಬೇಡಿಕೆಯಿರುವ ಪುಸ್ತಕಗಳನ್ನು ಓದುಗರು ಖರೀದಿಸುವ ಸಲುವಾಗಿ ಅವರ ಸಂಗ್ರಹದಲ್ಲಿ ಇಲ್ಲದಿರುವ ಪುಸ್ತಕಗಳನ್ನು ಗುರುತಿಸಿ, ಅವನ್ನು ಓದುಗರ ಗಮನಕ್ಕೆ ತರುವುದು ಗ್ರಂಥಾಲಯ ಅಧಿಕಾರಿಯ ಮುಖ್ಯ ಕರ್ತವ್ಯ. ಅವರು ನಿಯತವಾಗಿ ಗ್ರಂಥಾಲಯ ಸೌಲಭ್ಯಗಳನ್ನು ಬಳಸಿಕೊಳ್ಳುವವರಿಗೆ ಸೇವೆ ಸಲ್ಲಿಸುವುದಷ್ಟೇ ಅಲ್ಲದೆ ಒಟ್ಟಾರೆ ಓದುಗರ ಅವಶ್ಯಕತೆಗಳನ್ನು ಗಮನಿಸುವುದು ಅವಶ್ಯವಾಗುತ್ತದೆ. ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯ ಉಪಯುಕ್ತತೆ ಅನೇಕ ಅಂಶಗಳನ್ನು ಅವಲಂಬಿಸಿದೆ. ಆದರೆ, ಅವುಗಳಲ್ಲಿ ನಿರ್ಧಾರದ ಅಂಶವೆಂದರೆ, ಮೊದಲನೆಯದಾಗಿ, ಯಾವ ರೀತಿಯ ವ್ಯಕ್ತಿಗಳು ಗ್ರಂಥಾಲಯ ಪುಸ್ತಕಗಳ ಪ್ರಯೋಜನ ಪಡೆಯುತ್ತಾರೆ ಮತ್ತು ಏಕೆ ಎಂಬುದು ಗ್ರಾಮೀಣ ಪ್ರದೇಶಗಳಲ್ಲಿರುವ ಜನರಿಗೆ ಹೋಲಿಸಿ ನೋಡಿದಾಗ ನಗರ ಪ್ರದೇಶಗಳಲ್ಲಿ ವಾಸಿಸುವವರು ಪುಸ್ತಕಗಳನ್ನು ಖರೀದಿಸುವ ಮೂಲಕ ಅಥವಾ ಗ್ರಂಥಾಲಯಗಳಿಂದ ಪಡೆಯುವುದರ ಮೂಲಕ ಹೆಚ್ಚು ಪುಸ್ತಕಗಳನ್ನು ಓದುತ್ತಾರೆ. ಆದ್ದರಿಂದ ಗ್ರಾಮೀಣ ಜನತೆಗೆ ಉಪಯೋಗ ಸಾಧ್ಯವಾಗುವ ಹಾಗೂ ಸೂಕ್ತ ಪುಸ್ತಕಗಳನ್ನು ಒದಗಿಸುವ ಗ್ರಂಥಾಲಯ ಸೌಲಭ್ಯ ಕಲ್ಪಿಸುವಂಥ ರೀತಿ ಹಾಗೂ ವಿಧಾನಗಳನ್ನು ರೂಪಿಸುವುದು ಹಾಗೂ ಆ ಮೂಲಕ ಸಮಗ್ರ ಗ್ರಾಮೀಣ ಪುನರ್‌ರಚನೆಗೆ

ಅವಶ್ಯವಿರುವ ಕ್ರಮಗಳನ್ನು ಕೈಗೊಳ್ಳುವುದೇ ಅಲ್ಲದೆ, ಸಂಪರ್ಕ ಮಾಧ್ಯಮವಾಗಿ ಹಾಗೂ ಅನಕ್ಷರತಾ ನಿವಾರಣೆಯ ಮಾಧ್ಯಮವಾಗಿ ಪುಸ್ತಕಗಳು ವಹಿಸುತ್ತಿರುವ ಪಾತ್ರವನ್ನು ವಿಸ್ತರಿಸುವುದು ಅವಶ್ಯ.

ಕರ್ನಾಟಕದಲ್ಲಿ, ಸಾರ್ವಜನಿಕ ಗ್ರಂಥಾಲಯಗಳ ಇಲಾಖೆ 1966ರ ನವೆಂಬರ್ 1ರಂದು ಅಸ್ತಿತ್ವಕ್ಕೆ ಬಂದಿತು. ಕರ್ನಾಟಕ ರಾಜ್ಯದಲ್ಲಿ ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆ ಹಾಗೂ ನಿರ್ವಹಣೆ ಮತ್ತು ಸಮಗ್ರ ಗ್ರಾಮೀಣ ಹಾಗೂ ನಗರ ಗ್ರಂಥಾಲಯ ಸೇವೆಗಳಿಗೆ ಅವಕಾಶ ಕಲ್ಪಿಸುವ ಉದ್ದೇಶವನ್ನು ಈ ಅಧಿನಿಯಮ ಹೊಂದಿದೆ. ಇದನ್ನು ಗಮನದಲ್ಲಿರಿಸಿಕೊಂಡು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ ವೃತ್ತಿ ಮಾಹಿತಿ ಕೇಂದ್ರಗಳನ್ನು ಪ್ರಾರಂಭಿಸುವುದು, ಸ್ಥಳದಲ್ಲೇ ದೊರೆಯುವ ಪುಸ್ತಕಗಳನ್ನು ಸಂಗ್ರಹಿಸುವುದು ಮತ್ತು ಮಕ್ಕಳಿಗಾಗಿ ಗ್ರಂಥಾಲಯಗಳನ್ನು ಸ್ಥಾಪಿಸುವುದು, ಇವೇ ಮುಂತಾದ ಕಾರ್ಯ ಚಟುವಟಿಕೆಗಳನ್ನು ಪ್ರಾರಂಭಿಸಲಾಗಿದೆ. ಗ್ರಂಥಾಲಯ ಕೇವಲ ಪುಸ್ತಕಗಳ ಉಗ್ರಾಣವಲ್ಲ. ಅದು ಜ್ಞಾನಪ್ರಸರಣ ಕೇಂದ್ರವಾಗಿ ಸೇವೆ ಸಲ್ಲಿಸಬೇಕು. ಈಗಷ್ಟೇ, ಇಂದಿನ ಪರಿಸ್ಥಿತಿಯಲ್ಲಿ ಅವಶ್ಯ ಬೇಕಾಗಿರುವಂಥ "ಕುಟುಂಬ ಕಲ್ಯಾಣ ಮತ್ತು ಜನಸಂಖ್ಯಾ ನಿಯಂತ್ರಣ ಶಿಕ್ಷಣಕ್ಕೆ ಸಂಬಂಧಿಸಿದ ಮಾಹಿತಿ ಕೇಂದ್ರ"ದ ಉದ್ಘಾಟನೆ ಮಾಡಿದ್ದೇನೆ.

ಸಾರ್ವಜನಿಕ ಗ್ರಂಥಾಲಯಗಳ ಕ್ಷೇತ್ರದಲ್ಲಿ ಬದಲಾಗುತ್ತಿರುವ ತತ್ತ್ವಗಳಿಗನು ಸಾರವಾಗಿ, ಈ ಇಲಾಖೆಯು ಕೈಗೊಂಡಿರುವ ಅನೇಕ ಕಾರ್ಯಕ್ರಮಗಳು ಔಪಚಾರಿಕ ಹಾಗೂ ಅನೌಪಚಾರಿಕ ಶಿಕ್ಷಣ ಕ್ಷೇತ್ರಗಳೆರಡರಲ್ಲೂ ಸಹಾಯಕವಾಗುವುವೆಂದು ನಂಬಿಕೆ.

ಈ ವಿಚಾರಗೋಷ್ಠಿ ಅತ್ಯಂತ ಯಶಸ್ವಿಯಾಗಲೆಂದು ಹಾರೈಸುತ್ತೇನೆ ಹಾಗೂ ಸಮ್ಮೇಳನದಲ್ಲಿ ಭಾಗವಹಿಸಿರುವವರೆಲ್ಲರೂ, ಬ್ರಿಟಿಷ್ ತಜ್ಞರಾದ ಶ್ರೀಯುತ ರಾಯ ಹ್ಯೂಸ್ ಮತ್ತು ಜಾನ್ ಡ್ರಾಕ್‌ಲೀ ಇವರ ಅನುಭವ ಹಾಗೂ ಪಾಂಡಿತ್ಯದ ಪ್ರಯೋಜನ ಪಡೆಯುವಿರೆಂದು ನಂಬಿದ್ದೇನೆ. ಸಮ್ಮೇಳನಕ್ಕೆ ನೀಡಿದ ಬೆಂಬಲಕ್ಕಾಗಿ ಕರ್ನಾಟಕ ಸರ್ಕಾರದ ಪರವಾಗಿ ಹಾಗೂ ನನ್ನ ಪರವಾಗಿ ಬ್ರಿಟಿಷ್ ಕೌನ್ಸಿಲ್‌ಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಹಾಗೂ ಇಲಾಖೆಯ ಚಟುವಟಿಕೆಗಳ ಪ್ರಗತಿಗಾಗಿ ಬ್ರಿಟಿಷ್ ಕೌನ್ಸಿಲ್ ಇನ್ನು ಮುಂದೆಯೂ ಹೀಗೆಯೇ ಪ್ರೋತ್ಸಾಹ ನೀಡುವುದೆಂದು ಆಶಿಸುತ್ತೇನೆ.

ಬೆಂಗಳೂರು "ಭಾರತದ ಉದ್ಯಾನಗಳ ನಗರ"ವೆಂದು ಪ್ರಖ್ಯಾತವಾಗಿದೆ. ಅದಕ್ಕೆ ಅದರದೇ ಆದ ಸೌಂದರ್ಯವಿದೆ. ದೂರ ದೇಶಗಳಲ್ಲಿ ಪ್ರಯಾಣ ಮಾಡಿ ಅಲ್ಲಿನ ಸ್ಥಳ ವಿಶೇಷಗಳ ಸೌಂದರ್ಯವನ್ನು ಕಂಡ ನೀವು ಬೆಂಗಳೂರಿನ ಹಾಗೂ ಸುತ್ತಮುತ್ತಲ ಸ್ಥಳಗಳ ಸೌಂದರ್ಯವನ್ನು ನೋಡಿ ಸಂತೋಷಪಡುವಿರಾಗಿ ನಂಬುತ್ತೇನೆ. ವಿಚಾರ ಗೋಷ್ಠಿಯ ವಿಪುಲ ಕಾರ್ಯಕ್ರಮಗಳ ಪರಿಶ್ರಮವು ಈ ಸೌಂದರ್ಯಾಸ್ವಾದನೆಯಿಂದ ನೀಗುವಂತಾಗಲಿ ಎಂದೂ. ನೀವು ಇಲ್ಲಿರುವಷ್ಟು ಕಾಲ ನಿಮ್ಮ ವಾಸ ಸುಖಕರವಾಗಲೆಂದೂ ಹಾಗೂ ವಿಚಾರಗೋಷ್ಠಿ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

———

ಕರ್ನಾಟಕ ರಾಜ್ಯದ ಮಾನ್ಯ ಶಿಕ್ಷಣ ಸಚಿವರಾದ ಜಿ.ಬಿ. ಶಂಕರರಾವ್ ಅವರಿಂದ ವಿಚಾರಗೋಷ್ಠಿಯ ಉದ್ಘಾಟನೆ.

ಕರ್ನಾಟಕ ಸರ್ಕಾರದ ಶಿಕ್ಷಣ ಸಚಿವನಾಗಿ ಸಾರ್ವಜನಿಕ ಗ್ರಂಥಾಲಯಗಳ ಇಲಾಖೆಯವರು ಬ್ರಿಟಿಷ್ ಕೌನ್ಸಿಲ್‌ನ ಸಹಯೋಗದೊಂದಿಗೆ ಏರ್ಪಡಿಸಿದ ಈ ಸಮ್ಮೇಳನದಲ್ಲಿ ಭಾಗವಹಿಸುವ ಅವಕಾಶವನ್ನು ನನಗೆ ಕಲ್ಪಿಸಿಕೊಟ್ಟುದುದಕ್ಕಾಗಿ ನನಗೆ ಹರ್ಷವೆನಿಸಿದೆ. ಕರ್ನಾಟಕ ಸಾರ್ವಜನಿಕ ಗ್ರಂಥಾಲಯಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆ "ಸಾರ್ವಜನಿಕ ಗ್ರಂಥಾಲಯ ಕ್ಷೇತ್ರದಲ್ಲಿ ಬದಲಾಗುತ್ತಿರುವ ತತ್ತ್ವಗಳು" ಎಂಬ ಅತ್ಯಂತ ಉಪಯುಕ್ತವಾದ ವಿಷಯವನ್ನು ಕುರಿತ ಸಮ್ಮೇಳನವಿದು. ಇಂಥ ಒಂದು ಸಮ್ಮೇಳನವನ್ನು ಉದ್ಘಾಟಿಸಲು ನನಗೆ ಅತ್ಯಂತ ಸಂತೋಷವೆನಿಸುತ್ತದೆ. ಕಾರ್ಯಸೂಚಿಯಲ್ಲಿ ಈ ಮುಂದಿನ ಅತ್ಯಂತ ಉಪಯುಕ್ತ ಹಾಗೂ ಆಕರ್ಷಣೀಯ ವಿಷಯಗಳಿವೆ. ಯುವಜನರಿಗೆ ಗ್ರಂಥಾಲಯ ಸೇವೆ, ಸಂಚಾರಿ ಗ್ರಂಥಾಲಯ ಸೇವೆ, ಗ್ರಂಥಾಲಯಗಳು ಮತ್ತು ವಯಸ್ಕ ಶಿಕ್ಷಣ; ಗ್ರಾಮೀಣ ಪ್ರದೇಶಗಳಲ್ಲಿ ವಾರ್ತಾ ಸೌಲಭ್ಯಗಳು, ಗ್ರಂಥಾಲಯ ತರಬೇತಿ ಮುಂತಾದ ವಿಷಯಗಳು—ಇವು ಗ್ರಂಥಾಲಯ ವಿಜ್ಞಾನದಲ್ಲಿ ಆದರಲ್ಲೂ ಸಾರ್ವಜನಿಕ ಗ್ರಂಥಾಲಯ ವ್ಯವಸ್ಥೆಯಲ್ಲಿ ಸಾಧಿಸಿರುವ ಪರಿಣತಿಯನ್ನು ಸೂಚಿಸುತ್ತದೆ. ಒಂದು ಕಾಲದಲ್ಲಿ ಓದಲು ಕೊಡುವ ಉದ್ದೇಶದಿಂದ ಪುಸ್ತಕಗಳ ಸಂಗ್ರಹಕ್ಕಷ್ಟೇ ಸೀಮಿತವಾಗಿದ್ದ ಗ್ರಂಥಾಲಯ ನಿರ್ವಹಣೆ ಈಗ ಅತಿ ಹೆಚ್ಚಿನ ಪರಿಣತಿಯನ್ನೊಳಗೊಂಡ ಕಾರ್ಯಕ್ಷೇತ್ರವಾಗಿದೆ. ಇದು ನೈಪುಣ್ಯವನ್ನು ಮೈಗೂಡಿಸಿಕೊಂಡು ಬೆಳೆದ ವಿಜ್ಞಾನವಾಗಿರುವುದಷ್ಟೇ ಅಲ್ಲದೆ ಈ ಕುರಿತ ಜ್ಞಾನ ವ್ಯಾಪಕವಾಗಿ ಹಬ್ಬಿದೆ. ಸಾಮಾಜಿಕ ಕ್ರಿಯಾಶೀಲತೆಯ ಹಾಗೂ ಸುಧಾರಿತ ಸಂಪರ್ಕ ಮಾಧ್ಯಮಗಳ ಇಂದಿನ ಈ ಸಂಕೀರ್ಣ ಬದುಕಿನಲ್ಲಿ ಗ್ರಂಥಾಲಯ ಅಧಿಕಾರಿಗಳ ಪಾತ್ರ ಗುರುತರವಾದದ್ದು. ಸಾರ್ವಜನಿಕ ಗ್ರಂಥಾಲಯ ಕ್ಷೇತ್ರದಲ್ಲಿ ಪರಿಣತರಾದ ನೀವು ಆ ಬಗೆಗಿನ ಜ್ಞಾನ ಎಲ್ಲರಿಗೂ ಸುಲಭವಾಗಿ ತಿಳಿಯುವಂತೆ ಮಾಡುತ್ತಿರುವ ಪ್ರಯತ್ನದಿಂದ ನಾನು ಹರ್ಷಿತನಾಗಿದ್ದೇನೆ. ಇಂಥ ಸಾರ್ವತ್ರಿಕ ಶಿಕ್ಷಣದಲಿ ಪ್ರಜಾಪ್ರಭುತ್ವವು ಹಮ್ಮಿಕೊಂಡಿರುವ ನಂಬಿಕೆಯ ಪ್ರತ್ಯಕ್ಷ ನಿರೂಪಣೆಯೇ ಗ್ರಂಥಾಲಯ ಜ್ಞಾನ ಹಾಗೂ ಸಂಸ್ಕೃತಿಯ ಕ್ಷೇತ್ರದಲ್ಲಿ, ಮಾನವೀಯ ಮೌಲ್ಯಗಳ ಗುರಿ ಸಾಧನೆಯ ದಿಸೆಯಲ್ಲಿ, ಸಾರ್ವತ್ರಿಕ ಶಿಕ್ಷಣ ಒಂದು ನಿರಂತರ ಹಾಗೂ ಜೀವ ಪರ್ಯಂತ ಪ್ರಕ್ರಿಯೆ" ಎಂದು ನಿರೂಪಿಸಿರುವ ಯುನೆಸ್ಕೋದ ತತ್ತ್ವಪ್ರಣಾಳಿಕೆಗನುಸಾರವಾಗಿಯೇ ನಿಮ್ಮ ಕಾರ್ಯ ಹಾಗೂ ಸೇವೆ ನಡೆಯುತ್ತಿದೆ. ನೀವು ಸದವ

ಕಾಶದ ಈ ಯುಗದಲ್ಲಿ, ವಯಸ್ಕ ಶಿಕ್ಷಣದ ಪ್ರಯೋಜನ ಪಡೆದು ಅನಕ್ಷರಸ್ಥ ವಯಸ್ಕರು ಬದಲಾಗುತ್ತಿರುವ ಪ್ರಪಂಚಕ್ಕೆ ಸರಿಸಾಟಿಯಾಗಿ ಮುನ್ನಡೆಯಲು ಸಾಧ್ಯವಾಗುವಂತೆ ಜ್ಞಾನವನ್ನು ಕರಗತಗೊಳಿಸುವ ಒಂದು ನಿರಂತರ ಶಕ್ತಿಯಾಗಬೇಕು—

ಶಿಕ್ಷಣ, ಶಾಲಾವಿದ್ಯಾಭ್ಯಾಸಕ್ಕಷ್ಟೇ ಸೀಮಿತವಲ್ಲ. ಅದು ಜೀವನ ಪರ್ಯಂತ ಮುಂದುವರಿಯುತ್ತಲೇ ಇರುವ ಪ್ರಕ್ರಿಯೆ. ಇಂದಿನ ಯುವಜನರು ಬೆಳೆಯುತ್ತಿರುವ ಸಮಾಜದ ಜಟಿಲತೆಗಳನ್ನು ಅರಿತುಕೊಳ್ಳಬೇಕು. ಔಪಚಾರಿಕ ಶಿಕ್ಷಣವನ್ನು ಪಡೆದವರೂ ಸಹ ಕಲಿಕೆಯನ್ನು ಮುಂದುವರಿಸಬೇಕು. ಆಗ ಮಾತ್ರ ಆರ್ಥಿಕ ಅಭಿವೃದ್ಧಿ, ಸಾಮಾಜಿಕ ಪರಿವರ್ತನೆ ಮತ್ತು ರಾಷ್ಟ್ರೀಯ ಭದ್ರತೆ ಸಾಧ್ಯ. ನಮ್ಮ ರಾಷ್ಟ್ರದ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಜನತೆ ಮನಃಪೂರ್ವಕವಾಗಿ, ಸಕ್ರಿಯವಾಗಿ ಭಾಗವಹಿಸಬೇಕು. ನಮ್ಮ ರಾಜ್ಯದಲ್ಲಿ ಬಹುಪಾಲು ಜನ ಶಾಲೆಗೆ ಹೋಗುವ ಅವಕಾಶದಿಂದ ವಂಚಿತರಾಗಿರುವುದರಿಂದ ವಯಸ್ಕ ಶಿಕ್ಷಣ ಕಡ್ಡಾಯವಾಗಬೇಕು. ಅನಕ್ಷರಸ್ಥ ವಯಸ್ಕರು ಮತ್ತು ಮಕ್ಕಳಿಗೆ ನೀಡುವ ಶಿಕ್ಷಣ ರಾಷ್ಟ್ರದ ಅಭಿವೃದ್ಧಿಯ ಅಗತ್ಯಗಳಿಗೆ ಬಹುಮಟ್ಟಿಗೆ ಸುಸಂಗತವಾಗಿರಬೇಕು.

ನಮ್ಮ ರೈತರು ಮಣ್ಣಿನ ಗುಣಲಕ್ಷಣಗಳನ್ನು ತಿಳಿಯದೆ ವ್ಯವಸಾಯ ಮಾಡುತ್ತಾರೆ. ಅದೇ ರೀತಿ ಯಂತ್ರಜ್ಞಾನವಿಲ್ಲದೇ ಕಾರ್ಮಿಕರು ಯಂತ್ರಚಾಲನೆ ಮಾಡುತ್ತಾರೆ. ಇದೇ ರಾಷ್ಟ್ರದ ಉತ್ಪಾದನೆ ಕುಂಠಿತವಾಗುವುದಕ್ಕೆ ಕಾರಣ. ಪ್ರಚಾರದ ಮೂಲಕ ಜನರ ಮನವೊಲಿಸುವುದರಿಂದಷ್ಟೇ ರಾಷ್ಟ್ರದ ಜನಸಂಖ್ಯೆಯ ಬೆಳವಣಿಗೆಯನ್ನು ತಡೆಗಟ್ಟುವುದು ಸಾಧ್ಯವಿಲ್ಲ. ಜನಸಂಖ್ಯೆಯ ಏರಿಕೆಯಿಂದ ಆಗುತ್ತಿರುವ ಪರಿಣಾಮವನ್ನು ಅರ್ಥಮಾಡಿಕೊಂಡು ಕುಟುಂಬ ಯೋಜನೆಯನ್ನು ಕಡ್ಡಾಯವಾಗಿ ಅನುಸರಿಸಬೇಕು. ರಾಷ್ಟ್ರದ ಸುರಕ್ಷತೆ ಮತ್ತು ಸಮಗ್ರತೆ ಅಲ್ಲಿನ ಜನರ "ಜ್ಞಾನ"ವನ್ನು ಅವಲಂಬಿಸಿರುತ್ತದೆ. ಪ್ರತಿಯೊಬ್ಬ ಪ್ರಜೆಯೂ ತನ್ನ ವ್ಯಕ್ತಿತ್ವದ ವಿಕಾಸದ ಮತ್ತು ವೃತ್ತಿಯ ಏಳಿಗೆಯ ಸಲುವಾಗಷ್ಟೇ ಅಲ್ಲದೆ ಸಾಮಾಜಿಕ ಮತ್ತು ರಾಜಕೀಯ ಜೀವನದಲ್ಲೂ ಸಕ್ರಿಯವಾಗಿ ಭಾಗವಹಿಸುವಂತಾಗಲು ಶಿಕ್ಷಣ ಪಡೆದಿರಲೇಬೇಕು. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ಪ್ರಜೆಯೂ ತಾನು ಬಯಸುವಂಥ ರೀತಿಯ ಶಿಕ್ಷಣ ಪಡೆಯಲು ಸಾಧ್ಯವಾಗುವ ಅವಕಾಶವನ್ನು ವಯಸ್ಕ ಶಿಕ್ಷಣ ಕಲ್ಪಿಸಬೇಕು. ಭಾರತೀಯರ ಬಗ್ಗೆ ಹೇಳುವುದಾದರೆ ಶೇಕಡ 64 ರಷ್ಟು ಜನ ಅನಕ್ಷರಸ್ಥರು. ಆದ್ದರಿಂದ ಕೂಡಲೇ ಗಮನಿಸಬೇಕಾದಂತಹ ರಾಷ್ಟ್ರೀಯ ಸಮಸ್ಯೆ ಎಂದರೆ ಅನಕ್ಷರತೆಯ ನಿರ್ಮೂಲನೆ. ವಯಸ್ಕ ಶಿಕ್ಷಣದ ವ್ಯಾಪ್ತಿ ಜೀವನದಷ್ಟೇ ವಿಶಾಲವಾದುದು. ಅದರ ಅಗತ್ಯ

ತೆಗಳೂ ಸಹ ಸಾಮಾನ್ಯ ಶಾಲಾವಸ್ಥೆಗಿಂತ ಭಿನ್ನವಾದುದು. ವಿಶ್ವವಿದ್ಯಾಲಯಗಳು, ಗ್ರಂಥಾಲಯಗಳು ಮತ್ತು ಇಲಾಖಾ ಏಜೆನ್ಸಿಗಳು ನೀಡುವ ಬೆಂಬಲದ ಮೇಲೆ ಇದರ ಪ್ರಗತಿ ಅವಲಂಬಿತವಾಗಿರುತ್ತದೆ.

1961ರಲ್ಲಿ ಭಾರತದ ಅನಕ್ಷರಸ್ಥರ ಸಂಖ್ಯೆ 1951 ರಲ್ಲಿದ್ದುದಕ್ಕಿಂತ 36 ಸಾವಿರದಷ್ಟು ಹೆಚ್ಚಾಗಿತ್ತು. 1951ರಲ್ಲಿ 16.6 ಇದ್ದ ಸಾಕ್ಷರತೆಯ ಶೇಕಡಾವಾರು 1961ರಲ್ಲಿ ಶೇಕಡಾ 24ಕ್ಕೆ ಮತ್ತು 1966ರಲ್ಲಿ ಶೇಕಡ 26.6ಕ್ಕೆ ಏರಿದರೂ 1966 ರಲ್ಲಿ ಅನಕ್ಷರಸ್ಥರ ಸಂಖ್ಯೆ ಇನ್ನೂ 20 ಸಾವಿರದಷ್ಟು ಹೆಚ್ಚಿತು. ಜನಸಂಖ್ಯೆಯ ಈ ತ್ವರಿತ ಬೆಳವಣಿಗೆ, ಸಾರ್ವತ್ರಿಕ ಸಾಕ್ಷರತೆಯನ್ನು ಸಾಧಿಸುವತ್ತ ರಾಜ್ಯವು ನಡೆಸುತ್ತಿರುವ ಪ್ರಯತ್ನಗಳನ್ನು ಇನ್ನಷ್ಟು ಹಿಮ್ಮೆಟ್ಟಿಸುತ್ತಿದೆ. ಅನಕ್ಷರತೆಯಿಂದಾಗುವ ತೊಂದರೆಯ ಕಡೆಗೆ ಯಾರೂ ಆಸಕ್ತಿ ತೋರುತ್ತಿಲ್ಲವಾದರೂ ಅದರಿಂದಾಗಿ ವ್ಯಕ್ತಿ ಹಾಗೂ ರಾಷ್ಟ್ರ ತೆರುತ್ತಿರುವ ಬೆಲೆ ಅಪಾರವಾದದ್ದು. ಅನಕ್ಷರಸ್ಥರು ಕನಿಷ್ಠ ದರ್ಜೆಯ ಜೀವನ ನಡೆಸಲು ಆಧುನಿಕ ಜೀವನದ ಪರಿಸರವೇ ಕಾರಣವಾಗುತ್ತಿದೆ. ಜೀವನಕ್ಕೆ ಸಾಕಾಗುವಷ್ಟು ಆದಾಯ ಗಳಿಸಿಲು ಅವನಿಗೆ ಹೆಚ್ಚಿನ ಅವಕಾಶ ದೊರಕುತ್ತಿಲ್ಲ. ಹೀಗಾಗಿ ಆಧುನಿಕ ಸಾಮಾಜಿಕ ಪರಿವರ್ತನೆಗಳಿಂದ ಅವನು ಪ್ರತ್ಯೇಕವಾಗಿಯೇ ಉಳಿಯುವಂತಾಗಿದೆ. ಅನಕ್ಷರತೆ, ಅಧಿಕ ಪ್ರಮಾಣದಲ್ಲಿರುವುದರಿಂದ ಆರ್ಥಿಕ ಉತ್ಪಾದನೆಗೆ ಜನಸಂಖ್ಯಾ ನಿಯಂತ್ರಣಕ್ಕೆ ರಾಷ್ಟ್ರೀಯ ಸಮಗ್ರತೆ ಮತ್ತು ಸಾಮಾಜಿಕ ಸುರಕ್ಷತೆಗೆ ಅಡ್ಡಿ ಅಡಚಣೆಯುಂಟಾಗುತ್ತಿದೆ. ಜನರಲ್ಲಿ ಶಿಕ್ಷಣ ಪ್ರಸಾರವಾಗಬೇಕೆಂಬುದರ ಬಗ್ಗೆ ಹೆಚ್ಚು ಭಿನ್ನಾಭಿಪ್ರಾಯ ಇಲ್ಲ. ಆದ್ದರಿಂದ, ಗೊತ್ತುಪಡಿಸಿರುವ ವ್ಯಾಸಂಗ ಕ್ರಮವನ್ನು ಪೂರೈಸುವವರೆಗೆ ಮಕ್ಕಳಿಗೆ ಮುಕ್ತ ಮತ್ತು ಕಡ್ಡಾಯ ಶಿಕ್ಷಣ ನೀಡುವ ಕಾರ್ಯಕ್ರಮದ ಅಭಿವೃದ್ಧಿಗೆ ವಿಶೇಷ ಗಮನ ನೀಡಬೇಕು.

ಈಗಾಗಲೇ ನಾನು ಹೇಳಿದಂತೆ "ದುಡಿಮೆಯ ಪ್ರಧಾನ ಶಕ್ತಿ" ಯಾಗಿರುವ 15-35 ವಯೋಗುಂಪಿನವರಲ್ಲೇ ಅನಕ್ಷರಸ್ಥರ ಸಂಖ್ಯೆ ಅಧಿಕವಾಗಿರುವುದರಿಂದ ನಮ್ಮ ದೇಶದ ಆರ್ಥಿಕ ಅಭಿವೃದ್ಧಿಗೆ ತಡೆಯುಂಟಾಗಿದೆ. ಸಾಮಾಜಿಕ ಜೀವನ ಆಧುನಿಕವಾಗಿ ರೂಪುಗೊಳ್ಳಬೇಕಾದರೆ ಕ್ರಾಂತಿಕಾರಕ ಬದಲಾವಣೆಗಳಾಗಬೇಕು. ಆದರೆ ಅನಕ್ಷರಸ್ಥ ನಜ ಬದಲಾವಣೆಯನ್ನು ವಿರೋಧಿಸಿ ಹಳೆಯ ಸಾಂಪ್ರದಾಯಿಕ ಜೀವನ ಮೌಲ್ಯಗಳಿಗೆ ಅಂಟಿಕೊಳ್ಳುತ್ತಾರೆ. ವೈಜ್ಞಾನಿಕ ಮತ್ತು ತಾಂತ್ರಿಕ ಪ್ರಗತಿಗಳೇ ಜೀವನ ಮಾರ್ಗವನ್ನು ನಿರ್ಧರಿಸುವಂಥ ಈ ಯುಗದ ಸತ್ತ್ವದೊಂದಿಗ ಅನಕ್ಷರತೆ ಸರಿಸಾಟಿಯಾಗಿ ಹೋರಾಡಲು ಸಾಧ್ಯವಿಲ್ಲ. ತರಬೇತಿ ಇಲ್ಲದ ಜನರಿಗೆ ಹೊಸ ಹೊಸ ವಿಚಾರಧಾರೆಗಳು ಮತ್ತು ಪದ್ಧತಿಗಳನ್ನು ಅನುಸರಿಸುವಂತೆ ಸಮರ್ಪಕವಾಗಿ ತಿಳಿಯಪಡಿಸುವುದು ಸಾಧ್ಯವಿಲ್ಲ.

ಈ ಅಸಹನೀಯ ಪರಿಸ್ಥಿತಿಗೆ ಮುಕ್ತಾಯ ಹಾಡಬೇಕಾದರೆ, ಪ್ರಾಥಮಿಕ ಮತ್ತು ವಯಸ್ಕ ಶಿಕ್ಷಣಗಳೆರಡರ ಕಾರ್ಯವನ್ನು ಚುರುಕುಗೊಳಿಸಬೇಕು. ಈ ಉದ್ದೇಶದಿಂದ, ನಮ್ಮ ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾಗಾಂಧಿಯವರು "ಪ್ರಾಥಮಿಕ ಶಿಕ್ಷಣದ ಸಾರ್ವತ್ರಿಕ ಮಾನ್ಯತೆಯನ್ನು ಮತ್ತು ವಯಸ್ಕ ಶಿಕ್ಷಣದ ಏಳಿಗೆ"ಯನ್ನು ಪರಿಷ್ಕೃತ 20 ಅಂಗಳ ಕಾರ್ಯಕ್ರಮದಲ್ಲಿ ಒಂದು ಅಂಶವನ್ನಾಗಿ ಸೇರಿಸಿದ್ದಾರೆ. ಈ ವಯಸ್ಕ ಶಿಕ್ಷಣ ಕಾರ್ಯಕ್ರಮ "ವೃತ್ತಿ ಆಧಾರಿತ"ವಾಗಿರಬೇಕು. ಅದು ಪ್ರತಿಯೊಬ್ಬನೂ ತಾನು ತೊಡಗಿರುವ ಯಾವುದೇ ವೃತ್ತಿಯನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗುವಂತೆ ಹೊಸ ಆಲೋಚನೆ, ಆಸಕ್ತಿ ಮತ್ತು ಮಾಹಿತಿಯನ್ನು ಪಡೆಯಲು ತನಗಿರುವ ಜ್ಞಾನವನ್ನು ಬಳಸಿಕೊಳ್ಳುವಂಥ ಸಾಮರ್ಥ್ಯವನ್ನು ನೀಡುವಂತಿರಬೇಕು. ಅದು ಅನಕ್ಷರಸ್ಥರದಲ್ಲಿ ಓದು, ಬರಹ ಮತ್ತು ಲೆಕ್ಕದ ಜ್ಞಾನವನ್ನು ಮೂಡಿಸಿ ಅವನು ತನ್ನ ಶಿಕ್ಷಣವನ್ನು ಮುಂದುವರೆಸಲು ಸಹ ಕಾರಣವಾಗುವಂತಿರಬೇಕು. ಅಲ್ಲದೆ, ರಾಷ್ಟ್ರೀಯ ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ಅರಿತು ಅವನ್ನು ಪರಿಹರಿಸುವ ಕಾರ್ಯದಲ್ಲಿ ಸಕ್ರೀಯವಾಗಿ ಭಾಗವಹಿಸುವಂತೆ ಮಾಡಬೇಕು.

ಅನಕ್ಷರತೆಯನ್ನು ನಮ್ಮ ರಾಜ್ಯದಿಂದ ಹೊಡದೋಡಿಸಬೇಕಾದರೆ, 7 ವರ್ಷಗಳ ಶಾಲಾ ಶಿಕ್ಷಣವನ್ನು ಸಮರ್ಪಕವಾಗಿ ಕಾರ್ಯಾಚರಣೆಗೆ ತರಬೇಕು. ಸಾರ್ವತ್ರಿಕ ಶಿಕ್ಷಣಾವಕಾಶ, ಸಾರ್ವತ್ರಿಕ ಹಾಜರಿ ಮತ್ತು ಸಾರ್ವತ್ರಿಕ ಕಡ್ಡಾಯ ಶಿಕ್ಷಣ ಪೂರೈಕೆ– ಇವು ಪ್ರಾಥಮಿಕ ಶಿಕ್ಷಣದ ಮೂರು ಹಂತಗಳು. ಸಾರ್ವತ್ರಿಕ ಶಿಕ್ಷಣಾವಕಾಶವನ್ನು ಕಲ್ಪಿಸಲು, ಪ್ರತಿಯೊಂದು ಮಗುವಿರುವ ಮನೆಗೆ ಅದಷ್ಟು ಹತ್ತಿರದಲ್ಲಿರುವಂತೆ ಶಾಲೆಗಳನ್ನು ಪಾರಂಭಿರಬೇಕು. ಸಾರ್ವತ್ರಿಕ ಹಾಜರಿ ಕಾರ್ಯಕ್ರಮದ ಪ್ರಕಾರ ಪ್ರತಿಯೊಂದು ಮಗುವನ್ನೂ ಕಡ್ಡಾಯವಾಗಿ ಶಾಲೆಗೆ ಸೇರಿಸಲೇಬೇಕು ಮತ್ತು ಸಾರ್ವತ್ರಿಕ ಕಡ್ಡಾಯ ಶಿಕ್ಷಣ ಪೂರೈಕೆಯಪ್ರಕಾರ ಗೊತ್ತುಪಡಿಸಿದ ವ್ಯಾಸಂಗಾವಧಿ ಪೂರೈಸುವವರೆಗೆ ಮಕ್ಕಳು ಕಡ್ಡಾಯವಾಗಿ ಶಾಲೆಗೆ ಹೋಗಲೇಬೇಕು. ತಲೆನೋವು ಮತ್ತು ಜ್ವರ ಇತರ ಭಯಂಕರ ರೋಗಗಳಿಗೆ ಕಾರಣವಾಗುವಂತೆ, ನಿಷ್ಪ್ರಯೋಜಕತೆ ಮತ್ತು ಜಡತ್ವ ಅನೇಕ ದುಷ್ಪರಿಣಾಮಗಳಿಗೆ ಕಾರಣವಾಗುತ್ತವೆ. ಈ ಸಮಸ್ಯೆಯನ್ನು ಪರಿಹರಿಸಬೇಕಾದರೆ ತಂದೆ ತಾಯಿಯರಿಗೆ ತಿಳಿವಳಿಕೆ ಮೂಡಿಸಬೇಕು. ಶಾಲೆಗಳಲ್ಲಿ ಸರಿಯಾದ ರೀತಿಯ ಮಾರ್ಗದರ್ಶನ ನೀಡಬೇಕು ಮತ್ತು ಶಾಲೆಗಳು ವ್ಯವಸ್ಥಿತವಾಗಿರಬೇಕು. ವ್ಯಾಸಂಗದ ಅವಧಿ ಪೂರೈಸುವ ಮೊದಲೇ ಶಾಲೆಯನ್ನು ಬಿಟ್ಟುಬಿಡಬೇಕಾಗಿ ಬರುವಂಥ ಪರಿಸ್ಥಿತಿಯನ್ನ ಬಗೆಹರಿಸಲು (ಡ್ರಾಪ್-ಔಟ್ಸ್) ಗ್ರಾಮೀಣ ಪ್ರದೇಶಗಳಲ್ಲಿ ಪ್ರಸ್ತುತ ಇರುವ ಶಾಲಾ ವೇಳೆಗಳನ್ನು ಸಹ ಬದಲಾಯಿಸಬೇಕಾಗಬಹುದು. ಮಗು ಬೆಳೆದು ತಂದೆ ತಾಯಿಯರಿಗೆ ಹಣ ಸಂಪಾದನೆಯ ಆಸ್ತಿಯಾದಾಗ, ಅವರು ಮಕ್ಕಳನ್ನು ಶಾಲೆಯಿಂದ ಬಿಡಿಸಿ ಮನೆ ಕೆಲಸಕ್ಕೆ ಅಥವಾ ಹೊಲದ ಕೆಲಸಕ್ಕೆ ಹಾಕಿಕೊಳ್ಳುತ್ತಾರೆ.

ಎಲ್ಲೋ ಕೆಲವರು ಅದೃಷ್ಟಶಾಲಿಗಳು ಮಾತ್ರ ಔಪಚಾರಿಕ ಶಾಲಾ ವ್ಯವಸ್ಥೆಯ ಸೌಲಭ್ಯವನ್ನು ಪಡೆಯುತ್ತಾರೆ. ಆದರೆ ಹಗಲು ಹೊಲಗಳಲ್ಲಿ ಕೆಲಸ ಮಾಡುವುದರಿಂದಾಗಿ ಶಾಲಾ ವಿದ್ಯಾಭ್ಯಾಸ ಅವಕಾಶವಿಲ್ಲದ ಅನೇಕ ಅದೃಷ್ಟಹೀನ ತಂದೆ ತಾಯಿಯರು ಮತ್ತು ಮಕ್ಕಳಿಗೆ ಕೊನೆಯಪಕ್ಷ ಬಿಡುವಿನ ವೇಳೆಯಲ್ಲಾದರೂ ಶಿಕ್ಷಣ ದೊರೆಯುವಂತಾಗಬೇಕು.

6 ಅಥವಾ 7 ವರ್ಷದ ಸಣ್ಣ ಮಗು ಮನೆಯಲ್ಲಿ ತೊಂದರೆ ಕೊಡುವುದೆಂದು ಎಷ್ಟೋ ಜನ ತಂದೆ ತಾಯಿಯರು ಶಾಲೆಗೆ ಕಳುಹಿಸುತ್ತಾರೆ. ಆದರೆ ಎಷ್ಟೋ ಮಕ್ಕಳು ಮನೆಯಲ್ಲೂ ಇಲ್ಲದೆ ಶಾಲೆಗೂ ಹೋಗದೆ ಬೀದಿಯಲ್ಲಿ ಇರುವುದು ದುರದೃಷ್ಟ ಸಂಗತಿ. ತಂದೆ ತಾಯಿಯರು ತಮ್ಮ ಹೊಣೆಗಾರಿಕೆಯನ್ನು ಅರಿತುಕೊಂಡ ಹೊರತು ಅಂಥ ಮಕ್ಕಳಿಗೆ ಶಿಕ್ಷಣ ನೀಡುವುದು ಅಸಾಧ್ಯ.

“ದುಡಿಮೆಯ ಪ್ರಧಾನ ಶಕ್ತಿ” ಯಾಗಿರುವ 15-35 ವಯೋಗುಂಪಿನ ಅನಕ್ಷರಸ್ಥ ತರುಣ ವಯಸ್ಕರಿಗೆ ಬಿಡುವಿನ ವೇಳೆಯಲ್ಲಿ ಶಿಕ್ಷಣ ನೀಡಬೇಕು. ಇದು ಅತ್ಯಂತ ಕಷ್ಟಕರವಾದ ವಿಷಯ. ಇದನ್ನು ಸಾಧಿಸಬೇಕಾದರೆ ವಯಸ್ಕ ಶಿಕ್ಷಣ ಕಾರ್ಯಕ್ರಮಕ್ಕೆ ಸಂಬಂಧಿಸಿದ ಎಲ್ಲ ಏಜನ್ಸಿಗಳು ಅರ್ಪಣ ಮನೋಭಾವ, ಕಾರ್ಯಸಂಘಟನೆ ಮತ್ತು ಪ್ರಾಮಾಣಿಕ ಸಹಕಾರದಿಂದ ಕೆಲಸ ನಿರ್ವಹಿಸುವುದು ಅಗತ್ಯ. ಅನಕ್ಷರತೆಯ ನಿರ್ಮೂಲನಕ್ಕಾಗಿ ಮತ್ತು ಅನಕ್ಷರಸ್ಥ ಯುವಜನ ವಯಸ್ಕರಲ್ಲಿ ಕರ್ತವ್ಯಪ್ರಜ್ಞೆ ಮೂಡಿಸು ಕಾರಣವಾಗುವಂತಹ ಜಾಗೃತಿಯನ್ನುಂಟುಮಾಡುವ ಸಲುವಾಗಿ ರಷ್ಯ, ಚೈನಾ, ಇಂಡೋನೇಷಿಯಾ, ಕ್ಯೂಬಾ ಮುಂತಾದ ದೇಶಗಳಲ್ಲಿ ನಡೆದಂತೆ ಶಿಕ್ಷಣ, ಉದ್ಯಮ, ಕೃಷಿ ಮತ್ತು ಇತರ ಅಭಿವೃದ್ಧಿ ಇಲಾಖೆಗಳು, ಸ್ವಾಯತ್ತ ಸಂಸ್ಥೆಗಳು, ಸ್ಥಳೀಯ ಸ್ವಯಮಾಡಳಿತ ಸರ್ಕಾರಗಳು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳು, ಸಮಾಜದ ಮತ್ತು ರಾಷ್ಟ್ರದ ಮುಖ್ಯಸ್ಥರು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಸುಶಿಕ್ಷಿತ ಜನರು ಈ ರಾಷ್ಟ್ರೀಯ ವಯಸ್ಕ ಶಿಕ್ಷಣ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಬೇಕು. ನಾವು ನಮ್ಮ ಯುವಜನರನ್ನು ಜತನದಿಂದ ನೋಡಿಕೊಂಡರೆ ಅವರು ರಾಷ್ಟ್ರೀಯ ಸಮಗ್ರತೆಯನ್ನು, ಸಾಮಾಜಿಕ ಭದ್ರತೆಯನ್ನು ಮತ್ತು ಪ್ರಜಾಪ್ರಭುತ್ವವನ್ನು ಕಾಪಾಡುತ್ತಾರೆ. ಜಾಗೃತ ಸಮಾಜ ಪ್ರಜಾಪ್ರಭುತ್ವ ಮತ್ತು ಸಮಾಜವಾದಕ್ಕೆ ಪೂರಕವಾಗುತ್ತದೆ.

ಸಾರ್ವತ್ರಿಕ ಸಮಸ್ಯೆಗಳ ಕೆಲವು ಅಂಶಗಳಿಗೆ ತಾವೂ ಪಾಲುದಾರರೆಂದು ರಾಷ್ಟ್ರದ ಪ್ರಜೆಗಳು ಭಾವಿಸಿದಾಗ ಮಾತ್ರ ಅವರು ಒಂದು ಗುರಿಯತ್ತ ಲಕ್ಷ್ಯವಿಡುವುದು ಸಾಧ್ಯ. ಈ ಏಕತಾ ಮನೋಭಾವವನ್ನು ಜೀವನದ ಎಲ್ಲ ಕ್ಷೇತ್ರಗಳಲ್ಲಿ, ಎಂದರೆ ಆರ್ಥಿಕ,

ಸಾಮಾಜಿಕ, ಧಾರ್ಮಿಕ, ನೈತಿಕ, ರಾಜಕೀಯ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಭಾವ ನಾತ್ಮಕ ರಂಗಗಳಲ್ಲೂ ಸಾಧಿಸಬೇಕು. ಇದರಿಂದ ಇತರರ ಜೀವನ ದೃಷ್ಟಿಯ ಬಗ್ಗೆ ಸಹಿಷ್ಣುತೆ ಮತ್ತು ಗೌರವವನ್ನು ವ್ಯಕ್ತಪಡಿಸಲು ಮತ್ತು ಅದರ ಅಗತ್ಯತೆಗಳನ್ನು ಅರ್ಥಮಾಡಿಕೊಳ್ಳಲು ಸಾಧ್ಯ. ರಾಷ್ಟ್ರೀಯ ಸಮಗ್ರತೆ ಎಂದರೆ ಸಂಪೂರ್ಣ ಏಕರೂಪತೆ ಯೆಂದಾಗಲಿ ಅಥವಾ ಭಿನ್ನತೆಯೇ ಇಲ್ಲದಿರುವುದು ಎಂದೇನೂ ಅರ್ಥವಲ್ಲ. ಭಾರತ ಭಿನ್ನತೆಯಲ್ಲಿ ಏಕತೆಯನ್ನುಳ್ಳ ದೇಶ.

ರಾಷ್ಟ್ರೀಯ ಸಮಗ್ರತೆಯನ್ನು ಸಾಧಿಸುವಲ್ಲಿ ಸಾಂಸ್ಕೃತಿಕ ಮತ್ತು ಮನರಂಜನಾ ಕಾರ್ಯಕ್ರಮಗಳು ಬಹಳ ಸಹಾಯಕವಾಗುತ್ತವೆ.

ಇಲ್ಲಿ ಅನೇಕ ಜನ ಪ್ರಖ್ಯಾತ ವಯಸ್ಕ ಶಿಕ್ಷಣ ತಜ್ಞರಿರುವುದರಿಂದ ವಯಸ್ಕ ಶಿಕ್ಷಣದ ಮೂಲಕ ರಾಷ್ಟ್ರೀಯ ಸಮಗ್ರತೆಗೆ ಇಂಬುಗೊಡುವ ಮಾರ್ಗೋಪಾಯ ಗಳನ್ನು ನಾನು ಸೂಚಿಸುವುದು ಅನಾವಶ್ಯಕ ಎಂದು ನನಗೆ ಅನ್ನಿಸುತ್ತದೆ. ದೇಶದ ಬೇರೆ ಬೇರೆ ಭಾಗಗಳಿಂದ ಬಂದು ಈ ವಿಚಾರ ಸಂಕಿರಣದಲ್ಲಿ ಭಾಗವಹಿಸುತ್ತಿರುವ ಎಲ್ಲರಿಗೂ ನಾನು ಹೃತ್ಪೂರ್ವಕ ಧನ್ಯವಾದಗಳನ್ನು ಅರ್ಪಿಸಿ ವಿಚಾರ ಸಂಕಿರಣ ಯಶಸ್ವಿಯಾಗಲೆಂದು ಹಾರೈಸುತ್ತೇನೆ.

————

ಡಿಸೆಂಬರ್ 23, 1981ರಂದು ಬೆಂಗಳೂರಿನ ಭಾರತೀಯ ತಾಂತ್ರಿಕ ಶಿಕ್ಷಣ ಸಂಸ್ಥೆಯ 11ನೇ ವಾರ್ಷಿಕ ರಾಷ್ಟ್ರೀಯ ಸಭೆಯನ್ನು ಉದ್ದೇಶಿಸಿ ಶಿಕ್ಷಣ ಸಚಿವರಾದ ಶ್ರೀ ಜಿ. ಬಿ. ಶಂಕರರಾವ್ ಇವರು ಮಾಡಿದ ಅಧ್ಯಕ್ಷ ಭಾಷಣ.

ಜನತೆಯ ಕಲ್ಯಾಣ ಹಾಗೂ ಉತ್ತಮ ಜೀವನ ಮಟ್ಟಕ್ಕೆ ಅತ್ಯವಶ್ಯಕವಾದ ತಾಂತ್ರಿಕ ಚಟುವಟಿಕೆಗಳನ್ನು ಅನೂಚಾನವಾಗಿ ಹೊಂದಿರುವ ಪ್ರತಿಷ್ಠೆ ಕರ್ನಾಟಕ ರಾಜ್ಯದ್ದಾಗಿದೆ. ನೀರಾವರಿ ಮತ್ತು ಜಲವಿದ್ಯುಚ್ಛಕ್ತಿ ಉತ್ಪಾದನೆ, ಉದ್ಯಮ ಹಾಗೂ ಸಾಗಣೆಗಳಂಥ ಹಲವಾರು ವಲಯಗಳಲ್ಲಿ ಕರ್ನಾಟಕದ ಇಂಜನಿಯರುಗಳು ವಿಕ್ರಮ ಸಾಧಿಸಿದ್ದು, ಬಹಳಷ್ಟು ಸಲ ನಮ್ಮ ಸಾಮಾಜಿಕ ವ್ಯವಸ್ಥೆಯನ್ನು ಬಲಪಡಿಸುವ ಹೊಸ ಹಾದಿಗಳನ್ನು ಹುಡುಕುತ್ತಿರುವುದೇ ಅಲ್ಲ, ನಮ್ಮ ಸ್ವಾವಲಂಬನಾ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸುವ ಸಾಹಸವನ್ನು ತೋರಿದ್ದಾರೆ, ರಾಷ್ಟ್ರೀಯ ಅಭಿವೃದ್ಧಿಯ ಎಲ್ಲ ರಂಗಗಳಲ್ಲೂ ಅದು ಕೃಷಿ ಅಥವಾ ಉದ್ಯಮವಿರಲಿ, ಶಿಕ್ಷಣ ಅಥವಾ ಜನಾರೋಗ್ಯಕ್ಕೆ ಸಂಬಂಧಪಟ್ಟಿರಲಿ ನಮ್ಮ ಇಂಜಿನಿಯರು ಹಾಗೂ ತಾಂತ್ರಿಕ ತಜ್ಞರ ಪರಿಣತಿ, ನಿಷ್ಠೆ ಹಾಗೂ ಸಮರ್ಪಣ ಭಾವಗಳ ಹೊರತು ನಮ್ಮ ರಾಜಕೀಯ ಧುರೀಣರ ಕನಸುಗಳು ಹಾಗೂ ನಮ್ಮ ಯೋಜನಾ ಕರ್ತರ ನೀಲಿ ನಕಾಶೆಗಳು ಸಫಲವಾಗುವುದು ಸಾಧ್ಯವಿಲ್ಲ. ಬಹುಶಃ ಇಂಜಿನಿಯರಿಂಗ್ ಮತ್ತು ಅದರ ತಂತ್ರಜ್ಞಾನಗಳಲ್ಲಷ್ಟೇ ಪರಿಣತಿ ಹೊಂದಿದ್ದವರಲ್ಲದೆ, ಆಡಳಿತ ನಿರ್ವಾಹಕ, ಆಡಳಿತಾಧಿಕಾರಿ ಹಾಗೂ ಮುತ್ಸದ್ದಿಗಳಾಗಿ ಅಸಾಧಾರಣ ವ್ಯಕ್ತಿಗಳೆನಿಸಿದ್ದ ಇಂಜಿನಿಯರುಗಳ ಭವ್ಯ ಪರಂಪರೆಯನ್ನು ನಿರ್ಮಿಸಿದ ಸರ್. ಎಂ. ವಿಶ್ವೇಶ್ವರಯ್ಯನವರಂತಹ ಶ್ರೇಷ್ಠ ವ್ಯಕ್ತಿಗಳು ಕರ್ನಾಟಕವನ್ನುಳಿದು ಬೇರಾವ ರಾಜ್ಯಗಳಲ್ಲಿಯೂ ಇದ್ದಿರಲಾರರು.

ಈ ಯುಗವನ್ನು ತಾಂತ್ರಿಕ ಯುಗವೆಂದು ಕರೆಯಲಾಗುತ್ತಿದೆ. ಇದು ಅಕ್ಷರಶಃ ನಿಜ. ಯಂತ್ರ ವಿಜ್ಞಾನವು ದೈನಂದಿನ ಅವಶ್ಯ ವಸ್ತುಗಳ ಹಾಗೂ ಸೇವೆಗಳ ಉತ್ಪಾದನೆಯಲ್ಲಿ ಪ್ರಮುಖ ಸ್ಥಾನ ಪಡೆದಿದೆ. ಅದು ಶಾಲೆಗಳನ್ನು, ಆಸ್ಪತ್ರೆಗಳನ್ನು ಅಷ್ಟೇ ಏಕೆ, ಅಡಿಗೆ ಮನೆಯನ್ನೂ ಅತಿಕ್ರಮಣ ಮಾಡಿದೆ. ಅದು ಹಲವಾರು ರೀತಿಗಳಲ್ಲಿ ಮಾನವ ಶ್ರಮ ಹಾಗೂ ಆತಂಕವನ್ನು ಹೋಗಲಾಡಿಸಿವೆ. ಮನುಷ್ಯನು ಹೆಚ್ಚು ಆಸಕ್ತ ಹಾಗೂ ಸಫಲ ಜೀವನವನ್ನು ಹೊಂದಲು ಅದು ಅನುವು ಮಾಡಿಕೊಟ್ಟಿದೆ. ನಿಸರ್ಗದ ಶಕ್ತಿ ಹಾಗೂ ಪ್ರಕೋಪವನ್ನು ಬಹುಮಟ್ಟಿಗೆ ಹತೋಟಿಗೆ ತರಲಾಗಿದ್ದು

ಪ್ರವಾಹ, ಭೂಕಂಪ ಅಥವಾ ಬಿರುಗಾಳಿಯಂಥ ಪ್ರಕೃತಿ ವಿಕೋಪಗಳನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ಮನುಷ್ಯ ಈಗ ಪಡೆದುಕೊಂಡಿದ್ದಾನೆ. ಯಾರಿಗೇ ಆಗಲಿ ಈ ಎಲ್ಲ ಸಾಧನೆಗಳಿಂದ ಸಂತಸವಾದೀತು, ನಿಜ. ಆದರೆ ಇದು ಭೀತಿ ಹಾಗೂ ಆತಂಕಗಳಿಗೂ ಎಡೆಮಾಡಿಕೊಟ್ಟಿದೆಯೆಂಬುದನ್ನು ಮರೆಯುವಂತಿಲ್ಲ. ವೇಗವಾಗಿ ಚಲಿಸಿ ಸುಖ ಪ್ರಯಾಣ ಒದಗಿಸುವ ಸ್ವಯಂಚಾಲಿತ ವಾಹನಗಳಿಂದಾಗಿ ವಾಸ್ತವವಾಗಿ ಒಂದು ಕಾಲದಲ್ಲಿ ಕುದುರೆಯನ್ನು ಸಾರಿಗೆಯ ಮಾಧ್ಯಮವಾಗಿ ಬಳಸಲಾಗುತ್ತಿತ್ತೆಂಬ ಅಂಶ ಕೇವಲ ನೆನಪಾಗಿಯಷ್ಟೇ ಉಳಿದಿದೆ. ತರ್ಕ ಹಾಗೂ ಎಣಿಕೆಯಲ್ಲಿ ಅತ್ಯಂತ ವೇಗ ಮತ್ತು ಬುದ್ಧಿಮತ್ತೆಯನ್ನು ಹೊಂದಿರುವ ಗಣಕ ಯಂತ್ರವು ಮಾನವ ಮಿದುಳನ್ನು ನಿಷ್ಕ್ರಿಯಗೊಳಿಸದೇ ? ಎಂಬ ಆತಂಕವನ್ನು ಹಲವರು ವ್ಯಕ್ತಪಡಿಸುತ್ತಿದ್ದಾರೆ. ಈ ಹಿಂದೆ ಮಾನವನಿಗೆ ವಿನಾಶ ಹಾಗೂ ಸಂಕಟ ಪರಿಸ್ಥಿತಿಗಳನ್ನುಂಟು ಮಾಡುತ್ತಿದ್ದ ಪ್ರಕೃತಿ ವಿಕೋಪ ಹಾಗೂ ಅಂಟು ಜಾಡ್ಯಗಳ ಬದಲಿಗೆ ಈಗ ಮಾನವ ಕೃತ ಅಣುಬಾಂಬಿನಂಥ ಮಾರಕಾಸ್ತ್ರಗಳ ಉದಯವಾಗಿದೆಯೇನು? ಆಹಾರಕ್ಕಾಗಿ ಮಾನವನ ಬೇಡಿಕೆ ದಿನೇ ದಿನೇ ಅಧಿಕವಾಗುತ್ತಿರುವಂತೆ, ಬದುಕುವುದೇ ದುಸ್ತರವಾಗುವಂಥ ಸ್ಥಿತಿಯೊದಗಬಹುದೇ ?ಅಥವಾ ಎಲ್ಲ ಸಂಪನ್ಮೂಲಗಳನ್ನು ಕಳೆದುಕೊಂಡು ಹಸಿವಿನಿಂದ ತೊಳಲಬೇಕಾದ ಸ್ಥಿತಿ ಬರಬಹುದೇ? ಮನುಷ್ಯ ಈ ಆಶೆ, ಹತಾಶೆಗಳ ನಡುವೆ ತನ್ನ ಬಯಕೆಗಳನ್ನು ಬುದ್ಧಿವಂತಿಕೆಯಿಂದ ಪೂರೈಸಿಗೊಳ್ಳಬೇಕಾಗಿದ್ದು, ಪ್ರಪಂಚದಲ್ಲಿ ಅಣು ವಿಜ್ಞಾನವನ್ನು ಕೇವಲ ಮಾನವ ಜೀವನದ ಕಲ್ಯಾಣಕ್ಕಾಗಿ ಬಳಸಬೇಕೆ ಹೊರತು, ಜೀವನ ಮಾರಕವಾಗುವುದಕ್ಕಲ್ಲವೆಂಬ ಎಚ್ಚರಿಕೆ ನೀಡಿರುವ ಉಜ್ಜ್ವಲ ಜನ ನಾಯಕಿಯಾಗಿರುವ ನಮ್ಮ ನೆಚ್ಚಿನ ಪ್ರಧಾನಿಯವರ ಸೂಕ್ತ ನಿಲುವು ಅನುಕರಣೀಯ. ಇದು ವಿವೇಕಪೂರ್ಣ ಮುನ್ನೆಚ್ಚರಿಕೆಯಾಗಿದ್ದು ನಾವದನ್ನು ಆಚರಣೆಯಲ್ಲಿ ತರಬೇಕಾಗಿದೆ.

ದಾರಿದ್ರ್ಯ ಸಂಕೋಲೆಗಳಿಂದ ಬಂಧಿತವಾಗಿರುವ ನಮ್ಮ ಭಾರತದಂಥ ದೇಶದಲ್ಲಿ, ಪ್ರಗತಿಯನ್ನು ಸಾಧಿಸಬೇಕಾದರೆ, ಉತ್ಪಾದನಾ ವಿಧಾನ ಹಾಗೂ ಸೇವಾ ವ್ಯವಸ್ಥೆಗಳನ್ನು ಸುಧಾರಿಸುವಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನಗಳನ್ನು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಅಳವಡಿಸಿಕೊಳ್ಳುವುದಕ್ಕಿಂತ ಖಾತ್ರಿಯಾದ ಹಾಗೂ ತೀವ್ರವಾದ ಇನ್ನಾವುದೇ ಮಾರ್ಗವಿಲ್ಲವಾಗಿದೆ. ನಮ್ಮ ದೇಶವಷ್ಟೇ ಅಲ್ಲದೆ ಇನ್ನೂ ಅನೇಕ ಅಭಿವೃದ್ಧಿ ಪರ ರಾಷ್ಟ್ರಗಳಲ್ಲಿ ಈ ಅರಿವು ಮೂಡಿರುವುದಾದರೂ ಯಾವ ಬಗೆಯ ತಾಂತ್ರಿಕ ಜ್ಞಾನವನ್ನು ಅಳವಡಿಸಿಕೊಳ್ಳಬೇಕೆಂಬ ಬಗ್ಗೆ ಸಾಕಷ್ಟು ಜಿಜ್ಞಾಸೆಗೆ ಎಡೆ ಕೊಟ್ಟಿದೆ. ಈ ಜಿಜ್ಞಾಸೆ ಬಹುಮಟ್ಟಿಗೆ ಶುಷ್ಕವೆಂದು ನನಗನಿಸುತ್ತದೆ. ಬಳಸಿಕೊಳ್ಳಬೇಕಾದ ತಾಂತ್ರಿಕ ಜ್ಞಾನವು ಸೂಕ್ತ ತಂತ್ರಜ್ಞಾನವಾಗಿರಬೇಕೆಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಆದರೆ ಅದರ ಸೂಕ್ತತೆಯನ್ನು ನಿರ್ಧರಿಸಬೇಕಾದರೆ ಅತಿ ಕಡಿಮೆ ಕಾಲಾ

ವಧಿಯಲ್ಲಿ ರಾಷ್ಟ್ರೀಯ ಅವಶ್ಯಕತೆಗಳನ್ನು ಪೂರೈಸುವಲ್ಲಿ ಹಾಗೂ ಧ್ಯೇಯಗಳನ್ನು ಸಾಧಿಸುವಲ್ಲಿ ಅದು ಎಷ್ಟರಮಟ್ಟಿಗೆ ಪರಿಣಾಮಕಾರಿಯಾದೀತು ಎಂಬ ಅಂಶ ಆಧಾರವಾಗಿರಬೇಕು. ಹೀಗಾಗಿ ಇಂಥ ಪರಿಸ್ಥಿತಿಗಳಲ್ಲಿ, ವೈಯಕ್ತಿಕ ಲಾಲಸೆ ಅಥವಾ ಮಹತ್ವಾಕಾಂಕ್ಷೆಯಿಂದ ಹೊರತಾದ ಅಥವಾ ಒತ್ತಡ ಹಾಗೂ ಬೆದರಿಕೆಗಳಿಗೆ ಬಾಗದಿರುವ ಸಮರ್ಥ ವೃತ್ತಿಪರಿಣತರಿಂದ ರಾಷ್ಟ್ರನಾಯಕರು ಸಲಹೆ ಪಡೆಯಬೇಕಾಗುತ್ತದೆ—ಎಂದ ಮೇಲೆ ಈಗ ಉತ್ಕೃಷ್ಟ ವೃತ್ತಿಪರಿಣತಿಯ ಹೊರತು ಉತ್ಕೃಷ್ಟತೆಯನ್ನು ಊನಗೊಳಿಸದಂಥ ವೃತ್ತಿಮಟ್ಟ ಹಾಗೂ ವೃತ್ತಿನೀತಿಗಳನ್ನು ಅಭಿವೃದ್ಧಿಪಡಿಸುವ ಅವಶ್ಯಕತೆ ಮೂಡುತ್ತದೆ. ಈ ಸಂದರ್ಭದಲ್ಲಿ ಶಿಕ್ಷಣ, ತರಬೇತಿ, ಪ್ರಮಾಣ ಹಾಗೂ ಕ್ರಮಬದ್ಧ ವರ್ಗೀಕರಣ ಇವುಗಳು ಅತಿ ಮುಖ್ಯ ಸ್ಥಾನವನ್ನು ಪಡೆಯುತ್ತವೆ ಹೀಗಾಗಿ ಇದು, ಭಾರತೀಯ ತಾಂತ್ರಿಕ ಶಿಕ್ಷಣ ಸಂಸ್ಥೆಯ ಮೂಲ ಕಾರ್ಯವೆನಿಸಿಕೊಳ್ಳುತ್ತದೆ. ಹಿಂದಿನ ಸಾಧನೆಗಳನ್ನು ಒಗ್ಗೂಡಿಸಿಕೊಂಡು ಆ ಮೂಲಕ ಮುಂದಿನ ಅವಶ್ಯಕತೆಗಳನ್ನು ಗುರುತಿಸಿಕೊಳ್ಳುವ ಸಲುವಾಗಿ ಖ್ಯಾತ ಶಿಕ್ಷಣವೇತ್ತರು ಹಾಗೂ ವೃತ್ತಿ ಪ್ರಮುಖರು ಇಲ್ಲಿ ನೆರೆದಿರುವುದು ಒಂದು ಸುಯೋಗ.

ತಾಂತ್ರಿಕ ಶಿಕ್ಷಣ ರಂಗದಲ್ಲಿ ರೂಪಿಸಿಕೊಳ್ಳಬೇಕಾಗಿರುವ ನಮ್ಮದೇ ಆದ ಕಾರ್ಯನೀತಿಗಳ ಸಲುವಾಗಿ ನೀವು ನಡೆಸುತ್ತಿರುವ ಸಮ್ಮೇಳನದ ನಿರ್ಧಾರ ಹಾಗೂ ಶಿಫಾರಸುಗಳನ್ನು ಕರ್ನಾಟಕ ಸರ್ಕಾರ ಹಾಗೂ ಇತರ ರಾಜ್ಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರವು ವಿಶೇಷ ಕಾತರ ಹಾಗೂ ಆಸಕ್ತಿಗಳಿಂದ ಪರಿಶೀಲಿಸುವುವೆಂದು ನಾನು ಆಶಿಸುತ್ತೇನೆ. ಸಮಾಜದ ಜನರ ಆಸೆ ಆಕಾಂಕ್ಷೆಗಳನ್ನು ಚೆನ್ನಾಗಿ ಅರಿತುಕೊಂಡು ಅವುಗಳನ್ನು ಸಾಧಿಸುವ ಸಲುವಾಗಿ ಗುರಿಗಳನ್ನು ಹೊಂದಿರುವುದು ಸರ್ಕಾರಗಳ ಕರ್ತವ್ಯ. ಅದನ್ನು ಎಷ್ಟು ಮಟ್ಟಿಗೆ ಅತ್ಯುತ್ತಮವಾಗಿ ಸಾಧಿಸಲು ಸಾಧ್ಯವೆಂಬುದನ್ನು ನಿರೂಪಿಸುವುದು ವೃತ್ತಿ ನಿರತರ ಕರ್ತವ್ಯ. ನೀವು ಈಗಾಗಲೇ ಕೇಳಿರಬಹುದಾದ ಸೂಕ್ತಿಯೊಂದನ್ನು ಇಲ್ಲಿ ಉದಾಹರಿಸಬಯಸುತ್ತೇನೆ, ಎಷ್ಟು ದಕ್ಷ ರೀತಿಯಲ್ಲಿ ಸಮರಸಾರಬೇಕೆಂಬುದನ್ನು ನಿರ್ಧಾರ ಮಾಡುವುದು ಸೇನಾಧಿಪತಿಯಾದರೂ, ಯುದ್ಧ ಎಷ್ಟರ ಮಟ್ಟಿಗೆ ಅನಿವಾರ್ಯ ಎಂಬುದನ್ನು ನಿರ್ಧರಿಸುವುದು ಇಡೀ ಸಮಾಜದ ವಿವೇಚನೆಗೆ ಸೇರಿದ ವಿಷಯವಾಗುತ್ತದೆ. ಈ ದೃಷ್ಟಿಯಿಂದ ತಾಂತ್ರಿಕ ಶಿಕ್ಷಣವನ್ನು ಕುರಿತು ನಮ್ಮ ಸಮಾಜದ ಆಶೋತ್ತರಗಳನ್ನು ಪ್ರತಿಬಿಂಬಿಸುವ ಕೆಲವೊಂದು ಸಾಮಾನ್ಯ ಅಂಶಗಳನ್ನು ನಾನು ತಮ್ಮ ಮುಂದಿಡಬಯಸುತ್ತೇನೆ. ಈ ಗುರಿಗಳನ್ನು ಅಂಗೀಕರಿಸಿಬಹುದಾದಲ್ಲಿ, ಇವುಗಳನ್ನು ಸಾಧಿಸಿಲು ಅಳವಡಿಸಿಕೊಳ್ಳಬಹುದಾದ ಮಾಧ್ಯಮವೊಂದನ್ನು ರೂಪಿಸುವುದು ಹಾಗೂ ಅದನ್ನು ಕಾರ್ಯರೂಪಕ್ಕೆ ತರುವುದು ನಿಮ್ಮೆಲ್ಲರ ಹೊಣೆ.

ಮೊದಲನೆಯದಾಗಿ, ಭಾರತದಲ್ಲಿ ನಡೆಯಬೇಕಾದ ಅಭಿವೃದ್ಧಿ ಕಾರ್ಯಗಳು ಅಸಂಖ್ಯ. ಸಹಜವಾಗಿಯೇ ಇವುಗಳಿಗೆ ಬೃಹತ್ ಪ್ರಮಾಣದ ಸಂಪನ್ಮೂಲಗಳ ಅವಶ್ಯ

ಕತೆಯಿದೆ. ಇಂಥ ಸಂಪನ್ಮೂಲಗಳ ಪೈಕಿ ಅತ್ಯಂತ ಅಮೂಲ್ಯ ಆದರೆ ಅತಿ ಅಭಾವ ವಿರುವ ಸಂಪನ್ಮೂಲವೆಂದರೆ ಸಾಕಷ್ಟು ತರಬೇತಿ ಹೊಂದಿರುವ ಹಾಗೂ ಕುಶಲತೆ ಗಳಿಸಿ ರುವ ಮಾನವ ಶಕ್ತಿ. ಕೊರತೆಗಳ ಪ್ರಮಾಣ ಗಣನೀಯವಾದರೂ ನಮ್ಮ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಇದರಿಂದಾಗಿ ತೀವ್ರ ಧಕ್ಕೆಯುಂಟಾಗದಂತೆ ನೋಡಿಕೊಳ್ಳಲು ನಮ್ಮ ಶಿಕ್ಷಣ ಹಾಗೂ ತರಬೇತಿ ತಂತ್ರಗಳನ್ನು ಪುನರ್ವ್ಯವಸ್ಥಿತಗೊಳಿಸುವುದು ಅನಿವಾರ್ಯ ಎಂಬ ಬಗ್ಗೆ ನನಗೆ ಎಳ್ಳಷ್ಟೂ ಸಂದೇಹವಿಲ್ಲ. ವಾಸ್ತವಿಕ ಅಂಕಿ ಅಂಶಗಳು ಈಗ ನನ್ನ ಬಳಿಗೆಯಿಲ್ಲವಾದರೂ ಡಿಪ್ಲೊಮಾ ಮತ್ತು ಪದವಿ ಮಟ್ಟಗಳಲ್ಲಿ ಲಭ್ಯವಿರುವ ವಿಷಯ ಗಳಲ್ಲಿ ಮಾನವ ಶಕ್ತಿಗೆ ಸಂಬಂಧಪಟ್ಟಂತೆ ಪ್ರತಿ ಒಂದು ಸಾವಿರ ಜನಸಂಖ್ಯೆಯ ಅನು ಪಾತ, ನಮ್ಮ ರಾಷ್ಟ್ರಕ್ಕೆ ಹೋಲಿಸಿದಾಗ ಅಭಿವೃದ್ಧಿ ಹೊಂದಿರುವ ರಾಷ್ಟ್ರಗಳಲ್ಲಿ ಕನಿಷ್ಠ ಪಕ್ಷ 10ರಷ್ಟು ಉತ್ತಮವಾಗಿದೆಯೆಂಬುದಾಗಿ ನನಗೆ ತಿಳಿದು ಬಂದಿದೆ. ಈ ವಿಷಮ ಪರಿಸ್ಥಿತಿಯನ್ನು ಸರಿಪಡಿಸಿಕೊಂಡು ನಮ್ಮ ತಂತ್ರಜ್ಞಾನವನ್ನು ಸುಧಾರಿಸಲು ನಾವು ಸಿದ್ಧರಿದ್ದೇವೆಯೆ?

ಎರಡನೆಯದಾಗಿ ಇಂಜನಿಯರಿಂಗ್ ವೃತ್ತಿಯು ಸತತ ಅಭ್ಯಾಸನಿರತ ವೃತ್ತಿ ಯಾಗಿದೆ. ಇಂಜಿನಿಯರಿಂಗ್ ಶಿಕ್ಷಣ ಕ್ಷೇತ್ರದಲ್ಲಿ ಇದನ್ನು ದೃಷ್ಟಿಯಲ್ಲಿರಿಸಿಕೊಳ್ಳುವುದು ಅವಶ್ಯ. ನಮ್ಮ ಕಾಲೇಜು ಹಾಗೂ ತಾಂತ್ರಿಕ ಶಿಕ್ಷಣ ಶಾಲೆಗಳಲ್ಲಿ ಈ ಅವಶ್ಯಕತೆಯ ಬಗ್ಗೆ ಸಾಕಷ್ಟು ಗಮನ ಕೊಡಲಾಗುತ್ತಿಲ್ಲವೆಂದು ನನ್ನ ಅನಿಸಿಕೆ. ಪ್ರಾಯಶಃ ನಮ್ಮ ಇಂಜಿನಿಯರುಗಳಿಗೆ ಸಾಕಷ್ಟು ಪ್ರಾಯೋಗಿಕ ತರಬೇತಿ ನೀಡುವುದಕ್ಕೆ ತಗಲಬಹುದಾದ ಆರ್ಥಿಕ ಹಾಗೂ ಸಂಸ್ಥಾತ್ಮಕವಾದ ವೆಚ್ಚಗಳನ್ನು ಭರಿಸುವುದು ಕಷ್ಟ ಸಾಧ್ಯವಾಗಿರು ವುದರಿಂದಲೇನೋ ಈ ಸಮಸ್ಯೆಯನ್ನು ಪರಿಗಣಿಸದೆಯೇ ಸುಲಭವಾಗಿ ನುಣುಚಿ ಕೊಂಡಿದ್ದೇವೆ. ಈ ಬಗೆಯ ಭಯವಿರುವುದು ನಿಜವಾದಲ್ಲಿ, ನಮಗೆ ನಾವೇ ನ್ಯಾಯ ವಾಗಿ ನಡೆದುಕೊಳ್ಳುತ್ತಿದ್ದೇವೆಯೇ ಎಂದು ನಮ್ಮನ್ನು ನಾವೇ ಪ್ರಶ್ನಿಸಿಕೊಳ್ಳಬೇಕಾ ಗಿದೆ. ಉದಾಹರಣೆಗೆ, ನಮ್ಮ ವಿಮಾನ ಚಾಲಕರಿಗೆ ಅಥವಾ ಸೈನಿಕರಿಗೆ ನೀಡುವ ತರಬೇತಿಯ ಬಗ್ಗೆ ಈ ರೀತಿ ಯೋಚಿಸುವುದು ಖಂಡಿತಾ ಸಾಧ್ಯವಿಲ್ಲದ ಮಾತು. ಅಂದ ಮೇಲೆ ಈ ರಾಷ್ಟ್ರದ ಕೋಟ್ಯಾಂತರ ಪ್ರಜೆಗಳು ನೆಮ್ಮದಿಯಿಂದಿರಬೇಕಾದರೆ ನಮ್ಮ ಇಂಜಿನಿಯರುಗಳಿಗೆ ಕೂಡ ಉತ್ತಮ ತರಬೇತಿ ನೀಡುವುದು ಅಷ್ಟೇ ಮಹತ್ವದ ವಿಷಯವಲ್ಲವೆ?

ಮೂರನೆಯದಾಗಿ, ತಾಂತ್ರಿಕ ವಿಜ್ಞಾನವು ಇತರ ವ್ಯಾಸಂಗ ವಿಷಯಗಳಿಗಿಂತ ಅತಿ ತೀವ್ರವಾಗಿ ಬದಲಾಗುತ್ತಿರುವಂಥದು. ತಾಂತ್ರಿಕ ಪ್ರಗತಿಯು ಮುಂಚೂಣಿ ಯಲ್ಲಿರಬೇಕಾದರೆ, ಪ್ರತಿಯೊಂದು ನವಶೋಧ ಹಾಗೂ ಪರಿವರ್ತನೆಯನ್ನು ಹೊರಗಿ ನಿಂದ ಆಮದು ಮಾಡಿಕೊಂಡು ಅದನ್ನು ಅಳವಡಿಸಿಕೊಳ್ಳುವುದರಲ್ಲಷ್ಟೇ ತೃಪ್ತಿ ಪಟ್ಟು

ಕೊಳ್ಳಬಾರದು. ಬದಲಾಗಿ, ಪರಿವರ್ತನೆಯನ್ನು ರೂಪಿಸುವುದರಲ್ಲೇ ಸಕ್ರಿಯ ಪ್ರಯತ್ನ ನಡೆಸುವುದು ಅತ್ಯವಶ್ಯ. ಬೇರೆ ಮಾತಿನಲ್ಲಿ ಹೇಳಬೇಕಾದರೆ, ನಮ್ಮೆಲ್ಲ ಶಿಕ್ಷಣ ಸಂಸ್ಥೆಗಳ ಕಾರ್ಯ ಸಾಧನೆಗಳು ತಾಂತ್ರಿಕ ಜ್ಞಾನವನ್ನು ರೂಪಿಸುವುದರಲ್ಲಿ ಹಾಗೂ ನವಶೋಧನೆ ನಡೆಸುವುದರಲ್ಲಿ ಕಾರ್ಯ ಮಗ್ನವಾಗಿರಬೇಕು. ಈ ತಾತ್ತ್ವಿಕ ನಿಲುವನ್ನು ನಮ್ಮ ಶಿಕ್ಷಣ ಸಂಸ್ಥೆಗಳು ಎಷ್ಟರ ಮಟ್ಟಿಗೆ ಮೈಗೂಡಿಸಿಕೊಂಡು ಅಳವಡಿಸಿ ಕೊಂಡಿವೆ?

ನಾಲ್ಕನೆಯದಾಗಿ, ಸಾಕಷ್ಟು ಪ್ರಮಾಣದಲ್ಲಿ ತರಬೇತಿ ಪೊಂದಿದ ಮಾನವ ಶಕ್ತಿ ಯನ್ನು ಹೊಂದಿರಬೇಕೆಂಬ ನಮ್ಮ ಯತ್ನ ಸಫಲವಾಗದಿರಲು ಬಹುಮಟ್ಟಿಗೆ, ನಿರು ದ್ಯೋಗಿ ಇಂಜಿನಿಯರುಗಳ ತಂಡಗಳೇ ಇರುವುದೂ ಕೂಡ ಒಂದು ಕಾರಣ. ಒಂದು ರಾಷ್ಟ್ರದಲ್ಲಿ ವಿದ್ಯಾವಂತರಿರಲಿ, ಅವಿದ್ಯಾವಂತರಿರಲಿ, ತಾಂತ್ರಿಕ ಪರಿಣತಿ ಹೊಂದಿದವರೇ ಇರಲಿ, ಪರಿಣತಿ ಹೊಂದದವರೇ ಇರಲಿ—ಈ ಯಾವುದೇ ಮಟ್ಟದಲ್ಲಿ ನಿರುದ್ಯೋಗ ಇಷ್ಟೊಂದು ಬೃಹತ್ಪ್ರಮಾಣದಲ್ಲಿ ತಾಂಡವವಾಡುವುದು ಖೇದಕರ ಅಂಶ.

ಆದಕಾರಣ ಉನ್ನತ ತರಬೇತಿ ಪಡೆದ ಮತ್ತು ನಿಪುಣ ಇಂಜಿನಿಯರಿಂಗ್ ಉದ್ಯೋಗಿಗಳು ಉದ್ಯೋಗಾಕಾಂಕ್ಷಿಗಳಾಗಿರುವುದಕ್ಕಿಂತಲೂ ಹೆಚ್ಚು ಹೆಚ್ಚು ಉದ್ಯೋಗಗಳನ್ನು ಸೃಷ್ಟಿಸುವಲ್ಲಿ ಸಹಾಯಕರಾಗಬೇಕೆಂದು ರಾಷ್ಟ್ರವು ನಿರೀಕ್ಷಿಸುತ್ತಿದೆ ಯೆಂಬುದನ್ನು ನಾನು ಹೇಳಬಯಸುತ್ತೇನೆ. ನಮ್ಮ ತಾಂತ್ರಿಕ ಉದ್ಯೋಗಗಳು ಹೆಚ್ಚು ಹೆಚ್ಚು ಉದ್ಯಮಗಳನ್ನು ಸ್ಥಾಪಿಸಲು ಸ್ಫೂರ್ತಿ ನೀಡುವಂಥ ಶಿಕ್ಷಣವನ್ನು ನಮ್ಮ ಶಿಕ್ಷಣ ವ್ಯವಸ್ಥೆಯು ರೂಪಿಸಿ ಅಳವಡಿಸಿಕೊಂಡರೆ ಮಾತ್ರ ನಮ್ಮ ಈ ಮಿಶ್ರ ಆರ್ಥಿಕ ವ್ಯವಸ್ಥೆಯಲ್ಲಿ ಪ್ರತಿಭಾವಂತರಿಗೆ ಈ ರಂಗದಲ್ಲಿ ಬೇಕಾದಷ್ಟು ಅವಕಾಶವಿರು ತ್ತದೆ. ಹೀಗಾದಾಗ ಪ್ರತಿಭಾವಂತರಿಗೆ ಇದೊಂದು ಸವಾಲು ಆಗುತ್ತದೆ. ಈ ಗುರಿಯನ್ನು ನೀವು ಹಾಕಿಕೊಂಡರೆ, ಕೇವಲ ಪ್ರತ್ಯೇಕ ವ್ಯಕ್ತಿಗಳಷ್ಟೇ ಅಲ್ಲ ಇಡೀ ದೇಶಕ್ಕೆ ನೀವು ಶ್ರೇಷ್ಠ ಸೇವೆ ಸಲ್ಲಿಸಿದಂತಾಗುತ್ತದೆ.

ಎಲ್ಲ ಮಾನವ ಕಾರ್ಯ ಚಟುವಟಿಕೆಗಳ ಮೇಲೂ ಪರಿಣಾಮ ಬೀರುವ, ಎಂಜಿನಿಯರಿಂಗ್ ಕ್ಷೇತ್ರವು, ಒಂದು ವ್ಯಾಪಕವಾದ ಮತ್ತು ನಿರಂತರವಾಗಿ ಬೆಳೆಯುತ್ತಿ ರುವ ಶಿಕ್ಷಣದ ಒಂದು ವಿಭಾಗ. ಕೆಲಸವನ್ನು ದಕ್ಷವಾಗಿ ನಿರ್ವಹಿಸಲು ಉತ್ತಮ ನೈಪುಣ್ಯ ಮತ್ತು ಜ್ಞಾನವನ್ನು ಪಡೆಯುವ ಸಲುವಾಗಿ ಜನಶಕ್ತಿ ತರಬೇತಿಯನ್ನು ವಿವಿಧ ಉದ್ಯಮಗಳಲ್ಲಿ ಕೇಂದ್ರೀಕರಿಸಬೇಕಾದುದು ಅನಿವಾರ್ಯ. ವೈದ್ಯಕೀಯ ವೃತ್ತಿಯು ಬೃಹತ್ ಪ್ರಮಾಣದಲ್ಲಿ ಬೆಳೆಯದೆ ಇರುವ ವಿಷಯ ನಿಮ್ಮೆಲ್ಲರಿಗೂ ಗೊತ್ತಿದೆ. ಈ ವೃತ್ತಿ, ಹಲವಾರು ನಗೆಪಾಟಲಿಗೀಡಾದ ಹಲವಾರು ವಿಷಯಗಳಿಗೂ ಎಡೆಮಾಡಿಕೊಟ್ಟಿದೆ — ಆ ವಿಷಯಗಳು ಶ್ಲಾಘನೀಯ ವಿಷಯಗಳಲ್ಲ. ನನ್ನ

ಮನಸ್ಸಿಗೆ ಬಂದಿರುವ ಅಂತಹ ಒಂದು ಸಂಗತಿಯನ್ನು ನಿಮಗೆ ಹೇಳಬಯಸುತ್ತೇನೆ. ಇಎನ್‌ಟಿ ವಿಭಾಗವನ್ನು ಒಪ್ಪದ ವೈದ್ಯರು ಕಿವಿ, ಮೂಗು ಮತ್ತು ಗಂಟಲು ರೋಗಗಳಿಗೆ ಪ್ರತ್ಯೇಕವಾಗಿ ಮೂರು ವಿಭಾಗಗಳಿರಬೇಕೆಂದು ತೀರ್ಮಾನಿಸಿದರು. ಒಬ್ಬ ರೋಗಿಯು ಮೂಗು-ರೋಗ ತಜ್ಞರೊಬ್ಬರ ಬಳಿ ಹೋಗಿ, ಯಾವುದೋ ಅನ್ಯವಸ್ತು ತನ್ನ ಮೂಗಿನ ಒಳಗೆ ಹೋಗಿದೆ ಎಂದುತಿಳಿಸಿದಾಗ ಆ ಅನ್ಯವಸ್ತು ಮೂಗಿನ ಬಲ ಹೊಳ್ಳೆಯಲ್ಲಿ ಸೇರಿದೆಯೆಂದೂ ತಾನು ಮೂಗಿನ ಎಡಹೊಳ್ಳೆ-ರೋಗ ವೈದ್ಯನೆಂದೂ ತಿಳಿಸಿ, ಹಾಗೆಯೇ ಕಳಿಸಿದರಂತೆ. ಈ ರೀತಿಯ ಅಭ್ಯಾಸ ಇರಲೇಕೂಡದು. ಆದುದರಿಂದ ಇಂಜಿನಿಯರಿಂಗ್ ವೃತ್ತಿಯು, ವ್ಯಾಪಕವಾದ ಈ ಎಂಜಿನಿಯರಿಂಗ್ ಕ್ಷೇತ್ರದಲ್ಲಿ ಸಂಪ್ರದಾಯಿಕವಾದ ಸಿವಿಲ್ ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಕ್ಷೇತ್ರಕ್ಕಿಂತ ಉತ್ತಮ ಮಟ್ಟದ ಶಿಕ್ಷಣ ವಿಭಾಗಕ್ಕೆ ಮಾನ್ಯತೆ ನೀಡಬೇಕೆಂದು ಭಾವಿಸುತ್ತೇನೆ. ಶೈಕ್ಷಣಿಕ ಮತ್ತು ತರಬೇತಿ ಕಾರ್ಯಕ್ರಮಗಳು ಪರಿಣಾಮಕಾರಿ ಸಾಧನಗಳಾದ ಪ್ರಯುಕ್ತ. ಎಂಜಿನಿಯರಿಂಗ್‌ನ ಎಲ್ಲ ವಿಷಯಗಳನ್ನು ತೆಗೆದುಕೊಳ್ಳುವುದರ ಬದಲು ಕೆಲವೇ ವಿಷಯಗಳಲ್ಲಿ ತಜ್ಞ ಶಿಕ್ಷಣ ನೀಡುವ ಸಂಸ್ಥೆಗಳನ್ನು ರೂಪಿಸುವ ಸಾಧ್ಯತೆಯನ್ನು ಪರಿಗಣಿಸುವುದು ಸೂಕ್ತವೆಂದು ಕಾಣುತ್ತದೆ.

ಸೂಕ್ಷ್ಮವಾಗಿ ಪರಿಶೀಲಿಸಬೇಕಾದ ಇನ್ನೂ ಹಲವಾರು ವಿಷಯಗಳಿವೆ. ಅವು ನಿಮಗೆ ಗೊತ್ತಿಲ್ಲದೆ ಇಲ್ಲ. ನಾನು ನಿಮ್ಮ ಅಮೂಲ್ಯವಾದ ವೇಳೆಯನ್ನು ಹಾಳು ಮಾಡಲಾರೆ. ಇನ್ನಿತರ ಒಂದೆರಡು ವಿಷಯಗಳನ್ನು ನಿಮ್ಮ ಮುಂದಿಡಬಯಸುತ್ತೇನೆ. ನಿಮ್ಮ ಚರ್ಚೆಯಲ್ಲಿ ಆ ವಿಷಯಗಳಿಗೆ ಗಮನ ನೀಡುತ್ತೀರೆಂದು ಭಾವಿಸುತ್ತೇನೆ.

ತಾಂತ್ರಿಕ ಶಿಕ್ಷಣ ದುಬಾರಿಯಾಗಿದ್ದು ಆ ಶಿಕ್ಷಣವನ್ನು ಪಡೆಯಬಯಸುವ ಯುವಕ ಯುವತಿಯರು ಹೆಚ್ಚಿನ (ಹಣ) ಖರ್ಚುಮಾಡಬೇಕಾಗಿದೆ. ಅಂತಹ ಶೈಕ್ಷಣಿಕ ಸಂಸ್ಥೆಗಳ ಸ್ಥಾಪನೆಯೂ, ದುಬಾರಿಯಾಗಿದೆ. ಬಂಡವಾಳ ವೆಚ್ಚ ಮತ್ತು ಆವಶ್ಯಕ ವೆಚ್ಚವನ್ನು ಲೆಕ್ಕ ಹಾಕಿದರೆ, ಹೊಸ ಇಂಜಿನಿಯರಿಂಗ್ ಕಾಲೇಜುಗಳ ಸ್ಥಾಪನೆಗಾಗಿ 2 ಕೋಟಿ ರೂಗಳಿಗೆ ಕಡಿಮೆ ಇಲ್ಲದಂತೆ ಹಣ ಬೇಕಾಗುತ್ತದೆ ಎಂದು ನನಗೆ ತಿಳಿದುಬಂದಿದೆ. ನಮ್ಮ ರಾಜ್ಯದಲ್ಲಿ ಸುಮಾರು 37 ಕಾಲೇಜುಗಳಿವೆ. ಈ ಪೈಕಿ ಹಲವು ಕಾಲೇಜುಗಳು ಇನ್ನೂ ಅಗತ್ಯವಾದ ಬಂಡವಾಳವನ್ನು ತೊಡಗಿಸಬೇಕಾಗಿದೆ. ರಾಜ್ಯ ಸರ್ಕಾರದಂತಹ ಏಕಮಾತ್ರ ಕೇಂದ್ರ ಏಜೆನ್ಸಿಗೆ ಅಂತಹ ಹಲವಾರು ಸಂಸ್ಥೆಗಳ ಅಗತ್ಯ ಭಾರಿ ಹೊರೆಯಾಗಿದೆ. ಅಲ್ಲದೆ, ರಾಜ್ಯದ ಸಂಪನ್ಮೂಲಗಳ ಮೇಲೆ ಹೊರಲಾರದ ಭಾರ ಬೀಳುತ್ತದೆ. ಇಂಥ ಪರಿಸ್ಥಿತಿಯಲ್ಲಿ ಹಣ ಒದಗಿಸುವ ಬೇರೆ ರೀತಿಯ ಮೂಲಗಳನ್ನು ಕಂಡುಹಿಡಿಯುವುದು ಅಗತ್ಯವಾಗಿದೆ. ತರಬೇತಿ ಪಡೆಯ ಬಯಸುವ ವಿದ್ಯಾರ್ಥಿಗಳ ಮೇಲೇ ಈ ಹೊರೆ ಹಾಕುವುದು ಅಷ್ಟು ಸಮಂಜಸವಲ್ಲ. ಈ ಕಾಲೇಜುಗಳ ಆವ

ತ್ಯಕ ಬಜೆಟ್ ತೀರಾ ಅಧಿಕ. ಅಲ್ಲದೆ, ಅಂತಹ ಕಾಲೇಜುಗಳು ಸ್ನಾತಕೋತ್ತರ ಶಿಕ್ಷಣ ಮತ್ತು ಸಂಶೋಧನಾ ಕಾರ್ಯಗಳನ್ನೂ ಶಿಕ್ಷಣದ ಸಲುವಾಗಿರುವ ಸಾಂಕೇತಿಕ ಸಹಾಯಾನುದಾನದ ಪ್ರಮಾಣವನ್ನು ಮೀರುವುದು ಸಹಜ. ಕೈಗಾರಿಕೆ, ಸರ್ಕಾರಿ ಸ್ವಾಮ್ಯದ ಉದ್ಯಮಗಳು ಮತ್ತು ಅದೇ ರೀತಿಯ ಸೇವಾ ಸಂಸ್ಥೆಗಳು ತಮ್ಮ ಕಾರ್ಯಾಚರಣೆಗಾಗಿ ಅಗತ್ಯ ಜನಶಕ್ತಿಯನ್ನೊದಗಿಸುವ ಶಿಕ್ಷಣ ಮತ್ತು ತರಬೇತಿಯ ಕಾರ್ಯಕ್ರಮಗಳಿಂದ ಪ್ರಯೋಜನಗಳನ್ನು ಪಡೆಯುವುದರಿಂದ ಈ ಜವಾಬ್ದಾರಿಯನ್ನು ಅವುಗಳಿಗೆ ಹೊರಿಸಕೂಡದೆಂಬ ವಿಷಯವನ್ನು ತೀವ್ರವಾಗಿ ಪರಿಶೀಲಿಸಲು ನಾನು ಸಲಹೆ ಮಾಡುತ್ತೇನೆ. ಹಾಗೆಯೇ, ಕಾಲೇಜುಗಳ ಪ್ರಯೋಗಾಲಯಗಳಲ್ಲಿ ಮತ್ತು ಕಾರ್ಯಾಗಾರಗಳಲ್ಲಿ ಮಾತ್ರವೇ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಸಾಕಷ್ಟು ಮತ್ತು ಯಥಾವತ್ತಾದ ಪ್ರಾಯೋಗಿಕ ತರಬೇತಿಯನ್ನೊದಗಿಸುವುದು ತೀರಾ ಕಷ್ಟಕರವೆಂದು ಕಂಡುಬಂದಿದೆ. ಎಲ್ಲ ಎಂಜಿನಿಯರಿಂಗ್ ಸಂಸ್ಥೆಗಳಲ್ಲಿ, ಸೂಕ್ತ ಉದ್ಯೋಗಕ್ಕೆ ಸೂಕ್ತರಾದಂಥವರಿಗೆ ಉದ್ಯೋಗ—ಪ್ರಾಯೋಗಿಕ ತರಬೇತಿ ನೀಡಲು ಹಾಗೂ ಉದ್ಯೋಗವನ್ನು ಒದಗಿಸುವುದಕ್ಕಾಗಿ ರಾಷ್ಟ್ರೀಯ ಅಪರೆಂಟಿಶಿಪ್‌ನ ರಾಷ್ಟ್ರೀಯ ನೀತಿಯೊಂದನ್ನು ರೂಪಿಸುವ ಅಗತ್ಯವಿದೆ.

ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ ರೀತಿಯಲ್ಲಿಯೇ ಒಂದು ಪ್ರತ್ಯೇಕ ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಪ್ರಸ್ತಾಪವೂ ಇದೆ. ಅಂತಹ ಪ್ರಸ್ತಾಪಗಳನ್ನು ಪರಿಗಣಿಸುವಾಗ ಅನುಕೂಲ-ಒಲವಿನ ಬಗ್ಗೆ ಸ್ಪಷ್ಟಪಡಿಸಿಕೊಳ್ಳುವುದು ಅಗತ್ಯ. ಹಲವರು ಈ ಪ್ರಸ್ತಾಪವನ್ನು ಎರಡು ಕಾರಣಗಳಿಂದಾಗಿ ವಿರೋಧಿಸಿದ್ದಾರೆ. ಮೊದಲನೆಯದಾಗಿ, ಅಧ್ಯಯನ ವಿಷಯ-ಪ್ರಧಾನವಾದ ವಿಶ್ವವಿದ್ಯಾನಿಲಯಗಳ ಸ್ಥಾಪನೆಯು ಸಮಗ್ರ ವಿಷಯಗಳ ಅಧ್ಯಯನದ ಆಧುನಿಕ ಪರಿಕಲ್ಪನೆಗೆ ಸರಿಹೊಂದುವುದಿಲ್ಲ. ಇದಲ್ಲದೆ ಜ್ಞಾನಾರ್ಜನೆಗಾಗಿ ಸಂಯೋಜಿತವಾದ ಸಮಗ್ರ ದೃಷ್ಟಿ ಅಗತ್ಯ. ಎರಡನೆಯದಾಗಿ, ಕೃಷಿ ವಿಶ್ವವಿದ್ಯಾನಿಲಯಗಳ ಸ್ಥಾಪನೆ ಮತ್ತು ಅಭಿವೃದ್ಧಿಯ ಹೊಸ ಪ್ರಯೋಗದಿಂದ ಸಾಧಿಸಿದ ಪ್ರತ್ಯೇಕ ಯಶಸ್ಸು ರಾಷ್ಟ್ರದ ಆರ್ಥಿಕ ಪ್ರಗತಿ ಮತ್ತು ಹಿತಸಾಧನೆಗೆ ಅಗತ್ಯವಿರುವಂಥ ತಾಂತ್ರಿಕ-ಕ್ರಾಂತಿಯನ್ನು ಪ್ರತ್ಯೇಕ ತಾಂತ್ರಿಕ ವಿಶ್ವವಿದ್ಯಾನಿಲಯಗಳ ಸ್ಥಾಪನೆಯಿಂದ ಸಾಧಿಸಬಹುದೆಂಬ ನಂಬಿಕೆಯನ್ನು ಮೂಡಿಸಿದೆ. ಈಗಾಗಲೇ ನಾನು ಹೇಳಿರುವಂತೆ, ಈ ಪ್ರಸ್ತಾವವನ್ನು ಲಕ್ಷ್ಯಪೂರ್ವಕವಾಗಿಯೂ, ಮತ್ತು ನಿಷ್ಪಕ್ಷಪಾತವಾಗಿಯೂ ಪರಿಶೀಲಿಸಿ ಮತ್ತು ಆ ತರುವಾಯ ಯಾವುದೇ ವಿಳಂಬವಿಲ್ಲದೆ ನಿರ್ಣಯಕ್ಕೆ ಬರಬೇಕು. ಪ್ರತ್ಯೇಕ ತಾಂತ್ರಿಕ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದ ಪಕ್ಷದಲ್ಲಿ, ಅಂಥ ವಿಶ್ವವಿದ್ಯಾನಿಲಯದ ರಚನೆ ಹಾಗೂ ಅದಕ್ಕೆ ಹಣಕಾಸು ಒದಗಿಸುವ ವಿವರಗಳನ್ನು ಪರಿಶೀಲಿಸುವುದು ಅಗತ್ಯ. ಈಗಿರುವ ಕೇಂದ್ರೀಕೃತ ವಿಶ್ವವಿದ್ಯಾನಿಲಯದ ವ್ಯವಸ್ಥೆಯಲ್ಲಿ, ಎಲ್ಲ

ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕಾರ್ಯ ಒಂದು ಅಥವಾ ಎರಡು ಕ್ಯಾಂಪಸ್‌ನಲ್ಲಿ ನಡೆಯುವ ಈ ವ್ಯವಸ್ಥೆಯ ಬದಲು ರಾಜ್ಯಾದಂತ ಇರುವ ಅನೇಕ ಕಾಲೇಜುಗಳು ಇಂಥ ವಿಶ್ವವಿದ್ಯಾನಿಲಯಗಳ ಸಹಯೋಗದಿಂದ, ಕಾರ್ಯ ನಡೆಸು ವಂಥ ವ್ಯವಸ್ಥೆಯನ್ನು ನಾವು ರೂಪಿಸಬೇಕು. ಒಂದು ಕಾಲೇಜನ್ನು ಅದೇ ರೀತಿಯ ಕಾಲೇಜುಗಳ ಸ್ಥಾನಮಾನ ಮತ್ತು ವ್ಯವಸ್ಥೆಯನ್ನು ಬದಲಾಯಿಸದೆ ಅಥವಾ ಸಾಮಾನ್ಯ ವಿಶ್ವವಿದ್ಯಾನಿಲಯಗಳೊಂದಿಗಿನ ಅವುಗಳ ಸಂಯೋಜನೆ ಬಗ್ಗೆ ಮಾರ್ಪಾಟು ಮಾಡದೆ ವಿಶ್ವವಿದ್ಯಾನಿಲಯವಾಗಿ ಮೇಲ್ದರ್ಜೆಗೇರಿಸುವ ಆಯ್ಕೆ ಮಾಡಿರುವ ಇತ್ತೀಚಿನ ನಿದರ್ಶನಗಳನ್ನು ನೋಡಿದರೆ, ಶೈಕ್ಷಣಿಕ ಪರಿಸರದಲ್ಲಾಗಲೀ, ಅಥವಾ ತರಬೇತಿಯಲ್ಲಿ ರುವ ಅಧಿಕಾಂಶ ಎಂಜಿನಿಯರಿಂಗ್ ತರಬೇತಿದಾರರ, ಶೈಕ್ಷಣಿಕ ಸಾಧನೆಗಳಲ್ಲಾಗಲೀ ಗುಣಮಟ್ಟದಲ್ಲಾಗಲೀ ಬದಲಾವಣೆಯಾಗುವ ಸಂಭವ ತೀರಾ ಕಡಿಮೆ. ಈ ಸಮ್ಮೇ ಳನದಲ್ಲಿ ತಾಂತ್ರಿಕ ವಿಶ್ವವಿದ್ಯಾನಿಲಯಗಳ ಸ್ಥಾಪನೆ ನಿರ್ದಿಷ್ಟ ವಿಷಯದ ಬಗ್ಗೆ ನೀವು ಚರ್ಚಿಸುವ ವಿಚಾರ ಸಂತೋಷದಾಯಕವಾಗಿದೆ. ಮತ್ತು ನಿಮ್ಮ ಚರ್ಚೆಗಳ ಫಲಿ ತಾಂಶವನ್ನು ಆಸಕ್ತಿಯಿಂದ ಇದಿರು ನೋಡುತ್ತೇನೆ.

ಎಂಜಿನಿಯರಿಂಗ್ ಕಾಲೇಜುಗಳನ್ನು ಮತ್ತು ಪಾಲಿಟೆಕ್ನಿಕ್ ಕಾಲೇಜುಗಳನ್ನು ಸ್ಥಾಪಿಸುವ ವಿಷಯ ಮತ್ತು ಎಲ್ಲಿ ಸ್ಥಾಪಿಸಬೇಕೆಂಬ ವಿಷಯದ ಬಗ್ಗೆ ಬುದ್ಧಿಪೂರ್ವಕ ನೀತಿಯನ್ನು, ಅನುಸರಿಸಿದ್ದೇವೆ. ಈ ಹಲವಾರು ಸಂಸ್ಥೆಗಳನ್ನು ಹಿಂದುಳಿದ ಪ್ರದೇಶ ಗಳಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಆರಂಭಿಸಲಾಗಿದೆ. ಈ ನೀತಿಯ ಮೇರೆಗೆ ತಾಂತ್ರಿಕ ಸಂಸ್ಥೆಗಳು, ಅಭಿವೃದ್ಧಿ ಕೇಂದ್ರಗಳಾಗಿ, ಪ್ರಗತಿಹೊಂದಿ, ಅವುಗಳ ತಾಂತ್ರಿಕ ತಿಳಿವಳಿಕೆಯನ್ನು ನೆರೆಹೊರೆಯವರಿಗೆ ಹರಡುವಂತೆ ಮಾಡವುದೇ ಅಲ್ಲದೆ, ಪರಿಣಾಮ ಕಾರಿಯಾಗಿ ಅವುಗಳ ಅಭಿವೃದ್ಧಿಯಾಗುವುದೆಂದೂ ನನ್ನ ನಂಬಿಕೆ. ನಮ್ಮ ನಿರೀಕ್ಷೆಗಳು ಸಾಕಷ್ಟು ಈಡೇರಿವೆಯೆಂದೂ ಮತ್ತು ಈ ಸಂಸ್ಥೆಗಳು, ತಾಂತ್ರಿಕ ವಿಸ್ತರಣಾ ಕಾರ್ಯ ದಲ್ಲಿ ಸ್ವತಃ ತೊಡಗಿವೆ ಅಥವಾ ಅಪೇಕ್ಷಿತಾ ಸಲಹಾ ಸೇವೆಯ ಕಾರ್ಯದಲ್ಲಿ ತೊಡಗಿವೆ ಎಂಬ ಬಗ್ಗೆಯೂ ಖಚಿತವಾಗಿ ಹೇಳಲಾರೆ. ಅಲ್ಲದೆ, ಈ ಸಂಸ್ಥೆಗಳಿಗೆ ತಮ್ಮದೇ ಆದ ತೊಂದರೆಗಳಿರಬಹುದು. ಹಾಗೇನಾದರೂ ತೊಂದರೆಗಳಿದ್ದರೆ ಅವುಗಳನ್ನು ಕಂಡು ಹಿಡಿದು ಸರಿಪಡಿಸಬೇಕು. ನಮ್ಮ ಎಲ್ಲ ಎಂಜಿನಿಯರಿಂಗ್ ಕಾಲೇಜು ಮತ್ತು ಪಾಲಿಟೆಕ್ನಿಕ್‌ಗಳಲ್ಲಿರುವ ನಿಪುಣ ಹಾಗೂ ತಜ್ಞ ಜನಶಕ್ತಿಯನ್ನು ನಮ್ಮ ಯೋಜನೆ ಮತ್ತು ಅಭಿವೃದ್ಧಿ ಕಾರ್ಯಚಟುವಟಿಕೆಗಳಿಗೆ ಸೂಕ್ತವಾಗಿ ಬಳಸಿಕೊಂಡರೆ, ಆರ್ಥಿಕ ಸ್ವಾವಲಂಬನೆ ಸಾಧ್ಯ; ಸ್ಥಳೀಯ ಸಮಸ್ಯೆಗಳಿಗೆ ಪರಿಹಾರ ಸಾಧ್ಯ; ರಾಜ್ಯದ ಎಲ್ಲ ಪ್ರದೇಶಗಳಲ್ಲೂ ಸಮಾನವಾದ ಮತ್ತು ನಿಷ್ಪಕ್ಷಪಾತವಾದ ಅಭಿವೃದ್ಧಿ ಸಾಧ್ಯ. ಈ ಗುರಿಗಳ ಸಾಧನೆಗೆ ಈ ಸಮ್ಮೇಳನ ದಾರಿ ತೋರಿಸಿಕೊಟ್ಟರೆ, ನೀವು ನಮ್ಮ ಜನತೆಗೆ

ಅದ್ವಿತೀಯ ಸೇವೆ ಸಲ್ಲಿಸಿದಂತಾಗುತ್ತದೆ. ಹಾಗೂ ಅವರ ಆಸೆ ಆಕಾಂಕ್ಷೆಗಳನ್ನು ಈಡೇರಿಸುವತ್ತ ವಿಶೇಷ ಕೊಡುಗೆ ನೀಡಿದಂತಾಗುತ್ತದೆ.

ಸ್ನೇಹಿತರೆ, ನಾನು ಮಾತನಾಡಬೇಕಾದ್ದಕ್ಕಿಂತಲೂ ಅಥವಾ ಅಗತ್ಯವಾಗಿದ್ದುದಕ್ಕಿಂತಲೂ ಹೆಚ್ಚು ಮಾತನಾಡಿದ್ದೇನೆ. ತಾಂತ್ರಿಕ ಶಿಕ್ಷಣದ ಕೆಲವು ವಿಚಾರಗಳತ್ತ ನಿಮ್ಮ ಗಮನ ಸೆಳೆಯುವ ಪ್ರಯತ್ನದಲ್ಲಿ, ನಿಸ್ಸಂಶಯವಾಗಿ ಹೇಳಬೇಕಾದರೆ ನಾನು ಬಹಳಷ್ಟು ಸಮಯ ತೆಗೆದುಕೊಂಡಿದ್ದೇನೆ. ನಿಮಗೆಲ್ಲರಿಗೂ ಮುಖ್ಯ ವಿಷಯಗಳು ಗೊತ್ತಿವೆ. ನಾನು ದೀರ್ಘವಾಗಿ ಮಾತನಾಡಿದ್ದಕ್ಕೆ ಕಾರಣವಿಷ್ಟೆ. ಗೊತ್ತಿರುವ ವಿಷಯಗಳನ್ನು ಜನ ಸಾಮಾನ್ಯ ದೃಷ್ಟಿಯಿಂದ ಪರೀಕ್ಷಿಸಿ ನೋಡುವುದು ಕೆಲವೊಮ್ಮೆ ಅಗತ್ಯ. ಅಗಾಧ ಪ್ರತಿಭೆ ಮತ್ತ ಅಪಾರ ಅನುಭವವುಳ್ಳ, ಶೈಕ್ಷಣಿಕ ಮತ್ತು ಎಂಜಿನಿಯರಿಂಗ್ ಕ್ಷೇತ್ರದ ತಜ್ಞರ ಈ ಸಮ್ಮೇಳನವು, ಎಂಜಿನಿಯರಿಂಗ್ ಶಿಕ್ಷಣದಲ್ಲಿ ಹೊಸ ಮಾರ್ಗಗಳನ್ನು ಗುರುತಿಸಿ, ಅವುಗಳನ್ನು ಸುಗಮಗೊಳಿಸುವಲ್ಲಿ ಯಶಸ್ವಿಯಾಗಲಿ. ಆ ಮೂಲಕ ನಮ್ಮ ಅಭಿವೃದ್ಧಿ ಕಾರ್ಯಕ್ರಮಗಳು ತ್ವರಿತಗೊಳ್ಳಲಿ; ಪ್ರಜಾಕೋಟಿಯ ಬದುಕು ಹಸನಾಗಲಿ—ಎನ್ನುವುದೇ ನನ್ನ ಆಶಯ.

ಈ ಗುರಿ ಈಡೇರುವುದೆಂಬ ನಂಬಿಕೆ ನನಗಿದೆ. ಸಮ್ಮೇಳನ, ಫಲಪ್ರದವಾಗಲೆಂದು ಹಾರೈಸುತ್ತೇನೆ.

————

ದಕ್ಷಿಣ ಏಷ್ಯ ದೇಶಗಳ ಭಾಷೆಗಳು ಮತ್ತು ಭಾಷಾ ವಿಜ್ಞಾನವನ್ನು ಕುರಿತ 3ನೇ ಅಂತರ ರಾಷ್ಟ್ರೀಯ ಸಮ್ಮೇಳನದ ಸನ್ಮಾನ್ಯ ಪ್ರತಿನಿಧಿಗಳೇ, ಡಾ. ಪಟ್ನಾಯಕ್ ಅವರೇ, ಪ್ರೊ. ಡಿಮೋಕ್ ಅವರೇ ಹಾಗೂ ಸ್ನೇಹಿತರೇ.

ನಿಮ್ಮೆಲ್ಲರನ್ನು ಕರ್ನಾಟಕ ರಾಜ್ಯಕ್ಕೆ ಹಾಗೂ ಸುಂದರವಾದ ಈ ಮೈಸೂರು ನಗರಕ್ಕೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ, ವಿದೇಶಗಳಿಂದ ಆಗಮಿಸಿರುವ ನಮ್ಮ ಮಿತ್ರರಿಗೆ ನನ್ನ ಹಾಗೂ ಮುಖ್ಯವಾಗಿ ಕರ್ನಾಟಕ ಸರ್ಕಾರದ ಹಾರ್ದಿಕ ಶುಭಾಶಯಗಳನ್ನು ತಿಳಿಸಬಯಸುತ್ತೇನೆ.

ಕರ್ನಾಟಕದ ಗತಕಾಲ ಭವ್ಯವಾದುದು. ಅದರ ವರ್ತಮಾನ ಚೈತನ್ಯ ಪೂರ್ಣವಾದುದು. ಹಾಗೆಯೇ ನಿಶ್ಚಿತವಾದ ಉಜ್ವಲ ಭವಿಷ್ಯ ಅದಕ್ಕಿದೆ. ಇದು ಮೊದಲಿನಿಂದಲೂ ಪ್ರಭಾವಶಾಲಿಯಾದ ಸಂಸ್ಕೃತಿಯ ನೆಲೆಯಾಗಿದೆಯಷ್ಟೇ ಅಲ್ಲ, ಅನೇಕ ಧಾರ್ಮಿಕ ಆಂದೋಲನಗಳಿಗೆ, ನೃತ್ಯ ನಾಟಕ ಪ್ರಕಾರಗಳಿಗೆ, ಶಿಲ್ಪ ಮತ್ತಿತರ ಲಲಿತಕಲಾ ಶೈಲಿಗಳಿಗೆ ಉಗಮ ಸ್ಥಾನವಾಗಿದೆ. ಎಲ್ಲ ಸಂಸ್ಕೃತಿಗಳಲ್ಲೂ ಇರುವ ಸತ್ವಪೂರ್ಣ ಅಂಶಗಳನ್ನು ತಮ್ಮದಾಗಿಸಿಕೊಳ್ಳುವಲ್ಲಿ ಕನ್ನಡ ಜನತೆ ಸದಾ ಮುಂದು.

ಆದ್ದರಿಂದ ದಕ್ಷಿಣ ಏಷ್ಯಾ ದೇಶಗಳ ಭಾಷೆಗಳು ಮತ್ತು ಭಾಷಾ ವಿಜ್ಞಾನವನ್ನು ಕುರಿತ 3ನೇ ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ತಮ್ಮೆಲ್ಲರನ್ನು ಸ್ವಾಗತಿಸಲು ಹಾಗೂ ಇಲ್ಲಿ ಆಗಮಿಸಿರುವ ಪ್ರತಿನಿಧಿಗಳಿಗೆ ಆತಿಥೇಯನಾಗಲು ನನಗೆ ಅತೀವ ಸಂತೋಷವುಂಟಾಗಿದೆ.

ಕನ್ನಡ ಸಂಸ್ಕೃತಿಯ ವಿಶಾಲ ಮನೋಭಾವವು ಕನ್ನಡ ಭಾಷೆಯಲ್ಲೂ ಅದರ ನಿಘಂಟುಗಳಲ್ಲೂ, ವ್ಯಾಕರಣಗಳಲ್ಲೂ ಮತ್ತು ಶಬ್ದಾರ್ಥದ ಸೂಕ್ಷ್ಮ ಎಳೆಎಳೆಗಳಲ್ಲೂ ಸಂಪೂರ್ಣವಾಗಿ ಪ್ರತಿಬಿಂಬಿತವಾಗಿದೆ. ಕನ್ನಡದ ಮೊದಲ ವ್ಯಾಕರಣ ಗ್ರಂಥವನ್ನು ರಚಿಸಿದವನು ಕೇಶಿರಾಜ. ಆತನ ಶಬ್ದ ಮಣಿದರ್ಪಣ ಕನ್ನಡದ ಶ್ರೀಮಂತ ವ್ಯಾಕರಣ ಪರಂಪರಗೆ ಉತ್ತಮ ನಿದರ್ಶನ. ಆಧುನಿಕ ಕಾಲದಲ್ಲೂ, ಶ್ರೀಯುತರುಗಳಾದ ತೀ. ನಂ. ಶ್ರೀಕಂಠಯ್ಯ, ಆರ್. ಸಿ. ಹಿರೇಮಠ, ಎಚ್.ಎಸ್. ಬಿಳಿಗಿರಿ, ಹಾ.ಮಾ. ನಾಯಕ, ಎ.ಕೆ. ರಾಮಾನುಜನ್, ಜೆ.ಎಸ್. ಕುಳ್ಳಿ ಮತ್ತು ಡಾ. ಡಿ.ಎನ್. ಶಂಕರಭಟ್ಟ ಮುಂತಾದ ವಿದ್ವಾಂಸರು ಆಧುನಿಕ ಕನ್ನಡದ ವಿಶ್ಲೇಷಣೆಗೆ ತಮ್ಮ ಅತ್ಯುತ್ತಮ ಕೊಡುಗೆಯನ್ನು ನೀಡಿದ್ದಾರೆ. ಕನ್ನಡ ಭಾಷೆಯ ಸಾಂಸ್ಕೃತಿಕ ಹಾಗೂ ಭಾಷಾ ಸಂಪತ್ತಿಗೆ ಮಾರುಹೋದ ಅನೇಕ ಐರೋಪ್ಯ ಹಾಗೂ

ಅಮೇರಿಕದ ವಿದ್ವಾಂಸರು ಈ ಕುರಿತು ಕೆಲಸ ಮಾಡಿರುವುದೂ ಕನ್ನಡದ ಸುಕೃತವೆನ್ನಬೇಕು. ಸ್ಪೆನ್ಸರ್. ಕಟ್ಟಲ್, ಆಂಡ್ರೊನೋವ್, ಬ್ರೈಟ್ ಮತ್ತು ಶಿಫ್‌ಮನ್ ಮುಂತಾದ ಗಣ್ಯ ಪ್ರೊಫೆಸರ್‌ಗಳನ್ನು ನಾವಿಲ್ಲಿ ಸ್ಮರಿಸಬಹುದು. ಕನ್ನಡವನ್ನು ಈಗ ಅನೇಕ ಐರೋಪ್ಯ ಹಾಗೂ ಏಷ್ಯಾದ ರಾಷ್ಟ್ರಗಳಲ್ಲಿ ಕಲಿಸಲಾಗುತ್ತಿದೆ. ಇದೇ ರೀತಿ ಭಾರತದಲ್ಲೂ, ಕರ್ನಾಟಕದ ಹೊರ ರಾಜ್ಯಗಳಲ್ಲೂ ಕನ್ನಡವನ್ನು ಕಲಿಸಲಾಗುತ್ತಿದೆ. ಈ ಕುರಿತು ಸಿ.ಐ.ಐ.ಎಲ್.ಗೆ ಅಭಿನಂದನೆಗಳು ಸಲ್ಲಬೇಕಾಗಿದೆ. ಕನ್ನಡ ಭಾಷೆಯ ಅಧ್ಯಯನ ಮಾಡುವಲ್ಲಿ ಮತ್ತು ದ್ವಿಭಾಷಾ ನಿಘಂಟುಗಳು ಮತ್ತು ವ್ಯಾಕರಣಗಳನ್ನು ತಯಾರಿಸುವಲ್ಲಿ ರಷ್ಯನ್ ವಿದ್ವಾಂಸರ ವಿಶೇಷ ಪರಿಶ್ರಮವನ್ನು ನಾವಿಲ್ಲಿ ಸ್ಮರಿಸುವುದು ಸೂಕ್ತ. ಡಾ. ಆಂಡ್ರೊನೋವ್ ಅವರು ಕನ್ನಡವನ್ನು ಕುರಿತು ಚಿಕ್ಕದಾದರೂ ಸತ್ತ್ವಪೂರ್ಣವಾದ ನಿಬಂಧವನ್ನು ಬರೆದು ಕನ್ನಡಕ್ಕೆ ಮಹತ್ತರ ಸೇವೆ ಸಲ್ಲಿಸಿದ್ದಾರೆ. ಕನ್ನಡ ಭಾಷಾ ವಿಜ್ಞಾನದ ಬಗ್ಗೆ ಅಂತರ ರಾಷ್ಟ್ರೀಯ ಆಸಕ್ತಿ ಆಳವಾಗಿ ಬೇರೂರಿದ್ದು 70 ಮತ್ತು 80ರ ದಶಕದಲ್ಲಿ ಈ ಪ್ರಯತ್ನಗಳಿಗೆ ಉತ್ತೇಜನ ನೀಡಲು ಹಾಗೂ ಅದನ್ನು ಏಕಮುಖವಾಗಿ ಹರಿಯುವಂತೆ ಮಾಡಲು ಕರ್ನಾಟಕ ಸರ್ಕಾರವು ಅಕ್ಟೋಬರ್ ನವೆಂಬರ್‌ನಲ್ಲಿ ಮೈಸೂರು ನಗರದಲ್ಲಿ ವಿಶ್ವ ಕನ್ನಡ ಸಮ್ಮೇಳನವನ್ನು ನಡೆಸಲಿದೆ.

ಕನ್ನಡ ಭಾಷಾ ವಿಜ್ಞಾನ ಮೂಡಿಸಿರುವ ಆಸಕ್ತಿಗೆ ಹೋಲಿಸಿದಾಗ ಕನ್ನಡ ಸಾಹಿತ್ಯವನ್ನು ಕುರಿತು ಮೂಡಿರುವ ಆಸಕ್ತಿ ಇನ್ನೂ ವಿಶಾಲ ವ್ಯಾಪ್ತಿಯುಳ್ಳದ್ದು. ಅಸಂಖ್ಯಾತ ವೈವಿಧ್ಯತೆ, ನಾವಿನ್ಯ ಮತ್ತು ಹೃದಯಂಗಮ ಮಾನವೀಯ ಅಂಶಗಳುಳ್ಳ ವಸ್ತುಗಳು ಹಾಗೂ ಸಮಾಜ ಸುಧಾರಣೆಯ ಕಳಕಳಿಯ ವಸ್ತುಗಳು ಕನ್ನಡ ಸಾಹಿತ್ಯದ ಕೇಂದ್ರಬಿಂದುಗಳಾಗಿವೆ. ವಚನಗಳಂತೂ ಕನ್ನಡ ಸಾಹಿತ್ಯ ಸಾರಸತ್ತ್ವ ಇವೆಲ್ಲಾ ಅಂತರ ರಾಷ್ಟ್ರೀಯ ವಿದ್ವಾಂಸರನ್ನು ಕನ್ನಡ ಸಾಹಿತ್ಯದೆಡೆಗೆ ಆಕರ್ಷಿಸಿವೆ. ಕನ್ನಡ ಸಾಹಿತ್ಯದಲ್ಲಿನ ಹೊಸ ಹೊಸ ಪ್ರಕಾರಗಳ ಸೃಷ್ಟಿ, ಹಾಗೂ ಪ್ರಯೋಗ ಶೀಲತೆಗೆ ಸರಿ ಸಮಾನವಾಗಿ ಕನ್ನಡ ಚಿತ್ರರಂಗದಲ್ಲೂ ಚೈತನ್ಯಪೂರ್ಣ ಅಭಿವೃದ್ಧಿಯನ್ನು ಕಾಣುತ್ತಿದ್ದೇವೆ.

ಕನ್ನಡ ಭಾಷೆ ಹಾಗೂ ಸಾಹಿತ್ಯಗಳು ಆಡಳಿತ, ಶಿಕ್ಷಣ ಮತ್ತು ಸಮೂಹ ಮಾಧ್ಯಮಗಳ ಸಮರ್ಥ ವಾಹಕವಾಗುವಂತೆ ಎಲ್ಲ ಬಗೆಯಿಂದಲೂ ಅವುಗಳ ಅಭಿವೃದ್ಧಿಗೆ ಸಹಾಯ ನೀಡುವುದು ತನ್ನ ಬದ್ಧ ಕರ್ತವ್ಯವೆಂದು ಕರ್ನಾಟಕ ಸರ್ಕಾರ ಪರಿಗಣಿಸಿದೆ. ಕನ್ನಡಿಗರು ಮತ್ತು ಕನ್ನಡೇತರರು ಕನ್ನಡ ಅಧ್ಯಯನ ಮಾಡಲು ಪ್ರೋತ್ಸಾಹ ನೀಡುವುದಕ್ಕಾಗಿ ಕರ್ನಾಟಕ ಸರ್ಕಾರ ವಿವಿಧ ಕ್ರಮಗಳನ್ನು ಕೈಗೊಂಡಿದೆ. ಈ ನಮ್ಮ ಪ್ರಯತ್ನಗಳಲ್ಲಿ ಕರ್ನಾಟಕ ಸಚಿವಾಲಯದ ಅಧಿಕಾರಿಗಳಿಗೆ ಆಡಳಿತದಲ್ಲಿ ಕನ್ನಡದ ಬಳಕೆಯ ಬಗ್ಗೆ ತರಬೇತಿ ನೀಡುವುದಕ್ಕೆ, ಭಾರತ ಆಡಳಿತ ಸೇವೆಯ ಅಧಿಕಾರಿಗಳಿಗೆ, ಭಾರತ ಪೋಲಿಸ್

ಸೇವೆ ಅಧಿಕಾರಿಗಳಿಗೆ ಮತ್ತಿತರ ಅಧಿಕಾರಿಗಳಿಗೆ ಕನ್ನಡ ಕಲಿಸುವುದಕ್ಕೆ ಸಿ.ಐ.ಐ.ಎಲ್. ಸಂಸ್ಥೆಯ ಸೇವೆ ನಮಗೆ ದೊರೆತದ್ದು ನಮ್ಮ ಭಾಗ್ಯವೆನ್ನಬೇಕು. ಕರ್ನಾಟಕದಲ್ಲಿ ಕನ್ನಡಕ್ಕೇ ಆದ್ಯಸ್ಥಾನ ಎಂಬುದಕ್ಕೆ ಹೆಚ್ಚಿನ ಗಮನ ನೀಡಲಾಗುತ್ತಿದೆಯಾದರೂ ಕರ್ನಾಟಕದಲ್ಲಿ ಮಾತನಾಡುವ ಇತರ ಭಾಷೆಗಳಿಗೂ ಎಲ್ಲ ಸಾಧ್ಯವಾದ ಬೆಂಬಲ ನೀಡುವುದು ನಮ್ಮ ನೀತಿಯಾಗಿದೆ

ದಕ್ಷಿಣ ಏಷ್ಯಾ ದೇಶಗಳ ಭಾಷೆಗಳು ಮತ್ತು ಭಾಷಾ ವಿಜ್ಞಾನವನ್ನು ಕುರಿತ ಈ 3ನೇ ಅಂತರ ರಾಷ್ಟ್ರೀಯ ಸಮ್ಮೇಳನದಲ್ಲಿ 150ಕ್ಕೂ ಹೆಚ್ಚು ಮಂದಿ ಪ್ರತಿನಿಧಿಗಳು ಭಾಗವಹಿಸುತ್ತಿರುವುದು ನನಗೆ ಸಂತೋಷವನ್ನು ತಂದಿದೆ. ಒಂದು ಲೆಕ್ಕದ ಪ್ರಕಾರ ಭಾರತದಲ್ಲಿ ನೂರಾರು ಭಾಷೆಗಳಿವೆ. ಈ ಎಲ್ಲ ಭಾಷೆಗಳೂ ಮೇಳಗೊಂಡು ನಮ್ಮ ಭವ್ಯ ರಾಷ್ಟ್ರದ ಆಧಾರ ಶಕ್ತಿಯಾಗಿ ರೂಪುಗೊಂಡಿವೆ. ಬಹುಭಾಷಾ ಸಾಮರ್ಥ್ಯ ಮೊದಲಿನಿಂದಲೂ ನಮ್ಮ ಶಕ್ತಿಯಾಗಿದೆ. ಅನಾದಿ ಕಾಲದಿಂದಲೂ ನಮ್ಮ ಪೂರ್ವಿಕರು, ಒಬ್ಬರು ಮತ್ತೊಬ್ಬರ ಭಾಷೆಯನ್ನು ಕಲಿತು ಕೊಳ್ಳುತ್ತಿದ್ದರಲ್ಲದೆ, ಅವರ ಯಾವುದೇ ವೃತ್ತಿಗೂ ಭಾಷೆ ಅಡ್ಡಗೋಡೆಯಾಗಿರಲಿಲ್ಲ. ಪರಸ್ಪರ ಸಹಿಷ್ಣುತೆ ಮತ್ತು ಪರಸ್ಪರ ಗೌರವ ಮೊದಲಿನಿಂದಲೂ ನಮ್ಮ ಸಂಸ್ಕೃತಿಯ ಮುಖ್ಯ ತಿರುಳು.

ದಕ್ಷಿಣ ಏಷ್ಯ ಒಂದೇ ಭಾಷೇ ಪ್ರದೇಶವೆಂಬುದು ಸಂಶೋಧನ ಸಿದ್ಧ ವಿಷಯವಾಗಿದೆ. ಈ ಪ್ರದೇಶದಲ್ಲಿನ ರಾಷ್ಟ್ರಗಳು ಬೇರೆ ಬೇರೆ ಎಲ್ಲೆಗಟ್ಟಿನೊಳಗಿದ್ದರೂ ಅವುಗಳನ್ನು ಒಂದಕ್ಕೊಂದು ಬಂಧಿಸುವ ಅವುಗಳ ಸಂಸ್ಕೃತಿಗಳು ಹಾಗೂ ಭಾಷೆಗಳು ಒಂದೇ ಮೂಲವನ್ನು ಹೊಂದಿವೆಯಲ್ಲದೆ, ಒಂದನ್ನೊಂದು ಸಮೃದ್ಧಗೊಳಿಸುತ್ತಿವೆ. ಈ ಪ್ರದೇಶದ ರಾಷ್ಟ್ರಗಳ ನಡುವೆ ಆರ್ಥಿಕ ಮತ್ತು ರಾಜಕೀಯ ರಂಗಗಳಲ್ಲಿ ಪರಸ್ಪರ ಸಹಕಾರದ ಪ್ರಯತ್ನಗಳನ್ನು ಮಾಡಲಾಗಿದೆ. ಶೈಕ್ಷಣಿಕ ರಂಗದಲ್ಲೂ ಇಂಥ ಸಹಕಾರವನ್ನು ಬಯಸಲಾಗಿದೆ. ಇಂದಿನ ಸಮ್ಮೇಳನದಲ್ಲಿ ಅತ್ಯಂತ ಸ್ವಾಭಾವಿಕವಾಗಿ ಮತ್ತು ಈಗಾಗಲೇ ಅಸ್ತಿತ್ವದಲ್ಲಿರುವ ಭೂಮಿಕೆಯ ಮೇಲೆ ಅಂದರೆ ಭಾಷೆಗಳ ಸಂಬಂಧದಲ್ಲಿ ಈ ರೀತಿಯ ಸಹಕಾರವನ್ನು ಬಯಸಲಾಗಿದೆ. ನಾವು ಸಮಾನ ಭಾಷೆ ಹಾಗೂ ಸಮಾನ ಸಾಹಿತ್ಯವನ್ನು ಹೊಂದಿರುತ್ತೇವೆ. ಒಬ್ಬರು ಮತ್ತೊಬ್ಬರ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡುವುದೂ ನಮಗೇ ಹೆಚ್ಚು ಪ್ರಯೋಜನಕಾರಿ. ನಮ್ಮ ಪ್ರಯತ್ನದಲ್ಲಿ ರಷ್ಯಾ, ಅಮೇರಿಕಾ, ಸಂಯುಕ್ತ, ಸಂಸ್ಥಾನ, ಜರ್ಮನಿ, ಆಸ್ಟ್ರೇಲಿಯಾ, ಜಪಾನ್, ಮಲೇಷ್ಯಾ, ಸಿಂಗಪೂರ್ ಮತ್ತು ಇನ್ನೂ ಅನೇಕ ದೇಶಗಳು ಬಹಳ ಸಹಕಾರಿಯಾಗಿವೆ. ಈ ಸಮ್ಮೇಳನದಲ್ಲಿ 15 ರಾಷ್ಟ್ರಗಳಿಂದ ವಿದ್ವಾಂಸರು ಬಂದು ಭಾಗವಹಿಸುತ್ತಿರುವುದು ಸಂತೋಷಕಾರಿ ವಿಷಯ. ಮುಂದಿನ ನಾಲ್ಕು ದಿನಗಳಲ್ಲಿ ಅವರು ಭಾಷಾ ವಿಶ್ಲೇಷ

ಣೆಯ ವಿವಿಧ ಅಂಶಗಳನ್ನು ಕುರಿತು ಸಮಾಲೋಚಿಸುತ್ತಾರೆಂಬುದು ಮತ್ತೂ ಸಂತೋಷವನ್ನುಂಟು ಮಾಡುತ್ತದೆ. ಸ್ಮೃತಿ ಸಂಪ್ರದಾಯ, ನಿರುಕ್ತ, ಪ್ರಾಚೀನ ವ್ಯಾಕರಣ ಸಿದ್ಧಾಂತಗಳು, ಭಾಷಾ ವಿಜ್ಞಾನ ಮತ್ತು ಸಾಹಿತ್ಯಕ ವಿಶ್ಲೇಷಣೆ ಭಾಷಾ ಬೋಧನೆಯ ಸಮಸ್ಯೆಗಳು ಮತ್ತು ಶಿಕ್ಷಣದಲ್ಲಿ ಭಾಷೆಯ ಬಳಕೆ, ಭಾಷಾಂತರ ಸಮಸ್ಯೆಗಳು ಮತ್ತು ವೃತ್ತಿಗಳಲ್ಲಿ ಭಾಷಾ ಬಳಕೆ ಹಾಗೂ ಗಿರಿಜನ ಭಾಷೆಗಳ ಭಾಷಾ ವೈಜ್ಞಾನಿಕ ವಿಶ್ಲೇಷಣೆ-ಇವು ಗೋಷ್ಠಿಯ ಕೆಲವಾರು ವಿಷಯವಾಗಿವೆ. ಭಾಷಾ ವಿವರಣೆಯ ಸಿದ್ಧಾಂತಗಳನ್ನು, ಮತ್ತಿತರ ವಿಷಯಗಳನ್ನು ಕುರಿತು ಚರ್ಚಿಸುವಾಗ ದಕ್ಷಿಣ ಏಷ್ಯಾ ರಾಷ್ಟ್ರಗಳಲ್ಲಿ ಭಾಷಾ ಶಾಸ್ತ್ರದ ಸಂಶೋಧನೆಯ ಪರಿಸ್ಥಿತಿ ಹೇಗಿದೆ ಎಂಬುದನ್ನು ಕುರಿತು ಆಳವಾಗಿ ವಿಶ್ಲೇಷಣೆ ಮಾಡಬೇಕೆಂದು ಮತ್ತು ದಕ್ಷಿಣ ಏಷ್ಯಾದ ಜನತೆಯ ಅಭೀಷ್ಟ ಪೂರೈಸುವ ಸಲುವಾಗಿ ದಕ್ಷಿಣ ಏಷ್ಯದ ಭಾಷೆಗಳನ್ನು ಅಭಿವೃದ್ಧಿ ಪಡಿಸಲು ಸಾಧಕ ಮಾರ್ಗಗಳನ್ನು ಸೂಚಿಸಬೇಕೆಂದು ಇಲ್ಲಿನ ಪ್ರಸಿದ್ಧ ವಿದ್ವಾಂಸರನ್ನು ನಾನು ಕೇಳಿಕೊಳ್ಳುತ್ತೇನೆ. ನಮ್ಮ ಭಾಷೆಗಳ ವ್ಯಾಕರಣವನ್ನು ಕುರಿತ ಎಲ್ಲ ಒಳನೋಟಗಳನ್ನು ನಾನು ಸ್ವಾಗತಿಸುತ್ತೇನೆ. ಭಾಷಾ ರಚನೆಯ ಸೂಕ್ಷ್ಮ ಹಾಗೂ ಪಾಂಡಿತ್ಯಪೂರ್ಣ ವಿಶ್ಲೇಷಣೆಗೂ ನನ್ನ ಸ್ವಾಗತವಿದೆ. ಈ ವಲಯಗಳಲ್ಲಿ ಮೇಲ್ಮಟ್ಟದ ಸಂಶೋಧನೆ ನಡೆಸಬೇಕೆಂದು ಸೂಚಿಸುವುದೇ ಅಲ್ಲದೆ, ದಕ್ಷಿಣ ಏಷ್ಯದ ಭಾಷೆಗಳ ಮೂಲಕ ವಿದ್ಯಾಭ್ಯಾಸ ನೀಡುವಲ್ಲಿ ಎದುರಾಗುವ ತುರ್ತು ಸಮಸ್ಯೆಗಳನ್ನು ಕುರಿತು ಪರಿಹಾರ ಕಂಡುಹಿಡಿಯುವುದಕ್ಕಾಗಿ ತಮ್ಮ ಪರಿಶ್ರಮವನ್ನು ವಿನಿಯೋಗಿಸಬೇಕೆಂದು ಇಲ್ಲಿನ ವಿದ್ವಾಂಸರನ್ನು ವಿನಂತಿಸುತ್ತೇನೆ. ಏಕೆಂದರೆ, ಸಾಮಾಜಿಕ ಹೊಣೆಗಾರಿಕೆಗೂ ಹಾಗೂ ಭಾಷಾ ಮಾಧ್ಯಮಕ್ಕೂ ಪರಸ್ಪರ ಸಂಬಂಧವಿದೆ.

ದಕ್ಷಿಣ ಏಷ್ಯಾ ಭಾಷೆಗಳು ಮತ್ತು ಭಾಷಾ ವಿಜ್ಞಾನದ ಅಂತರ ರಾಷ್ಟ್ರ ಸಮಿತಿಯು ತನ್ನ 3ನೇ ಸಮ್ಮೇಳನದ ಸ್ಥಳವಾಗಿ ಮೈಸೂರನ್ನು ಆಯ್ಕೆ ಮಾಡಿರುವುದು ಅತಿ ಸಮಂಜಸವಾಗಿದೆ. ಆಡಳಿತ, ಶಿಕ್ಷಣ ಮತ್ತು ಸಮೂಹ ಮಾಧ್ಯಮಗಳಲ್ಲಿ ಭಾಷೆಯ ಮಹತ್ವವನ್ನು ನಿರಂತರವಾಗಿ ಒತ್ತಿಹೇಳುತ್ತಿರುವ ಚೈತನ್ಯಶೀಲರಾದ ಡಾ. ಪಟ್ನಾಯಕ್ ಅವರು ನಿರ್ದೇಶಕರಾಗಿರುವಂಥ ಈ ಸಿ. ಐ. ಐ. ಎಲ್. ಸಂಸ್ಥೆಗಿಂತಲೂ ಸೂಕ್ತವಾದ ಸ್ಥಳ ಇನ್ನಾವುದಿದೆ. ಇಷ್ಟು ಮಾತುಗಳನ್ನು ಹೇಳಿ ದಕ್ಷಿಣ ಏಷ್ಯದ ಭಾಷೆಗಳು ಮತ್ತು ಭಾಷಾ ವಿಜ್ಞಾನವನ್ನು ಕುರಿತು 3ನೇ ಅಂತರ ರಾಷ್ಟ್ರೀಯ ಸಮ್ಮೇಳನವನ್ನು ಈಗ ಉದ್ಘಾಟಿಸುತ್ತೇನೆ ಮತ್ತು ಇಲ್ಲಿನ ಪ್ರತಿನಿಧಿಗಳಿಗೆ ಅವರ ಚರ್ಚೆ ಸಮಾಲೋಚನೆಗಳಲ್ಲಿ ಪೂರ್ಣ ಯಶಸ್ಸನ್ನು ಕೋರುತ್ತೇನೆ.

"ಜೈಹಿಂದ್"

ದಿನಾಂಕ 16-2-1981 ರಂದು ಸೋಮವಾರ ಕರ್ನಾಟಕ ರಾಜ್ಯದ ಶಿಕ್ಷಣ ಸಚಿವರಾದ ಶ್ರೀ ಜಿ. ಬಿ. ಶಂಕರರಾಯರು ಶ್ರವಣಬೆಳಗೊಳದಲ್ಲಿ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದ ಸಂದರ್ಭದಲ್ಲಿ ಮಾಡಿದ ಭಾಷಣ.

ಕನ್ನಡ ನಾಡಿನ ಚರಿತ್ರೆಯಲ್ಲಿ ಶ್ರವಣಬೆಳಗೊಳಕ್ಕೆ ತುಂಬಾ ಮಹತ್ವದ ಸ್ಥಾನ ಇದೆ. ಧಾರ್ಮಿಕವಾಗಿ, ಸಾಂಸ್ಕೃತಿಕವಾಗಿ, ಚಾರಿತ್ರಿಕವಾಗಿ, ಸಾಮಾಜಿಕವಾಗಿ, ಸಾಹಿತ್ಯಿಕವಾಗಿ—ಹೀಗೆ ಯಾವುದೇ ದೃಷ್ಟಿಯಿಂದ ನೋಡಿದರೂ ಶ್ರವಣಬೆಳಗೊಳ ಪ್ರಮುಖವಾದ ಪರಂಪರೆಯನ್ನು ಪಡೆದುಕೊಂಡಿರುವುದು ಕಂಡುಬರುತ್ತದೆ, ರಾಜಕೀಯವಾಗಿಯೂ ಈ ಸ್ಥಳ ಅನೇಕ ರಾಜ ಮಹಾರಾಜರ ಮನೆತನಗಳಿಗೆ ಉದಾರಾಶ್ರಯ ಕೊಟ್ಟಿರುವುದರ ಜೊತೆಗೆ ಮಾನಸಿಕ ನೆಮ್ಮದಿಯನ್ನೂ ಕೊಟ್ಟಿದೆ. ಭಾರತದ ಪ್ರಸಿದ್ಧ ತೀರ್ಥಕ್ಷೇತ್ರಗಳಲ್ಲಿ, ಯಾತ್ರಾ ಸ್ಥಳಗಳಲ್ಲಿ ಶ್ರವಣಬೆಳಗೊಳಕ್ಕೆ ಇರುವಷ್ಟು ಭವ್ಯವಾದ ಪರಂಪರೆಯಿರುವ ಸ್ಥಳಗಳು ಒಂದೊ ಎರಡೊ ಇರಬಹುದು. ದಕ್ಷಿಣ ಭಾರತದ, ಅದರಲ್ಲಿಯೂ ಕರ್ನಾಟಕದ ಎಲ್ಲ ವೈಭವವನ್ನೂ, ದಾಖಲೆಗಳನ್ನೂ, ವೈವಿಧ್ಯವನ್ನೂ ಶವಣಬೆಳಗೊಳದ ಎರಡು ಸಾವಿರ ವರ್ಷಗಳ ಇತಿಹಾಸದಲ್ಲಿ ಕಾಣ ಬಹುದಾಗಿದೆ.

ಇಡೀ ಜಗತ್ತಿನಲ್ಲಿಯೇ ಶ್ರವಣಬೆಳಗೊಳದ ಒಂದು ಸ್ಥಳದಲ್ಲಿ ಸಿಗುವಷ್ಟು ನೂರಾರು ಸಂಖ್ಯೆಯ ಶಾಸನಗಳು ಮತ್ತೆ ಎಲ್ಲಿಯೂ ಕಂಡುಬರುವುದಿಲ್ಲವೆಂದು ಶಾಸನ ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ. ಶ್ರವಣಬೆಳಗೊಳದ ಶಾಸನಗಳಿಗೇ "ಎಪಿಗ್ರಾಫಿಯ ಕರ್ನಾಟಕ"ದ ಇಡೀ ಒಂದು ಸಂಪುಟ ಮೀಸಲಾಗಿದ್ದು ಇದುವರೆಗೂ ಆ ಸಂಪುಟದ ಮೂರು ಮುದ್ರಣಗಳು ಹೊರಬಂದಿವೆ. ಇದರಿಂದ ಇಲ್ಲಿನ ಶಾಸನಗಳ ಹಿರಿಮೆ ಸ್ಪಷ್ಟವಾಗುತ್ತದೆ.

ಶ್ರವಣಬೆಳಗೊಳದ ಪರಿಚಯ ಪಡೆದವರಿಗೆಲ್ಲಾ ಆ ಹೆಸರು ಕೇಳಿದೊಡನೆ ರೋಮಾಂಚನವಾಗುತ್ತದೆ. ಈ ಸ್ಥಳದ ಮಹಿಮೆಯೇ ಹಾಗೆ. ಅನೇಕ ಜನ ಕವಿಗಳಿಗೆ, ಶಿಲ್ಪಿಗಳಿಗೆ, ಕಲಾವಿದರಿಗೆ, ಸಂಗೀತಗಾರರಿಗೆ, ರಾಜ ಮಹಾರಾಜರಿಗೆ, ರಾಣಿಯರಿಗೆ, ಸನ್ಯಾಸಿ ಸನ್ಯಾಸಿನಿಯರಿಗೆ ಶ್ರವಣಬೆಳಗೊಳ ಸಾವಿರಾರು ವರ್ಷ ಗಳಿಂದಲೂ ಸ್ಫೂರ್ತಿ ಕೊಟ್ಟಿದೆ.

ಜೈನ ಧರ್ಮ ವಿಶ್ವದಲ್ಲಿಯೇ ಪ್ರಾಚೀನವೂ ಶ್ರೇಷ್ಠವೂ ಉದಾತ್ತವೂ ಆದ ಧರ್ಮವಾಗಿದೆ. ಅಹಿಂಸೆಯ ಹಿರಿಮೆಯನ್ನು ಜೈನ ಧರ್ಮ ಪ್ರಪಂಚಕ್ಕೆ ತೋರಿರುವ

ರೀತಿಯಲ್ಲಿ ಇನ್ನಾವ ಧರ್ಮವೂ ತೋರಿಸಿಲ್ಲ. ಎಲ್ಲ ಧರ್ಮಗಳಲ್ಲೂ ಜೀವದಯೆ, ಅಹಿಂಸೆ ಪ್ರಸ್ತಾಪಿತವಾಗಿರುವುದು ಉಂಟು. ಆದರೆ ಜೈನ ಧರ್ಮದಲ್ಲಿ ಇದು ಅತ್ಯಂತ ಸೂಕ್ಷ್ಮವಾದ ಹಾಗೂ ವೈಜ್ಞಾನಿಕವಾದ ರೀತಿಯಲ್ಲಿ ಪ್ರತಿಪಾದಿತವಾಗಿದೆ. ಒಬ್ಬರು ಇನ್ನೊಬ್ಬರನ್ನು ದೈಹಿಕವಾಗಿ ಬಹಿರಂಗದಲ್ಲಿ ಹಿಂಸೆ ಮಾಡದೇ ನೋಡಿಕೊಳ್ಳುವುದು ಮಾತ್ರ ಅಹಿಂಸೆ ಅಲ್ಲ, ಮಾನಸಿಕವಾಗಿಯೂ ಒಬ್ಬರು ಇನ್ನೊಬ್ಬರ ವಿಚಾರದಲ್ಲಿ ಕೆಟ್ಟದ್ದನ್ನು ಆಲೋಚಿಸಬಾರದು ಎಂಬುದು ಈ ಜೈನ ಧರ್ಮದಲ್ಲಿ ಹೇಳಿರುವ ಅಹಿಂಸೆಯ ವೈಶಿಷ್ಟ್ಯವಾಗಿದೆ.

ಇಂದಿನ ಜಗತ್ತಿಗೆ ಜೈನ ಧರ್ಮದ ಸಂದೇಶ ಬಹಳ ಅಗತ್ಯವಾಗಿದೆ. ಎಲ್ಲಿ ನೋಡಿದರೆ ಅಲ್ಲಿ ಭ್ರಷ್ಟಾಚಾರ, ಹಿಂಸೆ, ಕೊಲೆ ಸುಲಿಗೆ, ಲೂಟಿ, ಅತ್ಯಾಚಾರ ತಾಂಡವ ವಾಡುತ್ತಿದೆ. ಇದಕ್ಕೆ ಇರುವ ಪರಿಹಾರ, ಜೈನ ಧರ್ಮದಲ್ಲಿ ಹೇಳಿರುವ ಪಂಚಾಣು ವ್ರತಗಳು (ಅಥವಾ ಐದು ಅಣುವ್ರತಗಳ) ಪರಿಪಾಲನೆ. ಸತ್ಯ, ಅಹಿಂಸೆ, ಕಳವು ಮಾಡದಿರುವುದು, ಅಗತ್ಯಕ್ಕಿಂತ ಹೆಚ್ಚು ಸಂಪಾದನೆ ಮಾಡದಿರುವುದು, ಬ್ರಹ್ಮಚರ್ಯ ಪಾಲಿಸುವುದು—ಇವು ನಮ್ಮ ಎಷ್ಟೊ ಸಮಸ್ಯೆಗಳಿಗೆ ಸೂಕ್ತವಾದ ಪರಿಹಾರವನ್ನು ಒದಗಿಸಿಕೊಡುತ್ತಿವೆ. ಅಪರಿಗ್ರಹ ವ್ರತವಂತೂ ಎಲ್ಲರೂ ಅನುಸರಿಸಬೇಕಾದ ನಿಯಮವಾಗಿದೆ. ಅಪರಿಗ್ರಹ ಎಂದರೆ ನಮಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಸಂಗ್ರಹಿಸುವುದು, ಅದಕ್ಕಿಂತಲೂ ಹೆಚ್ಚು ಲೋಭವನ್ನು ಹೊಂದದೇ ಇರುವುದು ಎಂದು ಅರ್ಥ. ಇದು ಎಷ್ಟು ಉದಾತ್ತವಾಗಿದೆ ಎಂಬುದನ್ನು ಪ್ರತಿಯೊಬ್ಬರೂ ಮನಗಾಣಬೇಕು.

ಶ್ರವಣಬೆಳಗೊಳದಲ್ಲಿ ಇರುವ ಎರಡು ಬೆಟ್ಟಗಳು ದೊಡ್ಡ ಸಾಂಸ್ಕೃತಿಕ ನಿಧಿಗಳಾಗಿವೆ. ಚಿಕ್ಕ ಬೆಟ್ಟವಂತೂ ಎರಡು ಸಾವಿರ ವರ್ಷದ ಜೈನ ಧರ್ಮದ ಚರಿತ್ರೆಯನ್ನು ಸಾರುತ್ತಿದೆ. ಇದರ ಮೇಲೆ ರನ್ನ, ಚಾವುಂಡರಾಯ ಮೊದಲಾದವರ ಸ್ವಹಸ್ತಾಕ್ಷರಗಳು ಇವೆ. ನೂರಾರು ಶೀಲ ಸಂಪನ್ನರಾದ, ಚಾರಿತ್ರ್ಯ ಶುದ್ಧರಾದ ಜೈನ ಯತಿಗಳ ಮರಣವನ್ನು ತಿಳಿಸುವ ನಿಸದಿ ಕಲ್ಲುಗಳಿಂದ, ಚೈತ್ಯಾಲಯಗಳಿಂದ, ಮಾನಸ್ತಂಭಗಳಿಂದ ಕಂಗೊಳಿಸುತ್ತಿದೆ. ಅಂತಿಮ ಶ್ರುತಕೇವಲಿ, ಭದ್ರಬಾಹು ಮುನಿ ಮತ್ತು ಮೌರ್ಯ ಸಾಮ್ರಾಜ್ಯದ ಮಹಾ ಚಕ್ರವರ್ತಿ ಚಂದ್ರಗುಪ್ತಮೌರ್ಯನ ಪಾದ ಚಿಹ್ನೆಗಳನ್ನು ಹೊತ್ತ ಚಂದ್ರಗಿರಿ ಅಥವಾ ಚಿಕ್ಕಬೆಟ್ಟ, ಕರ್ನಾಟಕದ ಒಂದು ಮಹಾ ಭಂಡಾರವಾಗಿದೆ.

ಇನ್ನು ಬಾಹುಬಲಿ ಸ್ವಾಮಿಯನ್ನು ತನ್ನ ನೆತ್ತಿಯಲ್ಲಿ ಹೊತ್ತು, ಭಕ್ತಿಯಿಂದ ನಿಂತಿರುವ ದೊಡ್ಡ ಬೆಟ್ಟವನ್ನು ಏನೆಂದು ಕೊಂಡಾಡೋಣ. ಪ್ರಪಂಚದ ಭೂ ಪಟದಲ್ಲಿ ಕರ್ನಾಟಕಕ್ಕೆ ಒಂದು ಸ್ಥಾನವನ್ನು ದೊರಕಿಸಿಕೊಟ್ಟ ಬಾಹುಬಲಿ ಅಥವಾ ಗೊಮ್ಮಟಸ್ವಾಮಿ ನಿಂತಿರುವುದು ಈ ದೊಡ್ಡ ಬೆಟ್ಟದಲ್ಲೇ. ಗಂಗರ ವಂಶದ ದೊರೆ

ಗಳಿಗೆ ಸೇನಾಪತಿಯಾಗಿ, ಮಹಾಮಂತ್ರಿ, ರಾಜಕೀಯ ಮುತ್ಸದ್ದಿಯಾಗಿ ಸೇವೆ ಸಲ್ಲಿಸಿದ ವೀರ ಮಾರ್ತಂಡ ಚಾವುಂಡರಾಯನು, ಇಂದಿಗೆ ಸರಿಯಾಗಿ ಒಂದು ಸಾವಿರ ವರ್ಷಗಳ ಹಿಂದೆ ಅಂದರೆ 981 ರಲ್ಲಿ ಅಖಂಡ ಶಿಲೆಯಲ್ಲಿ ಮಾಡಿಸಿದ 57 ಅಡಿ ಎತ್ತರದ ಬೃಹತ್ ವಿಗ್ರಹ ಈ ಗೊಮ್ಮಟ ಸ್ವಾಮಿ. ಈ ಗೊಮ್ಮಟ ದೇವನ ಚೆಲುವನ್ನು ಏನೆಂದು ವರ್ಣಿಸಲಿ. ತಲೆ ತುಂಬ ಗುಂಗರು ಗುಂಗರಾಗಿ ಸುರುಳಿ ಸುತ್ತಿಕೊಂಡಿರುವ ಕೂದಲು, ಹರವಾದ ಹಣೆ, ಕಾಮನಬಿಲ್ಲಿನಂತೆ ಬಾಗಿರುವ ಹುಬ್ಬು, ಸದಾ ಆತ್ಮ ತೃಪ್ತಿಯನ್ನು ಬಿಮ್ಮಿಸುವ ಕಣ್ಣುಗಳು, ತಿದ್ದಿ ಮಾಡಿದಂತೆ ಇರುವ ಮೂಗು, ಎಳೆಯ ಮಗುವಿನ ಅಥವಾ ಭಗವಂತನ ಮುಖದಲ್ಲಿ ಮಾತ್ರ ಕಾಣಬಹುದಾದ ನಿರ್ಮಲವಾದ ನಗೆಯನ್ನು ತುಳುಕಿಸುವ ತುಟಿಗಳು, ದೀರ್ಘವಾದ ಕಿವಿಗಳು, ಮುದ್ದಾದ ಗಲ್ಲ, ವಿಶಾಲವಾದ ಎದೆ, ನೀಳವಾದ ಕೈಗಳು, ಶಕ್ತಿಯುತವಾದ ತೊಡೆಗಳು, ಬಲಶಾಲಿಯಾದ ಪಾದಗಳು – ಇವೆಲ್ಲಾ ಜಗತ್ತಿನಲ್ಲೇ ಈ ಬಾಹುಬಲಿ ಸ್ವಾಮಿಯಲ್ಲಿ ಮಾತ್ರ ಸಿಗುವ ಮತ್ತು ಇನ್ನೆಲ್ಲೂ ಸಿಗದಿರುವ ಅಪೂರ್ವವಾದ ದೈವಿಕವಾದ ದೃಶ್ಯ. ತನ್ನ ಪಾಲಿಗೆ ಬಂದ, ತಾನು ಗೆದ್ದು ಪಡೆದ ಸಾಮ್ರಾಜ್ಯವನ್ನ ಹುಲ್ಲು ಕಡ್ಡಿಯಂತೆ ತ್ಯಜಿಸಿ, ತನ್ನ ಅಣ್ಣನಿಗೆ ಅಷ್ಟನ್ನೂ ಬಿಟ್ಟುಕೊಟ್ಟು ತಪಸ್ಸಿಗೆನಿಂತ ಈ ಮೂರ್ತಿಯ ಸಂದೇಶ ಇಂದಿನ ಜಗತ್ತಿಗೆ ತುಂಬಾ ಅಗತ್ಯವಾದ ಸಂದೇಶವಾಗಿದೆ.

ಅಂತರ ಮುಖಿಯಾಗಿ, ಬಾಹ್ಯ ಜಗತ್ತನ್ನು ಸಂಪೂರ್ಣವಾಗಿ ಮರೆತು ತಪಸ್ಸಿಗೆ ತೊಡಗಿದ ಈ ಮೂರ್ತಿಯ ಸುತ್ತಲೂ ಬಳ್ಳಿ ಹಬ್ಬಿತು ಹುತ್ತ ಬೆಳೆಯಿತು, ಹಾವುಗಳು ಸುತ್ತಿಕೊಂಡವು. ಇಷ್ಟೆಲ್ಲಾ ಆದರೂ ಆತನಿಗೆ ಯಾವುದರ ಪರಿವೆಯೂ ಇಲ್ಲದೆ ತನ್ನ ಆತ್ಮವನ್ನು ಕುರಿತು ತಾನು ಚಿಂತಿಸುತ್ತಾ ನಿಂತಿದ್ದಾನೆ. ಇದಲ್ಲವೆ ಧ್ಯಾನ! ಇದಲ್ಲವೆ ಯೋಗಮುದ್ರೆ! ಇದಲ್ಲವೆ ತಪಸ್ಸು! ಅಂತಹ ಬಾಹುಬಲಿ ಸ್ವಾಮಿಗೆ ಒಂದು ಸಾವಿರ ವರ್ಷದ ಮಹಾಮಸ್ತಕಾಭಿಷೇಕ ಪೂಜೆಯನ್ನು ನಮ್ಮ ಜೈನ ಸಮಾಜದವರು ಮಾಡುತ್ತಿರುವುದು ತುಂಬಾ ಸಂತೋಷದ ಕಾರ್ಯವಾಗಿದೆ. ಈ ಪವಿತ್ರ ಪೂಜಾ ಕಾರ್ಯದಲ್ಲಿ ನಾನು ನಮ್ಮ ಕರ್ನಾಟಕ ಸರ್ಕಾರದ ಪರವಾಗಿ ಎಲ್ಲ ಗೌರವವನ್ನು, ಭಕ್ತಿಯನ್ನು ಶ್ರೀ ಗೊಮ್ಮಟೇಶ್ವರ ಸ್ವಾಮಿಗೆ ಸಮರ್ಪಿಸುತ್ತೇನೆ.

ಲಕ್ಷಾಂತರ ಜನ ಭಾರತದ ಮತ್ತು ಪ್ರಪಂಚದ ನಾನಾ ಭಾಗಗಳಿಂದ ಹನ್ನೆರಡು ವರ್ಷಕ್ಕೆ ಒಮ್ಮೆ ನಡೆಯುವ ಈ ಮಹಾಮಸ್ತಕಾಭಿಷೇಕ ಪೂಜೆಗೆ ಆಗಮಿಸಿದ್ದಾರೆ. ಅವರಿಗೆ ನಮ್ಮ ಸರ್ಕಾರ ಎಷ್ಟು ಚೆನ್ನಾಗಿ ನೋಡಿಕೊಳ್ಳಲು ಸಾಧ್ಯವೋ ಅಷ್ಟು ಅನುಕೂಲಗಳನ್ನು ಕಲ್ಪಿಸಿಕೊಟ್ಟಿದೆ. ನಮ್ಮ ದೇಶದ ಪ್ರಗತಿಗೆ ಜೈನ ಸಮಾಜದವರ ಕೊಡುಗೆ ಬಹಳ ದೊಡ್ಡದು. ಅವರಿಂದ ಭಾರತದ ಐಕ್ಯಕ್ಕೆ ಎಂದೂ ಭಂಗ ಉಂಟಾಗಿಲ್ಲ. ಈ ರಾಷ್ಟ್ರದ ಕ್ಷೇಮಕ್ಕೆ ಅಹಿಂಸಾ ಧರ್ಮದ ಕಾಣಿಕೆ ಅಮೂಲ್ಯವಾದುದು. ತಮ್ಮ ದಾನ, ಧರ್ಮ, ಔದಾರ್ಯಕ್ಕೆ ಜೈನ ಸಮಾಜ ಹೆಸರುವಾಸಿಯಾಗಿದೆ.

ಈ ಸಂದರ್ಭದಲ್ಲಿ ಜೈನ ಸಮಾಜದ ನೂರಾರು ಜನ ಮುಖಂಡರು ಮತ್ತು ಧರ್ಮಮುನಿಗಳು ಇಲ್ಲಿನ ಉತ್ಸವದಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಇಡೀ ಭಾರತದ ಧರ್ಮ ಗುರುಗಳಲ್ಲಿ ಅಗ್ರಗಣ್ಯರೆನಿಸಿಕೊಂಡವರು ಮತ್ತು ನಮ್ಮೆಲ್ಲರ ಅಚ್ಚುಮೆಚ್ಚಿನ ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿಯವರಿಗೆ ಆಶೀರ್ವಾದ ಮಾಡಿ ಹೆಸರಾಗಿರುವ ಪರಮಪೂಜ್ಯ ಶ್ರೀ ಏಲಾಚಾರ್ಯ ವಿದ್ಯಾನಂದ ಮುನಿಗಳವರು ಈ ಎಲ್ಲ ಉತ್ಸವದ ಮುಂಚೂಣಿಯಲ್ಲಿ ನಾಯಕರಾಗಿ ನಿಂತು ನಮಗೆಲ್ಲಾ ಮಾರ್ಗದರ್ಶನ ಮಾಡುತ್ತಿದ್ದಾರೆ. ಅನೇಕ ದಿಗಂಬರ ಯತಿಗಳು ಕೂಡ ಆಗಮಿಸಿದ್ದಾರೆ. ಶ್ರವಣಬೆಳಗೊಳದ ಶ್ರೀ ಜೈನ ಮಠದ ಪಟ್ಟಾಚಾರ್ಯರಾದ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮಿಗಳವರು ಹಗಲಿರುಳು ಬಹಳ ತಾಳ್ಮೆಯಿಂದ ದಕ್ಷತೆಯಿಂದ ಇಡೀ ಸಮಾಜಕ್ಕೆ ದಾರಿ ತೋರಿಸಿದ್ದಾರೆ. ಈ ಎಲ್ಲ ತಪೋಧನರ ಆಶೀರ್ವಾದವು ದೇಶದ ಎಲ್ಲ ಪ್ರಜೆಗಳ ಮೇಲೂ ಇರಬೇಕೆಂದು ನಾನು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತೇನೆ.

ಈ ಶುಭ ಸಂದರ್ಭದಲ್ಲಿ ಜೈನ ಬಾಂಧವರು ತಮ್ಮ ಸವಿನೆನಪನ್ನು ಶಾಶ್ವತಗೊಳಿಸುವ ಸಲುವಾಗಿ ಒಂದು ಸ್ಮರಣ ಸಂಪುಟವನ್ನು ಹೊರತರುತ್ತಿರುವುದು ಯೋಗ್ಯವಾದ ಹಾಗೂ ಸೂಕ್ತ ಕಾರ್ಯವಾಗಿದೆ. ಕರ್ನಾಟಕ ಸರ್ಕಾರದ ಪರವಾಗಿ ನಾನು ಬಹಳ ಆನಂದದಿಂದ ಈ ಮಹಾ ಸಂಪುಟವನ್ನು ಇಂದು ಈ ಮಹಾ ಸಭೆಯಲ್ಲಿ ಬಿಡುಗಡೆ ಮಾಡುತ್ತಿದ್ದೇನೆ.

ನಿಮಗೆಲ್ಲಾ ಸ್ವಾಮಿಯ ಶುಭ ಆಶೀರ್ವಾದಗಳು ದೊರೆತು ಈ ದೇಶದ ಶ್ರೇಷ್ಠ ಪ್ರಜೆಗಳಾಗಲು ಸಾಧ್ಯವಾಗಲೆಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಸ್ನೇಹಮಯಿ ಶಂಕರರಾವ್

ಹಿರೇಮಲ್ಲೂರ ಈಶ್ವರನ್

ಮಾರ್ಚ್, ೧೯೪೭, ಅವರಿಬ್ಬರೂ ಒಬ್ಬರನ್ನೊಬ್ಬರು ಹತ್ತಿರದಿಂದ ಕಂಡ ಕಾಲ ಅದು. ಒಡನಾಟ ಬೆಳೆಸಿದ್ದು ೧೯೪೭ರ ಮಾರ್ಚ್ ತಿಂಗಳು. ಸ್ಥಳ ಕೊಲ್ಲಾಪುರ. ಅಲ್ಲಿ ಊರ ಹೊರಗೆ ಒಂದು ಮಠ. ಆ ಮಠಕ್ಕೆ ಸೇರಿದ ವಸತಿಗೃಹ ಎಂದು ತೋರುತ್ತದೆ. ಅದಕ್ಕೆ ಆರ್ಯಾಶ್ರಮ ಎಂದು ಕರೆಯುತ್ತಾರೆ. ಅದು ಇದ್ದುದು ಊರ ಹೊರಗೆ.

ಆ ವಸತಿಗೃಹದ ಖೋಲಿಯಲ್ಲಿ ಕರ್ನಾಟಕದ ಇಬ್ಬರು ವಿದ್ಯಾರ್ಥಿಗಳು. ಒಬ್ಬರು ಹಿರೇಮಲ್ಲೂರಿನವ, ಇನ್ನೊಬ್ಬರು ಹಿರೇಕೆರೂರ ತಾಲ್ಲೂಕಿಗೆ ಸೇರಿದ ಗುಬ್ಬಿ ಹಳ್ಳಿಯಿಂದ ಬಂದವರು. ಹಿರೇಮಲ್ಲೂರಿನ ಹುಡುಗನ ತಂದೆ ಕನ್ನಡ ಶಾಲೆಯ ಮಾಸ್ತರು. ತಿಂಗಳಿಗೆ ೪೦-೪೫ ರೂಪಾಯಿ ಸಂಬಳ. ಗುಬ್ಬಿಯ ಹುಡುಗನ ತಂದೆ ಗೌಡರು. ಹೆಸರಿಗೆ ಗೌಡರು ಮನೆತನಕ್ಕೆ ಸೇರಿದ ಭೂಮಿ ಹೆಚ್ಚೇನಿರಲಿಲ್ಲ. ಅದು ಕಾಡು ಭೂಮಿ, ಯಾತಕ್ಕೂ ಬಾರದ್ದು.

ನಾಳೆ ಮೇ ತಿಂಗಳಿನಲ್ಲಿ, ಮುಂಬಯಿಯಲ್ಲಿ ನಡೆಯಲಿರುವ ಎಂ. ಎ. ಕನ್ನಡ ಪರೀಕ್ಷೆಗೆ ಸಿದ್ಧತೆ ನಡೆಸಿದ್ದಾರೆ. ಓದಬೇಕು. ಓದಿ ದೊಡ್ಡವರಾಗಬೇಕು, ಈ ಬಡತನವನ್ನು ಸಹಿಸಲಾಗದು. ಓದಿ ಮನೆ, ಮನದ ಬಡತನ ಹಿಂಗಿಸಿ, ಶ್ರೀಮಂತಿಕೆಯನ್ನು ಮೆರೆಯಬೇಕೆಂಬ ಹಂಬಲ ಅವರದು. ಆದರೆ ಅವರ ಸುತ್ತಣ ಪರಿಸರವನ್ನು ನೋಡಿದರೆ ಅದು ಆಗದ ಮಾತೆಂದು ಯಾರಿಗೂ ಅನ್ನಿಸುವಂತಿತ್ತು.

ಈಗ ವಾಸವಾಗಿರುವ ಖೋಲಿಯೋ! ಮಣ್ಣಿನ ನಾಲ್ಕು ಗೋಡೆಗಳು. ಒಳಗೆ ಎರಡು ಗೋಡೆಗಳಿಗೆ ಒರಗಿಸಿ ಅಲ್ಲಿ-ಇಲ್ಲಿ ಮುರಿದ ಟ್ರಂಕುಗಳನ್ನು ಇರಿಸಿಕೊಂಡಿದ್ದಾರೆ. ಒಂದು ಜಮಖಾನ, ತಲೆದಿಂಬು, ಛದ್ದರು. ಆ ಖೋಲಿಯಿಂದ ಹೊರಡು ಎಂದರೆ ಐದೇ ನಿಮಿಷಗಳಲ್ಲಿ ತಮ್ಮ 'ಆಸ್ತಿ-ಪಾಸ್ತಿ'ಗಳನ್ನು ಕಟ್ಟಿಕೊಂಡು ಅವರು ಹೋಗಬಲ್ಲರು. ಗುಳೇಕಾರರ ಹತ್ತಿರ ಹೆಚ್ಚು ಸಾಮಾನು ಇದ್ದಾವು. ಆದರೆ ಅವರ ಬಳಿ ಇದ್ದ 'ಜಂಗಮ' ಆಸ್ತಿ ಅಷ್ಟಕ್ಕಷ್ಟೆ.

ಅವರು ಓದುತ್ತಿದ್ದ ಪರಿಸರವೂ ಅಷ್ಟೆ. ಸುತ್ತಲೂ ಹುಲ್ಲುಕಡ್ಡಿ, ಕಾವಲು ಬೆಳೆದಿದೆ. ಕಾಡು ಪ್ರದೇಶ. ಸೊಳ್ಳೆಗಳು ತುಂಬಿವೆ. ವಸತಿಗೃಹದ ಅನೇಕ

ಖೋಲಿಗಳು ತೆರವಾಗಿವೆ. ಅಲ್ಲಿ ಇರಲು ಯಾರು ಬಂದಾರು? ಅವರೂ ಇವರು ಬಂದಿರದೇ ಗತಿಯಿಲ್ಲವೆಂಬಂತೆ ವಾತಾವರಣವೋ? ಪ್ರಶಾಂತವಾಗಿದೆ. ಮೌನ ಅಲ್ಲಿ ಕಾಲು ಮುರಿದು ಬಿದ್ದಂತಿದೆ. ವಸಂತ ಮಾಸದ ಸುಂದರ ದಿನಗಳನ್ನು ಬರಮಾಡಿ ಕೊಳ್ಳಲು ಪಕ್ಷಿಗಳು ಸ್ವರಯೆತ್ತಿವೆ.

ಅವರ ಓದು ನಡೆದಿದೆ. ಅವರಲ್ಲಿ ಒಬ್ಬನು ಲಿಂಗರಾಜ ಕಾಲೇಜಿನಲ್ಲಿ ಎಂ.ಎ. ಓದುವ ಸ್ನಾತಕ. ಇನ್ನೊಬ್ಬರು ರಾಜಾರಾಮ ಕಾಲೇಜಿನಲ್ಲಿ ಓದುತ್ತಿರುವವರು. ಅಲ್ಲಿ ಕೊಲ್ಲಾಪುರದಲ್ಲಿ ಕುಂದಣಗಾರರಿದ್ದಾರೆ. ಹೊರನಾಡಿನ ಈ ಕನ್ನಡಿಗ, ಭೀಷ್ಮಾ ಚಾರ್ಯರಂತೆ ಕೆಲಸ ಮಾಡುತ್ತ ಭದ್ರವಾದ ಕನ್ನಡದ ಕೋಟೆ ಕಟ್ಟಿ, ಆ ನಾಡಿನ ಸಂಸ್ಕೃತಿಯ ರಕ್ಷಣೆಯಲ್ಲಿ ನಿಂತಿದ್ದಾರೆ. ಅವರ ಬಳಿ ನಿಂತು ತಮ್ಮ ಅಧ್ಯಯನದಲ್ಲಿ ಕಂಡ ಸಮಸ್ಯೆಗಳನ್ನು ಚರ್ಚಿಸುವುದು.

ಅವರಿಬ್ಬರೂ ಒಬ್ಬರನ್ನೊಬ್ಬರು ಗುರುತಿಸಿಕೊಂಡು ಬಂದಿದ್ದೇ ಸೋಜಿಗ. ಕೊಲ್ಲಾಪುರಕ್ಕೆ ಹೋಗುವಾಗ, ನಡುವೆ ಬೆಳಗಾವಿಯಲ್ಲಿ ಇಳಿದು ಹಿರೇಮಲ್ಲೂರಿನ ಹುಡುಗನನ್ನು ಕಂಡ ನೆನಪು. ಅಷ್ಟೇ ಪರಿಚಯ. ಆಗ ಕಂಡ ಸಂದರ್ಭ ನಾಳಿನ ದಿನಮಾನಗಳಲ್ಲಿ ಬೆಳೆಯಲಿದ್ದ ಸ್ನೇಹಕ್ಕೇ ಬುನಾದಿ. ಎಲ್ಲೋ ಬಹಳ ದಿನಮಾನ ಗಳಿಂದ, ಬಹುಶಃ ಪೂರ್ವ ಜನ್ಮದಲ್ಲಿ (ಪೂರ್ವ ಜನ್ಮ ಎನ್ನುವುದು ನಿಜವೇ ಇದ್ದಲ್ಲಿ) ಕಂಡ ನೆನಪು-ಮೊದಲ ಬಾರಿ ಕಂಡಿದ್ದು ಅಷ್ಟೇ. ಸ್ನೇಹದ ಕುಡಿ ಶ್ರಾವಿಸದ ಮಲ್ಲಿಗೆ ಯಂತೆ ದಾಂಗುಡಿಯಿಡಲು ಆರಂಭ.

"ಕೊಲ್ಲಾಪುರಕ್ಕೆ ಬನ್ನಿ, ಅಲ್ಲಿ ಕುಂದಣಗಾರರಿದ್ದಾರೆ. ನಾನು ಇದ್ದೇನೆ" ಎಂದರು ಅವರು. ಹಿರೇಮಲ್ಲೂರಿನ ಹುಡುಗ ಹೊರಟೇಬಿಟ್ಟ. ಕೊಲ್ಲಾಪುರರ ಓದಿದ ಆ ದಿನಮಾನಗಳು ಅವರ ಜೀವನದಲ್ಲಿನ ಮಧುರದ ದಿನಗಳು. ಒಂದು ಹೊತ್ತು ಊಟ. ಏಕೆಂದರೆ ಎರಡು ಹೊತ್ತಿನ ಊಟಕ್ಕೆ ಹಣವಿಲ್ಲ. ಆದರೂ ಎರಡೂ ಹೊತ್ತಿನ ಊಟವನ್ನು ಮಧ್ಯಾಹ್ನದಲ್ಲೇ ಮುಗಿಸಿ, ಸಂಜೆ ಹೊಟ್ಟೆ ಕಟ್ಟಿ ಓದುವುದು ಅವರ ಅಭ್ಯಾಸ.

(೧)

ಮುಂದೆ ಅವರು ಒಬ್ಬರನ್ನೊಬ್ಬರು ಕಂಡದ್ದು ಮುಂಬಯಿಯಲ್ಲಿ. ಹಿರೇ ಮಲ್ಲೂರಿನ ಹುಡುಗ ವಿಶ್ವವಿದ್ಯಾನಿಲಯಕ್ಕೆ ಸೇರಿದ ವಸತಿಗೃಹದಲ್ಲಿ ವಾಸವಾಗಿದ್ದ. ರಾಣಿಬೆನ್ನೂರಿನ ಗುಬ್ಬಿ ಹಳ್ಳಿಯವರು ದೂರದಲ್ಲಿ ಅಲ್ಲೊಬ್ಬ ಗೆಳೆಯರ ಖೋಲಿಯಲ್ಲಿ ವಾಸವಾಗಿದ್ದರು. ವ್ಯಾಕರಣದಲ್ಲಿ, ಛಂದಸ್ ಶಾಸ್ತ್ರದಲ್ಲಿ ಅವರಿಗೆ ಅದ್ವಿತೀಯ

ಪಾಂಡಿತ್ಯ. ಹಿರೇಮಲ್ಲೂರಿನ ಹುಡುಗನಿಗೆ ವ್ಯಾಕರಣವೆಂದರೆ ತಲೆಬೇಸರು. ಅದು ಶಾಸ್ತ್ರಿಗಳ ಕೆಲಸ, ತನ್ನದಲ್ಲ ಎನ್ನುವ ಮನೋಭಾವನೆ. ಆ ಸಂಜೆ ಅವರು ಹಿರೇ ಮಲ್ಲೂರಿನ ಹುಡುಗನಿಗೆ ಮತ್ತೆ ವ್ಯಾಕರಣ, ಛಂದಸ್ಸು ಹೇಳಿ, ನಾಳಿನ ಪರೀಕ್ಷೆಗೆ ಸಿದ್ಧತೆ ಮಾಡಿ ರಾತ್ರಿ ಒಂಬತ್ತಕ್ಕೆ ಮನೆಗೆ ಹೋದರು.

ಆದೇ ಸಂಜೆ ಹತ್ತೂವರೆ ಘಂಟೆಗೆ ವಿದ್ಯಾನಿಲಯದ ವಸತಿ ಗೃಹದ ಪರಿಚಾರಕ ಹಿರೇಮಲ್ಲೂರಿನ ಹುಡುಗನ ಖೋಲಿಗೆ ಬಂದು 'ಹೊರಗೆ ಯಾರೊ ನಿಮ್ಮನ್ನು ಕಾಣಬಯಸಿದ್ದಾರೆ' ಎಂದು ಹೇಳಿದ. ಬಂದು ನೋಡಿದರೆ, ಅಲ್ಲಿ ನಿಂತವರು ರಾಣೆಬೆನ್ನೂರಿನ ಗುಬ್ಬಿ ಶಂಕರರಾಯರು !

ಅವರು ವಾಸಿವಾಗಿದ್ದ ಖೋಲಿಗೆ ಬೀಗ. ಕಾರಣವೆಂದರೆ, ಆ ಖೋಲಿಯಲ್ಲಿದ್ದ ವರಿಗೆ ಊರಿನಿಂದ ಸಾವಿನ ಸುದ್ದಿ ಬಂದಿತ್ತು. ಆಗ ಶಂಕರರಾಯರಿರಲಿಲ್ಲ. ಅವಸರ ದಲ್ಲಿ ಖೋಲಿಗೆ ಬೀಗ ಹಾಕಿ, ಕೀಲಿ ಕೊಡದೆ ಹೊರಟು ಹೋಗಿದ್ದಾರೆ. ಆ ಕಾಲದಲ್ಲಿ, ಹೊಟೇಲು ಹುಡುಕಿಕೊಂಡು ಹೋಗುವುದಕ್ಕೆ ಆಗದು.

ಶಂಕರರಾಯರು ತಮ್ಮ ಸ್ನೇಹಿತನನ್ನು ಹಿರೇಮಲ್ಲೂರಿನ ಹುಡುಗನನ್ನು ಹುಡುಕಿಕೊಂಡು ಬಂದರು. ಆದರೆ ವಸತಿಗೃಹದ ಜವಾನನು ಅವರನ್ನು ಒಳಗೆ ಬಿಡಲಾರನು. ಹಿರೇಮಲ್ಲೂರಿನ ಹುಡುಗನಿಗೂ ಹೊರಗೆ ಹೋಗಲಿಕ್ಕೆ ಅವಕಾಶವಿಲ್ಲ. ರಾತ್ರಿ ಹತ್ತುವರೆ ಘಂಟೆ. ಆದಮೇಲೆ ಕರ್ಫ್ಯೂ. ಅದು ವಸತಿ ಗೃಹದ ಆಜ್ಞೆ.

ಒಳಗೆ ನಾನು. ಹೊರಗೆ ಅವರು, ಇಬ್ಬರೂ ಒಬ್ಬರ ಮೊಗವನ್ನೊಬ್ಬರು ನೋಡುತ್ತ ನಿಂತೆವು. ನಮ್ಮ ನಡುವೆ ಬಡತನದ ಬಂಡೆಗಲ್ಲು ಅಡ್ಡ ನಿಂತಿದೆ.

ಆ ರಾತ್ರಿ ಶಂಕರರಾವ್ ಮರೀನ್ ಡ್ರಾಯ್ವದ ರೈಲು ನಿಲ್ದಾಣದ ಬೆಂಚಿನ ಮೇಲೆ ಕೂತು ನಿದ್ರೆ ಮಾಡಿದರು, ನಾನು ಒಳಗೆ.

ಮುಂಜಯಿಯಲ್ಲಿ, ಮಧ್ಯಾಹ್ನದಲ್ಲಿ ಎರಡು ಉತ್ತರ ಪತ್ರಿಕೆಗಳನ್ನು ಎದುರಿಸ ಬೇಕು.

ಆ ವರುಷದ ಪರೀಕ್ಷೆಯಲ್ಲಿ, ನಾವಿಬ್ಬರೂ ಪ್ರಥಮ ತರಗತಿಯನ್ನು ಕಳೆದು ಕೊಂಡೆವು. ಆದರೆ ಗುರಿಬದ್ಧವಾದ ಜೀವನದಿಂದ ವಿಮುಖವಾಗಲಿಲ್ಲ. ಸೋಲನ್ನು ಎದುರಿಸುವಲ್ಲಿ ಶಂಕರರಾಯರು ಶಂಕರರಾಯರೇ! ಯಾವ ಕ್ಷೇತ್ರದಲ್ಲೇ ಆಗಲಿ, ಎದು ರಾದ ಸೋಲನ್ನು ಆಹ್ವಾನಿಸಿ ಮತ್ತೆ ಜಯಗಳಿಸುವ ಛಲ ಅವರದು. ಇತ್ತೀಚಿನ ಅವರ ರಾಜಕೀಯ ಜೀವನದಲ್ಲಿ ಅಂತಹ ಛಲಕ್ಕೆ ಬೇಕಾದಷ್ಟು ಉದಾಹರಣೆಗಳು ಸಿಗುತ್ತವೆ.

ನಿಜಲಿಂಗಪ್ಪ ಮಂತ್ರಿ ಮಂಡಲದಲ್ಲಿ ಅವರು ಮಂತ್ರಿಗಳಾಗಬೇಕಿತ್ತು. ಆದರೆ ಪಕ್ಷಪಾತ ನಡೆದು, ಅವರನ್ನು ಕೆಳಗಿನ ಮಟ್ಟದಲ್ಲಿ ನಿಲ್ಲಿಸಿದರು. ನಿಜಲಿಂಗಪ್ಪ ಹೋದ ಮೇಲೆ ಮಂತ್ರಿಯಾದರು. ಮಂತ್ರಿಯಾಗಿ ನಿಕಟ ಛಲ ಸಾಧಿಸಿದರು.

(೨)

ಎಂ.ಎ. ಕನ್ನಡ ಓದಿದ ಮೇಲೆ ಅವರಿಬ್ಬರೂ ಧಾರವಾಡಕ್ಕೆ ಬಂದರು. ಗ್ರಂಥ ಮಾಲೆ ತೆಗೆಯಬೇಕೆಂದು ಹಿರೇಮಲ್ಲೂರಿನ ಹುಡುಗ ಒತ್ತಾಯಿಸಿದರು. ಶಂಕರ ರಾಯರು 'ಬಳಗ' ಹೊಡೆದು ಬೆಳಗಾಂಗೆ ಲಾ ಓದಲಿಕ್ಕೆ ಹೋದರು. ಹಿರೇಮಲ್ಲೂರಿನ ಹುಡುಗ ಹುಬ್ಬಳಿಗೆ ಬಂದು ಕನ್ನಡ 'ಪಂಡಿತ'ರಾಗಿ ನಿಂತರು. ಕಾನೂನು ಓದಿದ ಶಂಕರರಾಯರು ರಾಣೆಬೆನ್ನೂರಿಗೆ ವಕೀಲರಾಗಿ ಬಂದರು. ವಕೀಲ ವೃತ್ತಿಯಲ್ಲಿ ನಿಂತ ಶಂಕರರಾಯರ ಬಳಿ 'ಕೇಸು'ಗಳು ಬರುತ್ತಿದ್ದವು. ಆದರೆ 'ಫೀ' ಕೊಡದ 'ಕೇಸು'ಗಳು ಅವು. ಕೈತುಂಬ ಕೆಲಸ ಆದರೆ ಸಂಬಳವಿಲ್ಲ.

ಆ ಕಾಲದಲ್ಲಿ ಮತ್ತೆ ಹೊಟ್ಟೆ ಕಟ್ಟಿ ಕೆಲಸ ಮಾಡಿದರು. ಒಂದು ಹೊತ್ತಿಗೂ ಊಟವಿಲ್ಲ. ರಾಣೆಬೆನ್ನೂರಿನ ಪವಾರ್ ಮಾಸ್ತರು ಅವರ ಬೆನ್ನ ಬಳಿ ಈ ಮುನ್ನಿನಂತೆ ಈಗಲೂ ಅವರನ್ನು ರಕ್ಷಿಸಿದರು.

ಹಿರೇಮಲ್ಲೂರಿನ ಹುಡುಗ ಕನ್ನಡ 'ಮೇಸ್ಟ್ರು' ಹುದ್ದೆಗೆ ಶರಣು ಹೊಡೆದು ಆಕ್ಸಫರ್ಡಿಗೆ ಹೊರಟು ನಿಂತ. ಹುಬ್ಬಳ್ಳಿಯಿಂದ ರೈಲು ಹೊರಡಲಿದೆ. ಸ್ಟೇಶನ್‌ದ ಒಳಗಡೆ ಹೋಗುವ ಅವನನ್ನು ಕಾಯ್ದುಕೊಂಡು ನಿಂತವರು ಶಂಕರರಾಯರು. 'ಇಗೋ ನನ್ನ ಬಳಿಯಲ್ಲಿ ಇದ್ದದ್ದು ಇಷ್ಟೆ' ಎಂದೆನ್ನುತ್ತ ಮೂರು ರೂಪಾಯಿ ಕೊಟ್ಟರು. ಅದು ದಾರಿಯಲ್ಲೆ. ಅವರ ಸ್ನೇಹ ಹಿರೇಮಲ್ಲೂರಿನ ಹುಡುಗನ ಕಣ್ ಮನಗಳನ್ನು ತುಂಬಿತ್ತು. ಯಾವ ಜನುಮದ ಬಾಂಧವ್ಯವೂ ಅವರಿಬ್ಬರನ್ನೂ ಬಂಧಿಸಿತ್ತು.

ಮುಂದೆ ಆಕ್ಸಫರ್ಡಿಗೆ ಹೋಗಿ ಶಂಕರರಾಯರಿಗೆ ಹಿರೇಮಲ್ಲೂರಿನ ಹುಡುಗ ಕಾಗದ ಬರೆದು ಲಂಡನ್ನಿಗೆ ಬಂದು 'ಬಾರ್' ಪರೀಕ್ಷೆಗೆ ಓದಿರಿ. ನಾನು ನೆರವಾಗು ತ್ತೇನೆ' ಎಂದು ತಿಳಿಸಿದ. ಆದರೆ ಅಷ್ಟೊತ್ತಿಗೆ, ಶಂಕರರಾಯರು ಕಾನೂನಿನಿಂದ ರಾಜ ಕೀಯದತ್ತ ಮುಖ ತಿರುವಿದ್ದರು. ಬೆಂಗಳೂರಿನಲ್ಲಿ ಮದುವೆಯಾಗಿ, ಮಾವನ ಮನೆಯಲ್ಲಿ ನಿಂತ ಶಂಕರರಾಯರು ರಾಜಕೀಯ ರಂಗಕ್ಕೆ ಇಳಿದಿದ್ದರು.

ಅದು ಈಗಿನಂತೆ ಜಾತಿ, ಉಪಜಾತಿಗಳನ್ನು ಆಧರಿಸಿ ನಿಂತ ರಾಜಕೀಯ. ಹೊರಗೂ ಅಸಹಕಾರ, ಒಳಗೂ ಅಸಹಕಾರ, ಆದರೆ ಬೆದರದ ರಾಯರು ತಮ್ಮನ್ನು

ಎದಿರಿಸಿ ನಿಂತವರನ್ನು ಹಣಿಯಲು ನಿಂತರು. ಬೆಂಗಾವಲಿನಲ್ಲಿ ಯಾರು ಇಲ್ಲ. ಒಬ್ಬಂಟಿಯಾಗಿ ಹೋರಾಡುವ ಛಲವನ್ನು ಬಾಲ್ಯದಿಂದಲೇ ಸಾಧಿಸಿಕೊಂಡು ಬಂದವರು ಶಂಕರರಾಯರು. ಆ ಛಲಕ್ಕೆ ಹೆದರಿದ ಇದಿರಾಳುಗಳು ಸರಿದರು.

ರಾಣೆಬೆನ್ನೂರು, ಹಿರೇಕೆರೂರು ತಾಲ್ಲೂಕುಗಳಲ್ಲಿ ಗುಬ್ಬಿಗೆ ಈಗ ಹೊಸದೊಂದು ಸ್ವರೂಪ. ಅದು ಶಂಕರರಾಯರ ಊರು. ನಮ್ಮ ಶಂಕರರಾಯರ ಊರು ಎಂದು ಎಲ್ಲರೂ ಹೇಳುವವರೇ.

(೩)

ಮೊದಲಿನ ಚುನಾವಣೆಯಲ್ಲಿ ಅವರು ಹೆಸರು ಗಳಿಸಿಕೊಂಡರು. ಊರೂರಿಗೂ ಮನೆ ಮನೆಗೂ ತಿರುಗಿದರು. ಆ ಕಾಲದಲ್ಲಿ ಪಾದಯಾತ್ರೆಗೆ ಇನ್ನೂ ಹೆಸರು ಬಂದಿರಲಿಲ್ಲ. ಶಂಕರರಾಯರು ತಮ್ಮ ತಾಲ್ಲೂಕುಗಳಲ್ಲಿ ಪಾದಯಾತ್ರೆ ಆರಂಭಿಸಿದರು. ಇಲ್ಲಿ ಕೆರೆ ಆಗಬೇಕು, ಇಲ್ಲಿ ಬಾವಿ. ಇಲ್ಲಿ ರಸ್ತೆ, ಅಲ್ಲಿ ಸ್ಕೂಲು ಕಾಲೇಜು ಆಗಬೇಕು....ತಮ್ಮ ರಾಜಕೀಯ ಕ್ಷೇತ್ರವನ್ನು ಯೋಜನೆಗಳಿಂದ ಸಮೃದ್ಧಿಗೊಳಿಸುವ ಛಲ. ಭೀಷ್ಮಾಚಾರ್ಯರ ಬಳಿ ಓದಿ ಬೆಳೆದ ಶಂಕರರಾಯರ ಛಲ ಅದು.

ಎರಡನೆಯ ಚುನಾವಣೆಯ ಕಾಲಕ್ಕೆ ಅವರು ಗಳಿಸಿದ ಜಯ ದೇಶದ ತುಂಬ ಹಬ್ಬಿತ್ತು. ನಾನು ಆಗ ಕ್ಯಾನಡಾದಲ್ಲಿದ್ದೆ. ಲಂಡನ್ನಿನ ಬಾನುಲಿ ಶಂಕರರಾಯರ ಭಾರೀ ಜಯವನ್ನು ಪ್ರಪಂಚಕ್ಕೇ ಸಾರಿತ್ತು. ಯಾರ ಬೆಂಬಲವೂ ಇಲ್ಲದೆ ಮತ್ತೆ ಯಾರೂ ಪಡೆಯದಷ್ಟು ಮತಗಳನ್ನು ಪಡೆದಿದ್ದಾರೆ. ಭಾರತದ ರಾಜಕೀಯ ಇತಿಹಾಸದಲ್ಲೇ ಅದು ಅಪೂರ್ವ ಸಾಧನೆ.

ಶಂಕರರಾಯರು ತಮ್ಮ ಫಲಕ್ಕೆ ಪ್ರತಿ ಫಲವೆಂಬಂತೆ ಶಿಕ್ಷಣ ಮಂತ್ರಿ ಜಾಗವನ್ನೇರಿದರು. ರಾಣೆಬೆನ್ನೂರಿನಿಂದ, ಹಿರೇಕೆರೂರಿನಿಂದ ಬಂದ ಜನರ ಕೆಲಸ ಮೊದಲು ಆಗಬೇಕು. ಅದು ಅವರ ಆಶಯ—ಅವರು ವಿದ್ಯಾ ಮಂತ್ರಿ ಆಗಿದ್ದಾಗ ಮನೆಯಲ್ಲೂ ಕಛೇರಿಯಲ್ಲಿಯೂ ತುಂಬಿದ ಜನವನ್ನು ನೋಡುತ್ತಿದ್ದರೆ ನನಗೆ ದಂಗುಬಡಿದಂತೆ ಆಗುತ್ತಿತ್ತು. ಮನೆಯ ಹುಡುಗ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಪಾಸಾಗಿರುವನಂತೆ ಅವನಿಗೆ ಮಾರ್ಕ್ಸ್ ಹಾಕಿಸಬೇಕೆಂದು ಬಂದವನು ಒಬ್ಬ. ಇನ್ನೊಬ್ಬನಿಗೆ ನೌಕರಿ ಬೇಕು. ಮತ್ತೊಬ್ಬನಿಗೆ ಬಡತಿ ಬೇಕು. ಮಗುದೊಬ್ಬನಿಗೆ ವರ್ಗಾವಣೆ ಬೇಕು. ವಿದ್ಯಾ ಮಂತ್ರಿಯನ್ನು ಕುರಿತು ಬಂದ ಬೇಡಿಕೆಗಳನ್ನು ಕಣ್ಣಾರೆ ಕಂಡ ನನಗೆ ಒಮ್ಮೊಮ್ಮೆ ದಿಗ್ಭ್ರಮೆ. ನಾನೇ ಮಂತ್ರಿಯಾಗಿದ್ದರೆ, ಹುಚ್ಚು ಹಿಡಿಯುವಂತಹ ಪ್ರಸಂಗ. ಆದರೆ ಶಂಕರರಾಯರಿಗೆ ಇಲ್ಲದ ತಾಳ್ಮೆ, ಸ್ನೇಹಮಯಿ ಅವರು ನನಗೊಬ್ಬನಿಗೇ ಅಲ್ಲ. ಎಲ್ಲರಿಗೂ ಅಷ್ಟೆ.

ರಾಜಕೀಯ ಆಟ ಚದುರಂಗದಾಟ. ಅದು ಗುಳಿ ಗುಳಿ ಆಡಿದಂತೆ. ಇತ್ತೀಚಿನ ಕೊನೆಯ ಚುನಾವಣೆಯಲ್ಲಿ ಅವರು ಸೋತಿದ್ದಾರೆ. ಆದರೆ ನಾಳೆ ಬರುವ ಚುನಾವಣೆಯನ್ನು ಅವರು ಮರೆತಿಲ್ಲ. ಛಲದಂಕ ಮಲ್ಲನಾಗಿ ಹೋರಾಡುವ ಕನಸನ್ನು ಮತ್ತೆ ಅವರು ಕಾಣುತ್ತಿರುವಂತೆ ನನಗೆ ಅನ್ನಿಸುತ್ತದೆ.

ಹೀಗೆ ಉದ್ದಕ್ಕೂ ಸಾಗಿ ಬಂದ ಶಂಕರರಾಯರ ಹೋರಾಟದ ಕತೆಯೊಂದಿಗೆ ವಲಸೆಹೋದ ಹಿರೇಮಲ್ಲೂರಿನ ಹುಡುಗನ ಕತೆಯೂ ಸೇರಿಕೊಂಡಿದ್ದು ಪೂರ್ವ ಜನ್ಮದ ಫಲ. ಹೌದೇ. ನನಗೆ ಪೂರ್ವ ಜನ್ಮದಲ್ಲಿ ನಂಬುಗೆಯಿಲ್ಲ. ಆದರೆ ಶಂಕರ ರಾಯರನ್ನು ನೆನೆದಾಗಲೆಲ್ಲ ಆ ಸ್ನೇಹಮಯಿಯನ್ನು ನೆನಸಿಕೊಂಡಾಗಲೆಲ್ಲ ಹಾಗೇ ಅನ್ನಿಸುತ್ತಿದೆ. ಹಿಂದಿನ ಜನ್ಮದಲ್ಲಿ ನಾವಿಬ್ಬರೂ ಒಡಹುಟ್ಟಿದವರಾಗಿರಬೇಕೆಂದು ಅನ್ನಿಸುತ್ತಿದೆ !

Your revered Holiness Sri Sri Satya Pramoda Thirtha Swamiji, Panditharaja Mahuli Gopalacharya, Dear Adya Ramacharya and distinguished Scholars:

I deem it a great privilege to associate myself as Chaief Guest of this conference organised by Sri. Madhwasiddantha Abhivridhi Karini Sabha of Sri Uttaradi Mutt at Sri Satyadhyana Vidyapeetha in Bombay three days being celebrated with the Blessings of His Holiness Sri Sri Satyapramoda Teertha Sripadangalavaru, the revered present pontiff of Sri Uttaradimutt who has completed six decades of most pious life devoted to the great cause of humanity.

Let me start addressing this esteemed gathering of Scholars from all parts of the country, by quoting an evergreen sentence of Plato, the renowned philosopher of the world for all times to come. Plato says that "until philosophers are kings or until the rulers of the world are imbued by the spirit of philosophy, states will not cease from ill". As Education Minister of Karnataka State, I fully endorse this view and adore all philosophers and scholars, irrespective of their places and ages.

Sri Uttaradimutt is one of the noblest religious institutions in our country propagating profound faith in God and spiritual knowledge and wisdom. 'Uttaradi' speaks of its antiquity having divine inspiration of its origin from 'Utara' one of the thousand sacred names of Lord Vishnu as stated in 'VISHNU SAHASRANAMA'. Lord Vishnu himself hailed in his ascetic form of Sri Hamsa and founded this great Uttaradimutt. It also speaks of the fact that only Lord Vishnu is supreme. In the 13th century Sri Madhwacharya the great founder of Dwaitha School of thought adorned the Peetha of Uttaradimutt. Sri Madhwacharya made lucid expositions of Rigveda and Mahabharatha and wrote most illuminating commentaries on **"Prasthanathraya"**. Then came "Jayatheertha" popularly known as "Teekacharya" with his brilliant commentary 'Nyaya Sudha'. Then Sri Raghothama

Thirtha who was universally known as "Bhavabhodhakara" has composed innumerable monumental works. Then came Sri Stayadhyana Theertha–A legendry figure in the annals of Indian Philosophical Movement. Sri Satyadhyana Theertha was a saint of extraordinary merit. His dyanamism, drive, conviction, and profound knowledge of philosophy made him an infinite fund of wisdom and progress. Sri Sathyadhyana Theertha's great personality, great thought, word and deed and the greatest accomplishments are varied many sided and remarkable. All the scholars of our country even to this day have a feeling that the very name of Sri Sathyadhyana is alluring and inspiring. In fact, this function is now held at his lotus feet "Sri Satyadhyana Vidya Peetha".

I am extreamely happy to be here at this scacred place, Sri Satyadhyana Vidyapeetha, which was established in 1937 as Vani-Vihara Vidyalaya in Matunga Bombay. It has been a centre of learning and cultural activities not only for Dwaitha-Vedantha but for all branches of knowledge and culture. Its Kulapathi Sri Mahuli Gopalacharya combines scholarship in traditional and modern knowledge. The Library of this Vidya Peetha which consists of more than one lakh rare volumes on a wide ranging subjects, is better equipped than any University Library in this discipline: It is also heartening to note that Sri Satyadhyana Vidyapeetha has published about thirty major works in this field and has been responsible for training more than one hundred scholars of a very high order to the national mainstream of philosophy. I am really proud that a Philosopher of Karnataka, has brought about a seachange in the cultural and philosophical life of Bombay. In fact, it is these efforts which go a longway in making the National Integration most meaningful. I fully acknowledge the services of Sri Mahuligopalacharya for his remarkable contribution to Philosophy; I wish great futuer both to Sathyadhyana Vidyapeetha and its Kulapathi.

Sri Madhwacharya harmonised philosophy and religion, Sri Satyapramoda Theertha Swamiji, the present Pontiff of Uttaradimutt is effectivelty carrying on the laudable traditions of his great and illustrious predecessors. Sri Satyapramoda Theertha Swamiji has made astonishingly significant contributions for the propagation of Vedantha in general and Dwaitha School

of Vedantha in particular as well as to Sanskrit language and literature; Sri Satyapramoda Theertha Swamiji was a great Sanskrit Scholar during his purvashram period and thaught as adhyapak in several Sanskrit Colleges. Sri Swamiji after being ordained, started commanding highest respect and regard not only from disciples, but even from Swamijis of other Mutts.

By his regular discourses on 'Nyayasudha' of Jaya theertha and the 'Yukti-Mallika' of Sri Vadiraja and 'Chandrika' of Sri Vyasraja, Swamiji strated spreading the message of Madhwa and the truth of Vedas. Wherever he went he left a gloriuos trail of reputation for his all round learning and dedication to Sanskrit teachings. He himself has composed two works of rare merit and scholarship 'Sudha Mandana' and 'Vijayeendra Vijaya-vaibhava' in which his clarity of thought, erudition and elegance of style are so brilliantly exhibited. His penetrating knowledge revealed in these works is so profound and unimaginable. He has regularly honoured learned scholars and has been convening vidwath sabhas to propagate Sanskrit and Shastric knowledge. His 'Parama Hamsadharma' merits our sincere and heartfelt homage.

Swamiji's scholarship can also be understood by looking at his distinct and unique libraries at Bangalore and Hospet in Karnataka. The vast literature on Nyaya Mimamsa, Jyothisha, Nirukta and Vyakarana and various other Shastras have made the library very rich. Along with this, Swamiji is bringing out a functional monthly called 'Sri Sudha', which provides the extracts from the most Authentic commentaries on the Gita and Bhagavatha by Sri Satyadhyana Theertha. He has also encouraged Sanskrit Institutions at Bangalore, Dharwad, Bombay and Madras through his generous grants.

I am extremely happy to offer my most respectful pranams to His Revered Holiness Sri Satyapramoda Theertha Swamij on this occasion of All India Dwaitha Scholars Conference organised by Sri Madhva Siddahantha Abhivridhi Karnini Sabha. In fact, it is my privilege that Swamiji also hails from the same District in Karnataka from which I come from.

It is my earnest duty to pay my humble respects to all the Scholars assembled here; from here ,I wish, the religious consciousness in man should spread to all parts of the country and the world and improve man by enabling him to live a noble life. This task requires a team of knowledgeable and devoted men like you who are well versed in religious literature and philosophy.

I make an humble suggestion to the learned pandits gathered here that these discussions should be more relevant to modern knowledge and more convincing to our younger generation. It is through these assemblies that we can convince our youth not to lose hope and faith in our Shastras, in the fundamentals of religion and in the spiritual foundations of Indian civilisations.

I join you all in offering my humble prayers at the feet of the Lord Vishnu that under his grace our Sri Satya Pramoda Theertha Swamiji, Sri Mahuli Gopala Charya and scholars assembled here may be spared to us for a long long time to come and continue to bless humanity for many more decad with the unfailing bounesy of their spiritual inspiration and wisdom.

Please let me conclude my humble feelings with a statment of Sri Madhwacharya 'Our Prostration to Sri Krishna with single hearted devotion is equivalent in the benefits of performing a thousand Ashwamedha Yagas. But one who whas performed the thousand Aswamedha Yagas will have a rebirth in this world and not the one who has prostrated to Sri Krishna with all Bhakthi" I thank sincerely the organisers and pay my respectful regards to Sri Swamiji.

THE CONTRIBUTION OF DWAITADARSHANA TO THIS WORLD OF LIVING BEINGS

By

Panditraj, panditratna, panditshiromani, Nyaya Vedanta vidwan, Shastra Ratnakara, Vidyavachaspati, Mahavyghra, Pravachana Kesari, Mahamahimopadhyaya

M. R. GOPALACHAYRYA, M.A.,

Kulapati,

Vani Vihar Vidyalaya & Satyadhyana vidyapeetha,

Mulund (West) Bombay 400 080

A philosopher worth the name cannot afford to be a visionary. If he tends to be fanciful or starts indulging in fanciful theories, he ceases to be a real philosopher. He degrades himeself to the level of a 'philosopher'–a pretender to philosophy. He is a mere sciolist, while the real philosopher is a specialist. The former's writings would abound in sophistry, specially so called, or ironically named "philosphism". The Greek word "Sophos" means wise. Sophia is wisdom-philo means liking or fond of. A philosopher is so called because he is fond of wisdom and wisdom, in general and a a rule, is right experience and correct knowledge of things that exist. Illusions, delusions and hallucinations do not at all come under the heading of wisdom.

It is a truism that no man is omniscient. Man is not, in general, free from philosophic doubt, which is technically called scepsis. He does not believe in things, the existence of which, can be doubted, debated and denounced with reference to experience. Although doubts and debates rouse our sense of curiosity and help us acquire knowlede, they themselves do not constitute right knowledge. A philosopher will not be satisfied with anything short of wisdom. He is never pleased with vaunting whitewash. He is mainly concerned with facts and figures of life. Illusions, delusions, and hallucinations are also facts of life, no doubt. But their objects do not have actual existence. So philosophy is the rational explanation of the multifarious phenomena of this universe of ours.

Far from being merely plausible, it should be rigrously rational so that it merits the hearty applause of all considerate thinkers. Thus, a good philosophy must be realistic, practical, perspicuous and convincing. It should never be confusing or confounding. Having thus premised my thesis, "The Contribution to Dwaita-darshana to this World of Living Beings," I come to the point.

(a) **Dwaita Philosophy is Realistic:** we see that differences are deeply rooted in all things and all beings. Every experience and all perceptions strongly evidence the truth of Dwaita Philosophy.

(b) **Dwaita Philosophy is Practical:** The high ideals of Dwaita Philosophy can be attained with best possible human efforts.

(c) **Dwaita Philosophy is Perspicuous:** Its salient tenets are intelligible as they are not far removedfrom the usual sphere of human life. Thus, they never go over the heads of normally intelligent beings.

(d) **Dwaita Philosphy is Convincing:** The laws and the proofs which are the basic foundations of the main tenets of Dwaita Philosophy are never called in question, i. e. they are indispuatble. The world-famed and epoch-making achievements of Science are based on these laws.

Thus, Dwaita Philosophy can give us the clear view of life. The panoramic view of life is not at all phantasmic. It is not a net spread by the Creator to entrap us. It paves our way to vast scientific discoveries and spiritual achievements. If we are living in a dreamland, all tall talk of scientific inventions which aim at discovering the eternal order of the universe would flop and fall down like a pack of cards. A philosophy based on illusionism would be like a house built on quagmire or quick sands. Philosophising on nothing would be no better than ploughing the sands.

Every normal man has his moorings in the Infinite, some unkown Creator who is the home of all values, the eternal and endless repository of all super-excellent attributes. The Dwaita confirms his belief and strengthens it and highly reinforce it.

People do not want an absolute featureless Being who would be blind to the Universe. They want Him to be always kind to us. We wish him to lift us out of the morass of mournful existence when we are in the Slough of Despond. We feel like raising our heart to Him in prayer. Thus we want Him to be unfailingly responsive to our heartiest prayers. Should we have a firm faith that our God is one and one alone and that He pervades all space and exists at all times and that He is Omniscient and Omnipotent as well as kind consonant with His being just, our prayers will be crowned with fruition. This concept of God is inspiring to all. It awakens greater faith in all of us. It arouses high hopes in the depressed, down-trodden and the destitute. We are all along under, the impression that though we suffer from unnumbered limitations, God, the Almighty, who is free from all limitations, is there who can readily run to our rescue when our heart leaps to importune Him to save us. It is enough that we send the SOS Massage to Him with all importunity attended with solemn surrender and absolute resignation.

Moreover, as a great thinker writes, 'Sweet love were slain, could difference be abolished." It is on account of this love we have a vast expanse of literature produced in East and West. Morality, in general, Charity and Social Service in particular, would have no philosophical basis if there were complete identity. The stupendously large expanse of literature in Sanskrit, and the literature in Kannada, popularly knows as **Daasa Sahitya,** would not have come into existence but for the **Dwaita Darshana.** The devotional literature of Goraknath and his eminent followers, Veerashaiva literature of Sharanas, Kashmiri Shaiva Sahitya, the Santa Sahitya of Jnaneshwar and scores of Maharashtrian Saints called Sants as well as the devotional literature in Bengali, Hindi, Tamil, Telugu, English, French and German are fundamentally and predominantly realistic. Though Shankaracharya was an illusionist and an absolutistic philosopher, many of his works, especially his lyrics and poems, which thrill anyone's heart to its depths, draw sustenance from devotional literature.

The radical relationship among the teachers and the taught, the rulers and the ruled, the superiors and the subordinates the efficient and the deficient, the good and the evil, the beautiful

and the ugly, the right and the wrong, so on and so forth, are there from beginingless time and continue to exist to endless eternity.

Prayer which refreshes man's mind, quickens his intellect and rejuvenates his personality, would be meaningless if the concept of the Supreme Reality infinitely greater than individual souls would not be there. The efficasy of prayer cannot be ignored. Prayer makes a sour heart sweet; a sad heart glad; a poor heart rich; a foolish heart wise; a timid heart brave; a sick heart safe; a cold heart fervent. Prayer is a plaster to the palsied heart. Prayer is the very breath of a good soul. It is his spiritual food. It cleanses the heart from inequities. A great scientist says, "Many things which we shall not be able to discover either by experiments or by the investigation of reason, we shall be able to discover by importunate prayer or by intuition or by the revelation of divine inspiration.

In prayer, we not only raise our voice but we lift our heart to God. The raptures we enjoy in real prayer, no words can express, no tongue can speak. During fervent prayers and deep meditation, fugitive and permanent fears take flight. In prayer, we raise our heart above the fluctuations of life; anxiety gives place to a sense of safety and security.

Thus prayer can change our life any time, anywhere, at any age. It can heal our diseases, renew our mind, refresh our body, calm down the stormy commotions of our heart, save us from the tempest of fearful calamities that threaten to overwhelm us. Prayer is a powerful tool in the reconstruction and the rehabilitation of man's personality. It brings us a permanent release from the mental strain and frustration. Thus we can call fervent prayer 'Prayer Therapy'. If we study this thesis without the blinkers of superstition, we will definitely have to admit that prayer is a great power. Prayer is the focal point of our individual life. Prayer is the panacea for all evils.

Many people scorn prayer. Many others do not have more than average interest in prayer. Only a few have intense interest in prayer. Some pray dutifully but not devoutly. Fear and anxiety

strain the mnormal flow of life and block the curative powers of prayers. They cloud the mind and a murky mind is a trouble-breeder. We therefore have to make a journey from the land of fear to the land of faith.

A devotee who has a powerful conscience hears the whispers of God who dwells in him. One who has strong faith in Him acts up to His whisper and becoms a righteous man. Inasmuch as he has not disobeyed Him, he fears Him not. A man who sins and disobeys God in spite of His whisper fears Him, and, therefore, he is a coward. In prayer, the mind, body, heart and the soul of a devoted person will be wrought into one harmonius whole. A devoted man is mad with love. This madness, to borrow Plato, is the greatest of heaven's blessings. If the ardent love of God fills a man to overflowing, it transports him into ecstacy. This madness is not only a divine gift, but the source of every type of happiness. When the spiritual joy of a sage outflows his heart, there is a spiritual inebriation.

This universe is the mirror of God. His majesty, magnanimity and munificence are clearly reflected in it. The purest mind also is the best mirror. It reflects the supremacy of God. God is highly pleased with our devotion which transmutes our life's leaden metal into blazing and burnished gold. Devotion to God is the richest treasure. This divine feeling is seductively sweet and lusciously tasteful.

At this stage, the power and efficacy of the name of God is full and perfect. Its sweetness is unimaginable; its attraction incalculable.

Sweet love exists, grows and waxes luxuriant in the heart rendered fertile with the consciousness of difference. This love enriches our life,ennobles our personality,improves our behaviour, refines our manners and softens our heart. It is the energizing elixir of the universe. It is at once the cause and the result of all harmonies. It is the aroma that perfumes our knowledge and as such it is the very breath of divinity and the adornment of humanity. It enlivens our dead life, quickens our intellect. It is a silken tie that cements all living beings

and brings them together. Generally, this love is in the depths of all animate beings. Many times it is dormant but it has to be awakened by systematic, streanuous and sympathetic efforts. Love is in the depths of man as water is in the depths of the earth. We have to dig the soil of a asoul through layers of aridity and bitterness to discover love and live with it. Continuous entreaty to God alone can make our heart overflow with the waves of boundless love. It alone makes us leap into the eternal embrace of God's merciful love. As the hart pineth and panteth after the water brook, our heart should pine and pant after God.

We must be seized with ceaseless solicitue for God. Gratitude is the flower of culture. A truly grateful man alone can become highly devoted to God. A devoted man can experience the sweet joy of unswerving love. This joy is equal to all the pleasures of the earth and heaven fused and squeezed into one dominant feeling of love. Our heart is like a furnance. It is, as it should be, afire with love. Through this furnace we get the flaming soul purged of all dross. When this transcendental love of God overwhelms man and submerges him in the ocean of divine soverignty, we are transported into a land of light and in to the ocean of infinite bliss, Undisciplined love dwells in the senses; desciplined love dwells in the heart of the same man; enlightened love dwells in the saint. This soars far above the human senses. A single atom of such love is worth more than hundred thousand heavens. If once this love is relished and realised all pleasures earthly and heavenly fade into nothingness. A devotee always looks up and not down. He always aspires, never despairs. Our love goes on becoming deeper and deeper, as our knowledge advances more and more. Devotion brings us nearer God. It places us in communion with God. It sublimates our soul, enables, it look down upon the base ways of the world and its devillish pleasures with disdain.

Living souls can be subsumed under three classes–shining souls, pining souls and whining souls–each class again containing infinitely graded souls. The devotion of even good souls manifests itself in a variety of ways. Careful, constant, comparative and critical observation of the phenomena of life shall go a long

way to prove and establish the truth of all the remarks that are made in the small compass of this short article.

In a nutshell, this vast variety of souls and the multifarious differences of their temperaments as well as unnumbered mutual impacts on one another have made this living world infinitely beautiful, fastidiously fascinating and incomparably colourful. An extensive garden abounding in exceedingly beautiful flowers of endlessly varied colours and overladen with far-spreading fragrance must produce an everlastingly favourable impact on anyone who chances to look at it.

The following excerpt from the well-known book of a famous Western philosopher proves the great importance and the universal utility of **Dwaitadarshana** to living beings:–

"....It takes two not only to make a bargain; it takes two to love and to be loved, two to worship and to be worshipped, and many combined in a common purpose to form a society or a people. Surely as the poet says sweet love were slain, could difference be abolished; the most self-effacing love but ministers to the intensity of a double fruition. As in the love of man and woman, so in a great friendship the completest indentification of interests and aims does not merge the friends in one; the most perfect **alter ego** must remain **an alter** if the experience is to exist, if the joy of an intensified life is to be tasted at all...."

May I take leave of sage readers to observe without a bit of bias that Srimad Ananda Teertha, the redominant protagonist and the eminent exponent of Dwaita Philosophy has based **Dwaita darshana** on the granitic bedrock of an expurgated metaphysical system, has established it on the firm foundation of revelations and has marshalled out volleys of cogent, conclusive, and resistless reasons to vindicate its verity, validity and varied utility. The great Acharya has, thus, gloriously housed the **Dwaitadarshana** in a magnificent mansion of a mighty metaphysical system of architectonic structure.

AGRICULTURAL GROWTH IN KARNATAKA

V. K. R. V. RAO
I.S.E.C., Bangalore

During the last 25 years of its formation, Karnataka has made significant progress on its economic front. As against the 86 per cent increase witnessed by NDP of the aggregate economy measured at constant (1960-61) prices, the SDP of Karnataka measured at 1960-61 prices has gone up by 143 per cent. This better performance of Karnataka becomes more clear if the comparisons are made in terms of the State's performance vis–a–vis of other states. It can be seen from table 1 (given below) that the state has recorded a growth rate of 4.70 per cent in 1968–79, the period that can be approximated as post-green revolution era.

Table 1: *Growth rates of Real SDPs*

State	Domestic Product		Index of Growth	Growth Rates 1968–80
	1960–61	1978–80		
Andhra Pradesh	983	1727	173.69	3.70
Assam	386	643	191.37	3.40
Bihar	993	1261	126.99	2.00
Gujarat	738	1425	193.09	3.90
Haryana	244	601	206.31	5.10
Himachal Pradesh	101	140	128.71	2.80
Jammu & Kashmir	95	196	206.32	4.50
Karnataka	692	1675	242.05	4.70
Kerala	432	719	166.44	2.10
Madhya Pradesh	832	1008	131.15	1.40
Maharashtra	1597	3191	199.81	4.80
Orissa	374	597	159.61	1.70
Punjab	404	979	242.33	4.60
Rajastan	559	946	169.23	4.20
Tamil Nadu	1112	1990	178.96	3.70
Uttar Pradesh	1843	2403	130.36	2.30
West Bengal	1340	1979	147.69	2.40

The 4.70 growth rate witnessed by Karnataka in 1968-79 is much higher than the growth rate observed by the aggregate economy. The only state that has shown a significantly higher growth rate during the period is Haryana. Even Punjab which has witnessed phenomenal changes in agricultural technology has witnessed a slower growth rate. If the comparison is restricted to southern states, the performance of Karntaka stands unique and distinct.

A close inspection of the performance recorded by Karntaka reveals that the roots of its better performance lie on its agricultural sector. Industry wise breakdown of the states SDP reveals that more than 50 per cent of the income generated by Karntaka comes from agriculture alone, and this sector has maintained this share althrough the period.

The better performance of Karnataka agriculture can be seen more clearly from the following table (table 2).

Table 2: *Indices of Growth—Agricultural Production*

Crop group	1969–70	1978–79	
		All India	Karnataka
Cereals	100	143.60	141.40
Pulses	100	107.60	141.30
Total foodgrains	100	139.30	141.50
Oil seeds	100	121.60	121.80
Fibres	100	139.40	165.80
Plantation	100	151.20	161.50
Non-foodgrains (total)	100	134.80	133.90
All crops:	100	137.90	138.30

In the ten year that corresponds closely with post-green revolution period, Karnataka has registered higher growth in the cases of commercial crops like fibres and plantations and more or less similar levels of growths in regard to other crops.

Bulk of increase in Karnataka's agricultural production is accounted not by the increase in the area under cultivation but by that in productivity per hectare. This is clear from the following table.

Table 3: *Indices of Growth in Production, Area and Productivity of Selected crops*—1978–79;
(Base: Triennium 1969–70–100)

Crop	Production	Area	Productivity
Cereals	141.40	99.30	141.20
Pulses	142.30	101.90	128.40
Fodgrains	141.50	101.60	139.90
Oil seeds	121.80	105.50	114.30
Cotton	166.20	107.90	154.00
Sugarcane	120.50	149.30	83.30
Tobacco	176.50	118.90	148.40

The better performance of Karnataka on productivity front can be traced more clearly from the following table, wherein the productivity growths of Karnataka are compared with similar growths of all–India.

Table 4: *Compound Growth Rates of Productivity*—1960–69 *to* 1978–79

Crops	Karnataka	All India
Cereals	3.90	2.30
Pulses	2.40	–0.20
Total foodgrains	3.70	2.00
Oil seeds	2.50	0.90
Cotton	3.20	1.60
Sugarcane	–0.40	0.40
Tobacco	0.70	2.10



ವರದರಾಜ ಪ್ರಕಾಶನ

ನಂ. 60 ರಂಗರಾವ್ ರೋಡ್, ಶಂಕರವನ, ಬೆಂಗಳೂರು